ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆ: ನಿರ್ವಚನದ ನೆಲೆಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ
ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಮೀನಾ ಎಂ. ಕಲ್ಲೂರ
ನೋಂದಣಿ ಸಂ: BVVBKS-00210

ಮಾರ್ಗದರ್ಶಕರು
ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ, ಬಾಗಲಕೋಟ

ಭಾಷಾನಿಕಾಯ, ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ-೫೮೩೨೭೬

ಮಾನ್ಯತಾ ಸಂಸ್ಥೆ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ
ಬಾಗಲಕೋಟೆ
೨೦೧೮

ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆ: ನಿರ್ವಚನದ ನೆಲೆಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ
ಸಂಶೋಧನ ಮಹಾಪ್ರಬಂಧ

ಸಂಶೋಧಕರು
ವೀಣಾ ಎಂ.ಕಲ್ಮಠ
ನೋಂದಣಿ ಸಂ:BVVBKS-00210

ಮಾರ್ಗದರ್ಶಕರು
ಡಾ.ವಿಜಯಕುಮಾರ ಎಸ್. ಕಟಗಿಹಳ್ಳಿಮಠ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ, ಬಾಗಲಕೋಟ

ಭಾಷಾನಿಕಾಯ, ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ-೫೮೩೨೭೬

ಮಾನ್ಯತಾ ಸಂಸ್ಥೆ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ
ಬಾಗಲಕೋಟ
೨೦೧೮

ದೃಢೀಕರಣ ಪತ್ರ

ವೀಣಾ ಎಂ.ಕಲ್ಮಠ ಇವರು **ಅಲ್ಲಮ ಮತ್ತು ಅಕ್ಕಾ ವಚನಗಳಲ್ಲಿ ಮಾಯೆ: ನಿರ್ವಚನದ ನೆಲೆಗಳು** ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. **ಬಾಗಲಕೋಟ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾಹಿತ್ಯ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾ ಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಬಾಗಲಕೋಟ
ದಿನಾಂಕ : – –೨೦೧೮

ಡಾ. ವ್ಹಿ. ಎಸ್. ಕಟಗಿಹಳ್ಳಿಮಠ
ಮಾರ್ಗದರ್ಶಕರು,
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನಾ ಕೇಂದ್ರ,
ಬಾಗಲಕೋಟ

ಪ್ರಮಾಣ ಪತ್ರ

'ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆ: ನಿರ್ವಚನದ ನೆಲೆಗಳು' ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು **ಡಾ. ವಿಜಯಕುಮಾರ ಎಸ್. ಕಟಗಿಹಳ್ಳಿಮಠ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಬಾಗಲಕೋಟ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾಹಿತ್ಯ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬಾಗಲಕೋಟ
ದಿನಾಂಕ : ೮-೨-೨೦೧೮

ವೀಣಾ ಎಂ. ಕಲ್ಮಠ
ಸಂಶೋಧಕರು
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನಾ ಕೇಂದ್ರ,
ಬಾಗಲಕೋಟ

ಸಂಯೋಜನಾಧಿಕಾರಿಗಳು
ಬ. ವೀ. ವಿ ಸಂಘದ
ಸಂಶೋಧನ ಕೇಂದ್ರ, ಬಾಗಲಕೋಟ
ಮಾನ್ಯತೆ: ಕನ್ನಡ ವಿ.ವಿ.ಹಂಪಿ

• ಪರಿವಿಡಿ •

ಅಧ್ಯಾಯ : ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಭಾರತೀಯ ಸಂಸ್ಕೃತಿ ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು, ಈ ಸಂಸ್ಕೃತಿ ತನ್ನ ಒಡಲಲ್ಲಿ ಅನೇಕ ನಾಗರಿಕತೆಗಳನ್ನು ಬೆಳೆಸಿ ಪೋಷಿಸಿದೆ. ಇದಕ್ಕೆ ಪ್ರತಿಯಾಗಿ ಹಲವು ನಾಗರಿಕತೆಗಳು ಸಾಮಾಜಿಕ, ಧಾರ್ಮಿಕ, ರಾಜಕೀಯ ಒಟ್ಟಾರೆ ಸಾಂಸ್ಕೃತಿಕ ಕೊಡುಗೆಗಳನ್ನು ಭಾರತೀಯ ಸಂಸ್ಕೃತಿಗೆ ನೀಡಿವೆ. ಕಾಲದಿಂದ ಕಾಲಕ್ಕೆ ಬದಲಾಗುವ ಸಾಮಾಜಿಕ ಜೀವನ ವಿಧಾನದಲ್ಲಿ ನೆಮ್ಮದಿಯನ್ನು ತಂದುಕೊಳ್ಳಲು ಧರ್ಮ-ದೇವರು ಸ್ಥಾನ ಪಡೆದುಕೊಂಡಿವೆ. ಧರ್ಮ ಎಂಬುದು ಆಚರಣೆ, ಸಂಪ್ರದಾಯ, ನೀತಿ-ನಿಯಮ, ಕಟ್ಟಳೆ ಇತ್ಯಾದಿ ಕ್ರಿಯಾ ಸ್ವರೂಪಗಳಲ್ಲಿ ಅಭಿವ್ಯಕ್ತಗೊಂಡಿತು. ಪ್ರಭುತ್ವ ಪರಂಪರೆಯಲ್ಲಿನ ಧರ್ಮವು ರಾಜಕೀಯ ಆಕ್ರಮಣಗಳ ಸೆಳೆತಕ್ಕೆ ಒಳಗಾಗುತ್ತಲೇ ಬಂದಾಗ ದೇವರು-ಧರ್ಮ ಎಂಬ ಆಧ್ಯಾತ್ಮಿಕ ಪರಿಕಲ್ಪನೆಗಳ ಸುತ್ತ ವೈವಿಧ್ಯಮಯವಾದ ಆಚರಣೆ, ಸಂಪ್ರದಾಯ, ರೀತಿ-ನೀತಿಗಳು ಹೆಣೆಯಲ್ಪಟ್ಟವು.

ಆರ್ಯ-ದ್ರಾವಿಡ ಪರಂಪರೆಯಿಂದ ಇಂದಿನವರೆಗೆ ಹಲವು ಆಚರಣೆಗಳ ರೂಪದಲ್ಲಿ ಧರ್ಮವು ತನ್ನ ಸ್ವರೂಪವನ್ನು ವೈವಿಧ್ಯಗೊಳಿಸಿಕೊಂಡಿದೆ. ದೇವನೊಬ್ಬ ನಾಮಹಲವು ಎಂಬದು ಭಗವಂತನೊಬ್ಬನೇ ಧರ್ಮಗಳು ಹಲವು ಎಂಬರ್ಥ ಪಡೆಯಿತು. ಸತ್ಯ, ನ್ಯಾಯ, ನೀತಿ, ಅಹಿಂಸೆಯಂತಹ ಚಿರಂತನ ಮೌಲ್ಯಗಳನ್ನು ಪ್ರತಿ ಧರ್ಮವು ತನ್ನದೆಯಾದ ನೆಲೆಯಲ್ಲಿ ಪ್ರತಿಪಾದಿಸಿತು.

ಪ್ರತಿಯೊಂದು ಧರ್ಮವು ತನ್ನ ಭಾವ-ಭಾಷೆಯ ನೆಲೆಯಲ್ಲಿ ದೇವರನ್ನು ನಂಬುವ ಒಪ್ಪುವ, ಸ್ವೀಕರಿಸಿ, ಆರಾಧಿಸುವ ಆಧ್ಯಾತ್ಮಿಕ ಪರಂಪರೆಯನ್ನು ರೂಢಿಸಿಕೊಂಡಿತು. ಹಿಂದೂ ಧರ್ಮವು ವೇದ, ಆಗಮ, ಉಪನಿಷತ್‌ಗಳನ್ನು ತಾತ್ವಿಕ ತಿರುಳಾಗಿಸಿಕೊಂಡು ಅನುಸರಣೆ ಗೊಳಗಾಯಿತು. ಪರಮಾತ್ಮ ಪ್ರಕೃತಿ ಯಂತೆ ಸರ್ವವ್ಯಾಪಿಯಾದವನು. ಪರಮಾತ್ಮನನ್ನು ಪ್ರಕೃತಿಗೆ ಸಮೀಕರಿಸುವ ಕ್ರಿಯೆ ಆಧ್ಯಾತ್ಮದಲ್ಲಿ ಕಂಡು ಬರುತ್ತದೆ. ಪ್ರಕೃತಿಯಲ್ಲಿ ಚಲನಶೀಲತೆ ಮೂಡಿಸಲು ಚೈತನ್ಯ ತುಂಬಲು ಪರಮಾತ್ಮನೇ ಕಾರಣನಾಗಿದ್ದಾನೆ. ಪ್ರಕೃತಿ ಸಾದೃಶ್ಯ ಶಕ್ತಿಯಾದರೆ, ಪರಮಾತ್ಮ ಅದೃಶ್ಯ ಶಕ್ತಿಯಾಗಿದೆ. ಇವೆರಡು ಮನುಜನಲ್ಲಿ ಸಾತ್ವಿಕತೆಯನ್ನು, ಜೀವ ಚೈತನ್ಯವನ್ನು ತುಂಬಿಸಬಲ್ಲವು. ಆದ್ದರಿಂದ ಮನುಜ ಕಾಣದ ಶಕ್ತಿಯನ್ನು ಭಗವತ್ ಸ್ವರೂಪಿಯೆಂದು ಅವನನ್ನು ಆರಾಧಿಸುವ ಮೂಲಕ ತನ್ನೆಡೆಗೆ ಒಲಿಸಿಕೊಳ್ಳುವ ಅಥವಾ ತಾನೇ ಅವನಲ್ಲಿ ಐಕ್ಯವಾಗುವ ಸದುದ್ದೇಶವನ್ನು ಹೊಂದಿದನು. ಪರಿಣಾಮವಾಗಿ 'ತಾನು' ಎಂಬುದು ಒಂದು ವಲಯ, 'ಭಗವಂತ' ಎಂಬುದು ಮತ್ತೊಂದು ವಲಯ. ಇವೆರಡು ಒಂದರೊಳಗೊಂದು ಐಕ್ಯವಾಗುವ ಸ್ಥಿತಿಯನ್ನು ಮನುಜ ಸಿದ್ಧಿಸಿಕೊಳ್ಳುವುದೇ ಮೋಕ್ಷ

ಅಥವಾ ಮುಕ್ತಿ ಎಂಬ ಪರಿಕಲ್ಪನೆ ರೂಪಗೊಂಡಿತು. ಮುಕ್ತಿಯನ್ನು ಸಾಧಿಸುವುದೇ ಮಾನವ ಬದುಕಿನ ಅಂತಿಮ ಗುರಿಯಾಯಿತು. ಮುಕ್ತಿಯನ್ನು ಸಾಧಿಸಲು ಕೈಗೊಳ್ಳುವ ಕ್ರಿಯಾ ವಿಧಾನವನ್ನು ಭಕ್ತಿ, ಪೂಜೆ ಆರಾಧನೆ ಎಂದು ಕರೆಯಲಾಗಿದೆ. ಆಧ್ಯಾತ್ಮದಲ್ಲಿ ಮುಕ್ತಿ ಸಾಧಿಸಲು ಕೈಗೊಳ್ಳುವ ಕ್ರಿಯೆಗಳು ಕಾಲಾಂತರದಲ್ಲಿ ಧರ್ಮದಲ್ಲಿ ಬೇರೆ ಬೇರೆ ಧಾರ್ಮಿಕ ಸಿದ್ಧಾಂತಗಳಾಗಿವೆ.

ದೇವರು ಎಂಬ ಗಮ್ಯವನ್ನು ತಲುಪಲು ಆಯ್ಕೆ ಮಾಡಿಕೊಂಡ ಹಾದಿಗಳೇ ಧಾರ್ಮಿಕ ಆಚರಣೆಗಳಾದವು. ಈ ಆಚರಣೆಯ ಅನುಸರಣೆಯಲ್ಲಿ ಹಿಂದೂ, ಬೌದ್ಧ, ಜೈನ, ವೈಷ್ಣವ ಎಂಬ ಧರ್ಮಗಳು ದ್ವೈತಾದ್ವೈತವೆಂಬ ಹಲವು ಸಿದ್ಧಾಂತಗಳು ರೂಪಗೊಂಡವು. ದೇವರನ್ನು ಕಾಣಲು, ದೇವರೆಂಬ ಸದಾನಂದದ ಅನುಭೂತಿಯನ್ನು ಪಡೆಯುವಲ್ಲಿ ಉಂಟಾಗುವ ತೊಡರು 'ಮಾಯೆ' ಎಂದು ಕರೆಯಲಾಯಿತು. ಮಾಯೆ ಎಂಬುದು ಲೌಕಿಕದಲ್ಲಿರುವವರನ್ನು ಕಾಡುವುದೆಂಬ ಭಾವದಲ್ಲಿ ಮನುಜ ತನ್ನೆದುರಿಗಿರುವ ವಸ್ತು, ವ್ಯಕ್ತಿ, ಸಂದರ್ಭಗಳಿಗೆ ಮಾಯೆಯನ್ನು ಆರೋಪಿಸಿ ಅರ್ಥೈಯಿಸತೊಡಗಿದನು. ಹೀಗೆ ಧಾರ್ಮಿಕ ಪರಂಪರೆಯಲ್ಲಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡುಗವ ಜೀವನಿಗೆ ಮಾಯೆ ಎಂಬ ಶಕ್ತಿ ಪ್ರಭಾವ ಬೀರುತ್ತದೆ. ಲೌಕಿಕದಲ್ಲಿರುವವನಿಗೆ ಎಲ್ಲವೂ ಮಾಯೆ ಆಗಿದ್ದು ಲೌಕಿಕ ತ್ಯಜಿಸುವವನಿಗೆ 'ಮಾಯೆ' ತೊಡರಾಯಿತು.

ಸಾಮಾನ್ಯ ಅರ್ಥದಲ್ಲಿ 'ಮಾಯೆ' ಎಂಬುದು ಗಾರುಡಿ, ಯಕ್ಷಿಣಿ ವಿದ್ಯೆ. ಮೋಸ, ಭ್ರಾಂತಿ, ಪ್ರೀತಿ ಕಾಮ ಇತ್ಯಾದಿಯಾಗಿ ತೋರುತ್ತದೆ. ಕೋಶದ ನೆಲೆಯಲ್ಲಿ ಕಾಣದಾಗುವಿಕೆ, ಮರೆಯಾಗುವಿಕೆ, ಮಿಥ್ಯೆ, ವಂಚನೆ, ವ್ಯಾಮೋಹ, ಕಣ್ಕಟ್ಟು, ಭ್ರಮೆ ಎಂಬ ಅರ್ಥಗಳನ್ನು ಒಳಗೊಂಡಿದೆ.

'ಮಾಯೆ ಎಂದರೆ ಸತ್ಯವಲ್ಲದ ಆದರೆ ಸತ್ಯದ ಹಾಗೆ ಭಾಸವಾಗುವ ಈ ಜಗತ್ತಿನ ತೋರಿಕೆ ಮತ್ತು ಅನೇಕ ವಿಧವಾದ ಆಸೆ-ಆಮಿಷಗಳಿಂದ ಜಗತ್ತಿನೊಂದಿಗೆ ಜೀವನನ್ನು ಬಂಧಿಸುವ ಒಂದು ಅವಿದ್ಯೆಯ ಉಪಕರಣ' ಎಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ. 'ಮಾಯೆ' ಎಂಬುದು ಅವಿದ್ಯೆಯ ಅಭಿವ್ಯಕ್ತ ರೂಪ. ಅದು ಜೀವನನ್ನು ಜಗತ್ತಿನೊಂದಿಗೆ ಬಂಧಿಸಲು ಅನೇಕ ತರಹದ ಆಸೆಗಳನ್ನು ಮೂಡಿಸುತ್ತದೆ. ಜೀವನನ್ನು ಆಕರ್ಷಿಸಲು ಆಮೀಷವನ್ನೊಡ್ಡುತ್ತದೆ ಎಂಬರ್ಥದಲ್ಲಿ ಹೇಳಿದ್ದಾರೆ.

ಪಾಶ್ಚಾತ್ಯರಲ್ಲಿ ಪರ್ಮೆಡಿಸನ್, ಹೆರಿಕ್ಲಿಂಟಸ್, ಝಿನೊಪೆನ್ಸ್, ಪ್ಲೋಟಿನಸ್ ಮುಂತಾದ ಚಿಂತಕರು 'ಮಾಯೆ' ಕುರಿತು ತಾತ್ವಿಕವಾಗಿ ಚಿಂತನೆಗೈದಿದ್ದಾರೆ. 'ಪರ್ಮೆಡಿಸನ್' ಎಂಬ ವಿದ್ವಾಂಸರು 'ಇಂದ್ರೀಯ ಮುಖೇನ ಬಂದ ವಿಚಾರವೆಲ್ಲ ಮಾಯೆ ತರ್ಕಶುದ್ಧವಾಗಿ ಬಂದುದು ಸಂಪೂರ್ಣ ಸತ್ಯವೆಂದು ಹೇಳಿದ್ದಾರೆ. 'ಮಾಯೆ' ಎಂಬುದು ಇಂದ್ರೀಯ

ಅನುಭವಗಳ ಮುಖೇನ ರೂಪ ಪಡೆಯುತ್ತದೆ. ತರ್ಕಕ್ಕೆ ನಿಲುಕಲಾರದ ಸ್ಥಿತಿಯಲ್ಲಿರುವಂಥದ್ದು. ಏಕೆಂದರೆ ಮಾಯೆ ನಿಶ್ಚಿತ ರೂಪಿ ಅಲ್ಲ. ಕ್ಷಣ ಕ್ಷಣಕ್ಕೂ ಬದಲಾಗಬಲ್ಲ ಚಂಚಲ ಸ್ವರೂಪಿಯಾಗಿ ತೋರುತ್ತದೆ ಎಂಬ ಭಾವವಿದೆ.

'ಇಂದ್ರೀಯಾನುಭವದ ಜಗತ್ತು ಶಾಶ್ವತ ಮಾಯೆ' ಎಂಬುದು ಹೆರಿಕ್ಲಿಂಟಸ್ ಅವರ ಅಭಿಪ್ರಾಯ ವಾಗಿದೆ. ಈ ವ್ಯಾಖ್ಯಾನದಲ್ಲಿ ಜಗತ್ತು ಎಂಬುದು ಇಂದ್ರೀಯಗಳ ಮೂಲಕ ಗೋಚರವಾಗುವಂಥದ್ದು. ಶಿವಾಂಶಿಕವಾದ ಆತ್ಮನಿಂದ ಭಿನ್ನಗೊಂಡ ಜೀವ ದೇಹದ ಮೂಲಕ ಜಗತ್ತು ಅರಿವಿಗೆ ಬರುತ್ತದೆ. ದೇಹವೆಂಬುದು ಪಂಚೇಂದ್ರಿಯಗಳ ಮೂಲಕ ತೋರುವಂಥದ್ದು ದೇವ ಜೀವನಿಗೂ ಅಂತರ ಸೃಷ್ಟಿಸಲು 'ಮಾಯೆ' ಎಂಬುದು ಕಾರಣವಾಗುತ್ತದೆ. ಪಾಶ್ಚಾತ್ಯ ವಿದ್ವಾಂಸರ ದೃಷ್ಟಿಯಲ್ಲಿ 'ಮಾಯಾ' ಚಿಂತನೆಗೂ ಭಾರತೀಯ ಪರಂಪರೆಯಲ್ಲಿನ 'ಮಾಯೆ'ಯ ಚಿಂತನೆಯಲ್ಲಿ ಸಾಮ್ಯತೆ ತೋರುತ್ತದೆ.

ವೇದಕಾಲದಲ್ಲಿ 'ಮಾಯೆ' ಪದ ಬಳಕೆಯಲ್ಲಿದ್ದು 'ಇಂದ್ರೋಮಾಯಾಭಿಃ ಪುರುರೂಪ ಈಯತೆ' ಎಂಬ ಉಲ್ಲೇಖಕ್ಕೆ ಸಾಕ್ಷಿಯಾಗಿದೆ. ಬೌದ್ಧ ಧರ್ಮಕ್ಕಿಂತಲೂ ಪೂರ್ವದಲ್ಲಿಯೇ 'ಮಾಯೆ' ಎಂಬ ಪದ ಆಧ್ಯಾತ್ಮದಲ್ಲಿ ಬಳಕೆಯಾದುದು ಸ್ಪಷ್ಟವಾಗಿದೆ.

ಬೌದ್ಧರಲ್ಲಿ ಮಾಯಾವಾದ ತೀವ್ರ ಚರ್ಚೆಗೆ ಒಳಗಾಯಿತು. ಬೌದ್ಧರ ಮಾಧ್ಯಮಿಕರ ದೃಷ್ಟಿಯಲ್ಲಿ ಸತ್ಯವೂ ಎರಡು ವಿಧ ೧) ಸಂವೃತ್ತಿ ೨) ಪರಮಾರ್ಥ. ಸಂವೃತ್ತಿ ಎಂದರೆ ಅವಿದ್ಯೆ. ಇದು ಸತ್ಯವಾದದನ್ನು ಮರೆಮಾಡಿ ಆವರಣವನ್ನು ಉಂಟುಮಾಡುತ್ತದೆ. ಇಲ್ಲಿ ಸಂವೃತ್ತಿ ಎಂಬುದು ಅವಿದ್ಯೆಯ ರೂಪದ ಮಾಯೆ ಆಗಿದೆ. ಜೀವನನ್ನು ವಾಸ್ತವದಿಂದ ದೂರವಿರಿಸುತ್ತದೆ. ಜೀವನ ಸುತ್ತಲೂ ಆವರಣ ರೂಪದಲ್ಲಿ ಆವರಿಸುವಿಕೆ ಎಂದರೆ ಜೀವನ ಅರಿವನ್ನು ಮರೆಮಾಚುವಂತೆ ಮಾಡುತ್ತದೆ. ಮಾಯೆ ಎಂಬುದು ಜೀವ ಮತ್ತು ದೇವನ ನಡುವೆ ಪರದೆಯಾಗಿ ಕೆಲಸ ಮಾಡುತ್ತದೆ ಎಂದರ್ಥ ಬರುವುದು.

ನಮ್ಮ ಪರಂಪರೆಯಲ್ಲಿನ ಪ್ರಾತಿನಿಧಿಕ ಗ್ರಂಥವಾಗಿರುವ ಮಹಾಭಾರತದಲ್ಲಿ ಭಗವದ್ಗೀತೆಯಲ್ಲಿ 'ಮಾಯೆ' ಪ್ರಸ್ತಾಪಗೊಂಡಿದೆ. ಭಗವದ್ಗೀತೆಯಲ್ಲಿ ಮಾಯೆಯನ್ನು 'ದೈವಿಮಾಯೆ'ಎಂದೂ, 'ಯೋಗಮಾಯೆ' ಎಂದು ಕರೆಯಲಾಗಿದೆ. 'ದೈವಿಮಾಯೆ' ಎಂಬುದು ತ್ರಿಗುಣಮಯೆಯಾದದ್ದು. ದೇವನನ್ನು ಆಶ್ರಯಿಸಿ ದವರಿಗೆ ಮಾತ್ರ ಆ ಮಾಯೆಯನ್ನು ಮೀರಲು ಸಾಧ್ಯ ಎಂಬುದು 'ಮಾಮೇವ ಯೆ ಪ್ರಪದ್ಯಂತೆ ಮಾಯಾ ಮೇತಾಂ ತರಂತಿ ತೇ' ಎಂಬ ಶ್ಲೋಕದಲ್ಲಿದೆ.

ನಾಹಂ ಪ್ರಕಾಶಃ ಸರ್ವಸ್ಯ ಯೋಗ ಮಾಯಾ ಸಮಾವೃತ್ತಃ।
ಮೂಢೋಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥ ೨೫ ॥

ಶ್ಲೋಕವು ಪ್ರಸ್ತಾಪಿಸುವಂತೆ, ಯೋಗ ಮಾಯೆಯಿಂದ ಆವೃತ್ತನಾದ ನಾನು ಎಲ್ಲರಿಗೂ

ಪ್ರತ್ಯಕ್ಷನಲ್ಲ. ಈ ಮೂಢ ಜನರು ಅಜನೂ ಅವ್ಯಯನಾದ ನನ್ನನ್ನು ಅರಿಯರು ಎಂದಿದೆ.

'ಮಾಯೆ' ಎಂಬುದು ದೈವಿ ಸ್ವರೂಪದ್ದು, ಸಾತ್ವಿಕ ಭಾವವುಳ್ಳದ್ದು ಎಂದು ಅರ್ಥ. ದೇವನಲ್ಲಿ ಆಶ್ರಿತವಾದದ್ದು ಮಾಯೆ. ಜೀವನು ದೇವನನ್ನು ಆಶ್ರಯಿಸಿದಾಗ 'ಮಾಯೆ'ಯಿಂದ ಮುಕ್ತನಾಗಲು ಸಾಧ್ಯ. ಮಾಯೆ ನಿಜಸ್ವರೂಪ ಅರಿಯಬಲ್ಲವನಾಗುತ್ತಾನೆ.

ವೇದಕಾಲಿನ ಪರಂಪರೆಯಿಂದ 'ಮಾಯೆ' ನಿರೂಪಿತಗೊಳ್ಳುತ್ತಲೇ ಬಂದಿದೆ. ಬೌದ್ಧರ ಶೂನ್ಯವಾದ ಮೂಲಕ ಮಾಯಾವಾದ ಸ್ಪಷ್ಟ ರೂಪ ಪಡೆದಿದ್ದು, 'ಬೌದ್ಧಕ್ಕಿಂತಲೂ ಪೂರ್ವದಲ್ಲಿ ಹಾಗೂ ಹಿಂದೂ ಧರ್ಮದ ಪರಂಪರೆಯಲ್ಲಿ 'ಮಾಯೆ' ನಿರೂಪಿತಗೊಂಡಿದೆ. ಕಾಲಾಂತರದಲ್ಲಿ ಶಂಕರಾಚಾರ್ಯರ 'ಮಾಯಾವಾದ' ಎಂಬ ತಾತ್ವಿಕ ಸಿದ್ಧಾಂತದ ರೂಪದಲ್ಲಿ ಚರ್ಚೆಗೆ ಗ್ರಾಸವಾಯಿತು.

ಶಂಕರಾಚಾರ್ಯರು 'ಮಾಯಾ' ಕುರಿತು ದೀರ್ಘವಿವರಣೆ ನೀಡಿದ್ದಾರೆ. 'ಮೊದಲಿಲ್ಲದ ಅಜ್ಞಾನ ರೂಪಿಯಾಗಿದ್ದು, ತ್ರಿಗುಣಗಳಿಂದ ಕೂಡಿದ್ದು ಮಾಯೆ ಅವ್ಯಕ್ತರೂಪ ಉಳ್ಳದ್ದಾದರೂ ಲೋಕದಲ್ಲಿ ಕೈಕೊಳ್ಳುವ ಕಾರ್ಯಗಳ ಮೂಲಕ ವ್ಯವಹಾರಿಕ ರೂಪ ಪಡೆಯುತ್ತದೆ' ಎಂದು ಹೇಳಿದ್ದಾರೆ. ಮಾಯೆ ಇಲ್ಲದಿರುವ ಇದ್ದಂತೆ ತೋರುವ ಜೀವಿಯ ಮೂಲಕ ಅಭಿವ್ಯಕ್ತವಾಗುವುದು ಎಂಬರ್ಥದಲ್ಲಿದೆ.

ಹೀಗೆ ಭಾರತೀಯ ಪರಂಪರೆಯ ಸುದೀರ್ಘ ಇತಿಹಾಸದಲ್ಲಿ ಧರ್ಮ ಎಂಬುದು ವಿಶಿಷ್ಟ ಸ್ಥಾನ ಗಳಿಸಿದ್ದು ಇಂತಹ ಚರ್ಚೆಗಳ ಮೂಲಕವೇ. ಪ್ರತಿ ಧರ್ಮದ ದಾರ್ಶನಿಕ ಚಿಂತಕರು ಧರ್ಮವನ್ನು ಅದರ ತಾತ್ವಿಕ, ಸೈದ್ಧಾಂತಿಕ ಚಿಂತನೆಗಳ ಮೂಲಕ ವಿಶಿಷ್ಟಗೊಳಿಸಿದ್ದಾರೆ. ಈ ಚಿಂತನೆಗಳ ಹಾದಿಯಲ್ಲಿ ಮನುಜ ಸೋಲುವ ಪರಿಯೇ ಮಾಯೆಯಾಗಿದೆ. ಧಾರ್ಮಿಕ ಚಿಂತನೆಯ ಹಾದಿಯಲ್ಲಿ ಕಾಲದಿಂದ ಕಾಲಕ್ಕೆ ಮಾಯೆ ಭಿನ್ನ ದೃಷ್ಟಿಕೋನದಿಂದ ರೂಪ ಪಡೆಯುತ್ತಲೇ ಬಂದಿದ್ದು, ವಚನಕಾರರ ಆಲೋಚನೆಗಳು ಕೂಡಾ ಇದಕ್ಕೆ ಹೊರತಾಗಲು ಸಾಧ್ಯವಾಗಲಿಲ್ಲ 'ಮಾಯೆ' ಎಂಬುದು ಎಲ್ಲ ವಚನಕಾರರನ್ನು ಕಾಡಿದೆ.

೧೨ನೇ ಶತಮಾನದಲ್ಲಿ ಈವರೆಗಿನ ಧರ್ಮ–ಪ್ರಭುತ್ವಗಳೆರಡನ್ನು ಬದಿಗಿರಿಸಿ ತನ್ನತನವನ್ನು ಮೆರೆದದ್ದು ಶರಣ ಪರಂಪರೆ. ಸಾಮಾಜಿಕ ಬದುಕನ್ನು ಹಾಗೂ ವೈಯಕ್ತಿಕ ಬದುಕನ್ನು ಸಹ್ಯಗೊಳಿಸಿಕೊಳ್ಳುವ ಮಹದಾಶಯವನ್ನು ಹೊತ್ತ ಶರಣರು ವಚನಗಳ ಮೂಲಕ ನುಡಿದಂತೆ ನಡೆವ ಹಾಗೂ ನಡೆದಂತೆ ನುಡಿವ ಮಾನಸಿಕ ಸ್ಥಿತಿಯನ್ನು ಸಿದ್ಧಗೊಳಿಸಿಕೊಂಡರು. ಶರಣರ ಈ ಅವರ ವಚನಗಳನ್ನು ಗಮನಿಸಿದಾಗ, ಬದುಕಿನ ಪ್ರತಿಯೊಂದು ಮೌಲ್ಯವು ಆಧ್ಯಾತ್ಮಿಕ ಸಾಧನೆಗೆ ಪ್ರೇರಕ ಹಾಗೂ ಪೂರಕ ಅಂಶವನ್ನು ಮನಗಾಣಿಸುತ್ತವೆ.

ಬಸವಣ್ಣನಾದಿಯಾಗಿ ಎಲ್ಲ ವಚನಕಾರರು ವಚನಗಳ ಮೂಲಕ ಬದುಕಿನ ಉದಾತ್ತತೆಯನ್ನು ಸಾರಿದವರು. ಮಾನವೀಯ ಚಿಂತನೆಗಳನ್ನು ವಚನಗಳಲ್ಲಿ ಹರಿಸಿದವರು. ವಚನಕಾರರ ವಚನಗಳು ವ್ಯಕ್ತಿ ಸಾಮಾಜಿಕ ಬದುಕಿನ ಹಲವು ಕೊನೆಗಳಲ್ಲಿ ನಿಂತು ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ತುಡಿತವನ್ನು ಒಳಗೊಂಡಿವೆ. ಶರಣನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದಾಗ ಸುತ್ತ ಇರುವ ಸಮಾಜವೆಂಬ ಲೌಕಿಕ ಬದುಕು ನಿಯಂತ್ರಿಸುತ್ತದೆ. ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಲು ಲೌಕಿಕ ಕ್ರಿಯಾ ವ್ಯಾಪಾರಗಳು ಸಮಯವನ್ನು ಒದಗಿಸುವುದಿಲ್ಲ ಅದಕ್ಕಾಗಿಯೇ ಉದಯವೇ ಆಗಲಿ, ಅಸ್ತಮಾನವೇ ಆಗಲಿ ಕಾಯಕ ನಿರತನಾಗಿರಲಿ ಅಥವಾ ಕಾಯಕ ರಹಿತನಾಗಿರಲಿ ಪ್ರತಿ ಕ್ಷಣವು ಅಂತರಂಗದಲ್ಲಿ ಶಿವಧ್ಯಾನವಿರಬೇಕು ಬಹಿರಂಗದಲ್ಲಿ ನಿಸ್ವಾರ್ಥತೆ ಇರಬೇಕೆಂಬ ಸದಾಶಯವನ್ನು ಶರಣರು ಹೊಂದಿದ್ದಾರೆ.

ಇಂತಹ ಶರಣ ಪರಂಪರೆಯಲ್ಲಿ ವಿಭಿನ್ನವಾಗಿ ಕಾಣುವ ವ್ಯಕ್ತಿಗಳೆಂದರೆ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ. ಸಮಾಜದ ಮಧ್ಯದಲ್ಲಿಯೇ ಇದ್ದರೂ ಇಲ್ಲದಂತಿರುವ ವ್ಯಕ್ತಿ ಅಲ್ಲಮಪ್ರಭುವಾದರೆ ಸಮಾಜದ ಮಧ್ಯದಲ್ಲಿದ್ದು ಅದರಿಂದ ಬಿಡಿಸಿಕೊಳ್ಳುವ ತುಡಿತದಲ್ಲಿರುವ ವ್ಯಕ್ತಿ ಅಕ್ಕಮಹಾದೇವಿ. ವಚನಗಳ ಮೂಲಕ ಅಲ್ಲಮ ಮತ್ತು ಅಕ್ಕ ವಿಶಿಷ್ಟ ವ್ಯಕ್ತಿತ್ವಗಳಾಗಿ ತೋರುತ್ತಾರೆ. ಒಂದೇ ಕಾಲಘಟ್ಟದಲ್ಲಿ ಒಂದೇ ಸಮಾಜದಲ್ಲಿ ಬದುಕಿದ ಇವರಿಬ್ಬರು ಎದುರಿಸಿದ ಸಾಮಾಜಿಕ ಸನ್ನಿವೇಶಗಳು ಮಾತ್ರ ಬೇರೆ ಬೇರೆಯಾಗಿವೆ. ಭವಲೋಕವನ್ನು ಅಲ್ಲಮ ಲೋಕದ ಹೊರಗೆ ನಿಂತು ಅರ್ಥೈಸಿದರೆ, ಅಕ್ಕ ಲೋಕದಲ್ಲಿಯೇ ನಿಂತು ಲೋಕವನ್ನು ಅರ್ಥೈಸುತ್ತಾಳೆ. ಇಂತಹ ವಿಭಿನ್ನ ಮನೋಧರ್ಮದ ವ್ಯಕ್ತಿತ್ವಗಳು ದೇವರು, ಜೀವ, ಮೋಕ್ಷ, ಜಗತ್ತು ಇವುಗಳ ಕುರಿತು ಚಿಂತನೆ ನಡೆಸುವಾಗ 'ಮಾಯೆ' ಎಂಬ ಪರಿಕಲ್ಪನೆಯನ್ನು ತಮ್ಮ ವಚನಗಳ ಮೂಲಕ ಅರ್ಥೈಯಿಸಿದ್ದಾರೆ.

ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆಯನ್ನು ನಿರ್ವಚಿಸಿದ ನೆಲೆಗಳ ಹಿನ್ನಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನಕ್ಕೆ ತೊಡಗುವ ಹಂತದಲ್ಲಿ ಅಲ್ಲಮ ಹಾಗೂ ಅಕ್ಕನ ಕುರಿತು ನಡೆದಿರುವ ಅಧ್ಯಯನಗಳನ್ನು ಗಮನಿಸಿದಾಗ ಹರಿಹರ, ಚಾಮರಸರ ಕೃತಿಗಳನ್ನು ಹಾಗೂ ಶೂನ್ಯ ಸಂಪಾದನೆಗಳನ್ನು ಆಕರವಾಗಿಟ್ಟುಕೊಂಡು ಅಲ್ಲಮಪ್ರಭುವಿನ ವ್ಯಕ್ತಿತ್ವ ಶ್ರೇಷ್ಠತೆಯನ್ನು ಚಿತ್ರಿಸಿದರೆ, ಅಕ್ಕಮಹಾದೇವಿಯನ್ನು ಸಾತ್ವಿಕ ಕಳೆಯಾಗಿಸಿ ಆಧ್ಯಾತ್ಮಿಕ ಸಾಧನೆಗೈಯ್ಯಲು ಹೊರಟ ವ್ಯಕ್ತಿಯಾಗಿ ಚಿತ್ರಿಸಿದ್ದಾರೆ.

ಅಲ್ಲಮನ ಕುರಿತು ಗಮನಿಸಿದಾಗ ಪುರಾಣ ಕೃತಿಗಳಲ್ಲಿ, ವಿಮರ್ಶಾತ್ಮಕ ಮತ್ತು ಸಂಶೋಧನಾತ್ಮಕ ಬರಹಗಳಲ್ಲಿ ಅಲ್ಲಮನ ಹೆಸರು, ತಂದೆ-ತಾಯಿಯ ಹೆಸರು, ಊರಿನ ಕುರಿತ ಚರ್ಚೆಗಳು ನಡೆದಿದ್ದು, ಅಲ್ಲಮ 'ಮಾಯೆ' ಸೆಳೆತಕ್ಕೆ ಒಳಗಾಗದೇ

ಮಾಯಾಕೋಲಾಹಲನಾಗಿ ತೋರುತ್ತಾನೆ. ಸ್ವಾನುಭವದಿಂದ ಶಿವಯೋಗ ಸಾಧನೆಯಿಂದ ಪರಿಪೂರ್ಣ ಜ್ಞಾನಿಯಾಗಿ ಶೂನ್ಯ ಸಿಂಹಾಸನಾಧೀಶನಾಗಿ, ಲೋಕಸಂಚಾರ ಮಾಡುತ್ತಾ ಜ್ಞಾನಿಗಳಲ್ಲಿಯ ಮಾಯೆಯನ್ನು ಕಳೆಯುವ ಧೀಮಂತನಾಗಿ ತೋರುತ್ತಾನೆ. ಕೆಲವೆಡೆ ಸಾಂದರ್ಭಿಕವಾಗಿ ಅಲ್ಲಮನ ವಚನಗಳನ್ನು ಆಯ್ದು ಆತನ ಬದುಕಿಗೆ ಪೂರಕವಾಗಿ ಬಳಸಿದ್ದಾರೆ. ಆಧುನಿಕ ವಿದ್ವಾಂಸರಾದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು, ಶ್ರೀ ಸಿದ್ದೇಶ್ವರ ಸ್ವಾಮಿಗಳು ಹಾಗೂ ಡಾ.ಓ.ಎಲ್. ನಾಗಭೂಷಣಸ್ವಾಮಿ, ಡಾ.ಬಸವರಾಜ ಕಲ್ಗುಡಿ, ಡಾ.ವಿಜಯಾದೇವಿ, ಪ್ರೊ.ಎನ್.ಜಿ. ಮಹಾದೇವಪ್ಪ, ಡಾ. ಚಂದ್ರಶೇಖರ ನಂಗಲಿ ಮುಂತಾದವರು ಅಲ್ಲಮ ವಚನಗಳನ್ನು ಅರ್ಥೈಸುವ ವ್ಯಾಖ್ಯಾನಿಸುವುದರ ಜೊತೆಗೆ ಹೊಸದೃಷ್ಟಿ ಕೋನದಲ್ಲಿ ಚಿಂತಿಸಿದ್ದು ಕಂಡು ಬರುತ್ತದೆ.

ಅಲ್ಲಮನ ಕುರಿತು ರಚನೆಗೊಂಡ 'ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ' ಎಂಬ ಕೃತಿ ಸಂಶೋಧನಾ ಪ್ರಬಂಧವಾಗಿದ್ದು, ಇಲ್ಲಿ ಅಲ್ಲಮನನ್ನು ಸಾಂಸ್ಕೃತಿಕವಾಗಿ ಅಧ್ಯಯನಕ್ಕೊಳಪಡಿಸಿದ್ದು, 'ಮಾಯೆ'ಯ ಪರಿಕಲ್ಪನೆ ಸಾಂದರ್ಭಿಕವಾಗಿ ಚರ್ಚೆಗೊಳಗಾಗಿದೆ. ಶರಣರ ಜೀವನಚರಿತ್ರೆ ಮಾಲೆಯಲ್ಲಿ ಅಲ್ಲಮಪ್ರಭುದೇವ ಕೃತಿ ಬಂದಿದ್ದು 'ಅನುಪಮಚರಿತ ಅಲ್ಲಮಪ್ರಭುದೇವ' ಅಲ್ಲಮನ ವಚನಗಳಿಂದಲೇ ಅಲ್ಲಮನ ಜೀವನ ಚರಿತ್ರೆ ಕಟ್ಟಿಕೊಡುವ ಪ್ರಯೋಗಾತ್ಮಕ ಕೃತಿಯಾಗಿದೆ. ಶ್ರೀ ಸಿದ್ದೇಶ್ವರ ಸ್ವಾಮಿಗಳಿಂದ ರಚಿತವಾದ 'ಅಲ್ಲಮ ಪ್ರಭುದೇವರು ವಚನ– ನಿರ್ವಚನ' ಕೃತಿಯಲ್ಲಿ ಸರಳ ಶೈಲಿಯಲ್ಲಿ ಅರಿವಿನ ಆಳವನ್ನು ಅನುಭವದ ಬೆಳಕನ್ನು ವಚನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇದಲ್ಲದೇ ಡಾ.ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳಿಂದ ರಚಿತತೊಂಡ 'ಪ್ರಭುದೇವರ ಟೀಕಿನ ವಚನಗಳು' ಎಂಬ ಕೃತಿ ಅಲ್ಲಮ ಪ್ರಭುವಿನ ವಚನಗಳಲ್ಲಿ ಸೂಕ್ಷ್ಮ ಒಳಾರ್ಥಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಕಾರ್ಯ ಓದುಗನ ಅರಿವಿನ ಮೇರೆಯನ್ನು ವಿಸ್ತರಿಸುತ್ತದೆ.

ಅಲ್ಲಮ ಪ್ರಭುದೇವರ ವಚನ–ನಿರ್ವಚನ ಹಾಗೂ 'ಅಲ್ಲಮ ಪ್ರಭುದೇವರ ಟೀಕಿನ ವಚನಗಳು' ಎಂಬ ಕೃತಿಗಳು ಅಲ್ಲಮನ ವಚನಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ಅಲ್ಲಮನ ಸೂಕ್ಷ್ಮ ದೃಷ್ಟಿಕೋನವನ್ನು ಹಾಗೂ ತೀಕ್ಷ್ಣ ಪ್ರತಿಕ್ರಿಯೆಯನ್ನು ಓದುಗರಿಗೆ ಪರಿಚಯಿಸುವುದಲ್ಲದೇ ಅಲ್ಲಮನ ವಚನಗಳ ವಿಶ್ಲೇಷಣೆಗೆ ತೊಡಗಲು ಮಾರ್ಗದರ್ಶಿಯಾಗಿವೆ. ಆದರೆ ಅಲ್ಲಮನ ವಚನಗಳಲ್ಲಿ ಮಾಯೆ ಕುರಿತು ಗಮನಿಸುವಾಗ ಕೆಲವು ವಚನಗಳು ಕೈಬಿಟ್ಟು ಹೋಗಿವೆ. ಈವರೆಗಿನ ಅಧ್ಯಯನದ ವ್ಯಾಪ್ತಿಗೆ ಒಳಪಡದೇ ಇರುವುದು ಕಂಡು ಬರುತ್ತದೆ.

ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳ ಕುರಿತು ಈ ವರೆಗಿನ ಅಧ್ಯಯನಗಳನ್ನು ಗಮನಿಸಿದಾಗ ಗಮನಿಸುತ್ತ ಹೊರಟ ಅಕ್ಕನ ಜೀವನಚರಿತ್ರೆ ಬಾಲ್ಯ, ಯೌವ್ವನ ಕೌಶಿಕನೊಂದಿಗೆ ವಿವಾಹ, ವಿವಾಹದ ಬದುಕನ್ನು ನಿರಾಕರಿಸಿ ಯೋಗಿಣಿಯಾದದ್ದು ಹೀಗೆ ಸರಪಳಿಯ

ರೂಪದಲ್ಲಿ ನಿರೂಪಣೆ ದೊರೆಯುತ್ತದೆ. ಅಕ್ಕನ ಜೀವನವನ್ನು ಚಿತ್ರಿಸುವಾಗ ಪುರಾಣಗಳಲ್ಲಿನ ವಸ್ತುವನ್ನು ಭಿತ್ತಿಯಾಗಿಸಿಕೊಂಡು, ಆಯ್ದ ವಚನಗಳನ್ನು ವಸ್ತುವಾಗಿಸಿಕೊಂಡಿದ್ದಾರೆ. ಅಕ್ಕನ ಹೆಸರು, ಊರು, ಕೌಶಿಕ ಹಾಗೂ ಕದಳಿ ಎಂಬ ಪರಿಕಲ್ಪನೆ ಕುರಿತು ಸಂಶೋಧನಾತ್ಮಕ ನೆಲೆಯ ಅಧ್ಯಯನಗಳು ನಡೆದಿದ್ದು ಕಂಡುಬರುತ್ತದೆ.

ಅಕ್ಕನ ವಚನಗಳನ್ನು ವಸ್ತು, ಭಾಷೆ, ಛಂದಸ್ಸು, ಅಲಂಕಾರದ ಅಂಶಗಳನ್ನು ಆಧರಿಸಿ ಗಮನಿಸಲಾಗಿದೆ. ಅಕ್ಕನ ವಚನಗಳಲ್ಲಿ ಭಕ್ತಿ, ವೈರಾಗ್ಯ, ಲೌಕಿಕ, ಗುರು–ಶಿಷ್ಯ, ಸಂಸಾರ, ಪ್ರಕೃತಿ, ಪ್ರೇಮ ನಿವೇದನೆ ಇತ್ಯಾದಿ ನೆಲೆಗಳಲ್ಲಿ ವಿಮರ್ಶಿಸುವ ಕಾರ್ಯ ನಡೆದಿದೆ. ಅಕ್ಕನ ಜೊತೆಗೆ ಇತರ ಭಾಷೆ, ಸಂಸ್ಕೃತಿಯ ಮಹಿಳಾ ಸಂತರನ್ನು ತುಲನೆ ಮಾಡಿ ಅಧ್ಯಯನ ಮಾಡುವಲ್ಲಿ ಅಂಡಾಳ್, ಮೀರಾ, ಮಹಾದೇವಿ ಮತ್ತು ಅಕ್ಕಮಹಾದೇವಿ, ಕರಿಕಾಲಮ್ಮ ಕೃತಿಗಳು ರಚಿತಗೊಂಡಿವೆ.

ಅಕ್ಕನನ್ನು ಶರಣೆಯಾಗಿ, ವೈರಾಗ್ಯನಿಧಿ, ಮಹಾಯೋಗಿಣಿ ಎಂಬರ್ಥದಲ್ಲಿ ಗಮನಿಸಿಕೊಳ್ಳುವಾಗ ಅನೇಕ ವಚನಕಾರರು, ಪ್ರವಚನಕಾರರು ಅಕ್ಕನ ವಚನಗಳ ಆಧ್ಯಾತ್ಮಿಕ ವಿಶ್ಲೇಷಣೆ ಜೊತೆಗೆ ಅಕ್ಕನನ್ನು ಹಾಡಿ ಹೊಗಳಿದ್ದಾರೆ. ಒಟ್ಟಾರೆ ಅಕ್ಕನ ವಚನಗಳನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅರ್ಥೈಯಿಸಿದ್ದಾರೆ. ಇಂದಿನ ಸಂದರ್ಭ ಗಳಲ್ಲಿ ಅಕ್ಕನ ವಚನಗಳನ್ನು ಸ್ತ್ರೀವಾದಿ ಸಂವೇದನೆಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಕ್ಕನ ಕುರಿತು ವಿಮರ್ಶಾ ಲೇಖನಗಳು ರಚಿತಗೊಂಡಿವೆ. ಸಂಪ್ರದಾಯ ವಿರೋಧಿಯಾಗಿ, ಬಂಡಾಯದ ಸಾಂಕೇತಿಕ ಅಭಿವ್ಯಕ್ತಿಯಾಗಿ ಅಕ್ಕನನ್ನು ಪರಿಭಾವಿಸುವ ಸಂದರ್ಭ ವಚನಗಳ ಮೂಲಕ ಅಭಿವ್ಯಕ್ತಿಯಾಗುತ್ತಿದ್ದು, ಆಯ್ದ ವಚನಗಳ ಕುರಿತಾಗಿ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಅಕ್ಕನ ಕುರಿತ ಸೃಜನಶೀಲ ಕೃತಿಗಳು ಬಂದಿದ್ದು ಅಕ್ಕನ ವಯಕ್ತಿಕ, ಸಾಮಾಜಿಕ ಬದುಕನ್ನು 'ಕದಳಿಯ ಕರ್ಪೂರ', ಕೃತಿಯಲ್ಲಿ ನೋಡಬಹುದಾಗಿದೆ.

ಹೀಗೆ ಅಕ್ಕನನ್ನು ಕುರಿತು ಸೃಜನ, ವಿಮರ್ಶೆ, ವಿಶ್ಲೇಷಣೆ, ಸಂಶೋಧನೆಯ ಮೂಲಕ ಗಮನಿಸ ಲಾಗಿದೆ. ಇಷ್ಟೆ ಅಲ್ಲದೇ ಅಕ್ಕನ ವ್ಯಕ್ತಿತ್ವವನ್ನು ಪ್ರವಚನದ ಮೂಲಕ ಹಾಡಿ ಹೊಗಳಿರುವುದು ಕಂಡುಬರುತ್ತದೆ. ಆದರೆ ಅಕ್ಕನ ವಚನಗಳನ್ನು 'ಮಾಯೆ' ಎಂಬ ಪರಿಕಲ್ಪನೆಯ ಹಿನ್ನಲೆಯಲ್ಲಿ ಗಮನಿಸುವಾಗ ಹೆಚ್ಚು ಚರ್ಚೆಗೆ ಒಳಗಾದ ವಚನವೆಂದರೆ 'ಪುರುಷನ ಮುಂದೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು', 'ಎನ್ನ ಮಾಯದ ಮದವ ಮುರಿಯಯ್ಯ','ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ'ಎಂಬಂತಹ ವಚನಗಳನ್ನು ಮಾತ್ರ ಆಯ್ದುಕೊಂಡಿದ್ದು, ಕೆಲವು ಚರ್ಚೆಗೆ ಬಾರದೇ ಉಳಿದಿರುವುದು ಕಂಡುಬರುತ್ತದೆ.

ಅಲ್ಲಮ ಮತ್ತು ಅಕ್ಕನ ಕುರಿತು ಆಲೋಚಿಸುವಾಗ ಇವರಿಬ್ಬರು ಒಂದೇ ಸಾಮಾಜಿಕ ಸಂದರ್ಭಗಳಲ್ಲಿ ಬದುಕಿದವರು. ಆದರೆ ಅವರಿಬ್ಬರಿಗೂ ಮುಖಾಮುಖಿಯಾದ ಸಂದರ್ಭಗಳು

ಮಾತ್ರ ಬೇರೆ ಬೇರೆ ಆಗಿವೆ . ಪುರುಷ ವಚನಕಾರನಾದ ಅಲ್ಲಮಪ್ರಭು ಸಮಾಜವನ್ನು ಸರಳವಾಗಿ ತ್ಯಜಿಸಿ, ಸನ್ಯಾಸತ್ವ ಸ್ವೀಕರಿಸಿ ಬದುಕುವಲ್ಲಿ ಶ್ರೇಷ್ಠತೆಯೆಂಬ ಭಾವವಿದ್ದರೆ, ಅಕ್ಕಮಹಾದೇವಿ ಮಹಿಳೆಯಾಗಿ ಸಮಾಜವನ್ನು ಸರಳವಾಗಿ ತ್ಯಜಿಸಲು ಸಾಧ್ಯವಾಗದೆ ಸನ್ಯಾಸತ್ವ ಸ್ವೀಕರಿಸಲಾಗದೆ ದಿಗಂಬರತ್ವದ ಹಾದಿಯನ್ನು ಆಯ್ಕೆ ಮಾಡಿ ಕೊಳ್ಳಬೇಕಾದ ಅನಿವಾರತ್ಯತೆಗೆ ಒಳಗಾದವಳು ಎಂಬ ಅಂಶ ನನ್ನನ್ನು ತುಂಬಾ ಕಾಡಿದೆ. ಈ ಕಾಡುವಿಕೆಗೆ ಉತ್ತರವಾಗಿ ಅಲ್ಲಮ ಮತ್ತು ಅಕ್ಕನನ್ನು ಹೋಲಿಸಿ ನೋಡುವ ಪ್ರಯತ್ನ ಅಧ್ಯಯನದ ಮೂಲಕ ಸಾರ್ಥಕ್ಯ ಪಡೆದಿದೆ. 'ಮಾಯೆ' ಎಂಬ ಆಧ್ಯಾತ್ಮಿಕ ನೆಲೆಯ ಪರಿಭಾಷೆಯ ಮೂಲಕ ಅಕ್ಕ ಮತ್ತು ಅಲ್ಲಮನ ವಚನಗಳು ನಿರ್ವಚಿತಗೊಂಡ ನೆಲೆಗಳನ್ನು ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಅಲ್ಲಮನ ವಚನಗಳಲ್ಲಿ ಮತ್ತು ಅಕ್ಕನ ವಚನಗಳಲ್ಲಿ 'ಮಾಯೆ' ಎಂಬ ಆಧ್ಯಾತ್ಮಿಕ ಪರಿಕಲ್ಪನೆ ನಿರ್ವಚನಗೊಂಡ ಬಗೆಯನ್ನು ಕೇಂದ್ರಿಕರಿಸಿ ಅಧ್ಯಯನಿಸಲಾಗಿದೆ. ಅಕ್ಕ ಹಾಗೂ ಅಲ್ಲಮ ದೃಷ್ಟಿಯಲ್ಲಿ ಮಾಯೆ ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ನಿರ್ವಚಿಸುವಲ್ಲಿ ಹಾಗೂ ಅರ್ಥೈಸುವಲ್ಲಿ ಕಾಣುವ ಭಿನ್ನ ದೃಷ್ಟಿ ಕೋನಗಳನ್ನು ಮುಖ್ಯವಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ವಚನಗಳಲ್ಲಿ ಮಾಯೆಗೆ ಕೊಡುವ ಹೋಲಿಕೆಗಳ ಮೂಲಕ ಮಾಯೆಯು ಅರ್ಥ ವೈವಿಧ್ಯತೆಗೊಳ್ಳುವ ಬಗೆಯನ್ನು ವಿವರಿಸಲಾಗಿದೆ.

ಅಧ್ಯಯನದ ವ್ಯಾಪ್ತಿ:

ಬಸವಾದಿ ಶಿವಶರಣರೆಲ್ಲರೂ ಭಕ್ತಿ-ಮುಕ್ತಿಗೆ ಮೊದಲ ಆದ್ಯತೆ ಕೊಟ್ಟರೆ, ಕಾಯಕ-ದಾಸೋಹಕ್ಕೆ ಎರಡನೆ ಸ್ಥಾನವನ್ನು ನೀಡಿದವರು ದೇವರ ದಾಸೀಮಯ್ಯ, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಾದರ ಚನ್ನಯ್ಯ, ಮಡಿವಾಳ ಮಾಚಿದೇವ, ಮೋಳಿಗೆ ಮಾರಯ್ಯ ಮುಂತಾದ ಅನೇಕ ವಚನಕಾರರು ಭಕ್ತಿ ಹಾಗೂ ಶರಣತ್ವದ ಶ್ರೇಷ್ಠತೆಯ ಕುರಿತು ವಚನಗಳಲ್ಲಿ ಚಿಂತಿಸುವಾಗ ಮಾಯೆಯ ಬಗೆಗೆ ಹೇಳುವುದರ ಜೊತೆಗೆ ತಮ್ಮ ವೃತ್ತಿ ಬದುಕನ್ನು-ಆಧ್ಯಾತ್ಮಿಕ ಬದಕನ್ನು ಮೇಳೈಸಿ ಅಭಿವ್ಯಕ್ತಿಸಿದ್ದಾರೆ.

ಸಾಮಾಜಿಕ, ಆರ್ಥಿಕ ಸಮಾನತೆಯನ್ನು ಬದುಕಿನ ಗುರಿಯಾಗಿಸಿಕೊಂಡ ಶರಣರಿಗೆ ಮುಕ್ತಿ ಸಾಧಿಸುವಲ್ಲಿ ನಿಜ ಶರಣನಾಗಬೇಕೆಂಬ ಹಪಹಪಿಗಳಿದ್ದವು. ನಿಜ ಶರಣನಾಗ ಹೊರಟವನಿಗೆ 'ಮಾಯೆ' ಎಂಬುದು ತೊಂದರೆಯಾಗಿ ಕಾಣುತ್ತದೆ. ಅಲ್ಲಮ ಮತ್ತು ಅಕ್ಕನ ದೃಷ್ಟಿಯಲ್ಲಿ ಈ 'ಮಾಯೆ' ನಿರ್ವಚಿತ ಗೊಂಡ ಬಗೆ ಇಲ್ಲಿ ಮುಖ್ಯ. ಅಲ್ಲಮನಪ್ರಭು ರಚಿಸಿರುವ ವಚನಗಳು ಸುಮಾರು ಹದಿನಾಲ್ಕು ನೂರ ರಷ್ಟಿದ್ದು, ಅವುಗಳಲ್ಲಿ 'ಮಾಯೆ' ಕುರಿತು ಉಲ್ಲೇಖಿತಗೊಂಡು ನಿರೂಪಿತಗೊಂಡ ೫೩ ವಚನಗಳನ್ನು ಮುಖ್ಯ ಆಕರವಾಗಿ

ಬಳಸಿಕೊಳ್ಳಲಾಗಿದೆ. ಪೂರಕ ಆಕರವಾಗಿ ಅಲ್ಲಮನ ಇತರ ವಚನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಕ್ಕಮಹಾದೇವಿ ರಚಿಸಿದ ಮೂರನೂರಾ ನಲವತ್ತೊಂಬತ್ತು ವಚನಗಳಲ್ಲಿ 'ಮಾಯೆ' ಕುರಿತು ಮಾತನಾಡಿದ ೨೦ ವಚನಗಳನ್ನು ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ. ಉಳಿದ ವಚನಗಳನ್ನು ಪೂರಕ ಆಕರವಾಗಿ ಬಳಸಲಾಗಿದೆ. ಇವರಿಬ್ಬರ ವಚನಗಳ ಅಧ್ಯಯನಕ್ಕೆ ಇತರ ವಚನಕಾರರ ಹಾಗೂ ವಚನಕಾರ್ತಿಯರ ವಚನಗಳನ್ನು ಪೂರಕವಾಗಿ ಅಧ್ಯಯನದ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ. ವಚನ ಸಾಹಿತ್ಯಕ್ಕಿಂತ ಪೂರ್ವದ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಮಾಯೆ ಕುರಿತು ನಡೆದ ಚರ್ಚೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಗು ಮಾಡಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ:

'ಮಾಯೆ' ಎಂಬ ಪರಿಭಾಷೆ ಭಾರತೀಯ ಧರ್ಮ–ತತ್ವ–ಸಿದ್ಧಾಂತದ ಮೇಲೆ ನಿರೂಪಿತಗೊಡ ಬಗೆಯನ್ನು ಸಾಂದರ್ಭಿಕವಾಗಿ ಗಮನಿಸಿಕೊಂಡು ಅಲ್ಲಮ ಮತ್ತು ಅಕ್ಕನ ವಚನಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಅಲ್ಲಮ ಮತ್ತು ಅಕ್ಕನ ಕುರಿತಾಗಿ ಈವರೆಗೆ ನಡೆದಿರುವ ಅಧ್ಯಯನಗಳನ್ನು, ಚರ್ಚೆಗಳನ್ನು ಅಧ್ಯಯನ ಸಂದರ್ಭದಲ್ಲಿ ಅವಲೋಕಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ವಿಮರ್ಶಾತ್ಮಕ ನೆಲೆಯ ವಿಶ್ಲೇಷಣಾತ್ಮಕ ವಿಧಾನವನ್ನನುಸರಿಸಿ ಕೈಗೊಳ್ಳಲಾಗಿದೆ. ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯನ್ನು ಅನುಲಕ್ಷಿಸಿ ಒಟ್ಟು ವಿಷಯವನ್ನು ಏಳು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ.

ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪದಲ್ಲಿ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ವಚನಗಳಲ್ಲಿ 'ಮಾಯೆ' ಎಂಬ ಅಂಶವನ್ನು ಅಧ್ಯಯನಕ್ಕೊಳಪಡಿಸಿ 'ಮಾಯೆ' ಪರಿಕಲ್ಪನೆ ಸ್ಥೂಲ ಪರಿಚಯವನ್ನು ಮಾಡಿದ್ದು, ಮಾಯೆಯನ್ನಾಧರಿಸಿ ಪ್ರಸ್ತುತ ಅಧ್ಯಯನದ ಗುರಿ ಹಾಗೂ ಉದ್ದೇಶವನ್ನು ಹೊಂದಲಾಗಿದೆ.

ಎರಡನೆಯ ಅಧ್ಯಾಯ 'ಈವರೆಗೆ ನಡೆದ ಅಧ್ಯಯನದ ಸಮೀಕ್ಷೆ'ಯಾಗಿದ್ದು ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ ಕುರಿತು ನಡೆದ ಸಂಶೋಧನ, ಸೃಜನ ಹಾಗೂ ವಿಮರ್ಶೆಯ ಕೃತಿಗಳನ್ನು ಅಧ್ಯಯನಕ್ಕೊಳಪಡಿಸಿ 'ಮಾಯೆ' ಎಂಬ ಅಂಶವನ್ನು ವಿಶ್ಲೇಷಣೆಗೊಳಪಡಿಸಿದೆ.

ಮೂರನೇಯ ಅಧ್ಯಾಯವು ಅಲ್ಲಮ ಮತ್ತು ಅಕ್ಕನಾದಿಯಾಗಿ ವಚನಕಾರರಗಿಂತಲೂ ಪೂರ್ವದ ದಾರ್ಶನಿಕ ಪರಂಪರೆಯಲ್ಲಿ ಮಾಯೆ ಅಭಿವ್ಯಕ್ತಗೊಂಡಿದ್ದನ್ನು ಗಮನಿಸಲಾಗಿದೆ. 'ಮಾಯೆ' ಎಂಬುದು ವಚನಕಾರರಿಗಿಂತ ಪೂರ್ವದಲ್ಲಿ ವೈವಿಧ್ಯಮಯ ನೆಲೆಗಳಲ್ಲಿ ಅರ್ಥೈಸಲ್ಪಟ್ಟಿದ್ದು, 'ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಮಾಯೆ ಪರಿಕಲ್ಪನೆ' ಎಂಬಲ್ಲಿ

ನಮ್ಮ ಪ್ರಾಚೀನತೆಯ ಪ್ರತಿನಿಧಿಯಾದ ವೇದ-ಆಗಮ-ಉಪನಿಷತ್‌ಗಳಲ್ಲಿ, ಭಗವದ್ಗೀತೆಯಲ್ಲಿ, ಮತ-ದರ್ಶನಗಳಲ್ಲಿ ಮಾಯೆ ಚಿತ್ರಿತಗೊಂಡ ಬಗೆಯನ್ನು ಸಮೀಕ್ಷಾತ್ಮಕವಾಗಿ ನಿರೂಪಿಸಲಾಗಿದೆ. ಮಾಯೆ ಎಂಬುದು ಪ್ರಕೃತಿ ಸ್ವರೂಪದಲ್ಲಿ ಅವಿದ್ಯೆ ನೆಲೆಯಲ್ಲಿನ ಆವರಣವಾಗಿ ತೋರುತ್ತದೆ. ವಚನಕಾರರನ್ನು ಕಾಡಿದ ಮಾಯೆ ಆಧ್ಯಾತ್ಮಿಕ ಪರಂಪರೆಯಲ್ಲಿ ಋಷಿ-ಮುನಿಗಳನ್ನು ಚಿಂತಕರನ್ನು, ತತ್ವಜ್ಞಾನಿಗಳನ್ನು ಸಿದ್ಧಪುರುಷರನ್ನು ಮಾಯೆ ಜ್ಞಾನವನ್ನು,ಅರಿವನ್ನು ಮುಚ್ಚಿದ ಮುಸುಕಾಗಿ ತೋರುತ್ತದೆ.

'ವಚನಕಾರರು-ಮಾಯೆ' ಎಂಬ ನಾಲ್ಕನೆಯ ಅಧ್ಯಾಯ ವಚನಕಾರರ ಪರಂಪರೆಯಲ್ಲಿ ಅಕ್ಕ ಮತ್ತು ಅಲ್ಲಮನನ್ನು ಹೊರತುಪಡಿಸಿ ಉಳಿದ ವಚನಕಾರರು ಹಾಗೂ ವಚನಕಾರ್ತಿಯರ ವಚನಗಳನ್ನು ಸಮೀಕ್ಷಾತ್ಮಕವಾಗಿ 'ಮಾಯೆ' ಕುರಿತು ಪ್ರಸ್ತಾಪಿಸಲಾಗಿದೆ. ವಚನಕಾರರೆಲ್ಲರೂ ಲೌಕಿಕದಲ್ಲಿದ್ದುಕೊಂಡೇ ಅಲೌಕಿಕ ಸಾಧನೆಯನ್ನು ಕೈಗೊಳ್ಳಲು ಹೊರಟವರು. ಹಾಗಾಗಿ ತಮ್ಮ ಸುತ್ತ ಹರಡಿಕೊಂಡಿರುವ ಲೌಕಿಕ ವಸ್ತುಗಳನ್ನು 'ಮಾಯೆ' ಎಂಬ ರೂಪದಲ್ಲಿ ನೋಡಿದ್ದಾರೆ. ಒಟ್ಟು ವಚನಕಾರರ 'ಮಾಯೆ' ಕುರಿತಾದ ವಚನಗಳನ್ನು ಅಧ್ಯಯನಕ್ಕೊಳಪಡಿಸಿ, ಅವುಗಳಲ್ಲಿರುವ ವಸ್ತುವನ್ನು ಸಮೀಕರಿಸಿಕೊಂಡು 'ಮಾಯೆ' ಎಂಬುದು ಸಂಸಾರವಾಗಿ, ಹೆಣ್ಣಾಗಿ, ಪಾಶವಾಗಿ, ಭ್ರಮೆ ಇತ್ಯಾದಿಯಾಗಿ ತೋರುವ ಬಗೆಯನ್ನು ಗಮನಿಸಲಾಗಿದೆ.

'ಅಲ್ಲಮನ ವಚನಗಳು: ಮಾಯೆ' ಎಂಬ ಐದನೇಯ ಅಧ್ಯಾಯ ಅಲ್ಲಮನ ವಚನಗಳ ಮೂಲಕ 'ಮಾಯೆ' ನಿರ್ವಚಿತಗೊಂಡ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ಆಧ್ಯಾತ್ಮಿಕ ದೃಷ್ಟಿಯಲ್ಲಿ ಉನ್ನತ ಸ್ಥಾನದಲ್ಲಿರುವ ಅಲ್ಲಮ 'ಮಾಯೆ' ಕುರಿತು ಮಾತನಾಡಿದ ರೀತಿ ಅಲೌಕಿಕ ನೆಲೆಯದ್ದಾದರೂ ಸಾಮಾಜಿಕ ವಲಯವನ್ನು ಮೀರಿಲ್ಲ. ಸಾಮಾಜಿಕ ಬದುಕು ಅಲ್ಲಮನ ಪಾಲಿಗೆ ಸರ್ವೇಕ್ಷಣಾತ್ಮಕವಾದದ್ದಾಗಿದೆ. ಸಮಾಜವನ್ನು ಸಾಮಾನ್ಯೀಕರಿಸುವ ಮೂಲಕ ಜೀವದ ಲೌಕಿಕದ ಸ್ವರೂಪವನ್ನು ಅಲೌಕಿಕದ ಸಾಧನಾ ಮಾರ್ಗದಲ್ಲಿ ಲೌಕಿಕ ತೊಡಕಾಗಿ ತೋರುವ ಪರಿಯನ್ನು ಹೇಳುತ್ತಲೇ ಅದರಿಂದ ಬಿಡಿಸಕೊಳ್ಳಬೇಕೆಂಬ ಸದಾಶಯವನ್ನು ವ್ಯಕ್ತಪಡಿಸುತ್ತಾನೆ. ಉಳಿದ ವಚನಕಾರರಗಿಂತ ಭಿನ್ನವಾಗಿ ನಿಂತ ಅಲ್ಲಮ ಸಂಸಾರದಿಂದ ಹೊರಗುಳಿದು ಯೋಗಿಕ ನೆಲೆಯಲ್ಲಿ ಸಾಧನೆಗೈದವನಾಗಿ ಕಂಡು ಬರುತ್ತಾನೆ. ಹೀಗಾಗಿ 'ಮಾಯೆ' ಕುರಿತಾದ ಅಲ್ಲಮನ ಆಲೋಚನೆಗಳು ಲೋಕದ ಜನರ ಲೌಕಿಕದ ಕ್ರಿಯಾ ಸ್ವರೂಪವನ್ನಾಧರಿಸಿ ರೂಪಗೊಂಡವುಗಳಾಗಿ ತೋರುತ್ತವೆ. ಶರಣರು ಸಂಸಾರವನ್ನು 'ಮಾಯೆ' ಎಂಬರ್ಥದಲ್ಲಿ ಹೇಳುವುದಕ್ಕೂ, ಅಲ್ಲಮ ಸಂಸಾರವನ್ನು 'ಮಾಯೆ' ಎಂಬರ್ಥದಲ್ಲಿ ಗ್ರಹಿಸುವುದಕ್ಕೂ ಸೂಕ್ಷ್ಮ ವ್ಯತ್ಯಾಸವಿದೆ. ಶರಣ ಮಾಯೆಯನ್ನು ಸಂಸಾರವೆಂದು ಹೇಳುವಾಗ ತಾನು ಅದರೊಳಗೊಂದಾಗಿ ನಿಂತು ಹೇಳುತ್ತಾನೆ. ಆದರೆ ಅಲ್ಲಮ ಮಾಯೆಯನ್ನು

ಸಂಸಾರವೆಂದು ಹೇಳುವಾಗ ಅದು ಲೋಕದ ಸಂಸಾರವಾಗಿ ಹೇಳುತ್ತಾನೆ. ಒಟ್ಟಾರೆ ಅಲ್ಲಮನ 'ಮಾಯೆ' ಶಿವಯೋಗ ಸಾಧನೆಯ ನೆಲೆಯಲ್ಲಿ ನಿಂತು ಸಾಮಾಜಿಕ ಅಂಶಗಳನ್ನು ವಚನದಲ್ಲಿ ನಿರೂಪಿಸದ ಬಗೆಯನ್ನು ವಿಶ್ಲೇಷಿಸಲಾಗಿದೆ.

'ಅಕ್ಕನ ವಚನಗಳು: ಮಾಯೆ' ಎಂಬ ಆರನೆಯ ಅಧ್ಯಾಯದಲ್ಲಿ ಅಕ್ಕಮಹಾದೇವಿ 'ಮಾಯೆ' ಕುರಿತು ಚಿಂತಿಸಿದ ನೆಲೆಗಳನ್ನು ಆಧರಿಸಿ ವಚನಗಳನ್ನು ಅಧ್ಯಯನಿಸಲಾಗಿದೆ. ಸಾಮಾಜಿಕ ಒತ್ತಡಗಳನ್ನು ಮೀರಬೇಕಾದ ಅನಿವಾರ್ಯ ಮನಸ್ಥಿತಿಯನ್ನು ಒಪ್ಪಿ ಅದಕ್ಕೆ ಸಿದ್ಧಳಾದ ಅಕ್ಕನ ದೃಷ್ಟಿಯಲ್ಲಿ 'ಮಾಯೆ' ವಿಭಿನ್ನವಾಗಿದೆ. ಸಾಮಾಜಿಕ ನಿಯಮಗಳನ್ನು ಮೀರಲು ಹೊರಟವಳನ್ನು ಕಾಡಿದ ಲೋಕಕ್ಕೆ ಅಧ್ಯಾತ್ಮವನ್ನು ಸಾಮಾಜಿಕ ನೆಲೆಗಟ್ಟಿಗೆ ತಂದು ಉತ್ತರಿಸಿದ್ದಾಳೆ. ಈ ಪ್ರಯತ್ನದಲ್ಲಿ 'ಮಾಯೆ' ನಿರ್ವಚಿತಗೊಂಡ ಬಗೆಯನ್ನು ವಿವೇಚಿಸಲಾಗಿದೆ. ಅಕ್ಕನ ದೃಷ್ಟಿಯಲ್ಲಿ ಮಾಯೆ ಎಂಬುದು ಹಸಿವಾಗಿ, ತೃಷೆಯಾಗಿ, ಕಾಯದ ಕಳವಳವಾಗಿ, ಭಾವದ ಭ್ರಮೆಯಾಗಿ ತೋರುತ್ತದೆ. 'ಅತ್ತೆ ಮಾಯೆ, ಮಾವ ಸಂಸಾರಿ' ಎಂಬ ಮಾತು ಅಕ್ಕ ಸಂಸಾರದ ಸಂಬಂಧಗಳನ್ನು ಕಳಚಿಕೊಳ್ಳುವ ಪ್ರಯತ್ನಕ್ಕೆ ನಾಂದಿಯಾಗಿ ತೋರುತ್ತದೆ. ಮಾಯೆ ಎಂಬುದು ಧಾಷ್ಟ್ಯತನದ ಪ್ರಭುತ್ವದ ನೆಲೆಯ ಅಭಿವ್ಯಕ್ತಿಯಾಗಿಯೂ ಅಕ್ಕನನ್ನು ಕಾಡಿದೆ. ಇದೆಲ್ಲಕ್ಕೂ ಮೀರಿ ಅಕ್ಕ ತನ್ನ ಸುತ್ತ ಇರುವ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಅದರ ಒತ್ತಡಗಳನ್ನು ಹಾಗೂ ಅದರ ಸೆಳೆತಗಳನ್ನು ಮಾಯೆ ಎಂಬ ನೆಲೆಯಲ್ಲಿ ಗ್ರಹಿಸಿದ್ದಾಳೆ.

'ಅಲ್ಲಮ ಮತ್ತು ಅಕ್ಕನ ವಚನಗಳು: ಮಾಯೆ' ಎಂಬ ಏಳನೆಯ ಅಧ್ಯಾಯದಲ್ಲಿ ಅಲ್ಲಮ ಮತ್ತು ಅಕ್ಕನ ಭಿನ್ನ ದೃಷ್ಟಿಕೋನಗಳನ್ನು ಹೋಲಿಸಿಕೊಂಡು ಮಾಯೆ ಎಂಬ ಭಾವದ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಅಲ್ಲಮ ಮತ್ತು ಅಕ್ಕ ಇಬ್ಬರು ಸಾಮಾಜಿಕವಾಗಿ ಭಿನ್ನ ಸಂದರ್ಭದ ಪ್ರತಿನಿಧಿಗಳು. ಅವರ ಆಲೋಚನೆಗಳಲ್ಲಿನ ವೈವಿಧ್ಯತೆಯನ್ನು ಅಕ್ಕ ಮತ್ತು ಅಲ್ಲಮ ವಚನಗಳಲ್ಲಿ ತೌಲನಿಕವಾಗಿ ಚರ್ಚಿಸಲಾಗಿದೆ.

ಫಲಿತಗಳಲ್ಲಿ ಅಧ್ಯಯನದ ಮೂಲಕ ಕಂಡುಕೊಂಡ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿಯ ದೃಷ್ಟಿ ಕೋನದಲ್ಲಿ ಮಾಯೆ ಎಂಬ ಅಂಶ ನಿರ್ವಚಿತಗೊಂಡ ಸಂದರ್ಭಗಳನ್ನು ಸೂಕ್ಷ್ಮವಾಗಿ ಗಮನಿಸಿ, 'ಮಾಯೆ' ಎಂಬುದು ವಚನಕಾರರಗಿಂತ ಪೂರ್ವದಿಂದಲೂ, ವಚನಕಾರರ ಸಂದರ್ಭದಲ್ಲೂ ಹಾಗೂ ಪ್ರಸ್ತುತ ಸಾಮಾಜಿಕ ಜೀವನದಲ್ಲೂ ಮಾಯೆ ಎಂಬುದು ಒಂದು ಭಾವ ಸ್ಥಿತಿಯಾಗಿ ಕಾಡುವುದಾಗಿದೆ. ಅಲ್ಲಮ ಮತ್ತು ಅಕ್ಕನ ವಚನಗಳನ್ನು ಮುಖ್ಯವಾಗಿಸಿಕೊಂಡು ಮೂಡಿದ ಹೊಳವುಗಳನ್ನು ಕ್ರೋಢಿಕರಿಸಲಾಗಿದೆ. ಪ್ರಸ್ತುತ ಅಧ್ಯನಯಕ್ಕೆ ಪೂರಕವಾಗಿ ಮುಂದೆ ಮಾಡಬಹುದಾದ ಅಧ್ಯಯನಗಳ ಸಾಧ್ಯತೆಯನ್ನು ಸೂಚಿಸಲಾಗಿದೆ. ಅನುಬಂಧದಲ್ಲಿ ಆಕರ ಗ್ರಂಥಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿ ಕೊಡಲಾಗಿದೆ.

ಅಧ್ಯಾಯ : ೨

ಈ ವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ-೨

ಈ ವರೆಗಿನ ಅಧ್ಯಯನಗಳ ಸಮೀಕ್ಷೆ

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಚನ ಸಾಹಿತ್ಯ ತನ್ನ ಹಿಂದಿನ ಸಾಹಿತ್ಯದ ಆಶಯ ಗಳಿಗಿಂತ ಭಿನ್ನವಾಗಿ ಅಭಿವ್ಯಕ್ತಗೊಂಡ ಸಾಹಿತ್ಯ ಪ್ರಕಾರವಾಗಿದೆ. ವಚನಗಳಲ್ಲಿ ವಚನಕಾರರ ನಿತ್ಯ ಬದುಕಿನ ಜೊತೆ, ದೇವರು ಭಕ್ತ-ಸಾಧನೆ ಇತ್ಯಾದಿ ಕ್ರಿಯಾ ರೂಪಗಳು ಎಡೆಪಡೆದುಕೊಂಡು, ಲೌಕಿಕದಲ್ಲಿದ್ದುಕೊಂಡು ಶರಣನಾಗಿ ಭಕ್ತಿಯ ಮೂಲಕ ಮುಕ್ತಿ ಸಾಧಿಸಬೇಕಾದರೆ ಉಂಟಾಗುವ ತೊಡರು 'ಮಾಯೆ' ಎಂದು ಪರಿಭಾವಿಸಿತು. ಪ್ರತಿಯೊಬ್ಬ ಶರಣನು ತನ್ನ ಲೌಕಿಕ ಬದುಕಿನಲ್ಲಿ ನೋಡುವ, ಗ್ರಹಿಸುವ, ಅನುಭವಿಸುವ ಅನುಭವಗಳನ್ನು ವಚನದ ವಸ್ತುವಾಗಿರಿಸಿದರು. ತಾನು ದಿನ ನಿತ್ಯದ ಬದುಕಿನಲ್ಲಿ ಭಕ್ತಿ-ಪೂಜೆ ಮಾಡಲು ಅಡ್ಡಿಯಾಗುವ, ತೊಂದರೆಮಾಡುವ ವ್ಯಕ್ತಿ-ವಸ್ತುಗಳೆಲ್ಲವನ್ನು 'ಮಾಯೆ' ಎಂಬ ರೂಪಕ್ಕೆ ಆರೋಪಿಸುತ್ತಾ ಬಂದರು. ಇದರಿಂದಾಗಿ ಮಾಯೆ ಸ್ವರೂಪ ವೈವಿಧ್ಯಗೊಳ್ಳುತ್ತಾ ಬಂದಿತು. ಬಸವಣ್ಣನಾದಿಯಾಗಿ ಹಲವು ವಚನಕಾರರ ಮಧ್ಯದಲ್ಲಿ ಭಿನ್ನವಾಗಿ ಕಾಣುವ ವ್ಯಕ್ತಿ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ. ಪುರುಷ ವಚನಕಾರರಲ್ಲಿ ಪರಿಪೂರ್ಣ ಜ್ಞಾನಿ ಎನಿಸಿಕೊಂಡು ಶರಣ ಸಮುದಾಯಕ್ಕೆ ಜಂಗಮಿಯಾಗಿ ಜ್ಞಾನವನ್ನು ನೀಡುವ ಮೂಲಕ ಅವರಲ್ಲಿನ ಅಜ್ಞಾನದ ತೆರೆ ಸರಿಸಿದವನು. ಅಂದಿನ ಸಾಮಾಜಿಕ ಬದುಕಿನಿಂದ ಸಿಡಿದು ನಿಂತು, ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ಸಾಹಸ ಮಾಡಿದ ವ್ಯಕ್ತಿತ್ವ ಅಕ್ಕಮಹಾದೇವಿಯದು. ಅಕ್ಕ ಮಾತ್ರ ತನ್ನನ್ನು ಕೇವಲ ಹೆಣ್ಣಾಗಿ ನೋಡುವ ಸಮಾಜಕ್ಕೆ ತನ್ನ ವಚನಗಳ ಮೂಲಕ ದಿಟ್ಟವಾಗಿ ಪ್ರತಿಕ್ರಿಯಿಸಿದ್ದಾಳೆ.

ಇಂತಹ ವಿಶಿಷ್ಟ ವ್ಯಕಿತ್ವಗಳ ಕುರಿತು ಈವರೆಗೆ ಹಲವು ನೆಲೆಯಲ್ಲಿ ಚರ್ಚೆ, ಅಧ್ಯಯನ ವಿಮರ್ಶೆಗಳು ನಡೆದಿವೆ. ಅಲ್ಲಮ ಮತ್ತು ಅಕ್ಕನ ವ್ಯಕ್ತಿತ್ವ ಮತ್ತು ಸಾಹಿತ್ಯದ ಕುರಿತು ಸಾಹಿತ್ಯಿಕ ಕೃತಿ, ಲೇಖನಗಳು ಪ್ರಕಟಗೊಂಡಿದ್ದು, ಅವುಗಳ ಕುರಿತು ಅಧ್ಯಯನ-ಸಮೀಕ್ಷಾತ್ಮಕ ನೆಲೆಯಲ್ಲಿ ಎಲ್ಲ ಕೃತಿಗಳ ಅಂತ:ಸಾರವನ್ನು ಗ್ರಹಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈವರೆಗೆ ಅಕ್ಕ ಮತ್ತು ಅಲ್ಲಮನ ಕುರಿತು ರೂಪಗೊಂಡ ಸಾಹಿತ್ಯವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರು ಬರೆದ 'ಅಲ್ಲಮ ಪ್ರಭುದೇವ' ಕೃತಿಯಲ್ಲಿ ಅಲ್ಲಮ ಜೀವನ ಕಥಾ ಚಿತ್ರವಿದ್ದು, ವ್ಯಕ್ತಿತ್ವವನ್ನು ಉನ್ನತೀಕರಿಸುವಲ್ಲಿ ಸಾಂದರ್ಭಿಕವಾಗಿ ಬಳಸಿದ್ದು, ವಚನಗಳನ್ನು ಶಿವಯೋಗದಿಂದ ಪೂರ್ಣ ಯೋಗವನ್ನು ಸಾಧಿಸಿದ್ದನ್ನು ವಚನಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

'ಹೆಣ್ಣು, ಮಣ್ಣು, ಹೊನ್ನು, ಮಾಯೆಯೆಂಬರು ಅದಾವುದು ಮಾಯೆಯೆಲ್ಲ'

ಏಕೆಂದರೆ ಮಾಯೆ ಎನ್ನುವುದು ವಸ್ತುಗಳಲ್ಲಿಲ್ಲ ಅದನ್ನು ನೋಡುವ ನಮ್ಮ ಮನಸ್ಸಿನಲ್ಲಿದೆ. ನಮ್ಮ ಮನಸ್ಸಿನ ದೃಷ್ಟಿ ಬದಲಾದರೆ ಹೆಣ್ಣು, ಹೊನ್ನು, ಮಣ್ಣುಗಳಾವವು ಮಾಯೆಯಾಗಿ ಉಳಿಯುವುದಿಲ್ಲ ಎಂದು ಹೊಸ ಪ್ರಮೇಯವನ್ನು ಮಂಡಿಸುತ್ತಾರೆ.

'ಎಣ್ಣೆ ಬೇರೆ ಬತ್ತಿ ಬೇರೆ ಎರಡೂ ಕೂಡಿ ಸೊಡರಾಯಿತ್ತು' ಎಂಬ ವಚನದಲ್ಲಿ ದೇಹ ಮತ್ತು ಅದರ ಕ್ರಿಯೆಗಳ ರಹಸ್ಯವನ್ನು ಅಲ್ಲಮಪ್ರಭು ಜಿಜ್ಞಾಸೆಗೆ ಒಳಪಡಿಸುತ್ತಾನೆ. ಕಾಯ ಇದ್ದರೂ ಕಾಯಗುಣ ಅಳಿಯಬೇಕು. ಅಲ್ಲಿರುವ ಪರಸ್ಪರ ವಿರೋಧ ಶಕ್ತಿಗಳಲ್ಲಿ ಒಂದು ಸಾಮರಸ್ಯ ಕಂಡುಕೊಂಡು ಅವನ್ನು ಉದಾತ್ತೀಕರಿಸಬೇಕು. ಇದನ್ನು ಅರವಿಂದರು Transformation ಎಂದು ಕರೆದರೆ, ಅಂಗ ಗುಣಗಳೆಲ್ಲಾ ಲಿಂಗಗುಣಗಳಾಗಬೇಕೆಂದು ಶರಣರು ಹೇಳುತ್ತಾರೆ. ಲೋಕಗುರುವಾಗಿ ಅಲ್ಲಮನ ಆಲೋಚನೆಗಳನ್ನು ವಚನಗಳ ಮುಖಾಂತರ ಅರ್ಥೈಯಿಸಿದ್ದಾರೆ. ನಿರ್ಣಯವನರಿಯದ ಮನವೇ ದುಗುಡವನಾಹಾರಾ ಗೊಂಡೆಯಲ್ಲಾ' ಎಂಬ ಮಾತು ಬಂಧನದ ಮೂಲವನ್ನು ಅರ್ಥವತ್ತಾಗಿ ಹೇಳುತ್ತಿದೆ. ಒಮ್ಮೆ ಮಾಯಾ ಪ್ರವಾಹದಲ್ಲಿ ಬಿದ್ದರೆ ಅದರ ಪರಂಪರೆಯ ಅಲೆಗಳು ಮತ್ತೆ ಮತ್ತೆ ಬಂದು ಬಡಿಯುತ್ತವೆ. ಆಶೆ, ರೋಷ, ದ್ವೇಷ, ಮೋಹ ಮೊದಲಾದವು ಬೆಂಬಿಡದೆ ಕಾಡುತ್ತವೆ. ಮನದ ಮುಂದಣ ಆಶೆಯೆ "ಮಾಯೆ" ಯಾಗಿರುವುದನ್ನು ಜಿಜ್ಞಾಸೆಗೆ ಒಳಪಡಿಸುತ್ತಾರೆ.

ಅಲ್ಲಮನ ಬೆಡಗಿನ ವಚನ ಒಂದರಲ್ಲಿ 'ರಕ್ಕಸಿಗಿಬ್ಬರು ಮಕ್ಕಳು ತೊಟ್ಟಿಲ ಮೇಲೈವರು' ಎನ್ನುವಲ್ಲಿ ಅವಿದ್ಯಾಮಾಯೆಯನ್ನು ರಕ್ಕಸಿ ಎಂದು ನಿರ್ದೇಶಿಸಿದ್ದಾರೆ. ಅವಳ ಸಂಕಲ್ಪದಿಂದ ಜೀವ ಮತ್ತು ಪ್ರಾಣ ಎಂಬ ಇಬ್ಬರು ಹುಟ್ಟುತ್ತಾರೆ. ತನುವೇ ತೊಟ್ಟಿಲಾಗಿ ತನುವಿನ ಪಂಚಭೂತಗಳು ಮಾಯೆಯ ಮಕ್ಕಳಾಗಿದ್ದಾರೆ. ಹೀಗೆ ಬೆಡಗಿನ ರೂಪಕಗಳ ಮೂಲಕ 'ಮಾಯೆ'ಯ ವಿವಿಧ ಸ್ವರೂಪಗಳನ್ನು ಎತ್ತಿ ತೋರುತ್ತಾನೆ. ಜೀವ ಅಜ್ಞಾನವನ್ನು ಕಳೆದುಕೊಳ್ಳ ಬೇಕೆಂಬ ಧ್ವನಿ ಬೆಡಗಿನಲ್ಲಿದೆ. ಮತ್ತೊಂದೆಡೆ 'ಮಾಮರದೊಳಗೊಂದು ಮಾಯದ ಮಂಜು ಕವಿದರೆ' ಎಂಬ ಬೆಡಗಿನ ವಚನದಲ್ಲಿ ವಿವೇಕವೆಂಬುದೇ ಮಾವಿನಮರ ಅದರ ಮೇಲೆ ಅಜ್ಞಾನವೆಂಬ ಮಂಜು ಕವಿಯಲು ಮಾವಿನ ಮಿಡಿಗಳು ಉದುರದೇ ಅದನ್ನು ಉಂಡು ಅಜ್ಞಾನದಿಂದ ಪುಷ್ಟಿಗೊಳ್ಳುತ್ತವೆ. ಇದರಿಂದ ಸಂಸಾರ ಬಂಧನ ಕಾಡುತ್ತದೆ ಎಂಬುದನ್ನು ತಿಳಿದು ಆ ಹಣ್ಣುಗಳನ್ನು ಮುಟ್ಟದಿದ್ದರೆ ಆ ಫಲನಾಶವಾಗಿ ಮಾಯೆ ಹರಿಯುತ್ತದೆ ಎಂದು ವಿವರಿಸಿದ್ದಾರೆ. ಅಲ್ಲಮನ ಬದುಕು ಹಾಗೂ ವಚನಗಳ ಸಾರಾರ್ಥವನ್ನು ವಿವರಿಸುವಾಗ ಸಾಂದರ್ಭಿಕವಾಗಿ 'ಮಾಯೆ' ಕುರಿತಾಗಿ ಚರ್ಚಿಸಿದ್ದಾರೆ.

ಡಾ.ಎಸ್.ಎಂ.ವೃಷಭೇಂದ್ರಸ್ವಾಮಿ ಅವರ ಸಂಶೋಧನಾ ಕೃತಿ 'ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ' ಗ್ರಂಥದಲ್ಲಿ 'ಸಂಸ್ಕೃತಿಯಲ್ಲಿ ಅಲ್ಲಮಪ್ರಭುದೇವರ ಕುರುಹುಗಳು'

ಎಂಬ ಅಧ್ಯಾಯದಲ್ಲಿ ಅಲ್ಲಮ ಹೆಸರಿನ ಕುರಿತು ಚರ್ಚಿಸಲಾಗಿದೆ. ಅಲ್ಲಮನ ದೇವಸ್ಥಾನಗಳ ನಿರ್ಮಾಣ, ಜೀರ್ಣೋದ್ಧಾರ ಮಾಡಿದ ಕುರಿತ ವಿವರಣೆಗಳನ್ನು ಕೊಟ್ಟಿದ್ದಾರೆ. ವಚನಗಳ ಮೂಲಕ ಅಲ್ಲಮನ ವ್ಯಕ್ತಿತ್ವ ಅನಾವರಣಗೊಂಡಿದ್ದು, ಪುರಾಣ ಕಾವ್ಯಗಳಲ್ಲಿ ಅಲ್ಲಮ ಎಂಬ ವ್ಯಕ್ತಿತ್ವ ಚಿತ್ರಿತಗೊಂಡ ಬಗೆಯನ್ನು ನಿರೂಪಿಸಿದ್ದಾರೆ. ಶೂನ್ಯ ಸಂಪಾದನೆಯಲ್ಲಿ ಅಲ್ಲಮನ ವ್ಯಕ್ತಿತ್ವ ನಿರೂಪಿತಗೊಂಡ ಬಗೆಯನ್ನು ಚರ್ಚಿಸಿದ್ದಾರೆ.

"ವಚನಗಳಲ್ಲಿ ಸ್ವಯಂಭು" ಎಂಬ ಅಧ್ಯಾಯದಲ್ಲಿ ವಚನಗಳನ್ನು ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಸ್ವಯಂಭು, ವಿಚಾರದಭಿವ್ಯಕ್ತಿ, ವ್ಯಕ್ತಿಗತ ಅಂಶಗಳ ಅಭಿವ್ಯಕ್ತಿ ಎಂಬ ಅಂಶಗಳನ್ನು ವಿವರಿಸುವಾಗ 'ಗುಹೇಶ್ವರ ಲಿಂಗವಿಲ್ಲದಂದು ನಿರ್ಮಾಯನೆಂಬ ಗಣೇಶ್ವರನು' ಸೃಷ್ಟಿಗೆ ಮಾಯೆ ಕವಿದಾಗ, ಮಾಯಾಚ್ಛಾಧಿತನಾಗುವ ಜೀವ ಮುನ್ನ ನಿರ್ಮಾಯ ಸ್ಥಿತಿಯಲ್ಲಿತ್ತು ಎಂಬ ವಿವರಣೆ ಅಲ್ಲಮನ ತನ್ನಾತ್ಮ ಸ್ವಯಂಕಥನವಾಗಿರುವುದನ್ನು ವಿವರಿಸಲಾಗಿದೆ.

ಮಾಯಾ ಬಂಧನದಲ್ಲಿ ಅಲ್ಲಮ, ಒಳತೋಟಿಯ ಕೋಟಲೆ ಬೆಳಕು ಕಂಡ ಬಾಳು. ಪೂಜೆಗೆ ಬಾರದ ಲಿಂಗ, ಆಗಮವಿಲ್ಲದ ದೀಕ್ಷೆ, ವೇದ– ಆಗಮ ಕಾಣದ ಗುಹೇಶ್ವರ, ದ್ವೈತಾದ್ವೈತ...... ಹುಸಿ. ಜೀವನ ವಿಸ್ತಾರ ಕಂಡ ಸಮದರ್ಶಿ, ವಸ್ತುಪ್ರತಿರೂಪ ನಿರ್ಮಾಣ ಸ್ವೋಪಜ್ಞ ಪ್ರತಿಭೆ, ದಾರ್ಶನಿಕ ಕವಿ–ಕಲೆಗಾರ, ದಿವ್ಯ ಭವ್ಯಕಾವ್ಯ ಕಲಾಕಾರ, ಪ್ರತಿಭೆಯ ಕಿರಣ ಸ್ಫುರಣ, 'ಮಾಯೆ' ಯೆಲ್ಲ ಭ್ರಾಂತಿ, ಬೆಡಗಿನ ಬೆಡಗುಗಾರ ಪ್ರಭು, ವಿಶ್ವಸೃಷ್ಟಿ ವಿಲಾಸ– ಮಹಾಲಿಂಗ ಪೂಜೆ, ಮಹಾಬೆಳಗು ಮಹಾಪೂಜೆ, ದಿವ್ಯಾನುಭೂತಿ– ದಿವ್ಯಾನುಭಾವ ಎಂಬ ಶೀರ್ಷಿಕೆಗಳ ಅಡಿಯಲ್ಲಿ ವಚನಗಳನ್ನು ಆಯ್ದು ವಿವರಿಸಿದ್ದಾರೆ.

'ಮಾಯೆಂಯೆಲ್ಲ ಭ್ರಾಂತಿ' ಎಂಬ ವಿಚಾರಕ್ಕೆ ಪೂರಕವಾಗಿ ಅಲ್ಲಮನ ಆಲೋಚನೆಗಳನ್ನು ಚರ್ಚೆ ಮಾಡಿದ್ದಾರೆ. ಬ್ರಹ್ಮ, ವಿಷ್ಣು, ರುದ್ರರಂಥ ಘನ ಮಹಿಮರನ್ನು ನುಂಗಿದ ಮಾಯೆ ತಾ ಘನವೆಂದೆಡೆ ತನ್ನ ನುಂಗಿದ ಮಾಯೆ ಕುರಿತು ಸಂಶಯ ಹಾಗೂ ಆಶ್ಚರ್ಯ ತಳೆದಿದ್ದಾರೆ. 'ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ' 'ಜೀವ ತಾಮಸದ ಮಾಯದ ಬಲೆಯ ಭ್ರಾಂತಿಗೆ ಸೋಲುವ ಶರೀರ' ಮುಂತಾದ ಹೇಳಿಕೆಗಳಲ್ಲಿ ದ್ವೈತಾದ್ವೈತ ತತ್ವಗಳು ಹೇಳುವ ಮಾಯೆಯ ಅಸ್ತಿತ್ವವನ್ನು ನಿರೂಪಿಸಿದ್ದಾರೆ.

ಓ.ಎನ್.ಲಿಂಗಣ್ಣಯ್ಯನವರು ಬರೆದ 'ಆತ್ಮಜ್ಞಾನಿ ಅಲ್ಲಮಪ್ರಭು ಎಂಬ ಕೃತಿಯಲ್ಲಿ ೧೧ ಅಧ್ಯಾಯಗಳಲ್ಲಿ ಅಲ್ಲಮನ ಜನನ, ಜೀವನ, ಆಧ್ಯಾತ್ಮಿಕ ಸಾಧನೆ, ಪರ್ಯಟನೆ, ವಿಚಾರ ಚಿಂತನ–ಮಂಥನ ಎಲ್ಲವನ್ನೂ ಗಮನಿಸಲಾಗಿದೆ. ಪ್ರಭುವಿನ ಜೊತೆ ಜೊತೆಯಲ್ಲಿ ಮಾಯಾದೇವಿಯ ಜೀವನವನ್ನು ಚಿತ್ರಿಸಿದ್ದಾರೆ. ಅಲ್ಲಮ ಸಂಸಾರವನ್ನು ಕುರಿತು ಮಾತಾಡುವಾಗ 'ಆರಕ್ಕೆಯ ಸಿರಿಗೆ ಆರಕ್ಕೆಯ ಚಿಂತಿಸುವರು' ಎಂಬ ವಚನದ ಕುರಿತು

ಸಂಸಾರದಲ್ಲಿ ಮುಳುಗಿದ ಮನುಜ ತನ್ನತನವನ್ನು ಮರೆತು ಮತ್ತೊಬ್ಬರ ಸಿರಿತನ-ಬಡತನ ಗಳಿಗೆ ಚಿಂತಿಸುವಂತೆ ಮಾಡುತ್ತದೆ ಎಂಬುದೇ ಮಾಯೆಂಯಾಗಿದೆ. 'ಹಳ್ಳದೊಳಗೊಂದು ಹುಳ್ಳಿ ಬರುತ್ತಿರಲು' ಎಂಬಿತ್ಯಾದಿ ವಚನಗಳನ್ನು ಆಯ್ದು ವಿವರಿಸಿದ್ದಾರೆ.

ವೀರಪ್ಪ ಸಂಗಪ್ಪ ಶೆಟ್ಟರ ಅವರು ಬರೆದ 'ಅಲ್ಲಮಪ್ರಭು' ಕೃತಿ ಮೂಡಲಪಾಯದ ದೊಡ್ಡಾಟವಾಗಿದೆ ಪ್ರಭುಲಿಂಗಲೀಲೆ, ಪ್ರಭುದೇವರ ರಗಳೆಯಲ್ಲಿರುವಂತೆ ಪಾತ್ರ-ವಸ್ತು-ಸನ್ನಿವೇಶಗಳನ್ನು ವಿನ್ಯಾಸಗೊಳಿಸಲಾಗಿದೆ. ಅಲ್ಲಮ ಮತ್ತು ಮಾಯಾದೇವಿಯ ಸಂವಾದದಲ್ಲಿ ಸಾಂದರ್ಭಿಕವಾಗಿ ವಚನಗಳನ್ನು ಸಂಭಾಷಣೆಗಳಲ್ಲಿ ಬಳಸಲಾಗಿದೆ. ಅಲ್ಲಮನನ್ನು ಒಲಿಸಿಕೊಳ್ಳಲು ಮಾಯಾದೇವಿಯ ಪ್ರಯತ್ನ ನಿರೂಪಿತಗೊಂಡಿದೆ. ಇಲ್ಲಿ ಮಾಯೆ ಸಾಧಕನನ್ನು ಕಾಡುವ ಬೇಡುವ ಹೆಣ್ಣಾಗಿ ತೋರುತ್ತಾಳೆ.

ಡಾ.ಅಮರೇಶ ನುಗಡೋಣಿ ಅವರು ಸಂಪಾದಿಸಿದ 'ಅಲ್ಲಮಪ್ರಭು ವಚನಗಳು: ಸಾಂಸ್ಕೃತಿಕ ಮುಖಾ ಮುಖಿ' ಕೃತಿಯಲ್ಲಿ ಅಲ್ಲಮ ಪ್ರಭುವಿನ ಕುರಿತು ಹದಿನಾಲ್ಕು ವಿಮರ್ಶಾ ಲೇಖನಗಳನ್ನು ಸಂಕಲಿಸ ಲಾಗಿದೆ. ಅಲ್ಲಮಪ್ರಭು, ಮುಕ್ತಾಯಕ್ಕ-ಅಕ್ಕಮಹಾದೇವಿಯವರ ಜೊತೆಗಿನ ತಾತ್ವಿಕ ಸಂಘರ್ಷ ಎಂಬ ಲೇಖನದಲ್ಲಿ 'ಇಲ್ಲದ ಶಂಕೆಯನುಂಟೆಂದು ಭಾವಿಸಿದೆಡೆ ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿಪ್ಪುದು. ಎಂಬ ವಚನದಲ್ಲಿ ಅಲ್ಲಮ ಕ್ರಿಯಾ ಸೂತಕವನ್ನು ಸಮೀಕರಣಗೊಳಿಸುವುದು ತನು-ಮನಗಳ ವೈರುಧ್ಯಗಳಲ್ಲಿ ಇರುವ ಮತ್ತು ಇಲ್ಲದಿರುವ ಸ್ವರೂಪವನ್ನು ರೂಪ ಮತ್ತು ಮಾಯೆಗೆ ಆರೋಪಿಸಿದ್ದಾರೆ. ಮುಕ್ತಾಯಕ್ಕನ ಈ ದ್ವಂದ್ವವನ್ನು ಗುರುವಿನ ರೂಪದ ಮೂಲಕ ಅಲ್ಲಮ ಅರ್ಥೈಸುತ್ತಾನೆ. "ಕಾಯವ ಸತಿಯೆಂದು ಹೇಸಿ ಕಳೆದೆ ವಾಯದ ಮನ ಮಾಯೆ ಎಂದು ಹೇಸಿ ಬಿಟ್ಟೆ..." ಎಂಬಲ್ಲಿ ಅಲ್ಲಮ ಎಲ್ಲ ರೀತಿಯ ರೂಪಿನ ಸಂಬಂಧ ಗಳನ್ನು ಕಳಚಿನಿಂತವನು ಎಂಬ ಭಾವವಿದೆ. ದೇಹೇಂದ್ರಿಯವೆಂಬ ಜಾತಿ ಸೂತಕವನ್ನು ಮೀರಿ ಮನವೆಂಬ ಚಂಚಲತ್ವದ ಸ್ಥಿತಿಯನ್ನು 'ಮಾಯೆ' ಎನ್ನಲಾಗಿದೆ. ಹೀಗಾಗಿ ದೇಹದ ಗುಣವನ್ನು ವಿವರಿಸಿದನಾದರೆ ಮನಶುದ್ಧನಾಗಿ, ಮನದ ಗುಣ ವಿವರಿಸಿದರೆ ಇಂದ್ರೀಯ ಶುದ್ಧನಾಗಿ ತೋರುವ ಅಲ್ಲಮ ಆ ನೆಲೆಯಿಂದಲೇ ಅಕ್ಕನ ಕುರುಹನ್ನು ಇನ್ನಿಲ್ಲದಂತೆ ಪರೀಕ್ಷಿಸುತ್ತಾನೆ. ತನು-ಮನ ಶುದ್ಧನಾಗುವಲ್ಲಿ ಮಾಯಾ ಮುಕ್ತನಾಗಬೇಕು. ತನು-ಮನ ಶುದ್ಧವಾಗುವ ಪ್ರಕ್ರಿಯೆಯನ್ನು ವಿವರಿಸುತ್ತಾರೆ.

ಅಲ್ಲಮ 'ಭವಿ'ತನವೆಂಬುದು ಭಕ್ತನಾದ ಕೂಡಲೇ ಹೋಗುವುದಿಲ್ಲ. ಅದರ ಜೊತೆಯಲ್ಲಿಯೇ ಬದುಕಿ ಅದನ್ನು ಮೀರಬೇಕು. ಭವಿತನವೆಂಬುದು ಎಲ್ಲರಲ್ಲಿರುವ ಗುಣ. ಅವನ ಪ್ರಕಾರ ಭವಿ ಮತ್ತು ಭಕ್ತ ಎಂಬ ಭಿನ್ನತೆಗಳಿಲ್ಲ ಎಂಬುದಕ್ಕೆ 'ಎಣ್ಣೆ ಬೇರೆ ಬತ್ತಿ ಬೇರೆ ಎರಡು ಕೂಡಿ ಸೊಡರಾಯಿತ್ತು' ಎಂಬ ವಚನವನ್ನು ಉದಾಹರಿಸಿದ್ದಾರೆ.

ಭವಿತನ ಮೂಡಲು ಮಾಯೆಯು ಕಾರಣವಾಗುತ್ತದೆ. ಮಾಯೆಯನ್ನು ತನ್ನ ಜೊತೆಯಲ್ಲಿರಿಸಿಕೊಂಡು ಅದರ ಸೆಳೆತದಿಂದ ಮುಕ್ತನಾಗಬೇಕಾಗುತ್ತದೆ. ಭವಿ-ಭಕ್ತ ಎಂಬುದರ ಸಂಬಂಧವನ್ನು ಇಲ್ಲಿ ಗುರುತಿಸಿದ್ದಾರೆ.

ಡಾ. ಡಿ.ಆರ್. ನಾಗರಾಜ ಅವರ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಕೃತಿಯಲ್ಲಿ ಅಲ್ಲಮನನ್ನು ಮುಖ್ಯವಾಗಿಸಿಕೊಂಡು ಅದಕ್ಕೆ ಪೂರಕವಾಗಿ ಶೈವ ದರ್ಶನಗಳ ಚಾರಿತ್ರಿಕ ಸಮೀಕ್ಷೆ ಮಾಡಿದ್ದಾರೆ. ಶೈವ ಸಾಹಿತ್ಯ ಮೀಮಾಂಸೆಯ ನೆಲೆಗಳನ್ನು ಅಲ್ಲಮನ ಲೋಕದ ಮೂಲಕ ವೀಕ್ಷಿಸಿ ಹೊಸ ವಚನ ಮೀಮಾಂಸೆ ಯೆಡೆಗೆ ದೃಷ್ಟಿ ಹೊರಳಿಸಿದ್ದಾರೆ. "ದೇವರೆಲ್ಲರ ಹೊಡೆ ತಂದು ದೇವಿಯರೊಳಗೆ ಕೂಡಿತ್ತು ಮಾಯೆ ಹರಾಹರಾ ಮಾಯೆ ಇದ್ದೆಡೆಯ ನೋಡಾ" ಈ ವಚನದ ಮೂಲಕ ಲೋಕದ ದೇವ ದೇವತೆಗಳ ವ್ಯಾಪಕತೆ ಅರಿವಿಗೆ ಬರುತ್ತದೆ. ರುದ್ರಾಣಿ, ಬಲವಿಕರಣಿ, ಬಲಪ್ರಮಥಿನಿ, ಭೂತದಮನಿ, ಮನೋನ್ಮಣಿ, ಈಶ್ವರ, ಸದಾಶಿವ, ಶಿವ ಇತ್ಯಾದಿ ದೇವಿ ದೇವರುಗಳು ಕಾಣಸಿಗುತ್ತಾರೆ. ಈ ದಾಂಪತ್ಯ ಜೋಡಿಯನ್ನು ಅಲ್ಲಮ 'ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ' ಎನ್ನುತ್ತಾನೆ. ಮಾಯೆ ಎಂಬುದನ್ನು ವಾಸ್ತವದ ಒಂದು ವಿಲಾಸ ಎಂದಷ್ಟೆ ಕಾಣದೆ, ಆಧ್ಯಾತ್ಮಿಕ ಮಾರ್ಗದೊಳಗೂ ಮಾಯೆಯ ಆಟ ಇರಬಲ್ಲದು ಎಂಬ ತಿಳುವಳಿಕೆ ಈ ಚರ್ಚೆಯಲ್ಲಿ ಇರುವುದನ್ನು ಲಕ್ಷಿಸಿದ್ದಾರೆ. ಹೊಸ ಮೀಮಾಸೆ ಮಂಡಿಸುವಾಗ ಸಾಂದರ್ಭಿಕವಾಗಿ ವಿಶ್ವಯಂತ್ರಕ್ಕೆ ವಿರೋಧವಾಗಿ ಇಷ್ಟದೈವವು ರೂಪಗೊಂಡಿದ್ದ ದೈವದ ಶೃಂಗಾರೀಕರಣಕ್ಕೂ ದಾರಿಯಾಯಿತು. ದೈವ ಮತ್ತು ಶೃಂಗಾರದ ನಡುವಿನ ಸಂಬಂಧದ ಮೂರ್ತ ಮತ್ತು ಅಮೂರ್ತದ ಆಯಾಮಗಳನ್ನು ಅಲ್ಲಮ ಪರೀಕ್ಷೆಗೊಳಪಡಿಸುತ್ತಾನೆ. 'ನಿರ್ಣಯವನರಿಯದ ಮನವೇ ದುಗುಡವನಾಹಾರ ಗೊಂಡೆಯಲ್ಲಾ' ಎಂಬಲ್ಲಿ ಅಲ್ಲಮ ಶೃಂಗಾರ ಪ್ರಣೀತ ಭಕ್ತಿಮಾರ್ಗದ ಒಂದು ಅನಿವಾರ್ಯ ಅಥವಾ ಮೂಲಸ್ಥಿತಿಯನ್ನು ವಿಡಂಬಿಸುತ್ತಾನೆ. ಶೃಂಗಾರಕ್ಕೆ ದುಗುಡ ಅಥವಾ ವಿರಹ ಅನಿವಾರ್ಯ ಸ್ಥಿತಿಗಳು. ದುಗುಡದ ಭಿತ್ತಿ ಇರದಿದ್ದರೆ ಐಕ್ಯತೆಯ ಚಿತ್ರವೇ ಇಲ್ಲ. ವಿರಹದ ಭಯವಿರದಿದ್ದರೆ ಸಂಯೋಗಕ್ಕೆ ಸಂಭ್ರಮವೇ ಇಲ್ಲ ಎಂದು ಹೇಳುವಲ್ಲಿ ಮಾಯೆ ಇರದಿದ್ದರೆ ಶಿವ ಸಾಕ್ಷಾತ್ಕಾರಕ್ಕೆ ಅರ್ಥವೇ ಇಲ್ಲಾ ಎಂಬ ಭಾವ ಮೂಡುತ್ತದೆ. ಅಲ್ಲಮನ ದೃಷ್ಟಿಯಲ್ಲಿ ಕಾಯದ ಸ್ವರೂಪ ನಿರೂಪಿತಗೊಂಡ ವಚನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕಾಯವೆಂಬ ಮಹಾಕದಳಿಯ ಕೇಂದ್ರ ಪ್ರತಿಮೆಯನ್ನು ಅಲ್ಲಮ ಉದ್ದಕ್ಕೂ ವಿಸ್ತರಿಸುತ್ತಾ ಹೋಗುತ್ತಾನೆ. 'ಅರಗಿನ ದೇಗುಲದಲ್ಲಿ ಉರಿಯ ಲಿಂಗವ ಕಂಡೆ.....' ಎಂಬ ವಚನದ ಮೂಲಕ ಶರೀರದ ಶೃಂಗಾರ-ಆಧ್ಯಾತ್ಮಿಕ ಸಾಧ್ಯತೆಗೆ ಎಡೆ ಇರುವ ದೇಹವೇ ಅರಗಿನ ದೇಗುಲ. ಅರಗಿನ ದೇಗುಲವನ್ನು ಉರಿಯ ಲಿಂಗ ಭಸ್ಮ ಮಾಡಿತು. ಅರಗಿಗೆ ವಾಸ್ತವದಲ್ಲಿ ಉರಿಯನ್ನು ಧರಿಸುವ ಶಕ್ತಿ ಇಲ್ಲ. ಆದರೆ

ಅರಗಿಗೆ ಉರಿಯನ್ನು ಧರಿಸುವ ಶಕ್ತಿ ಇದೆ ಎಂಬ ನಂಬಿಕೆಯೆ ಮಾಯೆ. ಇದು ಉತ್ತರಾಪಥದ ದರ್ಶನಾದಿಗಳನ್ನು ಸುತ್ತಿ ಮುತ್ತಿಕೊಂಡಿದೆ. ಮಾಯೆ ಎಂದರೆ ಇಲ್ಲಿ ದರ್ಶನ, ವೈಚಾರಿಕ ಆಕೃತಿ ಎಂಬರ್ಥದಲ್ಲಿ ವಿಶ್ಲೇಷಿಸಿದ್ದಾರೆ.

ಮತ್ತೊಂದೆಡೆ, 'ಕಾಡುಗಿಚ್ಚೆದ್ದರೆ ಅಡವಿಯೇ ಗುರಿ...... ನಿಮ್ಮ ಮಾಯದ ಹೊಡೆಗಿಚ್ಚಿಂಗೆ ನಾನು ಗುರಿಯಲ್ಲ ಕೇಳಾ' ಈ ವಚನ ನಾಟಕೀಯ ತಿರುವನ್ನು ಪಡೆಯುವದು ಕಡೆಯ ಸಾಲಿನಲ್ಲಿ. ಕಿಚ್ಚು ಅಥವಾ ಅಗ್ನಿ ಎನ್ನುವದು ಪ್ರಭುವಿನ ಲೋಕದಲ್ಲಿ ಭೌತಿಕ ಸ್ಥಿತಿಯೂ ಹೌದು, ಭಾವಸ್ಥಿತಿಯೂ ಹೌದು. ಇಡಿಯಾಗಿ ವಚನದಲ್ಲಿ ಪ್ರಭು ಒಂದು ಪ್ರತಿಮೆಯನ್ನು ಇನ್ನೊಂದಕ್ಕೆ ತರ್ಕದ ಮೂಲಕ ಹೆಣೆಯದೆ ಸಾದೃಶ್ಯದ ಮೂಲಕವೇ ಅವುಗಳ ಅಂತರ್ ಸಂಬಂಧವನ್ನು ಪ್ರತಿಪಾದಿಸುತ್ತಾನೆ. ಭೌತಿಕ ಸ್ವರೂಪದ ಕಾಲಾಗ್ನಿಯಾಗಲೀ, ಭಾವಸ್ವರೂಪದ ಕೋಪಾಗ್ನಿಯಾಗಲಿ ಎರಡೂಕೂಡಾ ಸುಡುವ ಕ್ರಿಯೆಗೆ ಬದ್ಧವಾಗಿರುತ್ತವೆ. ಭೌತಿಕ ಹಾಗೂ ಭಾವದ ಸ್ವರೂಪವನ್ನು ಅರಿಯಲಾಗದ ಸ್ಥಿತಿಯು ಮಾಯೆಯಾಗಿದೆ. ತಾನು ಮಾತ್ರ ಇದರಿಂದ ಮುಕ್ತ ನಾಗಿರುವೆನೆಂಬ ಭಾವ ಅಲ್ಲಮನಲ್ಲಿ ಕಾಣುತ್ತದೆ. ಅಲ್ಲಮನ ವಚನಗಳ ಪ್ರಾಯೋಗಿಕ ವಿಮರ್ಶೆ ಮಾಡುವಲ್ಲಿ 'ಮಾಯದ ಕೈಯಲಿ ಓಲೆ ಕಂಠವ ಕೊಟ್ಟಡೆ ಲಗುನ ವಿಗುನವ ಬರೆಯಿತ್ತು ನೋಡಾ' ಜೀವನದ ಸಾಮಾನ್ಯ ಲಕ್ಷಣಗಳನ್ನು ಅಲ್ಲಮ ನೀಡಿದ್ದಾನೆ. ಅಲ್ಲಮ ಅವುಗಳೊಡನೆ ಪ್ರೀತಿಯಿಂದ ವ್ಯಗ್ರತೆಯಿಂದ ಆಟವಾಡುತ್ತಾನೆ. ಜೀವನು ಮಾಯೆಯನ್ನು ದೂರೀಕರಿಸಲಾಗದ ಹಾಗೂ ದೂರೀಕರಿಸಲು ಬಾರದ ಸ್ಥಿತಿಯನ್ನು ವಿವರಿಸಿದ್ದಾರೆ. ಇಡೀ ಕೃತಿಯಲ್ಲಿ ಅಲ್ಲಮನ ಮಾಯೆಯನ್ನು ವೈವಿಧ್ಯಾತ್ಮಕ ಸ್ತರದಲ್ಲಿ ನಿಂತು ವಿಶ್ಲೇಷಿಸಿದ್ದಾರೆ.

ಡಾ.ವಿಜಯಾದೇವಿ ಅವರು ಬರೆದ 'ಪ್ರಭುದೇವರ ಅನುಭಾವ' ಕೃತಿಯಲ್ಲಿ ನಿದ್ರೆ, ಸಂಸಾರ ಪಂಚೇದ್ರೀಯ, ಆಸೆ, ದೇಹ-ದೇಗುಲ ಎಂಬ ಅಂಶಗಳ ಕುರಿತು ಅಲ್ಲಮನ ವಚನಗಳನ್ನು ವಿಶ್ಲೇಷಿಸಿದ್ದಾರೆ. ಸಂಸಾರ ಎಂಬ ಪರಿಕಲ್ಪನೆಯ ಚರ್ಚೆಯಲ್ಲಿ ಅಂಗವೆಂಬ ಸಂಸಾರದೊಳಗೆ ಸವೆದವರೆಲ್ಲರೂ ಶಿವನರಿವರೆ? ಅಂಗ ಸಂಸಾರವೆಂಬುದು ಕಾಮಾದಿ ಅರಿಷಡ್ವರ್ಗ, ಕರ್ಮೇಂದ್ರಿಯಗಳು, ಪಂಚೇಂದ್ರಿಯಗಳಾಗಿ ಸಪ್ತ ಧಾತುಗಳ ಮೊದಲಾದ ಅಜ್ಞಾನದ ಸಾರಸಂಪತ್ತು. ಇವುಗಳೊಳಗೆ ಜೀವನದ ಆಯುಷ್ಯವೆಲ್ಲ ಸವೆಸಿದವರಿಗೆ ಶಿವಜ್ಞಾನ ಮೂಡಲಾರದು ಎಂದು ವಿವರಿಸಿದ್ದಾರೆ. ಜೊತೆಗೆ 'ವಾರಿಬಲಿದು ವಾರಿಕಲ್ಲಾದಂತೆ' ಎಂಬ ವಚನವನ್ನು ಸಂಸಾರದಲ್ಲಿ ಮಾಯೆಯ ಅಭಿವ್ಯಕ್ತಿರೂಪವಾದ ಮರವೆಯ ಸ್ವರೂಪವನ್ನು ವಿವರಿಸಲು ಬಳಸಿದ್ದಾರೆ. ಭಗವದ್ ಸೃಷ್ಟಿಯಾದ ಜಗತ್ತಲ್ಲಿ ಜೀವನನ್ನು ಮರವೆ ಆವರಿಸಿ ಬಿಡುತ್ತದೆ. ಜೀವ ತಾಮಸದ ಬಲೆಯ ಭ್ರಾಂತಿಗೆ ಸಿಲುಕಿ ಒದ್ದಾಡುವ ಮನುಜನ ಸ್ಥಿತಿ ಮಾಯೆಯ ಕಾರಣದಿಂದಲೇ ಎಂದು ವಿವರಿಸಿದ್ದಾರೆ.

ಪಂಚೇದ್ರೀಯ ಕುರಿತು ಹೇಳುವಲ್ಲಿ 'ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು' ಎಂಬ ವಚನದಲ್ಲಿ ಜೀವಿಯ ಮೇಲೆ ಪಂಚೇಂದ್ರಿಯಗಳ ಪ್ರಭಾವವನ್ನು ಗುರುತಿಸಲಾಗಿದೆ. ಇಂದ್ರೀಯಗಳು ಮನುಷ್ಯನ ಹತೋಟಿಯಲ್ಲಿರಬೇಕು ಮನುಷ್ಯ ಇಂದ್ರೀಯಗಳ ಹತೋಟಿಗೆ ಸಿಕ್ಕಾಗ ಆಗುವ ಪರಿಣಾಮ ವಚನದಲ್ಲಿ ನಿರೂಪಿತಗೊಂಡಿದೆ. ಮಾಯೆ ಪಂಚೇಂದ್ರಿಯಗಳ ಕ್ರಿಯಾರೂಪದಲ್ಲಿದೆ ಎಂದಿದ್ದಾರೆ. 'ಬ್ರಹ್ಮ ಪಾಶ ವಿಷ್ಣು ಮಾಯೆ' ಎಂಬಲ್ಲಿ ಜೀವ ಪರಮಾತ್ಮನ ಕೈಯಲ್ಲಿ ಬೇಟೆಗೊಳಗಾಗುತ್ತವೆ. ಪರಮಾತ್ಮ ಬೀಸಿದ ಮಾಯೆ ಎಂಬ ಬಲೆ ಎಂತಹುದೆಂದರೆ ಹುಟ್ಟು-ಸಾವುಗಳ ನಡುವಿನ ಬದುಕಿನ ಹೋರಾಟದ ಬಲೆ ಯಾಗಿದೆ. ಆಸೆ ಜೀವರಾಶಿಯ ಸಹಜ ಪ್ರವೃತ್ತಿಯಾಗಿದೆ. ಹೀಗೆ ಪಂಚೇಂದ್ರಿಯಗಳು, ಆಶೆ, ಪಾಶ ಇತ್ಯಾದಿ ಮಾಯೆ ಎಂದು ವಿಶ್ಲೇಷಿಸಿದ್ದಾರೆ.

ಬಸವರಾಜ ಪುರಾಣಿಕ ಅವರು ಬರೆದ 'ಅನುಪಮಚರಿತ ಅಲ್ಲಮಪ್ರಭುದೇವ' ಕೃತಿಯಲ್ಲಿ ಅಲ್ಲಮನ ಸಾಧಕ ಬದುಕನ್ನು ಅವನ ವಚನಗಳ ಮೂಲಕ ನಿರೂಪಿಸಿದ್ದಾರೆ. 'ಯಾರೀತ' ಎಂಬಲ್ಲಿ ನಾನು ಎಂಬ ಭಾವ ಮೂಡುವುದು. ಈ 'ನಾನು' ತಾನಾಗದೆ ಅಲ್ಲಮ ಎಲ್ಲರಲ್ಲಿಯೂ ನಾನತ್ವವನ್ನು ಇಲ್ಲವಾಗಿಸಿದವನು. ಮಾಯಾ ಮಲೀನತೆ ಮನದಿಂದ ದೂರವಾದಾಗ ನಿನ್ನ ನೀ ತಿಳಿದು ನೋಡಿದರೆ ಸಾಕು. ತನ್ನ ತಾನರಿತರೆ ಆಡುವ ನುಡಿಯೆಲ್ಲ ತತ್ವವಾಗಿ ಪರಿಣಮಿಸುತ್ತದೆ. ಇಲ್ಲವಾದರೆ ಮಾಯೆ ಜೀವ ತನ್ನ ಇರುವನ್ನು ಮರೆಯುವಂತೆ ಮಾಡುತ್ತದೆ. ದೇವಾನುದೇವತೆಗಳೆಲ್ಲ ಮಾಯೆ ಸೆಳೆತಕ್ಕೆ ಒಳಗಾಗುವಾಗ 'ಬ್ರಹ್ಮ ವಿಷ್ಣುಗಳನ್ನು ಮಾಯೆ ತೊತ್ತಳದುಳಿವಂದು' ಎಂಬ ವಚನದಲ್ಲಿ ಇಹ-ಪರ ಲೋಕಗಳೆರಡನ್ನೂ ಮಾಯೆ ಎಂಬ ಶಕ್ತಿ ವ್ಯಾಪಿಸಿದೆ. ಇದನ್ನರಿತ ಅಲ್ಲಮ ತಾನು ಎಲ್ಲವನ್ನು ಮೀರಿ ಮಾಯಾಕೋಲಾಹಲನಾಗಿದ್ದೆ ಎಂಬಲ್ಲಿ ಅಲ್ಲಮ ಲೋಕದ ಮಾಯೆಗೆ ಒಳಗಾಗದವನಾಗಿ ತೋರುತ್ತಾನೆ.

'ಅಲ್ಲಮಪ್ರಭು ಸಂಪ್ರದಾಯದ ಸಲ್ಲಿಲಿತ ಸನ್ಮಾರ್ಗ' ಎಂಬ ಅಧ್ಯಾಯದಲ್ಲಿ ದೇಹ, ಜೀವ ಎಂಬ ಭಾವ ಅಳಿಯುವಿಕೆ ನಾನು, ನೀನು ಎಂಬ ಭಿನ್ನತೆ ಕಳೆದು ಆತ್ಮದ ಪರಿವರ್ತನೆಯಿಂದ ಆರಂಭಗೊಂಡ ಸಾಧನೆ ಹಂತ-ಹಂತವಾಗಿ ಬೆಳೆಯುತ್ತಾ ಕಾಯದ ಜೀವದ ಹೊಲಿಗೆಯ ಅಳಿವ ಭೇದವನ್ನು ಕಂಡು ಕೊಳ್ಳುವ ಹಂತಕ್ಕೆ ಬರುತ್ತದೆ ಎಂಬುದನ್ನು 'ದೇಹ ಭಾವವಳಿದಲ್ಲದೆ ಜೀವ ಭಾವವಳಿಯದು' ವಚನದ ಮೂಲಕ ಮಾಯಾ ಮುಕ್ತನಾಗುವ ಸ್ಥಿತಿಯನ್ನು ಹೇಳಿದ್ದಾರೆ. ಮಾಯೆಯಾಗಿ ಕಾಡುತ್ತಿರುವ ಆಸೆಯ ಕುರಿತು ಹೇಳುತ್ತಾ 'ಮನದ ಮುಂದಣ ಆಸೆ ಮಾಯೆ' ಆಗಿ ತೋರುತ್ತದೆ. ನೀನೆಂಬುದು ಅಜ್ಞಾನ ನಾನೆಂಬುದು ಮಾಯಾಧೀನ ಎಂಬಲ್ಲಿ ನೀನು-ನಾನು ಎಂಬ ಭೇದವಳಿದು ಲಿಂಗಾಗ ಸಾಮರಸ್ಯ ಮೂಡುತ್ತದೆ. ಇಲ್ಲಿ ನಾನು ಎಂಬ ಅಹಂ ಮೂಡಿದರೆ ಅದೇ

ಮಾಯೆಯಾಗಿ ತೋರುತ್ತದೆ. ಅಲ್ಲಮನ ದೃಷ್ಟಿಯಲ್ಲಿ ಕ್ರಿಯಾ ಜ್ಞಾನಗಳ ಸಂಬಂಧವನ್ನು ಹೇಳುವಲ್ಲಿ ಮಾಯೆ ಎಂಬುದು ತೊಡರಾಗಿದೆ ಎಂಬುದು 'ಕಾಯದ ಕಳವಳ ಗೆಲಿದಡೇನೋ ಮಾಯದ ತಲೆಯನರಿಯದನ್ನಕ್ಕರ? ಎಂಬ ವಚನದಲ್ಲಿ ನಿರೂಪಿತವಾಗಿದೆ. ಕಂಗಳ ಸೂತಕ ಹಿಂಗಿ, ಮನದ ಸೂತಕ ಹರಿದು, ಭಾವದ ಭ್ರಮೆ ಅಡಗಿದಾಗ ಸಾಧನೆ ಮುಂದುವರೆದು ಜೀವ ತಾನು ತಾನಾಗುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಶಿವಯೋಗ ಸಾಧನೆಯ ಕುರಿತು ಹೇಳುತ್ತಾ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವಮಂತ್ರ ಹಾಗೂ ಶಿವಾರ್ಚನೆ ಎಂಬ ಅಂಶಗಳನ್ನೊಳಗೊಂಡು ಶಿವಯೋಗ ಸಾಧನೆ ಮಾಡುವುದಾಗಿದೆ. ಹೊಸ ಯೋಗಮಾರ್ಗವನ್ನು ಹೇಳುತ್ತಾ 'ಐದಕಟ್ಟಿ ಐದನೆಗಪಿ ಮನಪವನ ಧ್ಯಾನ ಭಾವದೃಢದಿಂದ ಧ್ಯಾನದಿ ನೋಡಿ......' ಎಂಬ ವಚನದ ಮೂಲಕ ಒಂದು ಅನುಕ್ರಮದಲ್ಲಿ ಯೋಗ ಸಾಧನೆ ಮಾಡುವ ವಿಧಾನವನ್ನು ಅಭಿವ್ಯಕ್ತಗೊಳಿಸುತ್ತದೆ. ಅಲ್ಲಮ ಆಯ್ದ ವಚನಗಳು' ಎಂಬ ಶೀರ್ಷಿಕೆಯಡಿಯಲ್ಲಿ ಜಗತ್ತು, ಸಂಸಾರ, ಆಸೆ, ಪಂಚೇಂದ್ರಿಯಗಳು, ನಿದ್ರೆ, ಅಜ್ಞಾನ, ಗುರುಶಿಷ್ಯ, ಜ್ಞಾನರತ್ನ, ಶರಣ, ಮಾತು ಸಾಧನೆಯ ಪಥದಲ್ಲಿ ಇತ್ಯಾದಿ ಉಪಮಾನಗಳ ಅಡಿಯಲ್ಲಿ ವಚನಗಳನ್ನು ಸಂಗ್ರಹಿಸಿದ್ದಾರೆ. ಅಲ್ಲಮನ ಬೆಡಗಿನ ವಚನಗಳನ್ನು ವಿಶ್ಲೇಷಿಸುವಾಗ ಅರಗಿನ ದೇಗುಲದಲ್ಲಿ ಒಂದು ಉರಿಯುವಲಿಂಗವ ಕಂಡೆ, ಮಾಮರದೊಳಗೊಂದು ಮಾಯದ ಮಂಜು ಕವಿದರೆ, ರಕ್ಕಸಿಗಿಬ್ಬರು ಮಕ್ಕಳು ತೊಟ್ಟಿಲ ಮೇಲೈವರು ಎಂಬ ವಚನಗಳನ್ನು ಆಯ್ದುಕೊಂಡು ಮಾಯೆಯ ಸ್ವರೂಪವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಚರ್ಚಿಸಿದ್ದಾರೆ.

ಡಾ.ವಿಜಯಕುಮಾರ ಮಹಾನುಭಾವಿಗಳು ಬರೆದ 'ಪ್ರಭುದೇವರ ವಚನಗಳ ವ್ಯಾಖ್ಯಾನ' ಕೃತಿಯಲ್ಲಿ ಅಲ್ಲಮನ ೨೫೮ ವಚನಗಳನ್ನು ಶಬ್ದ-ಅರ್ಥಗಳ ಹಿನ್ನೆಲೆಯಲ್ಲಿ ಆಧ್ಯಾತ್ಮಿಕವಾಗಿ ವಿಶ್ಲೇಷಿಸಿದ್ದಾರೆ. ಅಲ್ಲಮನ ವಚನಗಳನ್ನು ಸಾಮಾಜಿಕ ರೂಪಕಗಳ ಮೂಲಕ ಹೇಳುತ್ತಾ ಪಂಚೇಂದ್ರಿಯಗಳ ಕ್ರಿಯಾಸಂದರ್ಭಗಳು ಮಾಯೆಯಾಗಿ ತೋರುವ ಪರಿಯನ್ನು ಚರ್ಚಿಸಿದ್ದಾರೆ.

ಡಾ.ಇಮ್ಮಡಿ ಶಿವಬಸವಸ್ವಾಮಿಗಳು ರಚಿಸಿರುವ 'ಅಲ್ಲಮ ಪ್ರಭುದೇವರ ಟೀಕಿನ ವಚನಗಳು' ಕೃತಿಯಲ್ಲಿ ಆಧ್ಯಾತ್ಮಿಕ ನೆಲೆಯಿಂದ ವಚನಗಳ ತಾತ್ವಿಕತೆಯನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಇದರಲ್ಲಿ ೭೯೭ ವಚನಗಳನ್ನು ಗಮನಿಸಿಕೊಂಡು ತಾತ್ಪರ್ಯ, ಅರ್ಥವನ್ನೂ ಬರೆದಿದ್ದಾರೆ. ಮಾಯೆ ಎಂಬುದು ಆಧ್ಯಾತ್ಮಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತ ಮನುಜನು ಲೌಕಿಕ ವ್ಯಾಪಾರದಲ್ಲಿ ಪ್ರತಿಕ್ರಿಯಿಸುವ ಸಂದರ್ಭಗಳಲ್ಲಿ ಮಾಯೆ ತೋರುತ್ತದೆ. ಜೀವದ ಅಂತರಂಗ-ಬಹಿರಂಗವನ್ನು ಭಿನ್ನಗೊಳಿಸಿ ತೋರುವಂತೆ ಮಾಯೆ ಮಾಡುತ್ತದೆ ಎಂದಿದ್ದಾರೆ.

ಶ್ರೀ ಸಿದ್ದೇಶ್ವರ ಸ್ವಾಮಿಗಳು ಬರೆದಿರುವ 'ಅಲ್ಲಮ ಪ್ರಭುದೇವರ ವಚನ-ನಿರ್ವಚನ' ಎಂಬ ಕೃತಿ ಯಲ್ಲಿ ಅಲ್ಲಮನ ೬೯ಳ ವಚನಗಳನ್ನು ಅರ್ಥಪೂರ್ಣವಾಗಿ ಭಾವ-ಭಾಷ್ಯದ ನೆಲೆಯಲ್ಲಿ ವಿವರಿಸಿದ್ದಾರೆ. ಈ ಕೃತಿಯಲ್ಲಿ ಅಲ್ಲಮನ ಪ್ರಮುಖವೆನಿಸುವ ವಚನಗಳನ್ನು ಆಯ್ದುಕೊಂಡು ಸಂಪೂರ್ಣ ಆಧ್ಯಾತ್ಮಿಕ ನೆಲೆಯಿಂದ ವಿಶ್ಲೇಷಿಸಿದ್ದಾರೆ. ಜೀವ ಶಿವನಿಂದ ಬೇರೆಗೊಂಡು ಭವಕ್ಕೆ ಬಂದಾಗ ಈ ಮಾಯೆ ಜೀವನಲ್ಲಿ ಅಜ್ಞಾನವನ್ನು ತುಂಬಿ ಅವನರಿವನ್ನು, ಕುರುಹನ್ನು ಇಲ್ಲವಾಗಿಸುತ್ತದೆ. ಆದರೆ 'ಐದ ಕಟ್ಟಿ ಐದ ನೆಗಪಿ' ಕೊಂಡ ಆಹಾರವ ರಸದ ಕಟ್ಟಿ' 'ಕರ್ಮ ಗಡಣ ಹಿಂಗಿದವಿದು' 'ಮುನಿಯದಿರಿ, ಮುನಿಯದಿರಿ ನಿಮಗೊಂದು ಯುಕ್ತಿಯ ಹೇಳುವೆನು' ಎಂಬಂತಹ ವಚನಗಳ ನಿರೂಪಣೆ ದೊರೆಯದು.

ಎಸ್.ಕೆ.ಕೊಪ್ಪ ಅವರು ಸಂಪಾದಿಸಿದ 'ಅಲ್ಲಮಪ್ರಭು-ಚಿಂತನ' ಕೃತಿ ಅಲ್ಲಮನ ಬದುಕಿನ ಹಲವು ಮಗ್ಗಲುಗಳನ್ನು ಚಿತ್ರಿಸಲಾಗಿದೆ. ಈ ಕೃತಿಯಲ್ಲಿ ಡಾ.ಪ್ರಭುಶಂಕರ ಅವರು 'ಅಲ್ಲಮ ಪ್ರಭುವಿನ ಸಾಧನೆ ಮತ್ತು ವ್ಯಕ್ತಿತ್ವ' ಎಂಬ ಲೇಖನದಲ್ಲಿ ಅಲ್ಲಮನ ಸಾಧಕ ಬದುಕನ್ನು ವಚನಗಳ ಮೂಲಕ ನಿರೂಪಿಸಿದ್ದಾರೆ. 'ಕರ್ಮದ ಗಡಣ ಹಿಂಗಿದವಿಂದು ಪಾಪದ ಬಲೆ ಬಳಸಿ ಹೋದವು' ಎಂದು ಗುರುಕೃಪೆಯಿಂದ ಅದ್ವೈತದ ಜ್ಞಾನ ಲಬ್ಧವಾದ ಸ್ಥಿತಿಯಲ್ಲಿ ಅಲ್ಲಮ ಹೇಳಿರಬಹುದಾಗಿದೆ. ಸಂಸಾರ ಸೆಳೆತದಿಂದ ಬಿಡಿಸಿಕೊಂಡು ವೈರಾಗ್ಯ ತಾಳಿ ಮಾಯೆಯನ್ನು ಮೀರಿ ನಿಲ್ಲಬಲ್ಲವನಾಗಿ ಅಲ್ಲಮ ತೋರುತ್ತಾನೆ. ಸಾಮಾನ್ಯವಾಗಿ ಗುರುವಿನ ಕೃಪೆಗೆ ಒಳಗಾಗದ ಜೀವನು ಮಾಯಾವೃತನಾಗುತ್ತಾನೆ. ಮಾಯೆ ಎಂಬುದು ಅಜ್ಞಾನದ ಸ್ಥಿತಿಯಾಗಿದೆ ಎಂದು ವಿಶ್ಲೇಷಿಸಿದ್ದಾರೆ.

ಪ್ರೊ.ಸು.ಜ.ನಾ ಅವರು ಬರೆದಿರುವ 'ಅಲ್ಲಮನ ವಚನಗಳ ಕಾವ್ಯ ಸೌಂದರ್ಯ'ಎಂಬ ಲೇಖನದಲ್ಲಿ ವಚನಗಳಲ್ಲಿನ ಕಾವ್ಯ ಗುಣವನ್ನು ಗುರುತಿಸಿದ್ದಾರೆ. ಅನುಭಾವಗೊಂಡು ಅನುಭಾವಗೊಳಿಸಿದ ಮಧುರಾನು ಭವಗಳನ್ನು, ಸತಿ ಪತಿಭಾವವನ್ನು ಕೆಲವು ವಚನಗಳಲ್ಲಿ ತೋರಿದ್ದಾರೆ. 'ಸೆರಗನು ಹಿಡಿದು ಸೀರೆಯ ಹರಿದ ಎಂಬ ವಚನದಲ್ಲಿ ಮಾಯೆ ಒಂದು ರೂಪಕವಾಗಿ ಬಂದು ಲೌಕಿಕದ ಸೆಳೆತದಿಂದ ಮುಕ್ತವಾಗುವ ಸ್ಥಿತಿಯನ್ನು ಹೇಳುತ್ತಾರೆ.

ಬಸವರಾಜ ಪುರಾಣಿಕ ಅವರ 'ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗ' ಎಂಬ ಲೇಖನ ದಲ್ಲಿ ಒಂದು ದೇಹದಂಡನೆಯಾದರೆ ಇನ್ನೊಂದು ದೇಹಾರಾಧನೆ ಎಂಬ ಎರಡು ಮಾರ್ಗದ ಮಧ್ಯದ ನಿಲುವನ್ನು ಅಲ್ಲಮನ ಮಾರ್ಗವೆಂದು ಗುರುತಿಸಲಾಗಿದೆ. ಅರಿವು-ಮರವೆಯ ಕುರಿತು ಹೇಳುವಲ್ಲಿ ಮನಸ್ಸಿನ ಸ್ಥಿತಿಯನ್ನು ವಿವರಿಸುವಾಗ 'ನಿರ್ಣಯವನರಿಯದ ಮನವೆ ದುಗುಡವನಾಹಾರಗೊಂಡೆಯಲ್ಲಾ' ಎಂಬ ವಚನದ ಮೂಲಕ ಮಾಯೆಯ ಸೃಷ್ಟಿಯಾದ ಮರೆವೆಗೆ ಬಲಿಯಾದ ಮನುಷ್ಯನ ಮನಸ್ಸಿಗೆ

ದುಗುಡ ಬಿಟ್ಟರೆ ಇನ್ನೇನು ಘಟಿಸುತ್ತದೆ. ಆಸೆ, ರೋಷ, ಮೋಹ ಮನುಷ್ಯನ ಜನ್ಮವನ್ನು ಜಾಳಿಸುತ್ತವೆ. ಮಾಯಾವಿಲಾಸ ಅಟ್ಟಹಾಸವನ್ನು ಹೇಳುವಲ್ಲಿ ಬ್ರಹ್ಮ ಪಾಶ, ವಿಷ್ಣು ಮಾಯೆ ಎಂಬ ಬಲೆಯ ಬೀಸಿ ಶಿವನಾಡಿದ ಮಾಯಾ ಬೇಟೆಯಾಗಿ ತೋರುತ್ತದೆ. ಮಾಯೆಯ ದಟ್ಟ ಪ್ರಭಾವದಿಂದಾಗಿ ಮಾನವ ಎದೆಗೆಡಬೇಕಿಲ್ಲ. ನಿರಾಶೆಯಿಂದ ಕಿಂಕುರ್ವಾಣ ಎಂದು ಪರಿತಪಿಸಬೇಕಿಲ್ಲ. ಅಜ್ಞಾನ ಮೂಡಲು ಕಾರಣವಾದ ಮಾಯೆಯೆಂಬ ಮರವೆಯನ್ನು ಗುರುತಿಸಿ ನಿವಾರಿಸಬೇಕು. ಪಂಚೇಂದ್ರೀಯಗಳ ಜೊತೆಗೆ ಹುಟ್ಟಿದ ಮನವನ್ನು ಪಡೆದುಕೊಂಡ ಮನುಷ್ಯ ಗುಹೇಶ್ವರ ಅರಿಯಲಾರ ಎಂಬುದಕ್ಕೆ 'ಕರಿಯ ಸ್ಪರ್ಶನೇಂದ್ರಿಯದಿಂದ ಭಂದನವಡೆದಳಯಿತ್ತು' ಎಂಬ ವಚನವನ್ನು ಉದಾಹರಣೆ ನೀಡಿದ್ದಾರೆ. ಮನದಿಂದ ಮಾಯಾ ಮಲೀನವನ್ನು ಹಾಗೂ ಕಳೆಯಿಂದ ಕಾಯದ ದುಂದುಗವನ್ನು ಅಗಲಿಸುವಲ್ಲಿ 'ಕಾಯಗುಣವಳಿದು ಮಾಯಾಜ್ಯೋತಿ ವಾಯವ ಕೂಡುವ ಮುನ್ನ ಭಕ್ತಿಯ ಮಾಡಬೇಕು ಎಂಬಲ್ಲಿ ಜೀವ ಕಾಯದ ಸೆಳೆತದಿಂದ ಮುಕ್ತನಾಗಿ ಆಧ್ಯಾತ್ಮ ಸಾಧನೆಯ ಹಂತದಲ್ಲಿ ಮಾಯೆ ಆವರಿಸದಂತೆ ಎಚ್ಚರಿಕೆ ಇರಬೇಕು ಎಂದಿದ್ದಾರೆ. ಎಚ್.ತಿಪ್ಪೇರುದ್ರಸ್ವಾಮಿ ಅವರು ಬರೆದ 'ಅಲ್ಲಮನ ಬೆಡಗಿನ ವಚನಗಳು' ಎಂಬ ಲೇಖನದಲ್ಲಿ ಮಾಯೆಯನ್ನು ರಕ್ಕಸಿಯಾಗಿ ವಿವರಿಸಿದ್ದಾರೆ. ಈ ಮಾಯೆ ಯೆಂಬ ರಕ್ಕಸಿ ಸದಾ ವಿಷಯ ಸುಖಿಯೆಂಬ ಮಕ್ಕಳನ್ನು ಹೆರುವ ಬಾಣತಿಯಾಗಿದ್ದಾಳೆ. ಮಾಯೆ ಮಂಜಿನ ಸಂಗ್ರಹದ ಘಟಾಘಟಿತರೆಲ್ಲರೂ ಎಂಬ ವಚನದಲ್ಲಿ ಅಹಂಕಾರದಲ್ಲಿ ತೊಳಲುವ ಅಜ್ಞಾನಿಗಳನ್ನು ಕುರಿತು ಹೇಳಲಾಗಿದೆ. ಮಾಯಾ ಮಂಜಿನ ಸಂಗ್ರಹವೆಂದರೆ ಮಾಯೆ ಮತ್ತು ಮಿಥ್ಯೆಗಳನ್ನು ಸಂಗ್ರಹಿಸಿಕೊಂಡಿರುವ ದೇಹಧಾರಿಗಳು ಅವರು ಅಂಹಕಾರವೆಂಬ ಕುಂಜರದ ಪಂಜರದಲ್ಲಿ ಬಂಧಿಗಳಾಗಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ.

ಈ ಮಾಯಾ ಪ್ರಪಂಚವನ್ನು ಗೆಲ್ಲುವ ಸಾಧನವನ್ನು ಸೂಚಿಸುವಲ್ಲಿ 'ಮಾಯದ ಕೈಯಲ್ಲಿ ಓಲೆ ಕಂತವ ಕೊಟ್ಟರೆ ಲಗುನವಿಗುನವ ಬರೆಯಿತ್ತು ನೋಡಾ' ಎಂಬ ವಚನದಲ್ಲಿಯ ಬೆಡಗಿನ ನಿರೂಪಣೆಯನ್ನು ಗಮನಿಸಿದ್ದಾರೆ. ಓಲೆಯ ಕಂತ ಎಂಬುದು ಪಿಂಡವೆಂಬ ಶಾಸನದ ಮೇಲೆ ಸಂಚಿತ ಮೊದಲಾದ ಕರ್ಮ ಗಳನ್ನು ತನ್ನ ಸಂಕಲ್ಪ ವಿಕಲ್ಪದಿಂದ ಬರೆಯುತ್ತದೆ. ಸುಳ್ಳುಕಾಯ ಸತ್ಯವಾಗಿ, ಸತ್ಯವಾದ ಆತ್ಮ ಸುಳ್ಳಾಗಿ ತೋರಲು ಮಾಯೆ ಕಾರಣವಾಗಿದೆ. ಮಾಯೆ ರಕ್ಕಸಿ, ವಿಧಿ, ಭ್ರಮೆ ಎಂಬರ್ಥದಲ್ಲಿ ಹೇಳಿದ್ದಾರೆ.

'ಅಲ್ಲಮ ಪ್ರಭುದೇವರ ಬೆಡಗಿನ ವಚನಗಳು ಒಂದು ವಿವೇಚನೆ' ಎಂಬ ಲೇಖನದಲ್ಲಿ 'ಅಗ್ನಿ ಮುಟ್ಟದದೆವೋ ಆಕಾಶದಲದೆವೋ!' ಎಂಬ ವಚನದಲ್ಲಿ ಶಿವಯೋಗ ಸಾಧನೆಯ ವಿಧಾನವನ್ನು ವಿವರಿಸಲಾಗಿದೆ. ಶಿವಯೋಗ ಸಾಧನೆಯ ಮೂಲಕ ತನ್ನ ನಿಜದಲ್ಲಿ ವಿಶ್ರಮಿಸಿದ ಅರಿವು ಬ್ರಹ್ಮರಂಧ್ರದಲ್ಲಿ ಸ್ಥಾಯಿಯಾಗಿ ನೆಲೆಗೊಂಡು ತಾನೇತಾನಾಗಿ ಬೆಳಗುತ್ತದೆ.

ಈ ಕ್ರಿಯೆಗೆ ಬಾಧಕವಾಗಿರುವ ಸ್ಥಿತಿಯೇ 'ಮಾಯೆ' ಎಂದು ಅರ್ಥೈಸಿದ್ದಾರೆ.

ಅ.ನ.ಕೃ ಅವರು ಬರೆದ 'ಸಾಹಿತ್ಯ ಮತ್ತು ಯುಗಧರ್ಮ' ಎಂಬ ಕೃತಿಯಲ್ಲಿ 'ಅಲ್ಲಮಪ್ರಭು' ಎಂಬ ಲೇಖನವನ್ನು ಗಮನಿಸಿದಾಗ ಅಲ್ಲಮನ ಜೀವನದ ಕುರಿತ ವಿಚಾರಗಳು ಚರ್ಚಿತವಾಗಿವೆ. ಅಲ್ಲಮ ಜಾತಿ-ಧರ್ಮಕ್ಕೆ ಸೀಮಿತವಾಗದೆ ಆತ್ಮಜ್ಞಾನ ಸಾಧನೆಗೆ ಪೋಷಕವಾಗುವ ಎಲ್ಲ ಸಾಧನ ಮಾರ್ಗಗಳು ಶ್ರೇಷ್ಠ ವಾದುದೆಂದು ಮತ್ತು ಸರ್ವಧರ್ಮ ಸಮನ್ವಯತೆಯನ್ನು ಸಾರಿದವನು ಎಂದು ಸ್ಪಷ್ಟಪಡಿಸುತ್ತದೆ. ಅಲ್ಲಮ ಮಾಯೆಯ ದಾಸನಾಗಿ ಅನ್ಯವೆಲ್ಲವನ್ನು ಮರೆತು ಬದುಕುವ ಮನುಜನ ಸ್ಥಿತಿಯನ್ನು, ದೇವ-ದಾನವರೆಲ್ಲರೂ ಮಾಯೆಯ ಕಾಲುಗಾಹೀನ ಸರಮಾಲೆ' ಎಂದಿದ್ದಾನೆ. ಮಾಯೆಗೆ ಒಳಗಾಗುವ ಮನದ ಮಲೀನ ಕಳೆಯದೆ ಅರಿವು ಸಾಧ್ಯವಾಗದೆಂಬ ಸತ್ಯವನ್ನು ಅಲ್ಲಮ ವಚನದ ಮೂಲಕ ಸಾರುತ್ತಾನೆ. ಜೀವನದ ಉನ್ನತೋನ್ನತ ಆದರ್ಶವನ್ನು ಧರ್ಮದ ನಿತ್ಯ ನಿರ್ಮಲ ಸ್ವರೂಪವನ್ನು ಅರಸಿದವನು ಅಲ್ಲಮಪ್ರಭುವಾಗಿ ತೋರುವ ಪರಿ ವಿಶೇಷವಾದುದಾಗಿದೆ.

ಡಾ.ರಾಮಲಿಂಗಪ್ಪ ಟಿ.ಬೇಗೂರ ಅವರ 'ಅಲ್ಲಮಪ್ರಭು ಕುರಿತ ಅನುಸಂಧಾನಗಳು' (ಆಧುನಿಕ ಪೂರ್ವ) ಎಂಬ ಪುಟ್ಟ ಕೃತಿಯಲ್ಲಿ ಅಲ್ಲಮನ ಜೀವನ ಹಾಗೂ ಸಾಹಿತ್ಯವನ್ನು ಕಥನ ಮಾರ್ಗ, ಅನುವಾದ, ಟೀಕೆ, ಜಾನಪದ, ಸಂಪಾದನೆ, ಶೂನ್ಯ ಸಂಪಾದನೆ, ಸ್ಥಲಕಟ್ಟು ಸಂಪಾದನೆ, ಸ್ತೋತ್ರ ಸಂಪಾದನೆ ಸಂಕೀರ್ಣ ಸಂಪಾದನೆ, ಸಕಲಪುರಾತನ ಸಂಪಾದನೆ ಮತ್ತು ವಚನ ಮಾರ್ಗ ಇವೆಲ್ಲವುಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಹೆಣ್ಣು-ಮಾಯೆಯ ಸಮೀಕರಣ, ಲಿಂಗರಾಜಕಾರಣದ ಸಾಧನವಾಗಿ ಪ್ರಭುಕಥನ ಇತ್ಯಾದಿ ಹಲವು ಅಂಶಗಳನ್ನಾಧರಿಸಿ ಅಲ್ಲಮ ಚಿತ್ರಿತಗೊಂಡ ಬಗೆ-ವಿಧಾನಗಳನ್ನು ನಿರೂಪಿಸಿದ್ದಾರೆ.

ಅ.ನ.ಕೃ ಅವರು ಬರೆದಿರುವ 'ಅಲ್ಲಮಪ್ರಭು' ಎಂಬ ಕೃತಿಯಲ್ಲಿ ಅಲ್ಲಮ ಪ್ರಭುವಿನ ಆಧ್ಯಾತ್ಮಿಕ ಚಿಂತನೆಗಳನ್ನು ವಿಶ್ಲೇಷಿಸುವಲ್ಲಿ ಸಾಂದರ್ಭಿಕವಾಗಿ ವಚನಗಳನ್ನು ಬಳಸಿದ್ದು, ಮಾಯೆಯ ಕುರಿತು ವಚನಗಳನ್ನು ವಿವರಿಸಿದ್ದಾರೆ. ಹೊನ್ನು ಮಾಯೆಯೆಂಬರು ಎಂಬ ವಚನದಲ್ಲಿ ಹೊನ್ನು, ಹೆಣ್ಣು, ಮಣ್ಣುಗಳು ಪಾಪವಸ್ತುಗಳಲ್ಲ ಮಾನವ ತನ್ನ ಕೀಳಾಸೆಗಾಗಿ ಅವುಗಳನ್ನು ಮಲಿನಗೊಳಿಸುವನು. ಮಾಯೆ ಎಂಬುದು ಪ್ರಬಲ ಶಕ್ತಿ. ಅದರ ಉಪೇಕ್ಷೆ ಸರಿಯಲ್ಲ ಎಂದಿದ್ದಾರೆ. 'ಮಾಯಾಮಲೀನ ಮನದಿಂದ ಅಗಲದೆ' ಎಂಬ ವಚನದಲ್ಲಿ ನಿಜಾತ್ಮನ ಅರಿವಿಲ್ಲದೆ ಮಾನವ ಮಾಯಾಧೀನನಾಗುತ್ತಾನೆ. ಆ ಅರಿವಿನ ಬೆಳಕು ಅವನಲ್ಲಿ ಮೂಡಿದರೆ ಮಾಯೆಯೆಂಬ ಕತ್ತಲೆ ಓಡುತ್ತದೆ. ಬೆಳಕಿನ ಮುಂದೆ ಕತ್ತಲೆ ನಿಲ್ಲಲಾರದು ಎಂಬಲ್ಲಿ ಅಜ್ಞಾನವು ಜ್ಞಾನದ ಮುಂದೆ ನಿಲ್ಲಲಾರದು ಎನ್ನುತ್ತಾರೆ.

ಟಿ.ಜಿ.ಸಿದ್ದಪ್ಪಾರಾಧ್ಯ ಅವರ 'ಅಲ್ಲಮಪ್ರಭು' ಕೃತಿ ಅಲ್ಲಮನ ಇಡಿಯಾದ ಜೀವನವನ್ನು

ಚಿತ್ರಿಸುತ್ತದೆ. ಅಲ್ಲಮನ ಬಾಲ್ಯ, ಯೌವ್ವನದಲ್ಲಿ ಮಾಯೆಯ ತಿರಸ್ಕಾರದ ಮೂಲಕ ಮಾಯೆಯ ಹುಡುಕಾಟ ಆರಂಭ ವಾಗುತ್ತದೆ. ಮಾಯೆ ಸಿಕ್ಕು ದಕ್ಕಿದಳಲ್ಲದೆ ಅಲ್ಲಮನ ಮೂಲಕ ಮಾಯೆ ಹೊಸ ಅರ್ಥ ಪಡೆಯಿತು. ಹಠ ಯೋಗ ಸಾಧನೆಯ ಮೂಲಕ ಜ್ಞಾನ ಸಿದ್ಧಿಯಾಗಿ, ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮಯ್ಯ, ಬಸವಣ್ಣ, ಅಕ್ಕಮಹಾದೇವಿ ಎಲ್ಲರನ್ನು ಸಂದರ್ಶಿಸಿ ಅವರಲ್ಲಿನ ಜ್ಞಾನದ ಮುಸಕನ್ನು ಆವರಿಸಿದ ಮಾಯೆಯನ್ನು ಸರಿಸಿ, ಬೆಳಗಿಸಿ ತಾನೆ ಬಯಲಾಗುವನು. ಸಂಚಾರಿಯಾಗಿ ಎಲ್ಲರನ್ನೂ ಭೇಟಿಯಾಗಿ ಯಜ್ಞ-ಯಾಗ ಮಾಡುವ ಶ್ರೋತ್ರಿಗಳನ್ನು ಸಂದರ್ಶಿಸಿ ಯಜ್ಞಾಚರಣೆ ಮನುಷ್ಯನನ್ನು ಸಾಧನೆಯ ಹಂತಕ್ಕೆ ಏರಿಸಲಾಗದು ಎಂಬಲ್ಲಿ ಮಾಯೆ ಮರೆವನ್ನು ಕಳೆದು ಅರಿವು ಮೂಡಿಸುತ್ತಾನೆ. ಶ್ರೀಶೈಲದ ಬಳಿ ಸಾರಿ ಗೋರಕ್ಷನ ವಜ್ರಕಾಯ ಸಿದ್ಧಿಯ ಪರೀಕ್ಷಿಸಿ ಅವನ ಮೂಲಕ ಶೂನ್ಯಕಾಯದ ಸಿದ್ಧಿಯ ಮಹತ್ವವನ್ನು ಅರುಹುತ್ತಾನೆ. ವಜ್ರಕಾಯ ಗಳಿಸಿದೆನೆಂಬ ಮಾಯಾ ಭಾವವನ್ನು ಗೋರಕ್ಷನಲ್ಲಿ ಕರಗಿಸುತ್ತಾನೆ ಎಂದು ವಿವರಿಸಿದ್ದಾರೆ.

ಡಾ.ವಿಜಯಶ್ರೀ ಸಬರದ ಅವರು ಸಂಪಾದಿಸಿರುವ 'ವಿಮರ್ಶಾ ಲೇಖನಗಳು' ಎಂಬ ಸಂಪಾದಿತ ಕೃತಿಯಲ್ಲಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಅವರ 'ಅಲ್ಲಮ; ಅರಿವಿನೊಳಗಿನ ಅರಿವು' ಎಂಬ ಲೇಖನ ದಲ್ಲಿ ಅಲ್ಲಮಪ್ರಭುವಿನ ವಚನಗಳ ಮೂಲಕ 'ಅರಿವು' ನಿರೂಪಿತಗೊಂಡ ಬಗೆಯನ್ನು ವಿವರಿಸಲಾಗಿದೆ. ದೇಹ-ಜೀವ-ಭಾವಗಳಲ್ಲಿ ಜ್ಞಾನ ಎಂಬುದಿದ್ದು, ಅದು ತಿಳಿದ ತಕ್ಷಣ 'ಆತ್ಮಭಾವ' ಬಂದು ಕೂಡುತ್ತದೆ. ಆತ್ಮದ ಮೂಲಕ ಅನುಭವಕ್ಕೆ ಬಂದಾಗ ಅರಿವು ಮೂಡುತ್ತದೆ. ಅರಿವು ದೇಹ ಭಾವದಲ್ಲಿ ಜೀವ ಭಾವದಲ್ಲಿ ಮತ್ತು ಆತ್ಮಭಾವದಲ್ಲಿ ಪ್ರಕಟಗೊಳ್ಳುತ್ತದೆ. ಮೊದಲನೆಯದು ತಿಳುವಳಿಕೆ, ಎರಡನೆಯದು ತನ್ನನ್ನು ತಾನು ತಿಳಿಯುವುದು, ಮೂರನೆಯದು ಅರಿವಿನೊಳಗಿನ ಅರಿವು ಮೊದಲೆರಡು ಅಡಗಿದರೆ ಮಾತ್ರ ಮೂರನೆಯದು ಮೈದೋರುತ್ತದೆ. ಅರಿವೆಂಬುದು ಒಂದು ಅನುಭಾವವಾಗಿದೆ. ಇಲ್ಲಿ ಮೊದಲೆರಡು ಸ್ತರಗಳ ಸ್ಥಿತಿ ಮಾಯಾವೃತ ಸ್ಥಿತಿ ಆಗಿದ್ದು ಅಲ್ಲಮನದು ಬರಿಯ 'ಅರಿವು' ಅಲ್ಲ ಅರಿವಿನೊಳಗಿನ ಅರಿವು ಎಂಬುದನ್ನು ಮುಕ್ತಾಯಕ್ಕ ಗ್ರಹಿಸುತ್ತಾಳೆ. ಲೋಕದ ಕ್ಷೇಮಕ್ಕೆ 'ಅರಿವು' ಬೇಕು ಎಂಬ ಸದಾಶಯ ಇಲ್ಲಿದೆ. ಈ ಅರಿವು ಮಾಯಾವೃತನಾದವನಿಗೆ ಕಾಣದು. ಅದು ಅರಿವಿನೊಳಗಿನ ಅರಿವನ್ನು ಹೊಂದಿದವನಿಗೆ ಮಾತ್ರ ಕಾಣುತ್ತದೆ ಎಂದು ಹೇಳುವಲ್ಲಿ ಅರಿವಿನ ಮೂಲಕ ಮಾಯೆಯ ಕುರಿತು ಮಾತನಾಡುತ್ತಾರೆ.

ಫ.ಗು.ಹಳಕಟ್ಟಿಯವರ 'ವಚನಶಾಸ್ತ್ರಸಾರ' ಕೃತಿಯಲ್ಲಿ ವಚನಗಳಲ್ಲಿ ನಿರೂಪಿತಗೊಂಡ ವಸ್ತುವನ್ನು ಕೇಂದ್ರಿಕರಿಸಿ ಒಂದೇ ಶೀರ್ಷಿಕೆಯಲ್ಲಿ ಹಲವು ವಚನಕಾರರ ವಚನಗಳನ್ನು ಸಂಗ್ರಹಿಸಿ ರಚಿಸಲಾಗಿದೆ. 'ಮಾಯೆ' ಎಂಬ ವಸ್ತುವನ್ನು ಆಧರಿಸಿ ವಚನಕಾರರು ಬರೆದ

ವಚನಗಳು ಸಂಗ್ರಹವಿದ್ದು, ವಚನಕಾರರ ದೃಷ್ಟಿಯಲ್ಲಿ ಮಾಯೆ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿದ್ದಾರೆ. ಅದರಂತೆ ಸಂ.ಶಿ.ಭೂಸನೂರಮಠ ಅವರ ವಚನ ಸಾಹಿತ್ಯ ಸಂಗ್ರಹ ಕೃತಿಯಲ್ಲಿ 'ಮರವು-ಮಾಯೆ' ಎಂಬ ಶೀರ್ಷಿಕೆ ಯಡಿಯಲ್ಲಿ ವಚನಕಾರರ ಮಾಯೆ ಕುರಿತಾದ ವಚನಗಳನ್ನು ಒಂದೆಡೆ ಸಂಗ್ರಹಿಸಿದ್ದಾರೆ. ಬೇರೆ ಬೇರೆ ವಚನಕಾರರ ಇಪ್ಪತ್ತೊಂದು ವಚನಗಳು ಉಲ್ಲೇಖಿತವಾಗಿವೆ. ಮಾಯೆಂಬುದು ಮರೆವಿನ ರೂಪದಲ್ಲಿ ಗ್ರಹಿಸಿರುವುದಾಗಿದೆ.

ಡಾ.ಬಸವರಾಜ ಕಲ್ಗುಡಿ ಅವರ 'ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ' ಎಂಬ ಕೃತಿಯಲ್ಲಿ 'ಮನುಷ್ಯನ ಅಸ್ತಿತ್ವದ ಸ್ವರೂಪ-ಅಲ್ಲಮನ ವಿಚಾರಗಳು' ಎಂಬ ಅಧ್ಯಾಯದಲ್ಲಿ ಅಲ್ಲಮನ ವಚನಗಳನ್ನು ಗಮನಿಸಿದ್ದಾರೆ. ಅಲ್ಲಮ ಪ್ರಭುವಿನ ವಚನಗಳಲ್ಲಿ ದ್ವೈತಭಾವ ಹಾಗೂ ಸಾಕಾರ ಸ್ವರೂಪಗಳ ವಿಮರ್ಶೆಯು ಹಲವು ವಿಧದಲ್ಲಿ ರೂಪಗೊಂಡಿದೆ. ಲೌಕಿಕ ನೆಲೆಗಳಿಗೆ ಮಾತ್ರ ವಾಸ್ತವವಾದ ಐಂದ್ರಿಕ ಭಾವಗಳ ನಿರಾಕರಣೆಯಿದೆ ದೇಹ ಮತ್ತು ಅದಕ್ಕೆ ಭಾವಗಳ ಕುರಿತು ಹೇಳುತ್ತಾ ನಾನು-ನೀನು ಎಂಬ ಸಂಬಂಧದ ನಿರೂಪಣೆ ಮಾಡಿದ್ದಾರೆ.

'ನೀ ನಾನೆಂಬ ಭಾವವಾರಿಂದಾಯಿತ್ತು ಹೇಳಾ?
ನೀನೆಂಬುದೇ ಅಜ್ಞಾನ ನಾನೆಂಬುದೇ ಮಾಯಾಧೀನ'

ಎಂಬ ವಚನದಲ್ಲಿ ನೀನು ನಾನು ಎಂಬ ಭಾವವು ಅಲ್ಲಮನ ಪ್ರಕಾರ ಅಜ್ಞಾನದ ನೆಲೆಯಿಂದಲೇ ಹುಟ್ಟಿದ್ದಾಗಿದೆ. ಈ ಸಂಬಂಧವೇ ಅಲ್ಲಮ ಹೇಳುವಂತೆ, ಜ್ಞಾನದ ಅರಿಕೆಯನ್ನೂ, ಮಾಯೆಯ ಪ್ರಭುತ್ವವನ್ನು ಪ್ರಧಾನವಾಗಿ ಒಳಗೊಂಡಿರುವಂಥದು. ದ್ವೈತ ಸ್ವರೂಪದ ಭಕ್ತಿ ಭಾವವನ್ನು ಅಲ್ಲಮಪ್ರಭು ನಿರಾಕರಿಸುತ್ತಾನೆ. ಭಕ್ತಿ ಎಂಬ ಆಚರಣೆಯ ಸ್ವರೂಪದ ಕುರಿತು ಅಲ್ಲಮನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಮನ ದೃಷ್ಟಿಯ ಅರಿವು ಅರ್ಥೈಯಿಸಲ್ಪಟ್ಟ ಬಗೆಯನ್ನು ಅರಿದರಿದು ಅರಿವು ಬಂಜೆಯಾಗಿತ್ತು. ಮರೆ ಮರೆದು ಮರಹು ಬಂಜೆಯಾಗಿತ್ತು ಎಂಬ ವಚನದಲ್ಲಿ ಕಾಣುತ್ತೇವೆ. ಈ ಮಾತಿಗೆ ಪೂರಕವಾದ ವಚನಗಳನ್ನು ಬಳಸಿ ವಿಶ್ಲೇಷಿಸಿದ್ದಾರೆ.

'ಶರಣರ ವಿಚಾರ ವಾಹಿನಿ' ಎಂಬ ಕೃತಿಯಲ್ಲಿ ಎಂ.ಎಸ್. ಲಠ್ಠೆ ಅವರು 'ಮಾಯೆ' ಎಂಬ ಶೀರ್ಷಿಕೆಯಡಿ ಮಾಯೆ ಕುರಿತು ಬರೆದ ವಚನಕಾರರ ವಚನಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ವಚನಕಾರರಲ್ಲಿ ಮಾಯೆಯೆಂಬ ಪರಿಕಲ್ಪನೆ ಲೌಕಿಕದ ಹಲವು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದ್ದನ್ನು ವಚನಗಳ ಮೂಲಕ ವಿವರಿಸುತ್ತಾರೆ.

ವಚನಧರ್ಮಸಾರ ಕೃತಿಯಲ್ಲಿ ವೈರಾಗ್ಯ-ಅಲ್ಲಮ ಪ್ರಭು ಎಂಬ ಅಧ್ಯಾಯದಲ್ಲಿ ವೈರಾಗ್ಯ ಮತ್ತು ಜ್ಞಾನಕ್ಕೆ ಹೆಸರಾದ ಅಲ್ಲಮಪ್ರಭುವನ್ನು ಹರಿಹರನು ಪ್ರಭುದೇವರಾಗಿ ಚಿತ್ರಿಸಿದ್ದಾರೆ. ನಾನು ಎಂಬ ಅಹಂಕಾರ ಅಳಿದು ತನ್ನ ತಿಳಿದು ನಿಜದ ನಿಲುವನ್ನು

ಅರಿತವನು ಅಲ್ಲಮಪ್ರಭು. ಹಲವು ವಚನಗಳ ಮೂಲಕ ಗುರು, ಲಿಂಗ, ಆಚಾರ, ಆಷ್ಟಾವರಣ ಇತ್ಯಾದಿ ಕುರಿತು ಹೇಳುತ್ತಾನೆ. ಅಲ್ಲಮನ ವಚನಗಳಲ್ಲಿ ದೃಷ್ಟಾಂತಗಳು ಬಳಕೆ ಗೊಂಡ ಬಗೆಯುನ್ನು ವಿವರಿಸಿದ್ದಾರೆ ಮತ್ತು ಉಪನಿಷತ್ ಪೂರಕ ಅಭಿಪ್ರಾಯಗಳಿರುವುದನ್ನು ವಿವರಿಸಿದ್ದಾರೆ.

ಡಾ.ಬಸವರಾಜ ಸಬರದ ಅವರ 'ವಚನ ಚಳುವಳಿ' ಕೃತಿಯಲ್ಲಿ ಅಲ್ಲಮಪ್ರಭು– ಮುಕ್ತಾಯಕ್ಕ– ಮಹಾದೇವಿಯಕ್ಕಗಳ ವಚನಗಳಲ್ಲಿ ಸೈದ್ಧಾಂತಿಕ ಚರ್ಚೆ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ವಚನಗಳನ್ನು ತೌಲನಿಕವಾಗಿ ಗಮನಿಸಿಕೊಂಡಿದ್ದಾರೆ. ಶೂನ್ಯಸಂಪಾದನೆಗಳಲ್ಲಿನ ಪಠ್ಯವನ್ನಾಧರಿಸಿಕೊಂಡು ಅಲ್ಲಮಪ್ರಭು ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕರೊಂದಿಗೆ ಮಾಡುವ ಸಂವಾದವನ್ನು ಕೇಂದ್ರಿಕರಿಸಿ ಚರ್ಚಿಸಿದ್ದಾರೆ. ಮುಕ್ತಾಯಕ್ಕನ ಜೊತೆ ಅರಿವು–ಮರೆವಿನ ಕುರಿತು ಚರ್ಚಿಸಿದರೆ ಅಕ್ಕನ ಜೊತೆ ಅಂತರಂಗ–ಬಹಿರಂಗದ ಕುರಿತು ಚರ್ಚೆ ಸಾಗಿದೆ. ಅಂಗ–ಆತ್ಮಗಳು ಭಿನ್ನವಿಲ್ಲ. ಎರಡು ಒಂದೆ ಎಂಬಂತೆ ಅಕ್ಕ ವ್ಯಾಖ್ಯಾನಿಸುತ್ತಾಳೆ.

ಎಚ್.ತಿಪ್ಪೇರುದ್ರಸ್ವಾಮಿ ಅವರು ಬರೆದ 'ಪರಿಪೂರ್ಣದೆಡೆಗೆ' ಎಂಬ ಕಾದಂಬರಿ ಅಲ್ಲಮನಪ್ರಭುವಿನ ಜೀವನ ಮತ್ತು ವಚನ ಸಾಹಿತ್ಯವನ್ನು ಒಳಗೊಂಡಿದೆ. 'ಪ್ರಭುದೇವರ ರಗಳೆ', 'ಪ್ರಭುಲಿಂಗಲೀಲೆ' ಹಾಗೂ 'ಶೂನ್ಯ ಸಂಪಾದನೆ'ಗಳನ್ನು ಆಕರವಾಗಿಟ್ಟುಕೊಂಡು ಅಲ್ಲಮನ ಜೀವನ ಚಿತ್ರಣ ಮಾಡಲಾಗಿದೆ. ಅಲ್ಲಮ ಲೋಕ ಸಂಚಾರಿಯಾಗಿ ಲೋಕದಲ್ಲಿನ ಮಹಾನುಭಾವರಲ್ಲಿನ ಮಾಯಾಗುಣವನ್ನು ಅಳಿಸಿಹಾಕುತ್ತಾನೆ. ಸಂಸಾರವ ತ್ಯಜಿಸಿ ಸನ್ಯಾಸಿಯಾಗಿ, ಪರಿಪೂರ್ಣ ಜ್ಞಾನಿಯಾಗಿ ತೋರುತ್ತಾನೆ. ಕಾಯ ಬಯಲಾಗುವ ಪರಿ ನಿರ್ವಯಲಿನ ಪ್ರತೀಕವಾಗಿದೆ.

ಭಾಗ್ಯಶ್ರೀ ಪಿ. ಅವರ 'ಅಲ್ಲಮಪ್ರಭು' ಕೃತಿ ಅಲ್ಲಮನ ಜೀವನ ವೃತ್ತಾಂತವನ್ನು ನಿರೂಪಿಸುತ್ತದೆ. ಹರಿಹರ ಅಲ್ಲಮ ನಿರುಪಿತಗೊಂಡ ಬಗೆಯನ್ನು ಅವಲೋಕಿಸಿದ್ದಾನೆ. ಅಲ್ಲಮನ ವ್ಯಕ್ತಿತ್ವ ವಿಶಿಷ್ಟತೆಯನ್ನು ಚಿತ್ರಿಸಿದ್ದಾನೆ. ಅಲ್ಲಮ ಹೊಸ ಧರ್ಮ ಸ್ಥಾಪಿಸುವುದಕ್ಕೆ ಬದಲಾಗಿ ಸಮಾಜದಲ್ಲಿ ಅಸಿತ್ವದಲ್ಲಿದ್ದ ಧರ್ಮ ಕಲ್ಮಶವನ್ನು ಸ್ವಚ್ಛಗೊಳಿಸಲೆತ್ನಿಸಿದನು. ಲೋಕಸಂಚಾರಿಯಾಗಿ ಅನೇಕ ಶರಣರನ್ನು ಭೇಟಿಯಾಗಿ ಅವರ ಸಂದೇಹ ನಿವಾರಿಸಿ, ಅಹಂಕಾರ ನೀಗಿದನು. ಬಸವನ ಸಾತ್ವಿಕ ಸಿಟ್ಟನ್ನು ಪರೀಕ್ಷಿಸಿದನು. ವಚನಾವಲೋಕನ ಎಂಬ ಅಧ್ಯಾಯದಲ್ಲಿ ವಚನಗಳನ್ನು ವಿಶ್ಲೇಷಿಸಲಾಗಿದೆ.

ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ

....

ಮನದ ಮುಂದಣ ಆಸೆಯೆ ಮಾಯೆ ಕಾಣ ಗುಹೇಶ್ವರಾ

ಹೊನ್ನು, ಹೆಣ್ಣು ಮತ್ತು ಮಣ್ಣು ಎಂಬುದು ಲೋಕದ ದೃಷ್ಟಿಯಲ್ಲಿ ಮಾಯೆಯಾಗಿ ತೋರುತ್ತದೆ. ಆದರೆ ವಾಸ್ತವದಲ್ಲಿ ಮಾನವನ ಮನಸ್ಸಿನಾಳದಲ್ಲಿ ಹುದುಗಿದ ಆಸೆಯೇ ಮಾಯೆ ಆಗಿದೆಯೇ ಹೊರತು ಹೆಣ್ಣು ಹೊನ್ನು ಮಣ್ಣುಗಳಲ್ಲ. 'ಅರಿವು' ಕುರಿತು ಹೇಳುವಾಗ 'ದೇಹಭಾವವಳಿದಲ್ಲದೆ ಜೀವಭಾವವಳಿಯದು' ಕಾಯದ ಕುರುಹು ಕಳೆದು ಆತ್ಮದ ಅರಿವು ಮೂಡಬೇಕು. ಕಾಯ-ಜೀವದ ಐಕ್ಯತೆಯನ್ನು ಎಣ್ಣೆ-ಬತ್ತಿಗಳಿಗೆ ಸಮೀಕರಿಸಿದ್ದಾರೆ. ಕಾಯವಳಿದು ಜೀವ ದೇವನನ್ನು ಕೂಡುವ ಮುನ್ನ ಭಕ್ತಿಯ ಮಾಡಿ ನಿಜ ಮುಕ್ತಿಯ ಕಾಣಬೇಕೆಂದು ದೈಹಿಕ ಆಕರ್ಷಣೆ ಮೀರಿ ಸಾಧಕನಾಗಬೇಕು. ದೇವಲೋಕದೊಂದಿಗೆ ಒಂದಾಗಬೇಕು ಎಂದು ಅಲ್ಲಮನು ಹೇಳುತ್ತಾನೆ

ಶೈಲಜಾ ಉಡುಚಣ ಅವರು ಬರೆದ 'ವಚನಗಳಲ್ಲಿ ಮಾಯೆ ಸಂಸಾರ' ಕೃತಿಯಲ್ಲಿ ಮಾಯೆ ಕುರಿತು ಚರ್ಚಿಸಿದ್ದಾರೆ. ಮನದ ಮೂಲವೇ ಮಾಯೆಯಾಗಿ ಹೆಣ್ಣು ಮಾಯೆಯಾಗಿ ಕಾವಲು ಮಾಯೆಯಾಗಿ ವಚನದ ಮೂಲಕ ಅರ್ಥೈಯಿಸಲಾಗಿದೆ. ಮಾಯೆಯಾಗಿ ಕಾಣುವ ವಸ್ತು ಚರಾಚರ ಎಲ್ಲವು ಶಕ್ತಿಯ ರೂಪವಾಗಿ ಶರಣರ ಲಿಂಗಾಂಗ ಸಾಮರಸ್ಯಕ್ಕೆ ಶಕ್ತಿವಿಕಾಸಕ್ಕೆ ಕಾರಣವಾದ ಅಂಶಗಳಿಗೆ

ಡಾ.ಆರ್.ಸಿ.ಹಿರೇಮಠ ಅವರು 'ಮಹಾದೇವಿಯಕ್ಕನ ವಚನಗಳು' ಕೃತಿಯಲ್ಲಿ ೩೪೦ ಅಕ್ಕನ ವಚನಗಳು ಸಂಗ್ರಹಿಸಿದ್ದಾರೆ. ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯವೆಂಬ ಆರು ಸ್ಥಳಗಳಲ್ಲಿ ವರ್ಗೀಕರಿಸಿ ಸಂಪಾದಿಸಿದ್ದಾರೆ. ಕೃತಿಯ ಅನುಬಂಧದಲ್ಲಿ ಅಕ್ಕನ ಸೃಷ್ಟಿಯ ವಚನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ರಹಮತ್ ತರೀಕೆರೆ ಅವರು ಸಂಪಾದಿಸಿದ 'ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ' ಎಂಬ ಕೃತಿಯಲ್ಲಿ ಅಕ್ಕನ ವಚನಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನಕ್ಕೊಳಪಡಿಸಿದ ಲೇಖನ ಸಂಕಲನ ವಾಗಿದೆ. ಅಕ್ಕನ ವಚನಗಳನ್ನು ಸ್ತ್ರೀವಾದಿ ಚಿಂತನೆಯ ನೆಲೆಯಲ್ಲಿ ದ್ವಂದ್ವಗಳ ಸಮನ್ವಯದ ನೆಲೆಯಲ್ಲಿ ನೋಡಲಾಗಿದೆ. ಅಕ್ಕ ಹಾಗೂ ಸಮಕಾಲೀನ ಮಹಿಳಾ ಕಾವ್ಯ ಸಂದರ್ಭಗಳಿಗೆ ಹೋಲಿಸಿಕೊಂಡು ನೋಡಿದ್ದಾರೆ. ಅಕ್ಕನ ಬದುಕು ಮತ್ತು ಅವರ ವಚನಗಳ ಹಾಗೂ ಶೂನ್ಯ ಸಂಪಾದನೆಗಳ ಮೂಲಕ ನೋಡಿದರೆ ಬಂಡಾಯದ ನೆಲೆಯಲ್ಲಿ ನಿಂತು ಅಕ್ಕನನ್ನು ಅರ್ಥೈಸುವ ಪರಿ ಭಿನ್ನವಾಗಿದೆ. ಇದೇ ಕೃತಿಯಲ್ಲಿ ದು.ಸರಸ್ವತಿ ಅವರು ಬರೆದ 'ಮುಳುಗಿ ಮೀರುವ ಪರಿ' ಎಂಬ ಲೇಖನದಲ್ಲಿ ಅಕ್ಕ ಉಂಡ ನೋವು, ಅವಮಾನ, ಪಟ್ಟಪಾಡು, ತನ್ನೊಳಗೆ ನಡೆಸಿಕೊಂಡ ಗುದ್ದಾಟಗಳು. ಪಡೆದುಕೊಂಡ ದರ್ಶನಗಳನ್ನು ಚನ್ನಮಲ್ಲಿಕಾರ್ಜುನ ಸಾಕ್ಷಾತ್ಕಾರಕ್ಕೆ ಒಗ್ಗಿಸಿದ ಪರಿಯನ್ನು ಚಿತ್ರಿಸಿದ್ದಾರೆ. 'ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು ಗಂಡಸಿನ ದೇಹದೊಳಗಿನ ಹೆಣ್ಣನ್ನು ಹೆಣ್ಣಿನ ದೇಹದೊಳಗಿನ ಗಂಡನ್ನು

ಏನೆನ್ನಬೇಕು? ಇಲ್ಲಿ ಯಾರಿಗ್ಯಾರು ಮಾಯೆ? ಎಂಬುದನ್ನು ಚರ್ಚಿಸಿದ್ದಾರೆ.

'ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ' ಕೃತಿಯಲ್ಲಿ ಚಂದ್ರಶೇಖರ ತಾಳ್ಯ ಅವರು ಬರೆದ ಅಕ್ಕನ ಸಂವೇದನೆ 'ನೆರವ ಪರಿಕರ ಹೊಸತು' ಎಂಬ ಲೇಖನದಲ್ಲಿ ಹೆಣ್ಣಿಗೆ ಅಸಾಧ್ಯವೆಂದು ಭಾವಿಸಿ ಅದನ್ನು ಸಾಧ್ಯ ಎಂದು ತೋರಿದವಳು ಅಕ್ಕ. ಸ್ಥಾಪಿತ ಮೌಲ್ಯಗಳ ವಿರುದ್ಧ ಮಾತನಾಡುವ ಅಕ್ಕನ ಧೈರ್ಯ ಅನುಪಮವಾದದು. ತನ್ಮೂಲಕ ಸಾಮಾಜಿಕ ಒಪ್ಪಂದದಲ್ಲಿ ಬಹುಮುಖ್ಯವಾದ ಕುಟುಂಬ ಮತ್ತು ಮದುವೆ ಎಂಬ ಪರಿಕಲ್ಪನೆಗಳನ್ನು ಅಲೌಕಿಕ ಸಾಧನದಿಂದ ಮುರಿಯುತ್ತಾಳೆ. 'ಅತ್ತೆ ಮಾಯೆ ಮಾವ ಸಂಸಾರಿ' ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ" ಎಂಬ ವಚನದಲ್ಲಿ ಅಕ್ಕ ಹೆಣ್ಣಿನ ಸುತ್ತ ಇರುವ ಬಂಧನವನ್ನು ಹಾಗೂ ಆ ಬಂಧನದಿಂದ ಪಡೆಯಬಹುದಾದ ಮುಕ್ತಿಯ ಮಾರ್ಗವನ್ನು ತೋರುತ್ತಾರೆ. ಕರ್ಮದ ಗಂಡನನ್ನು ನಿರಾಕರಿಸಿ 'ಹರನ ಜೊತೆ ಹಾದರವನಾಡಿ' ಅನುಭಾವ ದೆತ್ತರಕ್ಕೆ ಅಕ್ಕಮಹಾದೇವಿ ಏರುತ್ತಾಳೆ. ಅಕ್ಕ ಮತ್ತು ಚೆನ್ನಮಲ್ಲಿಕಾರ್ಜುನನ ಸಂಬಂಧ ಎಲ್ಲ ಲೋಕದ ಸಂಬಂಧಗಳಿಗೆ ಅತೀತವಾಗಿ ತೋರುತ್ತದೆ. ೧೨ನೇ ಶತಮಾನದ ಅಕ್ಕನನ್ನು ಸಮಕಾಲೀನ ಮಹಿಳಾ ಸಂದರ್ಭಗಳಿಗೆ ಹೋಲಿಸಿ ನೋಡಲಾಗಿದೆ. ವಿಭಿನ್ನ ಕಾಲವಾದರೂ ಇರುವ ಸಾಮಾಜಿಕ ಸಂದರ್ಭ ಒಂದೇ ಆಗಿ ತೋರುತ್ತಾರೆ. ಒಟ್ಟಾರೆ ಅಕ್ಕ ಕೇವಲ ಹೆಣ್ಣು ಎಂಬ ಕಾರಣಕ್ಕಿಂತಲೂ ಬೇರೆಯೇ ಆದ ದಿಟ್ಟ ಹೋರಾಟ ಗಾರ್ತಿಯಾಗಿ ಮತ್ತು ಅಪರೂಪದ ಕವಿಯಾಗಿ ತೋರುತ್ತಾಳೆ. ಅಕ್ಕಮಹಾದೇವಿ ವಚನಗಳು ಕಾಲವನ್ನು ಮೀರಿ ನಿಂತು ಇಂದಿಗೂ ಪ್ರಸ್ತುತವೆನಿಸುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಬರೆದ 'ಕದಳಿಯ ಕರ್ಪೂರ'ಎಂಬ ಕಾದಂಬರಿಯಲ್ಲಿ ಅಕ್ಕನ ಜೀವನ ಚಿತ್ರಣವಿದೆ. ಹರಿಹರನು ಬರೆದಿರುವ ಮಹಾದೇವಿಯಕ್ಕನ ರಗಳೆಯಲ್ಲಿ ಅಕ್ಕನನ್ನು ಕುರಿತ ಚರ್ಚೆಗಳನ್ನು ಹಾಗೂ ಶೂನ್ಯ ಸಂಪಾದನೆಗಳಲ್ಲಿ ಅಕ್ಕನ ಚಿತ್ರಣವನ್ನು ಗಮನಿಸಿದ್ದಲ್ಲದೆ, ಅಕ್ಕ ಮಹಾದೇವಿಯ ವಚನಗಳನ್ನು ಆಧಾರವಾಗಿಟ್ಟುಕೊಂಡು ಅಕ್ಕನ ಒಟ್ಟು ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಅಕ್ಕನು ಹುಟ್ಟಿ ಬೆಳೆದ ಹಿನ್ನೆಲೆ, ಕೌಶಿಕನ ಪ್ರಸಂಗ ಅವಳ ದಿಗಂಬರತೆಯ ಮೀಮಾಂಸೆ ಇವೇ ಮುಂತಾದ ಸನ್ನಿವೇಶಗಳನ್ನು ಹೊಸ ರೀತಿಯಲ್ಲಿ ಅರ್ಥೈಯಿಸಿದ್ದಾರೆ. ಅಕ್ಕ ತಾನು ಇರುವ ಪ್ರಪಂಚದ ರೂಹನ್ನು ಅರಿತು ಈ ಪ್ರಪಂಚ ತನ್ನನ್ನು ಸುತ್ತಿ ಕೊಂಡಿದೆ. ಬಿಟ್ಟನೆಂದರೆ ಬಿಡದ ಮಾಯೆಯಾಗಿ ತೋರುತ್ತದೆ. ತಾನು ಪ್ರಪಂಚದ ಪುತ್ಥಳಿಯಾಗಿ ನಿಂತಾಗ ಎನ್ನ ಮಾಯದ ಮದವ ಮುರಿದು ಎನ್ನಿ ಸುತ್ತಿದ ಪ್ರಪಂಚವ ಬಿಡಿಸಬೇಕಾದದ್ದು ಪರಮಾತ್ಮನ ಕರ್ತವ್ಯ ವೆಂದು ಶಿವನನ್ನು ಎಚ್ಚರಿಸುತ್ತಾಳೆ. ಲೋಕವೆಂಬ ಮಾಯೆಗೆ ಶರಣರ ಬದುಕು ಮರುಳಾಗಿ

ತೋರುತ್ತದೆ. ಪರಶಿವನೊಲಿದ ಮೇಲೆ ಮಾಯೆ ಮರಹು ಅಭಿಮಾನಗಳು ಶರಣರಿಗಿರದು ಅಲ್ಲದೆ ತನಗೂ ಇರದು ಎಂದು ಸ್ಪಷ್ಟಪಡಿಸುತ್ತಾಳೆ. ಮರುಕ್ಷಣದ ದೌರ್ಬಲ್ಯಕ್ಕೆ ಒಳಗಾದ ಮನಸ್ಸನ್ನು ತಿದ್ದಿ, ತೀಡಿ ಮಾರ್ಗದರ್ಶಿಸುವವನು ಚನ್ನ ಎಂದಿದ್ದಾಳೆ. ಲೌಕಿಕವನ್ನು ತ್ಯಜಿಸಿ ದಿಗಂಬರವನ್ನೆ ದಿವ್ಯಾಂಬರವನ್ನಾಗಿಸಿಕೊಂಡು ತಪೋ ಯಾತ್ರೆ ಹೊರಡುತ್ತಾಳೆ. ಕಲ್ಯಾಣದಿಂದ ಕದಳಿಯತ್ತ ಸಾಗುತ್ತಾಳೆ. ಅಕ್ಕ ಕದಳಿಯ ಕರ್ಪೂರವಾಗಿ ಆತ್ಮದಾರತಿಯನ್ನು ಅರ್ಪಿಸಿದವಳು. ಕಾಯವೆಂಬ ಕದಳಿಯ ಹೊಕ್ಕು ಅಂತರಂಗದಲ್ಲಿರುವ ಪರಮಾತ್ಮನನ್ನು ಚೆನ್ನಾಗಿ ಪರಿಭಾವಿಸಿದವಳು ಅಕ್ಕನೊಡನೆ ಸಖಿಯಾಗಿ ರಸವಂತಿ ಪಾತ್ರ ಸಂವಾದ ಮಾಡುತ್ತಾ ಸಾಗುತ್ತದೆ.

ಡಾ.ಸಿದ್ಧಯ್ಯ ಪುರಾಣಿಕ ಅವರು ಬರೆದ 'ಮಹಾದೇವಿ' ಕೃತಿಯಲ್ಲಿ ಮಹಾದೇವಿಯ ಮಹಾಜೀವನ, ಅಸಾಮಾನ್ಯ ಸಾಧನೆಗಳು, ಅಕ್ಕನ ಆಲೋಚನಾಮೃತ, ಅಕ್ಕನ ವ್ಯಕ್ತಿತ್ವ ಎಂಬ ನಾಲ್ಕು ಭಾಗಗಳಲ್ಲಿ ಅಕ್ಕನನ್ನು ಪರಿಚಯಿಸಿದ್ದಾರೆ. 'ಮಹಾದೇವಿಯ ಮಹಾಜೀವನ' ಎಂಬ ಅಧ್ಯಾಯದಲ್ಲಿ ಅಕ್ಕನ ಹೆಸರು, ಊರಿನ ಕುರಿತು ಚರ್ಚೆಗಳನ್ನು ಮಾಡಿದ್ದಾರೆ. ಅಕ್ಕನ ಮದುವೆಯಾದ ಬಗ್ಗೆ ವಿವರಗಳನ್ನು ಕೊಡುವಲ್ಲಿ 'ಒಳಗಣ ಗಂಡನವ್ವಾ ಹೊರಗಣ ಮಿಂಡನವ್ವಾ ಎರಡನೂ ನಡೆಸಲು ಬಾರದವ್ವಾ' ಎಂಬಲ್ಲಿ ಅಕ್ಕನ ದೃಷ್ಟಿಯಲ್ಲಿ ಪತಿ ಎಂಬ ಕುರಿತ ಅಭಿಪ್ರಾಯ ಸ್ಪಷ್ಟವಾಗಿದೆ. ಅಕ್ಕನೆಂಬ ಸ್ತ್ರೀಯ ಮುಂದೆ ಕೌಶಿಕನೆಂಬ ಪುರುಷ ಅಭಿಮಾನವಾಗಿ ಕಾಡುವುದು. ಆದರೆ ಚನ್ನಮಲ್ಲಿಕಾರ್ಜುನನಿಗೆ ಒಲಿದ ತನಗೆ ಮಾಯೆಯಿಲ್ಲ ಮರಹಿಲ್ಲ ಅಭಿಮಾನವೂ ಇಲ್ಲವೆಂದಿದ್ದಾಳೆ. ಇಲ್ಲಿ ಮಾಯೆ, ಮರಹು, ಅಭಿಮಾನ ಇವನ್ನು ಸಮೀಕರಿಸಿ ಹೇಳಿದ್ದಾಳೆ. 'ಅಕ್ಕನ ಆಲೋಚನಾಮೃತ' ಎಂಬ ಅಧ್ಯಾಯದಲ್ಲಿ ಅಕ್ಕನ ವಚನಗಳನ್ನು ವಿಶ್ಲೇಷಿಸಲಾಗಿದೆ. ಅಕ್ಕನ ವಚನಗಳ ಮೂಲಕ ಅಕ್ಕನ ದೃಷ್ಟಿಕೋನವನ್ನು ಸ್ಪಷ್ಟೀಕರಿಸಿದ್ದಾರೆ. 'ಎನ್ನ ಕಾಯ ಮಣ್ಣು ಜೀವ ಬಯಲು' ಆದಾಗ ಭಗವಂತನ ನೆನವ ಪರಿ ಮುಖ್ಯವಾಗುತ್ತದೆ. ಕಾಯದ ಅನಿತ್ಯತೆಯನ್ನು ಅರಿತು ಹಿಂದಣ ಹಳ್ಳ ಮುಂದಣ ತೊರೆಯಂತಿರುವ ಬದುಕಿನಲ್ಲಿ ಜೀವ ದೇವನಲ್ಲಿ ಸಲ್ಲುವುದು ಅಗತ್ಯವಾಗಿದೆ. ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ಅರಿವು-ಕುರುಹು ಕುರಿತು ಅಕ್ಕ ಹೇಳುತ್ತಾಳೆ. 'ಅಲ್ಲೆಂದಡೆ ಉಂಟೆಂಬುದಿ ಮಾಯೆ' ಒಲ್ಲೆನೆಂದೆಡೆ ಬಿಡದೇ ಬೆಂಬತ್ತುವ ಮಾಯೆ ಎಂಬ ವಿಧಿಯಿಂದ ತಪ್ಪಿಸಿಕೊಳ್ಳಲಾಗದು ನಿಶ್ಚಲ ಮನದಿಂದ ಸ್ಮರಿಸದರೆ ಮಾಯೆ ಮಾಯವಾಗುತ್ತದೆ.

ಅಕ್ಕ ಲೌಕಿಕ ಎಂಬ ಸಮಾಜದಿಂದ ಬಿಡಿಸಿಕೊಳ್ಳಲಾಗದು ಏಕೆಂದರೆ ತಾನು ಶಿವ ಸೃಷ್ಟಿಸಿದ ಜೀವ. ಲೋಕದ ಪ್ರಭಾವಕ್ಕೆ ಒಳಗಾಗದಂತೆ ತನ್ನನ್ನು ರಕ್ಷಿಸು ಎಂದು ಎನ್ನ ಕಾಯದ ಕತ್ತಲೆ ಕಳೆದು ಜೀವ, ಜಂಜಡವ ಮಾಣಿಸಿ, ಮಾಯೆಯ ಮದವನ್ನು

ಕರಗಿಸಿ, ಕರುಣಿಸು ಎಂದು ಭಿನ್ನವಿಸಿಕೊಳ್ಳುತ್ತಾಳೆ. ಇರುಳಲ್ಲಿ ಒಸರಿಸಿದ ಜಕ್ಕವಕ್ಕಿಯಂತೆ ಪರಮಾತ್ಮನ ಪಾದವನಿಂಬುಗೊಂಡು ಸುಖಿಯಾದೆ ಎಂಬ ಸಮಾಧಾನವಿದೆ. ಸಮಾಜವನ್ನು ಕುರಿತು ಅಕ್ಕ ಮಾತನಾಡುತ್ತಾಳೆ. ಢಾಂಬಿಕರನ್ನು ವೇಷಧಾರಿಗಳನ್ನು ಕುರಿತು ಹೇಳುತ್ತಾಳೆ ಪ್ರತಿ ಯೊಬ್ಬ ವ್ಯಕ್ತಿ ಒಂದಲ್ಲ ಒಂದು ರೀತಿಯಲ್ಲಿ ಮೋಹಕ್ಕೆ ಒಳಗಾಗುತ್ತಾನೆ. ಬತ್ತೀಸ್ ಪಾಶ ಭ್ರಮೆಗೆ ಒಳಗಾಗಿ ಶಿವನ ಆಪ್ತರಾದರೆಂದು ಹೇಳಿಕೊಳ್ಳುವವರ ಕಂಡು ಅಕ್ಕನ ಮನ ನಾಚುತ್ತದೆ. ಅಂಥವರ ಸಂಗದಿಂದ ದೂರ ವಿರಿಸು ಎಂಬ ಬೇಡಿಕೆ ಅಯ್ಯ ಸರ್ವ ಮೂಲಾಹಂಕಾರವಿಡಿದು....' ಎಂಬ ವಚನದಲ್ಲಿದೆ. ಪರಮಾತ್ಮನಿಗೆ ನಿನ್ನರಿಕೆಯ ನರಕವೇ ಮೋಕ್ಷ ನಿನ್ನನರಿಯದ ಮುಕ್ತಿಯೇ ನರಕ ಎಂದು ಭಗವಂತನನ್ನು ಒಮ್ಮನದಿಂದ ನಂಬಿದ ವಿಶಿಷ್ಟ ವ್ಯಕಿತ್ವವೇ ಮಹಾದೇವಿಯಕ್ಕನದಾಗಿದೆ. ಎಂದು ವಿವರಿಸಿದ್ದಾರೆ.

ಶ್ರೀ ಸ್ವಾಮಿಲಿಂಗಾನಂದರು ಬರೆದಿರುವ 'ಅಕ್ಕನ ಪ್ರವಚನ' ಎಂಬ ಕೃತಿಯಲ್ಲಿ ಅಕ್ಕನ ಜೀವನ ಮತ್ತು ವಚನಗಳನ್ನು ಕುರಿತು ವಿವೇಚಿಸಲಾಗಿದೆ. ಈ ಕೃತಿಯಲ್ಲಿ ೩೧ ಅಧ್ಯಾಯಗಳಿದ್ದು, ಅಕ್ಕನ ಅವತಾರ ಎಂಬ ಮೊದಲ ಅಧ್ಯಾಯದಿಂದ ಕದಳಿಬನದಲ್ಲಿ ಲಿಂಗೈಕ್ಯ ಎಂಬ ಕೊನೆಯ ಅಧ್ಯಾಯದವರೆಗೆ ಅಕ್ಕನ ಜೀವನವನ್ನು ಚಿತ್ರಿಸಿದ್ದಾರೆ. ಅಕ್ಕನ ಬಾಲ್ಯ, ಗುರುವಿನ ಮಾರ್ಗದರ್ಶನ, ಸಾವಿಲ್ಲದ ಗಂಡನ ಪಡೆದದ್ದು ಲೋಕದ ಸ್ತುತಿ ನಿಂದೆಗಳಿಗೆ ಕಿವುಡಾಗಿ, ಹರನನ್ನು ಪಡೆಯಬೇಕೆಂಬ ಹಂಬಲದಲ್ಲಿ ತೊಳಲಾಡಿದವಳು. ಶಿವನು ತನ್ನ ವಿನೋದಕ್ಕೆ ಸಕಲ ಜೀವರಾಶಿಯನ್ನು ಸೃಷ್ಟಿಸಿ ಅವರೆಲ್ಲರನ್ನು ತನ್ನಿಚ್ಚೆಯಂತೆ ಆಡಿಸಿ ಮತ್ತೆ ತಾನೇ ಜೀವದ ಮಾಯಾ ಪಾಶವನ್ನು ಪೊರೆಯುತ್ತಾನೆ. ಅದೇ ರೀತಿ ೩೨ ವಿಧದ ಭ್ರಮಿತರನ್ನು ನೋಡ ಲಾರದ ನುಡಿಸಲಾರದ ಅಕ್ಕ ಮಹಾದೇವಿಯೂ ರಾಜಭೋಗಕ್ಕೆ ಮೋಹಮಾಡಿ ರಾಜನನ್ನು ಲಗ್ನವಾಗುವುದು ಅಸಾಧ್ಯದ ಮಾತಾಗಿದೆ. ಅಕ್ಕ, ಅರಮನೆಯಿಂದ ನಿರ್ಗಮಿಸುವಾಗ "ಎನ್ನ ಮಾಯದ ಮದವ ಮುರಿಯಯ್ಯ.................ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ" ಎಂಬಲ್ಲಿ ಎನ್ನ ಕಾಯದ ಕತ್ತಲೆ ಮಾಯದ ಮದ ಜೀವದ ಜಂಜಡ ಆರ್ಥಾತ್ ಮಲತ್ರಯಗಳನ್ನು ಕಳೆದು ಎನ್ನನುಳಿಸಿಕೊಳ್ಳಬೇಕೆಂದೂ ಈ ಸುತ್ತಿದ ಪ್ರಪಂಚವನ್ನು ಬಿಡಿಸಿ, ಕಾಪಾಡು ಎಂದು ಅಕ್ಕ ಬೇಡುತ್ತಾಳೆ. ಕಲ್ಯಾಣದತ್ತ ಪಯಣ ಬೆಳೆಸಿದ ಅಕ್ಕ ಉಡುತಡಿಯಿಂದ ಬಹುದೂರ ಬಂದಳು. ಪ್ರಕೃತಿ ಸಹಜ ಹಸಿವು–ತೃಷೆಗಳಿಗೆ ಸ್ಪಂದಿಸಿದಳೆಂದರೆ ಮಾಯೆ ಆವೃತವಾದಂತೆ. ಮಾಯದ ಸಂಸಾರದಲ್ಲಿ ಸಿಲುಕಿದೆನು ಇದರಿಂದ ಬಿಡಿಸು ಎಂದು ಪ್ರಾರ್ಥನೆಗೈದಿದ್ದಾಳೆ. ಭವದ ಬಂಧನವನ್ನು ಹರಿದೊಗೆದು ಹೊನ್ನು, ಮಣ್ಣಿನ ಮಾಯೆಯ ಮಾಣಿಸಿದೆನವ್ವ ಎಂಬ ಮಾತು ಅಕ್ಕನನ್ನು ತಡೆದು ಮಾತನಾಡಿಸಿದವರಿಗೆ ಹೇಳಿದ್ದಾಳೆ. ಚನ್ನಮಲ್ಲಿಕಾರ್ಜುನನಲ್ಲಿ ಒಂದಾದವಳ ನುಡಿಸಿ ಪ್ರಯೋಜನವಿಲ್ಲ. ಅನುಭವ ಮಂಟಪದಲ್ಲಿ

ಅಕ್ಕ-ಪ್ರಭುವಿನ ಸಂವಾದದಲ್ಲಿ ಅಕ್ಕನ ವ್ಯಕ್ತಿತ್ವ ಅನಾವರಣ ಗೊಂಡಿದೆ. ಅಕ್ಕ-ಅಣ್ಣನ ಸಂವಾದದಲ್ಲಿ ಅಕ್ಕ ಶಿವಾನುಭವ ಪರೀಕ್ಷೆ ಮಾಡುತ್ತಾಳೆ. ಅಂಗದೊಳಗೆ ಅಂಗವಾಗಿ ಅಂಗಲಿಂಗೈಕ್ಯವ ಮೂಡಿದೆ ಮನದೊಳಗೆ ಮನವಾಗಿ ಮನದ ಲಿಂಗೈಕ್ಯವ ಮೂಡಿದೆ....... ಚೆನ್ನಮಲ್ಲಿಕಾರ್ಜುನೊಳಗೆ ನಾನಳಿದೆನಾಗಿ ಅಂಗದ ದುರ್ಗಣಗಳನ್ನು ಪ್ರಸಾದ ಕಾಯದಿಂದ ಗೆದ್ದು ಕೊನೆಗೆ ಉಭಯವನ್ನು ಲಿಂಗೈಕ್ಯ ಮಾಡಿಕೊಂಡಿದ್ದಾಳೆ ಎಂದು ಹೇಳಿದ್ದಾಳೆ. ಕಾಯಗುಣವನಳಿದು ಜೀವನ್ಮುಕ್ತವಾದ ಬಳಿಕ ಸಮ್ಯಕ್ ಜ್ಞಾನವೆಂಬ ಶಾಂತಿ ದೊರೆಕೊಂಡಿತು ಅಂತರಂಗ ಬಹಿರಂಗಗಳೆರಡು ಒಂದೇ ಆದವು. ತನುವಿನೊಳಗಿದ್ದು ತನುವ ಗೆದ್ದಳು..... ಅಂಗಸಂಗವ ತೊರೆದು ಭವವ ಗೆದ್ದಳು ಎಂಬಲ್ಲಿ ಅಕ್ಕನ ಮೇರು ವ್ಯಕ್ತಿತ್ವ ಅನಾವರಣಗೊಂಡಿದೆ.

ಡಾ.ಶಾಂತಾ ಇಮ್ರಾಪುರವರು 'ಅಕ್ಕಮಹಾದೇವಿಯ ಜೀವನ ಸಾಹಿತ್ಯ ವ್ಯಕ್ತಿತ್ವ ಮತ್ತು ಪ್ರಭಾವ ಮುದ್ರೆ' ತಮ್ಮ ಸಂಶೋಧನಾ ಕೃತಿಯಲ್ಲಿ ಅಕ್ಕನ ಜೀವನ ಹಾಗೂ ಸಾಹಿತ್ಯ ಅಧ್ಯಯನ ಮಾಡಿದ್ದಾರೆ. ಒಟ್ಟು ಆರು ಅಧ್ಯಾಯಗಳಲ್ಲಿ ಭಾರತೀಯ ಸಂಸ್ಕೃತಿ, ಹಿನ್ನೆಲೆ, ಶಿವಶರಣರು ಮತ್ತು ಮಹಿಳೆ ಅಕ್ಕನ ಕುರಿತು ರಚನೆಯಾದ ಪಠ್ಯಗಳ ಮೂಲಕ ಅಕ್ಕನ ವ್ಯಕ್ತಿತ್ವವನ್ನು ಗುರುತಿಸಿದ್ದಾರೆ. ಸಂಕೀರ್ಣ ಸಾಮಾಜಿಕ ಸಂದರ್ಭದಲ್ಲಿ ಅಕ್ಕನ ಜೀವನವನ್ನು ಅಲ್ಲಮಪ್ರಭು ಬಸವಣ್ಣ, ಚೆನ್ನಬಸವಣ್ಣನಂತಹ ಅನುಭಾವಿಗಳ ಮೂಲಕ ಗುರುತಿಸಿದ್ದಾರೆ. ಅಕ್ಕನ ಸ್ವರಚಿತ ಕೃತಿಗಳ ವಿಶ್ಲೇಷಣೆ ಮಾಡಲಾಗಿದೆ. ಅಕ್ಕನ ಕೃತಿಗಳಲ್ಲಿ ವ್ಯಕ್ತವಾದ ಅನುಭಾವ-ಅನುಭೂತಿದರ್ಶನ ಸಂದೇಶಗಳನ್ನು ಆಧ್ಯಾತ್ಮಸಿದ್ಧಿಯ ಔನತ್ಯವನ್ನು ವಿವರಿಸಿದ್ದಾರೆ. ಅಕ್ಕನ ವಚನಗಳಲ್ಲಿ ಆತ್ಮನಿವೇದನೆ, ಭಕ್ತಿ, ವೈರಾಗ್ಯ, ಸತಿ-ಪತಿ ಭಾವ, ವಿಕಳಾವಸ್ಥೆ, ಸಮರಸ, ಧರ್ಮತತ್ವ ಸಮಾಜ ದರ್ಶನ, ಸ್ತುತಿ ಇವೆಲ್ಲ ಅಂಶಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಶರಣರ ಸಮಾಜೋ-ಧಾರ್ಮಿಕ ಕ್ರಾಂತಿಗೆ ಅಂದಿನ ಸ್ತ್ರೀ ಸಮಾಜದ ಪ್ರತಿಕ್ರಿಯೆ ಹಾಗೂ ಶರಣೆಯ ಸಾಹಿತ್ಯದಲ್ಲಿ ಮೂಡಿ ಬಂದ ವೈಚಾರಿಕ ತೀಕ್ಷ್ಣ ಧೋರಣೆಗಳು ಅಭಿವ್ಯಕ್ತಗೊಂಡ ಬಗೆಯನ್ನು ಗುರುತಿಸಿದ್ದಾರೆ.

ಮಾಯೆ ಕಾಯ-ಪ್ರಾಣ-ಮನಗಳಿಗೆ ನೆಳಲಾಗಿ, ಮನವಾಗಿ, ನೆನಹಾಗಿ, ಅರುಹಾಗಿ ಕಾಡುವ ಮಾಯೆಯ ಕಾಟಕ್ಕೆ ಬೇಸತ್ತ ಅಕ್ಕ ಮಾಯೆಯ ಮಾಣಿಸೆಂದು ಬೇಡುತ್ತಾಳೆ. ಧರ್ಮದ ತಾತ್ವಿಕ ನೆಲೆಯಲ್ಲಿ ಭಗವಂತನೇ ಮಾಯೆಯನ್ನು ಸೃಷ್ಟಿಸಿ ಮತ್ತೆ ತಾನೆ ಪರಿಹರಿಸುತ್ತಾನೆ. ಆತ್ಮನು ಪರಮಾತ್ಮನ ಶಕ್ತಿ ಸಮನ್ವಿತನಾಗುತ್ತಾನೆ. ಹೀಗೆ ಆತ್ಮರುಗಳನ್ನು ಪ್ರವೃತ್ತಿಯಲ್ಲಿ ತೊಡಗಿಸಿ ನಂತರ ಸ್ವಇಚ್ಛೆಯಿಂದಲೇ ಅವರನ್ನು ನಿವೃತ್ತಿಯಲ್ಲಿ ನಿಲ್ಲಿಸಿ ಲಿಂಗದಲ್ಲಿ ಲಯಗೊಳಸಿಕೊಳ್ಳುವ ಪರಮಾತ್ಮನ ಲೀಲಾ ವಿನೋದವನ್ನು 'ತನ್ನ ವಿನೋದಕ್ಕೆ ತಾನೆ ಸೃಜಿಸಿದ ಜಗತ್ತು' ಎಂಬ ವಚನದ ಮೂಲಕ ಜಗತ್ತು ಮಾಯೆ ಎಂಬಂತೆ

ಹೇಳಿದ್ದಾಳೆ.

ಅಕ್ಕನ ವಚನಗಳಲ್ಲಿ ಸಮಾಜದರ್ಶನ ಮಾಡುತ್ತಾ ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ ಎಂಬಲ್ಲಿ ಆತ್ಮತತ್ವವನ್ನು ಒಪ್ಪಿದ ಶರಣ ಧರ್ಮದಲ್ಲಿ ಹೆಣ್ಣು ಗಂಡೆಂಬ ಲಿಂಗ ಭೇದವಾಗಲೀ, ಮಾಯೆ–ಮರಹಿನ ಮಾತಾಗಲೀ ಸಲ್ಲದೆನ್ನುವ ಸಮನ್ವಯ ಸೂತ್ರವನ್ನು ಅಕ್ಕನ ವಚನದ ಮೂಲಕ ಗುರುತಿಸಿದ್ದಾರೆ. ಚನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆ–ಮರಹು ಅಭಿಮಾನಗಳಾವೂ ಇಲ್ಲ ಎಂಬ ಅಕ್ಕನ ಮಾತಿನಲ್ಲಿ ಸ್ವಾನುಭವವಿದೆ.

ಡಾ.ಎಂ.ಎಸ್.ಶೇಖರ ಸಂಪಾದಿತ 'ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾನವಪರ ಧೋರಣೆಗಳು' ಎಂಬ ಕೃತಿಯಲ್ಲಿ ವಚನಕಾರ್ತಿಯರ ಕುರಿತು ಮಾತನಾಡುವಾಗ ಅಕ್ಕಮಹಾದೇವಿಯ ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ ಎಂಬ ವಚನವನ್ನು ಮಹಿಳಾಪರ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. ಲೋಕದಲ್ಲಿ ಗಂಡು–ಹೆಣ್ಣು, ಇಬ್ಬರೂ ಸರಿಸಮಾನರು ಆಧ್ಯಾತ್ಮಿಕ ಸಾಧನೆ ಗಂಡು ಹೆಣ್ಣಿಗೆ ಬೇರೆಯಲ್ಲ ಎನ್ನುತ್ತಾಳೆ. ಅಕ್ಕ ಸಂಸಾರವನ್ನು ತ್ಯಜಿಸಿ ಚೆನ್ನನೆಂಬ ಪರಮಾತ್ಮನ ಅಲೌಕಿಕ ಸತಿಯಾದಳು ಎಂಬುದು ಈ ವಚನಕ್ಕೆ ಪೂರಕವಾಗಿದೆ.

ಡಾ.ವಿಜಯಕುಮಾರ ಮಹಾನುಭಾವಿಗಳು ಬರೆದ 'ಅಕ್ಕಮಹಾದೇವಿಯವರ ವಚನ ವ್ಯಾಖ್ಯಾನ' ಎಂಬ ಕೃತಿಯಲ್ಲಿ ೨೭೨ ವಚನಗಳನ್ನು ಶಬ್ದಾರ್ಥ ಸಹಿತ ವಿಶ್ಲೇಷಿಸಿದ್ದಾರೆ. ಶೂನ್ಯ ಸಂಪಾದನೆಗಳನ್ನು ಆಕರವಾಗಿ ಗಮನಿಸಿದ್ದಾರೆ. ಅಕ್ಕನ ವಚನಗಳಲ್ಲಿ ಸಾರಾರ್ಥವನ್ನು ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಪ್ರಸ್ತುತದಲ್ಲಿ ನಿಂತು ವಿಶ್ಲೇಷಿಸಿದ್ದಾರೆ. ಸಾಂದರ್ಭಿಕವಾಗಿ 'ಅತ್ತೆ ಮಾಯೆ ಮಾವ ಸಂಸಾರಿ' ಎಂಬ ವಚನ ಮತ್ತು 'ಬಸವನ ಭಕ್ತಿ ಕೊಟ್ಟಣದ ಮನೆ' ಎಂಬ ವಚನಗಳನ್ನು ವಿಶ್ಲೇಷಣೆಗೆ ಆಯ್ದುಕೊಂಡಿಲ್ಲ. ಉಳಿದಂತೆ ಎಲ್ಲ ವಚನಗಳು ಅರ್ಥೈಯಿಸಲಾಗಿದೆ.

ಷಣ್ಮುಖಯ್ಯ ಅಕ್ಕೂರಮಠ ಅವರ 'ವಚನಕಾರರ ಪ್ರಮುಖ ಪರಿಕಲ್ಪನೆಗಳು' ಎಂಬ ಸಂಪಾದಿತ ಕೃತಿಯಲ್ಲಿ 'ಮಾಯೆ' ಎಂಬ ಪರಿಕಲ್ಪನೆಯ ಕುರಿತು ಶ್ರೀಮತಿ ಜಗದಂಬಾ ಮಲ್ಲೇದೇವರು ವಿವರಿಸಿದ್ದಾರೆ. ಮಾಯೆ ಅರ್ಥ ಉಪನಿಷತ್ ಆದಿಯಾಗಿ ಆಧ್ಯಾತ್ಮಿಕ ದಾರ್ಶನಿಕರ ಮತ್ತು ವಚನಕಾರರ ದೃಷ್ಟಿಯಲ್ಲಿ ನಿರೂಪಿತಗೊಂಡಿರುವದನ್ನು ಕಾಣಬಹುದಾಗಿದೆ. ಮಾಯೆ ಪರಮಾತ್ಮ ನಿರ್ಮಿತ ಎಂಬುದನ್ನು ತನ್ನ ವಿನೋದಕ್ಕೆ ತಾನೆ ಸೃಷ್ಟಿಸಿದ ಸಕಲ ಪ್ರಪಂಚವನ್ನು ಎಂಬ ವಚನದ ಜೊತೆಗೆ ತೋಂಟದ ಸಿದ್ಧಲಿಂಗ ಯತಿಗಳ ವಚನವನ್ನು ಆಧರಿಸಿ ವಿವರಿಸುತ್ತಾರೆ. ಮಾಯೆಯ ಪ್ರಾಬಲ್ಯವನ್ನು ಹೇಳುವಲ್ಲಿ ಅಕ್ಕನ ವಚನವನ್ನು ವಿಶ್ಲೇಷಿಸುತ್ತಾರೆ. ಆಸೆಯೇ ಮೂಲ ಎಂಬಲ್ಲಿ ಕಪ್ಪೆ ಸರ್ಪನ ನೆರಳಿನಲ್ಲಿಪ್ಪಂತೆ

ಮಾನವನು ಮಾಯೆ ನೆರಳಿನಲ್ಲಿ ಅದೇ ಸತ್ಯವೆಂದು ನಂಬಿ ಬದುಕುತ್ತಿದ್ದಾನೆ. ಮಾಯೆ ಕುರಿತು ಬಸವಣ್ಣನವರು ಅಂಬಿಗರ ಚೌಡಯ್ಯ, ಚೆನ್ನಬಸವಣ್ಣ ಮುಂತಾದವರ ವಚನಗಳನ್ನು ಗಮನಿಸಿಕೊಂಡಿದ್ದಾರೆ.

ಡಾ.ಎಂ.ಎಸ್.ಲಠ್ಠೆಯವರ 'ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ' ಸಂಶೋಧನಾ ಕೃತಿಯಲ್ಲಿ ತೌಲನಿಕ ಅಧ್ಯಯನ ಕೈಗೊಳ್ಳಲಾಗಿದೆ. ಮಹಾದೇವಿಯಕ್ಕನವರ ಹಾಗೂ ಕಾರಿಕಾಲಮ್ಮೆಯವರ ವೈಯಕ್ತಿಕ ಜೀವನವನ್ನು ಸಾಹಿತ್ಯಿಕ ಪಠ್ಯಗಳ ಮೂಲಕ ಕಟ್ಟಿಕೊಡುತ್ತಾರೆ. ಕೊನೆಯಲ್ಲಿ ಇಬ್ಬರನ್ನು ತೌಲನಿಕವಾಗಿ ಭಕ್ತಿ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಅಕ್ಕನವರ ವೈಯಕ್ತಿಕ ಜೀವನವನ್ನು' ಹರಿಹರ, ಚನ್ನಬಸವಾಂಕನ 'ಮಹಾದೇವಿ ಯಕ್ಕನ ಪುರಾಣ' ಎಳಂದೂರ ಹರೀಶ್ವರನ 'ಪ್ರಭುದೇವರ ಪುರಾಣ', ರಾಚಕವಿಯ 'ಮಹಾದೇವಿಯಕ್ಕನ ಸಾಂಗತ್ಯ', 'ಶಿವಶರಣರ ವಚನಗಳು', 'ಶೂನ್ಯಸಂಪಾದನೆಗಳು', 'ಚನ್ನಬಸವ ಪುರಾಣ', 'ಸೋಮೇಶ್ವರ ಪುರಾಣ', ಹಾಗೂ ವೀರಶೈವ ಪುರಾಣಗಳನ್ನು ಅನುಲಕ್ಷಿಸಿ ಅಕ್ಕನ ಕಾಲ, ಹುಟ್ಟು ಕೌಶಿಕನೊಂದಿಗೆ ಮದುವೆ, ಕಲ್ಯಾಣದತ್ತ ಪಯಣ ಅಲ್ಲಿಂದ ಕದಳಿಯತ್ತ ಪಯಣ ಕೈಗೊಂಡು ಆಧ್ಯಾತ್ಮಿಕ ಸಾಧನೆ ಮಾಡಿ ಚೆನ್ನಮಲ್ಲಿಕಾರ್ಜುನಲ್ಲಿ ಐಕ್ಯಳಾದ ಚಿತ್ರಣವನ್ನು ವಿವರಿಸಿದ್ದಾರೆ. ಸಾಂದರ್ಭಿಕವಾಗಿ ಅಕ್ಕ ಸಂಸಾರವನ್ನು ತ್ಯಜಿಸಿ ಆಧ್ಯಾತ್ಮಿಕ ಸಂಸಾರಿಯಾದಳು ಎಂಬಲ್ಲಿ ಮಾಯೆ ಎಂಬುದು ಅತ್ತೆಯಾಗಿದೆ ಎಂದು 'ಷಟಸ್ಥಲ ಮಾರ್ಗದನ್ವಯ ಕರದ ಇಷ್ಟಲಿಂಗವನ್ನು ಏಕಾಗ್ರ ಚಿತ್ತದಿಂದ ಪೂಜಿಸಿ ತನ್ನ ತಾನರಿಯುವ ಸಾಧನೆಗೆ ಚಿಕ್ಕಂದಿನಿಂದಲೂ ತೊಡಗಿದ ಅಕ್ಕ ತನ್ನ ವಿನೋದಕ್ಕೆ ಸೃಷ್ಟಿಸಿದ ಸಕಲ ಪ್ರಪಂಚವನ್ನು ಅರಿತು ಜಗದ್ವಿಲಾಸ ಸಾಕಾದಾಗ ಆ ಮಾಯೆ ಪಾಶವನ್ನು ಜಗನ್ನಿಯಾಮಕನಾದ ಶಿವನು ಹರಿದು ಹಾಕುವನೆಂದು ಮನಗಂಡವಳು ಎಂದು ಮಾಯೆ ಕುರಿತು ಸಾಂದರ್ಭಿಕವಾಗಿ ವಿವರಿಸಿದ್ದಾರೆ.

ಡಾ.ವಿ.ಕಮಲಮ್ಮ ಅವರ 'ಅಕ್ಕಮಹಾದೇವಿಯ ಜೀವನ ಮತ್ತು ಕೃತಿಗಳು' ಎಂಬ ಸಂಶೋಧನಾ ಕೃತಿಯಲ್ಲಿ ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಅಕ್ಕನ 'ಜೀವನಚರಿತ್ರೆ-ಉತ್ತರಘಟ್ಟ' ದಲ್ಲಿ ಅಕ್ಕನ ಕುರಿತು ಹರಿಹರ, ಚಾಮರಸ, ರಾಚಕವಿ ಅವರು ಬರೆದ ಕೃತಿಗಳಲ್ಲಿ ಅಕ್ಕ ಕಲ್ಯಾಣದಿಂದ ಹೊರಟುಹೋಗಿ ಶ್ರೀಗಿರಿಯಲ್ಲಿ ಐಕ್ಯಳಾಗುವ ಸನ್ನಿವೇಶದ ಚಿತ್ರಣವಿದೆ. ಅನುಭವ ಮಂಟಪದಲ್ಲಿ ಮಹಾದೇವಿ ಎಂಬ ಭಾಗದಲ್ಲಿ ಅಲ್ಲಮಪ್ರಭುವಿಗೆ ಮತ್ತು ಅಕ್ಕನಿಗೆ ನಡೆಯುವ ಸಂವಾದವನ್ನು ವಿವರಿಸಿದ್ದಾರೆ. ಮಹಾದೇವಿಯು ಚನ್ನಮಲ್ಲಿಕಾರ್ಜುನನ್ನು ಹುಡುಕುತ್ತ ಶ್ರೀಶೈಲದ ಭಯಂಕರ ಕಾಡಿನಲ್ಲಿ ಸುತ್ತಾಡಿರುವಂತೆ ಉಲ್ಲೇಖಗೊಂಡ ವಚನಗಳನ್ನು ಉಲ್ಲೇಖಿಸಲಾಗಿದೆ. 'ಅಕ್ಕಮಹಾದೇವಿ' ಕೃತಿಯಲ್ಲಿ ಅಕ್ಕನ ಜೀವನವನ್ನು ಲೌಕಿಕ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ವಿವರಿಸಿದ್ದಾರೆ.

'ಅಕ್ಕನ ಆತ್ಮಶೋಧನೆ' ಎಂಬ ಅಧ್ಯಾಯದಲ್ಲಿ ಅಕ್ಕನ ಜೀವನದ ಗತಿ ಹಾಗೂ ವಚನಗಳನ್ನು ಹೋಲಿಸಿ ನೋಡಿದ್ದಾರೆ. ಆಯ್ದ ವಚನಗಳನ್ನು ಉಲ್ಲೇಖಿಸಿ ವಿಶ್ಲೇಷಿಸಿದ್ದಾರೆ. 'ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು' ವಚನವನ್ನು ವಿಶ್ಲೇಷಿಸುತ್ತಾ ಲೌಕಿಕ ಜಂಜಾಟಗಳಲ್ಲಿ ಸಿಲುಕಿ ಅನೇಕ ದೌರ್ಬಲ್ಯಗಳಿಂದ ತೊಳಲಾಡುತ್ತಿದ್ದೇನೆ ಎಂಬ ಆರ್ತನಾದ ವಚನದಲ್ಲಿದೆ. ತನು-ಮನ ಶುದ್ಧತೆಯ ಅಗತ್ಯತೆ, ತಂದೆ-ತಾಯಿ, ಕೌಶಿಕ ಹಾಗೂ ಸಾಮಾನ್ಯ ಜನರನ್ನೊಳಗೊಂಡ ಸಮಾಜಕ್ಕೆ ದಿಟ್ಟೆಯಾಗಿ ಅಲೌಕಿಕ ವ್ಯಕ್ತಿಯಾಗಿ ವೈಚಾರಿಕ ನಿಲುವಿನ ಶಕ್ತಿಯಾಗಿ ಕಾಣುತ್ತಾಳೆ ಎಂಬುದು ವಚನಗಳ ಮೂಲಕ ವಿವರಿಸಲಾಗಿದೆ.

ಅಕ್ಕಮಹಾದೇವಿ ವಚನಗಳಲ್ಲಿ ದೌರ್ಬಲ್ಯಗಳಿಗೆ ಸಂವಾದಿಯಾಗಿ 'ಮಾಯೆ' ಕಲ್ಪನೆ ಮೂಡಿ ಬಂದಿರುವುದನ್ನು 'ಕಾಯಕ್ಕೆ ನೆಳಲಾಗಿ, ಪ್ರಾಣಕ್ಕೆ ಮನವಾಗಿ'

'ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನ......'

'ಬಿಟ್ಟನೆಂದರೆ ಬಿಡದೀ ಮಾಯೆ ಬಿಡದಿದ್ದರೆ..........'

'ಹರಿಯ ನುಂಗಿತ್ತು ಮಾಯೆ...' ಎಂಬ ವಚನಗಳ ಮೂಲಕ ಅರ್ಥೈಯಿಸಿದ್ದಾರೆ. ಒಟ್ಟಾರೆ ಅಕ್ಕನ ವಚನಗಳ ಬಹು ನೆಲೆಗಳನ್ನು ಅವಲೋಕಿಸಿದ್ದಾರೆ.

ಶ್ರೀ ಜಯದೇವಪ್ಪ ಜೈನಕೇರಿ ಅವರ 'ಸಾಹಿತ್ಯ ಸೌರಭ' ಎಂಬ ಕೃತಿಯಲ್ಲಿ ಅನುಭಾವಿಕ ನೆಲೆಯಲ್ಲಿ ಅಕ್ಕಮಹಾದೇವಿ ಎಂಬ ವಿಷಯದ ಕುರಿತು ಚರ್ಚಿಸಿದ್ದಾರೆ. ಶರಣರ ಸಮೂಹದಲ್ಲಿ ವಿಶಿಷ್ಟ ಸ್ಥಾನ ಪಡೆದ ಅಕ್ಕಮಹಾದೇವಿ ಅನುಭಾವವನ್ನು ವಿವರಿಸಿದ್ದಾರೆ. ತಾನೊಪ್ಪಿದ ಚನ್ನಮಲ್ಲಿಕಾರ್ಜುನನನ್ನು ಪತಿಯಾಗಿಸಿ ಕೊಂಡವಳು. ಅಕ್ಕ ಅನುಭವ ಮಂಟಪದಲ್ಲಿ ಸಂವಾದಿಸಿದ ಬಗೆ ಅವಳನ್ನು ಮೇರು ವ್ಯಕ್ತಿತ್ವವನ್ನಾಗಿಸಿದೆ. ಶೂನ್ಯಸಂಪಾದನೆಗಳ ಮೂಲಕ ರಂ.ಶ್ರೀ ಮುಗಳಿ ಮತ್ತು ಎಂ.ಆರ್.ಶ್ರೀ ಅವರ ಅಭಿಪ್ರಾಯ ಆಧರಿಸಿ ಅಕ್ಕನ ಮದುವೆ ಆದ ಬಗ್ಗೆ ಚರ್ಚಿಸುತ್ತಾರೆ. ಅಂದಿನ ಪುರುಷ ಪ್ರಧಾನ ಸಮಾಜದ ಸಂಪ್ರದಾಯಗಳನ್ನು ಧಿಕ್ಕರಿಸಿದ ಅಕ್ಕ, ಪರ್ಯಾಯ ವ್ಯವಸ್ಥೆಯಾಗಿ ಚನ್ನಮಲ್ಲಿಕಾರ್ಜುನನನ್ನು ಪತಿಯಾಗಿಸಿಕೊಳ್ಳುತ್ತಾಳೆ. ಸಾಮಾಜಿಕ ಸಂಪ್ರದಾಯ, ಕಟ್ಟು-ಪಾಡುಗಳ ಮಧ್ಯೆ ಅಕ್ಕ ಕಂಡುಕೊಂಡ ಆಧ್ಯಾತ್ಮಿಕ ನೆಲೆಯನ್ನು ವಿವರಿಸಿದ್ದಾರೆ.

'ಅರ್ಚನ' ಎಂಬ ಸಂಪಾದಿತ ಕೃತಿಯಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು 'ಅಕ್ಕಮಹಾದೇವಿ' ಎಂಬ ಲೇಖನದಲ್ಲಿ ಅಕ್ಕನ ಬಾಲ್ಯ, ಚನ್ನಮಲ್ಲಿಕಾರ್ಜುನನನ್ನು ಪತಿಯೆಂಬ ಸಂಕಲ್ಪ ಮಾಡಿದ್ದು, ಕಲ್ಯಾಣಕ್ಕೆ ಬಂದದ್ದು, ಶ್ರೀಶೈಲಕ್ಕೆ ಹೋಗಿ ಸಿದ್ಧಿಯನ್ನು ಪಡೆದದ್ದು ಎಂಬ ನಾಲ್ಕು ಭಾಗಗಳಲ್ಲಿ ಅಕ್ಕನ ಜೀವನವನ್ನು ಚಿತ್ರಿಸಿದ್ದಾರೆ. ಅಕ್ಕಮಹಾದೇವಿ ಧೈರ್ಯಸ್ಥೈರ್ಯದ ಮೂರ್ತಿಯಾಗಿ ಅಹಿಂಸೆಯ ಪ್ರತಿಪಾದಕಗಳಾಗಿ ತಾರ್ಕಿಕಳಾಗಿ, ತತ್ವಜ್ಞಾನಿಯಾಗಿ ಅನುಭಾವಿಯಾಗಿ, ಕವಯತ್ರಿಯಾಗಿ, ಯೋಗಿಣಿಯಾಗಿ ತೋರಿದ್ದಾಳೆ.

ಕೊನೆಯಲ್ಲಿ ನೀನು ನಾನೆಂಬ ಉಭಯ ಸಂಗವಳಿದು ತಾನು ತಾನಾದ ಮೇಲೆ ತ್ರಿಕೂಟವೆಂಬ ಮಹಾಗಿರಿಯ ಮೆಟ್ಟಿ ತುತ್ತತುದಿಯ ನೋಡಲು ಬಟ್ಟಬಯಲು ಇರುವಲ್ಲಿ ಕಾಣದ ಕದಳಿಯ ಹೊಕ್ಕು ಸುಜ್ಞಾನಿಯಾದಳು ಮಹಾಯೋಗಿಣಿಯಾದಳು. ಪರಮಾತ್ಮನಲ್ಲಿ ಐಕ್ಯವಾದಳು.

'ವಚನ ಪಿತಾಮಹ' ಕೃತಿಯಲ್ಲಿ ಬಿ.ವಿ.ಗುಂಜೆಟ್ಟಿ ಅವರು 'ಹರಿಹರ ಕವಿ ಚಿತ್ರಿಸಿದ ಮಹಾದೇವಿಯಕ್ಕ' ಎಂಬ ಲೇಖನದಲ್ಲಿ ಹರಿಹರ ಕವಿಯ ಮೂಲಕ ವೈರಾಗ್ಯ ನಿಧಿಯೆನಿಸಿ ಕೊಂಡಿರುವ ಅಕ್ಕನ ಜೀವನ ಚಿತ್ರಣ ವನ್ನು ನಿರೂಪಿಸಿದ್ದಾರೆ. ಕೈಲಾಸದಲ್ಲಿ ಶಾಪಗ್ರಸ್ತಳಾದ ಅಕ್ಕ ಭೂಮಿಯಲ್ಲಿ ಮಹಾದೇವಿಯಾಗಿ ಅವತರಿಸಿದಳು. ಆಕೆ ಭವದಲ್ಲಿ ಹುಟ್ಟಿ ಭವಿಯೆನಿಸಿಕೊಳ್ಳದೆ ಚನ್ನಮಲ್ಲಿಕಾರ್ಜುನನೆಂಬ ಪರಮಾತ್ಮನ ಹುಡುಕಾಟ ನಡೆಸಿದಳು. ಅಕ್ಕಮಹಾದೇವಿ ಬಾಲ್ಯ ತಾರುಣ್ಯ ಕೌಶಿಕನೊಡನೆ ವಿವಾಹ, ಕರಾರುಗಳನ್ನು ಮುರಿದ ಕೌಶಿಕನನ್ನು ತ್ಯಜಿಸಿ ಪರಮಾತ್ಮನನ್ನು ಅರಸುತ್ತಾ, ಕಲ್ಯಾಣಕ್ಕೆ ಬಂದು ಮುಂದೆ ಶ್ರೀಗಿರಿಯತ್ತ ಸಾಗಿ ಅಲ್ಲಿಯೇ ಐಕ್ಯಳಾಗುವಳು. ಇಲ್ಲಿ ಒಟ್ಟು ಕಥಾ ಚಿತ್ರಣವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

'ಚಿತ್ರಾಭೆ' ಎಂಬ ಸಂಪಾದಿತ ಕೃತಿಯಲ್ಲಿ ಡಾ.ಎಂ.ಎಸ್.ಲಠ್ಠೆ ಅವರು ಬರೆದ 'ಮಹಾದೇವಿಯಕ್ಕನ ಯೋಗಾಂಗ ತ್ರಿವಿಧಿ' ಎಂಬ ಲೇಖನದಲ್ಲಿ 'ಯೋಗಾಂಗ ತ್ರಿವಿಧಿ' ಎಂಬ ಕಾವ್ಯ ಕೃತಿಯ ಕುರಿತು ಚರ್ಚಿಸಿದ್ದಾರೆ. ಯೋಗದ ಭಾಗವಾದ ಶಿವಯೋಗ ಸಾಧನೆಯ ಮೂಲಕ ಶಿವಜ್ಞಾನ ಸಂಪಾದನೆಯ ಗುರಿ ತೋರುತ್ತದೆ.

ವಿಮರ್ಶೆ–೧೯೯೩ ಎಂಬ ವಿಮರ್ಶಾಕೃತಿಯಲ್ಲಿ ಡಾ.ಟಿ.ಆರ್.ಚಂದ್ರಶೇಖರ ಅವರು ಬರೆದಿರುವ 'ಅಕ್ಕಮಹಾದೇವಿ ವಚನಗಳಲ್ಲಿ ಹೆಣ್ಣುತನ ಹಾಗೂ ಯಾತನೆಯ ಸ್ವರೂಪ' ಎಂಬ ಲೇಖನವನ್ನು ಗಮನಿಸಿದಾಗ ಅಕ್ಕನ ಹೋರಾಟದ ಸ್ವರೂಪವನ್ನು ಹೆಣ್ಣು ಎಂಬ ನೆಲೆಯಲ್ಲಿ ಗ್ರಹಿಸಿದ್ದಾರೆ. ಅಕ್ಕ ತನ್ನ ವಚನಗಳ ಮೂಲಕ ಹೆಣ್ಣಿನ ಸ್ವತಂತ್ರ ಅಸ್ತಿತ್ವವನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದ ಬಗೆ ನಿರೂಪಿತಗೊಂಡಿದೆ. ಈ ಲೇಖನದಲ್ಲಿ ಅಕ್ಕನನ್ನು ಸಾಮಾಜಿಕ ಸ್ತರದಲ್ಲಿ ನಿಂತು ನೋಡಲಾಗಿದೆ. ದೇಹವನ್ನು ಅಸ್ತ್ರವಾಗಿಸಿಕೊಂಡು ಸಾಮಾಜಿಕ, ಆಧ್ಯಾತ್ಮಿಕ ಹೋರಾಟ ನಡೆಸಿದವಳು. ಸಮಾಜ ಅಕ್ಕನನ್ನು ಶರಣೆಯಾಗಿ ನೋಡುವುದಕ್ಕಿಂತ ಹೆಚ್ಚಾಗಿ ಕೇವಲ ಹೆಣ್ಣಾಗಿ ನೋಡುತ್ತದೆ ಎಂಬುದನ್ನು ವಚನದ ಮೂಲಕ ಗುರುತಿಸಿದ್ದಾರೆ. ಅನುಭವ ಮಂಟಪದಲ್ಲಿ ಅಕ್ಕ ಹಾಗೂ ಅಲ್ಲಮನ ಸಂವಾದವನ್ನು ಸ್ತ್ರೀ ದೃಷ್ಟಿಕೋನದಿಂದ ವಿಮರ್ಶಿಸಿದ್ದಾರೆ. ದೇಹವು ಯಾತನೆ ವೇದನೆ ಅನುಭವಿಸುವುದರ ಮೂಲಕ ಇಂದ್ರಿಯಾಸಕ್ತಿಯನ್ನು ಗೆಲ್ಲಲಾಗಿದೆ ಎಂದು ವಚನಗಳಲ್ಲಿ ಗುರುತಿಸಿದ್ದಾರೆ. ಆ ಯಾತನೆಯನ್ನು ಅಕ್ಕ ಸ್ವಇಚ್ಛೆಯಿಂದ ಸ್ವೀಕರಿಸಿದ್ದಾಳೆ. ಅಕ್ಕನ ಆಧ್ಯಾತ್ಮಿಕ ಸಾಧನೆ ತನ್ನನ್ನು ತಾನು ದಂಡಿಸಿಕೊಳ್ಳುವುದರ ಮೂಲಕ ಆರಂಭವಾಗಿ ಲೌಕಿಕದಿಂದ ಅಲೌಕಿಕದೆಡೆಗೆ ಸಾಗಿದೆ.

ಅವಳ ಜೀವನ ಸಂಪೂರ್ಣವಾಗಿ ಕಳವಳ, ಸಂದೇಹ, ಉದ್ವಿಗ್ನತೆ, ಹುಡುಕಾಟ, ಹಂಬಲಗಳ ರೂಪಕವಾಗಿದೆ ಎಂದು ಹೇಳಿದ್ದಾರೆ.

ಡಾ.ಬಸವರಾಜ ಕಲ್ಗುಡಿ ಅವರ 'ಮಧ್ಯಕಾಲೀನ ಭಕ್ತಿ ಹಾಗೂ ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ' ಎಂಬ ಕೃತಿಯಲ್ಲಿ ಅಕ್ಕಮಹಾದೇವಿ–ಪ್ರೇಮ ಮತ್ತು ಕಾಮದ ಸಂಘರ್ಷ ಹಾಗೂ ಅನುಭಾವದ ಆಶಯ ಎಂಬ ವಿಷಯ ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ. ಈ ಅಧ್ಯಾಯದಲ್ಲಿ ೧) ದೇಹ ಮನಸುಗಳ ಛಿದ್ರತೆ ೨) ವಿಕೃತ ಕಾಮಕ್ಕೆ ಕಾರಣವಾದ ದೇಹದ ನಿರಾಕರಣೆಯ ಸ್ವರೂಪ ೩) ಅನುಭಾವದ ಆಶಯದಲ್ಲಿ ದೇಹ–ಮನಸ್ಸುಗಳ ಬಳಕೆಯ ಸ್ವರೂಪ ಎಂಬ ಮೂರು ಭಾಗಗಳಲ್ಲಿ ಅಕ್ಕನ ವಚನಗಳನ್ನು ಬಳಸಿ ವಿಶ್ಲೇಷಿಸಿದ್ದಾರೆ. 'ಎನ್ನ ಕಾಯ ಮಣ್ಣು ಜೀವ ಬಯಲು' ಎಂಬ ವಚನದಲ್ಲಿ ತನ್ನ ಬದುಕಿನಲ್ಲಿ ಏರ್ಪಟ್ಟ ಕಂದಕವನ್ನು ಮತ್ತು ಒಂದು ಕಡೆ ಲೌಕಿಕ ಬದುಕಿನ ನಿರಾಕರಣೆ ಇನ್ನೊಂದೆಡೆ ಆಧ್ಯಾತ್ಮಿಕ ಬದುಕಿನ ಸ್ವೀಕಾರ ಇವೆರಡರ ಮಧ್ಯೆ ಉಂಟಾದ ಅಂತರವನ್ನು ಸೂಚಿಸುತ್ತದೆ ಎಂದಿದ್ದಾರೆ. ಅನುಭಾವಿಗಳು ಕ್ಷಣಿಕವಾದ, ನಶ್ವರವಾದ, ಸಾವು ಬದುಕುಗಳೆ ಪ್ರಧಾನವಾದ ಲೌಕಿಕ ಜೀವನದ ಸ್ವರೂಪ ವನ್ನು ನಿರಾಕರಿಸುತ್ತಾರೆ. ಆ ಕಾರಣಕ್ಕಾಗಿಯೇ ತಾತ್ಕಾಲಿಕವಾದ ಈ ದೇಹ ಹಾಗೂ ಅದರೊಡಗೂಡಿದ ಎಲ್ಲ ಬಯಕೆ, ಆಶೆಗಳನ್ನೂ ಕೂಡಾ ತಿರಸ್ಕರಿಸುತ್ತಾರೆ. ಇವರ ಪ್ರಕಾರ ದೇಹದಿಂದ ಭಿನ್ನವಾದ ಆತ್ಮ ಅವಿನಾಶಿಯಾದದ್ದು. ಪರಿವರ್ತನೆಗೆ ಸಿಲುಕುವಂಥದ್ದು, ಆದ್ದರಿಂದಲೇ ದೇಹದ ಬಗ್ಗೆ ನಿರ್ಲಕ್ಷ್ಯ ಹಾಗೂ ಆತ್ಮದ ನಿಶ್ಚಿತ ಗುರಿ ಸಾಧನೆಯ ಅನುಭಾವಿ ಆಶಯಗಳು ಜಾಗೃತವಾಗುತ್ತವೆ ಎಂದು ವಿಶ್ಲೇಷಿಸಿದ್ದಾರೆ. ಲೋಕವು ಹೆಣ್ಣನ್ನು ಕುರಿತು ತಾಳಿದ ಅಭಿಪ್ರಾಯ ಆಲೋಚನೆಗಳಿಗೆ ಪ್ರತಿಕ್ರಿಯೆಯ ರೂಪದ ಅಭಿವ್ಯಕ್ತಿಯನ್ನು ಅಕ್ಕನ ವಚನಗಳಲ್ಲಿ ಗುರುತಿಸುತ್ತಾ ಹೋಗಿದ್ದಾರೆ. ಚನ್ನಮಲ್ಲಿಕಾರ್ಜುನನೊಡನೆ ಎರಡಿಲ್ಲದಂತೆ ಒಂದಾಗುವ ಆಶಯ ಇಲ್ಲಿಯ ಅಕ್ಕನ ವಚನಗಳಲ್ಲಿದೆ.

ಪ್ರೊ.ಲಲಿತಾಂಬ ವೃಷಭೇಂದ್ರಸ್ವಾಮಿ ಅವರ 'ವಚನಾಂಜಲಿ' ಕೃತಿಯಲ್ಲಿ ವಚನಕಾರರ ವಚನಗಳನ್ನು ಆಯ್ದು ಒಂದೊಂದನ್ನು ವಿಶ್ಲೇಷಿಸಲಾಗಿದೆ. 'ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ' ವಚನದಲ್ಲಿ ಮಾಯೆ ನಿರೂಪಿತಗೊಂಡ ಬಗೆ ವಿವರಿಸಲಾಗಿದೆ. ಲೋಕವೆಲ್ಲಾ ಮಾಯೆಯಿಂದ ಆವೃತ ಆಗಿದೆ. ಮಾಯೆಯ ಪ್ರಭಾವಕ್ಕೆ ಒಳಗಾಗಿ ಕ್ಷಣಿಕ ಸುಖದ ಸೆಳವಿಗೆ ಸಿಕ್ಕು ದುಃಖ ಸಾಗರದಲ್ಲಿ ಮುಳುಗಿ ಹೋಗುವರು. ಭುವನದ ಅಜ್ಞಾನಿಗಳು, ಜ್ಞಾನಿಗಳು ಯಾರನ್ನು ಈ ಮಾಯೆ ಬಿಡುವುದಿಲ್ಲ. ಮಾಯೆಯ ಹಿಡಿತಕ್ಕೆ ಸಿಕ್ಕದಿರುವವರು ಅಪರೂಪ. ಆದ್ದರಿಂದ ಅಕ್ಕ ತನ್ನನ್ನು ಅದರಿಂದ ಮುಕ್ತಗೊಳಿಸು ಎಂಬ ಪ್ರಾರ್ಥನೆ ಇದೆ ಎಂದಿದ್ದಾರೆ.

'ಎನ್ನ ನಾನಾರಿಯದಂದು ಮುನ್ನ ನೀನೇನಾಗಿದ್ದೆ ಹೇಳಾ' ಎಂಬ ವಚನದಲ್ಲಿ ಸಂವಾದರೂಪದ ವಿವರಣೆ ಇದೆ. ಸಂವಾದದ ಬೆಡಗು-ಬೆರಗುಗಳನ್ನು ಅರಿಯುವ ಪ್ರಯತ್ನವಿದೆ. ಇದರಲ್ಲಿ ಒಂದು ಭಾಷಿಕ ಸಂವಾದ. ಇನ್ನೊಂದು ಭಾಷೆಯ ಹಂಗಿಲ್ಲದ ನೋಟ ಮಾತ್ರವಿರುವ ಶುದ್ಧ ಅರಿವಿನ ಸಂವಾದ ಆಗಿದೆ. ನಾನು-ನೀನು ಎಂಬ ಭಾವವಿದ್ದಾಗ ಈ ಸಂವಾದ ಏರ್ಪಡುತ್ತವೆ. ನಾನು-ನೀನು ಒಂದೇ ಆದಾಗ ಮಾತು ಮೌನವಾಗುತ್ತದೆ. ಮೌನ ಮೂಡಿತೆಂದರೆ ವಾಸ್ತವದ 'ನಾನು' ಏನು ಎಂಬ ಅರಿವು ಮೂಡಿದಂತೆ ಜೀವ ಶಿವನ ನಡುವಿನ ಸಂವಾದ ವ್ಯರ್ಥವಾಗುತ್ತದೆ. ನಾವಿಬ್ಬರೂ ಒಂದಾದಾಗ ಮೂಡುವ ಸಂವಾದ ವಿಶೇಷವಾದದ್ದು ಎಂಬುದನ್ನು ವಿಶ್ಲೇಷಿಸಿದ್ದಾರೆ.

ಲಿಂಗಾಯತ ಅಧ್ಯಯನಗಳು ಎಂಬ ಕೃತಿಯಲ್ಲಿ ಅಲ್ಲಮನ ಸಾಧಕ ಜೀವನ ಒಂದು ಪುನಾರಚನೆ ಯನ್ನು ವಚನಗಳನ್ನಾಧರಿಸಿ ಮಾಡಲಾಗಿದೆ. ಒಳತೋಟಿಗೆ ಸಿಲುಕಿದ ಮನಸ್ಸಿಗೆ ದುಗುಡವೇ ಆಹಾರವಾಗಿ ಪರಿಣಮಿಸಿತು. ಕಂಗಳೊಳಗಣ ಕತ್ತಲೆಯಾಗಿ ತೋರುತ್ತದೆ. ಮಾಯೆಯನ್ನು ಎದುರಿಸಬಲ್ಲವನು ತಾನು ಎಂಬಲ್ಲಿ 'ಮಾಯಾಕೊಲಾಹಳ' ಎಂದು ಕರೆದುಕೊಂಡಿದ್ದಾರೆ. ಅಲ್ಲಮ ಪ್ರಭುವಿನ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಅವರ ವಚನಗಳ ಮೂಲಕವೆ ಕಟ್ಟಿಕೊಟ್ಟಿದ್ದಾರೆ.

'ಅಲ್ಲಮಪ್ರಭುವಿನ ಜೀವನವನ್ನು ಅರ್ಥೈಯಿಸಿಕೊಳ್ಳುವ ಒಂದು ಪ್ರಯತ್ನ' ಎಂಬ ವಿವರಣೆ ಅಲ್ಲಮ ಪ್ರಭುವಿನ ಪೂರ್ವರಂಗ, ಉತ್ತರ ರಂಗ ವಿವರಣೆ ಮತ್ತು ಬಸವ-ಅಲ್ಲಮರನ್ನು ಹೋಲಿಸಿ ನೋಡುವ ಪ್ರಯತ್ನ ಇಲ್ಲಿದೆ.

ಮಹಾದೇವಿಯಕ್ಕನ ಬದುಕಿನ ರೂಪು ರೇಷೆಗಳು (ಒಂದು ಐತಿಹಾಸಿಕ ಪುನಾರಚನೆ) ಎಂಬ ಲೇಖನದಲ್ಲಿ ಅಕ್ಕನ ಊರು ತಾಯ್ತಂದೆಯರು, ಬಾಲ್ಯ, ಯೌವ್ವನ ಹಾಗೂ ಆಧ್ಯಾತ್ಮಿಕ ನೆಲೆಯ ಪತಿ ಎಂಬ ಪರಮಾತ್ಮನ ಹುಡುಕಾಟದ ವಿಚಾರಗಳನ್ನು ವಿವರಿಸಲಾಗಿದೆ. ವೀರಶೈವದ ಉಗಮ ಮತ್ತು ಪ್ರಗತಿ ಎಂಬ ಕೃತಿಯಲ್ಲಿ ಶೈವದ ಪ್ರಾಚೀನತೆ ವೀರಶೈವದ ವಿಶಿಷ್ಟತೆ ದ್ವೈತ, ಅದ್ವೈತ-ವಿಶಿಷ್ಟಾದ್ವೈತಕ್ಕೂ ಷಟ್‌ಸ್ಥಲಕ್ಕೂ ಇರುವ ಸಾಮ್ಯತೆಗಳನ್ನು ವಿವರಿಸುತ್ತಾ ಹೋಗಿದ್ದಾರೆ. 'ಅರ್ಚನ' ಎಂಬ ಸಂಪಾದಿತ ಕೃತಿಯಲ್ಲಿ ವೀರಶೈವ ಮತ್ತು ಬೌದ್ಧ, ವೀರಶೈವ ಮತ್ತು ಜೈನ ಧರ್ಮ ತಾತ್ವಿಕತೆಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ.

ಪಿ.ವ್ಹಿ.ನಾರಾಯಣರವರ 'ವಚನ ಪರಿಸರ' ಎಂಬ ಕೃತಿಯಲ್ಲಿ 'ಸಂಸಾರ: ವಚನಕಾರರ ದೃಷ್ಟಿಯಲ್ಲಿ' ಎಂಬ ಶೀರ್ಷಿಕೆ ಅಡಿಯಲ್ಲಿ ವಚನಕಾರರಲ್ಲಿನ ಸಂಸಾರದ ಕಲ್ಪನೆಯನ್ನು ಕುರಿತು ಬರೆದಿದ್ದಾರೆ. ಮೋಹಗೊಳ್ಳುವ ಮನಸ್ಸು ಒಂದೆಡೆ ಇದ್ದು, ಹೊನ್ನು, ಹೆಣ್ಣು, ಮಣ್ಣು ಮಾಯೆ ಎಂಬ ಮಾತು ಸೂಕ್ತವಲ್ಲ. ಮನಸ್ಸಿನಲ್ಲಿ ಮೂಡುವ ಆಸೆಯೆ ಮಾಯೆ ಎಂದು ಸಾಂದರ್ಭಿಕವಾಗಿ ಹೇಳಿದ್ದಾರೆ. 'ಪ್ರಭುದೇವ ಹಾಗೂ ಸಾಮಾಜಿಕ ಹೊಣೆಗಾರಿಕೆ'

ಎಂಬ ಲೇಖನದಲ್ಲಿ ಅಲ್ಲಮ ಮತ್ತು ಸಮಾಜದ ನಡುವಿನ ಸಂಬಂಧವನ್ನು ವಿವರಿಸಿದ್ದಾರೆ. ಸಮಾಜವನ್ನು ದೂರ ನಿಂತು ವೀಕ್ಷಿಸುತ್ತಾ, ಹೆಚ್ಚು ಯಾರೊಡನೆ ಬೆರೆಯದ ವ್ಯಕ್ತಿತ್ವವಾದರೂ ಅದರ ಭಾಗವಾಗಿ ಪ್ರತಿಸ್ಪಂದನೆ ಇದೆ.

ಡಾ.ಓ.ಎಲ್.ನಾಗಭೂಷಣಸ್ವಾಮಿ ಅವರು ಬರೆದ ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು ಎಂಬ ಕೃತಿಯಲ್ಲಿ 'ಸ್ಪೀಕಿಂಗ್ ಆಫ್ ಶಿವಾ' ಎಂಬ ಲೇಖನದಲ್ಲಿ ವಚನಕಾರರ ಆಲೋಚನೆಗಳ ಅಭಿವ್ಯಕ್ತಿಯಾದ ವಚನಗಳನ್ನು ಗಮನಿಸಿದ್ದು, ದೇಹ-ದೇಗುಲದ ಪರಿಕಲ್ಪನೆಯನ್ನು ಚರ್ಚಿಸಿದ್ದಾರೆ. ವಚನ ಮತ್ತು ಹಿಂದೂ ಧರ್ಮದ ಅಂತರ್ ಸಂಬಂಧದ ಸ್ವರೂಪ. ದೇವರು ಮತ್ತು ಭಕ್ತರ ನಡುವಿನ ಅನನ್ಯ ಸಂಬಂಧದ ಕುರಿತು ಮಾತನಾಡುತ್ತಾರೆ. ವಚನಗಳ ಅಭಿವ್ಯಕ್ತಿಯಲ್ಲಿ ಬಳಸಿದ ಭಾಷೆಯ ಕುರಿತು ಮಾತನಾಡುವಾಗ 'ಅತ್ತೆ ಮಾಯೆ ಮಾವ ಸಂಸಾರಿ' ಎಂಬ ವಚನವನ್ನು ಪ್ರಸ್ತಾಪಿಸುತ್ತಾ, ವಿಸ್ತೃತ ಹೋಲಿಕೆಯನ್ನು ಅನುಕಂಪ ಮೂಡಿಸುವಂತೆ ಬಳಸಿರುವ ನಿದರ್ಶನ ಅಕ್ಕನ ಈ ವಚನದಲ್ಲಿ ಕಾಣುತ್ತದೆ. ಆಕೆಗೆ ದೇವರ ಮೇಲಿರುವ ಪ್ರೀತಿಯ ರೂಪಕವಾಗಿ ಪ್ರೀತಿಯ ಒಂದೊಂದು ಮಜಲು ಅನುಭಾವಿಕ ಸಂಯೋಗ ಮತ್ತು ವಿಯೋಗಗಳ ಸೂಚನೆಯಾಗಿದೆ. ಅಭಿಸಾರಿಕೆಯೊಬ್ಬಳು ನಂತರು, ಬಂಧುಗಳು ತುಂಬಿರುವ ಮನೆಯಿಂದ ಹೊರಟು ತನ್ನ ಪ್ರೇಮಿಯನ್ನು ಕಾಣಲು ತವಕಿಸುವುದು ಇಲ್ಲಿನ ಮುಖ್ಯ ಪ್ರತಿಮೆಯಾಗಿದೆ. ಮಾಯಾ ಅಥವಾ ಆದಿಮ ಭ್ರಮೆಯು ಅತ್ತೆ ಸಂಸಾರವು ಮಾವ ತ್ರಿಗುಣಗಳು ಮೂವರು ಮೈದುನರು. ಗಂಡನು ಕರ್ಮ, ಅಹಂಕಾರದ ಹಿಂದಿನ ಜನ್ಮಗಳ ಗತಕಾಲ, ವಾಸನಾ ಅಥವಾ ಹಳೆಯ ಕರ್ಮಗಳ ನೆನಪುಗಳ ಬಂಧನ ಅತ್ತಿಗೆ ನಾದಿನಿಯರು, ಮನಸ್ಸು ಮಾತ್ರವೇ ಗೆಳತಿ, ನಿರೂಪಕಿಯ ಪ್ರಿಯನನ್ನು ಭೇಟಿಯಾಗಲು ಸಹಾಯ ಮಾಡುವವಳು. ಇವೆಲ್ಲವೂ ಮದುವೆಯಿಂದ ಹುಟ್ಟಿದ ಸಂಬಂಧಗಳೇ ಹೊರತು ಹುಟ್ಟಿನಿಂದ ಬಂದವುಗಳಲ್ಲ. ಅಕ್ಕನ ವಚನದಲ್ಲಿ ಸಾಮಾಜಿಕ ನೆಲೆಯಲ್ಲಿ ವಿವಾಹವೆಂಬ ಚೌಕಟ್ಟನ್ನು ಮುರಿಯುವ ಪ್ರಯತ್ನವಾಗಿದೆ. ದೇವರೊಡನೆ ವ್ಯವಹರಿಸುವುದಿದ್ದರೆ ಗಂಡನ ಮನೆಯನ್ನು ಮನೆತನವನ್ನು ಉಲ್ಲಂಘಿಸಬೇಕಾಗುತ್ತದೆ ಎಂದು ವಿವರಿಸಿದ್ದಾರೆ.

ಎಂ.ಚಿದಾನಂದಮೂರ್ತಿ ಅವರು ಬರೆದಿರುವ 'ವಚನ ಸಾಹಿತ್ಯ' ಕೃತಿ ವಚನಕಾರರ ಪರಿಚಯವನ್ನು ಧಾರ್ಮಿಕ, ಸಾಂಸ್ಕೃತಿಕವಾಗಿ ಮಾಡಲಾಗಿದೆ. ಪ್ರಮುಖ ವಚನಕಾರರು ಎಂಬ ಶೀರ್ಷಿಕೆಯಡಿಯಲ್ಲಿ ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭುವಿನ ವಚನಗಳನ್ನು ಕುರಿತು ಚರ್ಚಿಸಿದ್ದಾರೆ.

ಸಿಸ್ಟರ್ ವಾಯಲೆಟ್ ಅವರು ಬರೆದ '೧೨ ಮತ್ತು ೨೦ ನೇ ಶತಮಾನಗಳ ವಚನ ಸಾಹಿತ್ಯ ಒಂದು ತೌಲನಿಕ ಅಧ್ಯಯನ' ಎಂಬ ಕೃತಿಯಲ್ಲಿ ಪ್ರಾಚೀನ ಹಾಗೂ

ಆಧುನಿಕ ವಚನಕಾರರನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಅಲ್ಲಮಪ್ರಭುವಿನ ಕುರಿತು ವಿವರಿಸುತ್ತಾ ಜಂಗಮ, ಗುರು, ಭಕ್ತ, ಶರಣ, ಮಾಯೆ, ಸಂಸಾರ ಜ್ಞಾನ ಎಂಬ ವಸ್ತುವುಳ್ಳ ವಚನಗಳನ್ನು ವಿವರಿಸಿದ್ದಾರೆ. ಸರ್ವವ್ಯಾಪಿಯಾದ ಪರಮಾತ್ಮ ನಲ್ಲಿ ನಂಬಿಕೆಯಿಟ್ಟ ಭಕ್ತನು ತನುವನ್ನು ಗುರುವಿನ ಪಾದಕ್ಕೆ ಅರ್ಪಿಸಿ ಲಿಂಗ ದೀಕ್ಷೆಯನ್ನು ಸ್ವೀಕರಿಸಿ ಜ್ಞಾನ ದಾನ ಪಡೆದ ಮೇಲೆ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುತ್ತಾನೆ. ಆದರೆ ಲೌಕಿಕದಲ್ಲಿದ್ದ ಅವನಿಗೆ ಈ ಮಾಯೆ ಅನೇಕ ರೀತಿಯಿಂದ ಅಡ್ಡಿಯಾಗಿದೆ. ಈ ಮಾಯೆ ಯಾರನ್ನೂ ಕಾಡದೇ ಬಿಟ್ಟಿಲ್ಲ ಎಂಬಲ್ಲಿ ಬ್ರಹ್ಮ ವಿಷ್ಣು ರುದ್ರರು ಘನವೆಂದೆಡೆ ಮಾಯೆ ಬಿಡದು. ತಾ ಘನವೆಂದೆಡೆ ತನ್ನನ್ನು ಬಿಡದು ಎಂದಿದ್ದಾನೆ. ದೇವರಿಗೆ ಮಾಯೆಯ ಉಪಟಳದಿಂದ ಬಿಡುಗಡೆ ಸಿಗದೆ ಇದ್ದಮೇಲೆ ಸಾಮಾನ್ಯ ಮನುಷ್ಯನ ಸ್ಥಿತಿ ಹೇಗಿರಬೇಕು ಎಂಬ ಕಲ್ಪನೆ ಮಾಡಿಕೊಂಡಿದ್ದಾರೆ. ಅದೇ ಕೃತಿಯಲ್ಲಿ ಅಕ್ಕಮಹಾದೇವಿಯ ವಚನಗಳನ್ನು ಭಕ್ತಿಮಾರ್ಗ ಭಕ್ತಿ–ಭವಿ–ವೈರಾಗ್ಯಮಾರ್ಗ, ಗುರು–ಲಿಂಗ–ಜಂಗಮ ಎಂಬ ಅಂಶಗಳನ್ನಾಧರಿಸಿ ವಿಶ್ಲೇಷಿಸಿದ್ದಾರೆ. 'ಮಾಯೆ' ಅಂಶವನ್ನು ಚರ್ಚಿಸುತ್ತಾ ಮಾಯೆಯನ್ನು ಗೆದ್ದು ಉರ್ಧ್ವಮುಖವಾಗಿ ಸಾಗಿದ ದಿಟ್ಟ ಹೆಣ್ಣು ಸಂಸಾರದಲ್ಲಿ ಹೆಣ್ಣು ಪುರುಷರಿಗೆ ಮಾಯೆಯಾಗಿ ಕಾಡಿದರೆ, ಕಾಮಾತುರದಿಂದ ಕೂಡಿದ ಪುರುಷನು ಹೆಣ್ಣಿಗೆ ಮಾಯೆಯಾಗಿ ಕಾಡುತ್ತಾನೆಂಬ ವಿಷಯವನ್ನು ಪುರುಷನ ಮುಂದೆ ಸ್ತ್ರೀ, ಸ್ತ್ರೀಯ ಮುಂದೆ ಪುರುಷ ಎಂಬ ಅಭಿಮಾನವಾಗಿ ಮಾಯೆ ಕಾಡುವುದು ಎಂದಿದ್ದಾರೆ.

ವಿನೋದಾಬಾಯಿ ಅವರ 'ಆಂಡಾಳ್–ಮಹಾದೇವಿ–ಮೀರ' ಎಂಬ ಸಂಶೋಧನಾ ಕೃತಿಯಲ್ಲಿ ಮೂವರು ಮಹಿಳೆಯರನ್ನು ಭಕ್ತಿ, ದೇವರು, ಸಮಾಜ, ಗುರು ಇಂತಹ ಸಾಮ್ಯ ವಿಷಯಗಳಲ್ಲಿ ಹೋಲಿಸಿ ನೋಡಿದ್ದಾರೆ. ಭಗವತ್‌ಪ್ರೇಮ ಎಂಬಂಶವನ್ನು ಆಂಡಾಳ್–ಮಹಾದೇವಿ–ಮೀರ ಅವರ ದೃಷ್ಟಿ ಭಗವಂತನ ಕುರಿತ ಕಲ್ಪನೆಗಳನ್ನು ವಿವರಿಸಿದ್ದಾರೆ.

ವೀಣಾ ಬನ್ನಂಜೆ ಅವರ 'ಅಕ್ಕಮಹಾದೇವಿಯ ದ್ವೈತ' ಕೃತಿಯಲ್ಲಿ ಅಕ್ಕನನ್ನು ವಯಕ್ತಿಕ ಬದುಕು, ಅಲೌಕಿಕದ ಸ್ವೀಕರಣೆ, ಲೌಕಿಕ ಉಪಕರ್ಷಣೆ ಅಕ್ಕನ ವಚನಗಳಲ್ಲಿ ಅತೃಪ್ತ ನಿರೀಕ್ಷೆ, ಭ್ರಮಾಲೋಕ, ಭಕ್ತಿಯ ಅಭಿವ್ಯಕ್ತಿ, ಶರಣಸತಿ–ಲಿಂಗಪತಿ ಒಂದು ಅನುರೂಪಿತ ಪ್ರಕ್ರಿಯೆ ಎಂಬ ಅಂಶಗಳ ಅಡಿಯಲ್ಲಿ ಅಕ್ಕನ ವಚನಗಳನ್ನು ವಿಶ್ಲೇಷಿಸಲಾಗಿದೆ. 'ಶೈವಧರ್ಮದ ಮೂವತ್ತಾರು ತತ್ವಗಳು ಹಾಗೂ ವೀರಶೈವ ಧರ್ಮದ ಮೂವತ್ತಾರು ತತ್ವಗಳ ಅವಿರ್ಭಾವ ಸೃಷ್ಟಿಯಲ್ಲಿ–ಪ್ರವೃತ್ತಿಯಲ್ಲಿ ಎರಡು ಒಂದೇ ಮೂಲ ಪರಶಿವನಾದ ಸೃಷ್ಟಿಯುತ್ಪತ್ತಿ. ಆದರೆ ಮೂಲ ಪರಬ್ರಹ್ಮದಲ್ಲಿ ಶಕ್ತಿ ಅವಿನಾಭಾವಿಯಾಗಿ ಇವೆಯೆಂಬುದು ವೀರಶೈವ ಸಿದ್ಧಾಂತ. ಆ ಶಕ್ತಿಗೆ ಉರ್ಧ್ವಪ್ರಕೃತಿ–ಅಧಃಪ್ರಕೃತಿ ಎಂಬ ಎರಡು ರೂಪ

ಮಹಾದೇವಿಯಕ್ಕನದು ಊರ್ಧ್ವ ಪ್ರಕೃತಿಯಾಗಿದೆ ಎಂದು ಗುರುತಿಸಿದ್ದಾರೆ.

ಡಾ. ಪ್ರಭುಶಂಕರ ಅವರ ಸಂಪಾದಿತ 'ವಿಶ್ವ ಧರ್ಮದರ್ಶನ' ಕೃತಿಯಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶೈವ ಕಾಶ್ಮೀರ, ಶೈವ, ಜೈನ, ಬೌದ್ಧ, ವೈಷ್ಣವ ಮುಂತಾದ ದರ್ಶನಗಳ ತಾತ್ವಿಕ ವಿವರಗಳನ್ನು ಒಳಗೊಂಡಿದೆ. ಬ್ರಹ್ಮ, ಪರವಸ್ತು, ಜಗತ್ತು-ಜೀವ-ಮಾಯೆ ಮುಂತಾದ ವಿಷಯಗಳ ತಾತ್ವಿಕ ಚರ್ಚೆ ಮಾಡಲಾಗಿದೆ.

ಚಿತ್ರಭೆ ಸಂಸ್ಮರಣ ಸಂಪುಟದಲ್ಲಿ ಶ್ರೀ ಬಿ.ಡಿ.ಜತ್ತಿ ಅವರ 'ಅದ್ವೈತ ಮತ್ತು ಪಾಶ್ಚಾತ್ಯ ತತ್ವಜ್ಞಾನ' ಎಂಬ ಲೇಖನದಲ್ಲಿ ಮಾಯೆ ಕುರಿತು ಚರ್ಚಿಸಿದ್ದಾರೆ. ಪಾಶ್ಚಾತ್ಯ ತತ್ವಜ್ಞಾನಿ ಹೆರಿಕ್ಲಿಂಟಸ್ 'ಇಂದ್ರಿಯ ಅನುಭವದ ಜಗತ್ತು ಶಾಶ್ವತ ಮಾಯೆ' ಎಂದಿದ್ದಾರೆ. ಅದ್ವೈತದ ಆಲೋಚನೆಗಳಿಗೆ ಪಾಶ್ಚಾತ್ಯ ತತ್ವಜ್ಞಾನಿಗಳ ವಿಚಾರ ಧಾರೆಗಳನ್ನು ಹೋಲಿಸಿ ನೋಡಿದ್ದಾರೆ.

ಶಿವಾನುಭವ (೨ ಫೆಬ್ರುವರಿ ೧೯೫೧, ಸಂ.೨೫) ದಲ್ಲಿ ಶ್ರೀ ಅನ್ನದಾನೀಶ್ವರ ವಿರಕ್ತಮಠ ಅವರು 'ಮಾಯಾವಾದದ-ಅಂಧ ತಮಸ್ಸು' ಎಂಬ ಲೇಖನವನ್ನು ಬರೆದಿದ್ದು, ಮಾಯಾವಾದ ಎಂಬುದರ ಕುರಿತು ಈವರೆಗೆ ಪಂಡಿತ ವರ್ಗದಲ್ಲಿ ನಡೆದ ತಾತ್ವಿಕ ಚರ್ಚೆಯನ್ನು ವಿವರಿಸುತ್ತಾ ಬಂದು ಶರಣರ ದೃಷ್ಟಿಯಲ್ಲಿ ಜಗತ್ತು ಮಿಥ್ಯೆಯಲ್ಲ ಅದು ಶಿವಮಯವಾದದು ಹೊನ್ನು, ಮಣ್ಣು, ಹೆಣ್ಣು ಮಾಯೆಯಲ್ಲ ಎಂದು ಹೇಳುತ್ತಾರೆ. ಜೀವ ಶಿವಾಂಶಿಸಂಭೂತ ಅವನಲ್ಲಿ ಸರ್ವ ಶಕ್ತಿಗಳು ಅಡಕವಾಗಿದ್ದು, ತೋರದಂತಿರುವುದಕ್ಕೆ ಮಾಯೆ ಕಾರಣವಾಗಿದೆ ಎಂಬರ್ಥದಲ್ಲಿ ವಿವರಿಸಿದ್ದಾರೆ.

ಶಿವಾನುಭವ (ಜನೇವರಿ-೧೯೫೨ ಸಂ-೨೬)ದಲ್ಲಿ ಸಿ.ನಾ.ಮಹಂತಣ್ಣವರ ಅವರು 'ಮಲತ್ರಯಗಳು' ಎಂಬ ಲೇಖನವನ್ನು ಬರೆದಿದ್ದಾರೆ. ಜ್ಞಾನಾಚಾರಕ್ಕೆ ಜೀವ ಮಲತ್ರಯಗಳಿಂದ ಮುಕ್ತನಾಗಿ ಶುದ್ಧನಾಗಿರಬೇಕು. ಜೀವನಿಗೆ ಆಣವ, ಮಾಯಾ, ಕಾರ್ಮಿಕ ಮಲಗಳು ಮುಸುಕಿ ಆ ಜೀವನನ್ನು ಅತ್ತಿತ್ತ ಮಿಸುಗಂತೆ ಕಟ್ಟಿ ಹಾಕಿರುವವು. ವೇಧಾ ದೀಕ್ಷೆಯಿಂದ ಆಣವಾದಿ ಮಲಗಳೂ ಮಾತ್ರ ದೀಕ್ಷೆಯಿಂದ ಮಾಯಾಂಶವೂ ಕ್ರಿಯಾದೀಕ್ಷೆಯಿಂದ ಕಾರ್ಮಿಕಾಂಶವೂ ಕಡೆಗಾಗಿ ನಿಜ ನಿರ್ಮಲತ್ವ ನೆಲೆಗೊಳ್ಳುವುದು ಎಂದಿದ್ದಾರೆ.

ಶ್ರೀಯುತ ಲಕ್ಷ್ಮಣರಾವ್ ಜಮಖಂಡಿ ಅವರು ಶಿವಾನುಭವ (ಜನೇವರಿ-೧೯೪೭ ಸಂಚಿಕೆ-೪)ದಲ್ಲಿ 'ಕದಳೀ ಬನದ ಬಟ್ಟೆ' ಎಂಬ ಲೇಖನದಲ್ಲಿ ಅನುಭಾವ ಪೂರ್ವ ಹಾಗೂ ಅನುಭಾವಿಕ ನೆಲೆಯಲ್ಲಿ ಕದಳಿ ಬನದ ಸ್ವರೂಪವನ್ನು ವಿವರಿಸುತ್ತಾರೆ. ಅಕ್ಕನ ದೃಷ್ಟಿಯಲ್ಲಿ ಕದಳಿ ಎಂಬುದು ಅರ್ಥವೈವಿದ್ಯತೆ ಪಡೆದ ರೀತಿಯನ್ನು ಪೂರಕ ಅಭಿಪ್ರಾಯಗಳ ಮೂಲಕ ವಿವರಿಸಿದ್ದಾರೆ. ಕದಳಿ ಎಂಬುದು ತನು, ಕದಳಿ ಎಂಬುದು ಮನವಾಗಿ, ವಿಷಯಗಳಾಗಿ ಭವರೋಗದರಣ್ಯವಾಗಿ ಕದಳಿ ಎಂಬುದು ಗೆದ್ದು ಬಂದು ಭವಹರನನ್ನು ಅಕ್ಕ ಕಾಣುತ್ತಾಳೆ. ಕದಳಿ ಎಂಬುದು ಅರಣ್ಯವೂ, ಸಾಕ್ಷಾತ್ಕಾರಕ್ಕೆ ಸಾಧನವೂ ಆಗಿದೆ.

ಸಾಧನೆಯ ಹಾದಿಯಲ್ಲಿ ಗುರುವಿನ ಮಹತ್ವ ಆಚಾರದ ಅವಶ್ಯಕತೆ, ಮಂತ್ರಗಳ ಸ್ವರೂಪವನ್ನು ವಚನಗಳ ಮೂಲಕ ಗಮನಿಸಿದ್ದಾರೆ.

Basava Journal (March-1996-Vol.21, I-3) ನಲ್ಲಿ Akkamahadevi – A differing voice in the Sharan Movement ಎಂಬ ಲೇಖನವನ್ನು ಡಾ.ಜಿ.ಎಸ್.ಶಿವರುದ್ರಪ್ಪ ಬರೆದಿದ್ದು ಜಿ.ಬಿ.ಸಜ್ಜನ ಅವರು ಇಂಗ್ಲೀಷಗೆ ಅನುವಾದಿಸಿದ್ದಾರೆ. ಶರಣ ಚಳುವಳಿಯಲ್ಲಿ ಸ್ವಂತಿಕೆಯನ್ನು ಮೆರೆದ ವ್ಯಕ್ತಿತ್ವ ಅಕ್ಕನದಾಗಿದೆ. ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ಸಾಗುವ ಅಕ್ಕನ ಆಲೋಚನೆಗಳನ್ನು ವಚನಗಳ ಮೂಲಕ ಗಮನಿಸಿದ್ದಾರೆ. ಕೌಶಿಕನಿಂದ ಬಿಡುಗಡೆ ಹೊಂದಿ ಆಧ್ಯಾತ್ಮಿಕ ಸಾಧಕಳಾಗಬೇಕೆಂದು ಹೊರಟ ಅಕ್ಕ ಕಲ್ಯಾಣದತ್ತ ಬಂದು ಶರಣರ ಸಂಗದಲ್ಲಿ ಸಾಧಕಳಾಗಿ ತನ್ನತನವನ್ನು ಅರುಹಿ ತನ್ನ ಕೊನೆಯ ಗಮ್ಯವಾದ ಶ್ರೀಶೈಲದತ್ತ ಹೊರಟಳು. Her destination was not kalian but Shrishail ಶರಣರ ಆಲೋಚನೆ– ಚಿಂತನೆಗಳನ್ನು ಒಪ್ಪಿದರೂ ಅದರಿಂದ ದೂರ ಬಂದು ಆಧ್ಯಾತ್ಮಿಕ ಸಾಧಕಳಾದಳು. 'Maya manifested it self as Women before men'ಪುರುಷನ ಮುಂದೆ ಸ್ತ್ರೀಯಾಗಿ ಮಾಯೆ ಕಾಡಿತ್ತೆಂಬ ವಚನದ ಮೂಲಕ ಪುರುಷ ಜಗತ್ತನ್ನು ಪ್ರಶ್ನಿಸುತ್ತಾಳೆ ಎಂದಿದ್ದಾರೆ

ಶಿವಾನುಭವ (ನವ್ಹಂಬರ್ ೧೯೫೦ ಸಂಚಿಕೆ–೧೧)ಶ್ರೀಕರ ಭಾಷ್ಯದ ಸ್ಥಾನಮಾನ– ಶ್ರೀ ವೀರಪ್ಪ ಯಗಚಿ ಇಲ್ಲಿ ದ್ವೈತ–ಅದ್ವೈತ–ವಿಶಿಷ್ಟಾದ್ವೈತಗಳಿಗಿಂತ ಭಿನ್ನವಾಗಿ ಶ್ರೀಪತಿಯು ದ್ವೈತಾ ದ್ವೈತಗಳ ಸಮನ್ವಯ ಅಥವಾ ಶಿವಾದ್ವೈತವನ್ನು ಪ್ರತಿಪಾದಿಸಿದ್ದಾರೆ. ಶ್ರೀಫತಿಯವರು ಜೀವ ಬ್ರಹ್ಮರಲ್ಲಿ ಭೇದ ತೋರಿದಾಗ್ಯೂ ಅಂತ್ಯದಲ್ಲಿ ಜೀವವು ಜ್ಞಾನ ಪಡೆದ ನಂತರ ಬ್ರಹ್ಮವೇ ಆಗಿ ಬ್ರಹ್ಮದಲ್ಲಿ ಸಮರಸ ಹೊಂದುವದೆಂದು ಹೇಳಿದ್ದಾರೆ. ಜೀವವು ಜನನ ಮರಣಗಳಿಂದ ಮುಕ್ತವಾಗುವುದೇ ಜೀವದ ಪರಮ ಧ್ಯೇಯ.

(July-1981 Vol-6)– ಎಂ. ಗೋವರ್ಧನರಾವ Basava Journal ನ 'Allam Prabhu A Greate Sage' ಎಂಬ ಲೇಖನದಲ್ಲಿ ಅಲ್ಲಮನ ವ್ಯಕ್ತಿತ್ವ ಅನಾವರಣಗೊಂಡಿದೆ. ಅಲ್ಲಮನ ಊರು, ಹುಟ್ಟು ಮತ್ತು ಗುರು ಕುರಿತು ವಿವರಣೆ ಇದ್ದು, ಅಲ್ಲಮನನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ಮುಕ್ತಾಯಕ್ಕ, ಸಿದ್ಧರಾಮ, ನುಲಿಯ ಚಂದಯ್ಯ ಮುಂತಾದವರಲ್ಲಿ ಜ್ಞಾನ ಕಿಡಿ ಹೊತ್ತಿಸಿದವನು ಎಂಬ ವಿವರಣೆಗಳಿವೆ.

ಬಸವಪಥದಲ್ಲಿ ಪ್ರಕಟವಾದ ಹರಿಹರನ ಅಕ್ಕ ಮಹಾದೇವಿಯ ರಗಳೆ: ಒಂದು ವಿವೇಚನ– ಕೆ ರಘುನಾಥ ಅವರು ಬರೆದಿದ್ದು, ಇಲ್ಲಿ ರಗಳೆಯ ಮೂಲಕ ಅಕ್ಕನನ್ನು ಚಿತ್ರಿಸಿದ ಬಗೆಯನ್ನು ವಿವರಿಸಲಾಗಿದೆ. ವಿಮರ್ಶಾತ್ಮಕ ನೆಲೆಯಿಂದ ಅಕ್ಕನ ಹಾಗೂ ಕೌಶಿಕನ ಕುರಿತು ಗಮನಿಸಿದ್ದಾರೆ.

ಬಸವಪಥ (ಮಾರ್ಚ ೧೯೮೬) ಸಂ. ೭ ಸಂಚಿಕೆ ೧೨)ದಲ್ಲಿ ಅನುಭಾವಿಗಳ ಅನುಭಾವಿ ಮಹಾದೇವಿಯಕ್ಕ ಎಂಬ ಲೇಖನವನ್ನು ಎಸ್.ಎಂ.ಅಂಗಡಿ ಅವರು ರಚಿಸಿದ್ದಾರೆ. ಅನುಭಾವಿಕ ನೆಲೆಯಲ್ಲಿರುವ ಅಕ್ಕನ ವ್ಯಕ್ತಿತ್ವ ವಿಶೇಷತೆಯನ್ನು ಕಥಾನಾತ್ಮಕ ಉದಾಹರಣೆಯ ಮೂಲಕ ವಿವರಿಸಿದ್ದಾರೆ. ಅನುಭವ-ಅನುಭಾವ ಎರಡರ ನಡುವಿನ ಅಂತರವನ್ನು ವಿವರಿಸುವ ಮೂಲಕ ಲೇಖನ ನಿರೂಪಿತವಾಗಿದೆ. ಗಾಂಧೀಜಿ, ಟ್ಯಾಗೋರರು, W.H.Davies ಮುಂತಾದವರ ಅನುಭವಗಳನ್ನು ಹೇಳುತ್ತಾ ಅಕ್ಕ ಅನುಭಾವಿಯಾದ ಬಗೆ ಸ್ಥಲ ವಚನಗಳ ಮೂಲಕ ವಿವರಿಸಿದ್ದಾರೆ. ಅಂಡರ್ ಹಿಲ್ಲರು ಹೇಳುವ ಅನುಭಾವಿಕ ನೆಲೆಯಲ್ಲಿ ಅಕ್ಕನ ಆಲೋಚನೆಗಳು ವಚನಗಳಲ್ಲಿ ಅಭಿವ್ಯಕ್ತವಾದ ರೀತಿಯನ್ನು ವಿವರಿಸಿದ್ದಾರೆ.

ಬಸವಪಥ (ಅಗಸ್ಟ್ ೧೯೮೫ ಸಂ-೭ ಸಂಚಿಕೆ-೫) ದಲ್ಲಿ ಅನ್ನದಾನಯ್ಯ ಪುರಾಣಿಕ ಅವರು ಶೂನ್ಯಾರೂಢ ಅಲ್ಲಮಪ್ರಬು ಎಂಬ ಲೇಖನವನ್ನು ಬರೆದಿದ್ದಾರೆ.

ಆಧ್ಯಾತ್ಮ ಪ್ರಪಂಚದ ಅದ್ಭುತ ಸೃಷ್ಟಿಯಾಗಿ ತೋರುವ ಅಲ್ಲಮ ಪ್ರಭುವಿನ ವ್ಯಕ್ತಿ ವಿಶಿಷ್ಟತೆಯನ್ನು ಚಿತ್ರಿಸಿದ್ದಾರೆ. ಅಲ್ಲಮನ ವ್ಯಕ್ತಿತ್ವ ಚಿತ್ರಿಸುವಲ್ಲಿ ತಾನು ಮಾಯಾಕೋಳಾಹಳನಾದ ಬಗೆಯನ್ನು 'ಬ್ರಹ್ಮ ವಿಷ್ಣುಗಳ ಮಾಯೆ ತೋತ್ತಳದುಳಿವಂದು' ಎಂಬ ವಚನದ ಮೂಲಕ ವಿವರಿಸಿದ್ದಾರೆ. ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆಯಲ್ಲಿ ಅಲ್ಲಮ ವ್ಯಕ್ತಿತ್ವ ನಿರೂಪಿತಗೊಂಡ ಬಗೆಯನ್ನು ಹೇಳಿದ್ದಾರೆ. ಮಹಾಮಹಿಮನಾದ ಪ್ರಭು ಲೋಕೋದ್ಧಾರಕ್ಕಾಗಿ ಹೊರಡುತ್ತಾನೆ. ಹಲವು ಶರಣ-ಶರಣೆಯ ಜ್ಞಾನ ದೀಪಕ್ಕೆ ಬಂದ ಕುಡಿಯನ್ನು ತೆಗೆದು ಬೆಳಗಿಸುವ ವ್ಯಕ್ತಿಯಾಗಿ ಅಲ್ಲಮ ತೋರುತ್ತಾನೆ.

ಬಸವಪಥ (ಸಪ್ಟಂಬರ್ ೧೯೮೧ ಸಂ.೩ ಸಂಚಿಕೆ-೬) ಟಿ.ಆರ್.ಮಹಾದೇವಯ್ಯ ಅವರು ಚಾಮರಸನ ಪ್ರಭುಲಿಂಗಲೀಲೆ ಎಂಬ ಲೇಖನದಲ್ಲಿ ಕವಿ ಚಾಮರಸನ ಕೈಯಲ್ಲಿ ಅರಳಿದ ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ವಿವರಿಸಿದ್ದಾರೆ.

ಬಸವಪಥ (ಜುಲೈ-೧೯೯೬-ಸಂಪುಟ ೧೮ ಸಂಚಿಕೆ-೪)ದಲ್ಲಿ ಪರಮಪೂಜ್ಯ ಶ್ರೀ ಶ್ರೀ ಡಾ.ವಿಜಯಕುಮಾರ ಮಹಾನುಭಾವಿಗಳು ಬರೆದ 'ಪರಮಜ್ಞಾನಿ ಪ್ರಭುದೇವರ ಮಹಾಮಾನವತಾವಾದ ತತ್ವಗಳು' ಎಂದ ಲೇಖನದಲ್ಲಿ ಸಮಾನತೆ, ಅಹಿಂಸೆ, ಮೋಕ್ಷ ಸ್ತ್ರೀ ಸಮಾನತೆ ಮಾಯಾವಾದ ನಿರಾಕರಣೆ ಮುಂತಾದ ವಿಚಾರಗಳನ್ನು ಚರ್ಚಿಸಿದ್ದಾರೆ. ಅಲ್ಲಮನು ಮಾಯೆ ಕುರಿತಾದ ೨ ವಚನಗಳನ್ನು ಪ್ರಸ್ತಾಪಿಸಿದ್ದು ಸ್ತ್ರೀ ಸಮಾನತೆ ದೃಷ್ಟಿಯಿಂದ ನೋಡಿದ್ದಾರೆ.

ಬಸವಪಥ (ಅಕ್ಟೋಬರ್ ೧೯೯೫ ಸಂಚಿಕೆ-೭ ಸಂಪುಟ ೧೬) ರಲ್ಲಿ ಡಾ.ವೃಷಭೇಂದ್ರಸ್ವಾಮಿ ಅವರು ಕನ್ನಡ ಸಾಹಿತ್ಯಕ್ಕೆ ಅಲ್ಲಮ ಪ್ರಭುದೇವನ ಕೊಡುಗೆ ಎಂಬ ಲೇಖನದಲ್ಲಿ ಅಲ್ಲಮನ ವಚನಗಳ ಮೂಲಕ ಅಲ್ಲಮನ ಅನುಭಾವಿ ಬದುಕಿನ

ಚಿತ್ರಣವನ್ನು ನೀಡಿದ್ದಾರೆ. ಅಲ್ಲಮನ ಬೆಡಗಿನ ವಚನಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶೇಷ ಕೊಡುಗೆಯಾಗಿವೆ. ಬೆಡಗು ಎಂಬಲ್ಲಿ ವಿಶಿಷ್ಟ ಉಕ್ತಿ ರೀತಿ ನೆಳಲು ಬೆಳಕಿನ ಅರ್ಥವುತ್ಪತ್ತಿ ವಿಶೇಷ ಅನುಭಾವ ದರ್ಶನವನ್ನು ಮಾಡುತ್ತವೆ.

ಒಟ್ಟಾರೆಯಾಗಿ ಅಲ್ಲಮ ಮತ್ತು ಅಕ್ಕನ ಕುರಿತಾದ ಕೃತಿಗಳನ್ನು ಸಮೀಕ್ಷಿಸಿದಾಗ ಅಲ್ಲಮ ಪ್ರಭು ಮತ್ತು ಅಕ್ಕಮಹಾದೇವಿಯ ವಯಕ್ತಿಕ ಜೀವನವನ್ನು ಮತ್ತು ವಚನ ಸಾಹಿತ್ಯ ಎರಡನ್ನೂ ಗಮನಿಸಿಕೊಂಡ ಸಂದರ್ಭಗಳು ಹೆಚ್ಚಾಗಿವೆ. ಅಲ್ಲಮಪ್ರಭುವಿನ ಬದುಕಿನಲ್ಲಿ ಮಾಯೆ ಪ್ರವೇಶ, ತಿರಸ್ಕಾರ, ಜಂಗಮನಾಗಿ ಹೊರಟು ಪರಿಪೂರ್ಣಜ್ಞಾನಿಯಾದದ್ದು, ಹಲವು ಶರಣ ಭೇಟಿ–ಇತ್ಯಾದಿ ವಿಷಯಗಳನ್ನು ವಿವರಿಸುವಾಗ ಸಾಂದರ್ಭಿಕವಾಗಿ ಮಾಯೆ ಕುರಿತು ಚರ್ಚಿಸಲಾಗಿದೆ. ಅಕ್ಕಮಹಾದೇವಿಯ ಕುರಿತಾದ ಕೃತಿಗಳಲ್ಲಿ ಸಾಮಾಜಿಕ ಚೌಕಟ್ಟಿನಲ್ಲಿಯೇ ನಿಂತು ಅಕ್ಕನ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ. ಅಕ್ಕನಲ್ಲಿಯೂ ಕೂಡಾ ಸಾಂದರ್ಭಿಕವಾಗಿ ಕೆಲವು ವಚನಗಳನ್ನು ಆಯ್ದು ವಿಶ್ಲೇಷಿಸಿದ್ದಾರೆ. ಅಕ್ಕನ ಇಡಿ ಬದುಕನ್ನು ಚಿತ್ರಿಸುವಾಗ ಮಾಯೆ ಎಂಬುದು ಸಾಂದರ್ಭಿಕ ಅಭಿಪ್ರಾಯವಾಗಿ ಬಂದಿದೆ.

ವಚನ ಸಾಹಿತ್ಯವನ್ನು ಕುರಿತು ಅಧ್ಯಯನಿಸುವಾಗ ವಚನದ ವಸ್ತು, ರೂಪ, ಭಾಷೆ, ಶೈಲಿ, ಬಂಧ, ನಿರೂಪಣೆ ಸಾಂಸ್ಕೃತಿಕತೆ ಎಲ್ಲವನ್ನು ಆಧರಿಸಿ ಗಮನಿಸುವಾಗ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕ ಹೀಗೆ ಹಲವು ವಚನಕಾರರ ವಚನಗಳನ್ನು ಆಯ್ದು ಚರ್ಚಿಸಿದ್ದಾರೆ. ತೀರಾ ಸಂಕ್ಷಿಪ್ತವಾಗಿ ಲೇಖನಗಳ ರೂಪದಲ್ಲಿ ಮಾಯೆ ಚರ್ಚೆಗೊಳಗಾಗಿರುವುದು ಕಂಡುಬರುತ್ತದೆ. ಈ ಅಧ್ಯಾಯದಲ್ಲಿ ಗಮನಿಸಿಕೊಂಡ ಅಂಶಗಳನ್ನಾಧರಿಸಿ ಈವರೆಗೆ ಅಲ್ಲಮ–ಅಕ್ಕನ ವಚನ ಸಾಹಿತ್ಯ ಅವರ ಬದುಕು–ಬರಹದಲ್ಲಿ ನಿರೂಪಿತ ಗೊಂಡಿರುವ ಮಾಯೆ ಕುರಿತಾದ ಚರ್ಚೆಗಳನ್ನು ಲಕ್ಷಿಸಿ, ಆಲೋಚನೆ ಮಾಡಿರುವುದನ್ನು ವಿವೇಚಿಸಿ ಮುಂದಿನ ಅಧ್ಯಾಯಕ್ಕೆ ಒಂದು ಪೀಠಿಕೆ ರೂಪಿಸಿಕೊಳ್ಳಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಮಾಯೆ ಎಂಬ ಅಂಶವನ್ನು ಮುಖ್ಯವಾಗಿಸಿಕೊಂಡು ಗಮನಿಸಲಾಗಿದೆ.

ಅಧ್ಯಾಯ : ೩

ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಮಾಯೆ ಸ್ವರೂಪ

ಅಧ್ಯಾಯ-೩

ಭಾರತೀಯ ದಾರ್ಶನಿಕ ಪರಂಪರೆ: ಮಾಯೆಯ ಸ್ವರೂಪ

ಭರತಖಂಡದಲ್ಲಿ ಪ್ರಾಚೀನ ಕಾಲದಿಂದ ಅನೇಕ ಋಷಿ-ಮುನಿಗಳು ಧ್ಯಾನ-ಚಿಂತನೆ ಕೈಗೊಂಡು ವೇದ, ಉಪನಿಷತ್-ಆಗಮಗಳನ್ನು ರಚಿಸಿದರು. ತತ್ವಜ್ಞಾನಿಗಳು ಅವತರಿಸಿ ಸ್ವಆತ್ಮಾನುಭವರೂಪವಾದ ಅಪರೋಕ್ಷ ಜ್ಞಾನವನ್ನು ಪಡೆದು ಅದನ್ನು ಭಕ್ತರಿಗೆ ಉಪದೇಶಿಸುವ ಮೂಲಕ ಒಂದು ಸಾಧನಾ ಮಾರ್ಗವನ್ನು ತೋರಿದರು. ಈ ತತ್ವಜ್ಞಾನಿಗಳು, ಸಾಧಕರು, ಚಿಂತಕರು ತಮ್ಮ ತಮ್ಮ ಅಭಿರುಚಿಗೆ ಅನುಸಾರವಾಗಿ ತೋರಿದ ಮಾರ್ಗವನ್ನು ಒಪ್ಪಿ ಅನುಸರಿಸುವ ವ್ಯಕ್ತಿಗಳು ಅನುಯಾಯಿಗಳೆನಿಸಿಕೊಂಡರು. ಇವರು ಅನುಕರಿಸುವ ಕ್ರಿಯೆ ನಿರಂತರಗೊಂಡಾಗ ಮತ-ಧರ್ಮ-ಪಂಥಗಳು ರೂಪಗೊಂಡಿವೆ. ಹಿಂದೂ ಧರ್ಮವು ಧಾರ್ಮಿಕ ಪರಂಪರೆಯಲ್ಲಿ ತೀರಾ ಪ್ರಾಚೀನವಾದದು. ಹಿಂದೂ ಧರ್ಮದ ಸಾರವನ್ನು ಅರಿಯಲು ಆಗಮ-ಉಪನಿಷತ್, ವೇದಾಂತಗಳು ಸಾಧನವಾಗಿವೆ. ಆಗಮಾದಿಗಳಲ್ಲಿ ಮೂಡಿ ಬಂದಿರುವ ಆಧ್ಯಾತ್ಮದ ತಾತ್ವಿಕ ಚಿಂತನೆಯಲ್ಲಿ 'ಮಾಯೆ' ವಿಶಿಷ್ಟ ಸ್ಥಾನ ಪಡೆದಿದೆ. 'ಮಾಯೆ' ಕುರಿತು ಇಲ್ಲಿ ವಿವೇಚಿಸಲಾಗಿದೆ.

ಭಾರತೀಯ ಸಾಹಿತ್ಯ ಆದ್ಯ ಗ್ರಂಥವಾದ ಋಗ್ವೇದದಲ್ಲಿ 'ಮಾಯಾ' ಎಂಬ ಶಬ್ದ ಬಳಕೆಗೊಂಡಿದೆ. ಐದನೇಯ ಮಂಡಲದ ಕೊನೆಯಲ್ಲಿರುವ ಖಿಲಸೂಕ್ತಗಳಲ್ಲಿ 'ಮಾಯಾ ಅಂತರಾ' ಎಂಬ ಪದ ಋಕ್ಕಿನಲ್ಲಿ ಕಂಡುತ್ತದೆ. ವೇದದಲ್ಲಿ ಜ್ಞಾನಕಾಂಡಾತ್ಮಕ ಮಂತ್ರ ಸಮೂಹವೇ ಉಪನಿಷತ್ತುಗಳಾಗಿವೆ. ಇವುಗಳಲ್ಲಿ ಆತ್ಮ-ಬ್ರಹ್ಮ ಎಂಬ ವಿಚಾರಗಳು ಪ್ರತಿಪಾದಿತವಾಗಿವೆ.

೩.೧ ಉಪನಿಷತ್‌ಗಳು: ಮಾಯೆ ಹಿಂದೂ ಧರ್ಮದ ಭಾಗವಾದ ಉಪನಿಷತ್ತುಗಳು ಮಾನವನನ್ನು ಮರ್ತ್ಯದಿಂದ ಸ್ವರ್ಗಕ್ಕೆ ಏರಲು ಸಹಾಯಕ ಸಾಧನವಾಗಿವೆ. ಉಪನಿಷತ್‌ಗಳಲ್ಲಿ ಒಂದಾದ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಬ್ರಹ್ಮ-ಕಾಲ, ದೇಹ-ಆತ್ಮ, ಧ್ಯಾನ ಮುಂತಾದ ವಿಷಯಗಳ ಕುರಿತು ಜಿಜ್ಞಾಸೆ ನಡೆದಿದೆ. ಇಲ್ಲಿ 'ಮಾಯೆ'ಯ ವಿವಿಧ ಅವಸ್ಥಾಂತರಗಳ ಕುರಿತು ಚರ್ಚಿಸಲಾಗಿದೆ.

"ಕ್ಷರಂ ಪ್ರಧಾನಮಮೃತಾಕ್ಷರಂ ಹರ:
ಕ್ಷರಾತ್ಮಾನಾವೀಶತೇ ದೇವ ಏಕ: ।
ತನ್ಯಾಭಿಧ್ಯಾನಾದ್ಯೋಜನಾತ್ತತ್ವಭಾವಾ
ದ್ಭೂಯಶ್ಚಂತೆ ವಿಶ್ವಮಾಯಾ ನಿವೃತ್ತಿ:"[೧]

ತಾತ್ಪರ್ಯವೆನೆಂದರೆ, ಪ್ರಧಾನವು ವಿನಾಶ ಸ್ವಭಾವವುಳ್ಳದ್ದು. ಪರಮೇಶ್ವರ ಅಮೃತ ಮತ್ತು ಅವಿನಾಶಿ. ಅದ್ವಿತೀಯನಾದ ಪರಮೇಶ್ವರ ಪ್ರಧಾನವನ್ನು ಮತ್ತು ಜೀವರನ್ನೂ

ಆಳುತ್ತಿದ್ದಾನೆ. ಪುನಃ-ಪುನಃ ಪರಮಾತ್ಮನನ್ನು ಧ್ಯಾನಿಸುವುದರಿಂದಲೂ, ಅವನನ್ನು ಸೇರುವುದರಿಂದಲೂ ಅವನ ತತ್ವವನ್ನು ಅರಿಯುವುದರಿಂದಲೂ ಕೊನೆಯಲ್ಲಿ ಪ್ರಪಂಚ ರೂಪಿನ ಮಾಯೆ ನಿಂತು ಹೋಗುತ್ತದೆ.

ಪ್ರಧಾನವೆಂದರೆ ಪ್ರಕೃತಿ, ಪ್ರಕೃತಿಯೆಂಬುದು ನಾಶವಾಗುವಂಥದ್ದು ಹಾಗೂ ಪಂಚಭೂತ ಗಳಿಂದಾದ ಪ್ರತಿಯೊಂದು ವಸ್ತುವೂ ಇದರಡಿಯಲ್ಲಿ ಬರುತ್ತವೆ. ಆದರೆ ಪರಮಾತ್ಮ ಅವಿನಾಶಿ, ಸ್ಥಿರ ಅಂದರೆ ಬದಲಾವಣೆ ಆಗದಿರುವುದು ಅವನೇ ಪ್ರಧಾನ ಮತ್ತು ಜೀವರನ್ನು ಆಳುತ್ತಾನೆ.

'ಮಾಯೆ' ಎಂಬುದು ಪ್ರಪಂಚರೂಪಿನಂತೆ ಜೀವಿಯನ್ನು ಹಿಡಿದಿಟ್ಟಿದೆ. ಪ್ರಕೃತಿಯ ಅಭಿವ್ಯಕ್ತರೂಪವೇ ಪ್ರಪಂಚವಾಗಿ ತೋರುತ್ತದೆ. ಈ ಪ್ರಪಂಚದಿಂದ ಬಿಡಿಸಿಕೊಳ್ಳಬೇಕಾದರೆ ಪರಮೇಶ್ವರನ ಧ್ಯಾನದಿಂದ, ಅರಿವಿನಿಂದ ಅವನಲ್ಲಿ ಒಂದಾಗಬೇಕು. ಪರಮೇಶ್ವರನನ್ನು ಅರಿತಾಗಲೇ ಸರ್ವ ಪಾಶಗಳು ನಾಶವಾಗುತ್ತವೆ. ಈ ಮಾಯೆಗೆ ಕಾರಣನಾದ ಶಕ್ತಿ ಮಾಯಾವಿ ಎಂದು ಈ ರೀತಿ ಹೇಳಿದ್ದಾರೆ.

"ಛಂದಾಂಶಿ ಯಜ್ಞಾಃ ಕೃತವೊ ವ್ರತಾನಿ
ಭೂತಂ ಭವ್ಯಂ ಯಚ್ಚ ವೇದಾ ವದಂತಿ।
ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್
ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧ"

ತಾತ್ಪರ್ಯವೇನೆಂದರೆ, ಮಾಯಾಧೀಶನು ವೇದ ಯಜ್ಞ ಸಾಧನ ವ್ರತ ಭೂತ, ಭವಿಷ್ಯ ವೇದಗಳು ಸಾರುವ ಎಲ್ಲವನ್ನೂ, ನಮ್ಮನ್ನು ಸಹಿತ ಸೃಷ್ಟಿಸಿರುವನು. ಇಲ್ಲಿ ಮತ್ತೊಬ್ಬನು ಮಾಯೆಯಿಂದ ಬಂಧಿತನಾಗಿರುವನು.[೨]

ಈ ಪ್ರಪಂಚದಲ್ಲಿ ಜೀವರಾಶಿಗಳು ಮಾಯೆಗೆ ಅಧೀನರಾಗಿದ್ದು, ಸೃಷ್ಟಿಕರ್ತನೇ ಮಾಯಾಧೀಶ ನಾಗಿದ್ದಾನೆ. ಯಜ್ಞ, ವೇದ, ಜ್ಯೋತಿಷ್ಯ ವ್ರತ ಎಲ್ಲವೂ ಈ ಸೃಷ್ಟಿಕರ್ತನಿಂದ ಸೃಷ್ಟಿಯಾಗಿರುತ್ತವೆ. ಆದರೆ ಪರಮಾತ್ಮನೇ ಕಲ್ಪಿಸಿದ ಪ್ರಪಂಚದಲ್ಲಿ ಅವಿದ್ಯಾ ವಶದಿಂದ ಮಾಯೆಯಿಂದ ಬಂಧಿಸಲ್ಪಟ್ಟಂತೆ ತೋರಿಕೆಗೆ ಕಾಣುತ್ತದೆ. ಹೀಗೆ ಮಾಯೆ-ಮಾಯಾವಿಯ ನಡುವಿನ ಸಂಬಂಧವನ್ನು ಹೇಳುತ್ತಲೇ ಅವರೆಡರ ಸ್ವರೂಪವನ್ನು ನಿರ್ದಿಷ್ಟಗೊಳಿಸಲಾಗಿದೆ ಅದೇನೆಂದರೆ-

"ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂ ತುಮಹೇಶ್ವರಮ್ ।
ತಸ್ಯಾವಯಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್॥"

ತಾತ್ಪರ್ಯವೆಂದರೆ, ಪ್ರಕೃತಿಯೇ ಮಾಯೆ. ಮಹೇಶ್ವರನೇ ಮಾಯಾಧೀಶ, ಪ್ರಪಂಚವೆಲ್ಲ ಅವನಿಂದ ತುಂಬಿ ತುಳುಕಾಡುತ್ತಿದೆ.[೩] ಅಂದರೆ ಪ್ರಕೃತಿಯೇ ಮಾಯೆ

ಆಗಿದ್ದು, ಈ ಮಾಯೆ ತನ್ನಿಷ್ಟಕ್ಕೆ ಏನೂ ಮಾಡಲಾರದು. ಪರಮೇಶ್ವರನ ಇಚ್ಛೆಯಂತೆ ಮಾಯೆ ಆ ಕೆಲಸವನ್ನು ಮಾಡುತ್ತದೆ. ಮಾಯೆಯಿಂದ ಪಾರಾಗಬೇಕಾದರೆ ಅಥವಾ ಬಿಡಿಸಿಕೊಳ್ಳಬೇಕಾದರೆ ಅದರ ಒಡೆಯನಾದ ಪರಮೇಶ್ವರನನ್ನು ಮೊರೆ ಹೋಗಬೇಕು ಎಂಬರ್ಥದಲ್ಲಿ ಮಾಯೆ–ಮಾಯಾವಿಯನ್ನು ವಿವರಿಸಿದೆ.

೩.೨ ಆಗಮಗಳು: ಮಾಯೆ ಉಪನಿಷತ್ ಸಮಕಾಲೀನ ಆಗಮಗಳನ್ನು ಗಮನಿಸಿದಾಗ 'ಮಾಯೆ' ಪಾಶವೆಂಬಂತೆ ನಿರೂಪಿಸುತ್ತಾರೆ. ಆಗಮಗಳಲ್ಲಿ ಒಂದಾದ ಚಂದ್ರಜ್ಞಾನಾಗಾಮವನ್ನು ಗಮನಿಸಿದಾಗ ಮಾಯೆಯು ಪಾಶವೆಂದು ವಿವರಿಸಿದ್ದಾರೆ. ಕ್ರಿಯಾಪಾದದ ಪ್ರಥಮ: ಪಟಲ:ದಲ್ಲಿ 'ಪಶುಪತಿ ಪಾಶ ಪದಾರ್ಥ ನಿರ್ವಚನಮ್'ದಲ್ಲಿ ಹೀಗೆ ವಿವರಿಸಲಾಗಿದೆ.

"ತೇಷಾಂ ಪತಿತ್ವಾದ್ ವಿಶ್ವೇಶ: ಶಿವ: ಪಶುಪತಿ: ಸ್ಮತ: ।
ಮಲಮಾಯಾದಿಭಿಃ ಪಾಶೈಃ ಸ ಬಧ್ನಾತಿ ಪಶೂನ್ ಪತಿಃ"

ತಾತ್ಪರ್ಯವೆನೆಂದರೆ, ಅವುಗಳ ಒಡೆಯನಾದ್ದರಿಂದ ವಿಶ್ವೇಶನಾದ ಶಿವನು ಪಶುಪತಿಯೆನ್ನಿಸಿದ್ದಾನೆ. ಪತಿಯಾದ ಅವನು ಮಲ, ಮಾಯಾ ಮುಂತಾದ ಪಾಶಗಳಿಂದ ಪಶುಗಳನ್ನು ಕಟ್ಟಿ ಹಾಕುತ್ತಾನೆ'.[೪] ಇಲ್ಲಿ ಬ್ರಹ್ಮನಿಂದ ಹಿಡಿದು ಇಡೀ ಜಗತ್ತು ಮತ್ತು ಜಗತ್ತಿನ ಜೀವಿಗಳು ದೇವನಾದ ಶಿವನ ಪಶುಗಳು ಅವನೇ ಪಶುಗಳ ಪತಿ ಆಗಿರುತ್ತಾನೆ. ಈ ಜಗತ್ತಿನ ಜೀವ ಸಂಕುಲವನ್ನು ಸಂರಕ್ಷಿಸುವ ಕೆಲಸದ ಜೊತೆಗೆ ಮಾನವ ಜೀವಿಗಳನ್ನು ಮಲ, ಮಾಯೆ ಎಂಬ ಹಲವು ಪಾಶಗಳಿಂದ ಆವರಿಸಿ ಅವರಲ್ಲಿ ತಾನು–ನಾನು ಎಂಬ ಭಿನ್ನತೆಯನ್ನು ಮೂಡಿಸುತ್ತಾನೆ ಎಂಬ ಮಾತು ಪರಮೇಶ್ವರ ಆಗಮದ ದ್ವಾದಶಃ ಪಟಲಃದ 'ಜ್ಞಾನಯೋಗ ಸ್ವರೂಪ ನಿರೂಪಣಮ್'ದಲ್ಲಿ ಪತಿ–ಪಶು–ಪಾಶಗಳ ನಿರೂಪಣೆ ಇದೆ.

"ಮಲಯಾಯಾಧಿಭಿಃ ಪಾಶೈರ್ಬಧ್ನಾತಿ ಸ ಪಶೂನ್ ಪತಿಃ।
ಸ ವವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ"[೫]

ಶಿವನೇ (ಪರಮಾತ್ಮನೆ) ಮುಖ್ಯ ಅಥವಾ ಪತಿ. ಇವನನ್ನು ಆರಾಧಿಸಿದರೆ ಜೀವನನ್ನು ಮಾಯಾ– ಕರ್ಮಗಳಿಂದ ಮುಕ್ತಗೊಳಿಸುತ್ತಾನೆ ಎಂದು ಪರಮಾತ್ಮನೆ ಜೀವಿಗಳ ವರ್ತನೆಗೆ ಕಾರಣನೆಂದು ಆಜ್ಞೇಯನೆಂದು ಹೇಳಲಾಗಿದೆ. ಈ ಜಗತ್ತಿನ ಜೀವಿಗಳ ಪ್ರತಿಯೊಂದು ವರ್ತನೆಗೆ ಮಾಯಾ–ಕರ್ಮ ಎಂಬ ರೂಪ ಕೊಟ್ಟು ಇಂತಹ ವರ್ತನೆಗೆ ಸ್ವತಃ ಪರಮಾತ್ಮನೇ ಕಾರಣಿಭೂತನೆಂದು ಹೇಳಲಾಗಿದೆ. ತ್ರಿವಿಧ ಪಾಶಗಳು ಮಲ, ಮಾಯಾ ಮತ್ತು ಕರ್ಮ ಎಂದು ಹೇಳುವಲ್ಲಿ ಪಾಶ ಎಂಬುದರ ಒಂದು ಭಾಗವಾಗಿ 'ಮಾಯಾ' ಎಂದೂ, ಮಾಯಾ ಎಂಬುದು 'ಮಲ'ಕ್ಕಿಂತ ಭಿನ್ನ ಎಂಬಲ್ಲಿ ಎರಡರ ಸ್ವರೂಪ ಬೇರೆ ಎಂಬಂತೆ ಗುರುತಿಸಿದ್ದಾರೆ. ಚಂದ್ರಜ್ಞಾನಾಗಮದಲ್ಲಿ ಮಲತ್ರಯಗಳನ್ನು ಕಳೆದುಕೊಳ್ಳುವ ಕುರಿತು ಹೇಳುವಲ್ಲಿ

"ಆಣವಂ ಮಾಯಿಕಂ ಚೈವ ಕಾರ್ಮಿಕಂ ಚ ಯಥಾಕ್ರಮಮ್ ।
ಮಲತ್ರಯನಾದೀದಂ ತನುತ್ರಯಗತಂ ಭವೇತ್" ॥

'ಆಣವಮಲ, ಮಾಯಿಕಮಲ ಮತ್ತು ಕಾರ್ಮಿಕಮಲವೆಂಬ ಮಲಗಳು ಕ್ರಮವಾಗಿ ಕಾರಣ, ಸೂಕ್ಷ್ಮ, ಸ್ಥೂಲ ಎಂಬ ಮೂರು ಶರೀರಗಳಿಗೆ ಅಂಟಿಕೊಂಡಿವೆ.[೬] ಮಾಯಿಕ ಮಲ ಸೂಕ್ಷ್ಮಶರೀರಕ್ಕೆ ಅಂಟಿಕೊಂಡಿರುವುದರಿಂದ ಜೀವಿಯ ಜ್ಞಾನ ಶಕ್ತಿಯ ಸಂಕೋಚವುಂಟಾಗುತ್ತದೆ. ಇದರಿಂದ ಜೀವಾತ್ಮ ಮತ್ತು ಪರಮಾತ್ಮರಲ್ಲಿ ಭೇದವುಂಟಾಗುತ್ತದೆ. ಜೀವಕ್ಕೆ ಕಾಯದ ಮೇಲೆ ಸೆಳೆತ ಮೂಡುತ್ತದೆ. ಆತ್ಮವು ತನ್ನ ಇರುವನ್ನು ಮರೆಯುತ್ತದೆ. ಮಾಯೆ ಎಂಬುದರಿಂದ ಜೀವಿ ಮುಕ್ತನಾಗಬೇಕಾದರೆ ಪಂಚಾಕ್ಷರೀಮಂತ್ರದ ಸಾಧನ ಅಗತ್ಯವೆಂಬಂತೆ 'ಸೂಕ್ಷ್ಮಾಗಮ'ದಲ್ಲಿಯ ತೃತೀಯಃ ಪಟಲಃದಲ್ಲಿ ನಿರೂಪಿಸಲಾಗಿದೆ.

"ಪತಂತಿ ನರೆರೇ ಮೂಢಾ ಮಾಯಯಾ ಪರಿಮೋಹಿತಾಃ॥
ಮಹತೀ ಖಲು ಸಮಾಯಾ ದುಸ್ತರಾ ತ್ರಿಗುಣಾತ್ಮಿಕಾ
ಧರ್ಮಾರ್ಥ ಕಾಮ್ಯೈ ಸ್ತ್ರೀ ವಿಧೈರ್ಜಗದ್ವ್ಯಾಮೋಹಕಾರಿಣೀ॥
ವಂದರ್ಪಣಧಿಯಾ ಯೇಷಾಂ ಕರ್ಮಾರಂಭಫಲಂ ಶಿವೇ।
ಮದೇಕಶರಣಾ ಲೋಕೊ ಮಾಯಾಮೇತಾಂ ತರಂತಿತೇ"॥

ಸತ್ವ–ರಜ–ತಮೋ ಗುಣಗಳಿಂದ ಕೂಡಿದ ಮಾಯೆಯನ್ನು ಮೀರುವುದು ಅಸಾಧ್ಯ. ಈ ಮಾಯೆ ಧರ್ಮ, ಅರ್ಥ ಕಾಮಗಳೆಂಬ ಮೂರು ವಿಧದಿಂದ ಈ ಸಮಸ್ತಲೋಕವನ್ನು ವ್ಯಾಮೋಹದಲ್ಲಿ ಮುಳುಗಿಸಿದೆ.[೭] ಧ್ಯಾನ–ತಪದ ಮೂಲಕ ಮನಸ್ಸನ್ನು ಏಕಾಗ್ರಗೊಳಿಸುವ ಕ್ರಿಯೆಯ ಕುರಿತು ಇಲ್ಲಿ ಜಿಜ್ಞಾಸೆ ನಡೆದಿದೆ. ಧ್ಯಾನಕ್ಕೆ ಪಂಚಾಕ್ಷರಿ ಮಂತ್ರವನ್ನು ಸಾಧನವಾಗಿ ಗುರುತಿಸಲಾಗಿದೆ. ಪಂಚಾಕ್ಷರೀ ಮಂತ್ರ ಮನಸ್ಸನ್ನು ಮಾಯಾ ಪ್ರಭಾವದಿಂದ ಮುಕ್ತಗೊಳಿಸುವುದು ಎಂಬರ್ಥವಿದೆ.

೩.೩ ಭಗವದ್ಗೀತೆ: ಮಾಯೆ ವೇದದ ಸಾರವೆಂಬಂತಿರುವ ಭಗವದ್ಗೀತೆಯಲ್ಲಿ 'ಮಾಯೆ' ಕುರಿತು ಪ್ರಸ್ತಾಪ ಗೊಂಡಿದೆ ಸ್ವತಃ ಕೃಷ್ಣನು ಭಗವದರೂಪಿಯಾಗಿ ಉಪದೇಶಿಸುತ್ತಾನೆ.

"ದೈವಿ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ
ಮಾವೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ"

ಈ ತ್ರಿಗುಣಮಯವಾದ ನನ್ನ ದೈವೀಮಾಯೆಯನ್ನು ದಾಟಲು ಅಶಕ್ಯವು ಆದರೆ ನನ್ನನ್ನೇ ಯಾರು ಆಶ್ರಯಿಸುತ್ತಾರೋ ಅವರು ಆ ಮಾಯೆಯನ್ನು ದಾಟುತ್ತಾರೆ."[೮] ಭಗವದ್ ಸ್ವರೂಪಿಯೇ ಈ ಮಾಯಾ ಶಕ್ತಿಯನ್ನು ಸೃಷ್ಟಿಸುವನು. ಈ ಶಕ್ತಿಯನ್ನು ಮೀರಿ ನಿಲ್ಲಬೇಕಾದರೆ ಭಗವಂತನ ಆಶ್ರಯ ಪಡೆಯಬೇಕು. ಭಗವಂತನ ಪ್ರಾರ್ಥನೆ ಮಾಡಬೇಕು ಎಂಬರ್ಥವಿದೆ ಹಾಗೆ ಮಾಡದವರು ಮಾಯಾವೃತರಾಗಿರುತ್ತಾರೆ ಎಂಬುದನ್ನು

ಮತ್ತೊಂದು ಶ್ಲೋಕದಲ್ಲಿ ನಿರೂಪಿಸಲಾಗಿದೆ.

"ನಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ।

ಮಾಯಯಾಪಹೃತಜ್ಞಾನಾ ಅಸುರಂ ಭಾವಮಾಶ್ರಿತಾಃ"

ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳ ಅಸುರ ಭಾವವನ್ನು ಆಶ್ರಯಿಸಿದ ದುಷ್ಕೃತಿಗಳೂ ಮೂಢರೂ ಆದ ನರಾಧಮರು ನನ್ನನ್ನು ಹೊಂದುವುದಿಲ್ಲ" ಇಲ್ಲಿ ಮಾಯಾ ಅಥವಾ ಮಾಯೆ ಎಂಬುದು ಜೀವ ಮತ್ತು ದೇವನ ನಡುವೆ ಅಂತರವನ್ನು ಉಂಟುಮಾಡುವ ಒಂದು ವಿಶಿಷ್ಟ ಶಕ್ತಿ ಜೀವನು ದೇವನಲ್ಲಿ ಐಕ್ಯನಾಗಲು ಮೋಕ್ಷ ಸಾಧಿಸಲು ಎಡೆಮಾಡಿಕೊಡುವುದಿಲ್ಲ ಎಂಬರ್ಥದಲ್ಲಿದೆ.

ಭಾರತೀಯ ಧಾರ್ಮಿಕ ಕೃತಿ ಎನಿಸಿರುವ ಮಹಾಭಾರತದಲ್ಲಿ ಪುರುಷ–ಪ್ರಕೃತಿಗಳ ಕ್ರಿಯಾ ಸ್ವರೂಪದ ವಿವರಣೆ ಇದ್ದು, ಪುರುಷನ ಸಾನಿಧ್ಯದಲ್ಲಿ ಹುಟ್ಟುವ ಅದಮ್ಯ ಚೇತನ ಶಕ್ತಿಯೇ ಪ್ರಕೃತಿ. ಇಲ್ಲಿ ಪುರುಷ ಎಂಬುದು ಪರಮಾತ್ಮ ಸ್ವರೂಪದ್ದು. ಪ್ರಕೃತಿ ಎಂಬುದು ಪರಮಾತ್ಮನಿಂದ ಮೂಡುವ ಮಾಯಾ ಸ್ವರೂಪದ್ದಾಗಿದೆ. ಈ ಪ್ರಕೃತಿಯಿಂದಲೇ ಪಂಚಭೂತಗಳು ಹುಟ್ಟುವವು ಸತ್ವ, ರಜ, ತಮ ಎಂಬಿವು ಪುರುಷನನ್ನೂ (ಪರಮಾತ್ಮನನ್ನು) ಆವರಿಸುತ್ತವೆ. ಪುರುಷನಿಂದ ಉದಿಸಿದ ಶಕ್ತಿ ಜೀವನನ್ನು ಆವರಿಸುತ್ತವೆ ಎಂಬುದು ಆಗಮ–ಉಪನಿಷತ್‌ಗಳಲ್ಲಿ ಕಾಣುವ ವಿವರಣೆಗೆ ಇಲ್ಲಿ ಸಾಮ್ಯತೆ ಮೂಡಿದೆ.

೩.೪ ಶೈವ ಸಿದ್ಧಾಂತ: ಮಾಯೆ ಶೈವ ಸಿದ್ಧಾಂತದಲ್ಲಿ ಪತಿ, ಪಶು. ಪಾಶ ಎಂಬ ಮೂರು ಪ್ರಧಾನ ತತ್ವಗಳಾಗಿದ್ದು, ಈ ಸಿದ್ಧಾಂತದಂತೆ ಪರಮಾತ್ಮ ಜೀವಾತ್ಮ, ಜಗತ್ತು ಈ ಮೂರು ಸತ್ಯವಾದವುಗಳು. ಪರಮಾತ್ಮನೇ ಪತಿ. ಪರಮಾತ್ಮನಿಂದಲೇ ಉದಿಸಿದ ಈ ಜಗತ್ತು ಪರಮಾತ್ಮನಲ್ಲಿ ಲೀನಗೊಳ್ಳುತ್ತದೆ. ಪರಮಾತ್ಮನನ್ನು ಹರ, ಶಿವ ಎಂತಲೂ ಕರೆಯಲಾಗಿದೆ. ಜೀವನನ್ನು ಮಾಯಾ ಬಂಧದಿಂದ ಮುಕ್ತ ಗೊಳಿಸುವವನು ಹರನೇ ಆಗಿದ್ದಾನೆ ನಿರ್ಗುಣನು, ನಿರ್ಮಲನು ಆಗಿದ್ದಾನೆ. ಸ್ಥೂಲ–ಸೂಕ್ಷ್ಮಾದಿಗಳಿಂದ ಬಿಡುಗಡೆಗೊಂಡ ಜೀವನಿಗೆ ಭಗವಂತ ಜ್ಞಾನ ಜ್ಯೋತಿಯಾಗಿ ಕಾಣುತ್ತಾನೆ. ಮೂಲತಃ ಜೀವರು ಪರಮಾತ್ಮನ ಅಂಶವಾಗಿದ್ದು ಮಲಗಳ ಸಂಬಂಧದಿಂದ ಸಂಕುಚಿತಗೊಂಡು ಪಶುಗಳೆನಿಸಿಕೊಳ್ಳುವರು. ಮಾಯೆಯಲ್ಲಿ ಶುದ್ಧಮಾಯಾ ಮತ್ತು ಅಶುದ್ಧಮಾಯಾ ಎಂಬ ವಿಧಗಳಿದ್ದು ಶುದ್ಧ ಮಾಯಾ ಸಾದಾಖ್ಯದತ್ತ ಕೊಂಡೊಯ್ದರೆ, ಅಶುದ್ಧಮಾಯಾ ಜಗತ್ತ ಸೃಷ್ಟಿಗೆ ಆ ಮೂಲಕ ಪ್ರಾಪಂಚಿಕ ಮೋಹದತ್ತ ಜೀವನನ್ನು ಕೊಂಡೊಯ್ಯುತ್ತದೆ.

ಶೈವ ಸಿದ್ಧಾಂತದಲ್ಲಿ 'ಜೀವರುಗಳನ್ನು ಸಕಲ, ಪ್ರಳಯಕಲ, ವಿಜ್ಞಾನಕಲ ಎಂದು ಮೂರು ಮಲಗಳಿಂದ ಕೂಡಿದ್ದು, ಆಣವ, ಮಾಯಾ, ಕಾರ್ಮಿಕ ಮಲಗಳು ಇವರನ್ನು ಆವರಿಸಿ ಬಾಹ್ಯ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತಾನೆ. ಕ್ರಮವಾಗಿ

ವಿಜ್ಞಾನಕಲರು ಆಣವ ಮತ್ತು ಮಾಯಾ ಮಲದಿಂದ ಆವೃತರಾಗಿರುತ್ತಾರೆ. ಜೀವಾತ್ಮರಿಗೆ ಜನ್ಮಾಂತರಗಳನ್ನುಂಟು ಮಾಡುವ ಆಣವ, ಕಾರ್ಮಿಕ, ಮಾಯಾ, ಎಂಬ ಮೂರು ಮಲಗಳಲ್ಲಿ ಆಣವ ಮಲವು ಆಗರ್ಭವಾಗಿ ಬಂದಿರುವುದು. ಶೈವದ ಆಣವ ಮಲವು ಅದ್ವೈತಿಗಳ ಅವಿದ್ಯೆಯನ್ನು ಹೋಲುತ್ತವೆ. ಆಣವ ಮಲದ ಸಂಬಂಧದಿಂದ ಅನಂತ ವ್ಯಾಪ್ತಿಯುಳ್ಳ ಜೀವಾತ್ಮನು ಸಂಕುಚಿತನಾಗುವನು.'[೧೦] ಇದು ಜೀವಾತ್ಮನ ಬಂಧಕ್ಕೆ ಮೊದಲ ಕಾರಣವಾಗಿದೆ. ಶಿವನು ತನ್ನ ತಿರೋಧಾನ ಶಕ್ತಿಯ ಮೂಲಕ ಇದರೊಡನೆ ವ್ಯವಹರಿಸುವನು. ಆಣವ ಮಲದಿಂದ ಸಂಕುಚಿತನಾದ ಜೀವಾತ್ಮನು ಕರ್ಮ ಮಲದ ಪ್ರಭಾವದಿಂದ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಮಾಡಲು ಪ್ರೇರೇಪಣೆಗೊಂಡಾಗ ಸುಖ-ದುಃಖ ಉಂಟಾಗುತ್ತದೆ. ಜೀವ ಜನ್ಮಾಂತರಗಳನ್ನು ಹೊಂದಲು ಇದು ಕಾರಣವಾಗುತ್ತದೆ. ಜೀವ ಜನ್ಮ ಪಡೆದು ಸ್ಥೂಲ ಶರೀರದ ಮೂಲಕ ಬದುಕನ್ನು ಅನುಭವಿಸಲು ಮಾಯಾಮಲ ಕಾರಣವಾಗುತ್ತದೆ. ಈ ಮೂರು ಮಲಗಳು ಜೀವಾತ್ಮನಿಗೆ ಬಂಧನಗಳಾಗಿವೆ. ಈ ಬಂಧನದಿಂದ ಮುಕ್ತನಾಗಲು ಪರಮಾತ್ಮನನ್ನು ಧ್ಯಾನಿಸಬೇಕು. ಈಶ್ವರನಲ್ಲಿ ಜೀವ ಒಂದಾಗಲು ಜ್ಞಾನ ಸಾಧನವಾಗಬೇಕು ಎಂಬ ಅಂಶಗಳು ಈ ಸಿದ್ಧಾಂತದಲ್ಲಿ ವಿವರಿಸಲ್ಪಟ್ಟಿವೆ. ಇಲ್ಲಿಯೂ ಕೂಡಾ ಜೀವ-ಶಿವ ಸಂಬಂಧ ಅವುಗಳ ನಡುವೆ ತೊಡಕು 'ಮಾಯೆ' ಆಗಿದೆ.

೩.೫ ಕಾಶ್ಮೀರಶೈವ: ಮಾಯೆ ಶೈವದ ಪ್ರಭೇದವಾಗಿ ತೋರುವ ಕಾಶ್ಮೀರ ಶೈವದಲ್ಲಿ ಬ್ರಹ್ಮಾಂಡದ ಅವಿರ್ಭಾವವನ್ನು ವೀರಶೈವ ಸಲುವಾಗಿ ೩೬ ತತ್ವಗಳನ್ನು ವಿವರಿಸಲಾಗಿದೆ. ಈ ಮೂಲಕ ಪ್ರಕೃತಿಯ ಅತ್ಯಂತ ಪರಿಪೂರ್ಣ ವಿವರಣೆಯನ್ನು ಮಾಡುತ್ತದೆ. ಈ ಪ್ರಬೇಧಗಳಲ್ಲಿ ೩೬ ತತ್ವಗಳನ್ನು ಪರಿಶುದ್ಧ, ಅಪರಿಶುದ್ಧ ತತ್ವಗಳೆಂದು ಎರಡು ಬಗೆಗೆಗಳಲ್ಲಿ ವಿವರಿಸಲಾಗಿದೆ. ಪರಿಶುದ್ಧ ತತ್ವವನ್ನು ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧ, ವಿದ್ಯಾ ಎಂದು ೫ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಶಿವ, ಶಕ್ತಿ ಇವೆರಡು ಮಾಯೆಯಿಂದ ಹಿಡಿದು ಈ ಲೋಕದವರೆಗಿನ ಸಮಸ್ತ ವಸ್ತುಗಳ ಪುನರ್ ವಿಭಜನೆಗೆ ಕಾರಣವಾಗುವ ನಿಗೂಢ ಮೂಲಗಳೇ ಆಗಿರುತ್ತವೆಯಾದರೂ ಸ್ವತಃ ಯಾವುದೇ ದ್ವೈತ ಪರಿವರ್ತನೆಗೆ ಒಳಗಾಗುವುದಿಲ್ಲ. ಮಾಯೆಯಿಂದ ಹಿಡಿದು ಈ ಲೋಕದವರೆಗಿನ ೩೧ ತತ್ವಗಳನ್ನು ಅಪರಿಶುದ್ಧ ತತ್ವವು ಒಳಗೊಂಡಿದೆ. ಈ ಅಪರಿಶುದ್ಧ ತತ್ವದ ಎಲ್ಲ ಸ್ತರಗಳಲ್ಲಿಯೂ ಮಾಯೆ ಕ್ರಿಯಾಶೀಲವಾಗಿರುವುದನ್ನು ನಾವು ಕಾಣುತ್ತೇವೆ. ಸಂಪೂರ್ಣ ಕೆಳವರ್ಗದ ಸೃಷ್ಟಿಗೆ ಮಾಯೆ ಮೂಲಭೂತ ಕಾರಣ.[೧೧] ಪರಮಾತ್ಮನ ಸೃಜನಾತ್ಮಕ ಮುಖದ ಅತ್ಯುನ್ನತ ವಿಶಿಷ್ಟ ಶಕ್ತಿಯೇ ಮಾಯೆ. ಅದು ಭಿನ್ನತೆಯನ್ನು ತೋರುತ್ತದೆ. ಪರಿಶುದ್ಧ ತತ್ವ ಶಿವ-ಶಕ್ತಿಯಾದರೆ, ಅಪರಿಶುದ್ಧ ತತ್ವಗಳಲ್ಲಿ ಮಾಯೆ ವ್ಯಾಪಿಸಿಕೊಂಡಿದೆ. ಶಿವ-ಶಕ್ತಿ ಕಾರಣದಿಂದಲೇ

ಮಾಯೆ ವೈವಿಧ್ಯವಾಗಿ ವರ್ತಿಸುತ್ತದೆ.

ಕಾಶ್ಮೀರ ಶೈವದಲ್ಲಿ ಮಾಯೆಯ ಮೊದಲ ಸೃಷ್ಟಿಗಳೆಂದರೆ ಪಂಚಕಂಚುಕಗಳು. ಅವುಗಳೆಂದರೆ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ. ಈ ಮಾಯಾ ಎಂದರೆ 'ವೇದ್ಯ ಪ್ರಥಾ' ಎಂದರೆ ಭೇದ ಜ್ಞಾನ[೧೨] ಎಂಬರ್ಥವಾಗಿದೆ. ಇವು ಐದು ಪರಮಾತ್ಮನ ಪಂಚಶಕ್ತಿಗಳಾದ ಚಿತ್, ಆನಂದ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಇವುಗಳ ಸೀಮಿತ ಶಕ್ತಿ ರೂಪಗಳಾಗಿವೆ. 'ಪರಿಶುದ್ಧ ಸ್ಥಿತಿಯಲ್ಲಿ ಸರ್ವಜ್ಞತ್ವ ಸರ್ವಕರ್ತೃತ್ವ, ಸರ್ವವ್ಯಾಪಕತ್ವ ನಿತ್ಯತ್ವ ಮತ್ತು ಪರಿಪೂರ್ಣತ್ವದ ಶಕ್ತಿಗಳು ಅಶುದ್ಧ ಸ್ಥಿತಿಯಲ್ಲಿ ವಿದ್ಯಾ (ಸೀಮಿತ ಚೇತನ), ಕಲಾ (ಸೀಮಿತ ಸೃಷ್ಟಿ), ನಿಯತಿ(ನಿರ್ಬಂಧ ಅಥವಾ ನಿಯಂತ್ರಣ), ಕಾಲ (ಸೀಮಿತ ಅವಧಿ) ಮತ್ತು ರಾಗ (ಸೀಮಿತ ಅಭಿರುಚಿ) ಗಳೆಂಬ ಸೀಮಿತ ಶಕ್ತಿಗಳಾಗಿ ಕಾಣಿಸಿಕೊಳ್ಳುತ್ತವೆ. ಈ ಸೀಮಿತಗಳು ವ್ಯಕ್ತಿನಿಷ್ಠ ಸ್ವರೂಪವಾಗಿದ್ದು, ಸಾಮೂಹಿಕವಾಗಿ ಅವನ್ನು ಪಂಚಕಂಚುಕಗಳೆಂದು ಕರೆಯಲಾಗಿದೆ'.[೧೩] ಐದು ಕಂಚುಕಗಳ ಜೊತೆ ಮಾಯಾ ಎಂಬುದು ಸೇರಿ ಸಾಂಖ್ಯದ ಇಪ್ಪತ್ತೈದು ತತ್ವಗಳು ಒಟ್ಟುಗೂಡಿ ಮೂವತ್ತೊಂದು ರೀತಿಗಳಾಗಿ ತೋರುತ್ತವೆ. ಪಂಚ ಕಂಚುಕಗಳ ಜೊತೆಗೆ ಮೂರು ಮಲಗಳ ಪ್ರಸ್ತಾಪಗೊಂಡುದ್ದು, ಶೈವದ ಅನುಸರಣೆಯಂತೆ ವಿವರಿಸಲ್ಪಟ್ಟಿವೆ. ಇವುಗಳಲ್ಲಿ ಮಾಯಿಯ ಮಲವು ಆತ್ಮನಿಷ್ಠವಾದ ಭೌತಿಕ ವಸ್ತುಗಳನ್ನು ಸೃಷ್ಟಿಸುವ ಹಾಗೂ ವಸ್ತುನಿಷ್ಠವಾದ ಭೌತಿಕ ಪ್ರಪಂಚದಿಂದ ಹಿಡಿದು ಸರ್ವವ್ಯಾಪಕವಾದ ಪ್ರತಿಯೊಂದರಲ್ಲಿ ಕಂಚುಕಗಳಿಂದ ತೊಡಗಿ ಎಲ್ಲ ಪ್ರಕಾರಗಳನ್ನು ಪ್ರತಿನಿಧಿಸುತ್ತದೆ ಎಂಬಲ್ಲಿ ಮಾಯಾ ಸ್ವರೂಪ-ವ್ಯಾಪ್ತಿ ವಿಸ್ತಾರವಾಗಿದೆ ಎಂಬುದು ಸ್ಪಷ್ಟ. ಮಾಯಾ ಸ್ವರೂಪಕ್ಕೆ ಪೂರಕವಾಗಿ ಆಣವ-ಕಾರ್ಮಿಕಗಳು ಕಾರ್ಯ ನಿರ್ವಹಿಸುತ್ತವೆ. ಶೈವವನ್ನು ಅನುಸರಿಸುತ್ತಲೇ ಬಂದಂತೆ ಕಂಡರೂ ಅಹಂ-ಇದಂಗಳ ಚರ್ಚೆಯನ್ನು ಮಾಡುವಾಗ ಶುದ್ಧ ವಿದ್ಯೆಯನ್ನು ಅನುಸರಿಸುತ್ತದೆ.

ಕಾಶ್ಮೀರ ಶೈವವು ಶೈವವನ್ನು ಹಾಗೂ ಸಾಂಖ್ಯದ ತತ್ವಗಳನ್ನು ಅನುಸರಿಸಿ ರೂಪಗೊಂಡಿದೆ. ಮಾಯೆ ಎಂಬುದು ಪರಮಾತ್ಮನ ಅದೃಶ್ಯ ಶಕ್ತಿ. ಅವನಿಂದಲೇ ಉದಿಸಿ ಅವನನ್ನು ಆವರಿಸಿ ಅವನಲ್ಲಿ ಲೀನವಾಗುವ ವಿಶಿಷ್ಟ ಶಕ್ತಿ ಮಾಯೆ ಆಗಿದೆ.

೩.೬ ಶಾಕ್ತಮತ: ಮಾಯೆ ಶಿವ-ಶಕ್ತಿಯ ವಿಚಾರದಲ್ಲಿ ಶಿವನನ್ನು ಕೇಂದ್ರಿಕರಿಸಿ ಶೈವಮತವೂ ಶಕ್ತಿಯನ್ನು ಕೇಂದ್ರಿಕರಿಸಿ ಶಕ್ತಿ ಮತವು ರೂಪಗೊಂಡಿತು. ಶಕ್ತಿಮತದಲ್ಲಿ ಶಕ್ತಿಯೇ ಸರ್ವೋತ್ತಮವಾದುದು ಎಂದು ಹೇಳುವ ಮೂಲಕ ಪರತತ್ವವನ್ನು ದೇವಿ ಎಂದು ಆರಾಧಿಸುವ ಮೂಲಕ ಶಕ್ತಿ ಸಂಪ್ರದಾಯವಾಗಿ ಬೆಳೆದಿದೆ. ಶಕ್ತಿಮತವನ್ನು ಶಾಕ್ತಮತ, ತಂತ್ರಮತ, ತಾಂತ್ರಿಕಮತ, ದೇವೀಪಂಥ ಎಂದು ಕರೆಯಲಾಗಿದೆ. ವೇದದಲ್ಲಿಯ ಶ್ರೀಸೂಕ್ತ, ಭೂಸೂಕ್ತ ಇತ್ಯಾದಿ ಆಧರಿಸಿದ ವಿವರಗಳನ್ನು ಶಾಕ್ತಮತ ಒಳಗೊಂಡಿದೆ. ಇಲ್ಲಿ ಪರಮಶಿವನ

ಎರಡು ಸ್ವರೂಪಗಳೇ ಶಿವಶಕ್ತಿಯುರು. ಪರವಸ್ತುವಿನ ನಿರ್ಗುಣ ಶುದ್ಧ ಸ್ವರೂಪ ಶಿವನಾದರೆ, ಪರಮವಸ್ತುವಿನ ಅಂತರ್ಗತವಾದ ಇಚ್ಛಾ, ಜ್ಞಾನ, ಕ್ರಿಯಾ ಹಾಗೂ ಸ್ವಾತಂತ್ರ್ಯಗಳ ಸಮುದಾಯವೇ ಶಕ್ತಿಯಾಗಿದೆ. ಈ ಶಕ್ತಿ ವಿಮರ್ಶರೂಪ ಎಂದು ಕರೆಯಲ್ಪಟ್ಟಿದೆ. ಶಿವ ಶುದ್ಧ ಸತ್ವವಾದರೆ, ಶಕ್ತಿಯು ಆ ಸತ್ವದ ನಿರ್ಮಾಣ ಶಕ್ತಿ. ಶಿವ-ಶಕ್ತಿಯರು ಚಂದ್ರ-ಬೆಳದಿಂಗಳಿನಂತೆ ಬೇಧವಿಲ್ಲದ ಸ್ವರೂಪದಲ್ಲಿದೆ ಜಗತ್‌ಸೃಷ್ಟಿಗೆ ಕಾರಣವಾದ ಶಕ್ತಿ ಪರಾಶಕ್ತಿಯಾಗಿ ಜಗನ್ಮಾತೆ ಎನಿಸಿಕೊಳ್ಳುತ್ತಾಳೆ. ಪರಾಶಕ್ತಿಯಾದ ಜಗನ್ಮಾತೆ ಸೃಷ್ಟಿ ಸ್ಥಿತಿ ಸಂಹಾರಕಾರಣಿಯಾಗಿದ್ದು ಬ್ರಹ್ಮ, ವಿಷ್ಣು, ಶಿವ ಎಂಬ ದೇವತಾರೂಪಗಳೆಲ್ಲವೂ ಶಕ್ತಿಯ ಗುಣಗಳಾಗಿವೆ.

'ಶಕ್ತಿಯಿಂದ ಜಗತ್ತಿನ ಮೂವತ್ತಾರು ತತ್ವಗಳು ಉತ್ಪತ್ತಿಯಾಗಿರುತ್ತವೆ. ಈ ಜಗತ್ತು, ಜೀವರುಗಳು ಎಲ್ಲರೂ ಪರಶಿವನ ಶಕ್ತಿಯಿಂದಾಗಿ ಉತ್ಪನ್ನವಾದವರಾದುದರಿಂದ ಜಗತ್ತು, ಜೀವರು ಎಲ್ಲರೂ ಸತ್ಯವಾಗಿದ್ದಾರೆ. ಮೂವತ್ತಾರು ತತ್ವಗಳಲ್ಲಿ ಪಂಚಭೂತಗಳು (೫), ಪಂಚತನ್ಮಾತ್ರಗಳು (೫), ಹನ್ನೊಂದು ಇಂದ್ರಿಯಗಳು (೧೧), ಅಹಂಕಾರ, ಮಹತ್ ಮತ್ತು ಮೂಲಪ್ರಕೃತಿ (೨), ಪುರುಷ, ಪಂಚ ಕಂಚುಕಗಳು, ಮಾಯೆ, ವಿದ್ಯಾ, ಈಶ್ವರ, ಸದಾಶಿವ, ಶಕ್ತಿ, ಶಿವ (೫) ಎಂಬ ವಿಭಾಗಗಳಿವೆ.[೧೪] ಮೂವತ್ತಾರು ತತ್ವಗಳಲ್ಲಿ 'ಮಾಯೆ' ಎಂಬುದು ಒಂದಾಗಿದ್ದು, 'ಸೂರ್ಯನ ಕಿರಣಗಳ ತಾಪದಿಂದ ಮೇಘಗಳ ಉತ್ಪತ್ತಿಯಾದಂತೆ ಶಿವನು ತನ್ನ ಮಾಯಾ ಶಕ್ತಿಯಿಂದ ತಾನು ಅಪೂರ್ಣ ಎಂಬ ಸಂಕೋಚತೆತೆಗೊಳಗಾಗಿ ಜೀವ ನಾಗುತ್ತಾನೆ.[೧೫] ಶಿವನು ಮಾಯೆ ಪ್ರಭಾವದಿಂದ ಜೀವನಾಗಿ ತೋರುತ್ತಾನೆ. ಶಿವ-ಜೀವರ ನಡುವೆ ವ್ಯತ್ಯಾಸ ಮೂಡಿಸುವುದರಲ್ಲಿ 'ಮಾಯೆ' ಕಾರಣವಾಗುತ್ತದೆ. ಮಾಯೆ ಇಲ್ಲದೆ ಇದ್ದಲ್ಲಿ ಅವರೆಡು ಅಭೇದ್ಯ ರೂಪಗಳಾಗಿ ತೋರುತ್ತವೆ. ಶೈವ, ಪಾಶುಪತದ ಮಾದರಿಯಲ್ಲಿಯೇ ಮಾಯೆ ಅರ್ಥ, ವ್ಯಾಪ್ತಿ ಪಡೆದಿದೆ. ನಾಥ ಪಂಥದಲ್ಲಿ ಮಾಯೆ-ನಾಥ ಎಂದರೆ ಗುರು ಎಂದರ್ಥ. ಗೋರಖನಾಥ ಮಹಾಸಿದ್ಧಿಯೋಗಿಗಳಿಂದ ಅತೀ ಪ್ರಾಚೀನಕಾಲದಲ್ಲಿ ಸ್ಥಾಪಿಸಲ್ಪಟ್ಟ ಪಂಥವಾಗಿದೆ. ಈ ಪಂಥವು ಶೈವ ಮತದ ಮೂಲತತ್ವಗಳನ್ನು ಒಳಗೊಂಡಿದೆ. ನಾಥ ಪಂಥವು ಹಟಯೋಗ ಸಾಧನೆಗೆ ವಿಶೇಷ ಸ್ಥಾನ ನೀಡಿದೆ. ಇಂದ್ರೀಯಗಳನ್ನು ಜಯಿಸಿ ಶಿವ ಶಕ್ತಿಯು ಸಾನಿಧ್ಯವನ್ನು ಪಡೆಯಬೇಕು ಎಂಬ ನಿಲುವನ್ನು ಹೊಂದಿದೆ. ಶಿವನೇ ಸರ್ವಸ್ವ ಹಾಗೂ ಸರ್ವಶಕ್ತ, ಅವನಲ್ಲಿ ಅಡಗಿರುವ ಚಾಲನ, ಸೃಷ್ಟಿಯ ಚೈತನ್ಯವೇ ಶಕ್ತಿ. ಶಿವ-ಶಕ್ತಿಯರಲ್ಲಿ ಬೇಧವಿಲ್ಲ. ಶಿವಶಕ್ತಿಯರು ಪುರುಷ-ಪ್ರಕೃತಿ ರೂಪದಲ್ಲಿದ್ದು ಪರಮೇಶ್ವರ-ಪರಮೇಶ್ವರಿಯಾಗಿ ಪ್ರಕಟಗೊಳ್ಳುತ್ತಾರೆ. ಗುರುವಿನ ಮಾರ್ಗದರ್ಶನದಂತೆ ಹಠಯೋಗ, ಮಂತ್ರಯೋಗ, ಭಕ್ತಿಯೋಗದ ಮೂಲಕ ಶಿವ-ಶಕ್ತಿಯರ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ. ಅದರಿಂದ ಜೀವನ ಬಂಧನ ಹರಿದು ಮೋಕ್ಷ

ಪ್ರಾಪ್ತಿಯಾಗುತ್ತದೆ. ಹಠಯೋಗದ ಮೂಲಕ ಇಂದ್ರಿಯಗಳನ್ನು ಜಯಿಸುವುದು ಇಲ್ಲಿ ಮುಖ್ಯವಾಗುತ್ತದೆ. ಮಾಯೆ ಎಂದು ಕರೆಯುಲ್ಪಡುವ ಇಂದ್ರಿಯ ವಾಸನೆಗಳನ್ನು ನಿಯಂತ್ರಣದಲ್ಲಿಟ್ಟು ಯೋಗ ಸಾಧನೆ ಮಾಡುವುದೇ ಆಗಿದೆ.

೩.೭ ಪಾಶುಪತ: ಮಾಯೆ ಪಾಶುಪತ ಅಥವಾ ಲಕುಲೀಶ ಪಾಶುಪತ ಎಂದು ಕರೆಯಲ್ಪಡುವ ಪಾಶುಪತ ಮತವು ಶೈವದ ಒಂದು ಪ್ರಭೇದವಾಗಿ ತೋರುತ್ತದೆ. ಮಹಾಭಾರತದ ಶಾಂತಿ ಪರ್ವದಲ್ಲಿಯ ಪಾಶುಪತದ ಉಲ್ಲೇಖ ದೊರೆಯುತ್ತದೆ. ಪಾಶುಪತ ಮತವು ಪಂಚ ಪದಾರ್ಥಗಳನ್ನು ತತ್ವಗಳಾಗಿ ವಿವರಿಸಿದೆ. ಅವೆಂದರೆ ಕಾರ್ಯ, ಕಾರಣ, ಯೋಗ, ವಿಧಿ, ದುಃಖಾಂತ. ಮೊದಲನೆಯದಾದ ಕಾರ್ಯ (ಕಾರ್ಯ) ಎಂಬುದರಲ್ಲಿ ಪ್ರಧಾನದಿಂದ ಉದ್ಭವಿಸಿದ ಮಹದಾದಿಗಳು ಸಾಂಖ್ಯರ ಪ್ರಧಾನ ಎಂಬ ಸಾಮ್ಯತೆ ಇಲ್ಲಿ ಮೂಡುತ್ತದೆ. ಯಾವುದು ಸ್ವತಂತ್ರವಲ್ಲವೋ ಅದು ಕಾರ್ಯವು ವಿದ್ಯಾ, ಕಲಾ, ಪಶು ಎಂದು ಮೂರು ತೆರನಾಗಿರುವುದು. ಕಾರಣ ಪರಮಾತ್ಮನೇ ಆಗಿದ್ದು, ಗುಣ ಕರ್ಮ ಭೇದಗಳಿಗನುಸರಿಸಿ ಪತಿ ಮತ್ತು ಪಶು ಮೊದಲಾದ ವಿಭಾಗಗಳನ್ನು ಹೊಂದುವುದು. 'ಮೋಕ್ಷ ಸಾಧನೆಗೆ ಕಾರಣವಾಗುವ ಪಂಚಪದಾರ್ಥಗಳ ಜೊತೆ 'ಗುರು' ಎಂಬ ವ್ಯಕ್ತಿಗೆ ಇರಬೇಕಾದ ಗುಣಗಳನ್ನು ಪ್ರಸ್ತಾಪಿಸುತ್ತದೆ. ಅವುಗಳಲ್ಲಿ ಮಲ ಎಂಬುದು ಒಂದು. ಮಲ ಎಂದರೆ 'ಆತ್ಮವನ್ನು ಆವರಿಸುವ ದುಷ್ಟ ಭಾವವೇ ಆಗಿದೆ'. ಇದರಲ್ಲಿ ಐದು ಪ್ರಕಾರಗಳಿವೆ ೧) ಮಿಥ್ಯಾಜ್ಞಾನ, ೨) ಅಧರ್ಮ ೩) ಆಸಕ್ತಿ ಹೇತು ೪) ಚ್ಯುತಿ ೫) ಪಶುತ್ವ ಮೂಲ ಇವನ್ನು ಈ ತಂತ್ರದಲ್ಲಿ ಹೇಳಿರುವಂತೆ ವಿವೇಕದಿಂದ ತ್ಯಾಗ ಮಾಡಬೇಕು'[೧೬] ಎಂದು ಹೇಳಿದ್ದಾರೆ. ಮಲ ಎಂಬುದರಲ್ಲಿ ಬರುವ ೫ ಪ್ರಕಾರಗಳು ಮಾಯೆಯ ವಿವಿಧ ಕ್ರಿಯಾರೂಪಗಳಾಗಿ ಕಾಣುತ್ತವೆ. ವ್ಯಕ್ತಿಯಲ್ಲಿನ ಅಜ್ಞಾನವನ್ನು, ಅರಿವಿನ ಕೊರತೆಯನ್ನು ಪ್ರಸ್ತಾಪಿಸುತ್ತವೆ. ಕಾರ್ಯದಲ್ಲಿ ಒಂದಾಗಿ ಗುರುತಿಸಲಾದ ಪಶು, ಪಾಶವುಳ್ಳವನು ಆಗಿದ್ದಾನೆ. ಆಣವ ಕಾರ್ಮಿಕ ಮಾಯಾ ಮಲಗಳೇ ಪಾಶಗಳು. ಇವು ಪಶುವನ್ನು ತನ್ನ ಪ್ರಭಾವಕ್ಕೆ ಒಳಗು ಮಾಡಿಕೊಳ್ಳುತ್ತವೆ. ಇಂತಹ ಕ್ರಿಯೆಗೆ ಕಾರಣನಾದ ಪತಿ ಸರ್ವಶಕ್ತನಾಗಿ ನಿರ್ದೇಶಿಸುತ್ತಾನೆ.

೩.೮ ನ್ಯಾಯದರ್ಶನ: ಮಾಯೆ ಆಸ್ತಿಕ ದರ್ಶನಗಳೆಂದು ಕರೆಯಲ್ಪಡುವ ಆರು ವಿಧಗಳಲ್ಲಿ ನ್ಯಾಯದರ್ಶನವು ಒಂದಾಗಿದೆ. ನ್ಯಾಯ ದರ್ಶನದ ಆದ್ಯರು ಮಹರ್ಷಿ ಗೌತಮರು. ನ್ಯಾಯದರ್ಶನವನ್ನು ಅಕ್ಷಪಾದ ದರ್ಶನ ವೆಂತಲೂ, ತರ್ಕಶಾಸ್ತ್ರವೆಂತಲೂ ಕರೆಯುತ್ತಾರೆ. ವಿಮರ್ಶಾತ್ಮಕ ದೃಷ್ಟಿಯಿಂದ ಜೀವ–ಜಗತ್ತು–ಆತ್ಮ ಇತ್ಯಾದಿ ವಿಚಾರಗಳ ಬಗ್ಗೆ ತರ್ಕದಿಂದ ವಿವರಿಸುತ್ತದೆ. ಜೀವನದ ಪರಮಗುರಿ ಮೋಕ್ಷವೇ ಆಗಿದೆ. ಮೋಕ್ಷದ ಹಾದಿಯಲ್ಲಿ ಆತ್ಮಜ್ಞಾನದ ವಿಚಾರ ತಿಳಿಯಲು ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡ, ಹೇತ್ವಾಭಾಸ,

ಛಲ, ಜಾತಿ, ನಿಗ್ರಹಸ್ಥಾನ[೧೭] ಎಂಬ ಹದಿನಾರು ಅಂಶಗಳನ್ನು ಸೂಚಿಸಲಾಗಿದೆ. ಇವುಗಳಲ್ಲಿ 'ಪ್ರಮೇಯ' ಎಂಬುದು ಆತ್ಮಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಸಂಸಾರದಲ್ಲಿ ಬರುವ ವಿಷಯಗಳೇ ಪ್ರಮೇಯವಾಗಿದೆ. ಆತ್ಮ, ಶರೀರ, ಇಂದ್ರೀಯ, ಇಂದ್ರೀಯ ವಿಷಯಗಳು ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತಭಾವ, ಫಲ, ದುಃಖ, ಅಪವರ್ಗ (ಮೋಕ್ಷ) ಎಂಬ ಹನ್ನೆರಡು ಅಂಶಗಳು ಜೀವನ ಆಧ್ಯಾತ್ಮಿಕ ಸಾಧನೆಯಲ್ಲಿ ತಡೆಯನ್ನು ಉಂಟುಮಾಡುವಂಥವುಗಳಾಗಿವೆ. ಜೀವನು ತನ್ನ ಪೂರ್ವ ಕರ್ಮಗಳಿಗೆ ಅನುಸಾರವಾಗಿ ಸಂಸಾರ ಬಂಧನಕ್ಕೆ ಸಿಲುಕುತ್ತಾನೆ. ಸಂಸಾರ ದುಃಖ ನಿವೃತ್ತಿಯಾಗಬೇಕಾದರೆ ಮೇಲಿನ ಹದಿನಾರು ವಿಷಯಗಳ ಜ್ಞಾನ ಪಡೆಯುವುದೇ ಆಗಿದೆ. ಆಗ ಜೀವ ಕರ್ಮಗಳಿಂದ ಮುಕ್ತನಾಗುತ್ತಾನೆ. ಇಲ್ಲಿ ಮಾಯೆ ಎಂಬುದುರ ನೇರ ಉಲ್ಲೇಖವಿಲ್ಲದಿದ್ದರೂ ಪರೋಕ್ಷವಾಗಿ ಜೀವನ ಮುಕ್ತಿ ಸಾಧನೆಗೆ ಅಡ್ಡಿಯಾಗಿರುವ ಇಂದ್ರೀಯ, ಇಂದ್ರೀಯ ವಿಷಯಗಳು, ಪ್ರವೃತ್ತಿ ಇತ್ಯಾದಿ ಮಾಯೆಗೆ ಹೋಲಿಕೆಯಾಗುತ್ತವೆ.

೩.೯ ವೈಶೇಷಿಕ ದರ್ಶನ: ಮಾಯೆ ಕಣಾದ ಮಹರ್ಷಿಗಳಿಂದ ವೈಶೇಷಿಕ ದರ್ಶನ ರೂಪಗೊಂಡಿದೆ. ವೈಶೇಷಿಕ ದರ್ಶನದಲ್ಲಿ ವಿಶಿಷ್ಟತೆಗೆ ಹೆಚ್ಚಿನ ಪ್ರಾಧಾನ್ಯವಿದೆ. ಈ ದರ್ಶನದಲ್ಲಿ ಮುಖ್ಯವಾಗಿ ಅಣುಗಳು, ಆತ್ಮ ಮತ್ತು ಆಕಾರ ಎಂಬ ವಿಷಯಗಳ ಆಧಾರದ ಮೇಲೆ ಚರ್ಚಿಸಲಾಗಿದೆ. 'ಅಣು–ಆತ್ಮಗಳು ಅಸಂಖ್ಯವಾಗಿದ್ದು ಪ್ರತಿಯೊಂದಕ್ಕೂ ತನ್ನದೇ ಆದ ವಿಶಿಷ್ಟತೆ ಇದೆ'[೧೮] ಎಂದು ಪ್ರತಿಪಾದಿಸುತ್ತದೆ. ನ್ಯಾಯದರ್ಶನದಂತೆ ವೈಶೇಷಿಕ ದರ್ಶನವು ವಸ್ತುಗಳ ವಿಚಾರದ ಜ್ಞಾನಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. 'ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಇತ್ಯಾದಿ ಮೂಲಭೂತ ವಿಚಾರಗಳನ್ನು ವಿಮರ್ಶಿಸಿ ಎಲ್ಲವೂ ಅಣುವಿನ ರೂಪಾಂತರವಾಗಿದೆ' ಎಂದು ಈ ದರ್ಶನದಲ್ಲಿ ವಿವರಿಸಲಾಗಿದೆ.

ಜಗತ್ತಿನಲ್ಲಿ ಕಾಣುವ ಪದಾರ್ಥಗಳ ವಿಚಾರವಾಗಿ ಏಳು ವಿಭಜನೆಗಳನ್ನು ಮಾಡಲಾಗಿದೆ. ಅವೆಂದರೆ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಆಗಿವೆ. ಇವುಗಳ ಕುರಿತು ಸರಿಯಾದ ತಿಳುವಳಿಕೆ ಪಡೆಯುವುದರಿಂದ ಜೀವನು ಮೋಕ್ಷ ಪಡೆಯಲು ಸಾಧ್ಯ. ಈ ದರ್ಶನದಲ್ಲಿ ದೇವರು ಎಂಬ ವಿಚಾರವಾಗಿ ನಿರ್ದಿಷ್ಟ ವಿವರಣೆ ಇಲ್ಲವಾಗಿದ್ದು, ಜಗತ್ತಿನ ಸೃಷ್ಟಿ, ಜೀವಿಗಳ ಜನನ–ಮರಣ ಇತ್ಯಾದಿ ವಿಚಾರಗಳ ಕುರಿತು ವಿವರಣೆಯಿದೆ. ಜಗತ್ತಿನಲ್ಲಿ ತನ್ನ ಕರ್ಮಕ್ಕನುಸಾರವಾಗಿ ಜೀವನು ಜನ್ಮ ತಳೆಯುತ್ತಾನೆ. ಈ ಜಗತ್ತಿನ ಪದಾರ್ಥಗಳ ಕುರಿತಾದ ಅರಿವನ್ನು ಪಡೆಯುವದರಿಂದ ಅಜ್ಞಾನವು ನಿವೃತ್ತಿಯಾಗಿ ಜ್ಞಾನ ಉಂಟಾಗುತ್ತದೆ. ಆಧ್ಯಾತ್ಮ ಸಾಧನೆಯ ಹಾದಿಯಲ್ಲಿ ಕಾಣುವ ಶಕ್ತಿಯು ತನ್ನ ಕಾರ್ಯ ನಿರ್ವಹಿಸುತ್ತದೆ.

ಈ ಜಗತ್ತಿನಲ್ಲಿ ಪೃಥ್ವಿ, ಅಗ್ನಿ, ಜಲ, ಆಕಾಶ, ವಾಯು, ದೇಶ, ಕಾಲ, ಆತ್ಮ,

ಮನಸ್ಸು ಎಂಬ ಒಂಬತ್ತು ಪದಾರ್ಥಗಳು ಪರಮಾಣುಗಳಿಂದ ರಚಿತವಾಗಿ ಅನಂತವಾದವುಗಳಾಗಿವೆ. ಜೀವನು ಇಂತಹ ಜಗತ್ತಿನಲ್ಲಿ ಜನಿಸುವುದರ ಮೂಲಕ ಕರ್ಮ ಬಂಧನಕ್ಕೆ ಒಳಗಾಗುತ್ತಾನೆ. ಜೀವಕ್ಕೆ ಅಂಟಿರುವ ಕರ್ಮವನ್ನು ಕಳೆದುಕೊಳ್ಳುವುದು ಮುಖ್ಯವಾಗಿದೆ. ಇಲ್ಲಿ ಕರ್ಮವೇ ಮಾಯೆ ಆಗಿದೆ. ಕರ್ಮಮುಕ್ತನಾಗುವುದೆಂದರೆ ಮಾಯಾಭಾವದಿಂದ ಬಿಡಿಸಿಕೊಳ್ಳುವುದಾಗಿದೆ.

೩.೧೦ ಸಾಂಖ್ಯದರ್ಶನ: ಮಾಯೆ ಉಪನಿಷತ್‌ಗಳಷ್ಟೆ ಪ್ರಾಚೀನ ಎಂದು ಗುರುತಿಸಿಕೊಳ್ಳುವ ದರ್ಶನಗಳಲ್ಲಿ ಸಾಂಖ್ಯವು ಒಂದಾಗಿದೆ. ಪಾಶುಪತದಲ್ಲಿ ಹೇಳುವ ಕಾರ್ಯ-ಕಾರಣಗಳು ಇಲ್ಲಿಯೂ ಪ್ರಸ್ತಾಪಗೊಂಡಿವೆ. ಕಾರ್ಯ ಕಾರಣಗಳು ಎರಡು ಒಂದೇ ವಸ್ತುವಿನ ವಿಭಿನ್ನ ಅವಸ್ಥೆಗಳು. ಅವರೆಡು ಬೇರೆ ಬೇರೆ ಕಂಡರೂ ಮೂಲದಲ್ಲಿ ಒಂದೇ ಆಗಿವೆ. 'ಸಾಂಖ್ಯದ ಮೂಲ ಭೂತ ಪರಿಕಲ್ಪನೆ ಪ್ರಕೃತಿ ಅಥವಾ ಸ್ವಭಾವ ಇದರಿಂದ ಭೌತಿಕ ಜಗತ್ತಿನ ನಿರ್ಮಾಣವಾಗುತ್ತದೆ. ಪ್ರಕೃತಿ ಎಂಬ ಮೂಲ ದ್ರವ್ಯದಲ್ಲಿ ಸತ್ವ, ರಜ, ತಮ ಎಂಬ ೩ ಗುಣಗಳಿಂದ ಉಂಟಾಗುವ ರೂಪಾಂತರವೇ ವೈವಿಧ್ಯಮಯ ಜಗತ್ತಿಗೆ ಕಾರಣ'[೧೯] ಪ್ರಕೃತಿ ಎಂಬುದು ಮಾಯಾ ಸ್ವರೂಪದ್ದಾಗಿದೆ. ಪರಮಾತ್ಮ ಕಾರಣನಾಗಿ ಪ್ರಕೃತಿಯ ಮೂಲಕ ಜಗತ್ ಸೃಷ್ಟಿಯಲ್ಲಿನ ವೈವಿಧ್ಯತೆಗೆ ಕಾರಣನಾಗುವನು.

೩.೧೧ ಯೋಗದರ್ಶನ: ಮಾಯೆ ಸಾಂಖ್ಯದ ಜೊತೆಗೆ ಯೋಗ ದರ್ಶನ ಪ್ರಸ್ತಾಪಕ್ಕೆ ಬರುತ್ತದೆ. ಸಾಂಖ್ಯದಲ್ಲಿ ದೇವರು ಎಂಬುದು ಒಪ್ಪಿತವಿಲ್ಲ ಆದರೆ ಯೋಗದಲ್ಲಿ ದೇವರು ಎಂಬುದು ಈಶ್ವರ ರೂಪದಲ್ಲಿ ಅಸ್ತಿತ್ವ ಪಡೆದಿದೆ. ಯೋಗದರ್ಶನ ಪ್ರವರ್ತಕನಾದ ಹಿರಣ್ಯಗರ್ಭನು ಸೂಚಿಸಿದ ಸಂಪ್ರದಾಯವನ್ನು ಪತಂಜಲಿ ಮಹರ್ಷಿ ಯೋಗ ದರ್ಶನವನ್ನು ತರ್ಕಬದ್ಧವಾಗಿ ರೂಪಿಸಿದನು. 'ಯೋಗಹಃ' ಚಿತ್ತವೃತ್ತಿ ನಿರೋಧ:'[೨೦] ಎಲ್ಲಾ ಚಿತ್ತವೃತ್ತಿಗಳ ನಿರೋಧವೇ ಯೋಗ. ಅಂದರೆ ಮನುಜನ ಮಾನಸಿಕ ಪ್ರವೃತ್ತಿಯನ್ನು ನಿಗ್ರಹಿಸುವುದೇ ಯೋಗವಾಗಿದೆ. ಸಾಮಾನ್ಯವಾಗಿ ಮನುಜನಲ್ಲಿ ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ, ನಿರುದ್ಧ ಎಂಬ ಪಂಚವೃತ್ತಿಗಳಿವೆ. ಮನುಜ ನಿರುದ್ಧ ಸ್ಥಿತಿಗೆ ಬಂದಾಗ ಸಮಾಧಿ ಸ್ಥಿತಿಯ ಅನುಭವ ದೊರೆಯುತ್ತದೆ. ನಿರುದ್ಧ ಸ್ಥಿತಿಗೆ ತಲುಪಲು ಮನುಜ ಅವಿದ್ಯೆ, ಅಹಂಕಾರ,ರಾಗ, ದ್ವೇಷ, ಅಭಿನಿವೇಶ ಎಂಬ ಪಂಚ ಕ್ಲೇಷಗಳಿಂದ[೨೧] ಮುಕ್ತನಾಗಬೇಕು. ಪಂಚಕ್ಲೇಷಗಳಲ್ಲಿ ಒಂದಾದ ಅವಿದ್ಯೆ ಎಂಬ ಮಾಯೆಗೆ ಸಮೀಕೃತವಾಗಿದೆ. ಅವಿದ್ಯೆ ಎಂಬುದು ಆತ್ಮ-ಅನಾತ್ಮಗಳ ವಿಚಾರದಲ್ಲಿ ಸರಿಯಾದ ಜ್ಞಾನವಿಲ್ಲದಿರುವ ಮನುಜನ ಸ್ಥಿತಿಯನ್ನು ಸೂಚಿಸುತ್ತದೆ. ಇಂಥ ಸ್ಥಿತಿಯಿಂದ ಮುಕ್ತನಾಗಬೇಕೆಂದರೆ ಯೋಗ ಸಾಧನೆಯಲ್ಲಿ ತೊಡಗಬೇಕು ಎಂದು ಯೋಗದರ್ಶನದಲ್ಲಿ ಹೇಳಲಾಗಿದೆ. ಯೋಗ ಸಾಧನೆಯ ಮೂಲಕ ಮನಸ್ಸನ್ನು ನಿಯಂತ್ರಿಸಿ ಭಗವತ್ ಸ್ವರೂಪಿ ಪರಮಾತ್ಮನಲ್ಲಿ ಕೇಂದ್ರಿಕರಿಸಿದಾಗ ಮುಕ್ತಿ ದೊರೆಯುತ್ತದೆ. ಮನುಷ್ಯನು

ಕೈಗೊಳ್ಳುವ ಯೋಗ ಸಾಧನೆಯಲ್ಲಿ ಪಂಚಕ್ಲೇಷಗಳು ಸಂಸಾರ ಬಂಧನದಿಂದ ಉಂಟಾಗುತ್ತವೆ. ಮಾಯೆ ಎಂಬುದಕ್ಕೆ ಸಂವಾದಿಯಾಗಿ ಅವಿದ್ಯೆ ನಿರೂಪಿತಗೊಂಡಿದೆ.

೩.೧೨ ಮೀಮಾಂಸಾ ದರ್ಶನ: ಮಾಯೆ ವೇದಗಳ ಬಗ್ಗೆ ನಾಸ್ತಿಕ ಭಾವನೆ ಮೂಡಿದಾಗ ಅವುಗಳ ರಕ್ಷಣೆಗೆಂಬಂತೆ ಮೀಮಾಂಸಾದರ್ಶನದಲ್ಲಿ ವೇದೋಕ್ತ ಕರ್ಮಗಳ ಅನುಷ್ಠಾನವೇ ಧರ್ಮ ಎಂದು ಹೇಳಲಾಗಿದೆ. ಮೀಮಾಂಸಾ ದರ್ಶನದ ಪ್ರಕಾರ ಜಗತ್ತು ಸತ್ಯವಾದುದು ಮೋಕ್ಷ ಎಂದರೆ ಜಗತ್ತಿನೊಡನೆ ಆತ್ಮದ ಸಂಬಂಧ ನಾಶವಾಗುವುದರ ಮೂಲಕ ಸ್ವರ್ಗ ಪ್ರಾಪ್ತಿಯಾಗುತ್ತದೆ. ಸ್ವರ್ಗಪ್ರಾಪ್ತಿಗೆ ಬಾಹ್ಯದ ಆಚರಣೆಯ ವಿಧಿಗಳನ್ನು ಅನುಸರಿಸಬೇಕು.

೩.೧೩ ವೇದಾಂತ ದರ್ಶನ: ಮಾಯೆ ಮೀಮಾಂಸಾದರ್ಶನದಿಂದ ಜೀವನದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗದು ಎಂದು ಪರಿಭಾವಿಸಿ ವೇದಾಂತ ದರ್ಶನವನ್ನು ರಚಿಸಲಾಗಿದೆ. ವೇದಾಂತ ಎಂದರೆ ಜ್ಞಾನದ ಅಂತ್ಯ ಎಂದರ್ಥ. ಜ್ಞಾನದ ಅಂತ್ಯ ಎಂದರೆ ಅಂತಿಮವಾದ ನೆಲೆ, ಜ್ಞಾನದ ಅನ್ವೇಷಣೆಯ ಮಹೋನ್ನತ ಗುರಿ ಎಂಬ ತಾತ್ಪರ್ಯವಿದೆ. ಈ ದರ್ಶನದಲ್ಲಿ ವೇದದಲ್ಲಿಯ ಉಪನಿಷತ್ ಭಾಗವನ್ನು ಮುಖ್ಯವಾಗಿ ಗಮನಿಸಲಾಗಿದೆ.

ವೇದಾಂತ ದರ್ಶನದಲ್ಲಿ ಬರುವ ಮುಖ್ಯವಾದ ವಿಚಾರಗಳೆಂದರೆ ಬ್ರಹ್ಮ, ಮಾಯೆ, ಜೀವ, ಜಗತ್ತು, ಸಂಸಾರ ಬಂಧನ ಮತ್ತು ಮೋಕ್ಷ. ಜಗತ್ತಿನಲ್ಲಿ ಬ್ರಹ್ಮವೆಂಬುದು ದಿವ್ಯಶಕ್ತಿಯಾಗಿದ್ದು ಜೀವರು ಅಜ್ಞಾನ ಹಾಗೂ ಅವಿದ್ಯೆಯಿಂದ ಜನನ–ಮರಣ ಚಕ್ರಕ್ಕೆ ಸಿಲುಕುತ್ತಾರೆ. ಆತ್ಮ ವಿದ್ಯೆಯ ಮೂಲಕ ಆತ್ಮ ಸಾಕ್ಷಾತ್ಕಾರಗಳಿಸುವುದೇ ಮುಖ್ಯವಾಗಿದೆ. ಆತ್ಮ ಸಾಕ್ಷಾತ್ಕಾರದ ಮೂಲಕ ಸದಾನಂದ ಅನುಭವ ಮೂಡಿ ಭವದ ಸೆಳೆತಗಳಿಂದ ಮುಕ್ತನಾಗುತ್ತಾನೆ. ಆತ್ಮಸಾಕ್ಷಾತ್ಕಾರವಾಗಲು ಜೀವನು ಸಂಸಾರ ಬಂಧನವೆಂಬ ಮಾಯೆಯಿಂದ ಮುಕ್ತನಾಗಬೇಕು.

೩.೧೪ ಜೈನಧರ್ಮ: ಮಾಯೆ ಅವೈದಿಕ ಅಥವಾ ಶ್ರಮಣದರ್ಶನವೆಂದು ಗುರುತಿಸಲ್ಪಟ್ಟಿದ್ದು 'ಜೈನಧರ್ಮ'. ಈ ಧರ್ಮದ ತತ್ವಗಳನ್ನು ಗಮನಿಸಿದಾಗ ಕರ್ಮ ಸಿದ್ಧಾಂತಕ್ಕೆ ವಿಶೇಷ ಸ್ಥಾನ ಪಡೆದಿದೆ. ಜೈನ ಸಿದ್ಧಾಂತದಲ್ಲಿ ಬರುವ ಒಂದು ವಿಶಿಷ್ಟ ಅಂಶವೆಂದರೆ ಪುದ್ಗಲ. ಇದು ಇತರ ಸಿದ್ಧಾಂತಗಳಲ್ಲಿರುವ ಪ್ರಕೃತಿ, ಪ್ರಧಾನ, ಪರಾಶಕ್ತಿ ಎಂಬವುಗಳಿಗೆ ಸಂವಾದಿಯಾಗಿದೆ. ಪುದ್ಗಲ ಜೀವಕ್ಕೆ ಅಂಟಿಕೊಂಡಿರುತ್ತದೆ. 'ಒಂದೇ ಪ್ರದೇಶವುಳ್ಳ ಪುದ್ಗಲಕ್ಕೆ ಅಣು ಎನ್ನುವರು. ಅತಿ ಸೂಕ್ಷ್ಮವಾಗಿರುವ ಪುದ್ಗಲ ಕರ್ಮದಿಂದಾಗುವುದು. ಕಾರ್ಮಿಕ ಮಲದ ಪ್ರವೃತ್ತಿ ಜೀವರುಗಳಿಗೆ ಅಂಟಿಕೊಳ್ಳುತ್ತದೆ. ಅದರಿಂದಾಗಿ ಜೀವ ಸಂಸಾರದಲ್ಲಿ ತೊಳಲಿ ಬಳಲುತ್ತಾನೆ. ಸರ್ವವ್ಯಾಪಿಯಾದ ಇದರಿಂದ ಬಿಡಿಸಿಕೊಳ್ಳಲು ಜೀವ ವ್ರತ–ನಿಯಮಗಳನ್ನು ಪಾಲಿಸಬೇಕು. ಮತ್ತು ಕರ್ಮಕ್ಷಯಗೊಳಿಸಿ ಕೊಳ್ಳಬೇಕು ಎಂಬಲ್ಲಿ ಜೈನ ತತ್ವ ದ್ವಾದಶಾಂಶಗಳು, ಹದಿನಾಲ್ಕು ಪೂರ್ವಗಳು, ಹದಿನಾಲ್ಕು ಅಂಗಬಾಹ್ಯ

ಶ್ರುತಗಳ ಕುರಿತು ಪ್ರಸ್ತಾಪಿಸಿದೆ. ಅಲ್ಲದೇ ಜೀವ ನಿಶ್ಯಲ್ಯಗಳನ್ನು ಸ್ವೀಕರಿಸಬೇಕು ಎಂಬಲ್ಲಿ ನಿಶ್ಯಲ್ಯಗಳು[೨೨] ಮೂರು ಪ್ರಕಾರದವುಗಳಾಗಿವೆ. ೧) ಮಾಯಾ (ಕಪಟ) ೨) ಮಿಥ್ಯಾ (ಶ್ರದ್ಧೆಯ ಅಭಾವ), ೩) ನಿಧಾನ (ಭೋಗಾಕಾಂಕ್ಷೆ) ಗಳಿಂದ ಜೀವ ಮುಕ್ತನಾಗಿರಬೇಕು ಆಗ ಮಾತ್ರ ಕರ್ಮವು ಹೆಚ್ಚದಂತೆ ತಡೆಯಲು ಸಾಧ್ಯ ಎಂಬರ್ಥದಲ್ಲಿ ಹೇಳಲಾಗಿದೆ. ಅಲ್ಲಿ ಬರುವ 'ಮಾಯಾ' ಎಂಬುದು ಕಪಟತನವೆಂಬುದನ್ನು ಸೂಚಿಸುವುದು. ಪುದ್ಗಲಮಯವಾದ ಈ ಪ್ರಪಂಚದಲ್ಲಿ ಜೀವ ಕರ್ಮಕ್ಕೆ ಒಳಗಾಗುವ ಹಲವು ಕಾರಣಗಳಲ್ಲಿ 'ಮಾಯಾ' ಒಂದು ಆಗಿದೆ. ಮಾಯಾ ಎಂಬುದನ್ನು ಕಷಾಯವೆಂತಲೂ ಜೈನರಲ್ಲಿ ಗುರುತಿಸಿದ್ದಾರೆ. 'ಕಾಷಾಯ'[೨೩] ಎಂಬುದು ಕ್ರೋಧ, ಮಾನ, ಮಾಯಾ, ಲೋಭಗಳಾಗಿವೆ. ಜೀವ ಕ್ಷಣಿಕ ಲೋಭಕ್ಕೆ ಒಳಗಾಗುವ ಸಂದರ್ಭವನ್ನು ಹೇಳಿದ್ದಾರೆ. ಇವೆರಡು ಸಂದರ್ಭದಲ್ಲಿ 'ಮಾಯಾ' ಎಂಬುದು ಜೀವವನ್ನು ಕರ್ಮಕ್ಕೊಳಗು ಮಾಡುತ್ತದೆ. ಜೀವನು ಪ್ರಾಪಂಚಿಕ ಮೋಹಕ್ಕೆ ಒಳಗಾಗುವಂತೆ ಮಾಡುತ್ತದೆ.

೩.೧೫ ಬೌದ್ಧಧರ್ಮ:ಮಾಯೆ ಹಿಂದೂ ಧರ್ಮಕ್ಕಿಂತ ವಿಭಿನ್ನ ವಿಚಾರಧಾರೆಗಳನ್ನು ಒಳಗೊಂಡು ರೂಪಗೊಂಡ ಬೌದ್ಧ ಧರ್ಮ ಪ್ರಪಂಚದ ಧರ್ಮವೆಂಬ ಸ್ಥಾನ ಪಡೆದಿದೆ. ಬೌದ್ಧ ಧರ್ಮದಲ್ಲಿ ನಾಲ್ಕು ಆರ್ಯ ಸತ್ಯಗಳ ಪ್ರಸ್ತಾಪವಿದೆ. ಆಸೆ-ದುಃಖ ಕುರಿತು ವಿವರಣೆಯಿದೆ. ನೈತಿಕ ಪರಿಶುದ್ಧಿಗೆ ಪ್ರಾಧಾನ್ಯತೆ ಕೊಟ್ಟಿದೆ. ಬುದ್ಧನು ಮಧ್ಯಮಮಾರ್ಗ ನಿರೂಪಿಸಿದ್ದಾನೆ. 'ಮಾಧ್ಯಮಿಕ ದೃಷ್ಟಿಯಲ್ಲಿ ಸತ್ಯವು ಎರಡು ವಿಧ-ಸಂವೃತ್ತಿ ಮತ್ತು ಪರಮಾರ್ಥ. ಈ ಎರಡೂ ಉಪದೇಶವು ಸತ್ಯವನ್ನಾಶ್ರಯಿಸಿದೆ. ಸಂವೃತ್ತಿ ಎಂದರೆ ಅವಿದ್ಯೆ. ಇದು ಸತ್ಯವಾದದ್ದನ್ನು ಮರೆಮಾಡಿ ಆವರಣವನ್ನುಂಟು ಮಾಡುತ್ತದೆ. ವಸ್ತುವಿನ ಅಕೃತ್ರಿಮ ಸ್ವರೂಪವೇ ಪರಮಾರ್ಥ. ಸಂವೃತ್ತಿಯಿಂದ ಉದ್ಭವಿಸುವ ಸಮಸ್ತ ಕ್ಲೇಷಗಳನ್ನು ಇದು ಪರಿಹರಿಸುತ್ತದೆ. ವ್ಯವಹಾರದ ಎಲ್ಲೆಯನ್ನು ಮೀರಿದ ಸತ್ಯವಿದು.[೨೪] ಬುದ್ಧಿಗೆ ಗೋಚರವಾದ್ದು ಸಂವೃತ್ತಿಯಾದರೆ ಅಗೋಚರವಾದದ್ದು ಪಾರಮಾರ್ಥ ಎಂದು ಹೇಳಲಾಗಿದೆ. ಜೀವಿಗೆ ದುಃಖ ಉಂಟಾಗುವಂಥ ಕಾರಣಕ್ಕೆ ಮತ್ತು ಪ್ರತೀತ್ಯ ಸಮುತ್ಪಾದ ಅಥವಾ ನಿದಾನವೆಂದು ಹೆಸರು. ಈ ನಿಧಾನವನ್ನು ಹನ್ನೆರಡು ವಿಧಗಳಲ್ಲಿ ಗುರುತಿಸಿದ್ದಾರೆ. ಅವೆಂದರೆ ಅವಿದ್ಯಾ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪದಾನ, ಭವ, ಜಾತಿ, ಜರಾಮರಣ ಆಗಿವೆ. ಈ ಹನ್ನೆರಡು ಸಂಗತಿಗಳನ್ನು ಭವಚಕ್ರವೆಂದು ಒಂದು ಮತ್ತೊಂದನ್ನು ಅವಲಂಬಿಸಿ ಪ್ರಪಂಚವನ್ನು ರೂಪಿಸುತ್ತವೆ. ಈ ಹನ್ನೆರಡು ನಿದಾನಗಳು ಶ್ರೇಣೀಕೃತ ಮಾದರಿಯಲ್ಲಿ ಒಂದನ್ನೊಂದು ಆಧರಿಸಿ ರೂಪಗೊಂಡಿವೆ. ಅವುಗಳಲ್ಲಿ ಕೊನೆಯಲ್ಲಿರುವುದು ಅವಿದ್ಯೆ. ಅವಿದ್ಯೆ ನಾಶವಾದರೆ ಮೇಲಿನ ಹನ್ನೊಂದು ಅಂಶಗಳು ನಾಶವಾಗುತ್ತವೆ ಎಂದಾಗ ಅವಿದ್ಯೆ ಮುಖ್ಯ ಅಂಶವಾಗಿ ಕಾಣುತ್ತದೆ.

ಶೈವ-ಕಾಶ್ಮೀರ ಶೈವದಲ್ಲಿಯೂ ಪ್ರಸ್ತಾಪಗೊಳ್ಳುವ ಶುದ್ಧ ಅಶುದ್ಧವಿದ್ಯೆ ಅವಿದ್ಯೆಗೆ ಸಮಾನವಾಗಿ ತೋರುತ್ತದೆ. ಆದರೆ ಬೌದ್ಧರಲ್ಲಿ ನಿರ್ವಾಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದೆ. ಶೈವ-ಪಾಶುಪತ (ವೈದಿಕ) ದಂತೆ ಪರಮಾತ್ಮನು ಉದಿಸಿದ ಜಗತ್‌ವ್ಯಾಪಕ ಶಕ್ತಿ ಪ್ರಕೃತಿ-ಜಗತ್ತು ಎಂತಲೂ ಸರ್ವಕ್ಕೂ ಕಾರಣೀಭೂತವೆಂತಲೂ ಇಲ್ಲಿ ಗುರುತಿಸಿಲ್ಲ. ಅಣುರೂಪದ ಶಕ್ತಿ ಹಲವು ರೂಪಗಳಲ್ಲಿ ರೂಪಾಂತಗೊಂಡು ತನ್ನ ಅಸ್ತಿತ್ವವನ್ನು ವೈವಿಧ್ಯವಾಗಿ ಪ್ರಸ್ತಾಪಿಸುತ್ತದೆ.

ಹೀಗೆ ಭಾರತೀಯ ದಾರ್ಶನಿಕತೆಯ ಇತಿಹಾಸದಲ್ಲಿ ಆಗಮ ಉಪನಿಷತ್, ಭಗವದ್ಗೀತೆಗಳು ಮಾಯೆ ಕುರಿತು ಸುಧೀರ್ಘ ಚರ್ಚೆ ಕೈಗೊಂಡಿವೆ. ಇಲ್ಲಿ ಮಾಯೆ ಎಂಬುದು ಮಾಯಿಕ ಮಲವಾಗಿ ದೇಹದ ಮೂಲಕ ಸೂಕ್ಷ್ಮ ತನುವಿಗೆ ಅಂಟಿಕೊಂಡು ಸತ್ ಜ್ಞಾನದ ಸಂಕುಚಿತತೆಗೆ ಕಾರಣವಾಗುತ್ತದೆ. ಈ ಚಿಂತನೆಯ ಮುಂದುವರಿಕೆಯಾಗಿ ಸಂತರು, ಆಚಾರ್ಯರು, ಧಾರ್ಮಿಕ ಮುಖಂಡರು ತಮ್ಮದೇಯಾದ ವಿಭಿನ್ನ ದೃಷ್ಟಿಕೋನದಲ್ಲಿ ಹಿಂದೂ ಧರ್ಮದ ಕುರಿತಾದ ಚರ್ಚೆಗಳನ್ನು ಕೈಗೊಂಡರಲ್ಲದೆ ಸಿದ್ಧಾಂತ ರೂಪದಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಹಿಂದೂ ಮತ, ಧರ್ಮದ ಶಾಖೆಗಳಾಗಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿವಿಶಿಷ್ಟಾದ್ವೈತ ಮತಗಳು ಅಸ್ತಿತ್ವ ಪಡೆದು ಈ ನೆಲದಲ್ಲಿ ಧಾರ್ಮಿಕ ಸಂಚಲನವನ್ನೆ ಉಂಟು ಮಾಡಿವೆ. ವೇದ, ಉಪನಿಷತ್ತು, ಆಗಮದಲ್ಲಿನ ವಿಚಾರಗಳಿಗಿಂತ ಅಲ್ಪಪ್ರಮಾಣದಲ್ಲಿ ಭಿನ್ನವಾಗಿ ನಿಂತವು. ಬ್ರಹ್ಮ, ಜಗತ್ತು, ಜೀವ, ಮೋಕ್ಷ ಇತ್ಯಾದಿ ಅಂಶಗಳ ಪರಸ್ಪರ ಸಂಬಂಧವನ್ನು ವಿವರಿಸುವಲ್ಲಿ ಮಾಯೆ ತನ್ನ ಸ್ವರೂಪ ಪ್ರಸ್ತಾಪಿಸುತ್ತದೆ. ಈ ಎಲ್ಲ ಮತಗಳಲ್ಲಿ ಮಾಯೆ ಎಂಬ ಪರಿಕಲ್ಪನೆ ಸುಳಿದಾಡುವ ಪರಿಯನ್ನು ವಿವರಿಸಲಾಗಿದೆ..

೩.೧೬ ಅದ್ವೈತ:ಮಾಯೆ ಕನ್ನಡ ಮತ ಪರಂಪರೆಯಲ್ಲಿ ಅದ್ವೈತ ಮತವು ವಿಶಿಷ್ಟ ಸ್ಥಾನ ಪಡೆದಿದೆ. ಗೌಡ ಪಾದಾಚಾರ್ಯರು ಮಾಂಡೂಕ್ಯ ಉಪನಿಷತ್ತಿಗೆ ಕಾರಿಕೆ ರಚಿಸುವ ಮೂಲಕ ಅದ್ವೈತ ಸಿದ್ಧಾಂತ ಪ್ರತಿಪಾದನೆ ಮಾಡಿದರು. ೮ನೇ ಶತಮಾನದ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯರು ಅದ್ವೈತ ಸಿದ್ಧಾಂತಕ್ಕೆ ಸ್ಪಷ್ಟ ರೂಪ ರೇಷೆ ನೀಡಿದರು. ಬ್ರಹ್ಮ-ಜಗತ್ತು-ಜೀವ ಇವುಗಳ ನಡುವಿನ ಸ್ವರೂಪ ಸಂಬಂಧವನ್ನು ವಿವರಿಸಿದ್ದಾರೆ. ಬ್ರಹ್ಮ-ಜಗತ್ತು-ಜೀವ ಇತ್ಯಾದಿಗಳ ನಡುವಿನ ಸಂಬಂಧ ತೋರಿಕೆಯಾಗಿ ಮಾಯೆ ಕಾಣಿಸಿಕೊಳ್ಳುವುದು ಎಂಬುದನ್ನು ವಿಶ್ಲೇಷಿಸಿದ್ದಾರೆ.

ಶಂಕರ ಸಿದ್ಧಾಂತದ ಮೂಲ ತಿರುಳನ್ನು 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೇವ ನಾಪರ:' ಎಂಬ ಮಾತು ಸ್ಪಷ್ಟೀಕರಿಸುತ್ತದೆ. ಬ್ರಹ್ಮವು ಸತ್ಯ, ಜಗತ್ತು ಮಿಥ್ಯವು ಜೀವವು ಬ್ರಹ್ಮನೇ ಆಗಿದ್ದಾನೆ ಬ್ರಹ್ಮನು ಸತ್, ಚಿತ್ ಹಾಗೂ ಆನಂದ ಸ್ವರೂಪಿ ಎಂಬರ್ಥವಿದೆ. ಇಲ್ಲಿ ಬ್ರಹ್ಮನು ಸತ್ಯವಾಗಿದ್ದು, ಇದರ ತೋರಿಕೆಯ ಭಾವವೇ ಜಗತ್ತಾಗಿದೆ

ಹಾಗೂ ಅದೇ ಮಿಥ್ಯವಾಗಿದೆ. ಮಿಥ್ಯ ಎಂಬುದು ಸತ್ಯಕ್ಕೆ ಮುಖಾ ಮುಖಿಯಾಗುವಂಥದಲ್ಲ. ಮಿಥ್ಯ ನಿರ್ವಚಿಸಲು ಬಾರದಂಥದ್ದು; ಅಂದರೆ ಅನಿರ್ವಚನೀಯವಾದದು ಆಗಿದೆ. ಜಗತ್ತು ಎಂಬುದು ಮಾಯೆ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅಲ್ಲಿ ಬದುಕುವ ಜೀವರು ಮಾಯೆಯ ಪ್ರಭಾವದಿಂದ ಅಜ್ಞಾನಕ್ಕೆ ಒಳಗಾಗಿದ್ದಾರೆ. ತಮ್ಮ ನಿಜ ಸ್ವರೂಪದ ಅರಿವು ಮರೆಯಾಗಿ ದುಃಖದಲ್ಲಿ ಮುಳುಗಿದ್ದಾರೆ. ಅಜ್ಞಾನ ಎಂಬ ಮಾಯಾ ಸ್ವರೂಪದ ಆವರಣವನ್ನು ಅಳಿಯುವಲ್ಲಿ ಮೋಕ್ಷ ಪ್ರಾಪ್ತಿ ಆಗುತ್ತಾನೆ. ಅದೇ ಪರಮ ಪುರುಷಾರ್ಥ ಸಿದ್ಧಿಯಾಗುತ್ತದೆ ಎಂಬುದಾಗಿ ಅದ್ವೈತದ ಚಿಂತನೆಗಳನ್ನು ಸಂಗ್ರಹ ರೂಪದಲ್ಲಿ ಗಮನಿಸಬಹುದಾಗಿದೆ.

ಆತ್ಮ, ಬ್ರಹ್ಮ, ಈಶ್ವರ ಇವುಗಳ ಅಸ್ತಿತ್ವದ ಕುರಿತಾಗಿ ವಿಸ್ತೃತ ಚರ್ಚೆ ನಡೆದಿದ್ದು, ಅಖಂಡವಾಗಿರುವ ಹಾಗೂ ಏಕವೂ–ಬ್ರಹ್ಮವೂ ಆಗಿರುವ ಮಾಯೆ ಕಾರಣದಿಂದ ಜೀವ–ಈಶ್ವರ ಎಂಬ ವಿಭಿನ್ನತೆಗಳಿಗೆ ಒಳಗಾಗು ತ್ತದೆ. ಮಾಯೆಯ ವಿಸ್ತೃತ ವ್ಯಾಪಾರ ಗಮನಿಸುವಲ್ಲಿ ಮಾಯಾವಾದ ಎಂಬ ಸಿದ್ಧಾಂತ ಮಂಡಿಸಲಾಗಿದ್ದು, ಅದ್ವೈತದ ಮೂಲ ತಳಹದಿಯಾಗಿ ಕಾಣುತ್ತದೆ.

ಮಾಯಾವಾದ ಬೌದ್ಧರಿಂದ ಸ್ವೀಕೃತಗೊಳ್ಳಲ್ಪಟ್ಟಿದೆ ಎಂಬ ಅಭಿಪ್ರಾಯಗಳಿವೆ. ಶಂಕರರು ಬೌದ್ಧ ಪ್ರಭಾವದ ಹಿನ್ನಲೆಯಲ್ಲಿ ಈ ವಾದವನ್ನು ಅನುಸರಿದಂತೆ ತೋರಿದರೂ ಅದು ಸ್ವತಂತ್ರ ವಿಶ್ಲೇಷಣೆಯಾಗಿದೆ. ಅಲ್ಲದೇ ವೇದ ಕಾಲದಲ್ಲಿ 'ಮಾಯೆ'ಎಂಬ ಪದ ಬಳಕೆಯಾಗಿದೆ. 'ಇಂದ್ರೋ ಮಾಯಾಭಿಃ ಪುರುರೂಪ ಈಯತೆ' ಎಂಬ ಉಲ್ಲೇಖವನ್ನು ನೋಡಿದಾಗ ಮಾಯೆ ಪದ ವೇದದಷ್ಟೇ ಪ್ರಾಚೀನ ಎಂಬುದು ತಿಳಿದು ಬರುತ್ತದೆ. 'ಬ್ರಹ್ಮವೆಂಬುವನು ನಿತ್ಯವಾದ ಶುದ್ಧ ಮುಕ್ತ ಸ್ವಭಾವವುಳ್ಳವನು ನಿರ್ವಿಶೇಷ ಸ್ವಭಾವದವನು. ಇಂತಹ ಬ್ರಹ್ಮನಲ್ಲಿ ಅಂತರ್ಗತವಾದ ಶಕ್ತಿ ಮಾಯೆ'[೨೫] ಬ್ರಹ್ಮ ನಿರ್ಮಲವಾದುದು ಆದರೆ ಮಾಯೆಯ ದೋಷದಿಂದ ಜೀವ–ಬ್ರಹ್ಮ ಇತ್ಯಾದಿ ಬೇರೆ ಬೇರೆ ರೂಪಗಳಲ್ಲಿ ತೋರುವುದು. ಇಂತಹ ಮಾಯೆ ಸ್ವರೂಪ ವಿವೇಕ ಚೂಡಾಮಣಿಯಲ್ಲಿ ಈ ರೀತಿ ಪ್ರಸ್ತಾಪಿತಗೊಂಡಿದೆ.

"ಮೊದಲಿಲ್ಲದಜ್ಞಾನ। ಮಿದು ತ್ರಿಗುಣಮಂ ಕೂಡಿ।
ಹುದು ಬಳಿಕ್ಕಂ ಸ್ವಕಾರ್ಯಗಳಿಂದದಂ ॥
ಹೃದಯದೂಹಿಸಲು ತ ಕಾಮ ಮಾಯೆಯವ್ಯಕ್ತ ।
ಮಿದೆ ಜಗನ್ಮಾತೆ ಯಿಶ್ವರಶಕ್ತಿ ತಾಂ"

ಮೊದಲಿಲ್ಲದ ಅಜ್ಞಾನ ರೂಪಿಯಾದ ಮಾಯೆ ಗುಣತ್ರಯಗಳಿಂದ ಕೂಡಿದ್ದು, ಮಾಯೆಯ ಕಾರ್ಯಗಳಿಂದ ಅದರ ಸ್ವರೂಪ ಊಹೆಗೆ ಬರುತ್ತದೆ ಅದೇ ಈಶ್ವರ ಶಕ್ತಿಯಾಗಿದೆ."[೨೬]

"ಒರದೀಯನಾತ್ಮ ವಸ್ತುವುಗಳೊಳಗಾನೆಂದು
ತಿರಗೊಂಡ ಬುದ್ಧಿಯಿಂ ಜನನ ಮರಣ ಕ್ಲೇಶ
ಮಿರದ್ಯೈವ ಬಂಧಮಿದು ಪುರುಷಗ ಜ್ಞಾನದಿಂ
ಪ್ರಾಪ್ತಮಾಗಿರುತಿಪ್ಪುದು"

-----------------ಬಳಲ್ವಂ (೧೩೦)

ಜೀವವು ದೇಹ-ಇಂದ್ರೀಯಗಳ ಸ್ವರೂಪದಲ್ಲಿ ಬೆರೆತು ಸಂಸಾರಿಯಾಗಿ ಹುಟ್ಟು ಸಾವುಗಳ ದುಃಖ ಅನುಭವಿಸುವವನು ಹೀಗೆ ಇಲ್ಲದೆ ಇರುವುದನ್ನೆಲ್ಲಾ ಜೀವವು ಭಾವಿಸಿ ಬದುಕುತ್ತದೆ ಎಂಬುದು ಇದರರ್ಥ"[೨೭]. ಜೀವವು ಮಾಯೆಯಿಂದ ಆವೃತ್ತವಾದಾಗ ಬ್ರಹ್ಮವು ಜಗತ್ತಾಗಿ ತೋರುತ್ತದೆ. ಹೀಗೆ 'ಇಲ್ಲದೆ ಇರತಕ್ಕ ಸ್ಥಳದಲ್ಲಿ ಇದ್ದ ಹಾಗೆ ತೋರುವುದೇ ಅಧ್ಯಾಸ. ಆರೋಪ, ಕಲ್ಪನೆ, ಅನಿರ್ವಚನೀಯವಾದುದು'[೨೮] ಅಧ್ಯಾಸದಿಂದ ಬ್ರಹ್ಮವು ಜಗತ್ತಾಗಿ ವಿವರ್ತನಗೊಳ್ಳುತ್ತದೆ. ಈ ಅಧ್ಯಾಸಕ್ಕೆ ಬ್ರಹ್ಮನಿಂದ ಪ್ರಕಟಗೊಂಡ ಮಾಯೆ ಕಾರಣವಾಗುತ್ತದೆ. 'ಮಾಯೆಯ ಶಕ್ತಿ ಎರಡು ರೀತಿಯಲ್ಲಿ ಪ್ರಕಟಗೊಳ್ಳುತ್ತದೆ. ಒಂದು ಆವರಣ, ಇನ್ನೊಂದು ವಿಕ್ಷೇಪ. ಆವರಣ ಶಕ್ತಿ ಬ್ರಹ್ಮನ ಶುದ್ಧ ಸ್ವರೂಪವನ್ನು ಆವರಿಸುತ್ತದೆ. 'ದಿನಪನಂ ಕಾರ್ಮುಗಿಲು ಘನವಾಗಿ ಮುಗಿಯಲಾ'......[೨೯] ಎಂಬಂತೆ ಸೂರ್ಯನಿಗೆ ದಟ್ಟವಾದ ಮೋಡಗಳು ಆವರಿಸುವಿಕೆ ಕ್ಷಣಿಕ. ಗಾಳಿ ಅದನ್ನು ತೇಲಿಸಿಕೊಂಡು ಮುಂದೊಯ್ಯುತ್ತವೆ. ಹಾಗೆ ಶುದ್ಧ ಸ್ವರೂಪನಾದ ಆತ್ಮನನ್ನು ಅಜ್ಞಾನವು ಆವರಿಸುತ್ತದೆ. ಈ ಶಕ್ತಿಯು 'ಆವರಣಶಕ್ತಿ' ಆಗಿದೆ. ಹಗ್ಗದಲ್ಲಿ ಸರ್ಪದ ಭಾವವನ್ನು ತರುವಂತೆ ಅಜ್ಞಾನದಿಂದ ಆವೃತನಾದ ಆತ್ಮನಲ್ಲಿ ತನ್ನ ಬಲದ ಮೇಲೆ ಆಕಾಶಾದಿ ಜಗತ್ತು ಸೃಷ್ಟಿಸುವುದೇ ವಿಕ್ಷೇಪಶಕ್ತಿ ಆಗಿದೆ. ಆವರಣ ತೆರೆಯಾಗಿ ನಿಂತರೆ ವಿಕ್ಷೇಪ ಆ ತೆರೆಯ ಮೇಲೆ ಹೊಸತೊಂದನ್ನು ಸೃಷ್ಟಿಸುತ್ತದೆ. ಹಾಗೆಯೇ ಮಾಯೆ ಎರಡು ವಿಧಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಒಂದು ವಿದ್ಯಾಮಾಯೆ ಇನ್ನೊಂದು ಅವಿದ್ಯಾಮಾಯೆ.

'ಈಶ್ವರನು ಜಗತ್ತಿನ ಸೃಷ್ಟಿ ಜೀವಿಗಳ ಸೃಷ್ಟಿಯನ್ನು ಮಾಡಿ ಜಗತ್ತಿನಲ್ಲಿ ಸಾಕಾರರೂಪದಿಂದ ಪ್ರಕಟಗೊಂಡು ಧರ್ಮ ಸ್ಥಾಪನೆ ಮಾಡುವುದು. ಜೀವಿಗಳ ಉದ್ಧಾರ ಮಾಡುವುದು ಇವೆಲ್ಲಕ್ಕೂ ಕಾರಣವಾದ ಮಾಯೆಯೇ ವಿದ್ಯಾಮಾಯೆ. ವಿದ್ಯಾಮಾಯೆಯ ಜೀವಿಯ ಈಶ್ವರ ಚಿಂತನೆಗೆ ನೆರವಾಗುತ್ತದೆ'[೩೦] ವಿದ್ಯಾ ಮಾಯೆ ಜ್ಞಾನ ಪೂರ್ಣತೆಯತ್ತ ಕೊಂಡೊಯ್ಯುವಂಥ ಸಾತ್ವಿಕ ಶಕ್ತಿಯಾಗಿದೆ. ಜೀವಿಯನ್ನು ಭಗವತ್ ಚಿಂತನೆಯಲ್ಲಿ ತೊಡಗಿಸಿ ಮೋಕ್ಷ ಸಾಧಿಸಲು ಸಹಾಯಕವಾಗುತ್ತದೆ.

ಅಜ್ಞಾನವೇ ಅವಿದ್ಯಾಮಾಯೆ ಜೀವಿಗಳು ತಮ್ಮ ಸ್ವರೂಪ ಕರ್ತವ್ಯಗಳನ್ನು ಮರೆತು ಪ್ರಪಂಚದ ಮೋಹ, ಇಂದ್ರೀಯಗಳ ಆಕರ್ಷಣೆಗಳಿಗೆ ಒಳಗಾಗುವಂತೆ ಮಾಡುವ ಶಕ್ತಿಯೆ

ಅವಿದ್ಯಾಮಾಯೆ.[೩೧] ಅವಿದ್ಯಾ ಮಾಯೆ ಅಜ್ಞಾನ ಸ್ವರೂಪದ್ದು, ಜೀವಿಯನ್ನು ಲೌಕಿಕದತ್ತ ಸೆಳೆದು ಮಲತ್ರಯ ಭಾವಗಳು ಉದಿಸುವಂತೆ ಮಾಡುತ್ತದೆ. ಜೀವವನ್ನು ಸಂಸಾರಿಯಾಗಿ ಪರಿವರ್ತಿಸಿ ಬಿಡುತ್ತದೆ. ಹೀಗೆ ಜೀವಿಯನ್ನು ಆಧ್ಯಾತ್ಮಿಕ ಉನ್ನತಿಯತ್ತ ಕೊಂಡೊಯ್ಯಬಲ್ಲ ಸಾಮರ್ಥ್ಯ ವಿದ್ಯಾ ಮಾಯೆಗೆ ಇದ್ದರೆ, ಪ್ರಾಪಂಚಿಕದ ಸೆಳೆತದಲ್ಲಿ ಮುಳುಗಿಸಬಲ್ಲ ಶಕ್ತಿ ಅವಿದ್ಯಾಮಾಯೆಗೆ ಇದೆ. ಉಪನಿಷತ್‌ಗಳಲ್ಲಿ ವಿದ್ಯಾ- ಅವಿದ್ಯಾ ಎಂಬುದುನ್ನು ಕ್ರಮವಾಗಿ ಆತ್ಮಜ್ಞಾನ- ಅಜ್ಞಾನ ಎಂದು ಕರೆಯಲಾಗಿದೆ. ವಚನಕಾರರಲ್ಲಿ ಜ್ಞಾನ-ಅಜ್ಞಾನ ಕುರಿತಾದ ಚಿಂತನೆಗಳು ಈ ಮಾತುಗಳಿಗೆ ಸಾಮ್ಯವೆನಿಸುತ್ತದೆ. ಶ್ರೀ ಶಂಕರಾಚಾರ್ಯರು ಅದ್ವೈತದ ಪ್ರಮುಖ ಅಂಶವಾಗಿ ಈ ಮಾಯಾವಾದವನ್ನು ಮಂಡಿಸಿದ್ದಾರೆ. ಅದ್ವೈತದ ಎಲ್ಲ ತಾತ್ವಿಕ ಅಂಶಗಳಿಗೆ ಮಾಯೆ ತಳಹದಿಯಾಗಿದೆ. ಪಾಶ್ಚಾತ್ಯರಲ್ಲಿ ಪಾಶ್ಚಾತ್ಯದ ಗ್ರೀಕ ತತ್ವಜ್ಞಾನದಲ್ಲಿಯೂ ಅದ್ವೈತದ ಆಲೋಚನೆಗಳು ಚರ್ಚಿತಗೊಂಡಿರುವದನ್ನು ನೋಡಿದಾಗ ಪಾಶ್ಚಾತ್ಯ ತಾತ್ವಿಕತೆಯ ಮೇಲೆ ಅದ್ವೈತ ಪ್ರಭಾವ ಗಾಢವಾಗಿ ಮೂಡಿದೆ ಎಂಬುದನ್ನು ಪಾಶ್ಚಾತ್ಯ ಚಿಂತಕರ ವಿಚಾರಗಳನ್ನು ಇಲ್ಲಿ ಗಮನಿಸಿವುದು ಮುಖ್ಯವಾಗಿದೆ. ಪಾಶ್ಚಾತ್ಯರಲ್ಲಿ ಅದ್ವೈತದ ವಿಚಾರಗಳನ್ನು ಗಮನಿಸಿದಾಗ ಪರ್ಮಡಿಸನ್, ಹೆರಿಕ್ಲಿಂಟಸ್, ಝುನೋಫೆನ್ಸ್, ಪ್ಲೊಟಿನಸ್ ಮುಂತಾದ ಚಿಂತಕರು ಮಾಯೆ ಕುರಿತು ಚಿಂತನೆ ನಡೆಸಿದ್ದಾರೆ. ಗ್ರೀಕ್ ತತ್ವಜ್ಞಾನಕ್ಕೆ ಮತ್ತು ಅದ್ವೈತಕ್ಕೆ ಸಾಮಿಪ್ಯದ ಸಂಬಂಧವನ್ನು ಗುರುತಿಸುತ್ತಾರೆ. ಪರ್ಮನಿಡಿಸನ್‌ನು 'ಇಂದ್ರೀಯ ಮುಖೇನ ಬಂದ ವಿಚಾರವೆಲ್ಲ ಮಾಯೆ, ತರ್ಕಶುದ್ಧವಾಗಿ ಬಂದುದು ಸಂಪೂರ್ಣ ಸತ್ಯ'[೩೨] ಎಂದು ಹೇಳಿದ್ದಾನೆ.

ಶಂಕರರ ಅವಿದ್ಯೆಯು ಇಂದ್ರೀಯಮುಖೇನ ಬಂದ ಮಾಯೆ ಆಗಿ ತೋರುತ್ತದೆ ತರ್ಕಶುದ್ಧವಾಗಿ ರೂಪಗೊಂಡಿರುವಂಥದ್ದು ಪರಿಪೂರ್ಣ ಸತ್ಯವಾಗಿದ್ದು ಅದೇ ಬ್ರಹ್ಮವಾಗಿರುತ್ತದೆ. ಇದರ ಮಾತಿಗೆ ಪೂರಕವಾಗಿ ಹೆರಿಕ್ಲಿಂಟಸ್ 'ಇಂದ್ರಿಯಾನುಭವದ ಜಗತ್ತು ಶಾಶ್ವತ ಮಾಯೆ'[೩೩] ಎಂದು ಹೇಳಿದ್ದಾರೆ. ಆತ್ಮನಿಂದ ಭಿನ್ನಗೊಂಡ ಜೀವನು ಕಾಯ-ಇಂದ್ರಿಯಗಳ ಮೂಲಕ ಜಗತ್ತನ್ನು ಕಾಣುತ್ತಾನೆ. ಈ ಕಾಣುವಿಕೆಯೇ ಮಾಯೆ ಆಗಿದೆ. ಅದ್ವೈತದ ಆಲೋಚನೆಗಳಿಗೂ ಪಾಶ್ಚಾತ್ಯ ವಿಚಾರಗಳಿಗೂ ಹೋಲಿಸಿದಾಗ ಮಾಯೆ ಏಕರೂಪವಾಗಿ ಕಾಣುತ್ತದೆ. ಮಾಯೆ ಎಂಬುದು ತಾತ್ಕಾಲಿಕ ಭಾವವಾಗಿ ತೋರುತ್ತದೆ. ಈ ಮಾತುಗಳು ವಚನಕಾರರ ಆಲೋಚನೆಗಳಿಗೆ ಸಾಮ್ಯವಾಗಿ ತೋರುತ್ತವೆ. ವಚನಗಳಲ್ಲಿ ನಾನು ಏನು ಎಂಬ ಅರಿವು ಮೂಡುವುದೇ ಜ್ಞಾನ ರೂಪವಾಗಿದೆ. ಪರಮಾತ್ಮನಿಂದ ಅಸ್ತಿತ್ವ ಪಡೆದ ಮಾಯೆ ಲೌಕಿಕದಲ್ಲಿ ಅವಿದ್ಯಾಮಾಯೆಯಾಗಿ ವ್ಯವಹರಿಸುತ್ತದೆ. ಇಂದ್ರಿಯಾನುಭವಗಳ ಮೂಲಕ ತನ್ನ ಅಸ್ತಿತ್ವವನ್ನು ಪ್ರಸ್ತಾಪ ಮಾಡುತ್ತದೆ. ಈ ಮಾಯಾವಾದದ ಚಿಂತನೆಗಳು ದ್ವೈತಮತ ಪರಂಪರೆಯಲ್ಲಿ ಸಂಚಲನವನ್ನೆ ಉಂಟು

ಮಾಡಿತು. ಅದ್ವೈತದ ಪ್ರತಿಕ್ರಿಯೆ ಎಂಬಂತೆ ದ್ವೈತ ಮತ ರೂಪಗೊಂಡಿತು.

೩.೧೭ ದ್ವೈತ: ಮಾಯೆ ದ್ವೈತ ಮತದ ಪ್ರವರ್ತನಾಚಾರ್ಯರಾದ ಶ್ರೀ ಮಧ್ವಚಾರ್ಯರು ದ್ವೈತಮತ ಪ್ರತಿಪಾದಿಸುವ ಮೊದಲೇ ದ್ವೈತ ಮತ ಸಿದ್ಧಾಂತಗಳು ಇದ್ದು, ತದನಂತರದಲ್ಲಿ ಮಧ್ವರು ಈ ವಿಷಯವನ್ನು ಕ್ರೋಢಿಕರಿಸಿ ಹೇಳಿದರು. ದ್ವೈತ ಎಂದರೆ ಭೇದ ಎಂದರ್ಥ. ಬ್ರಹ್ಮ ಮತ್ತು ಜೀವ ಎರಡು ಬೇರೆ ಬೇರೆ ಎಂದು ಹೇಳಲಾಗಿದೆ. ಈ ಮತದಲ್ಲಿ ಬ್ರಹ್ಮ, ಜೀವ, ಜಗತ್ತು ಇವುಗಳು ಇಹ-ಪರಗಳಲ್ಲಿ ಪಾರಮಾರ್ಥಿಕ ಭೇದವನ್ನು ಒಳಗೊಂಡಿದೆ. ವ್ಯಾಸತೀರ್ಥರದೆಂದು ಹೇಳಿರುವ ಒಂದು ಪ್ರಸಿದ್ಧ ಶ್ಲೋಕದಲ್ಲಿ ಮಾಧ್ವ ಸಿದ್ಧಾಂತವನ್ನು ತುಸು ಸರಳೀಕರಿಸಿ ಸಂಗ್ರಹ ರೂಪದಲ್ಲಿ ಹೀಗೆ ಹೇಳಿದೆ.

"ಶ್ರೀ ಮನ್ಧ್ವಮತೇ ಹರಿಃ ಪರತರಃ ಸತ್ಯಂಜಗತ್ ತತ್ವತೋ
ಭೇದೋ ಜೀವಗಣಾ ಹರೇರಸುಚರಾ ನೀಚೋಚ್ಚ ಭಾವಂಗತಾಃ ।
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ವ ಸತ್ಸಾಧನಂ
ಹ್ಯಕ್ಷಾದಿ ತ್ರಿತಯಂ ಪ್ರಮಾಣಮುಖಿ ಲಾಮ್ನಾಯೈಕ ವೇದ್ಯೋಹರಿಃ" [೩೪]

ಈ ಶ್ಲೋಕದ ಅರ್ಥ ಸರಳೀಕರಿಸಿದಾಗ ದ್ವೈತದ ತತ್ವಗಳು ಗೋಚರವಾಗುತ್ತವೆ. ಈ ಮತದಲ್ಲಿ ವಿಷ್ಣುವಿಗೆ ಶ್ರೇಷ್ಠ ಸ್ಥಾನ ನೀಡಿದ್ದು, ಹರಿ ಸರ್ವೋತ್ತಮನಾಗಿ ಕಾಣುತ್ತಾನೆ. ಈ ಜಗತ್ತು ಸತ್ಯವಾದದು ಎಂದಲ್ಲಿ ಅದ್ವೈತದ ಮಿಥ್ಯಾವಾದವನ್ನು ಮುರಿಯುತ್ತದೆ. ಅಚೇತನ-ಚೇತನ ಮತ್ತು ಈಶ್ವರ ಅದ್ವೈತದಂತೆ ಒಂದಾಗಿ ತೋರುವುದಿಲ್ಲ, ಭಿನ್ನವಾಗಿಯೇ ಕಾಣುತ್ತವೆ. ಜಗತ್ತಿನ ಪ್ರತಿಯೊಂದು ಜೀವಿಯು ಹರಿಯ ಅಧೀನನಾಗಿದ್ದು ಆನಂದ ಅನುಭೂತಿ ಮುಕ್ತಿ ನೀಡುವಂಥದ್ದಾಗಿದೆ. ಅಂತಹ ಮುಕ್ತಿ ಅಥವಾ ಮೋಕ್ಷಕ್ಕೆ ಭಕ್ತಿಯ ಪ್ರಮುಖ ಸಾಧನವಾಗಿದೆ.

ಬ್ರಹ್ಮನೇ ಸತ್ಯವೂ, ಸಗುಣವಾಗಿದ್ದು, ವಿಷ್ಣುವಿಗೆ ಹೋಲಿಸಲಾಗಿದೆ. ವಿಷ್ಣುವು ಜಗತ್ ಸೃಷ್ಟಿಗೆ ಕಾರಣ ನಾದರೂ ಉಪದಾನ ಕಾರಣನಲ್ಲ. ಪ್ರಕೃತಿ ಜಗತ್ ಸೃಷ್ಟಿಗೆ ಕಾರಣವಾಗುತ್ತದೆ. ವಿಷ್ಣುವಿನ ಶಕ್ತಿ ಲಕ್ಷ್ಮೀ ಆಗಿದ್ದು ಅವಳು ಅವನಿಗೆ ಅಧೀನಳಾಗಿದ್ದಾಳೆ. ಲಕ್ಷ್ಮೀಯನ್ನು ಮಾಯೆ, ಅಕ್ಷರಾ ಎಂದು ಕರೆದಿದ್ದು ಲಕ್ಷ್ಮೀಯು ಕೂಡಾ ಭಗವಂತನಂತೆ ನಿತ್ಯಮುಕ್ತಳಾಗಿದ್ದಾಳೆ. ಲಕ್ಷ್ಮೀದೇವಿಯು ಕರೆಯಲಾದ ಪ್ರಕೃತಿಯಾಗಿಯು ಕ್ರಿಯಾಪೂರ್ಣವೂ ಸತ್ವಪೂರ್ಣವೂ ಆಗಿದೆ. ಅವಿದ್ಯೆ ಅಥವಾ ಮಾಯೆ ಎಂಬುದು ಅನಾದಿಯಾದ ಪ್ರಕೃತಿಯ ಸ್ವರೂಪ ಪ್ರಕಟಣೆಯಾಗಿದೆ. ಪರಮಾತ್ಮ ಜಗತ್ ಸೃಷ್ಟಿಗೆ ಕಾರಣನಾದರೆ ಪ್ರಕೃತಿ ಜಗತ್ ಸೃಷ್ಟಿಗೆ ಮೂಲ ದ್ರವ್ಯವಾಗಿದೆ.

ಜಗತ್ ಸೃಷ್ಟಿ ಮಾಡುವಲ್ಲಿ ಪ್ರಕೃತಿ ಮಾಯೆಯ ರೂಪದಲ್ಲಿ ಕಾಣುತ್ತದೆ. ಜಗತ್ತಿನಲ್ಲಿ ಅಸ್ತಿತ್ವ ಪಡೆದ ಪ್ರತಿಯೊಂದು ಪದಾರ್ಥವು ಬೇರೆ ಬೇರೆಯಾಗಿದೆ. ಹೀಗೆ ಬೇರೆ ಬೇರೆ

ಆಗುವಲ್ಲಿ ಮಾಯೆ ಅಥವಾ ಪ್ರಕೃತಿಯ ಪಾತ್ರ ಸ್ಪಷ್ಟವಾಗಿದೆ. ಪ್ರಕೃತಿ ಮತ್ತು ಜಗತ್ತಿನ ಅಂತರ ಸಂಬಂಧ ವಿವರಣೆಯಲ್ಲಿ ಮಾಯೆಯು ಅವಿದ್ಯೆ ಎಂಬಂತೆ ಗುರುತಿಸಲ್ಪಟ್ಟಿದೆ. ಅದ್ವೈತದಷ್ಟು ವಿಸ್ತೃತವಾಗಿ ಮಾಯೆ ಚರ್ಚೆಗೆ ಒಳಗಾಗದೇ ಸಾಂದರ್ಭಿಕವಾಗಿ ಕಾಣಿಸಿಕೊಂಡಿದೆ.

೩.೧೮ ವಿಶಿಷ್ಟಾದ್ವೈತ: ಮಾಯೆ ವಿಶಿಷ್ಟಾದ್ವೈತವು ರಾಮಾನುಜಾಚಾರ್ಯರಿಂದ ಸ್ಥಾಪನೆಗೊಂಡಿದ್ದು ಅದಕ್ಕಿಂತ ಪೂರ್ವದಲ್ಲಿ ತಮಿಳಿನ ಆಳ್ವಾರರ ಪ್ರಬಂಧಗಳನ್ನು ನಾಥಮುನಿ ಮತ್ತು ಯಮುನಾಚಾರ್ಯರು ಪುನರು ಜ್ಜೀವನಗೊಳಿಸಿ ವಿಶಿಷ್ಟಾದ್ವೈತವನ್ನು ಹುಟ್ಟು ಹಾಕಿದರು. ತದನಂತರದಲ್ಲಿ ಬಂದ ರಾಮಾನುಜಾಚಾರ್ಯರು ವ್ಯವಸ್ಥಿತವಾಗಿ ರೂಪಿಸಿದರು. ರಾಮಾನುಜಾಚಾರ್ಯರರ ಪ್ರಕಾರ ಬ್ರಹ್ಮ, ಜೀವ, ಜಗತ್ತು ಈ ಮೂರು ಸತ್ಯವಾದವುಗಳೇ ಆಗಿದ್ದು ಇವನ್ನೇ ಚಿತ್, ಅಚಿತ್, ಈಶ್ವರ ಎಂದು ಕರೆಯಲಾಗಿದೆ. ಚಿತ್ ಎಂದರೆ ಆತ್ಮ ಅಚಿತ್ ಎಂದರೆ ಜಡವಸ್ತು ಬ್ರಹ್ಮ ಅಥವಾ ಈಶ್ವರ ಎಂದರೆ ಪರಮಾತ್ಮ, ಚಿತ್-ಅಚಿತ್‌ಗಳೆರಡು ಬ್ರಹ್ಮನನ್ನು ಅವಲಂಬಿಸಿವೆ. ಅವೆರಡು ಅವನಿಂದ ಬೇರೆ ಆದರೂ ಅಧೀನವಾಗಿ ವರ್ತಿಸುತ್ತವೆ. ಬಹ್ಮನು ಚಿತ್-ಅಚಿತ್‌ಗಳೆರಡು ಬ್ರಹ್ಮನ ಶರೀರವಾಗಿ ತೋರಿದರೂ ಅವನಿಂದ ಬೇರೆಯಾಗಿವೆ. ಚಿತ್-ಅಚಿತ್‌ಗಳೆರಡು ವಿಶೆಷಣಗಳಾದರೆ, ಬ್ರಹ್ಮನು ವಿಶೇಷ್ಯ. ಇವುಗಳ ಸಮ್ಮಿಶ್ರಣವೇ ವಿಶಿಷ್ಟಾದ್ವೈತವಾಗಿದೆ.

ಬ್ರಹ್ಮನು ವಿಶೇಷನಾಗಿದ್ದು ಅವನಿಂದ ವ್ಯಕ್ತವಾಗುವ ಈ ಜಗತ್ತು ಸ್ಥೂಲ ಮತ್ತು ಸೂಕ್ಷ್ಮವು ಅವ್ಯಕ್ತ ವಾಗಿದೆ. ಸ್ಥೂಲ, ಸೂಕ್ಷ್ಮಗಳೆರಡು ಪ್ರಕೃತಿಯ ಭಿನ್ನರೂಪಗಳಾಗಿವೆ. 'ಪ್ರಕೃತಿ ಸ್ಥೂಲವಾಗಿ ಪ್ರಕಟಗೊಂಡರೆ ಮಾಯೆ ಸೂಕ್ಷ್ಮ ಅವಸ್ಥೆಯಲ್ಲಿ ಪ್ರಕಟಗೊಳ್ಳುತ್ತದೆ'೩೫ 'ಪ್ರಕೃತಿಯನ್ನು ಅಕ್ಷರಾ, ಅವಿದ್ಯಾಮಾಯೆ ಇತ್ಯಾದಿಯಾಗಿ ಕರೆಯಲಾಗಿದೆ. ದ್ವೈತದಲ್ಲಿ ಅಕ್ಷರಾ ಅವಿದ್ಯಾ ಮಾಯೆ ಎಂಬ ನಾಮರೂಪಗಳನ್ನು ಲಕ್ಷ್ಮೀಗೆ ಇರುವುದನ್ನು ನೋಡಿದಾಗ ಪರಮಾತ್ಮನಲ್ಲಿಯ ವಿಶಿಷ್ಟಶಕ್ತಿ ಮಾಯೆ ಆಗಿದ್ದು, ಪ್ರಕಟಗೊಳ್ಳುವಾಗ ಪ್ರಕೃತಿಯೂ ಮಾಯೆಯೂ ಆಗಿ ತೋರುತ್ತದೆ.

ಅದ್ವೈತದಲ್ಲಿ ಜಗತ್ತು ಮಿಥ್ಯೆ ಆದರೆ ಇಲ್ಲಿ ಮಾಯೆ ಮಿಥ್ಯೆಯಲ್ಲ. ಅದು ಸತ್ಯ ಹಾಗೂ ಸತ್ವಪೂರ್ಣವಾದುದಾಗಿದೆ ಎಂಬಲ್ಲಿ ಅದ್ವೈತ ವಿಶಿಷ್ಟಾದ್ವೈತದ ಒಳತಿರುಳು ಸೂಕ್ಷ್ಮವಾಗಿ ಭಿನ್ನತೆಯನ್ನು ಸಾಧಿಸುತ್ತದೆ. ಪ್ರಕೃತಿಯನ್ನು ಮೀರಿದ್ದು ಬ್ರಹ್ಮವಸ್ತು ನಿರ್ಗುಣ ಮತ್ತು ನಿರವಯ ಸಂಸಾರ ಕರಾಳ ಚಕ್ರದಿಂದ ಜೀವನನ್ನು ತನ್ನೆಡೆಗೆ ಆಕರ್ಷಿಸುವುದಕ್ಕಾಗಿ ನಿರತಿಶಯ ಸುಂದರ ದಿವ್ಯರೂಪವನ್ನು ತಳೆಯುತ್ತದೆ. ಪರಮ ಸತ್ ತನ್ನ ಆತ್ಮ ಮಾಯೆಯಿಂದ ದಿವ್ಯರಸವಾದಿಯಾಗುತ್ತದೆ.[೩೬] ಎಂದರೆ ಮಾಯೆ ಸತ್ವಪೂರ್ಣವಾದದು ಎಂದರ್ಥ. ಇದು ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ. ಭಕ್ತಿಯ ಮೂಲಕ ದೇಹಾತ್ಮಭಿಮಾನ ತ್ಯಜಿಸಿದಾಗ

ಪ್ರಕೃತಿಗಿಂತಲೂ ವಿಲಕ್ಷಣವಾದ ಆತ್ಮ ಸ್ವರೂಪವನ್ನು ಸಾಕ್ಷಾತ್ಕರಿಸುತ್ತದೆ. ಪ್ರಕೃತಿ–ಆತ್ಮ ಎರಡು ಒಂದೇ ಎಂಬ ಭ್ರಮೆ ತೊಲಗುವಿಕೆ ಮಾಯೆಯಿಂದ ಮುಕ್ತನಾಗುವುದನ್ನು ಸೂಚಿಸುತ್ತದೆ. ದ್ವೈತ–ವಿಶಿಷ್ಟಾದ್ವೈತ ಆಲೋಚನೆಗಳು ಸಾಮ್ಯತೆಯನ್ನು ತೋರುತ್ತವೆ. ಪ್ರಕೃತಿ ಕುರಿತಾದ ಚರ್ಚೆಗಳು ಇವೆರಡರಲ್ಲಿಯೂ ಕಂಡು ಬರುತ್ತವೆ. ಬ್ರಹ್ಮನಿಂದಲೇ ಮೂಡಿ ಬಂದ ಸಕಲ ಪ್ರಪಂಚವು ಬ್ರಹ್ಮವಲ್ಲ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಹೀಗೆ ಬ್ರಹ್ಮ–ಜಗತ್ತು–ಜೀವ ಇತ್ಯಾದಿ ಕುರಿತಾದ ಚಿಂತನೆ ಅದ್ವೈತ, ದ್ವೈತ, ವಿಶಿಷ್ಟಾದ್ವೈತದಲ್ಲಿ ವೈವಿಧ್ಯಪೂರ್ಣವಾಗಿ ನಡೆದುಕೊಂಡು ಬಂದಿದೆ. ಇವೆಲ್ಲವುಗಳಿಗಿಂತ ಶಕ್ತಿವಿಶಿಷ್ಟಾದ್ವೈತ ಬೇರೆಯಾಗಿ ಕಾಣುತ್ತದೆ.

೩.೧೯ ಶಕ್ತಿವಿಶಿಷ್ಟಾದ್ವೈತ: ಮಾಯೆ ಅದ್ವೈತ–ದ್ವೈತ–ವಿಶಿಷ್ಟಾದ್ವೈತದಲ್ಲಿ ಇದ್ದ ಬ್ರಹ್ಮ–ವಿಷ್ಣುವಿನ ಸ್ವರೂಪ ಶಕ್ತಿ ವಿಶಿಷ್ಟಾದ್ವೈತದಲ್ಲಿ ಶಿವನ ಸ್ವರೂಪಕ್ಕೆ ಬದಲಾಯಿತು. ಶಕ್ತಿವಿಶಿಷ್ಟಾದ್ವೈತ ಮತಕ್ಕೆ ಪ್ರಭಾವ ಬೀರಿದ ಶೈವಮತದ ಪರಿಕಲ್ಪನೆಗಳು ಸಿಂಧೂ ನಾಗರಿಕತೆ ಕಾಲದಿಂದಲೂ ಶೈವ ಮತ ಪರಂಪರೆ ಅಸ್ತಿತ್ವದಲ್ಲಿದ್ದದನ್ನು ಕಂಡು ಬರುತ್ತದೆ. ಶೈವ ಮತದಲ್ಲಿ ಪ್ರತಿಪಾದಿಸಲ್ಪಟ್ಟ ತತ್ವಗಳು ವೇದೋಪನಿಷತ್‌ಗಳನ್ನು ಆಧರಿಸಿಕೊಂಡು ಬಂದಿದ್ದರೂ ಭಿನ್ನವಾಗಿ ರೂಪಪಡೆದಿವೆ. ಶಿವನೇ ಪರಬ್ರಹ್ಮನೂ, ಸರ್ವಾಂತರ್ಯಾಮಿಯೂ ಆಗಿರುತ್ತದೆ. ಶಿವನು ಜೀವಗಳ ಒಡೆಯನಾಗಿದ್ದು, ಜೀವವು ಶಿವ ಸ್ವರೂಪವೇ ಆಗಿ ಶಿವನ ಸತ್ವವನ್ನು ಹೊಂದಿರುತ್ತಾನೆ. ಜಗತ್ತು ಶಿವನಿಂದಲೇ ಸೃಷ್ಟಿಯಾಗಿದ್ದು, ಜಗತ್‌ಸೃಷ್ಟಿ ಲೀಲೆಗೆ ಕಾರಣವಾದ ಚೇತನವೇ ಶಕ್ತಿ. ಶಿವನಿಗೂ ಶಕ್ತಿಗೂ ಭೇದವಿಲ್ಲ ಪುಷ್ಪ–ಪರಿಮಳದಂತೆ ಒಂದಾಗಿ ತೋರುತ್ತವೆ. ಪಾಶದಿಂದಾಗಿ ಜೀವಾತ್ಮನು ಬಂಧನಕ್ಕೆ ಒಳಗಾಗುತ್ತಾನೆ. ಪಾಶವನ್ನು ಮಲ ಎಂದು ಕರೆಯುತ್ತಾರೆ. ಪಾಶವು ಆಣವ, ಮಾಯಾ ಕಾರ್ಯ ಮಲತ್ರಯಗಳಿಂದ ಆವೃತವಾಗಿದೆ. ಜೀವನು ಜ್ಞಾನದ ಬಲದಿಂದ ಈ ಮೂರು ಬಂಧನಗಳಿಂದ ಮುಕ್ತನಾದಾಗ ಮೋಕ್ಷ ದೊರೆಯುತ್ತದೆ. ಶೈವದ ಉಪಶಾಖೆಯಾಗಿ ವೀರಶೈವ ಮತ ಪ್ರಚಾರ ಪಡೆಯಿತು. ವೀರಶೈವ ಮತದಲ್ಲಿ ಪರಬ್ರಹ್ಮವೆಂದರೆ ಶಿವ. ಶಿವನೆಂಬುದು ನಿರಾಕಾರ. ನಿರ್ವಯಲು ಎಂಬ ಭಾವವು ಉಪನಿಷತ್ತುಗಳ ಪರಬ್ರಹ್ಮ ಸ್ಥಿತಿಯನ್ನು ಹೋಲುತ್ತದೆ ಪರಶಿವನಲ್ಲಿ ಬೇರ್ಪಡಿಸಲಾಗದ್ದು ಶಕ್ತಿ. ಈ ಶಕ್ತಿಯ ತತ್ವದಿಂದಲೇ ವೀರಶೈವವು ಶಕ್ತಿ ವಿಶಿಷ್ಟಾದ್ವೈತವಾಗಿದೆ.

ಶಕ್ತಿ ಎಂಬುದು ಶಿವ–ಜೀವ ಇಬ್ಬರಲ್ಲೂ ಪ್ರಟಕಗೊಳ್ಳುತ್ತದೆ. ಜೀವದಲ್ಲಿ ಸ್ಥೂಲವಾಗಿಯೂ, ಶಿವನಲ್ಲಿ ಸೂಕ್ಷ್ಮವಾಗಿದೆ. ಈ ಶಕ್ತಿಗಳಿಂದ ವಿಶಿಷ್ಟರಾದ ಜೀವ ಮತ್ತು ಶಿವರ ಐಕ್ಯತೆಯಲ್ಲಿಯೇ ಶಕ್ತಿವಿಶಿಷ್ಟಾದ್ವೈತವಾಗಿದೆ. 'ಶಕ್ತಿಶ್ಚ ಶಕ್ತಿಶ್ಚ ಶಕ್ತೀ ತಾಭ್ಯಾಂ ವಿಶಿಷ್ಟೌ ಜೀವೇಶೌಶಕ್ತಿ ವಿಶಿಷ್ಟೌ ತಯೋರದ್ವೈತಂ ಶಕ್ತಿವಿಶಿಷ್ಟಾದ್ವೈತಂ'[೩೭] ಎಂದರೆ 'ಶಕ್ತಿ ವಿಶಿಷ್ಟನಾದವನು ಶಿವ, ಶಕ್ತಿ ವಿಶಿಷ್ಟನಾದವನು ಜೀವ ಹೀಗೆ ಶಕ್ತಿ ವಿಶಿಷ್ಟರಾದ ಜೀವ ಶಿವರಲ್ಲಿ ಕಂಡು

ಬರುವ ಅದ್ವೈತವೇ ಶಕ್ತಿ ವಿಶಿಷ್ಟಾದ್ವೈತ[೩೮] 'ಶಕ್ತಿಯಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಎಂಬ ಎರಡು ಬಗೆಗಳನ್ನು, ಒಂದೊಂದರಲ್ಲಿ ಮತ್ತೆ ಎರಡು ಬಗೆಗಳನ್ನು ಸೂಚಿಸಲಾಗಿದೆ. ಚಿತ್‌ಶಕ್ತಿ ಮತ್ತು ಅಚಿತ್‌ಶಕ್ತಿ ಎಂಬುದಾಗಿದ್ದು, ಇವೆರಡನ್ನೂ ಒಟ್ಟಾಗಿ 'ಸ್ಥೂಲ ಚಿದ ಚಿದಾತ್ಮಕ ಶಕ್ತಿ' ಹಾಗೂ ಸೂಕ್ಷ್ಮ ಚಿದ ಚಿದಾತ್ಮಕ ಶಕ್ತಿ ಎಂದು ಕರೆಯಲಾಗಿದೆ. ಜೀವಿಗಳು ಸ್ಥೂಲ ಚಿದಚಿದಾತ್ಮಕ ಶಕ್ತಿಯಿಂದ ಕೂಡಿದವುಗಳಾಗಿದ್ದು, ಸ್ಥೂಲ ಚಿತ್‌ಶಕ್ತಿಯಿಂದ ಜೀವನು ಕಿಂಚಿಜ್ಞತಾ ರೂಪವನ್ನು ಪಡೆಯುತ್ತಾನೆ. ಸೂಕ್ಷ್ಮ ಚಿತ್ ಶಕ್ತಿಯಿಂದ ಶಿವ ಕಿಂಚಿತ್ ಕರ್ತೃತಾರೂಪನಾಗಿದ್ದಾನೆ. ಹೀಗೆ ಜೀವ ಮತ್ತು ಶಿವರಿಬ್ಬರೂ ಶಕ್ತಿ ಸಮನ್ವಿತರಾದರೂ ಆ ಶಕ್ತಿಯ ಸ್ವರೂಪದಲ್ಲಿ ಭೇದ ಕಾಣುತ್ತದೆ. ಸ್ಥೂಲ ಶಕ್ತಿಯಿಂದ ಜೀವ ಆವೃತವಾಗಿ ತನ್ನ ಮೂಲ ಸ್ವರೂಪವನ್ನು ಮರೆತು, ತಾನು 'ಅಲ್ಪಜ್ಞಾನಿ', 'ಅಲ್ಪಶಕ್ತಿ' ಎಂಬ ಪರಿಮಿತ ಭಾವನೆಗೆ ಒಳಗಾಗಿದ್ದಾನೆ. ಜೀವ ಶಿವರಲ್ಲಿರುವ ಭೇದ ಮೂಲತ: ಇರುವ ಭೇಧವಲ್ಲ. ಸ್ಥೂಲ ಮತ್ತು ಸೂಕ್ಷ್ಮ ಶಕ್ತಿಗಳಿಂದ ತಾತ್ಕಾಲಿಕವಾಗಿ ಕಂಡು ಬರುವಂತಹದು. ಸ್ಥೂಲ ಎಂದರೆ ಅಶುದ್ಧ ಎಂಬ ಅರ್ಥವನ್ನು ಕೊಡಲಾಗಿದೆ. ಜೀವ ತನ್ನ ಅಶುದ್ಧತೆಯಿಂದ ಸೂಕ್ಷ್ಮಶಕ್ತಿ ವಿಶಿಷ್ಟ ಸಂಪರ್ಕವನ್ನು ಕಳೆದುಕೊಂಡಿದೆ. ಅಂದರೆ ಸೂಕ್ಷ್ಮ ಶಕ್ತಿ ವಿಶಿಷ್ಟವಾದ ಶಿವನ ಅಂಶವೇ ಜೀವರುಗಳಾಗಿ ಪರಿಣಮಿಸಿ ಸ್ಥೂಲಶಕ್ತಿಯಿಂದ ಆವೃತವಾಗುತ್ತವೆ. ಈ ಸಂಕೋಚ ಸ್ಥಿತಿಯಿಂದ ಬಿಡುಗಡೆಯನ್ನು ಪಡೆದು ಮೂಲರೂಪದ ಪೂರ್ಣ ವಿಕಾಸ ಸ್ಥಿತಿಯನ್ನು ಪಡೆದಾಗ ಸೂಕ್ಷ್ಮ ಚಿದಚಿದಾತ್ಮಕ ಶಕ್ತಿವಿಶಿಷ್ಟವಾಗಿ ಶಿವನೊಡನೆ ಅದ್ವೈತ ಭಾವವನ್ನು ಪಡೆಯುತ್ತವೆ. ಈ ಅರ್ಥದಲ್ಲಿ ಇದನ್ನು ಶಕ್ತಿ ವಿಶಿಷ್ಟಾದ್ವೈತ ಎಂದು ಕರೆಯಲಾಗಿದೆ.[೩೯]

ಶಿವನ ಅಂಶವಾಗಿರುವ ಜೀವ, ಜಗತ್ತು ಸೃಷ್ಟಿಯಲ್ಲಿ ಅಸ್ತಿತ್ವ ಪಡೆದು ಶಿವನಿಂದ ದೂರವಾಗಿ ನಿಲ್ಲುತ್ತದೆ. ಭವದಲ್ಲಿ ಬದುಕುವಾಗ ಸ್ಥೂಲ ಶಕ್ತಿಯಾಗಿ ಕಾಣುತ್ತಾನೆ. ಇದರಿಂದಾಗಿ ಮಲತ್ರಯಗಳಾದ ಅಣವ, ಮಲ, ಕಾರ್ಮಿಕ ಇವುಗಳಿಗೆ ಒಳಗಾಗಿ ಅಶುದ್ಧ ಜೀವಿಗಾಗಿ ಪರಿವರ್ತನೆಗೊಳ್ಳುತ್ತಾನೆ. ಮತ್ತೆ ಜೀವ ಮೊದಲಿನ ಸ್ಥಿತಿ ಪಡೆಯಬೇಕಾದರೆ ಜ್ಞಾನದ ಮೂಲಕ ಸಾಧ್ಯ. ಅಂದರೆ ಮುಕ್ತಿ ಪಡೆದವನು ಜೀವ ಶಿವನಲ್ಲಿ ಐಕ್ಯವಾಗುವುದಾಗಿದೆ. ಶಕ್ತಿ ಎಂಬುದು ಅದ್ವೈತದ ಅವಿದ್ಯಾ ಮಾಯೆಯಾಗಿ ತೋರುವುದಿಲ್ಲ. ಅದು ಶಕ್ತಿ ರೂಪದ ಮಾಯೆ ಆಗಿದೆ.

ಈ ಹಿಂದೆ ಪ್ರಸ್ತಾಪಿತಗೊಂಡ ವಿಚಾರಗಳಿಗಿಂತ ಶಕ್ತಿವಿಶಿಷ್ಟಾದ್ವೈತ ಭಿನ್ನವಾಗಿ ತೋರುತ್ತದೆ. ಶಿವ–ಶಕ್ತಿಯ ಸಂಬಂಧವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಈ ರೀತಿ ಪ್ರಸ್ತಾಪಿಸಲಾಗಿದೆ. ಶಕ್ತಿಯನ್ನು ವಿಮರ್ಶಾಶಕ್ತಿ ಎಂದು ಕರೆಯಲಾಗಿದೆ.

"ಸಮಸ್ತ ಜಗದಂಡಾನಾಮ್ ಸರ್ವ ಸ್ಥಿತ್ಯಾಂಲತ ಕಾರಣಮ್।

ವಿಮರ್ಶೋರ್ಣ ಭಾಸತೇ ಯತ್ರತದ್ ಭಾಜನಮಿಹೋಚ್ಯತೆ ॥

ವಿಮರ್ಶಾಖ್ಯಾ ಪರಾಶಕ್ತಿಃ ವಿಶ್ವವೈಚಿತ್ರ್ಯಕಾರಿಣಿ ।

ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್॥

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೆ ।

ತಥಾ ಶಕ್ತಿರ್ವಿಮರ್ಶಾತ್ಮಾ ಪ್ರಕಾರೇ ಬ್ರಹ್ಮಣಿ ಸ್ಥಿತಾ"

ಸಮಸ್ತ ಭುವನ ಬ್ರಹ್ಮಾಂಡಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ವಿಮರ್ಶೆ ಯೆಂಬ ಹೆಸರಿನ ಪರಬಿಂದುವು ಶಿವ ಸಮೇತವಾದ ಯಾವ ತಿರೋಧಾನ ಶಕ್ತಿಯಲ್ಲಿ ಪ್ರಕಾಶಿಸುವುದೋ ಆ ತಿರೋಧಾನ ಶಕ್ತಿಯುಳ್ಳ ಪರಶಿವ ಬ್ರಹ್ಮವೇ ಭಾಜನ ವೆಂಬುದಾಗಿ ಇಲ್ಲಿ ಹೇಳಲ್ಪಡುತ್ತವೆ. ಚಿತ್ರ ವಿಚಿತ್ರವಾದ ವಿಶ್ವದ ಉತ್ಪತ್ತಿಗೆ ಕಾರಣಿಭೂತವಾದ ವಿಮರ್ಶವೆಂಬ ಹೆಸರಿನ ಪರಾಶಕ್ತಿಯು ಯಾವುದರಲ್ಲಿ ಅವಿನಾಭಾವ ಸಂಬಂಧದಿಂದ ಪ್ರತಿಷ್ಠತವಾಗಿರುವುದೋ ಆ ಪರಜೀವ ಬ್ರಹ್ಮನೇ ವಿಶ್ವ ಭಾಜನ ವೆಂಬುದಾಗಿ ತಿಳಿದು ಕೊಳ್ಳಬೇಕು. ಚಂದ್ರನಲ್ಲಿ ಸ್ಥಿರವಾಗಿರುವ ಬೆಳದಿಂಗಳು ತಾನು ಏಕ ದೇಶದಲ್ಲಿದ್ದರೂ ವಿಶ್ವದ ವಸ್ತುಗಳನ್ನು ಹೇಗೆ ಪ್ರಕಾಶಿಸುವುದೋ ಅದರಂತೆ ಪರಶಿವ ಬ್ರಹ್ಮದಲ್ಲಿರುವ ಈ ವಿಮರ್ಶಾ ಶಕ್ತಿಯು ಸಕಲ ಜಗತ್ತನ್ನೂ ತನ್ನ ಒಂದು ಅಂಶದಿಂದ ವ್ಯಾಪಿಸಿ ಪ್ರಕಾಶಪಡಿಸುತ್ತಿರುವುದು.[೪೦] ಸಚ್ಚಿದಾನಂದ ಸ್ವರೂಪನಾದವನು ಶಿವ ಅವನಲ್ಲಿರುವ ಅವನಿಂದ ಉದಿಸುವ ಶಕ್ತಿಯ ವಿಮರ್ಶನಾ ಶಕ್ತಿ ಚಂದ್ರನಲ್ಲಿ ಮತ್ತು ಬೆಳದಿಗಳಿನಂತೆ ಶಕ್ತಿ ವಿಸ್ತಾರ, ವ್ಯಾಪಕತ್ವವನ್ನು ಪಡೆಯುತ್ತದೆ ಎಂದಿದ್ದಾರೆ. ಇಂತಹ ವಿಮರ್ಶಾ ಶಕ್ತಿಯ ಸ್ವರೂಪವನ್ನು ಕುರಿತು

"ಗುಣತ್ರಯ ವಿಭೇದೇನ ಪರತತ್ತ್ವೇ ಚಿದಾತ್ಮನಿ ।

ಭೋಕ್ತೃತ್ವ ಚೈವ ಬೋಜ್ಯತ್ವಮ್ ಪ್ರೇರಕತ್ವಂ ಚ ಕಲ್ಪಿತಮ್" [೪೧]

ಜೀವವು ಪರತತ್ವ ನಿಷ್ಠವಾದದ್ದು, ಗುಣತ್ರಯಗಳಿಂದ ಕೂಡಿದ್ದು ಅವುಗಳ ಭೇದದಿಂದ ಭೋಕ್ತೃತ್ವ, ಭೋಜಕತ್ವ ಮತ್ತು ಪ್ರೇರಕತ್ವ ಕಲ್ಪಿಸಲ್ಪಟ್ಟಿದೆ. ಜೀವ-ಶಿವರ ಭೇದದಿಂದ ಉಂಟಾಗುವ ಚಿತ್ರವನ್ನು ಕಟ್ಟಿಕೊಡಲಾಗಿದೆ. ಮಾಯೆಯ ಆವರಿಸುವಿಕೆಯಿಂದ ಆಗುವ ಬದಲಾವಣೆ ಹೀಗೆ ಉಲ್ಲೇಖಿತಗೊಂಡಿದೆ.

'ಮಾಯಾಶಕ್ತಿವಶದೀಶೋ ನಾನಾ ಮೂರ್ತಿಧರಃ ಪ್ರಭುಃ।[೪೨] ಸರ್ವ ಸಮರ್ಥನಾಗಿರುವ ಈಶ್ವರನು ಮಾಯಾಶಕ್ತಿಯ ಉಪಾಧಿಯಿಂದ ನಾನಾ ಲೀಲಾ ಮೂರ್ತಿಗಳನ್ನು ಧರಿಸುತ್ತಾನೆ. ಈ ಮಾಯೆಯ ವಶದಿಂದ ಸರ್ವಜ್ಞನಾಗಿ ನಿತ್ಯ ಮುಕ್ತನಾಗಿ ತೋರುತ್ತಾನೆ. ಶಿವನಲ್ಲಿ ಶಕ್ತಿ ಅಂತರ್ಗತವೂ, ಶಿವನನ್ನು ಅನಂತರೂಪಗಳಲ್ಲಿ ಧಾರಣ ಮಾಡಿಸಬಲ್ಲ ಶಕ್ತಿ ಆಗಿದ್ದಾಳೆ. ಈ ಶಕ್ತಿ ಶಿವನಲ್ಲಿ ಅಂತರ್ಗತಗೊಂಡಾಗ ಅಥವಾ ಶಿವ

ಶಕ್ತಿ ವಿಶಿಷ್ಟನಾದಾಗ ಜೀವರುಗಳಾಗಿ ಪರಿಣಮಿಸುತ್ತಾನೆ. ಹೀಗೆ ಶಿವ–ಶಕ್ತಿ ಇವರಿಬ್ಬರ ಸಾಮ್ಯತೆ, ವಿಭಿನ್ನ ಸಾಮರ್ಥ್ಯಗಳು ಸೃಷ್ಟಿ, ಜಗತ್ತು, ಜೀವ ಇತ್ಯಾದಿಗಳ ಮೂಲಕ ಅಭಿವ್ಯಕ್ತಿಗೊಳ್ಳುವವು. ಮುಂದೆ ವೀರಶೈವದ ತಾತ್ವಿಕ ಹಿನ್ನೆಲೆಯಲ್ಲಿ ಶರಣರು ನಡೆದು ಬಂದರು. ಅನುಭಾವ ಮಾರ್ಗದ ಮೂಲಕ ಹಾಗೆ ಸೃಷ್ಟಿ ಜಗತ್ತು, ಜೀವ, ಶಿವ ಸ್ವರೂಪವನ್ನು ಚರ್ಚಿಸಿದರು. ತಾತ್ವಿಕ ಚಿಂತನೆಯನ್ನು ಯಾವುದೇ ಶಾಸ್ತ್ರದ ಪರಿಮಿತಿಗೆ ತರದೆ ಸ್ವತಂತ್ರಗೊಳಿಸಿದರು. ಅನುಭವವನ್ನು ಅನುಭಾವವಾಗಿಸಿದರು.

ಈ ಜಗತ್ತು ಸೃಷ್ಟಿಯಾಗುವುದಕ್ಕಿಂತ ಪೂರ್ವದಲ್ಲಿ ಶಿವನಿದ್ದು ಸೃಷ್ಟಿಯನ್ನು ನಿರ್ಮಿಸಬೇಕೆಂಬ ಭಾವ ಮೂಡಿದಾಗ ಶಕ್ತಿ ರೂಪ ಪಡೆಯಿತು. ಶಕ್ತಿಯನ್ನು ಶಿವನ ಅಂಶ ಎಂದು ಗ್ರಹಿಸಿದ್ದಾರೆ.

"ಬಯಲು ಮೊಳಗಿ ಮಳೆ ಸೃಜಿಸಿ ಆ ಬಯಲು ಮಳೆಯನೊಡಗೂಡಿ
ದೃಷ್ಟವಪ್ಪ ವಾರಿಗಲ್ಲಾಗಿ ತೋರಿದಂತೆ
ನಿಮ್ಮ ನೆನಹೆ ನಿಮಗೆ ಶಕ್ತಿಯಾಯಿತಲ್ಲ
ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ
ನಾಮ ಸೂಚನೆಯಾಯಿತಲ್ಲಾ, ಮಹಾಲಿಂಗ ಕಲ್ಲೇಶ್ವರಾ
ನಿಮ್ಮ ಆದಿಗೆ ಇದೇ ಪ್ರಥಮವಾಯಿತಲ್ಲಾ"

ಎಂಬ ಹಾವಿನಹಾಳ ಕಲ್ಲಯ್ಯನ ವಚನದಲ್ಲಿ ಶಕ್ತಿ ಎಂಬುದು ಜಗತ್ತಿನ ಸೃಷ್ಟಿಗೆ ಎಡೆ ಮಾಡಿಕೊಟ್ಟಿತ್ತು. ಶಕ್ತಿ ಸ್ವತಃ ಪರಮಾತ್ಮನ ಅನನ್ಯ ಸ್ವರೂಪವಾಗಿ ತೋರುತ್ತದೆ. ಶಕ್ತಿ ಶಿವನಿಂದ ಹುಟ್ಟಿ ಅದು ಜಗತ್ ಸೃಷ್ಟಿಮಾಡುತ್ತದೆ. 'ಶಕ್ತಿಯು ಸರ್ವಸಾಕ್ಷಿಣಿ, ಸತ್ಯ ಸಂಪೂರ್ಣೆ, ನಿರ್ವಿಕಲ್ಪೆ ಮತ್ತು ಮಹೇಶ್ವರಿಯಾಗಿದ್ದಾಳೆ. ತನ್ನದೇ ಆದ ಸ್ವತಂತ್ರ ಸಾಮರ್ಥ್ಯದಿಂದ ಕಲಾ ಶಕ್ತಿ ಮತ್ತು ಭಕ್ತಿ ಶಕ್ತಿಯೆಂದು ಎರಡಾಗುತ್ತಾಳೆ.ಪರಬ್ರಹ್ಮ ಸ್ವರೂಪದ ಲಿಂಗವನ್ನು ಹೊಂದಿದ 'ಕಲಾಶಕ್ತಿ'ಗೆ ವಿಶ್ವಚರಚನಾ ಸಾಮರ್ಥ್ಯವಿದೆ. ವಾಸನಾರೂಪದ ಇದು ಪ್ರವೃತ್ತಿಪರವಾಗಿದ್ದು, ಸೃಷ್ಟಿಕ್ರಿಯೆಗೆ ಸಾಧನವಾಗಿದೆ. ಆತ್ಮಸ್ವರೂಪವಾದ ಅಂಗನನ್ನು ಆಶ್ರಯಿಸಿದ 'ಶಕ್ತಿ'ಯು ಪ್ರಪಂಚದ ಒಡಕುಗಳಿಂದಾಗಿ ಅಂಗನಿಗೆ ಉಂಟಾದ ಬಂಧನಗಳನ್ನು ನಾಶಗೊಳಿಸಿಸುತ್ತದೆ.೪೩ ಶಕ್ತಿಯು ಪರಮೇಶ್ವರಿ, ಪರಮಾತ್ಮನ ಅಂತರ್ಗತ ಶಕ್ತಿ. ಆಕೆಯಿಂದ ಉದಿಸಿದ ಕಲಾ ಶಕ್ತಿ ಲೌಕಿಕ ಸ್ವರೂಪದ್ದಾದರೆ ಭಕ್ತಿ ಶಕ್ತಿ ಆಧ್ಯಾತ್ಮಿಕ ಸ್ವರೂಪದ್ದಾಗಿದೆ. ಪ್ರಾಪಂಚಿಕತೆಯಲ್ಲಿ ಸ್ಥಾನ ಪಡೆದಿರುವ ಆತ್ಮನಿಗೆ ವಿಷಯವಾಸನೆಗಳಿಂದ ಮುಕ್ತಗೊಳಿಸಿ ಮೋಕ್ಷದತ್ತ ಸಾಗುವ ಮಾರ್ಗವನ್ನು ತೋರಿಸುತ್ತದೆ. ಕಲಾ ಶಕ್ತಿಯೇ ಮಾಯೆಯಾಗಿ ರೂಪ ಪಡೆದಿದೆ.

ವಚನಕಾರರು ಲೌಕಿಕ ಬದುಕಿನಲ್ಲಿ ಎದುರಾಗುವ ಅಡೆ ತಡೆಗಳನ್ನು ಮಾಯೆ

ಎಂಬಂತೆ ಗ್ರಹಿಸಿದ್ದಾರೆ. ಭವದಲ್ಲಿನ ವಿಷಯವಾಸನೆಗಳತ್ತ (ಜೀವಿಯನ್ನು) ಭವಿಯನ್ನು ಸೆಳೆಯುತ್ತದೆ. ಆದ್ದರಿಂದ ಮುಕ್ತನಾಗುವಲ್ಲಿ ಭಕ್ತಿ ಎಂಬ ಸಾಧನ ಅಗತ್ಯವಾಗಿದ್ದು ಭಕ್ತಿಯೇ ಮುಕ್ತಿಯತ್ತ ಕೊಂಡೊಯ್ಯುತ್ತದೆ.

ಸನಾತನ ಪರಂಪರೆಯ ಪ್ರತಿನಿಧಿಗಳಾಗಿ ಕಾಣುವ ಆಗಮ, ವೇದ, ಉಪನಿಷತ್‌ಗಳಲ್ಲಿನ ಆಧ್ಯಾತ್ಮಿಕ ಚರ್ಚೆಗಳನ್ನು ಗಮನಿಸುವಲ್ಲಿ 'ಮಾಯೆ' ಪ್ರಸ್ತಾಪಗೊಂಡಿದೆ. ಸ್ಥೂಲ-ಸೂಕ್ಷ್ಮ-ಕಾರಣಗಳೆಂಬ ತನುಗಳಿದ್ದು, 'ಮಾಯೆ' ಮೂರನ್ನು ಒಂದೊಂದು ರೀತಿ ಆವರಿಸುತ್ತದೆ. ಸ್ಥೂಲದ ಮೂಲಕ ಕಾಯವನ್ನು ಪ್ರವೇಶಿಸಿ ಜ್ಞಾನವನ್ನು ಸಂಕುಚಿತಗೊಳಿಸುತ್ತದೆ. ವೇದ ಆಗಮದ ಪ್ರತಿನಿಧಿಯಾಗಿರುವ ಭಗವದ್ಗೀತೆಯಲ್ಲಿ ಮಾಯೆ ಎಂಬುದು 'ದೈವಿಮಾಯೆ' ಆಗಿ ತ್ರಿಗುಣಮಯವಾದ ಮಾಯೆ ದೇವನನ್ನಾಶ್ರಯಿಸಿದಾಗ ಮಾತ್ರ ಪರಿಹಾರವಾಗುತ್ತದೆ ಎಂದು ವಿವರಿಸಲಾಗಿದೆ.

ಶೈವದಲ್ಲಿ ಪತಿ, ಪಶು, ಪಾಶ ಎಂಬ ತತ್ವಗಳಲ್ಲಿ ಪರಮಾತ್ಮನೇ ಪತಿಯಾಗಿ, ಜೀವನೇ ಪಶುವಾಗಿ, ಮಾಯೆ ಪಾಶವಾಗಿ ತೋರುತ್ತದೆ. ಪರಮಾತ್ಮನ ಅಂಶವಾದ ಜೀವನು ಮಲ ಅಥವಾ ಮಾಯೆಯ ಕಾರಣಕ್ಕೆ ಪಶುವೆನಿಸಿಕೊಳ್ಳುತ್ತಾನೆ. ಜೀವನನ್ನು ಶುದ್ಧ ಮಾಯ ಮೋಕ್ಷದತ್ತ ಕೊಂಡೊಯ್ದರೆ, ಅಶುದ್ಧ ಮಾಯೆ ಸಂಸಾರ ಅಥವಾ ಲೌಕಿಕದತ್ತ ಕೊಂಡೊಯ್ಯುತ್ತದೆ. ಮಾಯೆಯ ವಿಸ್ತೃತ ವಿವರಣೆ ಕಾಶ್ಮೀರ ಶೈವದಲ್ಲಿದ್ದು ಸಾಮ್ಯವಾಗಿ ತೋರುತ್ತದೆ. ಸಾಂಖ್ಯದ ದೃಷ್ಟಿಯಲ್ಲಿ ಪ್ರಕೃತಿ ಮಾಯಾ ಸ್ವರೂಪಿಯಾಗಿ ತೋರುತ್ತದೆ. ಶ್ರಮಣದರ್ಶನವಾದ ಜೈನ ಮತದಲ್ಲಿ 'ಪುದ್ಗಲ' ಸ್ವರೂಪಿ ಕರ್ಮದಿಂದಾಗುವುದು ಜೀವನನ್ನು ಆವರಿಸುವಂಥದ್ದು. ಸರ್ವವ್ಯಾಪಿಯಾದ ಇದರಿಂದ ಬಿಡಿಸಿಕೊಳ್ಳಲು ವ್ರತ ನಿಯಮಗಳನ್ನು ಅನುಸರಿಸುವು ದಾಗಿದೆ. ಮಾಯೆಯನ್ನು ಕಾಷಾಯವೆಂದು ಜೈನರಲ್ಲಿ ಅರ್ಥೈಯಿಸಿದರೆ, ಬೌದ್ಧರಲ್ಲಿ ಸತ್ಯದ ಒಂದು ಪ್ರಕಾರವಾದ ಸಂವೃತ್ತಿಯೇ ಅವಿದ್ಯೆ ಆಗಿದ್ದು, ಈ ಅವಿದ್ಯೆಯೇ ಮಾಯೆ ಆಗಿದೆ.

ಹಿಂದೂ ಮತದ ಕವಲುಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತಗಳು ವಿಶಿಷ್ಟ ತಾತ್ವಿಕ ನೆಲೆಗಳನ್ನು ಪ್ರಸ್ತಾಪಿಸುತ್ತಾ, ಧಾರ್ಮಿಕ ಪರಂಪರೆಯಲ್ಲಿ ತನ್ನದೇ ಆದ ಪ್ರಸ್ಥಾನಗಳನ್ನು ರೂಪಿಸಿಕೊಂಡಿವೆ.

ಶಂಕರಾಚಾರ್ಯರ ಆಲೋಚನೆ, ಚಿಂತನೆಗಳು ಮಾಯಾವಾದಕ್ಕೆ ಭಿನ್ನ ಹೊಳಹು ನೀಡಿದ್ದು, ಅದ್ವೈತ್ವದಲ್ಲಿ ತೀಕ್ಷ್ಣ ಚರ್ಚೆಗೆ ಎಡೆ ಮಾಡಿಕೊಟ್ಟಿದೆ. ಇದಕ್ಕಿಂತ ಭಿನ್ನವಾಗಿ ಮಾಯೆ 'ಅಕ್ಷರಾ' ಆಗಿ 'ಅವಿದ್ಯೆ'ಯಾಗಿ ದ್ವೈತ-ವಿಶಿಷ್ಟಾದ್ವೈತ ಕಾಣಿಸಿಕೊಳ್ಳುತ್ತವೆ. ಮಾಯೆ ಕುರಿತಾದ ತಾತ್ವಿಕ ನೆಲೆಗಳು ಒಂದೇ ಆಗಿದ್ದು, ವಿವರಣೆಯ ಸ್ವರೂಪ ಬೇರೆಯಾಗಿ ಅಭಿವ್ಯಕ್ತವಾಗಿದೆ. ಇವೆಲ್ಲಕ್ಕಿಂತ ಭಿನ್ನವಾಗಿ ಶಕ್ತಿವಿಶಿಷ್ಟಾದ್ವೈತ ಕಾಣಿಸಿ ಕೊಂಡಿದೆ. ಶೈವ

ವೀರಶೈವ ಪ್ರಭಾವಗಳಲ್ಲಿ ಕಾಣುವ ಶಕ್ತಿವಿಶಿಷ್ಟಾದ್ವೈತವು ಶಿವನ ಅಂತರ್ಗತವಾದ ಶಕ್ತಿಯು ಅಸಾಧಾರಣಳೂ, ಶ್ರೇಷ್ಠಳೂ ಆಗಿದ್ದಾಳೆ. ಪರಮಾತ್ಮನಷ್ಟೆ ಸಮಾನ ಸಾಮರ್ಥ್ಯವುಳ್ಳ ಶಕ್ತಿಯಾಗಿ ಜಗತ್ತಿನ ವ್ಯಾಪಾರಕ್ಕೆ ಕಾರಣಳಾಗುತ್ತಾಳೆ. ಈ ಶಕ್ತಿ ಮಾಯೆಯಾಗಿ ಜೀವಿಯನ್ನು ಆವರಿಸಿ ಭವದಲ್ಲಿ ಮುಳುಗಿಸುತ್ತದೆ. ಅದರಿಂದ ಮುಕ್ತನಾಗಲು ಭಕ್ತಿಯೆಂಬ ಸಾಧನ ಬೇಕು ಎಂಬ ಮಾದರಿಯ ಚಿಂತನೆಗಳು ವಚನ ರೂಪದಲ್ಲಿ ಅಭಿವ್ಯಕ್ತಗೊಂಡಿವೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತದ ವಿಚಾರಗಳು ಅದರ ಪೂರ್ವದ ವೇದ-ಆಗಮ-ಉಪನಿಷತ್‌ಗಳಲ್ಲಿ ಮಾಯೆಯ ಕುರಿತಾದ ವಿಚಾರಗಳು ಮುಂದಿನ ಅಧ್ಯಯನ ಕೈಗೊಳ್ಳುವಲ್ಲಿ ಮಾರ್ಗದರ್ಶಿಯಾಗಿ ತೋರುತ್ತವೆ. ಜೊತೆಗೆ ವಚನಕಾರರ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸಿಕೊಳ್ಳಲು ಈ ಅಧ್ಯಯನ ಪೂರಕವಾಗಿದೆ.

ಕೊನೆ ಟಿಪ್ಪಣಿ

೧. ಸ್ವಾಮಿ ಸೋಮನಾಥನಂದ, ಉಪನಿಷತ್ ಭಾವಧಾರೆ, ಪು. ೫೭೬.

೨. ಸ್ವಾಮಿ ಸೋಮನಾಥನಂದ, ಉಪನಿಷತ್ ಭಾವಧಾರೆ, ಪು. ೬೩೯.

೩. ಸ್ವಾಮಿ ಸೋಮನಾಥನಂದ, ಉಪನಿಷತ್ ಭಾವಧಾರೆ, ಪು. ೬೪೧.

೪. ಎಂ. ಶಿವಕುಮಾರಸ್ವಾಮಿ, ಚಂದ್ರಜ್ಞಾನಾಗಮ, ಪು.೦೩

೫. ಎಂ.ಶಿವಕುಮಾರಸ್ವಾಮಿ, ಪಾರಮೇಶ್ವರಾಗಮ, ಪು.೨೫

೬. ಎಂ. ಶಿವಕುಮಾರಸ್ವಾಮಿ, ಚಂದ್ರಜ್ಞಾನಾಗಮ, ಪು.೪೬

೭. ಷಣ್ಮುಖಯ್ಯ ಅಕ್ಕೂರಮಠ, ಸೂಕ್ಷ್ಮಾಗಮ, ಪು.೩೭

೮. ಸ್ವಾಮಿ ಆದಿದೇವಾನಂದ, ಭಗವದ್ಗೀತಾ, ಪು.೧೦೧

೯. ಸ್ವಾಮಿ ಆದಿದೇವಾನಂದ, ಭಗವದ್ಗೀತಾ, ಪು.೧೦೨

೧೦. ಪ್ರಭುಶಂಕರ (ಸಂ), ವಿಶ್ವಧರ್ಮ ದರ್ಶನ, ಪು.೪೧೨

೧೧. ಅರ್ಚನ,ಅಭಿನಂದನ ಗ್ರಂಥ ,ಪು.೮೭೧
ಲೇಖನ: ವೀರಶೈವ ಧರ್ಮ ಮತ್ತು ಕಾಶ್ಮೀರ ಶೈವಧರ್ಮ□ಮೂ.ಜೆ.ರುದ್ರಪ್ಪ
ಅನು: ಪ್ರಧಾನ್ ಗುರುದತ್

೧೨. ಪ್ರಭುಶಂಕರ(ಸಂ), ವಿಶ್ವಧರ್ಮ ದರ್ಶನ, ಪು.ಸಂ–೪೨೫

೧೩. ಅರ್ಚನ,ಅಭಿನಂದನ ಗ್ರಂಥ ಪು.೮೭೧
ಲೇಖನ: ವೀರಶೈವ ಧರ್ಮ ಮತ್ತು ಕಾಶ್ಮೀರ ಶೈವಧರ್ಮ–ಮೂ.ಜೆ.ರುದ್ರಪ್ಪ
ಅನು: ಪ್ರಧಾನ್ ಗುರುದತ್

೧೪. ಎದುರ್ಕುಳ ಕೆ.ಶಂಕರ ನಾರಾಯಣ ಭಟ್, ಹಿಂದೂಧರ್ಮದ ಪರಿಚಯ, ಪು.೧೫೦

೧೫. ಎದುರ್ಕುಳ ಕೆ.ಶಂಕರ ನಾರಾಯಣ ಭಟ್, ಹಿಂದೂಧರ್ಮದ ಪರಿಚಯ, ಪು.೧೫೦

೧೬. ಹಿರೇಮಠ ಎಸ್.ಎಸ್, ಪಾಶುಪತದರ್ಶನ, ಪು.೨೮

೧೭. ಎದುರ್ಕುಳ ಕೆ.ಶಂಕರ ನಾರಾಯಣ ಭಟ್,ಹಿಂದೂಧರ್ಮದ ಪರಿಚಯ, ಪು.೮೪

೧೮. ಎದುರ್ಕುಳ ಕೆ.ಶಂಕರ ನಾರಾಯಣ ಭಟ್, ಹಿಂದೂಧರ್ಮದ ಪರಿಚಯ, ಪು.೮೭

೧೯. ಹಿರೇಮಠ ಎಸ್.ಎಸ್,ಸಾಂಖ್ಯ ದರ್ಶನ, ಪು.೫೯

೨೦. ಎದುರ್ಕುಳ ಕೆ.ಶಂಕರ ನಾರಾಯಣ ಭಟ್,ಹಿಂದೂಧರ್ಮದ ಪರಿಚಯ, ಪು.೯೨

೨೧. ಎದುರ್ಕುಳ ಕೆ.ಶಂಕರ ನಾರಾಯಣ ಭಟ್, ಹಿಂದೂಧರ್ಮದ ಪರಿಚಯ, ಪು.೯೩

೨೨. ನರಸಿಂಹಾಚಾರ್ಯ ಡಿ.ಎಲ್, ವಡ್ಡಾರಾಧನೆ, ಪು.೩೪೦

೨೩. ಅದೇ, ಪು.೩೩೮

೨೪. ಅನಂತಮೂರ್ತಿ ಯು.ಆರ್. (ಸಂ),ವೀರಶೈವ ಧರ್ಮದರ್ಶನ,
ಲೇ: ಬೌದ್ಧ ಮತ್ತು ವೀರಶೈವ,ಇಮ್ಮಡಿಶಿವಬಸವಸ್ವಾಮಿಗಳು ಪು.ಸಂ.೩೭೫

೨೫. ಬಿ.ಎಂ.ಶ್ರೀಕಂಠಯ್ಯ(ಸಂ), ಹಿಂದೂ ದರ್ಶನಸಾರ, ಪು.೨೪೭

೨೬. ಬಲದೇವ ಉಪಾಧ್ಯಾಯ(ಅನು), ಎಸ್.ರಾಮಚಂದ್ರಶಾಸ್ತ್ರ,
ಶ್ರೀ ಶಂಕರಾಚಾರ್ಯರು, ಪು.೩೬೧

೨೭. ಎಂ.ಎಸ್. ಸುಬ್ಬಣ್ಣ, ವಿವೇಕ ಚೂಡಾಮಣಿ, ಪು.೨೯

೨೮. ಬಿ.ಎಂ.ಶ್ರೀಕಂಠಯ್ಯ(ಸಂ), ಹಿಂದೂ ದರ್ಶನಸಾರ, ಪು.೨೪೭

೨೯. ಎಂ.ಎಸ್. ಸುಬ್ಬಣ್ಣ, ವಿವೇಕ ಚೂಡಾಮಣಿ, ಪು.೩೭

೩೦. ಎದುರ್ಕುಳ ಕೆ.ಶಂಕರ ನಾರಾಯಣ ಭಟ್, ಹಿಂದೂ ಧರ್ಮದ ಪರಿಚಯ,
ಪು.೧೦೫

೩೧. ಅದೇ, ಪು.೧೦೫

೩೨. ಬಿ.ಡಿ.ಜತ್ತಿ, ಅದ್ವೈತ ಹಾಗೂ ಪಾಶ್ಚಾತ್ಯ ತತ್ವಜ್ಞಾನ,ಪು.೫೬೮ ಚಿತ್ರಭೆ ,ಸಂಸ್ಮರಣ
ಸಂಪುಟ.

೩೩. ಅದೇ, ಪು.೫೬೯

೩೪. ಎಂ.ಪ್ರಭಾಕರ ಜೋಶಿ, ಎಂ.ಎ.ಹೆಗಡೆ ಸಿದ್ದಾಪೂರ, ಭಾರತೀಯ ತತ್ವಶಾಸ್ತ್ರ
ಪರಿಚಯ, ಪು.೧೬೯

೩೫. ಎದುರ್ಕುಳ ಕೆ.ಶಂಕರನಾರಾಯಣಭಟ್,ಹಿಂದೂ ಧರ್ಮದ ಪರಿಚಯ,
ಪು. ೧೨೪

೩೬. ಪ್ರಭುಶಂಕರ (ಸಂ),ವಿಶ್ವಧರ್ಮ ದರ್ಶನ, ಪು.೩೮೩
ಲೇಖನ: ವಿಶಿಷ್ಟಾದ್ವೈತ–ವಿ.ಎನ್. ಶ್ರೀನಿವಾಸಚಾರಿ. ಅನುವಾದ ಎನ್.ಎಸ್.
ಅನಂತರಂಗಾಚಾರ

೩೭. ಎಂ.ಪ್ರಭಾಕರ ಜೋಶಿ, ಎಂ.ಎ.ಹೆಗಡೆ ಸಿದ್ದಾಪೂರ, ಭಾರತೀಯ ತತ್ವಶಾಸ್ತ್ರ
ಪರಿಚಯ, ಪು.೧೯೭

೩೮. ತಿಪ್ಪೇರುದ್ರಸ್ವಾಮಿ ಎಚ್. ವಚನಗಳಲ್ಲಿ ವೀರಶೈವ ಧರ್ಮ,ಪು.೬೯

೩೯. ಅದೇ, ಪು.೬೯

೪೦. ಶಿವಯೋಗಿ ಶಿವಾಚಾರ್ಯರು, ಸಿದ್ಧಾಂತ ಶಿಖಾಮಣಿ, ಪು.೪೬೨

೪೧. ಅದೇ–ಪು.ಸಂ.೮೭

೪೨. ಶಿವಯೋಗಿ ಶಿವಾಚಾರ್ಯರು,ಸಿದ್ಧಾಂತ ಶಿಖಾಮಣಿ, ಪು.೯೦

೪೩. ನಂದಿಮಠ ಎಸ್.ಸಿ., ವೀರಶೈವ ಧರ್ಮ ಕೈಪಿಡಿ, ಪು.೧೦೫

ಅಧ್ಯಾಯ : ೪

ವಚನಕಾರರು : ಮಾಯೆ ಸ್ವರೂಪ

ಅಧ್ಯಾಯ-೪
ವಚನಕಾರರು: ಮಾಯೆ ಸ್ವರೂಪ

೧೨ನೇ ಶತಮಾನದಲ್ಲಿ ರಚನೆಗೊಂಡ ವಚನ ಸಾಹಿತ್ಯ ಸಾಮಾಜಿಕ, ಧಾರ್ಮಿಕ, ನೈತಿಕ, ಆರ್ಥಿಕ ಮತ್ತು ಸಾಹಿತ್ಯಿಕ ಸಂಘರ್ಷದ ಸಮ್ಮಿಶ್ರ ಫಲವಾಗಿದೆ. ಮಾನವೀಯತೆ ಎಂಬ ಅಂಶವನ್ನು ಧರ್ಮದ ಹಾಗೂ ಆಧ್ಯಾತ್ಮದ ಮೂಲಕ ಸಾರ್ವತ್ರಿಕಗೊಳಿಸುವಲ್ಲಿ ವಚನ ಕಾಲಘಟ್ಟ ಪ್ರಮುಖ ಪಾತ್ರ ವಹಿಸಿದೆ. ಈ ಅವಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಸಾಮಾನ್ಯನಿರಲಿ, ಅಸಾಮಾನ್ಯನಾಗಿರಲಿ ಎಲ್ಲರೂ ಧಾರ್ಮಿಕ- ಆಧ್ಯಾತ್ಮಿಕ ಸಾಧನೆಯತ್ತ ಹೊರಳುವ ಮೂಲಕ ಸಾಮಾಜಿಕ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದರು. ಪ್ರತಿಯೊಬ್ಬ ಶರಣ ಸಾರ್ಥಕ ಜೀವನ ನಡೆಸಲು ಮುಂದಾದನು ತತ್ಪರಿಣಾಮವಾಗಿ ವಚನ ಸಾಹಿತ್ಯದಲ್ಲಿ ಅಸಂಖ್ಯಾತ ಶರಣ-ಶರಣೆಯರನ್ನು ಕಾಣುತ್ತೇವೆ.

ಶರಣ-ಶರಣೆಯರೆಲ್ಲರೂ ನಡೆದಂತೆ-ನುಡಿಯುವ, ನುಡಿದಂತೆ ನಡೆಯುವ ದೀಕ್ಷೆ ಪಡೆದವರಲ್ಲದೇ ಆ ಮೂಲಕ ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ರೀತಿ ವಿಶೇಷವಾದುದಾಗಿದೆ. ಪ್ರತಿಯೊಬ್ಬ ಶರಣನು ತಾನು ಮಾಡುವ ಕಾಯಕಕ್ಕೆ ಪ್ರಾಮುಖ್ಯತೆ ನೀಡಿ, ಭಕ್ತಿಗೆ ಎರಡನೇಯ ಆದ್ಯತೆ ನೀಡಿದನು. ಕಾಯಕ ಮುಖ್ಯವಾದರೂ ಕಾಯಕದಿಂದ ದೊರೆಯುವ ಲಾಭ (ಗಳಿಕೆ) ಮುಖ್ಯವಾಗಲಿಲ್ಲ. ಗಳಿಕೆಯನ್ನು ಕೂಡಿಡದೇ ಸತ್ಮಾರ್ಗದಲ್ಲಿ ಹಂಚುವ ಕಾರ್ಯ ಕೈಗೊಂಡರು. ಕಾಯಕ-ಆಧ್ಯಾತ್ಮ ಇವರೆಡರ ಮೂಲಕ ಶ್ರೀಮಂತ-ಬಡವ, ಮೂರ್ಖ-ಪಂಡಿತ, ಬ್ರಾಹ್ಮಣ-ಹೊಲೆಯ ಇತ್ಯಾದಿ ನೆಲೆಯಲ್ಲಿ ಅಸಮಾನತೆಯನ್ನು ಹೊಡೆದುಹಾಕಿ ಸಮಾನ ಜಾತಿ, ಕುಲ, ಧರ್ಮವುಳ್ಳ ಹಾಗೂ ಆರ್ಥಿಕ ಸಮತೆಯುಳ್ಳ ಮಾನವ ಸಮಾಜದ ನಿರ್ಮಾಣಕ್ಕೆ ಎಲ್ಲ ಶರಣರು ಮುಂದಡಿ ಇಟ್ಟರು. ಈ ಪ್ರಯತ್ನ ಕರ್ನಾಟಕ ಪರಂಪರೆಯಲ್ಲಿ ಮೈಲುಗಲ್ಲಾಗಿ ಸ್ಥಾಪಿತವಾದುದಲ್ಲದೆ ಸಾಹಿತ್ಯಿಕ ಕ್ಷೇತ್ರದಲ್ಲಿ ಅಪೂರ್ವ ಸ್ಥಾನ ಪಡೆಯಿತು. ಸಾಮಾನ್ಯನು ಸಾಹಿತ್ಯ ರಚನೆ ಮಾಡಬಲ್ಲ ಎಂಬುದನ್ನು ಪ್ರಯೋಗಾತ್ಮಕವಾಗಿ ಶರಣ ಶರಣೆಯರು ತೋರಿಸಿಕೊಟ್ಟರು.

ಶರಣ ಸಮೂಹ ಸಾಮಾಜಿಕ ಸ್ತರದಲ್ಲಿ ನಿಂತು ಆಧ್ಯಾತ್ಮಿಕ ಸಾಧಕರಾಗುವಲ್ಲಿ ಕ್ರಿಯಾಶೀಲ ಪ್ರಯತ್ನ ಕೈಗೊಂಡರು. ಬಸವಣ್ಣನವರ ನೇತೃತ್ವದಲ್ಲಿ ಹಲವು ಶರಣರು ವಚನ ಸಾಹಿತ್ಯ ನಿರ್ಮಾಣಕ್ಕೆ ಕಾರಣರಾದರು. ಈ ವಚನ ಸಾಹಿತ್ಯವನ್ನು ಸಾಮಾಜಿಕ-ಆಧ್ಯಾತ್ಮಿಕ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ.

ಪ್ರತಿಯೊಬ್ಬ ಶರಣನು ತನ್ನ ಅನುಭವಕ್ಕೆ ಬರುವ ಪ್ರತಿಯೊಂದು ಸಂದರ್ಭವನ್ನು ವಚನ ಸಾಹಿತ್ಯ ಸೃಷ್ಟಿಗೆ ಆಕರವಾಗಿಸಿಕೊಂಡಿದ್ದಾನೆ. ತನ್ನ ಅನುಭವಗಳನ್ನು, ಅನುಭವದ ಹಿನ್ನೆಲೆಯಲ್ಲಿ ಮೂಡುವ ಅಭಿಪ್ರಾಯಗಳನ್ನು, ಚಿಂತನೆಗಳನ್ನು ವಚನದಲ್ಲಿ ಉಪಮೆ,

ರೂಪಕ, ಪ್ರತಿಮೆಗಳಾಗಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ವಚನಗಳನ್ನು ಆಧ್ಯಾತ್ಮಿಕ ಸಾಧನೆಯಲ್ಲಿನ ಅಂತಿಮ ಹಂತವಾದ ಮುಕ್ತಿ ಸಾಧಿಸುವಲ್ಲಿ ತಡೆ ಉಂಟು ಮಾಡಿದೆ ಎಂದುಕೊಂಡಿರುವ ಎಲ್ಲ ಸಂದರ್ಭಗಳಲ್ಲಿ 'ಮಾಯೆ' ಎಂಬ ಅಂಶವನ್ನು ಗುರುತಿಸುವ ಹಾಗೂ ವಿಶ್ಲೇಷಿಸುವ ಕಾರ್ಯ ಕೈಗೊಳ್ಳಲಾಗಿದೆ.

ಈ ಅಧ್ಯಯನದ ಸಂದರ್ಭದಲ್ಲಿ ಬಹು ಸಂಖ್ಯೆಯ ವಚನಕಾರರಿದ್ದು ಆಯ್ದ ಪ್ರಮುಖರನ್ನು ಅನುಲಕ್ಷಿಸಿಕೊಂಡು 'ಮಾಯೆ'ಯ ಪರಿಕಲ್ಪನೆ ರೂಪಿತಗೊಂಡ ಬಗೆಯನ್ನು ಗಮನಿಸಿದೆ. ಬಸವಣ್ಣ, ಚನ್ನಬಸವಣ್ಣ, ಮಾದಾರ ಚೆನ್ನಯ್ಯ, ಚಂದಿಮರಸ, ಶಂಕರ ದಾಸೀಮಯ್ಯ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮುಂತಾದ ವಚನಕಾರರಲ್ಲಿ 'ಮಾಯೆ' ಕುರಿತು ಪ್ರಸ್ತಾಪಗೊಂಡ ಬಗೆಯನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ.

೪.೧ ಬಸವಣ್ಣ: ಮಾಯೆ ಶರಣರಲ್ಲಿ ಆಧ್ಯಾತ್ಮಿಕ ಚಿಂತನೆಗೆ ಸ್ಫೂರ್ತಿಯಾದವನು ಬಸವಣ್ಣನವರು. ಮಾಯೆ ಯೆಂಬುದು ಮನದ ಕಗ್ಗಂಟಿಗೆ ಕಾರಣವಾಗಿದೆ ಎಂದು ವಚನವೊಂದರಲ್ಲಿ ಹೀಗೆ ಹೇಳಿದ್ದಾನೆ.

"ತನು ಮನ ಧನವ ಹಿಂದಿಕ್ಕಿಕೊಂಡು
....
ಮಾಯಾ ಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ"[೧]

ತನು-ಮನ-ಧನವ ಬಳಸಿ ಭಕ್ತಿಯ ಮಾಡುವನೆಂಬರು. ಮಾತಿನ ಮೂಲಕ ಆಡಂಬರ ತೋರುವರು. ದಪ್ಪನೆಯ ಕೋಲು ಎಸೆದಾಗ ಗುರಿ ತಲುಪುವುದಿಲ್ಲವೋ ಹಾಗೆ ತೋರಿಕೆಯ ಭಕ್ತಿ ಮಾಡುವವನು ಪರಮಾತ್ಮನೆಂಬ ಗುರಿಯ ತಲುಪಲಾರ. ಅವನು ತಲುಪದಿರಲು ಕಾರಣ. ಈ ಮಾಯೆ ಎಂಬ ಆಕರ್ಷಣೆಯೂ ಆಗಿದೆ. ಬಸವಣ್ಣನವರು ಕಾಯವನ್ನು ಕೇಂದ್ರಿಕರಿಸಿಕೊಂಡು ಮಾಯೆ ಕುರಿತು ವಿಭಿನ್ನವಾಗಿ ಚರ್ಚಿಸಿದ್ದಾರೆ. ತನು-ಮನದ ವಿಕಾರಕ್ಕೆ ಲೋಕವೂ ಕಾರಣವಾಗಲು ಸಾಧ್ಯವಿದೆ ಎಂಬುದನ್ನು ಹೀಗೆ ಹೇಳಿದ್ದಾರೆ. ಲೋಕದ ಕುರಿತ ಸೆಳೆತ ಮಾಯೆ ಆಗಿದೆ.

"ಅಂಗದ ನೋಟವು ಸಿಂಗದ ಗಾತ್ರವು
ಹಿಂಗದು ಮನದಲ್ಲಿ ನಾನಾ ವಿಕಾರವು
ಬಂದೆನೆಂದರಿಯಲಿಕ್ಕಿಲ್ಲಾಗಿ ಸಂದೇಹ ಬಿಡದು
ಮುಂದುಗಾಣದು ಲೋಕ
ಬೆಂದ ಮಾಯಕ್ಕಂಜಿ ನಿಮ್ಮ ಮೊರೆವೊಕ್ಕೆ
ಕೂಡಲ ಸಂಗಮದೇವಾ"[೨]

ಪಂಚೇಂದ್ರಿಯಗಳನ್ನು ಬಳಸಿ ನೋಡುವ, ಗ್ರಹಿಸುವ ಮೂಲಕ ಮನದಲ್ಲಿ

ನಾನಾ ವಿಕಾರಗಳು ಮೂಡುತ್ತವೆ. ಕಾಯದ ಮೂಲಕ ಹಲವು ಆಕರ್ಷಣಗಳಿಗೆ ಒಳಗಾದನೆಂಬ ಅರಿವು ಮೂಡದೆ ಇದ್ದಾಗ ಮಾಯೆಯ ಪರಿಣಾಮಕ್ಕೆ ಸಿಕ್ಕು ಲೌಕಿಕದವರಾಗಿ ಉಳಿದು ಬಿಡುತ್ತೇವೆ. ಲೋಕದ ಜನರು ಮಾಯೆ ಎಂಬ ಶಕ್ತಿ ಭಾವ ಆವರಿಸಿ ಅದರಿಂದ ಬಿಡಿಸಿಕೊಳ್ಳಲಾಗದ ಸ್ಥಿತಿಯನ್ನು ನೋಡಿ ಶರಣನು ಪರಮಾತ್ಮನ ಶರಣು ಹೋಗುತ್ತಾನೆ. ಪರಮಾತ್ಮನ ಶರಣು ಹೋಗುವುದೆಂದರೆ ಮಾಯಾಮುಕ್ತ ಸ್ಥಿತಿ. ಲೌಕಿಕದ ಆಸೆ–ಅಕರ್ಷಣೆಗಳಿಗೆ ಒಳಗಾಗದೇ ನಿರ್ಮಲ ಚಿತ್ರವನ್ನು ಸ್ಥಿತರಗೊಳಿಸಿಕೊಳ್ಳುವುದು. ಇಂತಹ ಸ್ಥಿತಿಗೆ ತಲುಪಲು ಸಾಮಾನ್ಯನಿಗೆ ಸಾಧ್ಯವಿಲ್ಲ. ಶರಣನು ತಾನು ಸಾಮಾನ್ಯನ ಸ್ಥಿತಿಯಿಂದ ಹೊರ ಬಂದಾಗ ಆಧ್ಯಾತ್ಮಿಕ ವಲಯದಲ್ಲಿ ಸ್ಥಿರವಾಗಿ ನಿಲ್ಲಲು ಸಾಧ್ಯ. 'ಕಾಯದ ಕಳವಳವೆಂಬುದು ಕರಣದ ಕಳವಳದಿಂದ ಮತ್ತು ಇಂದ್ರೀಯದ ಕಳವಳದಿಂದ, ವಿಷಯದ ಕಳವಳದಿಂದ, ಮೋಹ ಕಳವಳದಿಂದ'[೩] ಹುಟ್ಟುತ್ತದೆ. ಕಾಯ ಕಣ್ಣೀಗೆ ತೋರುವಂಥದ್ದು. ಕರಣ, ಇಂದ್ರೀಯ, ವಿಷಯ, ಮೋಹ ಇವು ಕಣ್ಣಿಗೆ ಕಾಣದ ಹಾಗೂ ಕಾಯದ ಮೂಲಕ ಅಭಿವ್ಯಕ್ತವಾಗುವ ಭಾವ ಸ್ಥಿತಿಗಳು. ಈ ಭಾವ ಸ್ಥಿತಿಗಳು 'ಮಾಯ'ದ ಒಂದೊಂದು ಅಭಿವ್ಯಕ್ತ ರೂಪಗಳಾಗಿವೆ. ಲೋಕವೆಲ್ಲವೂ ಈ ರೂಪಗಳ ಸೆಳೆತಕ್ಕೊಳಗಾಗಿದೆ. ಇದನ್ನು ನೋಡಿ ತಾನು ಅವರಲ್ಲೊಂದಾಗಲು ಇಚ್ಛಿಸಿದೆ ನಿಮ್ಮೆಡೆಗೆ ಬಂದೆ ಎಂಬ ಭಾವವಿದೆ. ಮಾಯೆ ಎಂಬ ಸ್ಥಿತಿ ಆವರಿಸುವ ಪರಿಯನ್ನು ಮತ್ತೊಂದು ವಚನದಲ್ಲಿ ಹೇಳಿದ್ದಾನೆ

"ನಿಮಿಷಂ ನಿಮಿಷಂ ಭೋ ಕ್ಷಣದೊಳಗರ್ಧಂಭೋ
ಕಣ್ಣು ಮುಚ್ಚಿ ಬಿಚ್ಚು ವೈಸು ಬೇಗಂಭೋ
ಸಂಸಾರದಾಗುಂ ಭೋ! ಸಂಸಾರದ ಹೋಗುಂಭೋ ।
ಸಂಸಾರದೊಪ್ಪ ಭೋ
ಕೂಡಲಸಂಗಮ ದೇವಾ
ನೀ ಮಾಡಿದ ಮಾಯಂ ಭೋ ಅಭ್ರಚ್ಛಾಯಂಭೋ"[೪]

'ಮಾಯೆ' ಎಂಬ ಶಕ್ತಿ ಪ್ರಬಲವಾದದ್ದು. ನಿಮಿಷ ನಿಮಿಷದಲ್ಲಿ ಅದರ ರೂಪ ಹಾಗೂ ಪರಿಣಾಮದಲ್ಲಿ ಬದಲಾವಣೆ ಆಗುವುದು. ಮಾಯೆ ಮನುಜನನ್ನು ಆವರಿಸುವ ವೇಗ ಕೇವಲ ಅರೆನಿಮಿಷ ಕ್ಷಣಾರ್ಧವಷ್ಟೇ ಕಣ್ಣು ಮುಚ್ಚಿ ಕಣ್ಣು ಬಿಡುವಷ್ಟರಲ್ಲಿ ಅದು ನಮ್ಮೊಳಗೆ ಎಡೆ ಪಡೆದಿರುತ್ತದೆ. ಜೀವ ಕಾಯದ ಮೂಲಕ ಅಸ್ತಿತ್ವ ಪಡೆದರೆ ಸಾಕು. ಆ ಕಾಯದ ಮೂಲಕ ತನ್ನ ವ್ಯಾಪಕತೆಯನ್ನು ಸೂಚಿಸುತ್ತದೆ. ಜೀವನ ಸಂಸಾರಿಯಾಗುವ ಕ್ರಿಯೆಯೇ ಹಂತಹಂತವಾಗಿ ಮಾಯಾ ಸ್ಥಿತಿಗೆ ಒಳಗಾಗುವುದಾಗಿದೆ. ಇಂತಹ ಪ್ರಬಲ ಮಾಯೆಯನ್ನು ಸೃಷ್ಟಿಸಿದ ಭಗವಂತನಲ್ಲಿಯೇ ಅದರಿಂದ ರಕ್ಷಿಸು ಎಂಬ ವಿನಂತಿ ಇದೆ. ಈ ವಿನಂತಿಯನ್ನು ಪ್ರಾರ್ಥನೆಯ ಮೂಲಕ ಮಾಡಿದ್ದು, ಮಾಯೆಯು ಸಂಸಾರವೆಂಬ

ಸಾಂಕೇತಿಕ ರೂಪದಲ್ಲಿ ಅಭಿವ್ಯಕ್ತವಾಗಿದೆ. ಸಂಸಾರದಲ್ಲಿದ್ದು ಸಾಧಿಸಿದೆನೆಂದು ಹೇಳಿಕೊಳ್ಳುವವರ ಕುರಿತು ಮತ್ತೊಂದು ವಚನದಲ್ಲಿ ಹೇಳುತ್ತಾನೆ.

ವೇದಶಾಸ್ತ್ರದವರ ಹಿರಿಯರೆನ್ನೆ
ಮಾಯಾ ಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ
....
........................ಸಾಧಿಸಿದ ಸಾಧನೆಯನೆ ಸಾಧಿಸುವುದು[೫]

ವೇದ–ಆಗಮ–ಶಾಸ್ತ್ರ–ಉಪನಿಷತ್ತುಗಳ ಸಾರವನ್ನು ಅರ್ಥ ವಿವರಣೆಯಿಂದ ಹೇಳಿದರೆ ಸಾಲದು ಅದನ್ನು ಬದುಕಿನ ಸಾರವಾಗಿಸಿಕ್ಕೊಳ್ಳಬೇಕು. ಮಾತು ಮತ್ತು ಜೀವನರೀತಿಯಲ್ಲಿ ಏಕತೆಯನ್ನು ಸಾಧಿಸಿಕೊಳ್ಳಬೇಕು. ನಡೆ–ನುಡಿಗಳೊಂದಾಗಮಾತ್ರ ಅವರು ಹಿರಿಯರಾಗಲು ಸಾಧ್ಯ. ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿಯಾದರೆ ಪರಮಾತ್ಮನಿಗೆ ಮೆಚ್ಚುಗೆಯಾಗದು. ನಡೆ–ನುಡಿಯಲ್ಲಿ ಏಕತ್ರ ಸಾಧಿಸಿದ ಕಿರಿಯನಾಗಿದ್ದರೂ ಸಹ ನಿಜಶರಣನಾದವನು ಪರಮಾತ್ಮನಿಗೆ ಪ್ರಿಯನಾಗುತ್ತಾನೆ. ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲ ಇವುಗಳ ತಾತ್ವಿಕ ಅಂಶಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಅವುಗಳನ್ನು ಜೀವನದ ಆಚರಣೆಯಲ್ಲಿ ತರಬೇಕು ಎಂಬ ಸದಾಶಯವಿದೆ. ನಿಜಶರಣನಾದವನು ನಿರ್ವ್ಯಾಯಿ, ನಿರ್ವ್ಯೋಹಿ, ನಿರ್ಗುಣಿ, ನಿಶ್ಚಲಿಯಾಗಿರಬೇಕು. ಲೋಕದ ಸಂಗತಿಗೆ ಇದ್ದು ಇಲ್ಲದಂತಿರಬೇಕು ಆಗ ಮಾತ್ರ ಭ್ರಾಂತಿ ಎಂಬ ಮಾಯೆಗೆ ಒಳಗಾಗದೆ ಇರಲು ಸಾಧ್ಯವಾಗುತ್ತದೆ. ನಿಜ ಭಕುತಿಯಿಲ್ಲದ ನಿಜ ಆಚರಣೆಯಿಲ್ಲದವರ ಕುರಿತು ಹೀಗೆ ಹೇಳುತ್ತಾನೆ.

"ದಿಟ ಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ
ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಟೀವಕ ಟಿಂಬನಾಡಿಸುತಿದ್ದಿತ್ತಯ್ಯಾ ನಿನ್ನ ಮಾಯೆ
.... ತೋಂಟ" [೬]

ಭಕ್ತಿ ಎಂಬುದು ಸತ್ಯವಾದದು ಚಿನ್ನದಂತೆ ಪರಿಶುದ್ಧವಾದದು ಆಗಿರಬೇಕು. ತೋರಿಕೆಯ ಢಾಂಬಿಕ ಭಕ್ತಿ ಇದ್ದಾಗ ಮಾಯೆ ತನ್ನ ಮನ ಬಂದಂತೆ ಮನುಜನನ್ನು ಕುಣಿಸುತ್ತದೆ. ಹೊನ್ನು, ಹೆಣ್ಣು, ಮಣ್ಣು ಈ ಮೂರರ ಆಸೆ ತೋರಿಸಿ ತನ್ನತ್ತ ಸೆಳೆದುಕೊಳ್ಳುತ್ತದೆ. ಹಾಗೆ ಸೆಳೆದುಕೊಳ್ಳುವಂತೆ ಕೂಡಲ ಸಂಗಮದೇವ ಮಾಯೆಯನ್ನು ಪ್ರೇರೆಪಿಸುತ್ತಾನೆ. ಇಲ್ಲಿ ಮಾಯೆ ಪರಮಾತ್ಮನಿಗೆ ಸೇರಿದ್ದು ಅವನ ಹೊರತು ಮಾಯೆ ಅಸ್ತಿತ್ವವಿಲ್ಲವಾದರೂ ಮಾಯೆ ಪರಮಾತ್ಮನಷ್ಟೆ ಪ್ರಬಲ ಪರಿಣಾಮ ಬೀರಬಲ್ಲ ಶಕ್ತಿಶಾಲಿ ಆಗಿದೆ. ಸದ್ಭಕ್ತಿ, ಸದಾಚಾರ, ಸತ್ಕಾರ್ಯದ ಮೂಲಕ ಮಾಯಾ ಮುಕ್ತನಾಗಲು ಸಾಧ್ಯವಾಗುವುದು.

ಅಣ್ಣನ ಮತ್ತೊಂದು ವಚನದಲ್ಲಿ ಹೆಣ್ಣು ಎಂಬುದು ಮಾಯೆಗೆ ಒಳಗಾಗಲು ಕಾರಣಳಾಗುತ್ತಾಳೆ ಎಂಬ ವಿವರಣೆ ಈ ಕೆಳಗಿನ ವಚನದಲ್ಲಿದೆ.

"ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
..................................ಕೂಡಲ ಸಂಗಮದೇವಾ"[೭]

ವಚನ ಸಾಲು ಸರಳ ನಿರೂಪಣೆಯನ್ನು ಹೊಂದಿದೆ. ತಾಯಿ, ಮಗಳು, ಸ್ತ್ರೀ ಎಂಬ ಪಾತ್ರಗಳ ಮೂಲಕ ಮಾಯೆ ಸಂಸಾರದಲ್ಲಿ ಕೆಡಹುತ್ತಾಳೆ ಎಂಬ ಭಾವ ಇಲ್ಲಿದೆ. ಜನ್ಮ ನೀಡುವ ಕ್ರಿಯೆ, ಪ್ರಕೃತಿ ಸಹಜ ಈ ಕ್ರಿಯೆಯ ಮೂಲಕ ಜೀವ ಲೋಕ ವ್ಯಾಪಾರದ ತೆಕ್ಕೆಗೆ ಬಂದು ಬೀಳುತ್ತದೆ. ಮಾಯೆ ಎಂಬ ಸ್ಥಿತಿ ಹುಟ್ಟುವ ಮೊದಲು ಹಾಗೂ ನಂತರದಲ್ಲಿ ತಾಯಿ, ಮಗಳು, ಸತಿಯಾಗಿ ಕಾಡುತ್ತದೆ ಎಂಬುದಷ್ಟೆ ಅಲ್ಲ ಈ ಮಾಯೆಯನ್ನು ಕಳೆದುಕೊಳ್ಳಬಲ್ಲನೆಂಬ ಧೈರ್ಯವೂ ತನಗಿಲ್ಲ. ಅದರಿಂದ ಮುಕ್ತಗೊಳಿಸುವ ಶಕ್ತಿ ಸಾಕ್ಷಾತ್ ಪರಮಾತ್ಮನಿಗೆ ಮಾತ್ರವಿದೆ ಎಂಬುದು ಸ್ಪಷ್ಟ.

ಪರಮಾತ್ಮನಿಂದ ಸೃಷ್ಟಿಗೊಂಡ ಮಾಯೆಯ ವ್ಯಾಪಕತೆಯನ್ನು ಮುಂದಿನ ವಚನದಲ್ಲಿ ಪ್ರಸ್ತಾಪಿಸಲಾಗಿದೆ.

"ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯ
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ
....
ಕರಿಯ ಕನ್ನಡಿಯೊಳ ಗಡಗಿದಂತಯ್ಯಾ
ಕೂಡಲಸಂಗಮದೇವಾ"[೮]

ಪರಮಾತ್ಮ ನಿರಾಕಾರಿ, ಸರ್ವವ್ಯಾಪಿಯಾದವನು, ಜಗತ್ ಸೃಷ್ಟಿಕರ್ತನಾದ ಪರಮಾತ್ಮನಿಂದ ಹುಟ್ಟಿದುದು ಮಾಯೆ. ಅದು ಲೋಕವನ್ನ ವ್ಯಾಪಿಸಿದ್ದು. ಆ ಲೋಕದಲ್ಲಿ ತಾನಿದ್ದು, ತನ್ನ ಮನದಲ್ಲಿ ಪರಮಾತ್ಮನಿರುವನೆಂಬ ಕಾರಣಕ್ಕೆ ಮಾಯೆ ತನ್ನನ್ನು ಆವರಿಸದು. ಕನ್ನಡಿಯಲ್ಲಿ ಕರಿಯನ್ನು ಅಡಗಿಸಿರುವಂತೆ ಎನ್ನೊಳಗೆ ನೀನಿರುವೆ ಎಂಬ ಭಾವವಿದೆ. ಮಾಯೆ ಶಿವಾಂಶಿಕವಾದದ್ದು, ಶಿವನಷ್ಟೆ ಪ್ರಬಲವಾದದು ಎಂಬರ್ಥವಿದೆ. ಲೌಕಿಕದ ಭವಿಯ ಸ್ವಾರ್ಥವೂ ಕೂಡಾ ಮಾಯೆ ಆಗಿದೆ ಎಂಬುದನ್ನು ಹೀಗೆ ಹೇಳಿದ್ದಾರೆ.

"ಮರನ ಹೂವ ಕೊಯಿದು ಮರಕ್ಕೇರಿಸಿ
ನದಿಯುದಕವ ಸದಿಗರ್ಪಿತವ ಮಾಡಿ
....
ಕೂಡಲಸಂಗಮದೇವ ಮಾಡಿದ ಮಾಯೆ"[೯]

ಪ್ರಕೃತಿ ಸಹಜ ನೀರು, ಹೂ, ಪತ್ರ ಅರ್ಪಿಸಿದರೆ ಅದು ಕೇವಲ ಬಾಹ್ಯದ ಅಲಂಕಾರ, ಕೂಡಲಸಂಗಮನಿಂದ ಸೃಷ್ಟಿಯಾದ ಮಾಯೆ ಮನುಜನು ತೋರಿಕೆಯ ಭಕ್ತಿ ಮೂಡುತ್ತದೆ ಎಂಬರ್ಥವಿದೆ.

ಶಿವನಿಂದ ಸೃಷ್ಟಿಗೊಂಡ ಮಾಯೆಯಿಂದ ಬಿಡಿಸಿಕೊಳ್ಳಲು ಮನುಜನು ಕೈಗೊಳ್ಳುವ ಭಕ್ತಿಯ ಸ್ವರೂಪವನ್ನು ಈ ವಚನ ಪ್ರಸ್ತಾಪಿಸುತ್ತದೆ. ಪ್ರಕೃತಿಯೆಲ್ಲವೂ ಶಿವಸ್ವರೂಪಿ, ಶಿವಚೈತನ್ಯಮಯವಾದದು. ಪ್ರಕೃತಿ ಸಹಜವಾದದೆಲ್ಲವೂ ಶಿವಮಯವೇ ಆಗಿದ್ದು, ಅದನ್ನು ತಂದು ಶಿವನಿಗರ್ಪಿಸಿದಲ್ಲಿ ನಿಜಭಕ್ತಿಯಾಗಲಾರದು. ನಿಜಭಕ್ತಿಯಿಲ್ಲದೆ ಪೂಜಿಸಿದರೆ ಪರಮಾತ್ಮನನ್ನು ತಲುಪಲಾರದು. ಪರಮಾತ್ಮ ಅಂತರಂಗದಲ್ಲಿ ನೆಲೆಗೊಳ್ಳಲಾರ. ನಿಸ್ವಾರ್ಥ ಸೇವೆಯಿಂದ ಮಾತ್ರ ಪರಮಾತ್ಮನನ್ನು ಒಲಿಸಿಕೊಳ್ಳಲಾಗುವುದು ಎಂಬ ಸತ್ಯವನ್ನು ಹೇಳುತ್ತಾರೆ. ಲೌಕಿಕದಲ್ಲಿದ್ದು ತೊಡಗುವಾಗ ಉಂಟಾಗುವ ಅದೃಢತೆಯೇ ಮಾಯೆ ಎಂಬುದನ್ನು ಹೀಗೆ ಹೇಳಿದ್ದಾನೆ.

"ನಾನೊಂದ ನೆನೆದಡೆ ತಾನೊಂದು ನೆನೆವುದು
ನಾನಿತ್ತಲೆಳೆದಡೆ ತಾನತ್ತಳೆವುದು
ತಾಬೇರೆ ಎನ್ನನಳಲಿಸಿ ಕಾಡಿತ್ತು
....
ತಾನೆನ್ನ ಮುಂದುಗಡೆಸಿತ್ತು ಮಾಯೆ"[೧೦]

ಶರಣನಾಗಿ ನಿಜಭಕ್ತಿಯಿಂದ ಶಿವನನ್ನು ಆರಾಧಿಸಬೇಕೆಂದರೆ ಮಾಯೆ ಬಿಡುವುದಿಲ್ಲ. ಮಾಯೆ ನಿಜ ಭಕ್ತನ ನಿಜಶರಣ ಆಧ್ಯಾತ್ಮಿಕ ಸಾಮರ್ಥ್ಯವನ್ನು ಪರೀಕ್ಷಿಸುವ ಸಾಧನ. ಈ ಪರೀಕ್ಷೆಯಲ್ಲಿ ಗೆದ್ದವನು ಸದಾನಂದವನ್ನು ಪಡೆಯುತ್ತಾನೆ. ಚಿರಶಾಂತಿಯನ್ನು ಹೊಂದುತ್ತಾನೆ.

ಒಟ್ಟಾರೆ ಮಾಯೆ ಎಂಬುದು ಶಿವನಷ್ಟೆ ಪ್ರಬಲವಾಗಿದ್ದು, ಶಿವಸ್ವರೂಪವು ಮನುಜನ ಅಂತರಂಗದಲ್ಲಿ ನೆಲಗೊಳ್ಳಬೇಕೆಂದರೆ ಶಿವನಂಶಿಕವಾದ ಮಾಯೆಯಿಂದ ಮುಕ್ತಗೊಳ್ಳಬೇಕು. ಆದಾಗದಿದ್ದರೆ ಮಾಯೆ ಹೆಣ್ಣಾಗಿ ಭ್ರಾಂತಿ, ಭ್ರಮೆ, ಸಂಸಾರ, ಸ್ವಾರ್ಥ ಇತ್ಯಾದಿಯಾಗಿ ತೋರುತ್ತದೆ. ಲೋಕದಲ್ಲಿ ಜೀವನನ್ನು ಆವರಿಸಿರುವ ಮಾಯೆಯನ್ನು ಹೇಳುತ್ತಾ ಈ ಮಾಯೆ ತನನ್ನು ಕಾಡದೇ ಬಿಟ್ಟಿಲ್ಲ. ಅದಕ್ಕಾಗಿಯೇ ತಾನು ಭಗವಂತನ ನೆರೆನಂಬಿದೆ. ಮಾಯೆಯ ಸೆಳೆತದಲ್ಲಿ ಬೀಳದಂತೆ ರಕ್ಷಿಸು ಎಂಬ ವಿನಮ್ರತೆ ಬಸವಣ್ಣನ ವಚನದಲ್ಲಿದೆ.

೪.೨ ಚನ್ನಬಸವಣ್ಣ: ಮಾಯೆ ನಿಜಜ್ಞಾನಿ ಎನಿಸಿಕೊಂಡ ಚೆನ್ನಬಸವಣ್ಣನು ಮಾಯೆಯನ್ನು ಹೀಗೆ ಹೇಳಿದ್ದಾನೆ.

"ಮಾಯೆವಿಡಿದು ಜೀವಿಸುವ ಜೀವಕನಲ್ಲ
ಅದೇನು ಕಾರಣವೆಂದಡೆ
ಆತ ಘನಲಿಂಗವಿಡಿದು ಜೀವಿಸುವ ಜೀವಕನಾಗಿ
ವಿಷಯವಿಡಿದು ಭುಂಜಿಸುವ ಭುಂಜಕನಲ್ಲ" [೧೧]

ನಿಜವಾದ ಶರಣನು ವೇಷ, ವಿಷಯ, ಮಾಯೆ ಈ ತ್ರಿವಿಧದಿಂದ ಮುಕ್ತನಾಗಿ ಪಾರಮಾರ್ಥದ ಆಚರಣೆಗೈಯಬೇಕು. ಅಂತಹ ಶರಣನಿಗೆ ತಾನು ಶರಣೆನ್ನುತ್ತೇನೆ ಎಂದಿದ್ದಾರೆ. ವೇಷವೆಂಬುದು ಬಾಹ್ಯದ ಸ್ವರೂಪ, ವಿಷಯವೆಂಬುದು ಆಂತರ್ಯದ ಸ್ವರೂಪವನ್ನು ಬಿಂಬಿಸುತ್ತವೆ. ಮನುಜ ಢಾಂಬಿಕತನದಿಂದ, ಸ್ವಾರ್ಥದಿಂದ, ಮೋಹದಿಂದ ಬಿಡುಗಡೆಗೊಂಡಾಗ ನಿಜ ಜ್ಞಾನ ಮತ್ತು ಪರಮಾತ್ಮನ ನಿಜ ಕುರುಹು ಅರಿವಿಗೆ ಬರಲು ಸಾಧ್ಯವಾಗುತ್ತದೆ. ನಿಜಜ್ಞಾನದ ಕುರುಹು ಮೂಡಲು ಹೊನ್ನು, ಹೆಣ್ಣು, ಮಣ್ಣು ಈ ಮೂರರ ಆಸೆ ಬಿಡಬೇಕು ಎಂಬುದನ್ನು ಕೆಳಗಿನ ವಚನದಲ್ಲಿ ಪ್ರಸ್ತಾಪಿಸಿದ್ದಾನೆ.

"ಹೆಣ್ಣ ಬಿಟ್ಟಡೇನು, ಹೊನ್ನಿನಾಸೆ ಉಳ್ಳನ್ನಬರ?
ಹೊನ್ನ ಬಿಟ್ಟದೇನು ಮಣ್ಣಿನಾಸೆ ಉಳ್ಳನ್ನಬರ?
ಅಲ್ಲಿಗೆ ಹಿರಿಯತನ ಸಾಲದು
ಅವುಗಳೊಳಗೊಂದು................
ಆ ಮಾಯೆಯ ಒಂದ ಒಟ್ಟೊಂದಿರದಾಗಿ
ಅವನತಿಗಳೆದಲ್ಲದೆ ಭವಂ ನಾಸ್ತಿಯಾಗದು" ೧೨

ಭವಿ ಶರಣನಾಗುವಾಗ ಭಕ್ತಿ ಪ್ರಕ್ರಿಯೆಯಲ್ಲಿ ಹೊನ್ನು, ಹೆಣ್ಣು, ಮಣ್ಣು ಮೂರನ್ನು ತ್ಯಜಿಸಬೇಕು. ಒಂದನ್ನು ಬಿಟ್ಟು ಉಳಿದೆರಡನ್ನು ಬಿಡದೇ ಆಧ್ಯಾತ್ಮಿಕ ಸಾಧನೆ ಮಾಡಿದರೆ ಅದು ಅಪೂರ್ಣ. ತ್ರಿವಿಧ ಮಲ ಕಳೆದಲ್ಲದೆ ನಿಜ ಕುರುಹು ಅರಿವಿಗೆ ಬಾರದು. ಆಣವಾದಿ ಮಲತ್ರಯುಗಳನ್ನು ದುರ್ವಾಸನೆಯೆಂಬ ಭಾವದಲ್ಲಿ ನೋಡಿದ್ದಾನೆ. ಸರ್ವವ್ಯಾಪಿಯಾದ ಇವನ್ನು ಸ್ವೀಕರಿಸುವ ಅಥವಾ ಸ್ವೀಕರಿಸಿದಂತೆ ಇರುವ ಮನೋಭಾವ ನಮ್ಮೊಳಗಿರಬೇಕು. ಇಲ್ಲದಿದ್ದರೆ ಮಾಯೆ ಅವಿದ್ಯೆಯಾಗಿ ಜೀವನನ್ನು ಆವರಿಸಿ ಚಿದ್ರೂಪವನ್ನು ಕೆಡಿಸಿ ಪಶು, ಪಾಶಬದ್ಧನು ಸಂಸಾರಿ ಎಂಬ ಭಾವ ಮೂಡುವಂತೆ ಮಾಡುತ್ತದೆ. ಲಿಂಗ–ಜಂಗಮ ಎಂಬ ಪರಿಕಲ್ಪನೆಗಳೇ ಮಾಯೆಯಾಗಿ ತೋರುತ್ತವೆ. ಸದಾಚಾರ–ಸತ್‌ಚಿಂತನೆಗಳು ಭ್ರಮೆಯಾಗಿ ಲೌಕಿಕದ ಆಚರಣೆಗಳೇ ಭಕ್ತಿಯಾಗಿ ನಿಲ್ಲುತ್ತವೆ. ಜಡ ಮಾಯಾಧರ್ಮವ ಹೊದ್ದಲಮ್ಮನು ಕಾಣಾ ಕೂಡಲ ಚನ್ನಸಂಗಮದೇವಾ೧೩ ಎಂಬ ಮಾತು ಭವಿಯಾದವನಿಗೆ ಮಾಯೆ ಧರ್ಮವಾಗುತ್ತದೆ. ಅದೇ ಜೀವವಿಧಾನವೂ ಆಗುತ್ತದೆ ಎಂಬ ಅರ್ಥದಲ್ಲಿ ಶರಣರು ಮಾತನಾಡಿದ್ದಾರೆ. ಗುರುವಿನಿಂದ ಮಾಯಾ ಮುಕ್ತನಾಗಲು ಪರಮಾತ್ಮನನ್ನು ಕುರಿತು 'ನೀ ಮಾಡಿದ ಮಾಯೆಯ ಮಾಟವದಾರಾರನಾಳಿಗೊಳಿಸಿತ್ತು೧೪ ಎಂದರೆ ಶಿವಾಂಶಿಕವಾದ ಮಾಯೆ ದುರ್ಜನರನ್ನು ಮತ್ತು ಸಜ್ಜನರನ್ನು ಅಳವಿನಂಚಿಗೆ ತಳ್ಳುತ್ತದೆ. ಎಂಬಲ್ಲಿ ಯಾರನ್ನು ಬಿಟ್ಟಿಲ್ಲ, ಬಿಡುವುದಿಲ್ಲ. ಸಮಾಜದ ಜನರನ್ನು ಮಾಯೆ ಆವರಿಸುವ ರೀತಿಯನ್ನು ಹೇಳುತ್ತಾನೆ. ಭವಮುಕ್ತನಾಗಲು ಮಾಯಾ ಮುಕ್ತನಾಗಲೇಬೇಕಾದ

ಅನಿವಾರ್ಯತೆಯನ್ನು ಕಾಣುತ್ತೇವೆ. ಸಾಧನೆಯ ಮೂಲಕ ನಿಜಶರಣ ಅದು ತನ್ನಡೆಗೆ ಸುಳಿಯದಂತೆ ನೋಡಿಕೊಳ್ಳುತ್ತಾನೆ. ವಾಸ್ತವದಲ್ಲಿ ಮಾಯಾಮುಕ್ತನಾದ ವ್ಯಕ್ತಿಯ ಸ್ಥಿತಿಯನ್ನು ಇಲ್ಲಿ ಹೇಳಲಾಗಿದೆ.

"ತಾಪತ್ರಯವಿಲ್ಲದವ ವ್ಯಾಪ್ತಿಯನರಿಯದವ
ಇರುಳು ಹಗಲೆಂದು ಮನದಲ್ಲಿ ತಾಳದವ
ತಾಳೋಷ್ಠ ಸಂಪುಟಕ್ಕೆ ಬಾರದವ ಭವಚ್ಛೇದನದವ
ಭಾವಭಂಜನದವ ಕಾಲನಗೆದ್ದವ. ಮಾಯೆಯ ಮರೆದವ
ನಮ್ಮ ಕೂಡಲ ಚನ್ನಸಂಗಯ್ಯನ ಅರಿದು ಸುಖಿಯಾದವ" ೧೫

ಪರಮಾತ್ಮ ಸಾಕ್ಷಾತ್ಕಾರವನ್ನು ಅಂತರಂಗದಲ್ಲಿ ಹೊಂದಿದವನಿಗೆ ತಾಪತ್ರಯ ಮುಕ್ತ, ಕಾಲಮುಕ್ತ, ಭಾವ ಮುಕ್ತ ಮತ್ತು ಭವ ಮುಕ್ತ ಇತ್ಯಾದಿ ಸರ್ವದರಿಂದಲೂ ಮುಕ್ತನಾದವನು ಮಾಯೆ ಎಂಬ ಆಕರ್ಷಣ ಭಾವದಿಂದ ಮುಕ್ತಗೊಂಡಿರುವುದು ಖಚಿತ.

೪.೩ ಆದಯ್ಯ: ಮಾಯೆ ಶರಣರಲ್ಲೊಬ್ಬರಾದ ಆದಯ್ಯಗಳು ವಚನದಲ್ಲಿ ಮಾಯೆಯನ್ನು ಕಾಯ, ಕರ್ಮ ಇತ್ಯಾದಿ ರೂಪದಲ್ಲಿ ಗ್ರಹಿಸಿದ್ದಾನೆ

"ತನು ಮಾಯೆ ತನುವಿಂಗೆ ಮನಮಾಯೆ
ಮನಕ್ಕೆ ನೆನಹು ಮಾಯೆ ನೆನಹಿಂಗೆ ಅರಿವು ಮಾಯೆ
ಅರಿವಿಂಗೆ ಕುರುಹು ಮಾಯೆ
ಇದರಿಯದೆ ಹರಿಹರ ಬ್ರಹ್ಮಾದಿಗಳೆಲ್ಲರೂ
ಮಾಯೆಯ ಕಾಲ ಸರಮಾಲೆಗಳಾದರು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಮಾಯೆ
ದೇವದಾನವ ಮಾನವರಿಗೆ ಪರಿದೊಡಕಾಗಿ ಕಾಡಿತ್ತು" ೧೬

ಮಾಯೆ ಎಂಬ ದೇವ-ದಾನವ-ಮಾನವರೆಲ್ಲರನ್ನು ಆವರಿಸುತ್ತದೆ ಇದರ ಸೆಳವಿಗೆ ಯಾರು ಬರದೇ ಇರಲು ಸಾಧ್ಯವಿಲ್ಲ. ಮನುಜನನ್ನು ಹಂತ ಹಂತವಾಗಿ ಆವರಿಸುವ ನೀತಿಯನ್ನು ತನು-ಮನ-ನೆನಹು-ಅರಿವು-ಕುರುಹು ಎಂಬ ಅಂಶಗಳಲ್ಲಿ ಹೇಳಿದ್ದು ಈ ಪರಿ ಮನುಜನ್ನಷ್ಟೆ ಅಲ್ಲ ದೇವನನ್ನು ಬಿಡದು ಎಂಬ ಹರಿಹರ ಬ್ರಹ್ಮಾದಿಗಳು, ನವನಾಥ ಸಿದ್ಧರು. ಆರುಹಿರಿಯರು ನವಬ್ರಹ್ಮರು ಅಲ್ಲದೆ ಅಖಿಲ ಲೋಕಂಗಳ ಒಳಗೊಂಡಿತ್ತು ಎಂಬಲ್ಲಿ ಶಿವನಷ್ಟೆ ಸಮಾನ ಪ್ರಭಾವ ಉಳ್ಳದ್ದು ಮಾಯೆ ಎಂದರ್ಥ. ಮಾಯೆ ಸಕಲವನ್ನು ಆವರಿಸಿಕೊಂಡಿರುವ ಪ್ರಬಲ ಶಿವಾಂಶಿಕ ಶಕ್ತಿಯಾಗಿದೆ. ಶಿವಪಥವರಿದು ಲಿಂಗನಿಷ್ಠೆಯಿಂದ ಶಿವಯೋಗ ಸಾಧನೆ ಕೈಗೊಂಡಾಗ ಮಾಯಾ ಮುಕ್ತನಾಗಲು ಸಾಧ್ಯವಾಗುತ್ತದೆ.

"ಅಷ್ಟಭೋಗಂಗಳಶಕ್ತಿ ಕೆಟ್ಟಲ್ಲಿ ರೋಧಮಲ ನಷ್ಟ
ಕರ್ಮಸಾಮ್ಯವಗಿ ಶಕ್ತಿಪಾಶವಾದಲ್ಲಿಬಿಂದು ಮಲ ನಷ್ಟ
ಅಹಂಕಾರವಳಿದಕ್ಕಿ ಕರ್ಮಮಲ ನಷ್ಟ
ಕಾಯಭಾವವಳಿದಲ್ಲಿ ಮಾಯಾಮಲ ನಷ್ಟ
ಪರವಸ್ತುವಿನ ಕಳೆ ತನ್ನಲ್ಲಿ ಬೆಳಗಿದಲ್ಲಿ ಆಣವ ಮಲ ನಷ್ಟ
ಇಂತೀ ಪಂಚಮಲಂಗಳು ನಷ್ಟವಾದಲ್ಲಿ
ಸೌರಾಷ್ಟ್ರಸೋಮೇಶ್ವರ ಲಿಂಗ ಸಮ್ಯಕ್ ದೃಷ್ಟ"[೧೭]

ಶೈವ ಮತದಲ್ಲಿ ತ್ರಿವಿಧ ಮಲಗಳ ಬಗೆಗೆಮಾತಾಡಿದರೆ ಇಲ್ಲಿ ಪಂಚಮಲಗಳ ಕುರಿತು ಹೇಳುತ್ತಾನೆ. ರೋಧಮಲ, ಬಿಂದುಮಲ, ಕರ್ಮಮಲ, ಮಾಯಾಮಲ, ಆಣವ ಮಲ ಎಂಬ ಐದು ಮಲಗಳು ಮನುಜನನ್ನು ಆವರಿಸುತ್ತವೆ. ಮನುಜ ಭೋಗಾಸಕ್ತಿಯ ಆಕಾಂಕ್ಷೆಯಿಂದ ಬಿಡಿಸಿಕೊಂಡಾಗ ಕರ್ಮ ಅಹಂಕಾರ ಕಳೆಯುತ್ತದೆ. ಕಾಯದ ಮೇಲಿನ ಮೋಹ ದೂರವಾಗಿ ಪರವಸ್ತು ಸ್ವರೂಪಿ ಚೈತನ್ಯ ನೆಲೆಗೊಂಡಾಗ ಸರ್ವ ಮೋಹಗಳಿಂದ ದೂರವಾಗುತ್ತಾನೆ. ಜೀವ ನಿಶ್ಚಿಂತ, ನಿರ್ಭಾವನಾಗುತ್ತಾನೆ. ಅಂತರಂಗದಲ್ಲಿ ಪರಮಾತ್ಮ ಸಾಕ್ಷಾತ್ಕಾರಗೊಳ್ಳುತ್ತಾನೆ. ಪಂಚ ಮಲಗಳಲ್ಲಿ ಮಾಯೆ ಎಂಬುದು ಕಾಯಕ್ಕೆ ಸಂಬಂಧಿಸಿದ್ದು, ಕಾಯದ ಮೂಲಕ ಉಳಿದ ನಾಲ್ಕು ಮಲಗಳು ತಮ್ಮ ಅಸ್ತಿತ್ವ ತೋರುಲು ಸಾಧ್ಯ. ಕಾಯಕವೆಂಬ ಮೋಹ ಭಾವವೇ ಮಾಯೆ ಆಗಿದೆ. ಕಾಯದಲ್ಲಿ ಮನವೆಂಬ ಚಂಚಲರೂಪ ಮಾಯೆಯ ಕ್ರಿಯಾಸ್ವರೂಪವನ್ನು ತೋರುತ್ತದೆ. 'ಎಂತೆಂತು ನೋಡಿದಡಂತಂತು ತೋರ್ಪುದೆಲ್ಲಾ ಜಡದೃಶ್ಯ, ಇದೆಲ್ಲಾ ಮಾಯೆಯೆಂದು'. ಮಾಯೆ ಕಾಯವೆಂಬ ಜಡತ್ವದಮೂಲಕ ತೋರುತ್ತದೆ. ಕಾಯದ ಜೊತೆಗೆ ಕಣ್ಣಿಗೆ ಕಾಣುವ ಜಡವಾದುದು ಮಾಯೆ ಎಂದು ಹೇಳುತ್ತಾರೆ.

೪.೪ ಅಂಬಿಗರ ಚೌಡಯ್ಯ: ಮಾಯೆ ಅಂಬಿಗರ ಚೌಡಯ್ಯನು ಲಿಂಗವನ್ನು ಬಿಟ್ಟು ಅನ್ಯ ದೈವಗಳನ್ನು ಪೂಜಿಸುವವರ ಕುರಿತು ಹೇಳುವಾಗ ಮಾಯೆ ಪ್ರಸ್ತಾಪ ಬರುತ್ತದೆ. ಬ್ರಹ್ಮ- ವಿಷ್ಣು- ಮಹೇಶ್ವರರ ಹುಟ್ಟಿನ ಕುರಿತು ಹೇಳುತ್ತಾ, ಮನುಜ ಹಲವು ದೇವರನ್ನು ಪೂಜಿಸುವುದಕ್ಕಿಂತ ಲಿಂಗ ಪೂಜೆ ಶ್ರೇಷ್ಠ ಎಂಬರ್ಥದಲ್ಲಿ ಹೇಳುತ್ತಾನೆ.

"ಮಾಯೆಯ ಬಸುರಲ್ಲಿ ಬಂದಾತ ಮಹೇಶ
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ
ಮರುತ ದೇವಿಯ ಬಸುರಲ್ಲಿ ಬಂದಾತ ಮಾರುತಿ
ಇವರ ದೇವರೆಂದುನಂಬಿ ಪೂಜಿಸಿದಡೆಭವ ಅಳಿಯದು
ಮುಕ್ತಿಯಾಗದೆಂದಾತನಂಬಿಗರಚೌಡಯ್ಯ"[೧೮]

ಹಲವು ದೇವರನ್ನು ಪೂಜಿಸುವವರನ್ನು ವಿಮರ್ಶಿಸುವಾಗ ಮಾಯೆ ಕುರಿತು ಹೇಳಿದ್ದಾನೆ. ಜಗತ್ತಿನ ಸೃಷ್ಠಿ, ಸ್ಥಿತಿ, ಲಯಕರ್ತರಾದ ಬ್ರಹ್ಮ, ವಿಷ್ಣು, ಮಹೇಶ್ವರರು ನಮ್ಮಂತೆ ಜನ್ಮ ಪಡೆದವರು ದೇವರಲ್ಲಿ ಸರ್ವಶ್ರೇಷ್ಠನೆನಿಸಿಕೊಂಡ ಪರಮಾತ್ಮ ಸ್ವರೂಪಿ ಮಹೇಶ್ವರ ಮಾಯೆ ಎಂಬ ಶಕ್ತಿಯ ಬಸಿರಲ್ಲಿ ಬಂದವನು. ಮಹೇಶ್ವರನನ್ನು ಪೂಜಿವುದೆಂದರೆ ಮಾಯೆಯ ಮೊರೆ ಹೊದಂತಾಗುತ್ತದೆ. ಮಾಯೆಯ ಪ್ರಭಾವದಿಂದ ಭವದಿಂದ ಜೀವ ಬಿಡಿಸಿಕೊಳ್ಳಲು ಅಸಾಧ್ಯ. ಇಲ್ಲಿ ಮಾಯೆ ದೇವಾನುದೇವತೆಗಳಿಗಿಂತ ಪ್ರಬಲವಾದುದು ಎಂಬರ್ಥದಲ್ಲಿದೆ ಹಾಗೂ ಸಕಲಕೂ ಮೂಲ. ಈ ಮಾಯೆ ತಪಸ್ವಿಗಳನ್ನು ಬಿಡದು ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾನೆ.

"ಅಡವಿಯ ಹೋಗಿಸಿತ್ತು, ಹುಡಕ ನೀರಲದ್ದಿತ್ತು
ಜಡೆಗಟ್ಟಿ ಭಸ್ಮವ ತೊಡಿಸಿತ್ತು ಎಡೆವುಚ್ಚುಗೊಳಿಸಿತ್ತು
ಹಿಡಿದೊತ್ತಿ ಕೇಶವ ಕೀಳಿಸಿತ್ತು ಪಡಿಪುಚ್ಚಗೊಳಿಸಿತ್ತು
ಊರೊಳಗೆಲ್ಲ ಈ ಬೆಡಗಿನ ಮಾಯೆಯ
ಬಡಿಹಾರಿ ಸಮಯಿಗಳನಡಿಗೆ
ನಾಚುವೆಂದನಂಬಿಗರ ಚೌಡಯ್ಯ"[೧೯]

ಸನ್ಯಾಸತ್ವ ಸ್ವೀಕರಿಸಿದವರ ಕುರಿತು ಈ ಮಾತುಗಳದ್ದು ಭಕ್ತಿಯ ನಿಜ ಸ್ವರೂಪ ಹೇಗಿರಬೇಕೆಂಬ ವಿವರಣೆ ಇದೆ. ನಿಜವಾದ ಭಕ್ತಿ ಆಚರಣೆ ಕೈಗೊಳ್ಳಬೇಕಾದರೆ ಕಾಡಿಗೆ ಹೋಗಬೇಕಿಲ್ಲ, ತಣ್ಣೀರ ಸ್ನಾನ ಮಾಡಬೇಕಿಲ್ಲ, ಮೈಗೆಲ್ಲ ಭಸ್ಮವ ಪೂಸಬೇಕಿಲ್ಲ, ಕೇಶವನ್ನು ಕೀಳಿಸಬೇಕಿಲ್ಲ, ಕಾಯದಿಂದ ಭಕ್ತಿ ಮಾಡುವ ಅಗತ್ಯವಿಲ್ಲ ಆದರೆ ಕಾಯವನ್ನು ಪರಮಾತ್ಮ ಚಿಂತನೆಯಲ್ಲಿ ತೊಡಗುವಂತೆ ಮಾಡಬೇಕು. ತೋರಿಕೆಯ ಆಚರಣೆ ನಿಜಭಕ್ತಿ ಎನಿಸಲಾರದು. ನಿರ್ಮಲ ಚಿತ್ತನಾಗಿ ಮನದಲ್ಲಿ ಧ್ಯಾನಿಸಿದರೆ ಸಾಕು ಪರಮಾತ್ಮ ಅಂತರಂಗ ಸಾಕ್ಷಾತ್ಕಾರಗೊಳ್ಳುವನು. ಭಕ್ತ ಮತ್ತು ಭಕ್ತಿಯ ಕುರಿತು ಹೇಳುವಲ್ಲಿ 'ಮರ್ಮವನರಿತು ಮಾಡದ ಭಕ್ತಿ ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯ ಸೌರಾಷ್ಟ್ರ ಸೋಮೇಶ್ವರ' ಎಂಬ ಮಾತು ಪೂರಕವಾಗಿದೆ. ಮಾಯೆ ಎಂಬುದು ತೋರಿಕೆಯ ಭಕ್ತಿಯನ್ನು ಮೂಡಿಸುವ ಕಾರ್ಯ ಮಾಡುತ್ತದೆ. ಸಂಸಾರಿಯನ್ನು ಸಂನ್ಯಾಸಿಯಾಗುವಂತೆ ಪ್ರೇರೆಪಿಸುತ್ತದೆ.

೪.೫ ಅರಿವಿನ ಮಾರಿತಂದೆಗಳು: ಮಾಯೆ ಶರಣರಲ್ಲೊಬ್ಬರಾದ ಅರಿವಿನ ಮಾರಿತಂದೆಗಳ ವಚನದಲ್ಲಿ ಮಾಯೆ ಈ ರೀತಿ ಪ್ರಸ್ತಾಪಗೊಂಡಿದೆ. 'ಶೈವವಾದ, ತತ್ವವಾದ, ಮಾಯಾವಾದ ಇಂತೀವಾದಗಳಲ್ಲಿ ಹೋಗುವಾಗ ವೇದ ಹೇಳುತ್ತದೆ ಓಂ ಎಂಬಲ್ಲಿ ಎರಡಳಿದು ಒಂದೇ ಉಳಿಯಿತ್ತು ಎಂಬಲ್ಲಿ ಕಾಲಕ್ಕನುಗುಣವಾಗಿ ವೇದಶಾಸ್ತ್ರಗಳು, ಆಗಮಗಳು ರೂಪಗೊಂಡವು. ಮನುಜನಿಂದ ರೂಪಗೊಂಡ ಇವು ಮನುಜ ಬದುಕಿಗೆ ಮಾರ್ಗದರ್ಶಿಯಾದವು. ಇದೇ

ದಾರಿಯಲ್ಲಿ ಅನೇಕ ವಾದಗಳು ಎಡೆ ಪಡೆದವು. ಎರಡಳಿದು ಒಂದೇ ಉಳಿಯುವ ಪರಿ ಭಗವಂತ–ಭಕ್ತನ ಐಕ್ಯತೆಯನ್ನು ಸೂಚಿಸುತ್ತದೆ. ಧರ್ಮದ ತಾತ್ವಿಕ ಕೃತಿಗಳು ವಾದಗಳು ಬೇರೆ ಬೇರೆ ಸ್ತರದಲ್ಲಿ ರೂಪಗೊಂಡರೂ ಒಳ ತಿರುಳು ಮಾತ್ರ ಒಂದೇ ಆಗಿರುತ್ತದೆ. ಅದನರಿಯದ ಜ್ಞಾನಿಗಳು, ವಿದ್ವಾಂಸರು ಎನಿಸಿಕೊಂಡವರು ಹಲವು ಚರ್ಚೆಗಳನ್ನು ಹುಟ್ಟುಹಾಕಿ ಹಲವು ನೆಲೆಯಲ್ಲಿ ದೇವರ ಜಿಜ್ಞಾಸೆ ಕೈಗೊಳ್ಳುತ್ತಾರೆ ನಿಜಭಕ್ತಿ ಆಂತರ್ಯದಲ್ಲಿ ನಡೆಯಬೇಕಾದದ್ದೇ ಹೊರತು ಬಹಿರಂಗದಲ್ಲಿ ಅಲ್ಲ ಎಂಬುದನ್ನು ಹೇಳುತ್ತಲೇ ನಾ–ನೀ ಎಂಬ ಸಂದೇಹವಳಿಯಬೇಕು ಒಂದರಳಗೊಂದು ಐಕ್ಯವಾಗಬೇಕು.

"ಐದು ಬಹಲ್ಲಿ ಒಂದಾಗಿ ಬಂದ ಮಾಯೆ
ಮೂರು ಬಹಾಗ ಮುಂದೆ ಬಂದ ಮಾಯೆಯ
ಆರೂ ಹಿಂಗಬಾರದು
ಒಂದು ಎಂಬನ್ನಕ್ಕ ಸಂದೇಹವ ಮಾಯೆ ಕೊಂದು
ಕೂಗುತ್ತಿದೆ
ಇನ್ನೆಂದಿಗೆ ನೀನಳಿವೆ? ಇನ್ನೆಂದಿಗೆ ನಾನುಳಿವೆ?
ಎಂಬ ಸಂದೇಹ ಸದಾಶಿವಲಿಂಗದಲ್ಲಿಯೆ ಅಳಿಯತ್ತು"[೨೦]

ಕಾಯವನ್ನು ಆವರಿಸಿದ ಪಂಚೇದ್ರಿಯಗಳ ಅಭಿವ್ಯಕ್ತ ರೂಪವಾಗಿ ಮಾಯೆ ಇದೆ. ತ್ರಿವಿಧ ಮಲಗಳು ಸ್ಥೂಲ ಸೂಕ್ಷ್ಮ, ಕಾರಣಗಳನ್ನು ಆವರಿಸುವಾಗ ಮಾಯೆಯನ್ನು ಹಿಂಗಲು ಸಾಧ್ಯವಿಲ್ಲ. ವಾಸ್ತವದಲ್ಲಿ ಹಲವನ್ನು ಓದಾಗಿ ಒಂದನ್ನು ಹಲವಾಗಿ ತೋರುವಲ್ಲಿ ದ್ವಂದ್ವ ಭಾವವನ್ನು ಮಾಯೆ ಮೂಡಿಸುತ್ತದೆ. ಇಂತಹ ಮಾಯೆಯನ್ನು ಎಂದು ಅಳಿಯುವೆ ಎಂದು ನೇರವಾಗಿ ಪ್ರಶ್ನಿಸುತ್ತಾನೆ. ಅಂತರಂಗದಲ್ಲಿ ಸದಾಶಿವ ಸ್ವರೂಪಿ ಲಿಂಗ ಸಾಕ್ಷಾತ್ಕಾರದಿಂದ ತನ್ನಲ್ಲಿ ಈ ಸಂದೇಹ ಅಳಿದು ನಿಶ್ಚಿಂತನಾದೆ ಎನ್ನುತ್ತಾನೆ. ಮಾಯೆ ಎಂಬುದು ಸಂದೇಹ ಹಾಗೂ ದ್ವಂದ್ವ ಭಾವ ಮೂಡುವಂತೆ ಮಾಡುತ್ತದೆ. ಭಕ್ತಿ ಮಾಡುವ ಶರಣ ಸಂದೇಹಕ್ಕೊಳಗಾದಾಗ ಲೌಕಿಕವನ್ನು ತ್ಯಜಿಸುವಲ್ಲಿ ಸೋಲುತ್ತಾನೆ..

೪.೬ ಚಂದಿಮರಸ: ಮಾಯೆ ಚಂದಿಮರಸ ಮಾಯೆಯ ಕುರಿತು ತಮ್ಮದೇ ಚರ್ಚೆಕೈಗೊಂಡಿದ್ದಾನೆ. ಮಾಯೆ ಎಂಬುದರ ಸ್ವರೂಪವನ್ನು

" ನೋಡಿದಡೆ ಕಾಣಬಾರದು
ನೊಡದಿರ್ದಡೆ ಕಾಣಬಹುದು ಇದು ಸೋಜಿಗ
ಸತ್‌ಅಲ್ಲ ಅಸತ್ ಅಲ್ಲ; ಅದುತಾನೆ ಮಾಯೆ ಹುಸಿ"[೨೧]

ಮಾಯೆ ಎಂಬುದು ಇದ್ದರೂ ಇಲ್ಲದಿಂತಿರುವ, ಇಲ್ಲದಿದ್ದರೂ ಇರುವಂತಹ ಸ್ಥಿತಿಯಾಗಿದ್ದು, ಮನುಜನನ್ನು ಸೋಜಿಗಕ್ಕೆ ಒಳಗಾಗಿಸುತ್ತದೆ. ಮನುಜನಿಗೆ ಅನುಭವಕ್ಕೆ

ಬರುವುದಾಗಿದೆ. ಹುಸಿ ಸ್ವರೂಪದಲ್ಲಿ ಮಾಯೆ ಇದೆ ಎಂದಿದ್ದಾನೆ. ಮಾಯೆ ಕುತೂಹಲ ಸ್ವರೂಪದ್ದಾಗಿದೆ, ಆದರೆ ಸತ್ಯವಾದುದಲ್ಲ ಹುಸಿಯಾದದು.

"ವಿಧಿ ನಿಷೇಧ, ಜನನಿ, ಜನಕ, ಕುಲಗೋತ್ರ
ಜಾತಿ ಭೇದಾಭೇದ ಸ್ವರ್ಗ ನರಕಾದಿ ಭಯವೇನೂ ಇಲ್ಲ
ಜಗವೇನೂ ಇಲ್ಲ.............
ಅದು ತಾನೆ ತನ್ನಿಂದನ್ಯವಿಲ್ಲ
ತೋರುವ ತೋರಿಕೆಯಲ್ಲ ಮಾಯೆಯೆಂದರಿದು
ಜ್ಞಾನಾನಂದ ಪರಿಪೂರ್ಣತಾನೆಂರಿದು
ನೀನಾಗಿ ನಿಂದ ನಿಜಗುಣ ನೀನೆ
ಸಿಮ್ಮಲಿಗೆಯ ಚೆನ್ನರಾಮ"[೨೨]

ಮನುಷ್ಯ ಈ ಜಗದಲ್ಲಿ ಹುಟ್ಟಿ ಸಾಮಾಜಿಕ ಬದುಕನ್ನು ರಚಿಸಿಕೊಳ್ಳುವಾಗ ವಿಧಿ, ನಿಷೇಧ, ಜನನಿ, ಜನಕ, ಕುಲಗೋತ್ರ ಇತ್ಯಾದಿ ಅಸ್ತಿತ್ವಕ್ಕೆ ಬಂದವು. ಅವೆಲ್ಲವೂ ಮಾಯೆಯ ಅಭಿವ್ಯಕ್ತಿಯಿಂದ ಆವಿರ್ಭವಿಸಿ ಪರಮಾತ್ಮನಲ್ಲಿಯೇ ಲೀನವಾಗುವ ವಿಶಿಷ್ಟ ಶಕ್ತಿಗಳಾಗಿವೆ. ಮನುಜ ಮಾತ್ರ ತಾನು ಬೇರೆ ಭಗವಂತ ಬೇರೆ ಎಂಬ ನಂಬಿಕೆಯನ್ನು ಹೊಂದಿದ್ದಾನೆ. ಭಗವಂತನ ಪೂಜೆಗೆ ಆರಾಧನೆಗೆ ಆಚರಣೆ, ಸಂಪ್ರದಾಯ, ವಿಧಿ-ವಿಧಾನಗಳನ್ನು ಅನುಸರಿಸುತ್ತಾನೆ. ವಾಸ್ತವದಲ್ಲಿ ಇವೆಲ್ಲವೂ ನಿಜಭಕ್ತಿಯಾಗುವುದಿಲ್ಲ. ನಿಜ ಭಕ್ತಿಯಿಲ್ಲದೇ ನಿಜ ಜ್ಞಾನವಿಲ್ಲ, ನಿಜ ಕುರುಹಿಲ್ಲ ಎಂಬಲ್ಲಿ ಮಾಯೆಯನ್ನು ಕಾರಣವಾಗಿಸಿಕೊಂಡ ಪರಮಾತ್ಮ ಜೀವನನ್ನು ಆವರಿಸುವಂತೆ ಮಾಡುವನು.

ಪರಮಾತ್ಮ ಜೀವನನ್ನು ಸಂಸಾರದ ಮೂಲಕ ಆವರಿಸುವಂತೆ ಮಾಡುತ್ತಾನೆ. ಆತ್ಮಜ್ಞಾನದಿಂದ ಅನಂತ ಸುಖ ದೊರೆಯುತ್ತದೆ ಎಂಬ ಸತ್ಯವನ್ನು ಅರಿತ ಜೀವನಿಗೆ ಭವದ ಹಂಗು ಇರದು. ಭವಕ್ಕೆ ಬಂದ ಜೀವ ಕಾಯದ ಮೂಲಕ ಇಷ್ಟ ಕರ್ಮಗಳನ್ನು ಅನುಭವಿಸಲೇಬೇಕು. ಹಾಗೆಂದ ಮಾತ್ರಕ್ಕೆ ಲೌಕಿಕವನ್ನೆ ಸರ್ವಸ್ವವಾಗಿಸಿಕೊಂಡು ನಿಜ ಕುರುಹನ್ನು ಮರೆಯಬಾರದು. ಪರಮಾತ್ಮನೊಡ್ಡಿದ ಈ ಲೌಕಿಕವನ್ನು ಒಪ್ಪಿ ಒಪ್ಪದಂತೆ, ಅಪ್ಪಿಯೂ ಅಪ್ಪದಂತೆ ಇದ್ದು ನಿಜಾತ್ಮದ ಕುರುಹನ್ನು ಜೀವ ಅರಿತರೆ ಸಾಕು ಅಂತರಂಗದಲ್ಲಿ ಚಿದಾನಂದವನ್ನು ಹೊಂದಿದಂತಾಗುತ್ತದೆ. ವೇದ-ಜ್ಞಾನ ಪಾರಂಗತನಾಗಿ ಮಾಯೆಯನ್ನು ಅರಿಯಬಲ್ಲೆನೆಂದು ಭಾವಿಸುವ ವ್ಯಕ್ತಿಗಳನ್ನು ಕುರಿತು,

"ಹಿರಿದಪ್ಪ ಮಾಯೆಯನೆಂತು ಕೆಡಿಸುವನೆಂದು

ಬೆಂಬೀಳದಿರು ಮರುಳೆ
ಮಾಯೆ ದಿಟಕ್ಕಿಲ್ಲ ಇಲ್ಲದುದನೆಂತು ಕೆಡಿಸುವಿರೋ
ತನ್ನನರಿದಡೆ ಸಾಕು
ಅರಿದೆನರಿಯೆನೆಂಬುದು ಮಾಯೆ
ಈ ಮಾಯೆ ನಿನಗಿಲ್ಲ ಚಿನ್ಮಯನೀನೇ"[೨೩]

ಶಿವಾಂಶಿಕವಾದ ಮಾಯೆ ಪ್ರಬಲವಾದದ್ದು ಮತ್ತು ಪ್ರಭಾವಶಾಲಿಯಾದದ್ದು. ಅಂತಹ ಮಾಯೆ ಯನ್ನು ಎದುರಿಸುವೆನೆಂಬುದು ಅಥವಾ ಗೆಲ್ಲುವೆನೆಂಬುದು ಮೂರ್ಖತನ. ವಾಸ್ತವದಲ್ಲಿ ಮಾಯೆಗೆ ಸ್ವಂತ ಅಸ್ತಿತ್ವವಿಲ್ಲವೆಂದ ಮೇಲೆ ಮಾಯೆಯನ್ನು ಇಲ್ಲವಾಗಿಸಲು ಆಗದು ಎಂದರ್ಥ. ಮಾಯೆಯನ್ನು ಅರಿಯುವ ಪ್ರಯತ್ನವ ಕೈಬಿಟ್ಟು ಜೀವ ತನ್ನ ತಾನರಿಯಬೇಕು. ಯತಿಗಳ ವೃತಿಗಳ ಧೃತಿಗೆಡಿಸಬಲ್ಲ ಹಾಗೂ ಕಲಿಗಳ, ಛಲಿಗಳ ಬಲುಹ ಮುರಿಯಬಲ್ಲ ಸಾಮರ್ಥ್ಯವುಳ್ಳದ್ದು ಮಾಯೆ ಎಂಬ ಅರಿವು ಬಂದಾಗ ಪರಮಾತ್ಮ ಅಂತಹ ಮಾಯೆಗೆ ಹೊರಗು. ಮನುಜನನ್ನಷ್ಟೇ ಅಲ್ಲದೆ ಸಕಲ ಲೋಕ ವ್ಯಾಪಾರವನ್ನು ಆವರಿಸಿರುವಂತಹ ಸಕಲ ಮಾಯೆ ಹುಸಿಯೆಂದು ತೋರುತ್ತದೆ. ಪರಮಾತ್ಮನ ಸಾಕ್ಷಾತ್ಕಾರದ ಅನುಭವವಾದಾಗ ಲೌಕಿಕ ಸೆಳೆತ ಬಿಟ್ಟು ಹೋಗುತ್ತದೆ ಎಂಬುದನ್ನು ಹೀಗೆ ಹೇಳಿದ್ದಾರೆ.

"ಸಂಕಲ್ಪವೆಂಬ ಸಂಕಲೆ ಹರಿಯಿತಣ್ಣ
ಕಾಮವೆಂಬ ಕಂಭವಕೀತ್ತಾಡಿತ್ತಲ್ಲಾ
ಮಯೆವೆಂಬ ಮಾವತಿಗನ ಮೀರಿತ್ತು
ಆಸೆಯೆಂಬ ಅಂಕುಶಕು ನಿಲ್ಲದು
ಮಾಯಾಪಾಶವೆಂಬ ಪಾಯದಳ ಅಂಜಿ ಓಡಿತ್ತು
....
ಸಿಮ್ಮಲಿಗೆಯ ಚೆನ್ನರಮನೆಂಬ ಲಿಂಗದಲ್ಲಿ"[೨೪]

ಲೌಕಿಕ ಬದುಕಿನ ಸಂಸಾರಿಯಾಗಿ ಬದುಕುವ ಮನುಷ್ಯ ಆಸೆ ಆಕಾಂಕ್ಷೆ ಒಳಗಾಗುವುದು ಸಹಜ. ಆಸೆಯ ಪಾಶದಿಂದ ಮುಕ್ತವಾಗಲು ಮಾಯಾ ಪಾಶದ ಹಿಡಿತದಿಂದ ತಪ್ಪಿಸಿಕೊಳ್ಳುವ ನಿರ್ಮಲ ಭಕ್ತಿಯೇ ಸಾಧನವಾಗಿದೆ. 'ಹೆರುವ ಮುನ್ನವೆ ಹುಟ್ಟಿ ಹುಟ್ಟುವ ಮುನ್ನವೆ ಸತ್ತ' ಸ್ವರೂಪ ಈ ಮಾಯೆದ್ದು ಎಂದಿದ್ದಾರೆ. ಹಾವಾಡಿಗನ ಕೈಯಲ್ಲಿನ ಹಾವಿನಂತೆ ಮಾಯೆ ಜೀವನ ಜೊತೆ ಸಹಜವಾಗಿ ಬದುಕುವಂತಹದಾಗಿದೆ. ಹಾವಿನ ಬಗ್ಗೆ ಹಾವಾಡಿಗಳಿಗೆ ಭಯಗಳಿರುವುದಿಲ್ಲ ಅದೇ ರೀತಿ ಮನುಜನಿಗೆ ಮಾಯೆಯ ಬಗ್ಗೆ ಭಯವಿರದು. ಜೀವನ ಪರಮಾರ್ಥ ಸಾಧನೆಗೆ ಮಾಯೆಯ ತನ್ನಿರುವನ್ನು ಗುರುತಿಸಿಕೊಳ್ಳುವ ಅಗತ್ಯ ಜೀವನಿಗಿದೆ. ಚಂದಿಮರಸನು ವಚನಗಳಲ್ಲಿ ಮಾಯೆ ಹುಸಿ

ಯಾದದ್ದು ಅಸ್ತಿತ್ವ ರಹಿತವಾದದ್ದು ಎಂದಿದ್ದಾನೆ.

೪.೭ ಮೋಳಿಗೆ ಮಾರಯ್ಯ: ಮಾಯೆ ಮೋಳಿಗೆ ಮಾರಯ್ಯ ಪರಶಿವನ-ಭಕ್ತನ ಸ್ವರೂಪವನ್ನು ಹೇಳುತ್ತಾ ಮಾಯೆಯ ವಿವರಣೆ ನೀಡಿದ್ದಾನೆ. ಕಾಯವನ್ನು ತೊಗಲಿನ ಚೀಲವೆಂದು ಕರೆಯುವುದೇ ಇಲ್ಲಿ ವಿಶೇಷವಾಗಿದೆ.

"ತೊಗಲ ಚೀಲದಲ್ಲಿ ಪರಶಿವನಿದ್ದಾನೆಂದು
ಪೊಡವಿಯ ಮೃಢಭಕ್ತರೆಲ್ಲ ನುಡಿವುತಿಪ್ಪರು
....
ಅರಿವಡೆ ತೆರಹಿಲ್ಲ ಕುರುಹಿಡಿವುದಕ್ಕೆ ನೆರೆ ನಾಮವಿಲ್ಲ
ಅರಿದಡೆ ತಾನೆ ಮರೆದಡೆ ಮಾಯೆ
ಇದಕ್ಕೆ ಬಿಡುಗಡೆಯಿಲ್ಲ"[೨೫]

ಕಾಯದಲ್ಲಿ ಶಿವನಿದ್ದಾನೆಂಬುದು ದೇಹವೆ ದೇಗುಲವೆಂಬ ಭಾವವನ್ನು ಸೂಚಿಸುತ್ತದೆ. ಕಾಯದಲ್ಲಿ ಶಿವನಿರುವನೆಂಬುದನ್ನು ಲೋಕ ಹೇಳುತ್ತದೆ ವಚನಕಾರ ತಾನೊಪ್ಪುವುದಿಲ್ಲ. ಕಾಯ ಹಲವು ಕಲ್ಮಶಗಳ ಆಗರವಾಗಿದೆ. ನಿರ್ಮಲವಲ್ಲದ ದೇಹದಲ್ಲಿ ಶಿವನೆಂಬ ನಾಮರೂಪವಿರಲು ಸಾಧ್ಯವಿಲ್ಲ. ದೇಹದಲ್ಲಿ ದೇವನಿರುವನೆಂಬ ಭಕ್ತರ ಮಾತು ಕೇವಲ ಮಾತಾಗುತ್ತದೆ. ಪರಮಾತ್ಮನ ಕುರುಹನ್ನು ಅರಿತಾಗ ತಾನು ಏನು ಎಂಬ ಅರಿವು ಮೂಡುತ್ತದೆ. ಮರೆತಾಗ ಮಾಯೆ ಆವರಿಸಿ ತಾನು ಏನೆಂಬ ಕುರುಹನ್ನು ಮರೆಸುತ್ತದೆ. ಮಾಯೆ ಜೀವನನ್ನು ಆವರಿಸಿದಾಗ ಆಗುವ ಪರಿಣಾಮವನ್ನು ಈ ಕೆಳಗಿನ ವಚನದಲ್ಲಿ ಹೇಳಿದ್ದಾನೆ.

"ಮಾಯೆ ತನ್ಮಯವೆಂಬ ಭವಜನ್ಮದಲ್ಲಿ ಬಂದು
ಗೋರಸವನೆ ಉಂಡು ನಾಚದೇಕೆ ಮನ? ಹೇಸದೇಕೆ ಮನ?
ತಿತ್ತಿಯ ಹಿಡಿದ ಮಾದಿಗನಿಗೆ
ಹೊತ್ತಿದ ಮೂಗಿನ ನಾತ ನಿಶ್ಚಯವುಂಟೆ ಇತ್ತಣವರಿಗಲ್ಲದೇ?
ಕಚ್ಚಿದವನಿಗೆ ಸುಖ ಸಂಸಾರವೆಂಬಡಗು ಮಾಯೆ
ಮತ್ತತನದಿಂದ ಕೊಂದಿತ್ತು ನಿಃಕಳಂಕ ಮಲ್ಲಿಕಾರ್ಜುನಾ"[೨೬]

ಮಾಯೆ ಕಾಯದ ಮೂಲಕ ಭವಕ್ಕೆ ಬಂದು ಇನ್ನಿಲ್ಲದಂತೆ ಜೀವನನ್ನು ನಿಯಂತ್ರಿಸುತ್ತದೆ. ಮಾಯೆ ಬಿಡದು ಎಂಬ ಅರಿವಿದ್ದು ಅದನ್ನು ಬಿಡದೇ ಭಾವಿಸುವ ಓಲೈಸುವ ಜನವನ್ನು ಪರಿವರ್ತಿಸುವ ಪ್ರಯತ್ನವಿದೆ. ಸಂಸಾರದ ಸವಿ ಎಂಬ ನಿಲುವು ಮಾಯೆಯ ಕಾರಣದಿಂದಲೇ ಉಂಟಾಗುತ್ತದೆ. ಭವಕ್ಕೆ ಬಂದ ಮೇಲೆ ಮಾಯೆ ತಪ್ಪದು ಎಂದರಿದ ಪರಿಯನ್ನು ಹೊತ್ತಿದ ಮೂಗಿನ ನಾತ ನಿಶ್ವಯವುಂಟೆ ಎಂಬ ಮಾತಿಗೆ

ಶರಣ ಮಾರಯ್ಯನವರ ವಚನದಲ್ಲಿ ನೋಡಿದಾಗ ಮಾಯೆ ಜೀವನ ಹುಟ್ಟಿನಿಂದಲೇ ಆವರಿಸುವಂಥದ್ದು ಮಾಯೆ ಸಂಸಾರ ಎಂಬರ್ಥದಲ್ಲಿ ರೂಪ ಪಡೆದು ಭ್ರಮೆಯಾಗಿ, ಮತ್ತಾಗಿ (ನಶೆಯಾಗಿ) ಕ್ರಿಯಾಸ್ವರೂಪವನ್ನು ಪ್ರಸ್ತಾಪಿಸುತ್ತದೆ. ಪರಶಿವನು ಮಾತ್ರ ಇವೆಲ್ಲದರಿಂದ ಮುಕ್ತ ಎಂದು ಹೇಳುವಲ್ಲಿ ತ್ರಿವಿಧಮಲದ ಹಂಗಿನವನಲ್ಲ ಎಂದಿದ್ದಾನೆ.

೪.೮ ಡಕ್ಕೆಯ ಬೋಮ್ಮಣ್ಣ: ಮಾಯೆ ವಚನ ಪರಂಪರೆಯ ಭಾಗವಾಗಿ ಡಕ್ಕೆಯ ಬೋಮ್ಮಣ್ಣ ಕಾಣಿಸಿಕೊಳ್ಳುವನು. ಮಾಯೆ ಯಾರಿಗೂ ಅಂಜದ ಶಿವನಿಗೆ ಅಂಜುವುದು ಅಪ್ಪುಮಯವೂ ಅಲ್ಲದ ಅಸ್ತಿಮಯವೂ ಅಲ್ಲದ ಮಾಯೆಯ ಸ್ವರೂಪವನ್ನು ಉದಕದ ಬಹುವರ್ಣಕ್ಕೆ ಹೋಲಿಸಿದ್ದಾನೆ.

"ಅಪ್ಪುಮಯವೆಲ್ಲವೂ ಶಕ್ತಿ ರೂಪು
ಅಸ್ಥಿಮಯವೆಲ್ಲವೂ ವಸ್ತು ರೂಪು
....
ಉದಕದ ಬಹು ವರ್ಣದಂತೆ ಮಾರುತನ ಜೀವದಂತೆ
ಅನಲನ ಕಾಲು ನಾಲಗೆಯಂತೆ
ಹೆರೆ ಹಿಂಗದ ಮಾಯೆ ಭಾವಿಸಿದಲ್ಲಿಯೇ ನಿಂದಿತ್ತು"[೨೭]

ಅಪ್ಪು ಎಂಬುದು ಯೋಗದ ಭಾಷೆಯಲ್ಲಿ ಅಮೃತರಸ. ಅಮೃತರಸದಿಂದ ಮೂಡಿದ್ದೆಲ್ಲವೂ ಶಕ್ತಿ ಸ್ವರೂಪದದ್ದು. ಅಸ್ಥಿಯಿಂದ ಮಾಡಿದ್ದೆಲ್ಲವೂ ವಸ್ತುವಿನ ಸ್ವರೂಪದಲ್ಲಿದೆ. ಅಮೃತವೆಂಬ ರಸದಲ್ಲಿ ಅಸ್ಥಿ ಬಲಿತಾಗ ವಸ್ತುಭಾವವೆಲ್ಲವೂ ಕರಗಿಹೋಗುತ್ತವೆ. ಹೀಗೆ ಇರುವ, ಇಲ್ಲದಿರುವ ಭಾವವನ್ನು ಮೂಡಿಸುವುದೇ ಮಾಯೆ. ನೀರಿನಲ್ಲಿರುವ ಕಾಣದ ಹಲವು ಬಣ್ಣಗಳಂತೆ, ಗಾಳಿಯಲ್ಲಿ ಬೆರೆತಿರುವ ಜೀವ ಭಾವದಂತೆ, ಬೆಂಕಿಯ ಸರ್ವವ್ಯಾಪಕ ಗುಣದಂತೆ ಮಾಯೆ ಇದೆ ಜಗತ್ ಸೃಷ್ಟಿಯಲ್ಲಿ ಯಾವುದನ್ನು ಆಸಕ್ತಿಯಿಂದ ನೋಡುತ್ತೇವೆಯೋ ಅದೆಲ್ಲವೂ ಮಾಯೆಯೇ ಆಗಿದೆ. ಭಗವತ್ ಸ್ವರೂಪಿ ಲಿಂಗದಲ್ಲಿ ಮಾತ್ರ ಮಾಯೆ ಹಿಮ್ಮೆಟ್ಟಿ ಇಲ್ಲವಾಗುತ್ತದೆ. ಮನುಜನಲ್ಲಿ ಅಸ್ಥಿರತೆಯನ್ನುಂಟು ಮಾಡುವ ಸ್ಥಿತಿಯಾಗಿದೆ ಎಂದು ಹೇಳುತ್ತಲೇ, ಕಣ್ಣಿಗೆ ಕಾಣದ ಹಾಗೂ ಅನುಭವಕ್ಕೆ ಮಾತ್ರ ದಕ್ಕುವ ರೂಪದಲ್ಲಿ ಮಾಯೆ ಕಾಣುತ್ತದೆ ಎಂಬರ್ಥವಿದೆ. ಅವರವರ ಅಂಗದಲ್ಲಿ ಹಿಂಗದ ರೂಪಾಗಿ ಮಾಯೆ ಇದೆ. ಜೀವನು ಭಗವಂತನ ನಾಮಸ್ಮರಣೆ ಮಾಡಿದರೆ ಮಾಯೆ ದೂರವಾಗುತ್ತದೆ. ಇಲ್ಲಿ ಮಾಯೆ ಬಹುರೂಪಿಯಾಗಿ ತೋರುತ್ತದೆ. ಮಾಯೆ ಮನುಜನನ್ನು ಆವರಿಸುವ ರೀತಿಯನ್ನು

"ಅರಿವುಳ್ಳವಂಗೆ ಆರನರಿದಡೆನೆಂಬುದೆ ಮಾಯೆ

ಮೂರು ಮರೆದು ಬೇರೊಂದ ಕಂಡೆಹನೆಂಬುದೆ ಮಾಯೆ
ನುಡಿಯ ನುಡಿವವರಲ್ಲಿ ಎಡೆ ಮಾತಾಡಿ
ಬೇರೊಂದಡೆವುಂಟೆಂಬುದೆ ಮಾಯೆ”[೨೮]

ಮಾಯೆ ಅರಿವುಳ್ಳವರಲ್ಲಿ ಅರಿವಾಗಿ ನಿಲ್ಲುತ್ತದೆ. ಆರೆಂಬ ಅರಿಷಡ್ವರ್ಗಗಳ ಸಕಲ ಕಾರ್ಯ ಸ್ವರೂಪವನ್ನು ಬಲ್ಲವನು ನಾನು, ಗೆದ್ದವನು ನಾನು ಎಂಬ ಜ್ಞಾನಿಗಳನ್ನು ಅಹಂಕಾರ ರೂಪದಲ್ಲಿ ಮಾಯೆ ಕಾಡುತ್ತದೆ ಎಂಬರ್ಥ ಈ ವಚನದಲ್ಲಿದೆ. ಇಲ್ಲದ್ದನ್ನೆಲ್ಲ ಕಲ್ಪಿಸುವ, ಪರಿಭಾವಿಸುವ ಅರಿವಿನ ಕೊರತೆಯಿರುವುದೇ ಮಾಯೆ ಆಗಿದೆ. ಮಾಯೆ ಪ್ರಭಾವ ಡಕ್ಕೆಯ ಅರ್ಭಟದಂತೆ ಸಹಿಸಲಾಗದು. ಇದರಿಂದ ತನ್ನನ್ನು ಪಾರುಮಾಡು ಎಂದು ಪ್ರಾರ್ಥಿಸುತ್ತಾನೆ. (ಕತ್ತಲಲ್ಲಿರುವ ವಸ್ತುಗಳನ್ನು ವಿಭಜಿಸಿ ಹೆಸರಿಸಲಾಗದು) ಮಾಯೆ ಕೂಡ ಕತ್ತಲೆಯಲ್ಲಿರುವ ವಸ್ತುವಿನಂತೆ, ಕತ್ತಲು ಕಳೆದು ಬೆಳಕು ಮೂಡಿದರೆ ಮಾಯೆ ಕರಗಿಹೋಗುತ್ತದೆ. ವಸ್ತುಗಳನ್ನು ವಿಭಜಿಸಬಹುದು. ಇಲ್ಲಿ ಮಾಯೆ ಬಹುರೂಪಿಯಾಗಿ ತೋರುತ್ತದೆ. ಮಾಯೆ ಹೇಗೆಲ್ಲಾ ಇದೆ ಎಂಬುದನ್ನು ಅರ್ಥ ಮಾಡಿಸಿಕೊಂಡಿದ್ದರೂ ಅದರಿಂದ ಬಿಡಿಸಿಕೊಳ್ಳಲಾಗದು ಎಂಬ ಭಾವನೆ ಇದೆ. ಚಿತ್ತಶುದ್ಧ ವಿಲ್ಲದವರನ್ನು ಥಟ್ಟನೆ ಆವರಿಸುತ್ತದೆ ಎಂದಿದ್ದಾನೆ. ಶರಣನಾದವನನ್ನು ಮಾಯೆ ಕಾಡುವ ಬಗೆಯನ್ನು ಗುರು–ಲಿಂಗ–ಜಂಗಮವನ್ನು ಮರೆತು ಇನ್ನೇನನ್ನೋ ಪೂಜಿಸ ಹೊರಟ ಪ್ರಯತ್ನವೇ ಮಾಯೆ ಆಗಿದೆ. ಉತ್ತಮ ನುಡಿಯನ್ನಾಡುವವರ ಮಧ್ಯೆ ಸೇರಿಕೊಂಡು ತನ್ನದೇ ಆದ ಧಾಟಿಯಲ್ಲಿ ಮಾತನಾಡುವವರಲ್ಲಿ ಅವರ ಮಾತಿನ ರೀತಿಯೇ ಮಾಯೆ ಆಗಿ ನಿಲ್ಲುತ್ತದೆ. ಭಗವಂತನ ಸಾಕ್ಷಾತ್ಕಾರಕ್ಕಾಗಿ ಕಾದು ನಿಂತವನಿಗೆ ಮಾಯೆ ಕಾರಣಕ್ಕೆ ಒಳಗೆ ಪ್ರವೇಶ ಸಿಗುತ್ತಿಲ್ಲ ಎಂಬ ನೋವಿನಲ್ಲಿಯೇ ಲೋಕವೆಲ್ಲ ಮಾಯೆಗೆ ಒಳಗಾದ ಹಾಗೂ ತಾನೂ ಕೂಡಾ ಮಾಯೆಗೆ ಒಳಗಾದ ಸ್ಥಿತಿಯನ್ನು ಹೇಳಿಕೊಳ್ಳುತ್ತಲೇ ಅದರಿಂದ ಬಿಡಿಸಿಕೊಳ್ಳಬೇಕೆಂಬ ತವಕದಲ್ಲಿ ಪರಮಾತ್ಮನ್ನನು ಮೊರೆ ಹೋಗುತ್ತಾನೆ. ಮಾಯೆ ಎಂಬುದು ಶಿವಾಂಶಿಕ ಎಂಬುದು ಸತ್ಯ ಶಿವ ಮತ್ತು ಮಾಯೆ ಎರಡರ ನಡುವಿನ ಸಂಬಧವನ್ನು ಶಿವ ಜ್ಯೋತಿಯಾದರೆ ಮಾಯೆ ಜ್ಯೋತಿಯ ಕೆಳಗಿನ ಕತ್ತಲೆಯಂತೆ ಎಂಬ ಹೋಲಿಕೆಯ ಮೂಲಕ ವಚನದಲ್ಲಿ ಪ್ರಸ್ತಾಪಿಸಿದ್ದಾರೆ. ಈ ಮೂರು ಕತ್ತಲಿನಲ ರೂಪದ್ದಾಗಿದ್ದರೂ ಸೃಷ್ಟಿ, ಸ್ಥಿತಿ, ಲಯಕ್ಕೆ ಗೊತ್ತಾಗಿ ಅರಿಯದವರಿಗೆ ಅರಿದವರಿಗೆ ನಾನಾ ರೀತಿಯಲ್ಲಿ ಮಾಯೆ ಆವರಿಸುತ್ತದೆ. ಮನುಜನನ್ನು ಮಾತ್ರವಲ್ಲ ದೇವಾನು ದೇವತೆಗಳನ್ನು ಸ್ತ್ರೀ ರೂಪದಲ್ಲಿ ಮಾಯೆ ಕಾಡುತ್ತದೆ. ಎಳ್ಳಿನಲ್ಲಿರುವ ಎಣ್ಣೆಯಂತೆ, ಮುಳ್ಳಿನ ಮೊನೆಯಂತೆ, ಹೂವಿನ ಗಂಧದಂತೆ ಪರಮಾತ್ಮನ ಮಾಯೆಯ ಸಂಬಂಧವಿದೆ. ಜೀವನ ವ್ಯಕ್ತಿತ್ವಕ್ಕೆ ಅನುಗುಣವಾಗಿ ಹಿಂಗದ ರೂಪವಾಗಿ ಕಾಡುತ್ತದೆ.

ವಸ್ತುಮಯವಾದುದೆಲ್ಲವೂ ಮಾಯೆಯಿಂದ ಉದಿಸಿದುದು. ಆದ್ದರಿಂದಲೇ ಇಷ್ಟೊಂದು ವೈವಿಧ್ಯತೆ ಇದೆ. ಮಾಯೆ ಲೋಕದ ಸಕಲ ವ್ಯಾಪಾರದಲ್ಲಿ ರೂಪ ತಳೆದಿದೆ. ಅಷ್ಟೇ ಅಲ್ಲದೇ ಅವರವರಂಗದಲ್ಲಿ ಹಿಂಗದ ಪ್ರತಿರೂಪಾಗಿ ಸಂದಿಲ್ಲದೆ ಕಾಡುತ್ತಿದ್ದಾಳೆ. ದೇವರುಗಳನ್ನೆಲ್ಲ ಉಮಾ, ಲಕ್ಷ್ಮೀ, ಸರಸ್ವತಿಯಾಗಿ ಮಾಯೆ ಕಾಡಿದೆ. ಕಾಯದ ನೆರಳಿನಂತೆ ಬೆಂಬಿಡದೆ ಕಾಡುವಂಥದ್ದು ಮಾಯೆ ಎಂದಿದ್ದಾನೆ.

"ಭಕ್ತನಾಗಿದಲ್ಲಿ ಪೃಥ್ವಿಯಂಗವೇ ಮಾಯೆ

....

ಕಾಯದ ಭಾವವುಳ್ಳನ್ನಕ್ಕ ಮರವೆಯೆಂಬ

ಮಾರಿಯ ಹೊತ್ತು ತಿರುಗಾಡುತ್ತಿದ್ದೇನೆ"[೨೯]

ಶರಣತ್ವದ ಸಾಧನೆಯಲ್ಲಿ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಐಕ್ಯ ಎಂಬ ಹಂತಗಳಲ್ಲಿ ಮಾಯೆ ಹಲವು ರೂಪಾಗಿ-ರೀತಿಯಾಗಿ ಕಾಡುತ್ತದೆ. ಕಾಯದ ಭಾವ ಜೀವನಲ್ಲಿ ಇರುವ ತನಕ ಮಾಯೆ ಬಿಡದು. ಜೀವನಲ್ಲಿ ಮಾಯೆ ಮರವೆಯ ರೂಪದಲ್ಲಿ ಇದೆ.

೪.೯ ಉಪ್ಪಡಿಸುವ ಕಾಯಕದ ಗಬ್ಬಿದೇವಯ್ಯ: ಮಾಯೆ ಶರಣ ಸಮುದಾಯದಲ್ಲಿ ಉಪ್ಪಡಿಸುವ ಕಾಯಕದ ಗಬ್ಬಿದೇವಯ್ಯಗಳ ವಚನ ಮಾಯೆಯನ್ನು ಕುರಿತು ವಚನದಲ್ಲಿ ಚಿಂತಿಸಿದ್ದಾನೆ.

"ಜ್ಞಾನ ಬಾ, ಮಾಯೆ ಹೋಗೆಂದು ಕಳುಹುತ್ತಿದ್ದೇನೆ

ಅರಿವು ಬಾ, ಅಜ್ಞಾನ ಹೋಗೆಂದು ಕಳುಹುತ್ತಿದ್ದೇನೆ.

....

ನಿಃ ಪ್ರಪಂಚ ಬಾ ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ"[೩೦]

ಅರಿವು ಮತ್ತು ಜ್ಞಾನದ ಜಾಗದಲ್ಲಿ ಅಜ್ಞಾನ ಮತ್ತು ಮಾಯೆ ಇರುತ್ತದೆ. ಮಾಯೆ ಇರುವವರೆಗೆ ಜ್ಞಾನ ಜೀವನಲ್ಲಿ ನೆಲಸಲು ಸಾಧ್ಯವಿಲ್ಲ. ಸಕಲವೂ ಹೋಗಿ ನಿಃಕಲವು ನೆಲೆಸಲಿ ಎಂಬಲ್ಲಿ ಮಾಯೆ ಅಳಿದು ಜ್ಞಾನ ನೆಲೆಸಿದಾಗ ಲೌಕಿಕ ಸೆಲೆತವೂ ಹೋಗಿ ನಿರ್ವಯಲಿನ ಸ್ಥಿತಿ ಮೂಡುತ್ತದೆ. ಪ್ರಪಂಚ ಕಳೆದು ಶೂನ್ಯ ಸ್ಥಿತಿ ನೆಲೆಗೊಳ್ಳುತ್ತದೆ. ಜೀವನು ನಿರ್ವಯಲಿನಲ್ಲಿ ನಿಂದು ಶೂನ್ಯತ್ವ ಸಾಧಿಸಬೇಕಾದರೆ ಮಾಯಾಮುಕ್ತನಾಗಿರ ಬೇಕು. ಇಲ್ಲಿ ಮಾಯೆ ಎಂಬುದು ಜ್ಞಾನದ ವಿರೋಧಿ ನೆಲೆಯಲ್ಲಿ ನಿಂತಿದೆ. ಜ್ಞಾನವಿದ್ದಲ್ಲಿ ಮಾಯೆ ಇರದು ಎಂದಾಗುತ್ತದೆ.

೪.೧೦ ದಾಸೋಹ ಸಂಗಣ್ಣ: ಮಾಯೆ ಮಾಯಾಗುಣ ಮಲತ್ರಯ ರೂಪಾಗಿ ಒಡಲಲ್ಲಿ

ಎಡೆಮಾಡಿಕೊಳ್ಳುವುದು ಮಾಯೆ ಎಂಬುದನ್ನು ಹೀಗೆ ಹೇಳಿದ್ದಾನೆ.

"ಈ ಸಂಸರ್ಗದಲ್ಲಿ ಹುಟ್ಟಿದ ಶಿಶುವೆಂದು
ಮಾಯಾ ಮೋಹದಿಂದ ಲಾಲಿಸಿ
ಸಕಲ ಸುಖಭೋಗಗಳಲ್ಲಿ ಪಾಲಿಸಿ
ವಸ್ತು ವಸ್ತ್ರ ಮುಂತಾದ ರತ್ನ ಮೌಕ್ತಿಕಂಗಳ ಗಳಿಸಿ
.........................ಮಾತುಳಂಗ ಮಧುಕೇಶ್ವರ" [೩೧]

ಲೌಕಿಕದಲ್ಲಿ ಹುಟ್ಟಿದ ಜೀವವನ್ನು ಪೋಷಿಸುವ ರೀತಿ ಚಿತ್ರಣಗೊಂಡಿದೆ. ಮೋಹವೇ ಮಾಯೆಯಾಗಿದೆ. ನಾನು, ನನ್ನದು, ನಮ್ಮದು ಎಂಬ ಭಾವವು ಮಾಯೆಯ ಕಾರಣಕ್ಕೆ ಮೂಡಿದೆ. ಲೌಕಿಕ ಜೀವಿಗಿಂತ ಆಧ್ಯಾತ್ಮಿಕ ಜೀವಿ ವಿಶಿಷ್ಟನಾಗುತ್ತಾನೆ. ಜೀವನನ್ನು ಲೌಕಿಕದಲ್ಲಿ ಮೋಹದಿಂದ ಪಾಲಿಸಿದರೆ ಅಲೌಕಿಕದಲ್ಲಿ ಶಿವಜ್ಞಾನದಿಂದ ಪಾಲಿಸಿದರೆ ಮೂಡುವ ವ್ಯತ್ಯಾಸದ ಅರಿವು ಮೂಡುತ್ತದೆ. ಜೀವನನ್ನು ಅಜ್ಞಾನದ ಮಡಿಲಲ್ಲಿ ಪೋಷಿಸುವುದಕ್ಕಿಂತ ಜ್ಞಾನದ ನೆರಳಲ್ಲಿ ಪೋಷಿಸಿದರೆ ಮಾಯೆ ಎಂಬ ಮೋಹದಿಂದ ಮುಕ್ತನಾಗಬಹುದು.

೪.೧೧ ಜೇಡರ ದಾಸಿಮಯ್ಯ: ಮಾಯೆ ವಚನಕಾರರಲ್ಲೊಬ್ಬರಾದ ಜೇಡರ ದಾಸಿಮಯ್ಯನವರು ತಮ್ಮ ವಚನಗಳಲ್ಲಿ ಮಾಯೆ ಕುರಿತು ಹೀಗೆ ಹೇಳಿದ್ದಾನೆ.

"ತಾಯಿ ಗರ್ಭದ ಶಿಶು ತಾಯ ಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು
ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು
ಆ ದೇವರು ಆ ಭಕ್ತರನೆಂದು ಅರಿಯ ಕಾಣಾ ರಾಮನಾಥ"[೩೨]

ಗರ್ಭದಲ್ಲಿರುವ ಶಿಶುವಿಗೂ ಮತ್ತು ತಾಯಿಗೂ ಅವಿನಾಭಾವ ಸಂಬಂಧ ಇದ್ದರೂ ಇಲ್ಲದಂತಿರುತ್ತದೆ. ಅದೇ ರೀತಿಯ ಸಂಬಂಧ ಭಕ್ತನಿಗೂ ಭಗವಂತನಿಗೂ ಇರುತ್ತದೆ. ದೇವ-ಜೀವರ ನಡುವೆ ಮಾಯಾ ಆವರಣವಿದ್ದು, ಜೀವ ದೇವನನ್ನು ಅರಿಯಲು ಸಾಧ್ಯವಾಗುವುದಿಲ್ಲವೆಂಬುದು ತಾತ್ಪರ್ಯವಾಗಿದೆ. ಈ ವಚನದಲ್ಲಿ ಅರಿವಿನ ಹುಡುಕಾಟವಿದೆ. 'ಅರಿವು' ಜೀವ ತಾನು ಪರಮಾತ್ಮನ ಅಂಶ ಎಂಬುದರ ತಿಳುವಳಿಕೆ ಮೂಡುವುದಾಗಿದೆ. ಅರಿವಿನ ಮರೆವು ಉಂಟಾಗುವ ಸ್ಥಿತಿಯು ಮಾಯೆ ಆಗಿದೆ. ತಾಯಿ-ಶಿಶು ಮತ್ತು ದೇವ-ಜೀವ ಇವರಲ್ಲಿನ ಸಾಮ್ಯತೆ- ಭಿನ್ನತೆಯ ಮೂಲಕ ಮಾಯೆಯನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅರ್ಥೈಸಿದ್ದಾರೆ.

"ಗುರು ಕರುಣಿಸೆ ಸಂಸಾರ ವಿಷಯ ಕೆಟ್ಟಿತ್ತು
ಮಾಯಾ ಪ್ರಪಂಚ ಬಿಟ್ಟಿತ್ತು
ಮುಂದಣ ಹುಟ್ಟರಿತು ಹೊಯಿತ್ತು

ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ ರಾಮನಾಥ"[೩೬]

ಮಾಯೆಯಿಂದ ಮುಕ್ತರಾಗಬೇಕೆಂದರೆ ಗುರುವಿನ ಕರುಣೆ ಅಗತ್ಯವಾಗಿ ಬೇಕು. ಗುರುವಿನ ಮಾರ್ಗದರ್ಶನದಿಂದ ಪರಮಾತ್ಮನ ಸಾನಿಧ್ಯ ಹೊಂದಲು ಸಾಧ್ಯ. ಸಂಸಾರದಲ್ಲಿದ್ದು ಅದನ್ನು ನಂಬಿ ಮನದಲ್ಲಿ ಎಡೆ ಮಾಡಿಕೊಟ್ಟರೆ ಕಾಯದ ಮೂಲಕ ಮೋಹ, ಸ್ವಾರ್ಥ ಆವರಿಸುತ್ತದೆ. ಲೋಕದಲ್ಲಿ ಸಂಸಾರದ ಸೆಳೆತಕ್ಕೊಳಗಾದವರನ್ನು ಭಗವಂತ ಕನಸಿನಲ್ಲಿಯೂ ಬಿಟ್ಟುಕೊಳ್ಳಲಾರನೆಂಬ ಭಾವ ಕಂಡುಬರುತ್ತದೆ. ಲೌಕಿಕದ ಪ್ರಪಂಚವು ಮಾಯೆ ಆಗಿದೆ.

೪.೧೨ ಮಡಿವಾಳ ಮಾಚಿದೇವ: ಮಾಯೆ ತಮ್ಮ ವಚನದಲ್ಲಿ ಮಾಯೆಯನ್ನು ಮಾಯಾಂಗನೆ ಎಂದು ಕರೆದಿದ್ದಾರೆ.

"ಆದಿಯುಗದಲ್ಲೊಬ್ಬಳು ಮಾಯಾಂಗನೆ
ಹಲವು ಬಣ್ಣದ ವಸ್ತ್ರವನ್ನುಟ್ಟುಕೊಂಡು
ಹೆಡಿಗೆ ತುಂಬಿ ದೇವರ ಹೊತ್ತಕೊಂಡು
ಓ ದೇವರ ಕೊಳ್ಳಿರಯ್ಯ"[೩೭]

ಈ ಜಗತ್ತು ಸೃಷ್ಟಿಯಾಗುವ ಮೊದಲು ಮಾಯಾಂಗನೆ ಅಲಂಕಾರ ಮಾಡಿಕೊಂಡು ಸೃಷ್ಟಿಕರ್ತರಾದ ದೇವರುಗಳನ್ನು ಮಾರಲು ಬಂದಾಗ ತನ್ನ ಹತ್ತಿರ ಇರುವ ಒಂದು ಅರಿವೆಯನ್ನು ಕೊಟ್ಟು ದೇವರ ಕೊಂಡು ಬಸವಣ್ಣನ ಪ್ರಸಾದದಿಂದ ಬದುಕಿದೆ ಎಂದಿದ್ದಾನೆ. ಮೂರ್ತಿ ಪೂಜೆಯನ್ನು ಖಂಡಿಸುವ ದೃಷ್ಟಿಯಲ್ಲಿದೆ. ಪೂಜೆ, ಅರ್ಚನೆ, ಆರತಿ ಎಲ್ಲವೂ ಬಾಹ್ಯದ ತೋರಿಕೆಯ ಆಚರಣೆಗಳಾಗಿವೆ. ಬಾಹ್ಯದ ಆಚರಣೆ ನಿಜ ಭಕ್ತಿಯಾಗದು. ಅದು ಕೇವಲ ಮನುಜನನ್ನು ಮರುಳಾಗಿಸುವ ಕ್ರಿಯೆ ಆಗಿದೆ. ದೇವರನ್ನು ಮಾರುವ-ಕೊಳ್ಳುವ ಕಾರ್ಯ ದೇವರ ಅಸ್ತಿತ್ವವನ್ನು ಪ್ರಶ್ನಿಸಿದೆ. ಮಾಯೆಯ ಕೈಯಲ್ಲಿ ದೇವರು ಸಿಕ್ಕು ತನ್ನತನವನ್ನು ಕಳೆದು ಕೊಳ್ಳುವಂತಾಗಿದೆ ಎಂಭ ಭಾವ ಇಲ್ಲಿದೆ. ಅಷ್ಟೇ ಅಲ್ಲದೇ ಹಲವು ಧರ್ಮ-ದೇವರು ಎಂಬ ಪರಿಕಲ್ಪನೆಯನ್ನು ಪ್ರಶ್ನಿಸುವ ರೀತಿಯಲ್ಲಿ ಈ ಕೆಳಗಿನ ವಚನವಿದೆ.

"ಜಕ್ಕಿ ಜನ್ನಿ ಎಕ್ಕನಾತಿ ಮಾಯಿರಾಣಿ
ಕುಕ್ಕನೂರ ಬಸದಿ ಚೌಡಿ ಮೈಲಾರ
ಜನ್ನನು ಕುಂಟ ಭೈರವ ಮೊದಲಾದ
ಭೂತ ಪ್ರೇತ ಪಿಶಾಚಿ ದೇವರೆಲ್ಲರೂ
ಅಕ್ಕಸಾಲೆಯ ಕುಪ್ಪಟ್ಟಿಗೆ ಬಂದರಾಗಿ
ಇದೇ ಸುಡಗಾಡ ಕಾಣಾ ಕಲಿದೇವರದೇವಯ್ಯ"[೩೮]

ಮನುಜನ ನಂಬಿಕೆಗೆ ಅನುಗುಣವಾಗಿ ಸೃಷ್ಟಿಸಿಕೊಂಡ ದೇವರುಗಳೇ ಹೊರತು ತಾವೇ ಉದ್ಭವಿಸಿದ್ದಲ್ಲ. ಅಕ್ಕಸಾಲಿಗನ ಕೈಯಲ್ಲಿ ದೇವರರೂಪ ಪಡೆದುವುಗಳಾಗಿವೆ.

ಮನುಜ ದೇವರೆಂಬ ಶಕ್ತಿಗೆ ಎದುರಾಗಿ ಭೂತ, ಪ್ರೇತ, ಸೃಷ್ಟಿಸಿಕೊಂಡಿದ್ದಾನೆ. ದೇವ-ದಾನವ ಎಂಬುವು ಮಾನವ ಸೃಷ್ಟಿಯಾಗಿವೆಯೆ ಹೊರತು ಸ್ವಯಂ ಸೃಷ್ಟಿಯಲ್ಲ. ಹಲವು ದೇವರನ್ನು ಪೂಜಿಸದೇ ಪರಮಾತ್ಮ ಅಭಿವ್ಯಕ್ತಿ ರೂಪವಾದ ಚಿದ್ಘನ ಲಿಂಗವ ಪೂಜಿಸಬೇಕೆಂಬ ಭಾವವಿದೆ. ಮನುಜನಲ್ಲಿ ಭಯ ಉಂಟು ಮಾಡುವ ಶಕ್ತಿ ಮಾಯೆಗಿದೆ.

ಜಗವೆಲ್ಲಾ ವಾಸ್ತವವನ್ನು ಮರೆತು ಮಾಯೆ ಎಂಬ ಸಂಭ್ರಮದಲ್ಲಿರುವುದನ್ನು ಅದ ಮೀರಿದ ವಚನವನ್ನು ನಿರೂಪಿಸುತ್ತದೆ.

"ವಾಯದ ಮಾಯದ ಸಂಭ್ರಮದೊಳಗೆ
ಸಿಲುಕಿತ್ತು ನೋಡಾ ಭುವನವೆಲ್ಲ
ಮಾಯಕ್ಕೆ ಹೊರಗಾದ ನಿರ್ಮಾಯನ ಕಂಡೆನು
ತಾನೆಂಬ ನುಡಿಗೆ ನಾಚಿ, ನಾನೆಂಬ ನುಡಿಗೆ ಹೇಸಿ
ತಾನು ತಾನಾದ ಘನಮಹಿಮನು
....
ಸಾವಯವನಲ್ಲ ನಿರವಯನಲ್ಲ
ಕಲಿದೇವರದೇವಾ ನಿಮ್ಮ ಶರಣ ಚನ್ನಬಸವಣ್ಣ" [೩೬]

ಚನ್ನಬಸವಣ್ಣನ ವ್ಯಕ್ತಿತ್ವವನ್ನು ವಿವರಿಸುವಲ್ಲಿ ಮಾಯೆಯನ್ನು ಸಾಂದರ್ಭಿಕವಾಗಿ ಬಳಸಿಕೊಂಡಿದ್ದಾನೆ. ಲೋಕವೆಲ್ಲಾ ಮಾಯೆಯ ಭ್ರಮೆಗೆ ಸಿಲುಕಿರುವಾಗ ಚೆನ್ನಬಸವಣ್ಣ ಮಾಯಾಮುಕ್ತನಾಗಿದ್ದಾನೆ. ನಾನು-ನೀನು ಎಂಬ ಭೇದವ ಮೀರಿದವನು, ಕುರುಹು-ಮರಹುಗಳ ಮಿತಿಗೊಳಗಾಗದವನು, ಜ್ಞಾನ-ತಾನೆಂಬ ಬೇಧವಿಲ್ಲದ ಪರಿಪೂರ್ಣ ವ್ಯಕ್ತಿತ್ವವುಳ್ಳವನು. ಇಲ್ಲಿ ನಾನು-ನೀನು ಎಂಬ ಭೇದ ವಿಲ್ಲದಿರುವುದು ಮಾಯಾ ಮುಕ್ತ ಸ್ಥಿತಿ. ಜೀವ-ಭವಿಯಾಗಿ ಸಂಸಾರಿಯಾಗಿ ಸಂಭ್ರಮಿಸುತ್ತಾನೆ. ಇದೇ ರೀತಿ ಮತ್ತೊಂದಡೆ ಬಸವಣ್ಣನ ವ್ಯಕ್ತಿತ್ವ ವರ್ಣನೆ ಮಾಡುತ್ತಾ ಮಾಯೆ ಕುರಿತು ಹೇಳುತ್ತಾನೆ. ಬಸವಣ್ಣನ ಕೃಪೆಯಿಂದ 'ಮಾಯೆ ಮಾಯೆಯನ್ನು ವಂಚಿಸಿ ಆವರಿಸಿತ್ತು' ಅರಿವು-ಮರಹನ್ನು ಇಲ್ಲವಾಗಿಸುತ್ತದೆ ಗುರುವಿನ ಕರುಣದಿಂದ ನಿಜದ ಅರಿವನ್ನು ಹೊಂದಿ ಮಹಾಘನದ ಅನುಭವ ಪಡೆದುಕೊಂಡಾಗ ಜೀವ ನಾನೆಂಬ ಅರಿವು ಹೋಗಿ ದೇಹಿ ನಾನೆಂಬ ಮರವು ಮೂಡಿ ನಿಜದ ನಿಲುವುದೋರಿತು. ಬಸವಣ್ಣನೆಂಬ ಗುರುವಿನ ದಯದಿಂದ ತಾನು ಮುಕ್ತನಾದೆ ಎಂದು ಹೇಳುತ್ತಲೇ ಲೋಕದ ಜನರ ಸ್ಥಿತಿಯನ್ನು ಮತ್ತೊಂದು ವಚನದ ಮೂಲಕ ಹೇಳಿದ್ದಾನೆ. 'ಕಡಲೊಳಗಣ ಮೊಸಳೆಯ ನಡುವ ಹಿಡಿದು ಕಡೆಗೆ ಸಾರಿ ಹೋಹೆನೆಂಬವರುಂಟೆ?' ಕಡಲು ಸಂಸಾರದಂತೆ ಅದರಲ್ಲಿರುವ ಮೊಸಳೆಯಂತೆ ಮಾಯೆ ತೋರುತ್ತದೆ. ಮಾಯೆಯ ಹಿಡಿದು ಸಂಸಾರ ಸಾಗರವ ದಾಟುವನೆಂಬುದು

ಅಸಾಧ್ಯವಾದದು. ಮನದಿಚ್ಛೆಗೆ ಜೀವ ಹರಿದಾಡುವಂತೆ ಮಾಡಿ ಅದರಲ್ಲಿಯೇ ತೊಳಲಾಡುವಂತೆ ಮಾಡುತ್ತದೆ. ಸಂಸಾರ ಎಂಬುದು ಕರ್ಮಗಳ ಕಡಲು ಎಂಬರ್ಥದಲ್ಲಿ ಹೇಳಿದ್ದು, ಮಾಯೆ ಎಂಬುದು ಮೊಸಳೆಯಂತೆ. ವಾಸ್ತವದಲ್ಲಿ ಜೀವ ಮೊಸಳೆಯನ್ನು ಹಿಡಿದಾಗ ಉಂಟಾಗುವ ಪರಿಣಾಮಗಳನ್ನು ಮಾಯೆಯಿಂದಲೂ ಆಗುವುದೆಂದು ಚಿತ್ರಿಸಿದ್ದಾನೆ. ಮೊಸಳೆಯನ್ನು ಹಿಡಿದು ಬದುಕುವುದು ಹೇಗೆ ಅಸಾಧ್ಯವೋ ಹಾಗೆ ಮಾಯೆಯನ್ನು ಹಿಡಿದು ಬದುಕುವುದು ಅಸಾಧ್ಯ. ಭಾರತೀಯ ಪರಂಪರೆಯಲ್ಲಿ ವಿಶೇಷ ಸ್ಥಾನ ಪಡೆದ ವೇದ–ಆಗಮ, ಶಾಸ್ತ್ರ–ಪುರಾಣಗಳೆಲ್ಲವೂ ಮಾಯೆಯ ಮೂಲಕ ಅಸ್ತಿತ್ವ ಪಡೆದಿವೆ. 'ವೇದ, ಆಗಮ, ಶಾಸ್ತ್ರ, ಪುರಾಣಗಳೆಲ್ಲವೂ ಮಾಯೆಯ ಕೈ, ಬಾಯಿ, ಕಾಲ ವಿಕಾರದಲ್ಲಿ ಹುಟ್ಟಿ'ಕೊಂಡುವುಗಳಾಗಿವೆ. ನಿಜ ಶರಣನು ಇವುಗಳ ಸ್ವರೂಪ ಅರಿತು ಮಹಾಲಿಂಗದಲ್ಲಿ ಮನವನ್ನು ನೆಲೆಗೊಳಿಸಬೇಕು. ವೇದ–ಆಗಮಗಳೆಲ್ಲವೂ ಜೀವನನ್ನು ಮತ್ತೆ ಮತ್ತೆ ಲೌಕಿಕದಲ್ಲಿರುವಂತೆ ಮಾಡುತ್ತವೆ. ಆದ್ದರಿಂದ ಜೀವ ಶರೀರಕ್ಕೆ ಪ್ರಾಧಾನ್ಯತೆ ಕೊಡದೆ, ಕಾಯದೊಳಗಿರುವ ಶಿವವನ್ನು ಅರಿಯಬೇಕು. ಅಂತರಂಗದಲ್ಲಿನ ಪರಮಾತ್ಮನ ಇರುವನ್ನು ಅರಿತಾಗ ಬಹಿರಂಗದಲ್ಲಿನ ಮಾಯೆ ಮರೆಹಾಗಿ ಇಲ್ಲವಾಗುತ್ತದೆ. ಆಸೆ, ರೋಷ, ಮಾಯೆ ಎಂಬ ತ್ರಿವಿಧ ಪಾಶಗಳು ಒಂದರೊಳಗೊಂದು ಬೆಸಗೊಂಡು ಜೀವನನ್ನು ಆವರಿಸುವಲ್ಲಿ ಅದರಿಂದ ರಕ್ಷಿಸು ಎಂಬ ಬೇಡಿಕೆ ಇದೆ.

೪.೧೩ ಶಂಕರ ದಾಸಿಮಯ್ಯ: ಮಾಯೆ ವಚನಕಾರರಲ್ಲಿ ಆದ್ಯರೆನಿಸಿಕೊಂಡ ಶಂಕರದಾಸಿಮಯ್ಯನವರು ಮಾಯೆಯನ್ನು ಅಲೌಕಿಕ ಸಾಧನೆಯಲ್ಲಿ ತೊಡರಾಗಿ ನೋಡಿದ್ದಾರೆ. ಮಾಯೆ ಎಂಬುದು ಕಾಯದ ಮದದ ಮೂಲಕ ಅಭಿವ್ಯಕ್ತ ವಾಗುತ್ತದೆ. ಕಾಯಕ್ಕೆ ನಾನು ಎಂಬ ಅಹಂಕಾರ ಮೂಡಿದರೆ ಜೀವ ಭವಿಯಾಗಿ ಉಳಿಯವನು, ಶರಣನಾಗಿ ಪತಿವರ್ತನೆಯಾಗಲಾರ.

"ಕಾಯವಿಲ್ಲಾಗಿ ಮಾಯವಿಲ್ಲ, ಮಾಯವಿಲ್ಲಾಗಿ ಮಥನವಿಲ್ಲ'
ಮಥನವಿಲ್ಲಾಗಿ ಭಾವವಿಲ್ಲ ಭಾವವಿಲ್ಲಾಗಿ ಬಯಕೆಯಿಲ್ಲ.
ಬಯಕೆಯಿಲ್ಲಾಗಿ ನಿರ್ಭಾವ ನಿಜವನೈದಿ
ನಿಜಗುರು ಶಂಕರದೇವರೆಂಬುದು ತಾನಿಲ್ಲ" [೩೭]

ಕಾಯದ ಮೋಹವನ್ನು ಜೀವ ಕಳೆದುಕೊಳ್ಳಬೇಕು. ದೇಹಕ್ಕೆ ಪ್ರಾಧಾನ್ಯತೆ ಕೊಡದೇ ಇದ್ದಾಗ ದೇಹದಲ್ಲಿರುವ ಮಾಯೆಗೆ ಎಡೆ ಇರದು. ಮಾಯೆ ಇಲ್ಲವಾದಾಗ ಕಾಯ ಕ್ರಿಯಾಸ್ವರೂಪ ವೈವಿಧ್ಯಮಯ ವಾಗಲು ಸಾಧ್ಯವಿಲ್ಲ. ಮನಸ್ಸು ವಿಷಯಾಸಕ್ತಿಗಳೆಡೆಗೆ ಹರಿದಾಡಲು ಸಾಧ್ಯವಾಗದೆ ನಿಜ ಕುರುಹನ್ನು ಗುರುವಿನ ಮೂಲಕ ಅರಿತು ಜೀವ–ಶಿವನಲ್ಲಿ ಐಕ್ಯನಾಗುವನು ಎಂದು ಹೇಳಿದ್ದಾರೆ.

ಕಾಯ–ಮಾಯ–ಭಾವ–ಬಯಕೆ ಎಲ್ಲವೂ ಒಂದರಳಗೊಂದು ಜೋಡಣೆಗೊಂಡು ಜೀವನನ್ನು ಆವರಿಸುವವೆಂಬ ಪರಿಯನ್ನು, ಅದರಿಂದ ಬಿಡಿಸಿಕೊಳ್ಳುವ ರೀತಿಯನ್ನು ವಚನಗಳ ಮೂಲಕ ಹೇಳಿದ್ದಾರೆ. ಅರಿವಿನಮಾರಿತಂದೆಗಳ ವಚನದಲ್ಲಿ 'ಕಾಲದಿಂದ ಕಾಲಕ್ಕೆ ಆಧ್ಯಾತ್ಮಿಕ ಪರಂಪರೆಯಲ್ಲಿ ಹಲವು ವಾದಗಳು ಹುಟ್ಟಿಕೊಂಡವು. ದೇವ–ಜೀವ ಎರಡು ಒಂದಾಗುವ, ಒಂದು ಎರಡಾಗುವ, ದ್ವೈತಾದ್ವೈತ ಚರ್ಚೆಗಳು ಮೂಡಿದವು. ದೇವಾನುದೇವತೆಗಳು ಒಂದೊಂದು ರೀತಿಯಲ್ಲಿ ಭವಿಗಳಿಗೆ ಕಾಣಿಸಿಕೊಂಡರು. ಕೆಲವನ್ನು ದೇವರಿಗೆ ಸಮಾನವಾಗಿ ನೋಡಿದರು. ಹೀಗೆ ಜೀವ ತನ್ನ ನಂಬಿಕೆ– ವಿಶ್ವಾಸದ ಹಿನ್ನಲೆಯಲ್ಲಿ ಒಂದೊಂದು ರೀತಿಯಾಗಿ ದೇವರನ್ನು ಆರಾಧಿಸುವ ಪರಂಪರೆ ಬೆಳೆಯಿತು. ನಿಜದಲ್ಲಿ ದೇವ ಜೀವನ ಅಂತರಂಗದಲ್ಲಿಯೇ ಇದ್ದು ಅದರ ಅರಿವು ಮೂಡಬೇಕಿದೆ ಎಂಬುದನ್ನು ತತ್ವವಾದ, ಮಾಯಾವಾದ ಇಂತಿವಾದಗಳಲ್ಲಿ ಹೋಗುವಾಗ' ಎಂಬ ವಚನದ ಮೂಲಕ ಹೇಳಿದ್ದಾರೆ.

೪.೧೪ ಕೂಗಿನ ಮಾರಯ್ಯ: ಮಾಯೆ

"ಮುಗ್ಧ ಮೂಢ ಕುಬ್ಜ ಕುಷ್ಟ ಅಂಧಕ ಪುಂಗಳ ನಪುಂಸಕ
ಇಂತೀ ಮುಕ್ತಿ ಹೀನರ ದೈವವೆಂದು

....

ಭಕ್ತಿಯಿಂದ ಮಾಡುವಲ್ಲಿ
ತ್ರೀವಿಧ ಮಲವ ಹರಿದವನ ತ್ರಿಗುಣವರಿತವನ............ಮಾರೇಶ್ವರಾ" [೩೮]

ಲೌಕಿಕ ಸುಖದಲ್ಲಿ ಮುಳುಗಿದ ಮಲತ್ರಯಗಳಿಗೆ ಅಂಟಿಕೊಂಡಿರುವ ಮುಗ್ಧ, ಮೂಢ, ಕುಬ್ಜ, ಅಂಧಕ ಪುಂಗಳ ನಪುಂಸಕರನ್ನು ಮುಕ್ತಿಹೀನರನ್ನು ದೈವವೆಂದು ನಂಬಿಕೊಂಡಿರುವವರು ನಿಜವಾದ ಭಕ್ತರಲ್ಲ. ಭಕ್ತಿ ಪಥದಲ್ಲಿ ಸಾಗುವ ವ್ಯಕ್ತಿ ತ್ರಿವಿಧ ಮಲದಿಂದ ಮುಕ್ತಿ ಹೊಂದಿ ತ್ರಿಗುಣ ಮೂರ್ತಿಯಾದ ಭಕ್ತನೇ ತನ್ನನ್ನು ನಿಜವಾದ ಮಹಾಮಹಿಮನಾಗಿ ವ್ಯಕ್ತಪಡಿಸುತ್ತಾನೆ. ಮಲತ್ರಯಗಳಲ್ಲಿ ಮಾಯೆಯು ಒಂದಾಗಿದ್ದು ಮಾಯೆಯಿಂದ ಮುಕ್ತನಾದವನು ನಿಜಭಕ್ತನೆಂದು ಹೇಳುತ್ತಾನೆ. ತ್ರಿಗುಣಗಳನ್ನು ಅರಿಯಬೇಕಾದರೆ ತ್ರಿವಿಧ ಮಲವ ತೊರೆಯಬೇಕು. ಶರಣನಾಗುವ ಮೊದಲು ಸದ್ಭಕ್ತನಾಗಿ ಸದ್ಭಕ್ತರ ಸನಿಹದಲ್ಲಿ ಅರಿವನ್ನು ಹೊಂದಬೇಕು.

೪.೧೫. ಕನ್ನಡಿ ಕಾಯಕದ ಅಮ್ಮಿದೇವಯ್ಯ : ಮಾಯೆ ವಚನವೊಂದರಲ್ಲಿ 'ಮಾಯೆ' ಎಂಬ ಸ್ಥಿತಿಗೆ ಒಳಗಾದ ಹಾಗೂ ಹೊರತಾದ ಎರಡು ರೂಪಕಗಳನ್ನು ಕುರಿತು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾನೆ. 'ತುರುಬ, ಜಡೆ, ಬೋಳು, ಬಿಡುಗುರುಳು ಇವೆಲ್ಲವೂ ರುದ್ರನ ಅಡಿವೆಜ್ಜೆಯ ಕುರುಹುಗಳು'[೩೯] ಶಿವನು ಅನುಗ್ರಹಿಸಿದ ದೇಹದ ಸೌಂದರ್ಯೋಪಾಸನೆ ಯನ್ನು ಅರಿಯದ

ಮೂಢರು ಸರ್ವಾಂಗ ತೊಡಿಗೆಯನ್ನು ಅಲಂಕರಿಸಿಕೊಂಡು ಆಸ್ವಾದಿಸುವ ಅತೀತವಾದ ಮೋಹದ ಪಾಶದಲ್ಲಿ ಮುಳುಗಿ ತೇಲುತ್ತಿರುವರನ್ನು ಕಂಡು ವ್ಯಂಗ್ಯವಾಡಿದ್ದಾನೆ. ಹಾಗೆಯೇ ಪ್ರಾಪಂಚಿಕ ಕನ್ನಡಿ ಪ್ರತಿಬಿಂಬ ತೋರಿಸಿದರೆ ಶರಣರ ಮನಸ್ಸಿನ ಕನ್ನಡಿ ಮನದ ಇಂಗಿತಕ್ಕೆ ಕಡಿವಾಣ ಹಾಕಿ ಪರಿವರ್ತನೆಗೆ ದಾರಿದೀಪವಾಗುತ್ತದೆ. 'ಕಾಯಕ'ವೆಂಬ ಮಂತ್ರದಲ್ಲಿ ಮುಳುಗಿ ಜೀವಿಸುವ ನಿಜಶರಣನ ವ್ಯಕ್ತಿತ್ವದ ಬಸವಣ್ಣನ ಇರುವಿಕೆಯನ್ನು ಮನಗಂಡು 'ಮಲವ' ಪರಿಹರಿಸಿಕೊಳ್ಳಿ ಎಂದು ತಿಳುವಳಿಕೆ ನೀಡುವಲ್ಲಿ ತ್ರಿವಿಧ ಮಲಗಳು ಮಾಯೆ ಆಗಿವೆ. ಮಾಯಾ ಮಲದಿಂದ ಬಿಡಿಸಿಕೊಳ್ಳಬೇಕೆಂಬ ಸದಾಶಯವಿದೆ.

೪.೧೬ ವೇದಮೂರ್ತಿ ಸಂಗಣ್ಣ : ಮಾಯೆ " ನಹ್ಯತೆ ಸಹ್ಯತೆ ಶಂಕರತೆ ಮೂಲಭದ್ರಿಕೆ

"ಮಾಯಾರಿತು ಮಂತ್ರರಿತು ತಂತ್ರಸಾಧನ ಮಾತ್ರಾಯ ಪೂರ್ವ ನಿರೀಕ್ಷಣೆ

ಮದವ ಸ್ವೀಕರಿಸಿದ ಮದೋನ್ಮತ್ತನಂತೆ

ತನ್ನಕೊರತೆಯ ತಾನರಿಯದೆ ಇದಿರಿಗೆಚತುರತೆಯ ನೊರೆವಂತೆ"[೪೦]

ನಿಜಭಕ್ತ ಎಷ್ಟೇ ಪಂಡಿತನಾದರೂ ವೈದಿಕಧರ್ಮದ ವೇದಾಧ್ಯಯನ ಚಿಂತನೆಯಲ್ಲಿ ತೊಡಗಿ ಕೊಂಡಿದ್ದರೂ ಜ್ಞಾನವೆಂಬ ಮದವ ಸ್ವೀಕರಿಸಿದ ಅಹಂಕಾರಿಯಾಗಿ ತನ್ನ ತಾನರಿಯದೆ ಚತುರತೆಯನು ಮೆರೆಯವನಂತೆ ವರ್ತಿಸುವವರನ್ನು ವೇದ-ವೇದ್ಯರಲ್ಲ ಎಂದಿದ್ದಾನೆ. ಅಹಂ ಭಾವವನ್ನು ತೊರೆದ ವ್ಯಕ್ತಿ ಅರಿವಿನ ಉಪಾದಿಯಲ್ಲಿ ಚಿಂತನೆಗೈಯುವಲ್ಲಿ ಮಾಯಾತೀತನಾಗಿ ಮುಕ್ತಿ ಪಡೆದವನಾಗಿರುತ್ತಾನೆ ಎಂಬ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ಇಲ್ಲಿ ಜ್ಞಾನ, ಪಾಂಡಿತ್ಯ, ವೇದಾಂತ ಎಂಬ ಅಂಶಗಳು ಮುಖ್ಯವಾಗುವುದಿಲ್ಲ. ವ್ಯಕ್ತಿಯೊಳಗಿನ 'ಅಹಂ' ಮುಖ್ಯ. ಅಹಂಕಾರವೇ ಮಾಯೆಯ ಪ್ರಕಟರೂಪವಾಗಿದೆ. ಜ್ಞಾನವಿದ್ದಲ್ಲಿ ಅಹಂಕಾರ ಬಂದು ಕೂಡಿಕೊಂಡರೆ ಅಲ್ಲಿ ಮಾಯೆಗೆ ಎಡೆಕೊಟ್ಟಂತೆಯೇ ಅರ್ಥ.

೪.೧೭ ಹಾವಿನಹಾಳ ಕಲ್ಲಯ್ಯ: ಮಾಯೆ ವೇದ ಆಗಮದ ಶ್ರೇಷ್ಠತೆಯನ್ನು ವಿಮರ್ಶಿಸುವಲ್ಲಿ ವಚನವೊಂದು ಹೀಗಿದೆ.

"ವೇದ ವೆಂಬುದು ಮಾಯಿಕದ ಕೈಯ ವಿಕಾರದಲ್ಲಿ ಹುಟ್ಟಿತ್ತು

ಆಗವೆಂಬುದು ಮಾಯಿಕದ ವಾಯ ವಿಕಾರದಲ್ಲಿ ಹುಟ್ಟಿತ್ತು

.... ಮಹಾಲಿಂಗ ಕಲ್ಲೇಶ್ವರ" [೪೧]

ವೇದಶಾಸ್ತ್ರ, ಆಗಮಗಳು ಜ್ಞಾನದ ಕೇಂದ್ರಗಳಾಗಿವೆ. ಲೌಕಿಕ ಜೀವನದ ಮಾರ್ಗದರ್ಶನ ಸೂತ್ರಗಳನ್ನು ಒಳಗೊಂಡಿವೆ. ಶರಣ ದೃಷ್ಟಿಯಲ್ಲಿ ವೇದಾಗಮದ ಚಿಂತನೆಗಳು ಅರ್ಥ ಕಳೆದುಕೊಳ್ಳುತ್ತವೆ. ಆದ್ದರಿಂದಲೇ ಮಾಯೆಯ ವಿಕಾರದ ಸ್ಥಿತಿಯಲ್ಲಿ ಇವು ರೂಪ ಪಡೆದವುಗಳು ಎನ್ನುತ್ತಾನೆ. ವೇದ-ಶಾಸ್ತ್ರಗಳು ಮನುಜನನ್ನು ಲೌಕಿಕದ ಸೆಳವಿನಲ್ಲಿ

ಉಳಿಯುವಂತೆ ಮಾಡುತ್ತವೆ. ಸ್ಥಾವರತ್ವಕ್ಕೆ ಪ್ರಾತಿನಿಧ್ಯ ಕೊಡುವಂತಾಗುತ್ತದೆ.

ವೇದ, ಆಗಮ, ಶಾಸ್ತ್ರ-ಪುರಾಣಗಳನ್ನು ಮೀರಿದ ಅತೀತವಾದ ಜ್ಞಾನೇಂದ್ರಿಯ ವೊಂದಿದ್ದು ಈ ಲೌಕಿಕ ಜ್ಞಾನದಿಂದ ಬಿಡಿಸಿಕೊಂಡು ನಿರಾಭಾವದ ಕಡೆಗೆ ಸಾಗುವ ಪರಿಪೂರ್ಣತೆಯನ್ನು ಕಂಡುಕೊಂಡು ಮಹಾಸ್ಥಲದಲ್ಲಿ ನೆಲೆಗೊಳ್ಳುವುದೇ ಮಾಯೆಯ ಬಂಧನದಿಂದ ಮುಕ್ತಿ ಪಡೆಯುವುದಾಗಿದೆ ಎಂದರ್ಥವಿದೆ.

೪.೧೮ ಸಂಗಮೇಶ್ವರದ ಅಪ್ಪಣ್ಣ: ಮಾಯೆ ಭಕ್ತನ ಲೌಕಿಕ ಹಾಗೂ ಪಾರಮಾರ್ಥಿಕದ ಒಳಗಡೆ ನಡೆಯುವ ಜಂಜಡಾತ್ಮಕವಾದ ಸ್ಥಿತಿಯನ್ನು ವ್ಯಕ್ತ ಪಡಿಸುತ್ತದೆ.

"ದೇವಾ ನಿಮ್ಮ ಪರಿಹಾಸ ಪರಿ ಪರಸಮಯಿಗಳ ಮನೆಯಲ್ಲಿಪ್ಪರೆ
ದೇವಾ ದೇವಾ ನಿಮ್ಮ ಪರಿಹಾಸ ಪರಿಹರಿಸೆಂಬ
ಮಾತು ಹುಟ್ಟಿಸುವರೆ ಜಗದಿ"
ದೇವ ನೀವು ಮಾಯೆ ಅಲ್ಲದಿರ್ದಡೆ' [೪೨]

ಎಂದು ಪ್ರಶ್ನಿಸುವಾಗ ವ್ಯಕ್ತಿ ಪರೀಕ್ಷೆಗೆ ಒಳಗಾಗಿ ಗಟ್ಟಿಗೊಂಡು ಸಾಗಬೇಕಾದ ಮಾರ್ಗೋಪಾಯಗಳನ್ನು ತಾತ್ವಿಕವಾಗಿ ಪ್ರಶ್ನಿಸುತ್ತಾನೆ. 'ನೊರಜುಗಳು' ಎಂದಾಗ 'ಮಾಯೆ' ಎನ್ನುವ ಪೆಡಂಭೂತ ಯಾರನ್ನೂ ಬಿಟ್ಟಿಲ್ಲ. 'ಕೊಳೆ'ಗೆ ಹತ್ತಿಕೊಂಡ ಜೀವಿಯಂತೆ ಕಾಡುತ್ತಲೇ ಇರುತ್ತದೆ. ಆ ಪರಿಭ್ರಮಣೆಯಿಂದ ಮುಕ್ತಿಗೊಳ್ಳಬೇಕೆಂಬ ಪ್ರಯತ್ನ ಇಲ್ಲಿ ಕಾಣುತ್ತದೆ. ಮಾಯೆ ಎಂಬುದರ ಕಾರಣಕ್ಕೆ ನಿಜ ಕುರುಹನ್ನು ಮರೆಸಿ ನೊರಜಿನಂತೆ ಜಿವ ವರ್ತಿಸುತ್ತಾನೆ.

೪.೧೯ ಸಕಳೇಶ ಮಾದರಸ: ಮಾಯೆ

"ಅಷ್ಟಮದಗಳೆಂಬ ಆನೆಯ ಮೆಟ್ಟಿ, ಅವಿನಾಶವೆಂಬ ಕಂಥೆಯತೊಟ್ಟು
ಅನಾಹತವೆಂಬ ಕರ್ಪರವಂ ಕೊಂಡು

....

ಮಾಯಾ ಪ್ರಪಂಚ ನಾಸ್ತಿಯಾಗಿ
ಶಿವಧ್ಯಾನ ಕಾರಣ ಸದಾಚಾರವೆಡೆಗೊಂಡು"[೪೩]

ಶಿವಧ್ಯಾನದ ಮೂಲಕ ಪ್ರಪಂಚ ಎಂಬ 'ಮಾಯೆ' ಇಲ್ಲವಾಗಬೇಕಾದರೆ ಲೌಕಿಕದ ಅಷ್ಟಮದಗಳನ್ನು ಎದುರಿಸಿ ಗೆಲ್ಲಬೇಕು ಇದ್ದು ಇಲ್ಲಿದಂತಾಗುವ ಕರ್ಪೂರದ ಸ್ಥಿತಿಯನ್ನು ಸಾಧಿಸಬೇಕು. ಲೌಕಿಕದ ಸೆಳೆತದಿಂದ ಮುಕ್ತನಾಗಬೇಕು. ಈ ವಚನದಲ್ಲಿ 'ಮಾಯೆ' ಎನ್ನುವುದು ಅಷ್ಟಮದಗಳೆಂಬ ಆನೆಯಂತೆ ಎಂದು ಹೋಲಿಸಿ ಮುಂದುವರೆದು ಆನೆಯನ್ನು ಪಳಗಿಸಲಿಕ್ಕೆ ಹೇಗೆ ಅಂಕುಶವನ್ನು ಮಾವುತ ಬಳಸುತ್ತಾನೋ ಅದೇ ರೀತಿ ಕಾಯ ಕಲ್ಪಿತವಾದ ಈ ಶರೀರಕ್ಕೆ ಯೋಗದಂಡ, ಶಿವಧ್ಯಾನ, ಸದಾಚಾರ ಸಮ್ಯಕ್ ಜ್ಞಾನವನ್ನು ಕರಗತ ಮಾಡಿಕೊಂಡು ದುರ್ಗಣಗಳೆಂಬ ಮದಗಳನ್ನು ತ್ಯಜಿಸಿ 'ಶಿವಪುರವೆಂಬ' ಜ್ಞಾನ

ಮಾರ್ಗವನ್ನು ಪ್ರವೇಶಿಸಿ ಅಜ್ಞಾನವನ್ನು ನಿರ್ಮೂಲನೆ ಮಾಡಿ ಸಕಲ ಜೀವಿಗಳಿಗೆ ಕರ್ಮಕ್ಷಯಗಳಿಂದ ಬಿಡುಗಡೆಗೊಳಿಸುವ ತತ್ವ ಪ್ರತಿಪಾದನೆಯು ವಚನದ ಇಂಗಿತವಾಗಿದೆ. ಮಾಯೆ ಅಷ್ಟಮದ ಸ್ವರೂಪಿಯಾಗಿದೆ.

೪.೨೦ ಸೊಡ್ಡಳ ಬಾಚರಸ: ಮಾಯೆ ಇಂದ್ರಿಯ ಸುಖಗಳಿಂದ ಬಿಡುಗಡೆ ಹೊಂದಲು ಕಂಡುಕೊಳ್ಳಬೇಕಾದ ಮಾರ್ಗೋಪಾಯಗಳ ಕುರಿತು ವಿವರಿಸುತ್ತಾ,

"ಒಂದು ಇಂದ್ರೀಯ ಮೊದಲಾದುದಕ್ಕೆ ಕಡೆಯಿಲ್ಲಾ
....
ಪಂಚೇಂದ್ರೀಯದ ಬೆಂಬಳಿಯಲ್ಲಿ ಹರಿವ ಮನುಜರ ಕೊಂದು
ಕೂಗದೆ ಮಾಯೆ ದೇವರಾಯ ಸೊಡ್ಡ ನೋಡೆ"[೪೪]

ಕುಂಜರ, ಫಣಿ, ಭ್ರಮರ, ಮತ್ಸ್ಯ, ಪತಂಗ ಇವು ಇಂದ್ರೀಯ ಸೆಳೆತಕ್ಕೆ ಒಳಗಾಗುತ್ತವೆ. ಮನುಜ ಪ್ರಾಣಿಗಳಿಗಿಂತ ಹೆಚ್ಚಾಗಿ ಐದು ಇಂದ್ರೀಯಗಳಿಗಿಂತ ಹೆಚ್ಚಾಗಿ ಐದು ಇಂದ್ರೀಯವುಳ್ಳವರು ಆದ್ದರಿಂದ ಮಾಯೆ ಮನುಜನನ್ನು ಕೊಂದು ಕೂಗುತ್ತದೆ.

ಸಕಲ ಜೀವಿಗಳು ಇಂದ್ರಿಯ ಸುಖಗಳಿಗೆ ಒಂದೊಂದು ರೀತಿಯಲ್ಲಿ ಒಂದೊಂದು ತರಹದ ಅನುಭವ ರುಚಿಗಳನ್ನು ತಮ್ಮದಾಗಿಸಿಕೊಂಡು ಬದುಕುತ್ತವೆ. ಆದರೆ ಮಾನವ ಪ್ರಜ್ಞಾಪೂರ್ವಕವಾಗಿರುವು ದರಿಂದ ಭಿನ್ನ ಆಲೋಚನೆಗಳಿಂದ ವ್ಯವಹರಿಸುವಾಗ ಬಂಧನ ಎಂಬ ಪಾಶದಿಂದ ಮುಕ್ತನಾಗಬೇಕಾಗುತ್ತದೆ ಅಂಥಹ ಸಂದರ್ಭದಲ್ಲಿ ಪಂಚೇಂದ್ರಿಯಗಳ ಭೋಗ ಸುಖದಲ್ಲಿ ಲೀನನಾಗದೇ 'ಮಾಯೆ'ಯಿಂದ ಮುಕ್ತನಾಗಲು ಅನ್ಯ ವಿಷಯಗಳನ್ನು ನಿಗ್ರಹಿಸಿಕೊಳ್ಳಬೇಕೆಂಬ ಸಂದೇಶ ಮೂಡಿದೆ. ಇಲ್ಲಿ ಪಂಚೇಂದ್ರೀಯಗಳೇ ಮಾಯೆ ಆಗಿವೆ.

೪.೨೧ ಸುಂಕದ ಬಂಕಣ್ಣ : ಮಾಯೆ

"ರಕ್ಕಸಿ ಕೊರೆದಾಡಿಯಲ್ಲಿ
ಕಪ್ಪು ಹಲ್ಲಿನ ಮಧ್ಯದಲ್ಲಿ ಒಂದು ಒಪ್ಪದ ಶಿಶು ಹುಟ್ಟಿತ್ತು
....
ತನ್ನ ತಲೆಯನಳಿದಲ್ಲದೆ ಶಿಶುವಿನ ಹಗೆ ಬಿಡದು
ಬಂಕೇಶ್ವರಲಿಂಗ ನೀ ಮಾಯೆ ಇದಾರಿಗೂ ಅಸಾಧ್ಯ"[೪೫]

ಇಲ್ಲಿ ರಕ್ಕಸಿಯ ಕೊರೆದಾಡಿ, ಕಪ್ಪಹಲ್ಲು ಎಂಬುದು ನಕಾರತ್ಮಕ ಭಾವಸ್ಥಿತಿಯಾಗಿದೆ. ಈ ಸ್ಥಿತಿಯಲ್ಲಿ ಮಾಯೆ ಉದಿಸಿ ಇನ್ನಿಲ್ಲದಂತೆ ತನ್ನ ಪೂರ್ವದ ಸ್ವರೂವನ್ನು ಮರೆಯುವಂತೆ ಮಾಡುತ್ತದೆ. ಲೌಕಿಕವನ್ನು ಅನಿವಾರ್ಯಗೊಳಿಸಿ ಆಧ್ಯಾತ್ಮವನ್ನು ಮರೆಸುತ್ತದೆ. ಮಾಯೆಯನ್ನು ರಕ್ಕಸಿಯ ಗುಣಸ್ವಭಾವಕ್ಕೆ ಹೋಲಿಸಿದ್ದಾನೆ. ರಕ್ಕಸಿಯ ಇರುವಿಕೆಯ ಅನೇಕ ರೀತಿಯ ಉಪಕ್ರಮಗಳ ಬಗ್ಗೆ ವ್ಯಕ್ತಪಡಿಸುತ್ತಾ "ಕಪ್ಪು ಹಲ್ಲಿನ ಮಧ್ಯದಲ್ಲಿ ಒಂದು ಒಪ್ಪದ ಶಿಶು

ಹುಟ್ಟಿತ್ತು" ಎನ್ನುವಲ್ಲಿ 'ರೂಪಕ'ವನ್ನು ಕೊಡುತ್ತಾ ರಸ ಸುಖಗಳಿಂದ ತೇಲಾಡುತ್ತಿರುವ ವ್ಯಕ್ತಿಯ ತಾಮಸ ಗುಣಗಳಿಗೆ 'ಒಪ್ಪದ ಶಿಶು', ಅಡಗ ಕಡಿದಲ್ಲಿ, ದಾಡೆ, ಉಗಳು, ಶಿಶುವಿನ ಹಗೆ ಈ ಪರಿ ಭಾಷೆಗಳು ವ್ಯಕ್ತಿಯ ಇರುವಿಕೆಯನ್ನು ನಿರ್ಧರಿಸುತ್ತವೆ. ಅರ್ಥದೊಳಗೆ–ಗೂಡಾರ್ಥಗಳನ್ನು ಅನ್ವಯಿಕರಿಸುವ ಆಲೋಚನೆ ಅತೀತಾರ್ಥವನ್ನು ನೀಡುತ್ತವೆ.

ಹೆಂಡದ ಮಾರಯ್ಯನ ವಚನದಲ್ಲಿ ಕರಣ ನಾಲ್ಕು, ಮದ ಎಂಟು, ವ್ಯಸನ ಏಳು ಅರಿಷಡ್ವರ್ಗಂಗಳಿಗೆ ಒಳಗಾಗಿ ಆಣವ, ಮಾಯಾ, ಕಾರ್ಮಿಕವೆಂಬ ಮೂರು ಸುರೆಯಲ್ಲಿ ಮುಳಗಿ, ವ್ಯಸನಿಯಾಗಿ ಸುಧೆಯನ್ನು ತರುವ ವಿಚಾರವೆಂತೂ ಶಿವನ ಸ್ಮರಣೆ ಎಂಬ ಅರ್ಪಣೆ ಭಾವ ಎನ್ನುವುದು ಅನಿಮಿತ್ಯ ಎನ್ನುತ್ತಾನೆ.

"ತತ್ವಾರ್ಥವ ಬಲ್ಲವಂಗೆ ಆ ತತ್ವಾರ್ಥವೆ ಕತ್ತಲೆಯ ಮಾಯೆ
ಆಧ್ಯಾತ್ಮವ ಬಲ್ಲವಂಗೆ ಆ ಪವನವೆ ತನ್ನ ಸುತ್ತಿದ ಮಾಯೆ
ಕ್ರೀಭಾವವಂತರಿಗೆ ಸಂದೇಹವೆ ಮಾಯೆ
ತನ್ನ ಬೆಂಬಳಿಯೆ ಮಾಯೆ" ೪೬

ಮಾಯೆಜೀವನ ಬೌದ್ಧಿಕ ಸಾಮರ್ಥ್ಯಕ್ಕೆ ಅನುಗುಣವಾಗಿಕಾಡುತ್ತದೆ. ತತ್ವಚಿಂತಕನೆನಿಸಿಕೊಂಡ ವ್ಯಕ್ತಿಗೆ ಅವನ ಅರಿವು ಮಾಯೆಯಾಗುತ್ತದೆ.ಆಧ್ಯಾತ್ಮ ಸಾಧಕನಿಗೆ ಮತೀತಾರ್ಥವೇ ಮಾಯೆಯಾಗಿದೆ. ಇಂತಹ ಸ್ಥಿತಿಯನ್ನು ವಾಸ್ತವದಲ್ಲಿ ಅರಿಯದಿರುವುದೆ ಮಾಯೆಯಾಗಿದೆ.

೪.೨೨ ಕೋಲಶಾಂತಯ್ಯ: ಮಾಯೆ ಜೀವನು ಮರ್ತ್ಯನಾಗಿ ಪರಿವರ್ತನೆ ಹೊಂದಿದ ಕಾರಣಕ್ಕಾಗಿ ಶುದ್ಧರೂಪದ ಶಕ್ತಿಯ ನಾಮರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಜೀವರನ್ನು ಹಲವು ಸಂಕಷ್ಟಗಳಿಗೆ ಈಡು ಮಾಡುತ್ತದೆ. ನಿಜದ ಅರಿವಾದಾಗ ಚಿತ್‌ಶಕ್ತಿ ಲಿಂಗ ಸ್ವರೂಪದಲ್ಲಿ ಪ್ರಕಟಗೊಳ್ಳುತ್ತದೆ. ಬಾಹ್ಯದಲ್ಲಿ ಪರಮಾತ್ಮನನ್ನು ಹುಡುಕುವುದಕ್ಕಿಂತ ಜೀವನು ತನ್ನತನವನ್ನು ಅರಿಯಬೇಕು. ಪರವಸ್ತುವಿನ ಸಾಕ್ಷಾತ್ಕಾರ ಅಂತರಗದಲ್ಲಿ ಸಾಧ್ಯ.

"ಹೇಮ ಬಣ್ಣವ ಕೂಡಿದ ದೆಸೆಯಿಂದ ಮರ್ತ್ಯರುಗಳಿಗೆ
ಆಗು ಚೇಗೆಗಳಾಗೀಡಾಯಿತ್ತು
ದಿವ್ಯ ನಿರಂಜನ ನಿಜವಸ್ತು ಭವ್ಯರ ಭಕ್ತಿಗಾಗಿ
ಶಕ್ತಿ ನಾಮರೂಪಾಗಿ ತಲ್ಲೀಯವಾಗಲ್ಪಟ್ಟುದು
ಶಕ್ತಿಸಮೇತವಾಗಿ ಲಿಂಗವಾಯಿತ್ತು
ಅದು ರಂಜನೆಯ ಬಣ್ಣ ಮಾಯದಗನ್ನ,
ಅಂಬರದ ಚಾಪದ ಸಂಚದ ವಸ್ತು

ಮುನ್ನಿನಂತೆ ನಿನ್ನ ನೀನಱಿ ಪುಣ್ಯಾರಣ್ಯದಹನ
ಭೀಮೇಶ್ವರಲಿಂಗ ನಿರಂಗಸಂಗ" [೪೭]

ಜೀವನು ಮರ್ತ್ಯನಾಗಿ ಪರಿವರ್ತನೆ ಹೊಂದಿದ ಕಾರಣಕ್ಕಾಗಿ ಶುದ್ಧ ರೂಪದ ಶಕ್ತಿಯು ನಾಮರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಹಲವು ಸಂಕಷ್ಟಗಳಿಗೆ ಈಡು ಮಾಡುತ್ತದೆ. ಷೋಡಶ ಉಪಚಾರದಲ್ಲಿ ಮಗ್ನನಾಗಿದ್ದು ವ್ಯಕ್ತಿ ಆ ಕುರಿತಾಗಿ ನಿಂದನೆ-ಆರೋಪ-ಪ್ರತ್ಯಾರೋಪಗಳನ್ನು ಮಾಡುವ ಇಂಗಿತವನ್ನು ಹೊಂದಿದ್ದರೆ ಲೌಕಿಕ ಬಯಕೆಯಲ್ಲಿ ಆಸೆಯನ್ನು ಹೊಂದಿದ್ದಾನೆ ಎಂದು ಭಾವಿಸಬೇಕಾಗುತ್ತದೆ. ಜೀವನು ಜ್ಞಾನ ಹೊಂದಿದ್ದೆನೆಂಬ ಅಹಂಭಾವ ಹೊಂದಿದಲ್ಲಿ ಮಾಯೆಯೆಂಬ ಪಾಶಕ್ಕೆ ಒಳಗಾಗಿ ಪುಣ್ಯವೆಲ್ಲ ಮಾಯವಾಗಿ ಜ್ಞಾನ ಮಂಕು ಕವಿಯುತ್ತದೆ. ಬಾಹ್ಯದಲ್ಲಿ ಪರಮಾತ್ಮನ ಹುಡುಕಾಟ ನಡೆಯತ್ತದೆ. ಎಂದು ವಚನಕಾರ ಸಂದೇಶ ನೀಡುತ್ತಾನೆ. ಜೀವಿಯಲ್ಲಿನ ಅಹಂಭಾವ ಮಾಯೆ ಆಗಿದೆ.

೪.೨೩ ನಿಜಗುಣ ಶಿವಯೋಗಿಗಳು: ಮಾಯೆ

"ಅನುಳ್ಳನ್ನಕ್ಕ ನೀನುಂಟೆಲೆ ಮಾಯೆ
ಆನಿಲ್ಲದಿರ್ದಡೆ ನೀನಿಲ್ಲ
ಆನು ನೀನೆಂಬುಭಯವಳಿಲು
ಆನಂದ ನಿಜಗುಣಯೋಗ" [೪೮]

ಎಂಬ ತಮ್ಮ ವಚನವೊಂದರಲ್ಲಿ ನಾನು-ನೀನು ಎಂಬ ಭೇದ ಭಾವವನ್ನು ಮೂಡಿಸಿಕೊಂಡು ಜೀವನಾಗಿ ವರ್ತಿಸುವಂತೆ ಮಾಯೆ ಮಾಡುತ್ತದೆ. ಅಹಂಭಾವವನ್ನು ಕಳೆದುಕೊಂಡ ಶರಣ ಅಥವಾ ಸಾಧಕನಿಗೆ 'ಮಾಯೆ'ಯಿಂದ ಯಾವುದೇ ತೊಂದರೆ ಆಗದು. ಅಹಂಭಾವದಲ್ಲಿ ತಲ್ಲೀನನಾಗಿ ವ್ಯವಹರಿಸುವ ವ್ಯಕ್ತಿ ಮಾಯೆಯ ಭಯ ಆತಂಕಗಳಿಗೆ ನಿರ್ಮುಕ್ತನಾಗದೆ ತೊಂದರೆ ಸಿಲುಕಿಕೊಂಡು ಭವಸಂಕಷ್ಟನಾಗುವ ಪರಿಯನ್ನು ನಿಜಗುಣ ಶಿವಯೋಗಿಗಳು ವ್ಯಕ್ತಪಡಿಸುತ್ತಾರೆ. ದೇವ-ಜೀವ ಎಂಬ ಭಿನ್ನತೆ ಮೂಡುವ ಸ್ಥಿತಿಯೆ ಮಾಯೆ ಆಗಿದೆ.

೪.೨೪ ಉರಿಲಿಂಗ ಪೆದ್ದಿಗಳು: ಮಾಯೆ ತಮ್ಮ ವಚನದಲ್ಲಿ ಜೀವಾತ್ಮ-ಪರಮಾತ್ಮರ ಸಂಬಂದವನ್ನು ಹೇಳುವಾಗ ಮಾಯೆಯ ಪ್ರಸ್ತಾಪವೆತ್ತಿದ್ದಾನೆ.

'ಪರಮಾತ್ಮ ಅಂತರಾತ್ಮ ಜೀವಾತ್ಮನೆಂದೆನಿಸಿ.......' [೪೯]

ಪರಮಾತ್ಮನು ತನ್ನ ಅಂಶವಾದ ಜೀವಾತ್ಮನನ್ನು ಸೃಷ್ಟಿಸಿ ಜೀವಾತ್ಮನನ್ನು ಮಾನವನಾಗಿಸಿ ಮಾಯೆಯ ಹಿಡಿತಕ್ಕೆ ಸಿಗುವಂತೆ ಮಾಡುತ್ತಾನೆ. ಪರಮಾತ್ಮನಿಂದ ವಿನೋದಕ್ಕೆ ಜೀವನನ್ನು ಮಾಯೆಯ ಕೈಯಲ್ಲಿಟ್ಟು ನಡೆವ ಘಟನೆಗಳನ್ನು ವೀಕ್ಷಿಸುತ್ತಾ

ಆನಂದಿಸುವನು. ಜೀವ ಇದೆಲ್ಲವನ್ನು ಅರಿತು ತ್ರಿವಿಧ ಪಾಶಗಳಿಂದ ಬಿಡಿಸಿಕೊಳ್ಳುವ ಪ್ರಯತ್ನಿಸುವ ಮೂಲಕ ನಿಜ ಶರಣನ ನಿಲುವನ್ನು ತೋರುವನು. ತನ್ನನ್ನು ಸತಿಯಾಗಿಸಿ, ಪತಿಯಾಗಿ ಈ ಮಾಯೆಯ ಪ್ರಭಾವದಿಂದ ಬಿಡಿಸಿದ ಮರೆವೆಯೆಂಬ ಭಾವದಿಂದ ಮುಕ್ತಗೊಳಿಸಿ ಅರಿವೆಂಬ ಪರಬ್ರಹ್ಮವೆಂಬ ಜೀವನಲ್ಲಿ ನೆಲೆಗೊಳಿಸುತ್ತಾನೆ.

೪.೨೫ ಕಿನ್ನರಿ ಬೊಮ್ಮಯ್ಯ: ಮಾಯೆ ಮಾಯೆ ಎಂಬುದು ಬರಿಯ ಹೆಂಗಸಾಗಿ ವಚನಕಾರನಿಗೆ ತೋರಿದೆ. ತನ್ನ ಸೌಂದರ್ಯದಿಂದ, ರೂಪ-ಲಾವಣ್ಯದಿಂದ ಜೀವನನ್ನು ಆಕರ್ಷಿಸುತ್ತದೆ. ಈ ಮಾಯೆ ಸಾಮಾನ್ಯವಾದುದಲ್ಲ, ಪರಮಾತ್ಮನಿಂದ ಸೃಷ್ಟಿಯಾದುದು. ಶಿವನೆಂಬ ಭಕ್ತಿ ಭಾವದಿಂದ ವರ್ತಿಸಿ ಶಿವನೊಡನೆ ಸಾಮರಸ್ಯ ಸಾಧಿಸಿದ ಸ್ಥಿತಿ ತಲುಪಿದಾಗ ಮಾಯೆಯನ್ನು ಗೆಲ್ಲಲು ಸಾಧ್ಯ. ಮಾಯೆಯನ್ನು ಸ್ತ್ರೀ ರೂಪಕ್ಕೆ ಸಂವಾದಿಯಾಗಿ ನೋಡುತ್ತಾನೆ.

"ನಿನ್ನ ಸ್ವರೂಪ ಕಂಡೆನ್ನ ದೃಷ್ಟಿನೆಟ್ಟುದೆನೆಗೆ
ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನೆಗೆ
....
ಮಹಾಲಿಂಗ ತ್ರಿಪುರಾಂತಕನೊಡ್ಡಿದ ಮಾಯೆಯ"[೫೦]

ಮಾಯೆ ಎಂಬುದು ಬರಿಯ ಹೇಂಗೂಸಾಗಿ ವಚನಕಾರನಿಗೆ ತೊದೆ.ತನ್ನ ಸೌಂದರ್ಯದಿಂದ ಮನುಜನನ್ನು ಆಕರ್ಷಿಸುತ್ತದೆ. ಪರಮಾತ್ಮನಿಂದ ಸೃಷ್ಟಿಯಾಗಿದ್ದು, ಪ್ರಭಾವಶಲಿಯಾದುದು. ನಿರ್ಮಲ ಭಾವದಿಂದ ವರ್ತಿಸಿಶಿವನೊಡನೆ ಸಾಮರಸ್ಯ ಸಾಧಿಸಿದಲ್ಲಿ ಮಾಯೆಯ ಪ್ರಭಾವದಿಂದ ಬಿಡಿಸಿಕೊಳ್ಳಲು ಸಾಧ್ಯ. ಮತ್ತೊಂದೆಡೆ ಮಾಯೆಯ ನೆಲೆಯನ್ನು ಪ್ರಸ್ತಾಪಿಸುತ್ತನೆ.

"ಕಾಯದಲ್ಲಿ ಕಳವಳವಿರಲು
ಪ್ರಾಣದಲ್ಲಿ ಮಾಯೆಯಿರಲು
ಏತರ ಗಮನ ಏತರ ನಿರ್ವಾಣ" [೫೧]

ಕಾಯ- ಪ್ರಾಣದಲ್ಲಿ, ಕಳವಳ ಹಾಗೂ ಮಾಯೆಯಿದ್ದರೆ ಆಗುವ ಪರಿಣಾಮವನ್ನು ಹೇಳುತ್ತಾನೆ. ಪ್ರಮುಖ ವಚನಕಾರರಾದ ಬಸವ, ಅಲ್ಲಮರ ಪ್ರಭಾವ ಈ ವಚನದಲ್ಲಿ ಕಂಡು ಬರುತ್ತದೆ. ಕಳವಳ ಎಂಬುದು ಕಾಯದ ಅಪೇಕ್ಷೆ ಈಡೇರದಿದ್ದಾಗ ಉಂಟಾಗುತ್ತದೆ. ಕಳವಳ ಮೂಡಿದರೆ ಅದನ್ನು ನೀಗಿಸಿಕೊಳ್ಳಲು ಕಾಯ ಚಿಂತಿಸುತ್ತದೆ. ಪ್ರಾಣದಲ್ಲಿ ಮಾಯೆ ಮೂಡಿದರೆ ಕಾಯ-ಪ್ರಾಣದ ಸಂಬಂಧ ಲೌಕಿಕದ್ದಾಗುತ್ತದೆ. ಜೀವ ಭವಿಯಾಗುತ್ತಾನೆ. ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವಲ್ಲಿ ಸೋಲುತ್ತಾನೆ. ಇಂತಹ ಮಾಯೆಯನ್ನು ಒಡ್ಡಿದ ಪರಮಾತ್ಮನೆ ತನ್ನನ್ನು ಮಾಯೆಯಿಂದ ಪಾರು ಮಾಡಬೇಕು. ಇಲ್ಲಿ ಮಾಯೆ ಕಾಯದ ಬೇಕುಗಳನ್ನು ನೀಗಿಸುವ ಸಾಧನವಾಗಿದೆ.

೪.೨೬ ನೂಲಿಯ ಚಂದಯ್ಯ: ಮಾಯೆ ಜೀವನನ್ನು ಮಾಯೆ ಕಾಡುವ ಪರಿ ಇಲ್ಲಿದೆ.

"ಸುಖ ದು:ಖ ಭೋಗಾದಿಭೋಗಂಗಳೆಲ್ಲವೂ
ಗುರುಲಿಂಗ ಜಂಗಮದ ಒಡಲಾಗಿ ಬೆಳೆಯುತ್ತಿಹವು
ತಾನವರ ಒಡಲುಗೊಂಡ ಕಾರಣ
ತನ್ನ ಬೆಂಬಳಿಯೆ ಮಾಯೆ" [೫೨]

ಲೋಕದಲ್ಲಿ ಭೋಗ-ಸುಖಗಳೆಲ್ಲವೂ ವ್ಯಾಪಿಸಿಕೊಂಡಿದೆ. ಗುರು, ಲಿಂಗ, ಜಂಗಮವನ್ನು ತನ್ನೊಳಗು ಮಡಿಕೊಂಡಿವೆ. ತನು ಇಂತಹ ಲೊಕದಲ್ಲಿ ಹುಟ್ಟಿದ ಕಾರಣಕ್ಕೆಅದು ತನ್ನನ್ನು ಬಿಡದು ಎಂಬ ನಿಶ್ಚಿತ ಅರಿವಿದೆ. ಲೌಕಿಕದ ವಿಷಯಾಸಕ್ತಿಗಳನ್ನು ಮೀರಿ ತನ್ನೊಳಗಿನ ಅರಿವನ್ನು ಎಚ್ಚರಿಸಿಕೊಂಡಾಗ ಚಂದೇಶ್ವರ ಸ್ವರೂಪಿ ಪರಮಾತ್ಮ ಅರಿವಿಗೆ ಬರುತ್ತಾನೆ. ತಾನು ಈ ಮಾಯೆಯನ್ನು ಮೀರಲು ಪರಮಾತ್ಮನ ಬೆಂಬಲ ಅಪೇಕ್ಷಿಸುವ ರೀತಿ ಮತ್ತೊಂದು ವಚನದಲ್ಲಿದೆ. ಕೆಳಗಿನ ವಚನದಲ್ಲಿ ಮಾಯೆ ಬೆಂಬಿಡದೇ ಕಾಡುವ ರೀತಿಯನ್ನು ಹೀಗೆ ಹೇಳುತ್ತಾನೆ.

"ಹಿಂದಣ ಭವಸಾಗರ ದಾಂಟದೆ
....
ಚಂದೇಶ್ವರನ ಕಾರುಣ್ಯವಾಯಿತ್ತಾಗಿ
ಗೆದ್ದನಯ್ಯ ಮಹಾಮಾಯೆಯ" [೫೩]

ಮಾಯೆಯನ್ನು ಗೆಲ್ಲುವುದು ಅಷ್ಟು ಸರಳವಲ್ಲ. ಪರಮಾತ್ಮನ ಕರುಣೆಯಿಂದ ಮಾತ್ರ ಸಾಧ್ಯ. ಭವಸಾಗರವ ದಾಟಿ ಮುಂದಿನ ಮುಕ್ತಿ ಪಥವನ್ನು ಸೇರಲು ಜ್ಞಾನ ತಾನು ನಂಬಿದ ಪರಮಾತ್ಮನಿಂದ ದೊರೆಯಿತು. ಮನೋಮಂದಿರದಲ್ಲಿ ಭಗವಂತ ನೆಲೆ ನಿಂತಲ್ಲದೆ ಮಾಯೆ ಮನುಜನಿಂದ ದೂರವಾಗದು. ಎನ್ನೊಳಗೆ ಭಗವಂತ ನೆಲೆ ನಿಂತು ಮಾಯೆಯನ್ನು ಗೆಲ್ಲುವ ಶಕ್ತಿಯನ್ನು ನೀಡಿದ್ದಾನೆ ಎಂಬ ಭಾವವಿದೆ. ಮಾಯೆ ಭವಸಾಗರ ಸ್ವರೂಪಿಯಾಗಿ ತೋರುತ್ತದೆ. ಈ ಮಾಯೆಯನ್ನು ಗೆದ್ದ ಬಗ್ಗೆ ಆತ್ಮವಿರ್ಶವಾಸವು ಇದೆ.

೪.೨೭ ಬಾಲಬೊಮ್ಮಣ್ಣ: ಮಾಯೆ ಮಾಯೆಯನ್ನು ಕಣ್ಣಿಗೆ ಕಾಣದ ಎಲ್ಲಕ್ಕೂ ಆರೋಪಿಸುತ್ತಾನೆ.

"ಕಂಡುದ್ದೆಲ್ಲವೂ ಜಗದ ಸೊಮ್ಮು
ಕಾಣುದದೆಲ್ಲವೂ ಮಾಯೆಯ ಸೊಮ್ಮು" [೫೪]

ಕಾಣುವ ಮತ್ತು ಕಾಣದಿರುವ ವಸ್ತುಗಳ ಬಗ್ಗೆ ಮಾತನಾಡುತ್ತಾನೆ. ಜಗತ್ತು ಕಣ್ಣಿಗೆ ಕಾಣುವುದಾದರೆ ಮಾಯೆ ಕಣ್ಣಿಗೆ ಕಾಣದ ಸ್ಥಿತಿ ಆಗಿದೆ. ಶರಣನಾದವನು ಕಂಡ ಜಗತ್ತನ್ನು ಕಾಣದ ಮಾಯೆಯನ್ನು ಎರಡನ್ನೂ ಸಮ ತೂಗಿಸಿಕೊಂಡು ತನ್ನ ತಾನರಿದಾಗ

ಲೌಕಿಕ ಬದುಕು ನಶ್ವರ ಎಂಬ ಅರಿವು ಮೂಡುತ್ತದೆ. ಲೋಕದ ಮೋಹ ಕಳೆದು ನಿರ್ಮಲ, ನಿಶ್ಚಲ, ನಿರ್ಭಾವ, ನಿವೃತ್ತ ನಾಗಲು ಸಾಧ್ಯವಾಗುತ್ತದೆ. ಇಲ್ಲಿ ಮಾಯೆ ಕಣ್ಣಿಗೆ ಕಾಣದ ರೂಪದಲ್ಲಿದೆ. ಆದ್ದರಿಂದ ಅಸಿ ಮಾಯೆಯನ್ನು ಅರ್ಥ ಮಾಡಿಕೊಳ್ಳಲು ತನ್ನೊಳಗಿನ ಅರಿವು ಬೇಕು ಎಂಬರ್ಥ ಮೂಡುತ್ತದೆ. ಕಣ್ಣಿಗೆ ಕಾಣುವ ಜಗತ್ತಿನಲ್ಲಿ ಮಾಯೆಯಿಂದ ಮುಕ್ತನಾಗುವ ಬಗೆಯನ್ನು ಹೇಳಿದ್ದಾನೆ.

"ಪ್ರಾಣಕೂ ಲಿಂಗಕೂ ಅನುಸಂಧಾನವ ಮಾಡಬೇಕೆಂಬಲ್ಲಿ

ರಾಗಾದಿ ವ್ಯಾಮೋಹ ತಥ್ಯ ಮಿಥ್ಯ ನಿಶ್ಚಯವಾದಲ್ಲಿ
ಅರಿದಲ್ಲಿಯೇ ಮಾಯಾಮಲ ಕರ್ಮಬಿಡದು"[೫೫]

ಲಿಂಗವನ್ನು ಪ್ರಾಣಲಿಂಗವಾಗಿ ಪರಿವರ್ತಿಸಿ ತನ್ನೊಳಗೆ ಶಿವನನ್ನು ಐಕ್ಯಗೊಳಿಸಿ ಕೊಳ್ಳುತ್ತದೆ. ರಾಗಾದಿ ವ್ಯಾಮೋಹವನ್ನು ತ್ಯಜಿಸಿ ತನ್ನತನವನ್ನು ಕಂಡುಕೊಳ್ಳಬೇಕು.ಮಾಯೆಯ ಹಿಡಿತಕ್ಕೆ ಸಿಕ್ಕ ಮನಸ್ಸು ತನ್ನ ತಾ ನಿಯಂತ್ರಣ ಮಾಡುವ ಮೂಲಕ ಆಧ್ಯಾತ್ಮಮಡುವುದಾಗಿದೆ. ಇಲ್ಲಿ ಮಾಯೆ ಪ್ರಬಲ ಹಾಗೂ ಪರಿಣಾಮಕಾರಿಯಾದುದು.

೪.೨೮ ಮಾದಾರ ಚೆನ್ನಯ್ಯ: ಮಾಯೆ

"ಶುಕ್ಲ ಶೋಣೀತ ಮಜ್ಜೆ ಮಾಂಸ ಹಸಿವು ತೃಷೆ
ವ್ಯಸನ ವಿಷಯಾದಿಗೊಂದೆ ಭೇದ
....
ಮರದಲ್ಲಿಯ ಮಲಮಾಯಾ ಸಂಬಂಧಿ
ಇಂತೀ ಉಭಯವನರಿದು ಮರೆಯಲಿಲ್ಲ"[೫೬]

ಜೀವನು ಲೌಕಿಕದಲ್ಲಿ ತೋರುವ ಕ್ರಿಯೆ ವರ್ತನೆಗಳು ಹಲವು, ಆದರೆ ಆತ್ಮದ ಸ್ವರೂಪ ಒಂದೆ. ಜಾತಿ-ಕುಲವನ್ನು ಮೀರಿ ಜೀವ ಅರಿವನ್ನು ಹೊಂದಲು ಸಾಧ್ಯ. ಜೀವನು ತನ್ನರಿವನ್ನು ಮರೆತಾಗ ಮಾಯೆ ಆವರಿಸುತ್ತದೆ. ಜೀವ- ಆತ್ಮ ಬೇರೆ ಬೇರೆಯಾಗಿ ನಿಲ್ಲುತ್ತದೆ. ಇಂತಹ ಉಭಯವನು ಮೀರಿ ನಿರ್ಭಯ ಲಾಗಬೇಕು. ಮಾಯೆ ಜೀವದ ಅರಿವಿನ ಮರೆವಾಗಿ ತೋರುತ್ತದೆ.

೪.೨೯ ಸಿದ್ಧರಾಮೇಶ್ವರ: ಮಾಯೆ

"ಎಂತು ಮಾಯಸುಖವ ಸಂತತಂ ಗೆಲುವತ
ನಿಶ್ಚಿಂತನಕ್ಕು ತಾನಿಹಪರದಲಿ
ಸಂತತ ನಿಶ್ಚಿಂತನಪ್ಪಾತ ಕಪಿಲ
ಸಿದ್ಧಮಲ್ಲಿಕಾರ್ಜುನ ತಾನಪ್ಪನು" [೫೭]

ಈ ವಚನದಲ್ಲಿ ಸಾಮಾನ್ಯಿಕರಿಸಿದ ರೀತಿಯಲ್ಲಿ ನಿರೂಪಿಸಿದ್ದಾನೆ. ಎಂತು ಮಾಯಾಸುಖವ' ಎಂಬುದುಸಾಮಾನ್ಯನನ್ನು ಅಥವಾ ಭವಿಯನ್ನು ದೃಷ್ಟಿಯಲ್ಲಿರಿಸಿ ಹೇಳಲಾಗಿದೆ.ಲೌಕಿಕವನ್ನು ಒಪ್ಪಿ ಬಾಳುವ ವ್ಯಕ್ತಿಗೆ ಮಾಯೆ ಹಿತವಾಗಿ ತೋರುತ್ತದೆ. ಅದರಿಂದ ಹೊರಬರಬೇಕು ಎಂಬ ಭಾವ ಮೂಡಲು ಸಾಧ್ಯವಿಲ್ಲ. ಶರಣನಾಗಬೇಕೆಂದು ಸಾಧನೆ ಮಾಡಲು ಹೊರಟವನು ಮಾಯೆಯೆಂಬ ಸುಖವನ್ನು ತ್ಯಜಿಸಬೇಕು ಮಾಯೆ ಎಂಬುದರ ಸೆಳೆತದಿಂದ ನಿರಂತರವಾಗಿ ದೂರವಿರಬೇಕು.ಯವುದೋ ಒಂದು ಸಂದರ್ಭಕ್ಕೆ ಮಾಯೆಯನ್ನು ಗೆದ್ದೆ ಎನ್ನಲಾಗದು ಎಂಬ ಕಾರಣಕ್ಕೆ 'ಸಂತತಂ ಗೆಲುವಾತ' ಎನ್ನುತ್ತಾನೆ. ನಿರಂತರವಾಗಿ ಮಾಯಾ ಮುಕ್ತ ಸ್ಥಿತಿಯಲ್ಲಿದ್ದಾಗ ಮನಸ್ಸು ನಿರ್ಮಲ, ನಿಶ್ಚಲವಾಗುತ್ತದೆ. ಇಲ್ಲಿ ಮಾಯೆ ಎಂಬುದು ಲೌಕಿಕ ಸುಖ ಎಂಬ ಅರ್ಥ ಪಡೆದುಕೊಂಡಿದೆ. ಲೌಕಿಕ ಸುಖ ಎಂಬುದು ಸಕಲ ಆಸೆ ಆಕಾಂಕ್ಷೆಗಳನ್ನು ಒಳಗೊಂಡಿದೆ.

೪.೩೦ ಮನಮುನಿ ಗುಮ್ಮಟದೇವ: ಮಾಯೆ

"ಮಾಯೆಯ ಗೆದ್ದೆಹೆನೆಂದು, ಮತಿಮಂದಿರದಲ್ಲಿ
ಕಂದಮೂಲಾದಿಗಳ ಫಲಪರ್ಣಂಗಳಿಂದ
ಕಾಲವ ವಂಚಿಸಿಹೆನೆಂದು ಇದ್ದುದೆ ಮಾಯಸಂಬಂಧ
ಅದು ದ್ವೇಷದ ಭ್ರಂತಲ್ಲದೆ,ಶಾಂತಿಯ ಕಲೆಯಲ್ಲ"[೫೮]

ಇಲ್ಲಿ ಸಂನ್ಯಾಸಿಯಾಗ ಹೊರಟ ವ್ಯಕ್ತಿಯ ಚಿತ್ರಣವಿದೆ. ಲವಕಿಕವನ್ನು ತ್ಯಜಿಸಿ ಕಾಡಿನಲ್ಲಿದ್ದು ಕಂದ ಮೂಲಾದಿಗಳ ಸೇವಿಸಿ, ತಪಸ್ಸಾಚರಿಸಿದರೆ ಮಾಯಮುಕ್ತನಾಗಲು ಅಸಾಧ್ಯ. ಬದಲಿಗೆ ಈ ಕ್ರೀಯೆಯ ಮಾಯೆಯ ಕ್ರಿಯಾರೂಪವಾಗಿದೆ. ತನು ಸಾಧಕನಾದೆ ಎಂದು ಹೆಮ್ಮೆ ಪಡುತ್ತಾನೆ. ಈ ತಾನೇನು ಎಂಬ ಅರಿವನ್ನು ಮರೆತು ಅಹಂಕಾರಿಯಾಗಿ ವರ್ತಿಸುವಂತೆ ಮಾಡುವುದೇ ಮಾಯೆ. ಇದರಿಂದ ಸಕಾರಾತ್ಮಕ ಪ್ರಭಾವಳಿಗಿಂತ ನಕಾರಾತ್ಮಕ ಪ್ರಭಾವವೇ ಹೆಚ್ಚಾಗುತ್ತದೆ. ಹಲವಾರು ವಚನಕಾರರು ಬಸವಣ್ಣನ ಜೊತೆಯಾಗಿಯೇ ಬದುಕಿ, ತಮ್ಮದೇ ಆದ ಬದುಕಿನ ಸ್ತರದಲ್ಲಿ ನಿಂತು ಮಾಯೆಯ ಕುರಿತು ಅರ್ಥೈಸಿದ್ದಾರೆ.

ಬಸವ ಅಲ್ಲಮಾದಿ ವಚನಕಾರರ ಜೊತೆ ಜೊತೆಯಾಗಿ ಬರುವ ವಚನಕಾರ್ತಿಯರು ಹಾಗೂ ಅವರ ವಚನಗಳನ್ನು ಗಮನಿಸಿದಾಗ ವಚನಕಾರರಿಗೆ ಸಮಾನ ಎನ್ನುವಷ್ಟರಮಟ್ಟಿಗೆ ವಚನಕಾರ್ತಿಯರ ವಚನಗಳು ರಚನೆಯಾಗಿದ್ದು ಅವುಗಳಲ್ಲಿ 'ಮಾಯೆ' ಕುರಿತು ಗಮನಿಸುವ ಕಾರ್ಯ ಕೈಗೊಳ್ಳಲಾಗಿದೆ.

ವಚನಕಾರ್ತಿಯರಲ್ಲಿ 'ಮಾಯೆ' ಗುರುತಿಸುವಾಗ ಅಕ್ಕನನ್ನು ಹೊರತುಪಡಿಸಿ ಉಳಿದಂತಹ ಸ್ತ್ರೀಯರ ವಚನಗಳನ್ನು ಮುಖ್ಯವಾಗಿಸಿಕೊಟ್ಟುಕೊಳ್ಳಲಾಗಿದೆ. ಇಲ್ಲಿ ಅಕ್ಕನನ್ನು ಹೊರತುಪಡಿಸುವುದಕ್ಕೆ ಕಾರಣವನ್ನು ಗಮನಿಸುವುದು ಇಲ್ಲಿ ಮುಖ್ಯವಾಗುತ್ತದೆ. ೧೨ನೇ

ಶತಮಾನದ ಸಾಮಾಜಿಕ ಪರಿಸರದಲ್ಲಿ ಅಕ್ಕನನ್ನು ಒಳಗೊಂಡು ಎಲ್ಲ ವಚನಕಾರ್ತಿಯರು ಬದುಕನ್ನು ನಡೆಸಿದ್ದಾರೆ. ಆದರೆ ಅಕ್ಕ ತನ್ನ ಸುತ್ತ ಇರುವ ಸಾಮಾಜಿಕ ಸನ್ನಿವೇಶಗಳನ್ನು ಗ್ರಹಿಸಿದ ಮನಸ್ಥಿತಿ ಅವಳನ್ನು ಉಳಿದ ವಚನಕಾರ್ತಿಯರಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ. ಸಾಮಾಜಿಕ ಬದುಕನ್ನು ಸ್ವೀಕೃತಗೊಳಿಸಿಕೊಂಡ ವಚನಕಾರ್ತಿಯರ ಬದುಕು ವಚನಗಳ ಭಿನ್ನರಚನೆಗೆ ಎಡೆಮಾಡಿಕೊಟ್ಟಿದೆ. ವಚನಕಾರ್ತಿಯರಲ್ಲಿ ಕಾಣುವ ಮತ್ತೊಂದು ಅಂಶವೆಂದರೆ ಅವರ ವಚನಗಳ ಅಂಕಿತ. ಬಹುತೇಕ ವಚನಕಾರ್ತಿಯರು ಬಳಸುವ ಅಂಕಿತನಾಗಳು ಪುರುಷ ನೆಲೆಯಲ್ಲಿ ಗ್ರಹಿಸಲ್ಪಟ್ಟ ಪರಮಾತ್ಮನನ್ನು ನೆನೆಯುವ ರೀತಿಯಲ್ಲಿ ರಚನೆಯಾಗಿವೆ. ಆದರೆ ಅಕ್ಕ ನೇರವಾಗಿ ಚೆನ್ನಮಲ್ಲಿಕಾರ್ಜುನನ ಜೊತೆ ಸಂವಾದದಲ್ಲಿ ತೊಡಗುತ್ತಾಳೆ.

ಈ ರೀತಿಯಾಗಿ ಅಕ್ಕನಿಗಿಂತ ಭಿನ್ನ ಸಾಮಾಜಿಕ ಪರಿಸರದಲ್ಲಿ ಬದುಕಿದ ವಚನಕಾರ್ತಿಯರು 'ಮಾಯೆ' ಸ್ವರೂಪವನ್ನು ಕಾಣುವ ನೆಲೆಗಳನ್ನು ವಚನಗಳ ಮೂಲಕ ಅಭಿವ್ಯಕ್ತಿಗೊಂಡ ಬಗೆಯನ್ನು ಇಲ್ಲಿ ಲಕ್ಷಿಸಲಾಗಿದೆ. 'ಶಿವಶರಣೆಯರ ವಚನಗಳು' ಎಂಬ ಕೃತಿಯಲ್ಲಿ 'ಮಾಯೆ'ಯನ್ನು ಗಮನಿಸಿದಾಗ ಆಯ್ದ ಕೆಲವರಲ್ಲಿ ಮಾತ್ರ ಪ್ರಸ್ತಾಪಗೊಂಡಿದೆ. ಮುಕ್ತಾಯಕ್ಕ, ಅಮ್ಮುಗೆ ರಾಯಮ್ಮ, ಅಕ್ಕಮ್ಮ, ಲಿಂಗಮ್ಮ, ಮೋಳಿಗೆ ಮಹಾದೇವಿಯಮ್ಮ ಇತ್ಯಾದಿ ಆಯ್ದ ವಚನಕಾರ್ತಿಯರ ವಚನಗಳನ್ನು 'ಮಾಯೆ' ನೆಲೆಯಲ್ಲಿ ಗಮನಿಸಲಾಗಿದೆ. ಈ ಸಂದರ್ಭದಲ್ಲಿ 'ಮಾಯೆ' ಕುರಿತಾಗಿ ವಚನಕಾರ್ತಿಯರ ಆಲೋಚನೆಗಳು ಅಭಿವ್ಯಕ್ತಗೊಂಡ ಬಗೆಯನ್ನು ತಾತ್ವಿಕ ವಿಶ್ಲೇಷಣೆಗೆ ಒಳಪಡಿಸುವುದಾಗಿದೆ.

೪.೩.೧ ಮುಕ್ತಾಯಕ್ಕ: ಮಾಯೆ ವಚನಕಾರ್ತಿಯರಲ್ಲಿ ಒಬ್ಬಳಾದ ಮುಕ್ತಾಯಕ್ಕನ ವಚನ ಹೀಗಿದೆ–

"ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯೆವಿಲ್ಲ
ಭಾವದೊಳಗೆ ಭ್ರಮೆಯಿಲ್ಲ
ಕರೆದು ಬೆಸಗೊಂಬಡೆ ಕುರುಹಿಲ್ಲ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯಳಾನಯ್ಯಾ"[೫೫]

ಕಾಯದಲ್ಲಿ ಮಾಯೆ ಇರುವವರೆಗೆ ನಾನು ಎಂಬ ಭಾವ ಇರುತ್ತದೆ. ಮಾಯೆ ಮರೆಯಾದಾಗ 'ನಾನು' ಎಂಬ ಕುರುಹು ಕೂಡಾ ಮರೆಯಾಗುತ್ತದೆ ಎಂಬಲ್ಲಿ ಮಾಯೆ ಎಂಬುದು ಕಾಯುವನ್ನು ಆವರಿಸುವಂಥದ್ದು ಕಾಯದ ಮೂಲಕ ಭಾವವನ್ನು ವಿಶುದ್ಧಗೊಳಿಸಬಲ್ಲದ್ದಾಗಿ ತೋರುತ್ತದೆ. ಇಲ್ಲದ್ದೆಲ್ಲವನ್ನು ಕಲ್ಪಿಸಿ, ಭಾವಿಸಿ ಭ್ರಮಿಸುವಲ್ಲಿ ಮಾಯೆ ಕಾರಣವಾಗುತ್ತದೆ.

೪.೩.೨ ಅಮ್ಮುಗೆ ರಾಯಮ್ಮ: ಮಾಯೆ ನೇರ ನಿಷ್ಠುರವಾದಿಯಾಗಿ ಕಾಣುವ ರಾಯಮ್ಮ

ಮಾಯೆ ಕುರಿತು ಮಾತನಾಡುತ್ತಾಳೆ. 'ಸುಳಿವ ಸುಳುಹು ಅಡಗಿತ್ತೆನಗೆ

"ಎನ್ನ ಕಂಗಳ ಕಾಮು ಕಳೆಯಿತ್ತು
ಅರಿದನೆಂಬ ಮನ ಅಡಗಿದುದ ಕಂಡು
ನನ್ನ ನಾನೆ ತಿಳಿದು ನೋಡಿ
....
ಅಮುಗೇಶ್ವರಲಿಂಗಕ್ಕೆ ಅಧಿಕನಾದನಯ್ಯ ಪ್ರಭುದೇವರು"[೬೦]

ಮಾಯೆಯಿಂದ ಮುಕ್ತವಾಗುವ ಹಂತದಲ್ಲಿ ಆಗುವ ಪರಿವರ್ತನೆಗಳನ್ನು ಹೇಳುತ್ತಲೇ 'ಮಾಯೆ' ಸ್ವರೂಪವನ್ನು ಪ್ರಸ್ತಾಪಿಸುತ್ತಾಳೆ. ಮಾಯೆ ಎಂಬುದು ಭವಿಗಳನ್ನು ಆವರಿಸುವಂಥದ್ದು ಮತ್ತು ದೇವರುಗಳನ್ನು ಆವರಿಸಿಕೊಳ್ಳುವಂಥದ್ದು. ಮಾಯೆಯಿಂದ ಮುಕ್ತನಾದವನು ಪ್ರಭುದೇವರು. ಅಲ್ಲಮನೇ ಭಗವಂತನಿಗೆ ಪ್ರಿಯನಾಗುವನು.

ಮಾಯೆ ಲೌಕಿಕಕ್ಕೆ ಸಂಬಂಧಿತವಾಗಿ ರೂಪ ಪಡೆಯುತ್ತದೆ. ಆಧ್ಯಾತ್ಮದಿಂದ ಮಾತ್ರ ಮುಕ್ತಗೊಳ್ಳುತ್ತದೆ ಎಂದು ಹೇಳುವಲ್ಲಿ ಈ ಕೆಳಗಿನ ವಚನ ಪೂರಕವಾಗಿ ತೋರುತ್ತದೆ.

"ಆಸೆಯುಳ್ಳವಂಗೆ ಮಾಟ ಕೂಟವಲ್ಲದೆ
ನಿರಾಸೆಯುಳ್ಳವಂಗೆ ಮಾಟಕೂಟವೇಕೆ?
ಪರಿಣಾಮಿಗೆ ಮತ್ಸರವೇಕೆ?
ಸುತ್ತಿದ ಮಾಯಾ ಪ್ರಪಂಚವ ಜರಿದವಂಗೆ
ಅಂಗನೆಯರ ಹಿಂದು ಮುಂದು ತಿರುಗಲೇಕೆ?
.... ಷೋಡಶೋಪಚಾರದ ಹಂಗೇಕೆ?"[೬೧]

ಡಾಂಭಿಕ ಭಕ್ತನ ಅಥವಾ ಡಾಂಭಿಕ ಶರಣನ ವರ್ತನೆಗಳ ಕುರಿತು ಮಾತನಾಡುವ, ಪ್ರಶ್ನಿಸುವ ಸಂದರ್ಭದಲ್ಲಿ ಆಸೆ, ಮತ್ಸರ, ಹೆಣ್ಣಿನ ಮೋಹ ಇವು ಭವಿಯನ್ನು ಕಾಡುಂವಥವು. ನಿಜವಾದ ಶರಣನಿಗೆ ಇವುಗಳಿಂದ ಯಾವ ಪರಿಣಾಮವು ಆಗುವುದಿಲ್ಲ. ಲೋಕವನ್ನು ನಿಂದಿಸಿ ಮತ್ತೊಂದು ರೀತಿ ವರ್ತಿಸಲು ಸಾಧ್ಯವಾಗುವುದಿಲ್ಲ ಎಂಬ ವಿರಣೆಗಳ ಮಧ್ಯೆ 'ಮಾಯೆ' ಪ್ರಭಾವದಿಂದಲೇ, ಶಕ್ತಿಯಿಂದಲೇ ಜಗತ್ಸೃಷ್ಟಿ ಸಾಧ್ಯ ಎಂಬ ಮಾತು ಬರುತ್ತದೆ. ಅಂದರೆ 'ಮಾಯೆ'ಯಿಂದಲೇ ಈ ಪ್ರಪಂಚ. ಮಾಯಾವೃತನಾದವನಿಗೆ ಆಸೆ, ಮೋಹಗಳು ಆವರಿಸಲ್ಪಡುತ್ತವೆ. ಮಾಯೆ ಮನುಷ್ಯನ ಬೇರೆ ಬೇರೆ ರೂಪ ಭಾವಗಳಲ್ಲಿ ಪ್ರಕಟಗೊಳ್ಳುತ್ತದೆ. ಹಿಂದೂ ಮತ ದರ್ಶನಗಳಲ್ಲಿ ಮಾಯೆ ಶಕ್ತಿಸ್ವರೂಪಿಣಿಯಾಗುವ ಪರಿಗೂ ಇಲ್ಲಿ ಪ್ರಸ್ತಾಪಗೊಳ್ಳುವ ವಿಧಾನಕ್ಕೂ ಹೋಲಿಕೆ ಇದ್ದಂತೆ ತೋರುತ್ತದೆ.

'ಮಾಯೆ' ಎಂಬುದು ಪರಶಿವನಿಂದ ಉದಿಸಿದ ಶಕ್ತಿಯಾದರೂ ಕೆಲವೊಮ್ಮೆ ಅವರನ್ನು ಆವರಿಸುತ್ತದೆ. 'ಚಂದ್ರ ಸೂರ್ಯರಿಬ್ಬರೂ ಬಂಧನಕ್ಕೆ ಬಪ್ಪುದ ಕಂಡೆ

....

ದೇವದಾನವ ಮಾನವರು ಮಾಯಾಯೋನಿ ಮುಖವಾದುದ ಕಂಡೆ

ಬಟ್ಟ ಬಯಲಲ್ಲಿ ನಿಮದು ನಿಮ್ಮ ಮುಟ್ಟಿದೆನಯ್ಯಾ ಅಮುಗೇಶ್ವರ"[೮೧]

'ಮಾಯೆ' ಎಂಬುದು ಶಕ್ತಿಶಾಲಿಯಾದದು. ಚಂದ್ರ ಸೂರ್ಯರು ಮಾಯೆಯಿಂದ ಬಂಧನಕ್ಕೆ ಒಳಗಾದರೆ ದೇವತೆಗಳು ಭವದಲ್ಲಿ ಹುಟ್ಟಿ ತಮ್ಮಲ್ಲಿನ ದೈವತ್ವವನ್ನು ಕಳೆದುಕೊಳ್ಳುವರು.

ಅಂದರೆ 'ಮಾಯೆ' ಎಂಬುದು ಪ್ರಕೃತಿಯ ಮೂಲರೂಪವನ್ನು ಬದಲಿಸಬಲ್ಲದು. ದೇವತೆಗಳನ್ನು ಭವಿಗಳಾಗಿ ಬದಲಿಸಬಲ್ಲಂಥ ಸಮರ್ಥಶಕ್ತಿಯಾಗಿ ತೋರುತ್ತದೆ. ಮಾಯಾಯೋನಿಮುಖವಾಗುವುದು ಎಂದರೆ ಲೌಕಿದತ್ತ ಬಾಗುವುದು ಅಥವಾ ಸಂಸಾರಿಯಗುವುದು ಎಂದರ್ಥ.

೪.೩೩ ಶರಣೆ ಅಕ್ಕಮ್ಮ: ಮಾಯೆ ವ್ರತ ಎಂದರೆ ಏನೆಂಬುದನ್ನು ಹೇಳುವಲ್ಲಿ 'ಮಾಯೆ' ಯ ಬಗ್ಗೆ ಹೇಳುತ್ತಾಳೆ.

"ವ್ರತ ಎಂಬುದೇನು? ಮನ ವಿಕಾರಿಸುವದಕ್ಕೆ ಕಟ್ಟಿದ ಗೊತ್ತು

ಜಗದ ಕಾಮಿಯಂತೆ ಕಾಮಿಸದೆ

ಜಗದ ಕ್ರೋಧಿಯಂತೆ ಕ್ರೋಧಿಸದೆ

ಜಗದ ಲೋಭಿಯಂತೆ ಲೋಭಿಸದೆ

ಮಾಯಾ ಮೋಹಗಳು ವರ್ಜಿತವಾಗಿ

....

ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಂಗ"[೮೨]

ವ್ರತ ಎಂಬ ಕ್ರಿಯೆ ಬಹಿರಂಗದಲ್ಲಿ ತೋರುವಂಥದ್ದು. ಆದರೆ ಮನದ ವಿಕಾರಕ್ಕೆ ಕಾರಣವಾಗುತ್ತದೆ. ಕಾಮ, ಕ್ರೋಧ, ಲೋಭ ಇವುಗಳ ಆವರಿಸುವಿಕೆ ಎಂದರೆ ಮಾಯೆ ಆವರಿಸಿದಂತೆ. ತನು-ಮನಗಳೆರಡು ಸ್ವೇಚ್ಛೆಯಿಂದ ವರ್ತಿಸುತ್ತವೆ. ಇಂತಹ ವ್ಯಕ್ತಿ ಸದ್ಭಕ್ತನಾಗಲಾರ, ಶರಣನಾಗಲಾರ ಎಂಬುದನ್ನು ಪರೋಕ್ಷವಾಗಿ ಹೇಳುತ್ತಾಳೆ. ಭವದಲ್ಲಿನ ಕ್ರಿಯೆಗಳಿಗೆ ವಿರುದ್ಧವಾದ ಅಥವಾ ಭಿನ್ನವಾದ ಕ್ರಿಯೆ ನಿಜಶರಣನಲ್ಲಿ ಅಳವಟ್ಟಿರುತ್ತದೆ ಎಂಬ ಮಾತನ್ನು ಹೇಳುತ್ತಲೇ ಮಾಯೆ ಲೌಕಿಕದಲ್ಲಿ ಕಾಣುವ ವ್ಯಕ್ತಿಯಲ್ಲಿ ಆವರಿಸಿ ಕೊಂಡಿರುತ್ತದೆ ಎಂದು ಹೇಳಿದ್ದಾಳೆ.

೪.೩೪ ಶರಣೆ ಲಿಂಗಮ್ಮ: ಮಾಯೆ ಆಧ್ಯಾತ್ಮಿಕ ಸಾಧನೆಯಿಂದ ಅನುಭಾವಿಯಾಗಿ ಕಾಣುವ ಹಡಪದ ಅಪ್ಪಣ್ಣನ ಸತಿಯಾಗಿ ಶರಣೆ ಲಿಂಗಮ್ಮ ಗುರುತಿಸಲ್ಪಟ್ಟಿದ್ದಾಳೆ. ತನ್ನ ವಚನಗಳಲ್ಲಿ 'ಮಾಯೆ' ಕುರಿತು,

"ಮನವೆಂದೆಡೆ ಮರವೆಗೆ ಒಳಗು ಮಾಡಿತ್ತು
ತನುವೆಂದೆಡೆ ತಾಮಸಕ್ಕೊಳಗು ಮಾಡಿತ್ತು
ಧನವೆಂದಡೆ ಆಸೆಯೆಂಬ ಪಾಶಕ್ಕೊಳಗು ಮಾಡಿತ್ತು
ಇವೀಸು ಮಾಯಾ ಪಾಶವೆಂದು ಬಿಟ್ಟು ಹುಟ್ಟನರಿದು
ಬಟ್ಟ ಬಯಲಲ್ಲಿ ನಿಂದು ಚಿತ್ತ ನಿರ್ಮಲನಾಗಿ ನೋಡಿ
....
ನರಗುರಿಗಳಾದರಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ" [೬೩]

ಇಲ್ಲಿ ಮಾಯೆ ತನು-ಮನ-ಧನಗಳ ಮೂಲಕ ಜೀವಿಯನ್ನು ತಾಮಸಕ್ಕೆ-ಮರವಿಗೆ-ಆಸೆಗೆ ಈಡುಮಾಡುತ್ತದೆ. ಮಾಯೆ ಎಂಬುದು ಜೀವವನ್ನು ಆವರಿಸುವಲ್ಲಿ ಆಯ್ದುಕೊಂಡ ಮಾರ್ಗತ್ರಯಗಳಾಗಿವೆ. ಮಾಯೆ ತನು-ಮನ-ಧನಗಳ ಮೂಲಕ ಚಂಚಲತೆಯನ್ನು ಪ್ರಸ್ತಾಪಿಸುತ್ತದೆ.

ಮತ್ತೊಂದಡೆ ನಿಜಶರಣ ನೆಲೆಯ ಅರಿಯದವರ ಕುರಿತು 'ಮಾಯೆ' ಬಗ್ಗೆ ಹೇಳುತ್ತಾಳೆ.

"ಮಾಯದ ಬೊಂಬೆಯ ಮಾಡಿ ಕಂಗಳಿಗೆ ಕಾಮನ ಬಾಣವ ಹೂಡಿ
ನಡೆ ನುಡಿಯೊಳಗೆ ರಂಜಕದ ತೊಡಿಗೆಯನೆ ತೊಡಿಸಿ
ಮುಂದುಗಾಣಿಸದೆ ಹಿಂದುನರಸದೆ ಲಿಂಗವ ಮರಹಿಸಿ
ಜಂಗಮವ ತೊರೆಯಿಸಿ ಸಂದೇಹದಲ್ಲಿ ಸತ್ತು ಹುಟ್ಟುವ
ಈ ಭವಬಂಧನಿಗಳೆತ್ತ ಬಲ್ಲರೋ ಈ ಶರಣರ ನೆಲೆಯಾ" [೬೪]

ಈ ಲೋಕದ ಜೀವಿಗಳು ಮಾಯೆ ಕೈಯಲ್ಲಿ ಸಿಕ್ಕಾಗ ಸೂತ್ರದ ಬೊಂಬೆಯಂತೆ ವರ್ತಿಸುತ್ತಾರೆ. ನೋಡುವ ನೋಟದಲ್ಲಿಯೇ ಕಾಮಿಸುವ ಪ್ರವೃತ್ತಿ, ನಡೆ-ನುಡಿಯಲ್ಲಿ ಡಾಂಭಿಕ ಪ್ರವೃತ್ತಿಯನ್ನು ಮೂಡಿಸುತ್ತದೆ. ಜೀವಿ ತನ್ನ ಅಸ್ತಿತ್ವವನ್ನು ಮರೆಯುವಂತೆ ಮಾಡುತ್ತದೆ. 'ಮಾಯೆ' ತಾತ್ಕಾಲಿಕವಾಗಿ ಆವರಿಸುವ ಸಂಚಾರಿ ಭಾವದಂತೆ ಕಂಡರೂ ಜೀವಿಯಲ್ಲಿ ಸ್ಥಾಯಿಯಾಗಿ ನಿಲ್ಲುತ್ತದೆ. ಜೀವಿ ಅದನ್ನು ಸತ್ಯವೆಂದು ಭ್ರಮಿಸುತ್ತದೆ. ಇಂತಹ ತಾತ್ಕಾಲಿಕ ಭಾವ ಹೊಂದಿದ ಮನುಜನ ಪಾಡು ಹೇಗಿರುತ್ತವೆ ಎಂಬುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದಾಗಿದೆ.

"ಹುಟ್ಟಿದ ಮನುಜರೆಲ್ಲಾ ಬಂದ ಬಟ್ಟೆಯ ನೋಡಿ
ಭ್ರಮೆಗೊಂಡು ಬಳುತ್ತೈದಾರೆ
ಸಪ್ತವ್ಯಸನ ಒಂದು ಒತ್ತರಿಸುತಿವೆ
....

ಕರಣಂಗಳು ಬೆಂದು ಉರಿವುತಿದೆ"[೬೫]

'ಮಾಯೆ' ಎಂಬುದು ಮರವೆಯಾಗಿ ಆವರಿಸುತ್ತದೆ. ಇದೇ ಮಾಯೆ ಕಾಯದಲ್ಲಿ ಸಪ್ತವ್ಯಸನವಾಗಿ ಅರಿಷಡ್ವರ್ಗಗಳಾಗಿ, ದಶವಾಯುವಾಗಿ, ಇತ್ಯಾದಿಯಾಗಿ ಆವರಿಸಿ ಬಿಡುತ್ತದೆ. ಇದರಿಂದ ಜೀವಾತ್ಮ ತನ್ನ ಅರಿವನ್ನು ಮರೆತು ಭಿನ್ನ ಕ್ರಿಯಾ ಸ್ವರೂಪವನ್ನು ತೋರುತ್ತದೆ ಎಂದು ಮಾಯೆ ಸ್ವರೂಪ ವ್ಯಾಪಕತೆಯನ್ನು ಪ್ರಸ್ತಾಪಿಸಿದ್ದಾಳೆ.

೪.೩೫ ಮೋಳಿಗೆ ಮಹಾದೇವಿಯಮ್ಮ: ಮಾಯೆ ವಚನಕಾರ್ತಿಯರಲ್ಲಿ ಪ್ರಮುಖಳಾಗಿ ಕಾಣುವ ಮೋಳಿಗೆ ಮಹಾದೇವಿಯಮ್ಮ ತನ್ನ ವಚನದಲ್ಲಿ ಮಾಯೆ ಸ್ವರೂಪ ಪ್ರಸ್ತಾಪಿಸುತ್ತಾಳೆ.

"ನಿಮಿತ್ತ-ಲಗ್ನ ಮಾಯಾ-ಮರುವಡಿ ಬೇಳುವೆ
ಮೂಲಿಕೆಯಿಂದ ಕಡೆಯೆ ನಿನ್ನ ಇರವು?

....

ನಿನ್ನ ಗುಣವ ನಾನಿನ್ನರಿದು ಮುಟ್ಟಿದೆನಾದಡೆ ಪಂಚಮಹಾಪಾತಕ
ಎನ್ನಲ್ಲಿ ಸನ್ನದ್ಧನಗಿರು ಎನ್ನಯಪ್ರಿಯ ನಿಃಕಳಂಕ ಮಲ್ಲಿಕಾರ್ಜುನಾ"[೬೬]

ಲೌಕಿಕ ಬದುಕಿನಲ್ಲಿ ಅಸ್ತಿತ್ವ ಪಡೆದಿರುವ ಜೀವಾತ್ಮನನ್ನು ಆವರಿಸುವ ನಿಮಿತ್ತ ಲಗ್ನ ಮಾಯಾ, ಮರುವಡಿ, ಬೇಳುವೆ ಎಲ್ಲವೂ ಮಾಯೆಯ ವಿವಿಧ ಮುಖಗಳಾಗಿವೆ. ಇವುಗಳ ಆಚೆಯೇ ಪರಮಾತ್ಮನ ಸ್ವರೂಪವಿರುತ್ತದೆ. 'ಯಥಾ ಬೀಜ ತಥಾಂಕುರ' ದಂತೆ ನಮ್ಮೊಳಗೆ ಭಕ್ತಿ ಹೇಗೆ ಅಂಕುರಿಸುತ್ತದೆಯೋ ಹಾಗೆ ಭಗವಂತನ ಸ್ವರೂಪ ವೇದ್ಯವಾಗುತ್ತದೆ. ಆದರೆ ಈ ಕ್ರಿಯೆಗೆ ಅಡ್ಡಿಯಾಗುವ ತೀಕ್ಷ್ಣ ಭಾವವೇ 'ಮಾಯೆ' ಈ ಭಾವದಿಂದ ಮುಕ್ತಳಾಗುವ ಪರಿಯಲ್ಲಿಯೇ ವಚನ ಮುಂದುವರೆಯುತ್ತದೆ.

ಬಸವಣ್ಣನವರಾದಿಯಾಗಿ ವಿಸ್ತಾರವಾಗಿರುವ ವಚನಕಾರರ ಪರಂಪರೆಯಲ್ಲಿ ಕೆಲವು ವಚನಕಾರರು ಹಾಗೂ ವಚನಕಾರ್ತಿಯರು ಮಾಯೆ ಕುರಿತು ಭಿನ್ನ-ಭಿನ್ನ ದೃಷ್ಟಿಯಲ್ಲಿ ವಚನಗಳ ಮೂಲಕ ಮಾತನಾಡಿದ್ದಾರೆ. ಪಂಡಿತ-ಪಾಮರರೆಂದುಕೊಳ್ಳದೆ ತಮ್ಮ ನೆಲೆಯಲ್ಲಿ ಮಾಯೆ ನಿರೂಪಿತಗೊಂಡಿದೆ. ವಚನಕಾರರ ದೃಷ್ಟಿಯಲ್ಲಿ ಸಂಸಾರ ಸಾಗರದಲ್ಲಿ ಸಿಲುಕಿದ ಜೀವನಿಗೆ ಆಧ್ಯಾತ್ಮವನ್ನು ಸಾಧಿಸದಂತೆ ಮಾಯೆ ತಡೆಯುಂಟು ಮಾಡುತ್ತದೆ. ವೇದ-ಶಾಸ್ತ್ರ-ಆಗಮಗಳನ್ನು ಬಲ್ಲ ವಿದ್ವಾಂಸರನ್ನು ಮಾಯೆ ಪಾಂಡಿತ್ಯವಾಗಿ ಕಾಡುತ್ತದೆ. ಜಗವನ್ನು ಸುತ್ತಿದ ಮಾಯೆ ಅಧೀನನಾಗಿ ಜೀವನು ತೋರುತ್ತಾನೆ. ಶಿವನಿಂದ ಸೃಷ್ಟಿಗೊಂಡ ಜಗತ್ತನ್ನು ಶಿವನಿಂದಲೇ ಸೃಷ್ಟಿಗೊಂಡ ಮಾಯೆ ಜಗತ್ತನ್ನು ಆವರಿಸುತ್ತದೆ.

ಇಂತಹ ಜಗತ್ತಲ್ಲಿ ಹುಟ್ಟಿದ ಜೀವನು ಮಾಯೆಯ ಹಿಡಿತಕ್ಕೆ ಸಿಗದೆ ಇರಲಾರ. ಆದ್ದರಿಂದಲೇ ಶರಣರು ಜೀವನು ಲೌಕಿಕದ ಆಕರ್ಷಣೆಗೆ ಒಳಗಾಗುವುದೇ ಮಾಯೆ ಎಂತಲೂ, ಸಂಸಾರ ತಾಪತ್ರಯಗಳಿಗೆ ಸಿಲುಕುವುದೇ ಮಾಯೆ ಎಂತಲೂ ಕರೆದುದಲ್ಲದೇ

ಜೀವನು ನೆಲೆಗೊಂಡಿರುವ ಕಾಯಕವು ಮಾಯೆ ಆಗಿ ತೋರುತ್ತದೆ. ಜೀವನು ಕಾಯಕ ಕೈಗೊಳ್ಳುವ ಕರ್ಮವು ಮಾಯೆ ಆಗಿದೆ.

ವೇದ-ಶಾಸ್ತ್ರ-ಆಗಮಗಳು ರೂಪಗೊಂಡು ಧರ್ಮದ ಜಿಜ್ಞಾಸೆ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಶೈವವಾದ, ತತ್ವವಾದ, ಮಾಯಾವಾದಗಳು ಹುಟ್ಟಿದವು. ಮಾಯಾ ಸೆಳೆತದಿಂದ ಮುಕ್ತನಾಗುವ ಚಿಂತನೆ ಮಾಯಾವಾದವಾಗಿ ರೂಪಗೊಂಡಿದೆ. ಐದು ಬಹಲ್ಲಿ ಒಂದಾಗಿ ಬಂದು ತನ್ನ ಪ್ರಭಾವವನ್ನು ಬೀರುತ್ತದೆ. ಮಾಯೆ ಸತ್ ಅಲ್ಲ ಅಸತ್ ಅಲ್ಲ. ಕಂಡು ಕಾಣದಂತಿರುವ ಸ್ಥಿತಿಯಲ್ಲಿದ್ದರೂ ಲೌಕಿಕದ ವಸ್ತುಗಳ ಸ್ಥಿತಿಯಲ್ಲಿ ಅಭಿವ್ಯಕ್ತವಾಗುತ್ತದೆ.

ಲೌಕಿಕದಲ್ಲಿ ಭವಿಯಾಗಿ ಹುಟ್ಟಿ ಶರಣನಾಗಿ ಪರಿವರ್ತಿತನಾಗುವ ಮಾರ್ಗದಲ್ಲಿ ಲೌಕಿಕವನ್ನು ಬಿಡದೇ. ಲೌಕಿಕದಲ್ಲಿದ್ದುಕೊಂಡು, ಲೌಕಿಕವನ್ನು ಮೀರುವುದಾಗಿದೆ. ಈ ಮೀರುವಿಕೆ ಪ್ರಕ್ರಿಯೆಯಲ್ಲಿ ಮಾಯೆ ಸಂಸಾರವಾಗಿ, ಜಗವಾಗಿ, ಕರ್ಮವಾಗಿ, ಕಾಯವಾಗಿ, ಮರೆವಾಗಿ, ಹಿರಿತನವಾಗಿ, ಪಾಶವಾಗಿ, ಅರಿವನ್ನು ಅರಿದನೆಂಬ ಭಾವವಾಗಿ, ನಾನು-ನೀನು ಎಂಬ ಭಾವವಾಗಿ, ತ್ರಿವಿಧ ಮಲದ ರೂಪಾಗಿ, ಅಹಂಕಾರವಾಗಿ ತೋರುತ್ತದೆ. ಕೆಲವೊಮ್ಮೆ ಮಾಯೆ ಭಗವಂತನ ಸೃಷ್ಟಿಯಾಗಿ ಶರಣನನ್ನು ಆವರಿಸುತ್ತದೆ. ಅಂತರಂಗದಲ್ಲಿ ಭಗವಂತನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ಭಗವಂತನಿಕ್ಕಿದ ಮಾಯೆ ಶರಣನ್ನು ಪರಿಪರಿಯಾಗಿ ಕಾಡುತ್ತದೆ. ಶರಣ ನೀನಿಕ್ಕಿದ ಮಾಯೆ ನೀ ಮಾಡಿದ ಮಾಯೆಯನಾರೂ ಗೆಲ್ಲಲಾರರು ಹಾಗೆ ನಾನೂ ಕೂಡಾ, ನನ್ನನ್ನು ಈ ಮಾಯೆಯಿಂದ ಮುಕ್ತಗೊಳಿಸು ಎಂಬ ಭಿನ್ನಹವೂ ಇದೆ.

ಅದೇ ರೀತಿಯಾಗಿ ಆಧ್ಯಾತ್ಮಿಕ ಉನ್ನತಿಯತ್ತ ಸಾಗುವ ಹಂತದಲ್ಲಿರುವ ವಚನ ಕಾರ್ತಿಯರನ್ನು ಲೌಕಿಕ ಭಾವವಾಗಿ 'ಮಾಯೆ' ಕಾಡಿದೆ. ವಚನಕಾರ್ತಿಯರ ವಚನಗಳಲ್ಲಿ 'ಮಾಯೆ' ಕಾಯವನ್ನು ಆವರಿಸುಂಥದ್ದು, ಯೋನಿಯ ಸ್ವರೂಪದ್ದು, ಪ್ರಪಂಚವೆಲ್ಲ ವ್ಯಾಪಿತವಾದದ್ದು, ಮೋಹದ ಭಾವದಲ್ಲಿರುವಂಥದ್ದು. ತನು-ಮನ-ಧನವೆಲ್ಲವನ್ನು ನಿಯಂತ್ರಿಸಬಲ್ಲ ಶಕ್ತಿಯಾಗಿ, ಸೂತ್ರಧಾರನ ಕೈಯಲ್ಲಿನ ಬೊಂಬೆಯನ್ನು ತನಗೆ ಬೇಕಾದಂತೆ ಆಡಿಸಬಲ್ಲ ಶಕ್ತಿಯಾಗಿ 'ಮಾಯೆ' ಕಾಣುತ್ತದೆ. ಇವೆಲ್ಲವನ್ನು ಗಮನಿಸಿದಾಗ 'ಮಾಯೆ' ಎಂಬುದು ಲೌಕಿಕದ ಛಾಯೆ ಆಗಿದೆ. ಅದು ಜೀವಾತ್ಮ ತನ್ನ ಇರುವನ್ನು ಅರಿಯದೆ ಇರುವಂತೆ ಮಾಡುವ ಕ್ರಿಯಾಶಕ್ತಿ ಉಳ್ಳದ್ದಾಗಿದೆ ಎಂಬರ್ಥದಲ್ಲಿ 'ಮಾಯೆ'ಯನ್ನು ಕಟ್ಟಿಕೊಟ್ಟಿದ್ದಾರೆ. ಅಂದಿನ ಸಾಮಾಜಿಕ ಚೌಕಟ್ಟಿನೊಳಗೆ ನಿಂತು ಲೌಕಿಕ ನೆಲೆಯಲ್ಲಿ 'ಮಾಯೆ' ಯನ್ನು ಗ್ರಹಿಸುವ ನೆಲೆಗಳು ತೀರಾ ಆಳವಾದ ತಾತ್ವಿಕತೆಯನ್ನು ವಿವರಿಸಲಾರದ ರೀತಿಯಲ್ಲಿ ತೋರುತ್ತದೆ. ಅನುಭವ ಮಂಟಪವೆಂಬ ವಚನ ಕಮ್ಮಟದಲ್ಲಿ ಪಳಗಿದ ವಚನಕಾರ್ತಿಯರು ವಚನಕಾರರ ವರ್ಗವೊಂದನ್ನು ಮಾದರಿಯಾಗಿಸಿಕೊಂಡು

'ಮಾಯೆ'ಯನ್ನು ಗ್ರಹಿಸಿದಂತೆ ತೋರುತ್ತದೆ. ವಚನಕಾರ್ತಿಯರ ಈ ವಚನಗಳನ್ನು 'ಮಾಯೆ'ಯ ಚಿಂತನೆಗೆ ಒಳಪಡಿಸುವ ಮೂಲಕ ಅಂದಿನ ಸಾಮಾಜಿಕ ಬದುಕನ್ನು ಭಿನ್ನ ದೃಷ್ಟಿಕೋನದಿಂದ ಗಮನಿಸಲು ಎಡೆಮಾಡಿಕೊಟ್ಟಿದೆ.

ವಚನಾಕರರ ಹಾಗೂ ವಚನಕಾರ್ತಿಯರ ಮಧ್ಯದಲ್ಲಿ ಬದುಕಿದ ಅಲ್ಲಮನಪ್ರಭು ಮಾಯೆಯನ್ನು ಕುರಿತು ಮಾತನಾಡುವಾಗ ತಾನು ಅದರಿಂದ ಹೊರನಿಂತು ವಿಶ್ಲೇಷಿಸುತ್ತಾನೆ. ತಾನು ಲೋಕದ ಸೆಳೆತಕ್ಕೊಳಗಾಗದೆ ಲೋಕದ ಮಾಯೆಯನ್ನು ಮೀರುವ ಪರಿಯನ್ನು ವಚನಗಳಲ್ಲಿ ವಿವರಿಸಿದ್ದಾನೆ. ವಚನಕಾರರೆಲ್ಲರೂ ಸಂಸಾರದ ತೆಕ್ಕೆಗೆ ಬಿದ್ದು ಮಾಯೆಯನ್ನು ನೋಡುತ್ತಾರೆ. ಅಲ್ಲಮ ಮಾತ್ರ ಇದಕ್ಕೆ ಹೇಗೆ ಭಿನ್ನನಾಗಿದ್ದಾನೆ ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಕೊನೆ ಟಿಪ್ಪಣಿ :

೧. ಹಿರೇಮಠ ಆರ್.ಸಿ. -ಬಸವಣ್ಣನವರ ವಚನಗಳು-ಪು.೩೬

೨. ಅದೇ, ಪು. ೨೧

೩. ಹಿರೇಮಠ ಬಿ.ಆರ್. (ಸಂ), ಸಂಕೀರ್ಣವಚನ ಸಂಪುಟ-೦೩, ಪು.೨೧೫

೪. ಆರ್.ಸಿ.ಹಿರೇಮಠ-ಬಸವಣ್ಣನವರ ವಚನಗಳು-ಪು.೭೪

೫. ಅದೇ, ಪು. ೨೪೫

೬. ಅದೇ, ಪು. ೧೧

೭. ಅದೇ, ಪು. ೯

೮. ಅದೇ, ಪು. ೩೭೦

೯. ಅದೇ, ಪು. ೩೬೯

೧೦. ಅದೇ, ಪು. ೯

೧೧. ಆರ್.ಸಿ.ಹಿರೇಮಠ-ಬಸವಣ್ಣನವರ ವಚನಗಳು-ಪು.೫೫೦

೧೨. ಅದೇ, ಪು. ೫೮೪

೧೩. ಅದೇ, ಪು. ೧೮೨

೧೪. ಅದೇ, ಪು. ೧೭

೧೫. ಅದೇ, ಪು. ೫೭೪

೧೬. ಕಲಬುರ್ಗಿ ಎಂ.ಎಂ. (ಸಂ) ಸಂಕೀರ್ಣ ವಚನ ಸಂಪುಟ-೧ ಪು.೨೯೭

೧೭. ಅದೇ, ಪು. ೨೫೦

೧೮. ಅದೇ, ಪು. ೭೭

೧೯. ಅದೇ, ಪು.೧೦

೨೦. ಅದೇ,ಪು.೧೬೫

೨೧. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೨, ಪು.೨೧೬

೨೨. ಅದೇ, ಪು. ೨೨೮

೨೩. ಅದೇ, ಪು. ೨೩೬

೨೪. ಅದೇ, ಪು. ೨೩೧

೨೫. ಅದೇ, ಪು.೬೧೬

೨೬. ಅದೇ, ಪು. ೬೯೧

೨೭. ಅದೇ ಪು. ೨೮೪

೨೮. ಅದೇ ಪು. ೨೮೪

೨೯. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೨, ಪು.೯೫೮

೩೦. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೧, ಪು.೩೮೬

೩೧. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೨, ಪು.೩೮೪

೩೨. ಅದೇ, ಪು.೨೬೦

೩೩. ಅದೇ, ಪು.೨೫೭

೩೪. ಹಿರೇಮಠ ಬಿ.ಆರ್. (ಸಂ), ಸಂಕೀರ್ಣವಚನ ಸಂಪುಟ-೦೩, ಪು.೧೯೩

೩೫. ಅದೇ, ಪು.೨೩೧

೩೬. ಅದೇ, ಪು.೨೭೮

೩೭. ಹಿರೇಮಠ ಬಿ.ಆರ್. (ಸಂ), ಸಂಕೀರ್ಣ ವಚನ ಸಂಪುಟ-೩,ಪು.೫೫

೩೮. ಅದೇ,ಪು.೩೮

೩೯. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೨, ಪು.೭

೪೦. ಹಿರೇಮಠ ಬಿ.ಆರ್. (ಸಂ), ಸಂಕೀರ್ಣ ವಚನ ಸಂಪುಟ-೩,ಪು.೪೧

೪೧. ಅದೇ,ಪು.೩೯೮

೪೨. ಅದೇ,ಪು.೧೧೫

೪೩. ಅದೇ,ಪು.೨೪೭

೪೪. ಅದೇ,ಪು.೨೪೭

೪೫. ಅದೇ,ಪು.೨೧೯

೪೬. ಅದೇ, ಪು.೨೨೧

೪೭. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೨, ಪು.೪೪

೪೮. ಅದೇ, ಪು.೪೧೭

೪೯. ಕಲಬುರ್ಗಿಎಂ.ಎಂ.(ಸಂ),ಸಂಕೀರ್ಣ ವಚನ ಸಂಪುಟ-೦೧ ಪು.೪೦೯

೫೦. ವಿದ್ಯಾಶಂಕರ ಎಸ್. (ಸಂ), ಸಂಕೀರ್ಣ ವಚನ ಸಂಪುಟ-೦೨ ಪು.೨೪

೫೧. ಅದೇ,ಪು.೨೩

೫೨. ಅದೇ,ಪು.೪೩೬

೫೩. ಅದೇ,ಪು.೪೩೬

೫೪. ಹಿರೇಮಠ ಬಿ.ಆರ್. (ಸಂ), ಸಂಕೀರ್ಣ ವಚನ ಸಂಪುಟ-೩,ಪು.೯೬

೫೫. ಅದೇ,ಪು.೯೭

೫೬. ಅದೇ,ಪು.೪೧೯

೫೭. ವಿದ್ಯಾಶಂಕರ ಎಸ್.(ಸಂ),ಸಿದ್ಧರಾಮೇಶ್ವರ ವಚನ ಸಂಪುಟ, ಪು.೬೩

೫೮. ಹಿರೇಮಠ ಬಿ.ಆರ್.(ಸಂ), ಸಂಕೀರ್ಣ ವಚನ ಸಂಪುಟ-೦೩, ಪು.೩೬೦

೫೯. ಹಿರೇಮಠ ಆರ್.ಸಿ.(ಸಂ),ಶಿವಶರಣೆಯರ ವಚನಗಳು,ಪು. ೩೫೦

೬೦. ಅದೇ,ಪು.೪೩೨

೬೧. ಅದೇ,ಪು.೪೫೧

೬೨. ಅದೇ,ಪು.೪೫೪

೬೩. ಅದೇ,ಪು.೫೧೭

೬೪. ಅದೇ,ಪು.೨೩೪

೬೫. ಅದೇ, ಪು.೨೪೨

೬೬. ಅದೇ, ಪು.೩೦೨

ಅಧ್ಯಾಯ : ೩೭

ಅಲ್ಲಮಪ್ರಭುವಿನ ವಚನಗಳು: ಮಾಯೆ

ಅಧ್ಯಾಯ-೫

ಅಲ್ಲಮಪ್ರಭುವಿನ ವಚನಗಳು: ಮಾಯೆ

ಭಾರತ ಎಂಬುದು ಧರ್ಮ, ತತ್ವ, ಸಂಸ್ಕೃತಿ ಮತ್ತು ಸಾಹಿತ್ಯದ ಸಮನ್ವಯದ ಸಾಂಕೇತಿಕ ಅಭಿವ್ಯಕ್ತಿಯಾಗಿದೆ. ಭಾರತೀಯರ ಬದುಕು ಸಂಸ್ಕೃತಿಯಾಗಿ ರೂಪುಗೊಂಡು ಅದರ ಸಾರವೆಲ್ಲ ಧರ್ಮದ ರೂಪದಲ್ಲಿದೆ ಧರ್ಮದೊಳಗಿನ ತತ್ವಜ್ಞಾನದಲ್ಲಿ ಹಾಗೂ ಸಾಹಿತ್ಯದ ಸತ್ವದಲ್ಲಿ ಸ್ಥಾನಪಡೆದಿದೆ. ಇಂತಹ ಸಾಂಸ್ಕೃತಿಕ ಪರಂಪರೆಯಲ್ಲಿ ಅನೇಕ ಆಧ್ಯಾತ್ಮಿಕ ದಿವ್ಯ ಚೇತನಗಳು ಅವಿರ್ಭವಿಸಿ ತಮ್ಮ ತತ್ವ ಸಿದ್ಧಾಂತಗಳ ಮೂಲಕ ಜನ ಮಾನಸದ ಬದುಕಿನಲ್ಲಿ ಹಲವು ಬದಲಾವಣೆ ತಂದಿದ್ದಾರೆ. ಸಾಹಿತ್ಯದ ಮೂಲಕ ಜನರ ಮನಸ್ಸಿನಲ್ಲಿ ಚಿಂತನೆಯನ್ನು ಹುಟ್ಟು ಹಾಕಿದ್ದಾರೆ.

೧೨ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಮಾಡಿದ ಶರಣ ಆಂದೋಲನ ತನ್ನ ಬೆನ್ನಿಗೆ ಭಾರತೀಯ ಪರಂಪರೆಯನ್ನು ಕಾವಲಾಗಿಸಿಕೊಂಡೆ ರೂಪಗೊಂಡಿದೆ. ಎಂಟನೂರು ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿದ ಈ ಆಂದೋಲನ ಕೇವಲ ಧಾರ್ಮಿಕತೆಯ ನೆಲೆಗೆ ಸೀಮಿತವಾಗದೆ, ಅಂದಿನ ಪ್ರಸ್ತುತ ಸಾಮಾಜಿಕ ಸಮಸ್ಯೆಗಳಿಗೆ ಗಂಭೀರ ಸ್ಪಂದನೆಯನ್ನು ನೀಡಿತು. ವರ್ಗ-ವರ್ಣ ಹಾಗೂ ಲಿಂಗ ವ್ಯತ್ಯಾಸಗಳಿಲ್ಲದ ಸರ್ವಸಮಾನತೆಯ ತತ್ವವನ್ನು ಪ್ರತಿಪಾದಿಸಿತು. ಶರಣರು ಸಮಾನತೆಯ ತತ್ವವನ್ನು ಜೀವನದ ತಿರುಳಾಗಿಸಿಕೊಂಡು ವಚನ ರಚಿಸಿದರು. ಅಂತರಂಗದ ವಿಕಾಸದಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣ ಹಾಗೂ ಸಮಾಜಮುಖಿ ಚಿಂತನೆಯ ಅಭಿವ್ಯಕ್ತಿಯಾಗಿ ವಚನ ವಾಙ್ಮಯ ಪ್ರತಿಕ್ರಿಯಿಸಿತು. ಇಂತಹ ವಚನ ಪರಂಪರೆಯಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ಮುಕ್ತಾಯಕ್ಕ ಮುಂತಾದ ವಚನಕಾರರ ಚಿಂತನೆಗಳು ವಚನದಲ್ಲಿ ಹೊರಹೊಮ್ಮಿವೆ. ಭೂತ-ಭವಿಷತ್‌ಗಳನ್ನು ತನ್ನೊಳಗೆ ಮೈಗೂಡಿಸಿಕೊಂಡು ವರ್ತಮಾನದಲ್ಲಿ ಜಗತ್ತು-ಧರ್ಮ-ದೇವರು- ಮೋಕ್ಷ ಇತ್ಯಾದಿ ಆಧ್ಯಾತ್ಮಿಕ ಪರಿಕಲ್ಪನೆಗಳಿಗೆ ವಚನಗಳ ಮೂಲಕ ಹೊಸ ವ್ಯಾಖ್ಯಾನ ನೀಡಿದರು. ವಚನಗಳು ದಿನನಿತ್ಯದ ಬದುಕಿಗೆ ಪಾರಮಾರ್ಥಿಕ ಸತ್ವತುಂಬಿ ವೈಚಾರಿಕ ಸ್ಪರ್ಶವನ್ನು ನೀಡಿದವು. ಸರ್ವಕಾಲಿಕವಾದ ಜೀವನ ಮೌಲ್ಯಗಳನ್ನು ಜನಮಾನಸದಲ್ಲಿ ಬಿತ್ತಿದವು. ಇಂತಹ ವಚನಕಾರರ ಪರಂಪರೆಯಲ್ಲಿ ಅಲ್ಲಮ ಪ್ರಭು ವಿಭಿನ್ನವಾಗಿ ನಿಲ್ಲುತ್ತಾನೆ. ಅಲ್ಲಮಪ್ರಭುವಿನ ವಚನ ಎಂಬ ಪರಿಭಾಷೆಯ ಅಡಿಯಲ್ಲಿ ಸೃಷ್ಟಿಯೊಳಗಿನ ಅದ್ಭುತ ರಹಸ್ಯವನ್ನು, ಅಂತಹ ರಹಸ್ಯದ ವಿಶಿಷ್ಟ ಭಾಗವಾದ ಮನುಜನನ್ನು, ಮನುಜನೊಳಗಿನ ಮಾನಸಿಕ, ಬೌದ್ಧಿಕ, ಭಾವನಾತ್ಮಕ ಸಂಘರ್ಷವನ್ನು ಅರ್ಥೈಸುವ ಬಗೆ ವಿಶಿಷ್ಟವಾಗಿದೆ. ಅನುಭಾವಿಗಳ ಅನುಭಾವಿಯಾಗಿ, ಜ್ಞಾನಿಗಳಲ್ಲಿ ಪರಮ ಜ್ಞಾನಿಯಾಗಿ ಶರಣ ಪರಂಪರೆಗೆ ಶಿವಯೋಗ ಸಾಧನೆಯ ಸತ್ವವನ್ನು ಅರುಹಿದನು.

ಅಲ್ಲಮಪ್ರಭು ತನ್ನ ಸುತ್ತಲಿನ ಸಮಾಜದ ಜೊತೆ ಇದ್ದು ಇಲ್ಲದಂತೆ ನಿಂತು, ಲೌಕಿಕ ಜೀವನ ಭಾಗವಾಗಿರುವ ವ್ಯಕ್ತಿಗಳನ್ನು ವೀಕ್ಷಿಸುವ ಮೂಲಕ ವ್ಯಕ್ತಿಯ ನೆಲೆಯಿಂದ ಸಾರ್ವತ್ರಿಕ ನೆಲೆಯವರೆಗೆ ಆತ್ಮ ತತ್ವಾನುಭವವನ್ನು ನಿರೂಪಿಸಿದರು. 'ಗುಹೇಶ್ವರ' ಎಂಬ ಅಂಕಿತದಲ್ಲಿ ೧೪೮೯ ವಚನಗಳಿದ್ದು ಸೃಷ್ಟಿಯ ವಚನಗಳು, ಪರಮಯೋಗ ಮಂತ್ರಗೋಪ್ಯ, ಅನುಭಾವ ಗೀತೆಗಳು ರಚನೆಯಾಗಿವೆ.

ಪ್ರಸ್ತುತದಲ್ಲಿ ಅಲ್ಲಮ ಪ್ರಭುದೇವರ ವಚನಗಳನ್ನು ಅಧ್ಯಯನಕ್ಕೆ ಆಕರವಾಗಿ ಬಳಸಿಕೊಂಡು ಮಾಯೆ ಕುರಿತು ನಿರ್ವಚಿತಗೊಂಡ ವಚನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೫.೧ ಬೆಡಗು: ಮಾಯೆ

ಅಲ್ಲಮ ಬೆಡಗಿನ ರೂಪದಲ್ಲಿ ಲೌಕಿಕದ ಸ್ವರೂಪವನ್ನು ಪ್ರಸ್ತಾಪಿಸಿದ್ದಾನೆ.

"ರಕ್ಕಸಿಗಿಬ್ಬರು ಮಕ್ಕಳು
ತೊಟ್ಟಿಲ ಮೇಲೈವರು
ರಕ್ಕಸಿ ಬಾಣತಿಯಾದರೆ ಮಕ್ಕಳಿಗಿನ್ನೆಂತೋ!
ತೊಟ್ಟಿಲ ತೂಗುವೆ ಜೋಗಳವಾಡವೇ
ರಕ್ಕಸಿ ಬಾಣತಿಯ ಚೊಚ್ಚಲ ನುಂಗಿತ್ತು
ಇವೇನು ಹೇಳಾ ಗುಹೇಶ್ವರಾ"[೧]

ಸರ್ವವನು ನುಂಗುವ 'ಮಾಯೆ'ಯೆಂಬ ರಕ್ಕಸಿ ವ್ಯಷ್ಟಿ ಮತ್ತು ಸಮಷ್ಟಿ ಎಲ್ಲವೂ ಆಕೆಯ ಕಾರ್ಯಮಂಡಲ ಚತುರ್ದಶ ಭುವನುಗಳನೆಲ್ಲವನೂ ಅವಗ್ರಹಿಸಿ ನುಂಗುತ್ತಿಹ ಕಾರಣ ಆ ಮಾಯೆಗೆ ರಕ್ಕಸಿಯೆಂಬ ಶಬ್ದವಾಯಿತು. ಆ ಮಾಯೆಯ ಸಂಕಲ್ಪ ಭಾವದಿಂದ ಜೀವ ಪ್ರಾಣಗಳೆಂಬರೆಡೂ ಹುಟ್ಟಿದ ಕಾರಣ ರಕ್ಕಸಿಗಿಬ್ಬರು ಮನ ಮತ್ತು ಬುದ್ಧಿಗಳೆಂಬ ಮಕ್ಕಳೆಂಬ ಶಬ್ದವಾಯಿತು. ಆ ಜೀವ ಪ್ರಾಣಗಳಿಗೆ ತನುವೇ ಆಶ್ರಯಸ್ಥಾನವಾದ ಕಾರಣ ತೊಟ್ಟಿಲವೆಂಬ ಶಬ್ದವಾಯಿತು. ಆ ತನುವಿನೊಳಗೆ ಪಂಚಭೂತಗಳು ಆ ಮಾಯಾಧೀನದಿಂ ಹುಟ್ಟಿ ಇರುತ್ತಿಪ್ಪವೆಂಬುದೀಗ ತೊಟ್ಟಿಲಮಲೈವರೆಂಬ ಶಬ್ದಕ್ಕರ್ಥ. ಇಂತು ತನ್ನಿಂದ ಹುಟ್ಟಿದ ಜೀವ, ಪ್ರಾಣ, ಪಂಚಭೂತಗಳನು ತಾನೆ ನುಂಗುತ್ತುಗುಳತ್ತಿಹ ತಾಯಿ ರಕ್ಕಸಿಯಾಗಲು ಮಕ್ಕಳಿನ್ನೆಂತು ಬದುಕುವೆಂಬುದು 'ಮಕ್ಕಳಿಗಿನೆಂತೋ' ಎಂಬ ಶಬ್ದಕ್ಕರ್ಥ. ಇಂತಿಪ್ಪ ಮಾಯಾಧೀನದಿಂ ದೇಹ ಕರ್ಮವಶಮಪ್ಪನಕ್ಕರ ಚರಿಸುವೆನೆಂಬುದೀಗ ತೊಟ್ಟಿಲ ತೂಗುವೆನೆಂಬುದರಕ್ಕರ್ಥ.'[೨] ಆ ಮಾಯೆ ತನ್ನನ್ನು ಆ ದೇಹವೆ ಅವಗ್ರಹಿಸಿಕೊಂಡಿಪ್ಪುದೀಗ –ರಕ್ಕಸಿ ಬಾಣತಿಯ ತೊಟ್ಟಲುನುಂಗಿತ್ತೆಂಬ ಶಬ್ದಕ್ಕರ್ಥ.

ಇಲ್ಲಿ ಮಾಯೆ ತನ್ನ ಸ್ವರೂಪವನ್ನು ಹೊರಗೆ ತೋರದಂತೆ ಇದ್ದು ತೋರುತ್ತದೆ.

ಸರ್ವವನ್ನು ನುಂಗುವ ರಕ್ಕಸಿ ಮಾಯೆ ಖಳ ಹೊರ ಇಂದ್ರಿಯಗಳಿಂದ ಕೂಡಿದ ಆದರೆ ದೇಹವೆಂಬ ತೊಟ್ಟಿಲ ನುಂಗುತ್ತದೆ. ಇಲ್ಲಿ ರಕ್ಕಸಿ ಬಾಣಂತಿಯಾದರೆ ಅದಮ್ಯ ಮಾಯೆ ತಾಯಿಯಾದಾಗ ಮಕ್ಕಳ ಸ್ಥಿತಿ ದಾರುಣವಾಗುತ್ತದೆ. ಪಂಚೇದ್ರೀಯಗಳ ಮೇಲೆ ಪ್ರಭಾವ ಬೀರಿ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತದೆ ಎಂಬ ಅಂಶ ತನ್ನ ಅರಿವಿಗೆ ಬಾರದ್ದೂ ಎಂದೂ, ಮಾರ್ಗದರ್ಶಿಸು ಎಂಬ ವಿನಂತಿ ಇಲ್ಲಿದೆ. ಇದಕ್ಕೆ ಪೂರಕವಾಗಿ ನೋಡಿದರೆ 'ಅವಿದ್ಯಾ ಮಾಯೆಯನ್ನು ರಕ್ಕಸಿ ಎಂದು ಅಲ್ಲಮ ನಿರ್ದೇಶಿಸಿದ್ದಾನೆ. ಅವಳ ಸಂಕಲ್ಪದಿಂದ ಜೀವ ಮತ್ತು ಪ್ರಾಣ ಎಂಬ ಇಬ್ಬರು ಹುಟ್ಟುತ್ತಾರೆ. ತನುವೆ ತೊಟ್ಟಿಲಾಗುತ್ತದೆ. ತನುವಿನ ಪಂಚಭೂತಗಳು ಸಹ ಅವಳಿಂದಲೇ ಹುಟ್ಟಿದವುಗಳಾದ್ದರಿಂದ ಅವಳ ಮನ ಮತ್ತು ಬುದ್ಧಿಗಳೆಂಬ ಇಬ್ಬರು ಮಕ್ಕಳೇ ಆಗುತ್ತವೆ. ಈ ಏಳು ಮಂದಿ ಮಕ್ಕಳನ್ನು ಹೆತ್ತು ಮಾಯೆ ಅವುಗಳನ್ನು ತಿನ್ನತೊಡಗುತ್ತಾಳೆ. ಜೀವ ಮಾಯೆಯ ಹಿರಿಯ ಮಗ ಇವನು ಅಜ್ಞಾನದಿಂದ ದೇಹವೆಂಬ ತೊಟ್ಟಿಯನ್ನು ಹೊತ್ತು ಭಾವಚಕ್ರದಲ್ಲಿ ಸುತ್ತುತ್ತಾನೆ. ಇದೇ ತೂಗುವಿಕೆ ಎನ್ನುತ್ತಾನೆ ಪ್ರಭು. ಈ ಅಜ್ಞಾನದ ಸ್ಥಿತಿಯಲ್ಲಿ ಅನೇಕ ವಿಷಯಗಳನ್ನು ಮಾತನಾಡುತ್ತಾನೆ. ಇದೇ ಜೋಗಳ. ಇದನ್ನರಿತು ಮೋಹ ಭ್ರಾಂತಿಯನ್ನು ನೀಗಬೇಕು. ಇದು ತೊಟ್ಟಿಲು ಬಾಣತಿಯನ್ನೆ ನುಂಗಿದಂತೆ. ಜೀವ ಅಜ್ಞಾನವನ್ನು ಕಳೆದುಕೊಳ್ಳಬೇಕು.[೩] ಇಲ್ಲಿ ಕೌಟುಂಬಿಕ ಪರಿಕಲ್ಪನೆಯ ಮೂಲಕ ವಚನದ ಅಂತರಾರ್ಥವನ್ನು ವಿಶ್ಲೇಷಿಸಲಾಗಿದೆ. ಇದೇನು ಹೇಳಾ ಗುಹೇಶ್ವರಾ ಎಂಬುದು ಮಾಯೆ ವ್ಯಾಪಕ ಪ್ರಭಾವವನ್ನು ಪ್ರಸ್ತಾಪಿಸಿ ಅದರಿಂದ ಬಿಡಿಸಿಕೊಳ್ಳುವ ತೀವ್ರ ನೀರಿಕ್ಷೆ ಇಲ್ಲಿ ತೋರುತ್ತದೆ. ರಕ್ಕಸಿ ಎಂಬುದು ಒಳ್ಳೆಯದು-ಕೆಟ್ಟದ್ದು ಎಂದು ಗಮನಿಸದೇ ಎಲ್ಲವನ್ನು ಆಪೋಷಿಸುವ ಗುಣವುಳ್ಳದ್ದು. ಇದರಂತೆ ಮಾಯೆಯು ಕೂಡಾ ಸರಿ-ತಪ್ಪುನ್ನೆಣಿಸದು ಎಂಬ ಭಾವವಿದೆ. ಬಾಣಂತನ ಎಂಬ ಕ್ರಿಯೆಯ ಮೂಲಕ ಮಾಯೆಯನ್ನು ಕಟ್ಟಿಕೊಡಲಾಗಿದೆ. ಮಾಯೆ ಎಂಬ ಶಕ್ತಿ ಜಾಗ್ರ, ಸ್ವಪ್ನ, ಸುಷುಪ್ತಿಗಳ ಮೂಲಕ ಜಗತ್ತನ್ನು ನಿರ್ಮಿಸಿ ಅದರಲ್ಲಿ ಜೀವನು ಸಿಲುಕುವಂತೆ ಮಾಡುತ್ತದೆ.

"ಮುಗಿಲ ಬಣ್ಣದ ಪಕ್ಷಿ, ಮಗನ ಕೈಯ ಅರಗಿಳಿ
ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲುವನು ತೆಗೆದಚ್ಚವರಾರೋ? ಉಪಮಿಸಬಾರದು
ಜಾಗ್ರ ಸ್ವಪ್ನ ಸುಷುಪ್ತಿಯ ನಡುವೆ ತ್ರಿಜಗವಾಯಿತ್ತು
ಜಗಜ್ಯೋತಿ, ನಿನ್ನ ಮಾಯೆಯ ನೆನೆಂಬೆನು ಗುಹೇಶ್ವರಾ?"[೪]

ಮಿಥ್ಯಛಾಯಾ ಮಾತ್ರವಪ್ಪ ಜೀವ ಹಂಸವೆಂಬುದೀಗ ಮುಗಿಲ ಬಣ್ಣದ ಪಕ್ಷಿಯೆಂಬ ಶಬ್ದಕರ್ಥ. ಆ ಜೀವಹಂಸನು ಶಿಶುವಿನ ಕೈಯ ಶಕುನ ಹಾಂಗೆ ಏನುವನರಿಯನೆಂಬುದೀಗ ಮಗನಕೈಯ್ಯರಗಿಳಿಯೆಂಬ ಶಬ್ದಕರ್ಥ. ಇಂತಪ್ಪ ಜೀವಂಗೆ ಬಯಲರಸುವ ತೊಟ್ಟಿ

ಮಿಥ್ಯವನೆ ಲಕ್ಷ್ಯವ ಮಾಡಿ ಪರಶಿವನೆ ಎಸದು ಕೆಡಹಲೆಂಬುದೀಗ-ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲುವನು ತೆಗೆದಚ್ಚವರಾರೋ ಎಂಬ ಶಬ್ದಕರ್ಥ. ಇಂತು ಬಯಲ ಬಾಣದಲ್ಲಿ ಕೆಡಹಲು ಆ ಜೀವನು ತನುವೆಂಬ ಭೂಮಿಯ ಮೇಲೆ ಬಿದ್ದು ಮೃತವಾಗಿ ಅವಸ್ಥಾತ್ರಯಕ್ಕೊಳಗಾಗಿರುತ್ತಿರಲು ಈ ಪರಿಯಲ್ಲಿ ತ್ರಿಜಗವೆಲ್ಲವು ಮೃತ್ಯುವಾಗಿ ಅವಸ್ಥಾತ್ರಯದೊಳಗಿಪ್ಪದು ಪರಮೇಶ್ವರನ ನಿರೂಪವೆಂಬುದೀಗ ಜಾಗ್ರ, ಸ್ವಪ್ನ, ಸುಷುಪ್ತಿಯ ನಡುವೆ ತ್ರಜಗವಾಯಿತ್ತು ಜಗಜ್ಯೋತಿ ನಿನ್ನ ಮಾಯೆಯನೆನೆಂಬೆನೆಂಬ ಶಬ್ದಕರ್ಥ.'[೫] ಶಿವಾಂಶಿಕವಾದ ಜೀವನನ್ನು ಶಿವಾಂಶಿಕವಾದ ಮಾಯೆ ಕಾಡುವುದು, ಆವರಿಸುವುದು, ಜೀವ ಶಿವನಷ್ಟೆ ಶುದ್ಧನು. ಜೀವ ಭೂಮಿಗೆ ಬರುವಲ್ಲಿ, ಸಂಸಾರಿಯಾಗುವಲ್ಲಿ ಶಿವ ಮತ್ತು ಮಾಯೆ ಇವರಿಬ್ಬರ ಪಾತ್ರವಿದೆ. ಮಾಯಿಕ ಜಗತ್ತು ಒಂದು ವಿಧದಲ್ಲಿ ಶಿವನ ಸೃಷ್ಟಿ ತನ್ಮೂಲಕ ಮಾಯಾ ಶಕ್ತಿಯನ್ನು ಸೃಷ್ಟಿಸಿ ಆ ಮೂಲಕ ಜೀವನನ್ನು ಬಂಧಿಸುತ್ತದೆ.

ಜೀವ 'ಮುಗಿಲ' ಸ್ವರೂಪದಷ್ಟೆ (ಬಣ್ಣದಷ್ಟೆ) ಶುದ್ಧ, ಬಯಲ ಸ್ವರೂಪಿಯಾದ ಶಿವ, ಜೀವ ಮಗುವಿನ ಕೈಯಲ್ಲಿರುವ ಜೀವಾತ್ಮವಾದ ಅರಗಿಳಿಯಷ್ಟೇ ಪ್ರಿಯವಾದದ್ದು. ಜೀವನು ಶಿವನಷ್ಟೇ ಶುದ್ಧ. ಆದರೆ ಅದೇ ಶಿವನು ಜೀವನ ಮುಂದೆ ಕಲ್ಪಿತ ಜಗತ್ತನ್ನು ಸೃಷ್ಟಿಸಿ ಭ್ರಮೆಗೊಳಪಡಿಸುವಂತೆ ಮಾಡುವಲ್ಲಿ ಪರಶಿವನೇ ಅಂಶಿಕ ಶಕ್ತಿಯಾದ ಮಾಯೆ ಕಾರಣವಾಗುತ್ತದೆ. 'ಜಾಗರ ಸ್ವಪ್ನ ಸುಷುಪ್ತಿಗಳು ರಚಿಸಿ ಅವುಗಳಿಗೆ ಜೀವನನ್ನು ಒಳಗಾಗಿಸಿ, ಅನುಕ್ರಮವಾಗಿ ಐಂದ್ರಿಯಕ ಜಗತ್ತು, ವಾಸನಾ ಜಗತ್ತು ಮತ್ತು ತಮೋ ಜಗತ್ತುಗಳಲ್ಲಿ ಜೀವಾತ್ಮನು ವ್ಯವಹರಿಸುವಂತೆ ಮಾಡಿದ್ದಾನೆ. ಜೀವಾತ್ಮನು ಈ ಮೂರು ಅವಸ್ಥೆಗಳಲ್ಲಿ ಪ್ರವೇಶಿಸಿದಾಗ ಕ್ರಮವಾಗಿ ವಿಶ್ವಜೀವ ತ್ಯಜಸಜೀವ ಮತ್ತು ಪ್ರಾಜ್ಞಜೀವ ಈ ಮೂರು ಆಯಾ ಜಗತ್ತಿನ ಸೊಬಗಿನಲ್ಲಿ ಜೀವ ಬಂಧನಕ್ಕೆ ಒಳಗಾಗುತ್ತಾನೆ. ಹೀಗೆ ಬಯಲು ಸ್ವರೂಪಿಯಾದ ಶಿವ ಜೀವಾತ್ಮ ಜಡಜಗತ್ತಿನಲ್ಲಿ ಸಿಲುಕಿ ಶಿವಾಂಶಿಕವಾದ ಶುದ್ಧ ಜೀವ 'ಮಾಯೆ' ಪಂಜರದಲ್ಲಿ ಬಂಧಿತನಾಗುತ್ತಾನೆ. ಈ ಮಾಯೆಗೆ ಈ ಮೂರು ಆಯಾ ಜಗತ್ತಿನ ಸೊಬ್ಬಗಿನಲ್ಲಿ ಜೀವ ಬಂಧನಕ್ಕೆ ಒಳಗಾಗುತ್ತಾನೆ.[೬] ಇಲ್ಲಿ ಪ್ರಕೃತಿ ಸಹಜ ರೂಪಕಗಳನ್ನು ತಂದು ದೇವ-ಜೀವನಿಗೆ ಹೋಲಿಸುತ್ತಾನೆ. ಇವೆರಡು ಶುದ್ಧ, ನಿರ್ಮಲ, ಶ್ರೇಷ್ಠವಾದವು. ದೇವನಾದ ಪರಮಾತ್ಮನು ಜೀವನನ್ನು ಮಾಯೆಯೆಂಬ ಶಕ್ತಿಗೆ ಒಳಗು ಮಾಡಿ ತನ್ನಿಷ್ಟದಂತೆ ಆಡಿಸುತ್ತದೆ.

ಒಂದರ್ಥದಲ್ಲಿ ಮಾಯಿಕ ಸ್ವರೂಪಕ್ಕೆ ಜೀವ ಭವಿಯಾಗುವ ಕ್ರಿಯೆಗೆ ಶಿವನು ಕಾರಣನಾಗುವನು. ಆದರೆ ಶಿವನೆಂಬುದು ನಿರಾಮಯ, ನಿರ್ವಯಲಿನ ಸ್ವರೂಪಿ. ಆ ಬಯಲಲ್ಲಿ ರೂಪುಗೊಂಡುದೇ ಮಾಯೆ ಆಗಿದೆ. ಶಿವನಿಂದಲೇ ಮಾಯೆ ಹುಟ್ಟಿದರೂ ಶಿವ ಮಾಯಾ ಸ್ವರೂಪಿ ಅಲ್ಲ. ಆದರೆ ಆ ಮಾಯೆ ಶಿವನಷ್ಟೆ ಪ್ರಬಲ ಶಕ್ತಿವುಳ್ಳದ್ದು.

ಇಂತಹ ಮಾಯೆ ತನ್ಮೂಲಕ ಜೀವನನ್ನು ರೂಪಿಸುವ ವಿಧಾನ ಈ ಕೆಳಗಿನ ವಚನದಲ್ಲಿದೆ.

೫.೨ ವಿಧಿ: ಮಾಯೆ

"ಮಾಯದ ಕೈಯಲ್ಲಿ ಓಲೆ ಕಂಠವ ಕೊಟ್ಟರೆ
ಲಗುನ ವಿಗುನವ ಬರೆಯಿತ್ತು ನೋಡಾ।
ಅರಗಿನ ಪುತ್ಥಳಿಗೆ ಉರಿಯ ಸೀರೆ ಯನುಡಿಸಿದೊಡೆ
ಅದು ಸಿರಿಯ ಸಿಂಗಾರವಾಯಿತ್ತು ನೋಡಾ
ಅಂಬರದೊಳಗಾಡುವ ಗಿಳಿ ಪಂಜರದೊಳಗಣ ಬೆಕ್ಕನುಂಗಿ
ರಂಭೆಯ ತೋಳಿಂದಗಲಿತ್ತು ನೋಡಾ ಗುಹೇಶ್ವರಾ"[೭]

ವಿಶ್ವವ ನುಂಗಿದ ಮಾಯಾ ಪ್ರಪಂಚ ಪಿಂಡವೆಂಬ ಶಾಸನದ ಮೇಲೆ ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕರ್ಮತ್ರಯವ ಸಂಕಲ್ಪಮುಕ್ತಿದಿಂ ಲಿಖಿಸಲು ತಥ್ಯವಾದ ನಿಜವನೇ ಮಿಥ್ಯಮಾಡಿ, ಮಿಥ್ಯವಾದ ತನುವನೇ ತಥ್ಯವ ಮಾಡಿತ್ತೆಂಬುದೀಗ–ಮಾಯದ ಕೈಯಲ್ಲಿ ಓಲೆ ಕಂಠವ ಕೊಟ್ಟರೆ ಲಗುನ ವಿಗುನ ಬರೆಯಿತ್ತು ನೋಡಾ ಎಂಬ ಶಬ್ದಕರ್ಥ.[೮] ಮಾಯೆ ಸಕಲವನ್ನು ಆವರಿಸಿ ಪ್ರಾಬಲ್ಯ ಮೆರೆವಾಗ ಸತ್ಯವನ್ನು ಸುಳ್ಳಾಗಿಸುತ್ತದೆ. ಸುಳ್ಳನ್ನು ಸತ್ಯವಾಗಿಸುತ್ತದೆ. ಲೋಕದ ಸಕಲ ವ್ಯಾಪಾರದಲ್ಲಿ ಮಾಯೆ ಇದ್ದಾಗ ಎಂಬಲ್ಲಿ ಜೀವನಲ್ಲಿ ಸ್ವಾರ್ಥ, ಅಹಂಕಾರ ಮನೆ ಮಾಡಿದಾಗ ಜೀವನ ವರ್ತನೆ ಭಿನ್ನವಾಗುತ್ತದೆ. ಇಲ್ಲಿ ಮಾಯೆ ಎಂಬುದು ಸ್ವಾರ್ಥ, ಅಹಂಕಾರ ಎಂಬರ್ಥ ಆಗಿದೆ. ಮಾಯೆಯನ್ನು ಎದುರಿಸಲು ನಿಲ್ಲಲು ಸಾಧ್ಯವಾಗದಿದ್ದಾಗ ಮಾಯೆ ವಿಧಿ ಎಂಬ ಭಾವ ಬರುತ್ತದೆ. ಈ ವಚನದಲ್ಲಿ ಸಂಭವಿಸುವ ಕ್ರಿಯೆಗಳೆಲ್ಲವೂ ಅಸಾಧ್ಯವಾದದ್ದು. ಅಸಾಧ್ಯವಾದದನ್ನು ಸಾಧ್ಯಗೊಳಿಸುವ ಶಕ್ತಿ 'ಮಾಯೆ'ಯಾಗಿದೆ. ಆ ಕಾರಣಕ್ಕೆ 'ಮಾಯೆ' ವಿಧಿಯಾಗಿ ಹಣೆಬರಹವಾಗಿ ಕಾಣುತ್ತದೆ. 'ಇಲ್ಲಿ ಯಾವ ಹಿನ್ನೆಲೆ–ಮುನ್ನೆಲೆಯೂ ಇರದೆ ಮದುವೆಯ ಪ್ರಸ್ತಾಪ ಮಾಡಿ ಮದುವಣಗಿತ್ತಿಯ ವರ್ಣನೆಗೆ ಹೋಗಿ ಬಿಡುತ್ತಾನೆ. ಉಪಚಾರಕ್ಕಾಗಿ ಯಾರಾದರೂ ಅಲ್ಲಮ ಹೆಣ್ಣನ್ನು ಹೆಸರಿಟ್ಟು ಕರೆಯುವುದಿಲ್ಲ. ಮೆಚ್ಚುಗೆಗಿಂತ ವ್ಯಂಗ್ಯದಿಂದ ಆಕೆಯನ್ನು ಅರಗಿನ ಪುತ್ಥಳಿ ಎಂದು, ಶರೀರವೆನ್ನುವುದು ಅರಗಿನ ಬೊಂಬೆ, ಮುಕ್ತಿಯ ಅನುಭವ ಎಂಬ ಆಸೆಯ ದಾಳಿಯನ್ನು ಅದು ತಡೆದುಕೊಳ್ಳಲಾಗದು. ಅರಗಿನ ಬೊಂಬೆ ಆತ್ಮಜ್ಞಾನ ಎಂಬ ಅಗ್ನಿಯನ್ನು ತಾಳಿ ಬಾಳಲಾರದು. ಕಾಶ್ಮೀರಶೈವ ದೇಹಾಭಿಮಾನ ವಿಲ್ಲದೆಯೂ ದೇಹದಲ್ಲಿನ ಶಕ್ತಿಯ ನೆಲೆಗಳನ್ನು ಸಂಭ್ರಮಿಸುತ್ತದೆ.[೯] ಈ ವಿವರಣೆಯಲ್ಲಿ ಅನ್ಯಮತ ಪ್ರಭಾವ ಗುರುತಿಸಿದ್ದಾರೆ. ಇಲ್ಲಿ ಇಡಿಯಾಗಿ ವಚನ ಅರ್ಥವಿವರಣೆಯನ್ನು ನೋಡುತ್ತೇವೆ ಆದರೆ 'ಮಾಯೆ' ಯ ಮೂಲಕ ವಚನವು ಬೇರೆಯಾಗಿ ತೋರುತ್ತದೆ. ಇಡೀ ವಚನ ಮೂರು ಭಿನ್ನ ಕ್ರಿಯೆಯಗಳನ್ನು ಪ್ರಸ್ತಾಪಿಸಿ ನಂತರ ಒಂದೆ ಆಗಿ ನಿಲ್ಲುತ್ತದೆ.

ಅಂಬರದೊಳಗಾಡುವ ಗಿಳಿ ಎಂಬುದು ಶುದ್ಧ ಆತ್ಮವು ಪಂಜರದೊಳಗಿನ ಬೆಕ್ಕು ಎಂಬ ದೇಹವನ್ನು ಪ್ರವೇಶಿಸಿ ತನ್ನ ನಿಜ ಸ್ವರೂಪ ಮರೆತು ಜೀವ ದೇಹಿಯಾಗಿ ಪರಮಾತ್ಮನ ಸಾನಿಧ್ಯದಿಂದ ದೂರವಾಯಿತ್ತು ಅದೇ ರೀತಿ ಅರಗಿನ ಪುತ್ಥಳಿ ಎಂಬ ದೇಹಕ್ಕೆ ವಿಷಯಗಳೆಂಬ ಉರಿಯನು ತೋಡಿಸಿದಾಗ ಒಳಗಿನ ಶುದ್ಧಾತ್ಮ ಕರಗಿ ಹೋಗಿ ಬರಿ ದೇಹಿಯಾಗಿ ಲೌಕಿಕದ ಸಿರಿಗೆ ಮೋಹಗೊಂಡನು. ಇವರೆಡು ಕ್ರಿಯೆಗಳು ಉಂಟಾಗಲು ಕಾರಣ ಮಾಯೆ. ಎಂದರೆ ಜೀವನಲ್ಲಿಯ ಮನಸ್ಸಿನ ಚಾಂಚಲ್ಯ. ಈ ಚಂಚಲತೆಯಿಂದಲೇ ಜೀವ ತನ್ನ ನಿಜ ಅಸ್ತಿತ್ವ ಮರೆತು ಮಾಯೆಯ ಸೆಳೆತಕ್ಕೆ ಒಳಗಾಗಿ ಅದರಂತೆ ನಡೆದುಕೊಳ್ಳುವನು. ಮಾಯೆ ಎಂಬುದು ದೇಹವಾಗಿ, ವಿಷಯ ವಾಸನೆಯಾಗಿ, ಚಂಚಲತೆಯಾಗಿ ತೋರುತ್ತದೆ.

೫.೩ ಮಲತ್ರಯಗಳು: ಮಾಯೆ

“ಆಣವ ಮಲ ಮಾಯಾಮಲ ಕಾರ್ಮಿಕ ಮಲವೆಂಬ
ಮಲತ್ರಯಂಗಳ ಕಳೆದುಳಿದು ನಿರ್ಮಲನಾದ ಶಿಷ್ಯನು
ಕಾಯ ಜೀವದ ಭ್ರಾಂತುಸೂತಕ ಹಿಂಗಿ ನಿಶ್ಯಂಕನಾದ ಗುರು
ಈ ಉಭಯ ಭಾವದೊಳಗೆ ಆವುದು ಮುಂದು
ಆವುದು ಹಿಂದೆಂದಱಿಯಬಹುದು?
ಕರಸ್ಥಲಕ್ಕೆ ಕಾರುಣ್ಯವ ಮಾಡಿದರೆ ಮನಸ್ಥಲಕ್ಕೆ ಹಂಗಿಲ್ಲ
ಮನಸ್ಥಲದಲ್ಲಿ ಸೆರಗೊಡ್ಡಿ ಬೇಡಿದಡೆ ಕರಸ್ಥಲದ ಲಿಂಗ ಕೈಸಾರಿತ್ತು
ಗುರುಸ್ಥಲದ ನಿಲವು ಪರಸ್ಥಲದಲಡಗಿದರೆ
ಭಾವ ಬಳಲಿತ್ತಿದೆನೋ ಗುಹೇಶ್ವರ” [೧೦]

ಶೈವದ ಸಂದರ್ಭದಲ್ಲಿ ಮಲತ್ರಯಗಳು ಪ್ರಮುಖವಾಗಿ ನಿಲ್ಲುತ್ತವೆ. ಆಧ್ಯಾತ್ಮಿಕ ಸಾಧನೆಯಲ್ಲಿ ಸಾಗುವಾಗ ಉಂಟಾಗುವ ಅಡೆ-ತಡೆಗಳು ಈ ಮಲತ್ರಯಗಳಾಗಿವೆ. ತನುತ್ರಯಗಳಾದ ಸ್ಥೂಲ, ಸೂಕ್ಷ್ಮ, ಕಾರಣ ಇವುಗಳಿಗೆ ಆಣವ, ಮಾಯಾ, ಕಾರ್ಮಿಕ ಆವರಿಸುತ್ತವೆ. ತನುತ್ರಯಗಳಲ್ಲಿ ಅಸಾಧ್ಯ ಬದಲಾವಣೆ ತರಬಲ್ಲ ಶಕ್ತಿ ಮೂರಕ್ಕಿದೆ. ಜೀವ ನಿರ್ಮಲನಾಗಬೇಕಾದರೆ ಗುರುವಿನ ಮಾರ್ಗದರ್ಶನ ಅಗತ್ಯ, ಕರಸ್ಥಲ-ಮನಸ್ಥಲ ಎರಡರಲ್ಲೂ ಸಾಮರಸ್ಯ ಸಾಧಿಸಬೇಕು. ಗುರುವಿನ ಮೂಲಕ ಕರದಲ್ಲಿ ಲಿಂಗವ ಪೂಜಿಸಿ ಮನದಲ್ಲಿ ಲಿಂಗವ ನೆಲೆಸುವಂತೆ ಭಕ್ತಿಯ ಮಾಡಿದ್ದು ಮುಕ್ತಿ ಸಾಧ್ಯ. ತನುತ್ರಯಗಳಾದ ಸ್ಥೂಲ ಸೂಕ್ಷ್ಮ ಕಾರಣ ಇವುಗಳಲ್ಲಿ 'ಮಾಯೆ' ಎಂಬುದು ಸೂಕ್ಷ್ಮದಲ್ಲಿ ಆವರಿಸಿ ಕಾಯವನ್ನು ತನ್ನಿಚ್ಛೆಯಂತೆ ವರ್ತಿಸುವಂತೆ ಮಾಡುತ್ತದೆ. ಶುದ್ಧ ಜೀವನನ್ನು ಅಶುದ್ಧಗೊಳಿಸಿ ಲೌಕಿಕದಲ್ಲಿ ತೊಳಲುವಂತೆ ಮಾಡುವ ಕಾರಣಕ್ಕೆ ಇವನ್ನು ಮಲವೆಂದು ಶುದ್ಧವಿಲ್ಲದ್ದು ಎಂದು

ಗುರುತಿಸಲಾಗಿದೆ.

ಪ್ರಾಪಂಚಿಕ ಬದುಕಿನ ಭಾಗವಾದ ಮನುಷ್ಯ ವಿಷಯಾಸಕ್ತಿಗಳೆಡೆಗೆ ಸೆಳೆಯಲ್ಪಡುತ್ತಾನೆ ಅದರಿಂದ ಮುಕ್ತನಾಗುವಲ್ಲಿ ಭಕ್ತಿ ಸಾಧನವಾಗುತ್ತದೆ.

೫.೪ ಶಿವಶಕ್ತಿ: ಮಾಯೆ:

"ಪಂಚಮಹಾಪಾತಕಗಳು ಬೇವ ಠಾವ ಕಂಡೆ
ಕಾಲನ ಕಾಲಲೊದೆವ ಠಾವ ಕಂಡೆ
ಮಾಯೆಯ ಬಾಯ ಕಟ್ಟುವ ಠಾವ ಕಂಡೆ
ಗುಹೇಶ್ವರ ಲಿಂಗಯ್ಯನ
ಎನ್ನ ಕರಸ್ಥಲದಲ್ಲಿ ಕಣ್ಣು ತುಂಬಿ ಚೆನ್ನಾಗಿ ಕಂಡೆ" [೧೧]

ಮಾಯೆಯಿಂದ ಮುಕ್ತಗೊಂಡು ಲಿಂಗ ಸಾಕ್ಷಾತ್ಕಾರವಾಗುವ ಬಗೆಯನ್ನು ಹೇಳಿದ್ದಾನೆ. ಪಂಚಮಹಾಪಾತಕಗಳು ಎರಡು ವಿಧದಲ್ಲಿವೆ ಒಂದು ಸ್ಥೂಲದೇಹಕ್ಕೆ ಸಂಬಂಧಿಸಿದ ಪಾತಕಗಳು (ಬಾಹ್ಯ) ಲೌಕಿಕಕ್ಕೆ ಸಂಬಂಧಿಸಿದರೆ ಇನ್ನೊಂದು–ಸೂಕ್ಷ್ಮದೇಹಕ್ಕೆ ಸಂಬಂಧಿಸಿದವು[೧೨] 'ಸ್ಥೂಲಪಾತಕಗಳೆಂದರೆ ಭಕ್ತರ ಕಂಡು ಉದಾಸೀನ ಮಾಡುವುದು, ಭಕ್ತರಿಗೆ ಉಪಚರಿಸದಿರುವುದು, ಭಕ್ತರೊಂದಿಗೆ ವಾದಿಸುವುದು, ಧರ್ಮಕಾರ್ಯಗಳನ್ನು ಮಾಡದಿರುವುದು, ಮಾಡಿದ ಸೇವೆಯನ್ನು ಹೇಳಿಕೊಳ್ಳುವುದು.[೧೩] ಇವನ್ನು ಸಾಮಾನ್ಯನಾದ ಭವಿ ಅನುಸರಿಸುತ್ತಾನೆ. ಗುರು–ಲಿಂಗ–ಜಂಗಮದ ನಿಜ ಸ್ವರೂಪ ಭವಿಯ ಅರಿವಿಗೆ ಬರಲಾರದು.

ನಿಜಭಕ್ತನಾಗಿ ಭಕ್ತರಿಗೆ ನಮಿಸುವುದು ಗುರುವೆಂದು ಆದರಿಸುವುದು ಗುರು–ಲಿಂಗ–ಜಂಗಮಕ್ಕೆ ಅರ್ಪಿಸಿ ಪ್ರಸಾದವನು ಕೊಳ್ಳುವುದು ಹಾಗೂ ದೇವನಲ್ಲಿ ಸರ್ವಾರ್ಪಣಗೈಯ್ಯುವುದು–ಈ ಆಚರಣೆಯನ್ನು ನಿಷ್ಠೆಯಿಂದ ಕೈಗೊಂಡಲ್ಲಿ ಋಣಾತ್ಮಕವಾದ ಪಂಚಮಹಾಪಾತಕಗಳು ಭಕ್ತನಿಂದ ದೂರ ಓಡಿ ಹೋಗುತ್ತವೆ. ಸಕಲ ದುಃಖ ನಿವಾರಣೆಯಾಗುತ್ತದೆ. ಕಾಲನ ಸೆಳೆತ ಮೀರಿ ನಿಲ್ಲಲು ಸಾಧ್ಯವಾಗುತ್ತದೆ. ಮಾಯೆಯ ಓಡತಕ್ಕೆ ಸಿಕ್ಕಿ ಬಾಯ ತುತ್ತಾಗುವುದನ್ನು ತಪ್ಪಿಸುತ್ತದೆ. ಕಾಮನ ಶಕ್ತಿಯನ್ನು ಕುಂದಿಸುತ್ತದೆ. ನಿಜದ ಆಧ್ಯಾತ್ಮಿಕ ಸಾಧನೆ ಎಂಬುದು ಲೌಕಿಕದ ಬದುಕಿನಲ್ಲಿ ಜೀವನನ್ನು ಭವಿಯಾಗಿಸುವ ಎಲ್ಲ ಪ್ರಬಲ ಶಕ್ತಿಗಳನ್ನು ಎದುರಿಸಬಲ್ಲದ್ದಾಗಿದೆ. ಮಾಯೆ ಎಂಬುದು ಶಿವನಿಂದ ಅಸ್ತಿತ್ವಗೊಂಡು ಶಿವನನ್ನು ಮೀರಿ ಬೆಳೆಯುವಂಥದ್ದಾರೂ ದೃಢ ಭಕ್ತಿಯ ಮುಂದೆ ನಿಲ್ಲಲಾರದದು. ಇಲ್ಲಿ ಮಾಯೆ ದೇವನ ಎದುರಿಗೆ ಅಶಕ್ತ ಜೀವನ ಎದುರಿಗೆ ಸಶಕ್ತ.

ಮತ್ತೊಂದೆಡೆ ಮದುವೆ ಎಂಬ ಸಂದರ್ಭದ ಮೂಲಕ ಮಾಯೆಯ ಸ್ವರೂಪವನ್ನು ಹೇಳಿದ್ದಾರೆ.

"ವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರು ಬಂದು
ಕೆಂಡದ ದಂಡೆಯ ಮುಡಿದು ಅಂಡಜನೆಂಬ ಅರಿಷಿಣವ ಮಿಂದು
ಉರಿಯೆಂಬ ಹಚ್ಚಡದ ಹೊದಿಕೆಯಲ್ಲಿ
ನಿಬ್ಬಣಿಗರು ಒಪ್ಪ ಬರವನೆ ಕಂಡು ನೀರಲಡಿಗೆಯ ಮಾಡಿ
ವಾಯದ ಕೂಸಿಂಗೆ ಮಾಯದ ಮದುವಣಿಗ! ಸಂಗ ಸುಖವಿಲ್ಲದೆ ಬಸುರಾಯಿತ್ತು
ಕೂಸೆದ್ದು ಕುಣಿದಾಡಿ ಸೂಲಗಿತ್ತಿಯನವಗ್ರಹಿಸಿತ್ತು
ಗುಹೇಶ್ವರಾ ಒಬ್ಬನಿಬ್ಬರು ಮೂವರು
ತ್ರೀದೇವತೆಗಳು ಬಲ್ಲರೆ ಆ ಲಿಂಗದ ಘನವೆನು?"[೧೪]

ಶರಣೆಂಬ ಸತಿಗೂ ಲಿಂಗವೆಂಬ ಪತಿಗೂ ಸಂಗವ ಸಮರತಿಯಹ ಕಾಲವೆ ವಿವಾಹವಾಗಿಪ್ಪುದಾಗಿ ಅದೀಗ–ಅವಿರಳ ವಿಟನ ಮದುವೆಯೆಂಬ ಶಬ್ದಕ್ಕರ್ಥ. ಆ ಸಂಗ ಸಮರತಿಯ ಕಾಲದಲ್ಲಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಯರೆಂಬ ಷಡುಶಕ್ತಿರೆಲ್ಲರೂ ಆ ಸಂಗಕ್ಕೆ ಅನುಕೂಲ ಭಾವವನೆಯ್ದಿ ಸುಜ್ಞಾನಾಗ್ನಿಯಯೀ ಮುಡಿದುಕೊಂಡರೆಂಬುದೀಗ–ನಿಬ್ಬಣಗಿತ್ತಿಯರೆಲ್ಲ ಬಂದು ಕೆಂಡದ ದಂಡೆಯನೆ ಮುಡಿದು ಕೊಂಡರೆಂಬ ಶಬ್ದಕ್ಕರ್ಥ. 'ಅಂಡ'ವೆಂದೊಡೆ ಚಿದ್ಬ್ರಾಂಹಾಂಡ 'ಜ' ಎಂದೊಡೆ ಅಲ್ಲಿಂದ ಹುಟ್ಟಿದ ಸುಜ್ಞಾನ ಕ್ರಿಯೆಗಳು ಅಂತಪ್ಪ ಸುಜ್ಞಾನ ಕ್ರಿಯೆಯಗಳನೆ ಅಂಗಲೇಪವ ಮಾಡಿಕೊಂಡು ಮಹಾಜ್ಞಾನಾಗ್ನಿ ಪ್ರಕಾಶವನೇ ಸರ್ವಾಂಗಕ್ಕೆ ಆವರಣವ ಮಾಡಿಕೊಂಡು ಆ ಶರಣನಲ್ಲಿ ಷಡು ಶಕ್ತಿಯರು ಆ ತತ್ವದಲ್ಲಿ ಏಕರಸಭಾವವನೆಯ್ದುವದಕ್ಕೆ ಉದ್ಯೋಗ ವಾಗುತ್ತಿಪ್ಪಲ್ಲಿ, ಇಂತು ಸಮರಸಕ್ಕೆ ಬಪ್ಪ ಕಾಲದೊಳು ನೀರೆಂದೊಡೆ ಮನ, ಆ ಮನವ ಪರಮಾನಂದವ ರಸವಪ್ಪಂತು ಆ ಜ್ಞಾನದಿಂದ ಪಾಕವ ಮಾಡಿ ಆ ವಸ್ತುವಿನಲ್ಲಿ ಸಮವೇದಿಸಲು ಸತಿಭಾವವು ಇಲ್ಲದೆ ಪತಿಯೆಂಬ ಇಲ್ಲದೆ ಅಸಂಯೋಗ ಸಂಬಂಧವೇ ಸಮರತಿಯಾಗಿ ತನ್ನ ನಿಜವು ತನ್ನಲ್ಲಿ ಗರ್ಭೋತ್ಪತ್ತಿಯಾಗುತ್ತಿತ್ತು. ತನ್ನ ನಿಜವು ತನ್ನಲ್ಲಿ ಹುಟ್ಟಿದ ಆ ನಿಜದ ನಿಲವು ಸ್ವಲೀಲಾಪರವನೇಯ್ದು ಪರಮಾನಂದದಲ್ಲಿ ಓಲಾಡಿ ಚಿಚ್ಛಕ್ತಿಯ ನವಗ್ರಹಿಸಿ ನಿಂದಿತ್ತು. ಇಂತಪ್ಪ ಮಹಾಶರಣನ ನಿಲುವನು ಬ್ರಹ್ಮ, ವಿಷ್ಣು ಮೊದಲಾದವರು ಅರಿಯರು.[೧೫] ಮದುವೆ ಸಮರತಿ, ಬಸಿರು–ಬಾಣಂತನ ಎಂಬ ಪರಿಕಲ್ಪನೆಗಳನ್ನು ಜೋಡಿಸಿ ಜೀವ ಸೃಷ್ಟಿಯ ಚಿತ್ರಣವನ್ನು ಕೊಟ್ಟು ಅದಕ್ಕೆ ಪರ್ಯಾಯವಾಗಿ ಭಕ್ತಿಯ ಮೂಲಕ ಜ್ಞಾನದ ಸಮರತಿಯಿಂದ ಮಹಾಶರಣನೆಂಬ ನಿಲುವಿನ ಹುಟ್ಟನ್ನು ವಿವರಿಸಿದ್ದಾರೆ. ಆಧ್ಯಾತ್ಮಿಕ ನೆಲೆಯಲ್ಲಿ ಮಹಾಶರಣನೆನಿಸಿಕೊಂಡವನ ಕುರಿತು ಪ್ರಸ್ತಾಪಿಸುತ್ತದೆ. ಅವಿರಳ ವಿಟನೆಂಬ ಲಿಂಗ–ಸತಿಯ ಶರಣ. ಶರಣನೆಂಬ ಸತಿಗೆ ಲಿಂಗವೆಂಬ ಪತಿಗೆ ಭಕ್ತಿಯ ಮೂಲಕ ಸುಜ್ಞಾನವ ಮೂಡಿಸಿ ಪರಮಾನಂದವನ್ನು ಸಾಧಿಸುವುದೆಂದಾಗಿದೆ.

ಸಾಮಾನ್ಯನ ಅರಿವಿಗೆ ನಿಲುಕುದ ಸ್ಥಿತಿ ಪರಮಾತ್ಮನಲ್ಲಿ ಐಕ್ಯನಾದ ಶರಣ ತ್ರಿಮೂರ್ತಿಗಳಿಗಿಂತ ಶ್ರೇಷ್ಠನಾಗುತ್ತಾನೆ. ವಾಯದ ಕೂಸಿಂಗೆ ಮಾಯದ ಮದುವಣಿಗೆ ಎಂಬುದು ವಾಯ–ಮಾಯೆಗಳೆರಡೂ ಕಲ್ಪಿತವಾದವು. ಲೌಕಿಕದ ನೆಲೆಯಲ್ಲಿ ಮಾಯೆ ಎಂಬುದು ಭ್ರಮೆಯಾಗಿದೆ.

೫.೫ ದ್ವಂದ್ವ: ಮಾಯೆ:

"ನಿರ್ಣಯವನರಿಯದ ಮನವೆ ದುಗುಡವ ನಾಹಾರಗೊಂಡೆಯಲ್ಲಾ ।
ಮಾಯಸೂತ್ರವಿದೇನೋ? ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ
ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಗುಹೇಶ್ವರಾ" [೧೬]

ತನ್ನ ನಿಜದ ನಿಲವನರಿಯೆನೆಂದು ಚಿಂತಾಗ್ರಾಹಕನಾದೊಡೆ ಅದೇ ಮಯಾಸೂತ್ರವಾದ ಕಾರಣ. ನಿರ್ಣಯವನರಿಯದ ಮನವೇ ದುಗುಡವ ನಾಹಾರಗೊಂಡೆಯಲ್ಲ ಮಾಯಾ ಸೂತ್ರವಿದೆನೊ ಎಂಬ ಶಬ್ದಕ್ಕರ್ಥ. ಅದು ತಾನೆ ಜ್ಞಾನ ದೃಷ್ಟಿಯ ಮರವೆಯಾದ ಕಾರಣ–ಕಂಗಳೊಳಗಣ ಕತ್ತಲೆ ತಿಳಿಯದಲ್ಲಿ ಎಂಬ ಶಬ್ದಕ್ಕರ್ಥ. ಆ ಸುಜ್ಞಾನ ಪ್ರಭೆಯೊಳಗೆ ಮಹಾಜ್ಞಾನ ಶೃಂಗಾರವಾಗಿಪ್ಪ ತನು ತಾನೆಂದರಿಯದೆ ತನ್ನ ತಾನರಸಿ ಬಳಲುತ್ತಿಪ್ಪದು ಮಿಥ್ಯಾ ಜ್ಞಾನವಾದ ಕಾರಣ–ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಎಂಬ ಶಬ್ದಕ್ಕರ್ಥ'.[೧೭] ಈ ವಿವರಣೆಯಲ್ಲಿ ಆಧ್ಯಾತ್ಮಿಕ ಅನುಭಾವದ ಹುಡುಕಾಟದಲ್ಲಿ ಜೀವ ತನ್ನ ತಾನರಿಯವುದಾಗಿದೆ.

ಸಾಮಾಜಿಕ ಬದುಕಿನ ಸಂದರ್ಭಗಳಿಗೆ ಮನುಜ ಮುಖಾಮುಖಿಯಾದಾಗ ಪ್ರತಿಕ್ರಿಯಿಸಬೇಕಾ ಗುತ್ತದೆ. ಲೌಕಿಕ–ಅಲೌಕಿಕ ನೆಲೆಯಲ್ಲಿ ಈ ಪ್ರತಿಕ್ರಿಯೆಗಳು ಭಿನ್ನವಾಗುತ್ತವೆ. ಅಲೌಕಿಕ ಸ್ತರದಲ್ಲಿ ವ್ಯಕ್ತಿ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸಿಕೊಳ್ಳಬೇಕಾದಾಗ ಉಂಟಾಗುವ ಮಾನಸಿಕ ಸ್ಥಿತಿಯಲ್ಲಿನ ದ್ವಂದ್ವವೇ 'ಮಾಯೆ' ಯಾಗಿದೆ. ಮಾಯೆ ಜೀವ ಸೂತ್ರವಾಗಿ ಮನುಷ್ಯನನ್ನು ಗೊಂಬೆಯಂತೆ ತನ್ನಿಷ್ಟಕ್ಕೆ ಆಡಿಸುತ್ತದೆ. ಮಾಯೆಯ ಪ್ರಭಾವದಿಂದ ಅಜ್ಞಾನವನ್ನು ಜ್ಞಾನವಾಗಿ ಭಾವಿಸುತ್ತದೆ. ಮಾನವ ಬದುಕಿನ ಸನ್ನಿವೇಶಗಳಿಗೆ ಸೂಕ್ತ ಪರಿಹಾರ ಕಾಣದೆ ತೊಳಲಾಡುವಂತೆ ಮಾಡುತ್ತದೆ. ಬೆಳಕೆಂಬ ಜ್ಞಾನವನ್ನು ಅರಿಯದೆ ಕತ್ತಲೆಯೆಂಬ ಅಜ್ಞಾನದಲ್ಲಿ ಸುಖದಿಂದ ಬದುಕುವಂತೆ ಪ್ರೇರೇಪಿಸುತ್ತದೆ. ಭಗವಂತ ಮನುಜನನ್ನು ಸೂತ್ರದ ಗೊಂಬೆಯಂತೆ ಆಡಿಸುವ ಪರಿಯಲ್ಲಿ ಮಾಯೆ ಭಗವದ್‌ಸೃಷ್ಟಿಯಾದ ಮನುಜನನ್ನು ಲೌಕಿಕದಲ್ಲಿ ಸೂತ್ರದ ಗೊಂಬೆಯಂತೆ ಆಡಿಸುತ್ತದೆ.

'ಮಾಯೆಯ ಸೃಷ್ಟಿಯಾಗಿರುವ ಮರವೆಗೆ ಬಲಿಯಾದ ಮನುಷ್ಯ ಮನಸ್ಸಿಗೆ ದುಗುಡವನ್ನು ಬಿಟ್ಟರೆ ಇನ್ನೇನು ಆಹಾರವಾಗಬಲ್ಲದು. ಮಾಯಾ ಸೂತ್ರದ ಸಂಚಲನೆಯಿಂದ ಏನೆಲ್ಲಾ ಅವಾಂತರಗಳು ನಡೆಯುತ್ತವೆ? ಕಣ್ಣೊಳಗಿನ ಕತ್ತಲೆ ಇನ್ನೂ ಕಪ್ಪುಗಟ್ಟುತ್ತದೆ. ಹೊರಹೊಮ್ಮಬೇಕಾದ ನಿಜದ ಬೆಳಕಿನ ಶೃಂಗಾರ ಬಳಲುತ್ತದೆ. ಈ ಎಲ್ಲ ಅವಸ್ಥೆಗಳಿಗೂ

ಮೂಲವಾದದ್ದು ಮಾಯೆ.[೧೮] ಎಂಬುದು ಸತ್ಯ. ಮಾಯೆಯ ಸೆಳೆತಕ್ಕೆ ಸಿಕ್ಕ ಮನುಷ್ಯ ತನ್ನ ಅಸ್ತಿತ್ವ ಕಳೆದುಕೊಳ್ಳುವನು. ಮಾಯೆ ಭಾವನಾತ್ಮಕವಾಗಿ, ಮಾನಸಿಕವಾಗಿ ಆವರಿಸುವಂಥದ್ದಾಗಿದೆ. ಬಾಹ್ಯದಲ್ಲಿ ಇದಕ್ಕೆ ರೂಪ-ಆಕಾರಗಳಿಲ್ಲ. ಮನುಷ್ಯನ ಮನಸ್ಸನ್ನು ಆಲೋಚನೆಗಳ ರೂಪದಲ್ಲಿ ಹೊಕ್ಕು ಆಕಾಂಕ್ಷೆಯಾಗಿ ಮಾರ್ಪಾಡುಗೊಂಡು ಪಡೆಯ ಬೇಕೆಂಬ ಹಪಹಪಿಯನ್ನು ಮೂಡಿಸುತ್ತದೆ. ಪಡೆಯುವ ಪ್ರಯತ್ನದಲ್ಲಿ ಸರಿ-ತಪ್ಪು ನಿರ್ಣಯಿಸಲಾರದ ಸ್ಥಿತಿಗೆ ತಲುಪುವಂತೆ ಮಾಡುತ್ತದೆ. ಪರಿಣಾಮವಾಗಿ ಮನುಜ ದ್ವಂದ್ವಕ್ಕೊಳಗಾಗುತ್ತಾನೆ. ಈ ದ್ವಂದ್ವವೇ ಮಾಯೆ ಆಗಿದೆ.

೫.೬ ಪ್ರಬಲ ತೆರೆ: ಮಾಯೆ

"ಯುಗ ಜುಗ ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ
ಲಿಂಗವೆಂದರಿತವರಾರೋ? ಶಿವಶಿವಾ।
ವಾಯದಲೊದಗಿದ ಮಾಯಾವಾದಿಗಳು
ದೇವನೆಂದರಿತವಾರಾರೋ?
ಶಿವಶಿವಾ ಅಗ್ನಿ ತೃಣದೊಳಗಡಗಿ ಲೀಯವಾದಡೆ
ಗುಹೇಶ್ವರ ನಿಮ್ಮ ಶರಣ ಬಲ್ಲ" [೧೯]

'ಅಣುರೇಣು ತೃಣ ಕಾಷ್ಠದೊಳಗೆ ಪರಿಪೂರ್ಣಶಿವನೆಂಬ ಭೇದವ ವಿವೇಚಿಸಿ ನೋಡಿ ತನ್ನ ತಾನರಿದು ಸುಖಿಯಾಗಿಪ್ಪ ಲಿಂಗೈಕ್ಯನು ಅನಂತಕೋಟಿ ಬ್ರಹ್ಮಾಂಡಗಳಳಿವಲ್ಲಿ ಆ ಜಗದ ಆಗು-ಹೋಗೆ ನೇನೆಂದೂ ಅರಿಯನು. ಈ ಸ್ಥಿತಿಯನು ಮಿಥ್ಯ ದೇಹಿಗಳರಿಯ ರೆಂಬುದೀ ವಚನದ ತಾತ್ಪರ್ಯಾರ್ಥವಾಗಿದೆ.'[೨೦] ದೇವಲೋಕ, ಮಾನವಲೋಕಗಳೆಲ್ಲವೂ ಲಯವಾಗುವಂಥವು. ಜಗತ್ ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಉಂಟಾಗುವ ಪ್ರಕ್ರಿಯೆಗೆ ಕಾರಣನಾದ ನಿಜ ಪರಮಾತ್ಮನನ್ನು ಅರಿಯಲಾರದ ಲೌಕಿಕ ಜೀವಿಗಳು ತಮ್ಮದೆಯಾದ ಭ್ರಮಾತ್ಮಕ ತಾತ್ವಿಕ ಸಿದ್ಧಾಂತ ಕಟ್ಟಿಕೊಂಡು ತೊಳಲಾಡುವರು.

'ಯುಗಯುಗಗಳು ಸರಿದು ಸರಿದು ಹೋಗುತ್ತವೆ. ಬ್ರಹ್ಮಾಂಡಗಳೆಲ್ಲ ಕಾಲ ಪ್ರವಾಹದಲ್ಲಿ ಸಿಕ್ಕು ನಷ್ಟವಾಗುತ್ತವೆ. ಆದರೆ ಉಳಿಯುವುದು ಒಂದೆ ಒಂದು. ಅದು ಪರವಸ್ತು ಅಂದರೆ ಲಿಂಗ. ಕಷ್ಟಕಾಲದಲ್ಲಿ ಅಗ್ನಿ ಅದೃಶ್ಯವಾಗಿ ನೆಲೆಸಿದಂತೆ ಲಿಂಗವು ಎಲ್ಲೆಲ್ಲಿಯೂ ನೆಲೆಸಿದೆ. ನಶ್ವರವಾದ ದೇಹಾಭಿಮಾನಿಗಳು ಅದನ್ನೆಂತು ಬಲ್ಲಿರಾ? ಕಾಲದಲ್ಲಿ ಕರಗಿ ಹೋಗುವ ದೇಹಾತ್ಮಭಾವ ತೊಲಗದೆ ನಿತ್ಯ ಸತ್ಯವಾದ ಶಿವನ ಅರಿವು ಸಾಧ್ಯವಾಗದು.'[೨೧] ಇಡಿಯಾಗಿ ನಿತ್ಯ ಸತ್ಯನಾದ ಪರಮಾತ್ಮನ ಚಿಂತನ ಸಾನಿಧ್ಯಕ್ಕೆ ಹಂಬಲಿಸಲು ಮನಸ್ಸನ್ನು ಸಿದ್ಧಗೊಳಿಸುವ ಕ್ರಿಯೆ ಇದಾಗಿದೆ. ಕಾಲ-ದೇಶಗಳೆರಡು ನಿಶ್ಚಲವಾದವುಗಳಲ್ಲ. ನಿರಂತರ, ಚಲನಶೀಲ ಹಾಗೂ ಪರಿವರ್ತನಶೀಲವಾದವುಗಳು.

ಅವು ಶಾಶ್ವತವೆಂದು ನಂಬಿ (ಕಾಯ) ದೇಹವೆಂಬ ಅಭಿಮಾನವುಳ್ಳ ವ್ಯಕ್ತಿ ಅಥವಾ ಜೀವ ಮಾಯಾವಾದಿಯಾಗುತ್ತಾನೆ. ಮಾಯೆ ಕೈಗೊಂಬೆಯಾಗಿ ವಿಷಯ ಸುಖಗಳಲ್ಲಿ ತೃಪ್ತಿ ಕಾಣುತ್ತಾ ಅದನ್ನು ಶಾಶ್ವತ ಎಂಬ ಭ್ರಮೆಯಲ್ಲಿ ಉಳಿಯುತ್ತಾನೆ. ಮನುಜ ಅದರಾಚೆ ಯೋಚಿಸಲು ಸಾಧ್ಯವಿದ್ದರೂ ಯೋಚಿಸಲಾರ. ವಾಯದೊಳಡಗಿದ ಮಾಯಾ ವಾದಿಗಳು. ಎಂದರೆ ಶಾಶ್ವತವಲ್ಲದ ಲೌಕಿಕದಲ್ಲಿದ್ದು, ಅದೇ ಶಾಶ್ವತವೆಂದು ನಂಬಿದವರು. ವಾಸ್ತವದಲ್ಲಿ ಮಾಯೆಯ ತತ್ವ ಸಿದ್ಧಾಂತಗಳನ್ನು ಅನುಸರಿಸುವರು ಎಂಬ ಅರ್ಥವಾಗುತ್ತದೆ. ಮಾಯಾವಾದಿಗಳು ಎಂಬ ಮಾತನ್ನು ಅಲ್ಲಮ ತೀರಾ ಸೂಕ್ಷ್ಮವಾಗಿ ವ್ಯಂಗ್ಯಾರ್ಥದಲ್ಲಿ ಬಳಸಿದ್ದಾನೆ. ಅಗ್ನಿ ಮಾಯೆಯ ಪ್ರಾತಿನಿಧಿಕ ರೂಪವಾಗಿ ಅದನ್ನು ಶಾಂತಗೊಳಿಸಬಲ್ಲ ಅಥವಾ ಆವರಿಸಬಲ್ಲ ನೀರು ಗುಹೇಶ್ವರ ರೂಪವಾಗಿ ಶಿವನ ಅಲ್ಲಮ ತಾನು ಈ ಲೋಕದಿಂದ ಬೇರ್ಪಟ್ಟು ಹೊರನಿಂತು ಲೋಕದ ಜನರನ್ನು ವೀಕ್ಷಿಸಿ ಹೇಳುತ್ತಾನೆ. ಜಗತ್ತು ಶಾಶ್ವತವಾದುದಲ್ಲ ಒಂದಿಲ್ಲೊಂದು ದಿನ ಲಯವಾಗುವಂತಹುದು ಎಂಬ ಅರಿವು ಉಳ್ಳ ಅಲ್ಲಮ ಮಾಯೆಯನ್ನು ಸಮರ್ಥವಾಗಿ ಎದುರಿಸುತ್ತಾನೆ ಎಂಬುದನ್ನು 'ಇಲ್ಲಿ ಪ್ರಳಯದ ವಿನಾಶದ ಪರಿಕಲ್ಪನೆಯ ಕುರಿತು ಉದ್ವೇಗಕ್ಕೆ ಒಳಗಾಗದೇ ಅದನ್ನು ಗಟ್ಟಿಯಾಗಿ ಸ್ವೀಕರಿಸುತ್ತಾನೆ. ಸೃಷ್ಟಿಯ ಈ ವ್ಯಾಪಾರದಿಂದ ಭೀತನಾದವನಿಗೆ ಲಿಂಗದ ಸ್ವರೂಪ ಅರ್ಥವಾಗಲು ಪ್ರಬಲ ತೆರೆಗಳ ಹಿಂದೆ ಲಿಂಗದ ಪ್ರಶಾಂತ ಸಮುದ್ರವಿದೆ ಎಂಬ ಆಧ್ಯಾತ್ಮಿಕ ಆಶಾವಾದ[೨೨] ಅಲ್ಲಮನಲ್ಲಿ ಅಭಿವ್ಯಕ್ತವಾಗಿದೆ ಎಂಬ ಅಭಿಪ್ರಾಯವಿದೆ. ಅಲ್ಲಮ ಮಾಯೆಯ ಪ್ರಭಾವವನ್ನು ನೆಲೆಯಲ್ಲಿನಿಂತು. ಅರಿಯದವರ ಸ್ಥಿತಿಯನ್ನು ವ್ಯಕ್ತಪಡಿಸುತ್ತಾನೆ. ಇಲ್ಲಿ ಪ್ರಬಲ ತೆರೆಯೆಂಬುದನ್ನು ಮಾಯೆಗೆ ಹೋಲಿಸಲಾಗಿದೆ.

೫.೭ ಮರೆವು: ಮಾಯೆ

"ತನ್ನ ತಾನರಿದಡೆ ನುಡಿಯೆಲ್ಲಾ ತತ್ವ ನೋಡಾ
ತನ್ನ ತಾ ಮರೆದಡೆ ನುಡಿಯೆಲ್ಲಾ ಮಾಯೆ ನೋಡಾ
ಅರಿದು ಮರೆದ ಶಿವಯೋಗಿಯ ಶಬುದವೆಲ್ಲ
ಉಪದೇಶವಲ್ಲದೇ ಭಿನ್ನವುಂಟೆ?
ನಿನ್ನ ಮನದ ಕಳವಳ ತಿಳುಹಲೆಂದು ಮಾತಾಡಿಸಿ ನೋಡಿದೆಡೆ,
ಎನ್ನ ಮನದೊಳಗೆ ಕಂದು ಕಲೆಯೆಂಬುದಿಲ್ಲ ನೋಡಾ।
ನಮ್ಮ ಗುಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ
ಬಾಯ್ದೆಗೆದೆನಲ್ಲದೆ ಭಿನ್ನವುಂಟೆ ಹೇಳಾ ಮರುಳೇ"[೨೩]

"ಅರಿತು ಆಡಿದ ಮಾತು ಪರತತ್ವ, ಅರಿಯದೇ ಆಡಿದ ಮಾತು ಮಾಯೆ, ಅರಿತ ಶರಣ ನಡೆದರೆ ನಿರ್ಗಮನಿ ನುಡಿದರೆ ನಿಶ್ಶಬ್ದಿ"[೨೪] ಅರಿವಿನ ಕುರುಹನ್ನು ಮರೆತ

ಮುಕ್ತಾಯಕ್ಕನಿಗೆ ಅಲ್ಲಮ ನಿಜವನ್ನು ಅರುಹುತ್ತಾನೆ. ಬಹಿರಂಗದಲ್ಲಿ ಕಳೆದುಹೋದದ್ದು ಸತ್ಯವಲ್ಲ, ಅಂತರಂಗದಲ್ಲಿ ಉಳಿದಿದ್ದು ಸತ್ಯವಾಗಿದೆ. ಈ ವಚನ ಅಲ್ಲಮನ ಎಲ್ಲ ಕಾರ್ಯ ಕಲಾಪಗಳಿಗೂ ಸೂತ್ರ ಪ್ರಾಯವಾಗಿದೆ. ಆತ ತನಗಾಗಿ ಈಗ ಏನೂ ಮಾಡಬೇಕಿಲ್ಲ. ಅರಿದು ಮರೆದ ಶಿವಯೋಗಿಯ ಶಬುದವೆಲ್ಲ ಉಪದೇಶವಲ್ಲದೆ ಭಿನ್ನವುಂಟೆ? ಎಂಬ ಮಾತು ಶಿವಯೋಗದ ಪೂರ್ಣ ದೃಷ್ಟಿಯನ್ನು ಅರ್ಥವತ್ತಾಗಿ ನಿರೂಪಿಸುತ್ತಿದೆ. ಅರವಿಂದರ ಆಧುನಿಕ ದೃಷ್ಟಿಯ ಪೂರ್ಣಯೋಗವನ್ನು ಗರ್ಭೀಕರಿಸಿಕೊಂಡಿದೆ.[೨೫] ಅಲ್ಲಮನ ಯೋಗದ ಕಲ್ಪನೆ ಅರವಿಂದರಲ್ಲಿ ಸಾಮ್ಯವಾಗಿದೆ. ಅರಿದು ಮರೆದ ಎಂಬಲ್ಲಿ ಜೀವ ತನ್ನನ್ನರಿತ ತನ್ನ ತನವ ಮರೆವುದಾಗಿದೆ.

ಯೋಗ ಸಾಧನೆಯ ಮಹತ್ವ ನಿಜಯೋಗಿಯ ವ್ಯಕ್ತಿತ್ವ ವಿಶಿಷ್ಟತೆಯನ್ನು ಇದು ಸಾರುತ್ತದೆ. 'ಅರಿವು'

–'ಮರೆವು'ಗಳ ಭಿನ್ನತೆ ಕಾಣುತ್ತದೆ. ಶಿವಯೋಗಿಯಾದವನು ಆತ್ಮಜ್ಞಾನದ ಅರಿವು ಹೊಂದಿರುತ್ತಾನೆ. ಜೀವ ತನ್ನ ತಾನರಿಯಲು ತಾನಲ್ಲದೆ ಮತ್ತೆ ಅನ್ಯವಿಲ್ಲ. ತನ್ನ ತಾನರಿದವಂಗೆ ಇದಿರಿಟ್ಟು ಅರಸುವ ಅರಕೆಯುಂಟಾದ ಕಾರಣವಾಗಿದೆ.[೨೬] ಅಂದರೆ ನಿಜಜ್ಞಾನ ಮೂಡಿ ಅರಿವಿನ ಮೂಲಕ ಜೀವ ತಾನೆಂದು ಅರಿತು ನಿಜ ಕುರುಹನ್ನು ಹೊಂದುತ್ತಾನೆ. ಸಾಮಾಜಿಕ ಸ್ತರದಿಂದ ಬಿಡಿಸಿಕೊಂಡು ಅಲ್ಲಮ ಯೋಗಿಕ ನೆಲೆಯಲ್ಲಿ ಅರಿವು– ಕುರುಹನ್ನು ವಿವರಿಸಿ ಮಾಯೆ ಬಣ್ಣನೆಯು ಮಾತಾಗಿ, ಡಾಂಭಿಕತೆಯಾಗಿ ತೋರುತ್ತದೆ. ಆತ್ಮ–ಜೀವದ ಸ್ವರೂಪವನ್ನು ಅರಿತಿರುತ್ತಾನೆ. ಈ ಅರಿವನ್ನು ಅರಿತು ವರ್ತಿಸಿದಾಗ ಅಲ್ಲಿ ಅಹಂಮಿಕೆ ಕಾಣಿಸದು. ಮಾತೆಲ್ಲ ತತ್ವ–ಚಿಂತನೆಗಳಾಗಿ ತೋರುತ್ತವೆ. ಆದರೆ ಅರಿವಿನ ಮರೆಯಲ್ಲಿ ಅಹಂಮಿಕೆಯ ಭಾವ ಮೂಡಿದಾಗ ಮಾತು ತತ್ವವಾಗದೇ ಮಾಯೆಯ ರೂಪ ಪಡೆಯುತ್ತದೆ. ಮಾಯೆ ಎಂಬುದು ನಿತ್ಯ ಸತ್ಯ ಅಭಿವ್ಯಕ್ತಿಯಾಗದೆ ಬರಿಯ ಬಣ್ಣನೆಯ ಮಾತಾಗಿ ಹೊಗಳಿಕೆಯ ನುಡಿಗಳಾಗಿ ಕಾಣುತ್ತದೆ. ನಿಜ ಶಿವಯೋಗಿಯಾದವನು ಕೂಡಾ ತಾನು ನಿಜಭಕ್ತ ಎಂಬ ಕುರುಹನ್ನು ತೋರಿ ಶಿವನನ್ನು ಮರೆತಾಗ ಆತನ ಮಾತುಗಳಲ್ಲಿ ಡಾಂಭಿಕತೆ ನಲಿದಾಡುತ್ತದೆ. ವರ್ತನೆಯಲ್ಲಿ, ಆಚರಣೆಯಲ್ಲಿ ವೈಭವ ಮನೆ ಮಾಡುತ್ತದೆ ಆದ್ದರಿಂದ ನಿಜಭಕ್ತ ತನ್ನ ತಾನರಿತು ತನ್ನನ್ನು ಇಲ್ಲವಾಗಿಸಿಕೊಳ್ಳುವ ಶಿವನಲ್ಲಿ ಐಕ್ಯನಾಗಬೇಕು. ಅಹಂಮಿಕೆ ಎಂಬ ಅಹಂಕಾರದ ಪ್ರಭಾವದಿಂದ ಶರಣ ನಾಡುವ ಮಾತು 'ಮಾಯೆ' ಆಗುತ್ತದೆ. ಮಾಯೆ ಶಿವಯೋಗಿಯ ಸಮೀಪಕ್ಕೂ ಸುಳಿಯಲು ಸಾಧ್ಯವಿಲ್ಲ.

೫.೮ ಕಾಯ: ಮಾಯೆ

"ಕಾಯದ ಕಳವಳ ಗೆಲಿದಡೆನೋ
ಮಾಯದ ತಲೆಯನರಿಯದನ್ನಕ್ಕರ?

ಮಾಯೆಯ ತಲೆಯನರಿದಡೆನೋ
ಜ್ಞಾನದ ನೆಲೆಯನರಿಯದನ್ನಕ್ಕರ?
ಜ್ಞಾನದ ನೆಲೆಯ ನಱಿದಡೆನೋ ತಾನು ತಾನಾಗದನ್ನಕ್ಕರ?
ತಾನು ತಾನಾದ ಶರಣನ ನಿಲವಿಂಗೆ
ಒಂದು ಧಾರೆ ಮೇರೆಯುಂಟೆ ಗುಹೇಶ್ವರ"[೨೭]

ಅಂಗವಿಕಾರವ ಹಿಂಗಿಸಿ ಮಾಯೆಯ ನಿವೃತ್ತಿ ಮಾಡಿ ಸುಜ್ಞಾನದ ನೆಲೆಯನಂದು ತಾನೆ ಪರಬ್ರಹ್ಮವೆಂದರಿದ ಶಿವಶರಣ ನಿಲುವು ಪ್ರಮಾಣಕ್ಕೆ ಬಾರದು'[೨೮] ಇಲ್ಲಿ ನಿಜ ಶರಣನ ಸ್ವರೂಪವನ್ನು ವಿವರಿಸಲಾಗಿದೆ. ಶರಣನಾಗುವ ಕ್ರಿಯೆಯಲ್ಲಿ ಹಂತಹಂತವಾಗಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಲಾಗಿದೆ. ತಾನು ತಾನಾಗಿ ತನ್ನತನವ ಮರೆತವನು ನಿಜವಾದ ಶರಣ. ಈ ಶರಣ ಹಂತವನ್ನು ಷಟಸ್ಥಲಗಳಲ್ಲಿ ಗುರುತಿಸಿದ್ದುಂಟು. ಆದರೆ ಅದರಾಚೆ ಅಲ್ಲಮನು ಶರಣನಾಗುವ ವ್ಯಕ್ತಿ ಬದಲಾಗಬೇಕಾದ ವಿಧಾನವನ್ನು ಪ್ರಕ್ರಿಯೆಯ ರೂಪದಲ್ಲಿ ಹೇಳಿದ್ದಾನೆ. ಕಾಯದ ಕಳವಳವನ್ನು ಇಲ್ಲವಾಗಿಸಿಕೊಳ್ಳುವುದು ಜೀವಮೊದಲ ಕಾಯದ ನೋವು-ನಲಿವು, ಸುಖದುಃಖಗಳಿಂದ ಮುಕ್ತನಾದ ಮೇಲೆ ಅನಂತವಾದ ಶಾಂತಿ, ತೃಪ್ತಿ ದೊರೆಯಲು ಸಾಧ್ಯ. ಆದ್ದರಿಂದ ಕಾಯದ ಮೋಹವನ್ನು ತ್ಯಜಿಸಬೇಕು ಅಂತರಂಗ-ಬಹಿರಂಗವೆಂಬ ಭಿನ್ನತೆಗಳು ಇಲ್ಲವಾಗಬೇಕು. ಆಗ ಜ್ಞಾನ ಕುರುಹು ಮೂಡುತ್ತದೆ. ನಂತರದಲ್ಲಿ ಮಾಯೆಯ ಹಿಡಿತದಲ್ಲಿರುವ ಪಂಚೇಂದ್ರಿಯಗಳ ನಿಜ ಕ್ರಿಯೆಯನ್ನು ಅರಿಯಬೇಕು. ಹೀಗೆ ಬಾಹ್ಯ-ಆಂತರಿಕ ಕ್ರಿಯೆಗಳ ಮೇಲೆ ನಿಯಂತ್ರಣ ಸಾಧಿಸಿದಾಗ ನಿಜಜ್ಞಾನ ಅರಿವಿಗೆ ಬರುತ್ತದೆ. ಆತ್ಮಜ್ಞಾನದ ಬೆಳಕಿನಲ್ಲಿ ತಾನು ಬರಿಯ ಜೀವನಾಗದೆ ಜೀವ ಚೈತನ್ಯವಾಗಿ ಪರಿವರ್ತಿತನಾಗುತ್ತಾನೆ. ಆಗ ಮಾತ್ರ ಜೀವನಲ್ಲಿ ನಿಜ ಶರಣ ನಿಲುವು ಮೈದೋರುತ್ತದೆ. ಆತ ಆದಿ-ಅಂತ್ಯಗಳಿಲ್ಲದ ಪರಮಾತ್ಮನ ಅಂಶವಾಗಿ ಕಾಣುತ್ತಾನೆ.

ಇಲ್ಲಿ ಮಾಯೆ ಎಂಬುದು ಕಾಯದ ಆಂತರ್-ಬಹಿರ್ ರೂಪದಲ್ಲಿ ವ್ಯವಹರಿಸುವಂಥದ್ದು, ಅದೃಶ್ಯ ಸ್ವರೂಪದ ಮಾಯೆ 'ಜೀವನ' ಕಾಯದ ಕ್ರಿಯೆಗಳ ಮೂಲಕ ಸದೃಶವಾಗುತ್ತದೆ ಆದ್ದರಿಂದ ಕಾಯದ ಬಾಹ್ಯ ಆಚರಣೆ-ವರ್ತನೆಗಳ ಮೇಲೆ ನಿಯಂತ್ರಣ ಸಾಧಿಸಿದರೆ ಸಾಲದು ಅಂತರಂಗದಲ್ಲಿ ಕಾಣದಂತಿರುವ ವಿಷಯ ವಾಸನೆಯನ್ನು ತೊರೆಯಬೇಕು ಆಗ ಮಾಯೆ ಇಲ್ಲವಾಗುತ್ತದೆ.

೫.೯ ಲೌಕಿಕ: ಮಾಯೆ

"ಬಲ್ಲತನವನೆರಿಸಿಕೊಂಡು ಅಲ್ಲ ದಾಟವನಾಡಿದರೆ
ಬಲ್ಲತನಕ್ಕೆ ಭಂಗವಾಯಿತ್ತು

ವ್ಯಸನದೀಚ್ಚೆಗೆ ಹರಿದಾಡುವರೆಲ್ಲರೂ ಬಲ್ಲರೆ ಹೇಳಿರೇ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ದಿಚ್ಚೆಗೆ
ಹರಿದು ಹಂದಿಯೊಡನಾಡಿದ ಕಂದಿನಂತಾದರು
ಇನ್ನುಬಲ್ಲವರೆ ಗುಹೇಶ್ವರ ಮಾಯಾಮುಖರು ನಿಮ್ಮವನು"[೨೯]

ಸಹಜ ಜ್ಞಾನವಿಲ್ಲದೆ ಅದ್ವೈತವನಭ್ಯಾಸವ ಮಾಡಿ ಕಂಡ ಕಂಡವರೊಡನೆ ಅರಿವನುಂಟು ಮಾಡಿಕೊಂಡು ಬಚ್ಚಗೋಷ್ಠಿಯ ಮಾಡುತ್ತಿಪ್ಪ ಅಜ್ಞಾನಿಗಳು ಲಿಂಗಕ್ಕೆ ಸಲ್ಲದ ಅನ್ಯಕಾರಿಗಳೆಂಬುದೀ ವಚನದ ಅರ್ಥವಾಗಿದೆ.[೩೦] ಜ್ಞಾನ ಬರಿಯ ಓದಿನಿಂದ ಬಂದರೆ ಪರಿಪೂರ್ಣವಾಗಲಾರದು. ಓದಿನಿಂದ ಪಡೆದ ಜ್ಞಾನದ ಜೊತೆಗೆ ಜೀವನಾನುಭವದ ಜ್ಞಾನವು ಮುಖ್ಯ. ಜ್ಞಾನಿ ಎಂದು ಹೇಳಿಕೊಂಡು ಲೌಕಿಕದಿಚ್ಚೆಗೆ ಹರಿದಾಡುವ ಮನಸುಳ್ಳವನು ಪರಮಾನಂದದ ಅನುಭವ ಗಳಿಸಿಕೊಳ್ಳಲಾಗದು.

ಹಂದಿಯೊಡನೆ ಆಡಿದ ಗೋವಿನಂತೆ ಎಂಬುದು ಸಗಣಿಯ ಜೊತೆ ಸರಸವಾಡಿದಂತೆ ಎರಡರ ಪರಿಣಾಮ ನಕಾರಾತ್ಮಕವಾದದು. ಬಲ್ಲವರು, ಪಂಡಿತರು, ಜ್ಞಾನ ಸಂಪನ್ನರು ಎಂದು ಹೇಳಿಕೊಂಡು ತಿರುಗುವ ವ್ಯಕ್ತಿಗಳೇ ಮಾಯಾಮುಖರು. ಜ್ಞಾನಿಗಳೆನಿಸಿಕೊಂಡವರು ಪರಮಾತ್ಮನಿಗೆ ಒಪ್ಪಿತವಲ್ಲದ ಕಾರ್ಯವನ್ನು ಮಾಡಿದರೆ ಜ್ಞಾನವಿದ್ದು ಅಜ್ಞಾನಿಗಳಾಗಿ ತೋರುತ್ತಾರೆ. ಜ್ಞಾನದ ಮೂಲಕ ಆಧ್ಯಾತ್ಮಿಕ ಸಾಧನೆಗೈಯದೆ ಪರಮಾತ್ಮನೆಂಬ ಚಿತ್‌ಆನಂದವನ್ನು ಗಳಿಸಿಕೊಳ್ಳದೆ, ಲೌಕಿಕದತ್ತ ಹೊರಳಿ ಪಂಚೇಂದ್ರಿಯಗಳ ಮೂಲಕ ಕಾಮ, ಕ್ರೋಧವೆಂಬ ಅರಿಷಡ್ವರ್ಗಗಳ ಸೆಳೆತಕ್ಕೆ ಸಿಕ್ಕು ಹುಲು ಮಾನವರಂತೆ ವರ್ತಿಸುತ್ತಾರೆ. ಗೋವಿನ ಶ್ರೇಷ್ಠತೆಯುಳ್ಳ ನಿಜಶರಣ ಲೌಕಿಕ ವಿಷಯ ವಾಸನೆಗಳ ಹಿಡಿತದಲ್ಲಿ ಸಿಕ್ಕು ತನ್ನ ಮೂಲ ಸ್ವರೂಪ ತಿಳಿಯದು. ಲೌಕಿಕದಲ್ಲಿ ಭವಿಯಾಗಿ ಬದುಕುವ ವ್ಯಕ್ತಿಯ ಜೊತೆ ಬೆರೆತು ಆಧ್ಯಾತ್ಮಿಕ ಸಾಧನೆಯನ್ನು ಮರೆತು ಏನೂ ಅರಿಯದ ಕರುವಿನಂತಾಗುತ್ತಾನೆ. ಪರಿಣಾಮವಾಗಿ ಮಾಯೆಯ ಆಧೀನ ನಾಗಿ ಪರಮಾತ್ಮನನ್ನು ತೊರೆದು ಪರವನ್ನು ಕೈಬಿಟ್ಟು ಇಹದಲ್ಲಿ ಬದುಕನ್ನು ನಡೆಸಲು ಹಂಬಲಿಸುತ್ತಾನೆ. ನಿಜ ನಿಲುವ ತೊರೆದು ಮಾಯೆಯತ್ತ ಮುಖ ಮಾಡಿನಿಲ್ಲುವನು. ಜ್ಞಾನವಿದ್ದರೂ ಅದ ಮರೆದು ಅಜ್ಞಾನದ ನೆನಹನ್ನು ಕೈಗೊಳ್ಳುವನು. ಇಂತಹ ವ್ಯಕ್ತಿಗಳನ್ನು ಮಾಯಾಮುಖರು ಎನ್ನಲಾಗಿದೆ. ಸಗಣಿಯ ಜೊತೆ ಸರಸವೇ ಆದರೂ ಅದು ನಮ್ಮನ್ನು ಮಲೀನಗೊಳಿಸುತ್ತದೆ. ಗಂಧದ ಜೊತೆ ಗುದ್ದಾಟವೇ ಆದರೆ ಅದು ನಮ್ಮನ್ನು ಸುಗಂಧಿತಗೊಳಿಸುತ್ತದೆ. ಲೌಕಿಕವು ಗಂಧದಂತಾಗಬೇಕು ಜ್ಞಾನಿಯಾಗಿ ಲೌಕಿಕ ವಶವಾಗುವಂತಹ ಸ್ಥಿತಿ ಮಾಯೆಯಾಗಿದೆ.

೫.೧೦ ಅರಿವು: ಮಾಯೆ

"ತನ್ನ ತಾನರಿದೆನೆಂಬವನ ಮುನ್ನ ನುಂಗಿತ್ತು ಮಾಯೆ
ನಿನ್ನೊಳಗೆ ಅರಿವು ಭಿನ್ನವಾಗುತ್ತಿರಲು
ಮುನ್ನವೆ ನೀನು ದೂರಸ್ಥ ನೋಡಾ
ಭಿನ್ನವಿಲ್ಲದ ಅಜ್ಞಾನವ ಭಿನ್ನವ ಮಾಡಬಲ್ಲಡೆ
ತನ್ನಲ್ಲಿ ಅರಿವು ನಿಜವಪ್ಪುದು ಗುಹೇಶ್ವರ"[೩೧]

'ತನ್ನ ತಾನರಿಂಬುದ ನೊಡೆನೆಂಬನ್ನಕ್ಕರ ತನ್ನಿ ಮರವೆ ತನ್ನನೆ ನುಂಗಿತ್ತು ಅದು ಕಾರಣ ಅರಿವಿಂಗೆ ದೂರಸ್ಥನು ಈ ಮರ್ಮವನರಿದು ಅಜ್ಞಾನವ ಸುಜ್ಞಾನದಿಂದ ಭಿನ್ನವ ಮಾಡಿದೊಡೆ ಆತನೆ ಶಿವಶರಣನು'[೩೨] ಲೋಕದ ಸಕಲ ವ್ಯಾಪಾರದಲ್ಲಿ ಜೀವ ಶಿವಯೋಗ ಸಾಧನೆಯ ಮೂಲಕ ಸುಜ್ಞಾನವನ್ನು ಗಳಿಸಿಕೊಂಡರೆ ಅಜ್ಞಾನವೆಂಬ ಭಾವತಾನೆ ದೂರವಾಗುತ್ತದೆ. ಹಾಗೆಂದುಕೊಳ್ಳದೆ ಇದ್ದಾಗ ತಾನೇ ಅನುಭಾವಿ ಎಂಬ ಮನಸ್ಥಿತಿ ಮಾಯೆ ಆಗಿ ಜೀವನನ್ನು ಆವರಿಸುತ್ತದೆ. ತನ್ನ ತಾನರಿಯಲು ಅಸಾಧ್ಯವಾದ ಸ್ಥಿತಿ ಮಾಯಾ ಭಾವವಾಗಿದೆ. 'ಅರಿವು' ಎಂಬುದರ ವ್ಯಾಪಕ ಸ್ವರೂಪವನ್ನೂ, 'ಮಾಯೆ'ಯ ವ್ಯಾಪಕ ಪ್ರಭಾವವನ್ನು ಇಲ್ಲಿ ಗಮನಿಸಲಾಗಿದೆ. ಜೀವನಿಗೆ ತನ್ನೊಳಗೆ ಅರಿವು ಮೂಡಿತ್ತು ಎಂಬ ಭಾವ ಅಹಂಮಿಕೆಯಾಗುತ್ತದೆ. ಈ ಅಹಂಮಿಕೆ ಮಾಯೆಯ ಒಂದು ಅಭಿವ್ಯಕ್ತಿ ರೂಪವಾಗಿದೆ. ದೇವನೊಳಗೆ ಬೆರೆತ ಜ್ಞಾನದ ತಿಳುವಳಿಕೆ ತನ್ನದು ಎಂಬ ಯೋಚನೆ ಅಜ್ಞಾನ ಆವರಿಸುವಂತೆ ಮಾಡಿ ಜೀವನನ್ನು ಪರಮಾತ್ಮನಿಂದ ದೂರಗೊಳಿಸುತ್ತದೆ.

'ನಾನು ನನ್ನನ್ನು ಅರಿತೆನು-ಹೀಗೆ ಹೇಳುವಾಗ ಅರಿಯುವ ನಾನು ಬೇರೆ ಅರುಹಿಸಿಕೊಳ್ಳುವ ನಾನು ಬೇರೆ ಎಂಬ ಭೇದಭಾವವಿರುವುದೇ ಮಾಯೆಗೆ ಒಳಗಾದಂತೆ'[೩೩] ಶರಣನಲ್ಲಿ ತೋರಿದ ಪರಮಾತ್ಮನೆಂಬ ಅರಿವಿನ ನಿಲವು ಅವನೊಳಗೆ ಒಂದಾಗಿರುತ್ತದೆ. ಆಗ ಮಾತ್ರ ಚಿತ್ ಆನಂದವನ್ನು ಹೊಂದುತ್ತಾನೆ. ಈ ಚಿದಾನಂದವನ್ನು ಪಡೆದ ತಾನೇ ಶ್ರೇಷ್ಠ ಎಂಬ ಅಭಿಪ್ರಾಯ ಬಂದರೆ ಅವನು ಭಗವಂತನಿಂದ ದೂರನಾಗುತ್ತಾನೆ. ನಿಜಶರಣ ತನ್ನರಿವನ್ನು ತನ್ನದಾಗಿಸಿಕೊಂಡು ತಾನು ಎಂಬುದು ಪರಮಾತ್ಮನಲ್ಲಿ ಒಂದಾಗಬೇಕು. ಇದಕ್ಕೆ ಪ್ರತಿಯಾಗಿ ಜ್ಞಾನ ಮರೆಯಲ್ಲಿ ಕುಳಿತಿರುವ ಅಜ್ಞಾನವೆಂಬ ಕುರುಹನ್ನು ನಿವಾರಿಸಿಕೊಳ್ಳಬೇಕು. ಆಗ ಮಾಯೆಯೆಂಬ ಶಕ್ತಿಯ ಹಿಡಿತದಿಂದ ಬಿಡಿಸಿಕೊಳ್ಳಲು ಸಾಧ್ಯ ಹಾಗೂ ನಿಜ ಅರಿವಿನ ದರ್ಶನ ಸ್ಪಷ್ಟ ಮತ್ತು ಚಿರಂತನವಾಗುತ್ತದೆ. ಅಜ್ಞಾನ, ಅಹಂಕಾರಗಳೆರಡು ಮಾಯೆಯ ಕ್ರಿಯಾಭಿವ್ಯಕ್ತಿಯ ನೆಲೆಗಳು ಜೀವ ನಿರ್ಮಲ ಭಾವದಿಂದ ಇದ್ದಾಗ ಮಾತ್ರ ಮಾಯೆಯೆಂಬ ಭಾವದಿಂದ ಮುಕ್ತನಾಗುತ್ತಾನೆ. ನಿಜಯೋಗಿಯಾಗಿ ನಿಲ್ಲುತ್ತಾನೆ.

"ಮಾಯಾಮಲಿನ ಮನದಿಂದಗಲದೆ
ಕಾಯದ ದುಂದಗ ಕಳೆಯಿಂದಗಲದೆ
ಅರಿವು ಬರದೆ ಬಪ್ಪುದೆ?
ನಿಜವು ಬರಿದೆ ಸಾಧ್ಯವಪ್ಪುದೆ ಮರುಳೆ
ಗುಹೇಶ್ವರ ಲಿಂಗವನರಿಯಬಲ್ಲ ನಿನ್ನ ನೀ ತಿಳಿದು ನೋಡಾ"[೨೪]

'ಮನದೊಳಗೆ ಮಾಯಾಮಲವಾವರಿಸಿ ತನುವಿನೊಳಗೆ ಜೀವಕಳೆ ಆವರ್ಜಿಸಿ ಇರುತ್ತಿರಲು ಸುಜ್ಞಾನ ಘಟಿಸದು, ನಿಜವು ಸಾಧ್ಯವಾಗದು. ಮತ್ತೊಂದೆಡೆ ತನ್ನ ತಾ ತಿಳಿದು ನೋಡಲು ತನ್ನಿಂದ ತನ್ನ ತಾ ಕಾಣಬಹುದೆಂಬುದೀ ವಚನದ ಅರ್ಥವಾಗಿದೆ'.[೨೫] ಮಾಯೆಯ ಕೌಟಿಲ್ಯಕ್ಕೆ ಆತ್ಮಜ್ಞಾನವೇ ಕುಠಾರ. ನಿಜಾತ್ಮನರಿವಿಲ್ಲದೆ ಮಾನವ ಮಾಯಾಧೀನನಾಗುತ್ತಾನೆ.[೨೬] ಈ ವಚನದಲ್ಲಿಯೂ ಅರಿವಿನ ಮಹತ್ವವನ್ನು ಪ್ರಸ್ತಾಪಿಸುತ್ತಾನೆ. ಅರಿವನ್ನು ಪಡೆಯಲು ಸಾಧ್ಯವಾಗುವ ಸಂದರ್ಭಗಳನ್ನು ಹೇಳಿದ್ದಾನೆ. ಅರಿವನ್ನು ಪಡೆವಲ್ಲಿ 'ಮಾಯೆ' ಎಂಬುದು ಒಂದು ತಡೆಯಾಗಿದೆ. 'ವ್ಯಾಮೋಹ ಎಂಬ ಮಾಯಾಮಾಲಿನ್ಯವು ಮನದಿಂದ ತೊಲಗದೆ, ದೇಹ ಸಂಬಂಧವಾದ ಚಿಂತೆ-ಭ್ರಾಂತಿಗಳು ಜೀವನಿಂದ ದೂರಾಗದೇ ಆತ್ಮನು ತಾನು ಎಂಬ ಅರಿವು ಸಮನಿಸದು'[೨೭] ಎಂಬ ಅಭಿಪ್ರಾಯ ಮೇಲಿನ ಮಾತಿಗೆ ಪೂರಕವಾಗಿದೆ. ಜೀವನಲ್ಲಿ ಜೀವಭಾವ ಕಳೆದು ಆತ್ಮಭಾವ ಮೂಡಬೇಕಾದರೆ ತನು-ಮನಗಳೆರಡು ಶುದ್ಧವಾಗಿರಬೇಕು. ಮೊದಲು ಅಂತರಂಗವು ಮಾಯೆಯ ವಿವಿಧ ರೂಪಗಳಾದ ಆಸೆ, ಕನಸು, ವ್ಯಾಮೋಹ, ಭ್ರಮೆ ಇತ್ಯಾದಿಗಳಿಂದ ಮುಕ್ತನಾಗಬೇಕು. ಅಂತರಂಗವನ್ನು ಹೊತ್ತ ಕಾಯ ಅಂದರೆ ಬಹಿರಂಗ ಮಾಯೆಯ ಕ್ರಿಯಾ ರೂಪಗಳಾದ ಕೋಪ, ಮತ್ಸರ, ಕಾಮ, ಕ್ರೋಧ, ಮದ ಇತ್ಯಾದಿಗಳಿಂದ ಮುಕ್ತವಾಗಬೇಕು. ಅಂತರಂಗ-ಬಹಿರಂಗಗಳೆರಡು ಶುದ್ಧ, ನಿಶ್ಚಲ-ನಿರ್ಮಲವಾಗಬೇಕು ಎಂಬ ಭಾವ ಮೂಡಿದರೆ ಅರಿವು ಬಾರದು. ಬದಲಿಗೆ ಶಿವಯೋಗ ಸಾಧನೆಯ ಮೂಲಕ ಈ ಹಂತಗಳನ್ನು ಪರಿಪೂರ್ಣವಾಗಿ ನಿವಾರಿಸಿಕೊಳ್ಳಲು ಸಾಧ್ಯ. ಆಗ ಮಾತ್ರ ನಿಜದ ಅರಿವು ಎಂಬುದು ಜೀವನು ಬರಿಯ ಜೀವನಾಗದೆ ಕಾಯವನ್ನು ಮೀರಿದ ಆತ್ಮಚೇತನ ಎಂಬ ಭಾವ ಮೂಡುತ್ತದೆ.

ಪರಮಾತ್ಮನಿಗೂ ಲಿಂಗಕ್ಕೂ ನಿಜಶಿವಯೋಗ ಸಾಧಕನಲ್ಲಿ ಅಂತರ್‌ಭೇದವಿರುವುದಿಲ್ಲ. ಜೀವ ತನ್ನ ತಾನರಿವುದೆಂದರೆ ನಿಜದಲ್ಲಿ ಪರಮಾತ್ಮನನ್ನು ಅರಿತಂತೆ, ಆಗ ಬೇರೆಲ್ಲೂ ಲಿಂಗವನ್ನು ಗ್ರಹಿಸಬೇಕಿಲ್ಲ. ಆ ಲಿಂಗವು ತನ್ನೊಳಗೆ ನೆಲೆಗೊಂಡಿರುತ್ತದೆ. ಜೀವ-ದೇವ ಎರಡೂ ಅಭಿನ್ನವಾಗುತ್ತದೆ. ಇಲ್ಲಿ ಮಾಯೆ ಅಂತರಂಗ-ಬಹಿರಂಗ ಎರಡರಲ್ಲೂ ತನ್ನ ಪ್ರಭಾವವನ್ನು ಬೀರುತ್ತದೆ. ಜೀವನ ಅರಿವನ್ನು ಮರೆಯಾಗಿಸುತ್ತದೆ.

೫.೧೧ ನಾನೆಂಬ ಅಹಂ: ಮಾಯೆ

"ಅಗ್ನಿ ಮುಟ್ಟಿದುದುವೊ ಆಕಾಶದೆಲವೊ
ಉದಕ ಮುಟ್ಟಿದುದುವೊ ನಿರಾಳದೆಲವೊ
ಬ್ರಹ್ಮರಂಧ್ರದೆಲವೊ ಭ್ರಮಿಸದೆ ನೋಡಾ
ಆವಂಗೆಯೂ ಅಸದಳ
ಇದೇನು ಮಾಯೆ ಹೇಳಾ ಗುಹೇಶ್ವರ"[೩೮]

ಶಿವಾನುಭಾವ ಯೋಗದಿಂದ ಕುಂಡಲಾಗ್ನಿ ಬಲಿದೆತ್ತಲು ಆ ಸುಜ್ಞಾನಾಗ್ನಿ ಸುಷುಮ್ನದ್ವಾರದಲ್ಲಿ ವ್ಯೋಮ ಚಕ್ರವನ್ನೈದಿದೊಡೆ–ಲಿಂಗಾನುಭಾವ ಸಂಪನ್ನತೆ ತಲೆದೋರಿ, ಉದಕಮೆಂದೊಡೆ ಮನಸ್ಸು. ಆ ಮನಸ್ಸು ಉನ್ಮನಿತತ್ವವಾಗಿ ಆ ಲಿಂಗಾತ್ಮಭಾವದ ಕಳೆಯನು ಅವಗ್ರಹಿಸಿ ನಿರಾಳ ಶಿವತತ್ವದಲ್ಲಿ ಶ್ರಮಿಸಿದ ಅರಿವು ಬ್ರಹ್ಮರಂಧ್ರದಲ್ಲಿ ಸ್ಥಾಯಿಯಾಗಿ ಇರುತ್ತಿಪ್ಪುದು. ಅದ ತಿಳಿಯಬಾರದೆಂಬುದು ಈ ನಿಲುವನಾರು ಅರಿಯರು[೩೯] ಎಂಬ ಅರ್ಥವಿದೆ. ಧ್ಯಾನವೆಂಬುದು ಯೋಗ ಸ್ವರೂಪಿಯಾದದು. ಷಟ್‌ಚಕ್ರಗಳ ಮೇಲೆ ಯೋಗದಿಂದ ನಿಯಂತ್ರಣ ಸಾಧಿಸಿದಂತೆಲ್ಲಾ ನಿರ್ವಯಲಿನ ಸ್ಥಿತಿ ಮೂಡುತ್ತದೆ. ಮನಸ್ಸನ್ನು ನಿಯಂತ್ರಿಸಲು ಅಥವಾ ವಿಷಯವೊಂದರ ಸುತ್ತ ಸ್ಥಿರಗೊಳಿಸಲು ಸಾಧ್ಯವಾಗುತ್ತದೆ.

'ಯೋಗ ಸಾಧನೆಯ ಮೂಲಕ ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ರೀತಿ ಈ ವಚನದಲ್ಲಿದೆ. ಶಿವಯೋಗ ಸಾಧಕನು ಮೂಲಾಧಾರದಲ್ಲಿ ಅಡಗಿರುವ ಕುಂಡಲಿನಿ ಶಕ್ತಿಯನ್ನು ಮೇಲೆತ್ತಿದಾಗ ಆ ಸುಜ್ಞಾನಾಗ್ನಿಯ ಮೇರು ದಂಡದ ಮಧ್ಯದಲ್ಲಿ ಅತ್ಯಂತ ಸೂಕ್ಷ್ಮ ರೂಪದಲ್ಲಿರುವ ಸುಷುಮ್ನನಾಳದ ಮೂಲಕ ಶಿರಸ್ಸಿನಲ್ಲಿರುವ ವ್ಯೋಮ ಚಕ್ರವನ್ನು ಸೇರುತ್ತದೆ. ಆಗ ಲಿಂಗಾನುಭಾವದ ಸಂಪನ್ನತೆ ತಲೆದೋರುತ್ತದೆ. ಆಗ ಮನಸ್ಸು ಉನ್ಮನೀತತ್ವವಾಗಿ ಮಾರ್ಪಟ್ಟು ಆತ್ಮಭಾವದ ಕಳೆಯನ್ನು ಪಡೆದು ಶಿವತತ್ವದಲ್ಲಿ ವಿಶ್ರಾಂತಿಹೊಂದುತ್ತದೆ.[೪೦] ಪ್ರಾಣಾಯಾಮ ಸಾಧನೆಯು ಆಧ್ಯಾತ್ಮಿಕ ಸಾಧನೆಗೆ ಅಗತ್ಯ. ಭಕ್ತಿ, ಪೂಜೆ, ಆಚರಣೆಗಳಿಗಿಂತ ಮುಖ್ಯವಾಗಿ ಯೋಗ ಸಾಧನೆ ಬೇಕು. ಕಠಿಣವಾದ ಸಾಧನೆ ಮಾಡಿದ ಸಾಧಕರಿಗೆ ಕೂಡಾ ಪ್ರಾಣಲಿಂಗ ದರ್ಶನದ ಅನುಭೂತಿ ಉಂಟಾಗದಿರಲು ಕಾರಣವಾಗುವ ಅಂಶ ಮಾಯೆ. ಮಾಯೆ ಎಂಬುದು ಶ್ರೇಷ್ಠ ಸಾಧಕರಲ್ಲಿ ತಾನು ಸಾಧಕನೆಂಬ ಅಹಂಭಾವ ಮೂಡಿಸುತ್ತದೆ. ಈ ಅಂಶಕ್ಕೆ ಪ್ರತೀಕವಾಗಿ ಗೋರಕ್ಷನ ಸಾಧನೆಯನ್ನು ಉದಾಹರಿಸುವುದು ಸೂಕ್ತ. ಕಾಯವನ್ನು ವಜ್ರಕಾಯಗೊಳಿಸುವುದು ನಿಜ ಸಾಧಕನಿಂದ ಮಾತ್ರ ಸಾಧ್ಯ. ಆದರೆ ಅದನ್ನು ಸಾಧಿಸಿದ ಮೇಲೆ 'ನಾನು ಸಾಧಿಸಿದೆ'ಎಂಬ ಅಹಂಮಿಕೆ ಮಾಯೆಯಾಗಿ ಆವರಿಸುತ್ತದೆ. ಆ ಮಾಯೆಯ ತೆರೆ ಸರಿಸಲು ಅಲ್ಲಮ ಬರಬೇಕಾಗುತ್ತದೆ. ಆತ್ಮಚೈತನ್ಯ ದರ್ಶನದ ಅರಿವು ಬರುವುದು ಶಿವಯೋಗ ಸಾಧನೆ ಮಾಡುವವಂಗೆ ಮಾತ್ರ. ಆ

ಚೈತನ್ಯ ಜೀವನ ಸದಾನಂದವನ್ನು ತುಂಬುತ್ತದೆ. ಇಂತಹ ಆನಂದ ಅನುಭೂತಿ ಪಡೆಯಲು ಅಥವಾ ಪಡೆದ ನಂತರ ಮಾಡುವ 'ನಾನು' ಎಂಬ ಭಾವ ದೇವನಿಂದ ಜೀವನನ್ನು ಬೇರ್ಪಡಿಸುತ್ತದೆ. ಜೀವ ಮಾಯೆ ಎಂಬ ಮೋಹಕ್ಕೆ ಒಳಗಾಗುತ್ತಾನೆ. ಮಾತಿಗೆ, ಬಣ್ಣನೆಗೆ ಅರ್ಥಕ್ಕೆ ನಿಲುಕಲಾರದ್ದು ಮಾಯೆಯಾಗಿದೆ.

"ನೀನಾನೆಂಬ ಭಾವವಾರಿಂದಾಯಿತ್ತು ಹೇಳಾ
ನೀನೆಂಬುದೆ ಅಜ್ಞಾನ ನಾನೆಂಬುದೆ ಮಾಯಾಧೀನ
ನಿನ್ನೆನ್ನದೆ ನಾನೆನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ
ಆ ಸುಖವು ನಿಮಗರ್ಪಿತ ಕಾಣಾ ಗುಹೇಶ್ವರಾ" [೪೧]

'ನೀನು ನಾನು ಎಂಬ ಭಾವವು ಅಲ್ಲಮನ ಪ್ರಕಾರ ಅಜ್ಞಾನದ ನೆಲೆಯಿಂದಲೇ ಹುಟ್ಟಿದ್ದಾಗಿದೆ. ಅಲ್ಲಮ ಹೇಳುವಂತೆ, ಜ್ಞಾನದ ಅರಕೆಯನ್ನು ಮಾಯೆ ಪ್ರಭುತ್ವವನ್ನು ಪ್ರಧಾನವಾಗಿ ಒಳಗೊಂಡಿರು ವಂಥದ್ದು. ಆದ್ದರಿಂದ ಇಂಥ ಭಕ್ತಿ ಭಾವವು ಮನುಷ್ಯ ಧಾರ್ಮಿಕ ಔನ್ನತ್ಯಕ್ಕೆ ಅವಕಾಶ ಮಾಡುವುದಿಲ್ಲ ವೆನ್ನುವುದು ಅಲ್ಲಮಪ್ರಭುವಿನ ಖಚಿತ ನಂಬಿಕೆ ಇರಬೇಕು. ದ್ವೈತ್ವ ಸ್ವರೂಪದ ಭಕ್ತಿ ಭಾವವನ್ನು ಅಲ್ಲಮ ಪ್ರಭು ನಿರಾಕರಿಸುತ್ತಾನೆ.೪೨ ಭಕ್ತಿಯನ್ನು ಮಾಡುವ ರೀತಿಯೇ ಮಾಯೆ ಮೂಡಲು ಕಾರಣವಾಗಿದೆ ಎಂಬಂರ್ಥದಲ್ಲಿದೆ. ನಾನು-ನೀನು ಎಂಬ ಭಿನ್ನತೆ ಮೂಡಿಸುವ ಭಕ್ತಿ ನಿಜದ ಅರಿವನ್ನು ಮೂಡಿಸಲಾರದು. ದೇವ-ಜೀವನ ನಡುವೆ ನಾನು-ನೀನು ಎಂಬುದು ನಿರ್ದಿಷ್ಟ ಅಂತರವನ್ನು ಸೃಷ್ಟಿಸುತ್ತದೆ. ದೇವನ ನಿಜ ಕುರುಹನ್ನು ದೇವಾಂಶಿಯಾದ ಜೀವನ ನಿಜ ಕುರುಹನ್ನು ಅರಿಯಲಾಗದು ಎಂಬಲ್ಲಿ ಮಾಯೆ ಎಂಬುದು ಭಕ್ತಿಯ ಆಚರಣೆಯ ರೂಪದಲ್ಲಿ ಎಡೆ ಪಡೆಯುತ್ತದೆ.

'ತನ್ನ ನಿಜವ ತಾನರಿದು ತಾನಲ್ಲದೆ ಮತ್ತಾವದೂ ಇಲ್ಲವೆಂದರಿದ ಮಹಾಜ್ಞಾನಿ ನೀ ನಾನೆಂಬ ಭಿನ್ನ ಜ್ಞಾನವನರಿಯನಾಗಿ ಆ ಪರಮಸುಖಪ್ರಸಾದದಲ್ಲಿ ಪರಿಣಾಮಿ ಯಾಗಿಪ್ಪನು'[೪೩] ಎಂಬ ಅರ್ಥದಲ್ಲಿ ತಾನು ಎಂಬ ಕುರುಹಿನ ಹುಡುಕಾಟವಿದೆ.' ನಾನು-ನೀನು ಎಂಬ ಭಿನ್ನ ಭಾವವನ್ನು ಮೀರಿದವನು ಮಹಾಜ್ಞಾನಿ. ದೇವ-ಜೀವರು ಅದ್ವೈತ . ಇಬ್ಬರನ್ನು ಭಿನ್ನವಾಗಿಸಿ ಗುರುತಿಸಲು ಅಸಾಧ್ಯ ಎಂಬ ಅರ್ಥವಿದೆ.ಲೋಕದ ಸೃಷ್ಟಿ, ಜೀವದ ಸೃಷ್ಟಿ ಎಲ್ಲವೂ ಒಂದೇ ಶಕ್ತಿಯಿಂದ ಉದಿಸಿದ್ದು ಭಿನ್ನತೆ ಗುರುತಿಸಲಾಗದು.

'ಚರಾಚರಾತ್ಮಕವಾದ ವಿಶ್ವವಿದು ತೋರಿಬರುವ ಮೊದಲು ಇದ್ದುದು ಬರಿ ಬಯಲು. ಅದು ಪರವಸ್ತು ಅದು ನಿಷ್ಕಲಲಿಂಗ. ಅದರಲ್ಲಿ ನಾನು-ನೀನು ಎಂಬ ದ್ವಂದ್ವ ಭಾವಗಳು ಇಲ್ಲ. ಅದು ಕೇವಲ ಅಖಂಡ ಸತ್ಯ. ದ್ವಂದ್ವಭಾವಗಳು ಉಂಟಾಗಲು ಕಾರಣ ಅಜ್ಞಾನ, ಮಾಯೆ. ಪರವಸ್ತುವಿನ ಜ್ಞಾನವಿಲ್ಲದಿರುವುದು ಅಜ್ಞಾನ ಪರವಸ್ತುವು ಕಾಣದಿರುವುದು ಮಾಯೆ. ಈ ಮಾಯೆ ಇರುವವರೆಗೆ ಭೇದ ಪ್ರಪಂಚದ ತೋರಿಕೆ- ಜೀವಭಾವದ

ಉದ್ಭವ, ಸುಖ-ದುಃಖಾದಿಗಳ ಅನುಭವ ಉಂಟಾಗುತ್ತದೆ.'[೪೧] ಆಧ್ಯಾತ್ಮಿಕ ಹಾದಿಯಲ್ಲಿ ನೀ-ನಾನು ಎಂಬ ಭಾವವನ್ನು ಅಭಿವ್ಯಕ್ತಿಸಿದ್ದಾರೆ. ಇಲ್ಲಿ ಮುಂದುವರಿದು ಅಖಂಡ ಸುಖದ ಅನುಭವ ಪಡೆಯಲು ಕೈಗೊಳ್ಳಬೇಕಾದ ವಿಧಾನ ಎಂದರೆ ನಾ-ನೀ ಎಂಬ ಭಾವ ಕಳೆದುಕೊಳ್ಳುವದು ಎಂದಿದ್ದಾರೆ. ನಿಜದಲ್ಲಿ ನಾನು-ನೀನು ಎಂಬ ಅಂತರಗಳು ಪರಮಾತ್ಮ-ಭಕ್ತರ ಮಧ್ಯೆ ಇರಬಾರದು. ನಾನು ಎಂಬ ಭಾವದಲ್ಲಿ ಪರಮಾತ್ಮ ಐಕ್ಯನಾಗಿರುತ್ತಾನೆ. ಹಾಗಾಗಿ ನಾನು ಭಕ್ತ ನೀನು ಭಗವಂತ ಎಂಬ ಭಾವ ಮೂಡಲಾರದು ಹಾಗೇನಾದರೂ ಮಾಡಿದಲ್ಲಿ ಭಕ್ತ ನಿಜ ಭಕ್ತನಾಗಲಾರ ಹಾಗೂ ಶಿವಯೋಗ ಸಾಧಕನಾಗಲಾರ, ಲೌಕಿಕದ ಸೆಳೆತದ ಸುಳಿಯಲ್ಲಿ ಸಿಕ್ಕ ಭವಿ ತನ್ನನ್ನು ತಾನು ಪೂರ್ಣವಾಗಿ ಅರಿಯಲಾಗದೆ ಸೋಲುತ್ತಾನೆ. ಈ ಸೋಲಿನ ಸ್ವರೂಪವೆ ಅಜ್ಞಾನ. ತನ್ನನ್ನು ಪರಮಾತ್ಮನಿಂದ ದೂರ ನಿಲ್ಲಿಸಿ ತಾನೆ ಬೇರೆ ಪರಮಾತ್ಮನೇ ಬೇರೆ ಎಂಬ ಭಾವದಿಂದ ಆರಾಧಿಸುವ ಮನಸ್ಥಿತಿ ಮಾಯೆ ಆಗಿದೆ. ಮಾಯೆ ಎಂಬ ಶಕ್ತಿಯ ಸೆಳೆತಕ್ಕೆ ಒಳಗಾದಾಗ ನಾನು-ನನ್ನದೆಂಬ ಅಹಂಭಾವ ಮೂಡುತ್ತದೆ. ತನ್ನ ಇರುವನ್ನು ಅರಿವನ್ನು ತಿಳಿಯಲಾಗದೆ ಸೋಲುತ್ತಾನೆ. ಪರಮಾತ್ಮನ ಕುರುಹನ್ನು ತನ್ನೊಳಗೆ ನೆಲೆಗೊಳಿಸಲಾಗದೆ ಪರಿತಪಿಸುತ್ತಾನೆ. ಅಂದರೆ ಮಾಯೆಯ ಅಧೀನನಾದವನು ನಿಜಭಕ್ತಿಯ ಸಾಧಿಸಲಾರ ಶಿವಯೋಗ ಸಾಧನೆಯ ಹಾದಿಯನ್ನು ಕ್ರಮಿಸಲಾಗದು. ಮಾಯೆಯನ್ನು ಅಡ್ಡಿ ಎಂಬಂತೆ ಹೇಳಿದರೂ ವಾಸ್ತವದಲ್ಲಿ ತನ್ನ ತಾನು ಅರಿವುದು ಇಲ್ಲಿ ಮುಖ್ಯವಾಗಿದೆ.

೫.೧೨ ಸಂಸಾರ: ಮಾಯೆ

"ಕರ್ಮದ ಗಡಣ ಹಿಂಗಿದುವಿಂದು
ಪಾಪದ ಬಲೆ ಬಳಸಿ ಹೋದವವು
ಒಲ್ಲೆನೊಲ್ಲೆನೀ ಸಂಸಾರದಲ್ಲಿ ನೊಂದು ಬೆಂದೆನಾಗಿ
ಮಾಯೆಯ ತಲೆಯ ಮೆಟ್ಟಿ ಹೋದೆನು
ಇನ್ನು ಮರಳಿ ಬಾರೆನು ಗುಹೇಶ್ವರ ನಿಮ್ಮಾಣೆ"[೪೫]

ಅಲ್ಲಮ ತಾನು ಭವಿತನದಿಂದ ಮುಕ್ತನಾದ ಬಗೆಯನ್ನು ಇಲ್ಲಿ ಹೇಳುತ್ತಾನೆ. ಈ ಭವದಲ್ಲಿ ಜನ್ಮತಾಳಿ ಎಲ್ಲವನ್ನೂ ಅನುಭವಿಸಿ ಸಂಸಾರವನ್ನು ತೊರೆದೆನು. ಇನ್ನೂ ಮತ್ತೆ ಸಂಸಾರದತ್ತ ಮುಖ ಮಾಡೆನು ಎಂಬ ನಿರ್ಧಾರವಿದೆ.

ಈ ಭವಕ್ಕೆ ಬಂದ ಮೇಲೆ ಸುಖ-ದುಃಖ ಎಲ್ಲವನ್ನು ಬಂದಂತೆ ಸ್ವೀಕರಿಸಬೇಕು. ಮನುಜ ಲೌಕಿಕದಲ್ಲಿ ಹುಟ್ಟಿ ಸುಖದ ಮೋಹಕ್ಕೆ ಒಳಗಾಗುತ್ತಾನೆ. ಜಗದ ಎಲ್ಲ ಸುಖವನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನ ಪಡುತ್ತಾನೆ. ಈ ಪ್ರಯತ್ನದಲ್ಲಿ ಕೆಲವನ್ನು ಪಡೆದುಕೊಳ್ಳುತ್ತಾನೆ ಹಾಗೂ ಕೆಲವನ್ನು ಕಳೆದುಕೊಳ್ಳುತ್ತಾನೆ. ಪಡೆದುಕೊಂಡಾಗಿನ ಸಂತೋಷ ಮರೆತು

ಕಳೆದುಕೊಂಡಾಗಿನ ದುಃಖವನ್ನು ವೈಭವಿಕರಿಸಿ ವ್ಯಥೆ ಪಡುತ್ತಾನೆ. ಇಂತಹ ಮನುಜರ ಮಧ್ಯೆ ಬದುಕ ಸವೆಸಿ ಅಲ್ಲಮಪ್ರಭು ಜ್ಞಾನದ ಹಾದಿಯಲ್ಲಿ ಸಾಗುತ್ತಾ ಲೌಕಿಕದ ಕೊಂಡಿಯಿಂದ ಕಳಚುವ ಹಂತದಲ್ಲಿ ಈ ಮೇಲಿನ ಮಾತುಗಳನ್ನು ಹೇಳುತ್ತಾನೆ. ಸಂಸಾರದಲ್ಲಿ ಸಿಲುಕಿ ತುಂಬಿಕೊಂಡ ಕರ್ಮದ ಕತ್ತಲು ಶಿವಜ್ಞಾನದ ಬೆಳಕಿನಲ್ಲಿ ಕರಗಿಹೋಯಿತು. ಪಾಪದ ಬಲೆಯಿಂದ ಬಿಡಿಸಿಕೊಂಡು ಹೊರ ಬರುವಲ್ಲಿ ಜ್ಞಾನ ಸಹಾಯಕವಾಯಿತು. ಸಂಸಾರದ ಸ್ವರೂಪವನ್ನು ಅರಿತು ಅದರಲ್ಲಿ ಸಿಕ್ಕು ಸೊರಗಿದೆ. ಆದರೆ ಇಂದು ಜ್ಞಾನ ಎಂಬ ಸಾಧನ ಅಲ್ಲಮನನ್ನು ಶಿವಸ್ವರೂಪಿ ಯಾಗಿಸಿದೆ. ಶಿವತ್ವದ ಬಲದಿಂದಲೇ ಮಾಯೆ ಎಂಬ ಶಕ್ತಿಯನ್ನು ಮೀರಿ ನಿಲ್ಲಬಲ್ಲೆನು ಎಂಬ ಆತ್ಮ ವಿಶ್ವಾಸವನ್ನು ಮೂಡಿಸಿದೆ. ಸಂಸಾರದ ಒಳ ತಿರುಳನ್ನು ಅರಿತ ಮೇಲೆ ಮತ್ತೆ ಅದರಲ್ಲಿ ಸಿಲುಕುವ ಮನಸ್ಸು ಬಾರದು. ಜ್ಞಾನವೆಂಬ ಸುಖವು ಮಾಯೆ/ ಸಂಸಾರ ಎಂಬ ಸುಖವನ್ನು ಗೆಲ್ಲಬಲ್ಲ ಶಕ್ತಿ ಉಳ್ಳದ್ದು. ಅದಕ್ಕಾಗಿ ಅಲ್ಲಮ ಮಾಯೆಯ ತಲೆಯನ್ನು ಮೆಟ್ಟಿ ಹೋಗುತ್ತಾನೆ. ಮಾಯೆಯನ್ನು ಸಾಮಾನ್ಯ ಮನುಷ್ಯ ಎಂಬಂತೆ ಪರಿಭಾವಿಸಿರುತ್ತಾನೆ.

೫.೧೩. ಆಸೆ: ಮಾಯೆ

"ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣ ಮಾಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ"[೪೬]

ಹೊನ್ನು, ಹೆಣ್ಣು, ಮಣ್ಣೆಂಬ ತ್ರಿವಿಧವನ್ನು ತನ್ನ ಸೊಮ್ಮೆಂದಭಿಲಾಷಗೆಯ್ಯದೆ ಗುರು–ಲಿಂಗ–ಜಂಗಮಕ್ಕರ್ಪಿಸಿ ನಿರಾಶಾಭರಿತನಾಗಿರಬಲ್ಲಡೆ ಆತನು ನಿರ್ಮಾಯನೆಂಬುದೀ ವಚನದ ಬಹುಶಬ್ದಕ್ಕೆ ಅರ್ಥ ನಿರ್ವಚನವಾಗಿದೆ.[೪೭] ಹೆಣ್ಣು ಹೊನ್ನು, ಮಣ್ಣು ತನ್ನದೆಂದು ಭಾವಿಸದೇ ನಿಷ್ಕಾಮ ಭಾವದಿಂದ ಗುರುಲಿಂಗ ಜಂಗಮಕ್ಕೆ ಅರ್ಪಿಸಬೇಕು. ಅಪೂರ್ಣ ಭಾವದಲ್ಲಿ ಆಸೆ ಎಡೆ ಪಡೆಯಬಾರದು. 'ಮಾಯೆ' ಎಂಬುದು ಮನದ ಅಭಿಲಾಷೆ ಆಗಿದೆ. ಜೀವ ನಿಸ್ವಾರ್ಥಿಯಾಗಬೇಕು ಎಂಬ ಆಶಯವಿದೆ. 'ಆಶಾರಾಹಿತ್ಯ ನಿಷ್ಕಾಮ ಕರ್ಮಕ್ಕೆ ಎಡೆ ಮಾಡಿ ಕೊಡುತ್ತದೆ. ಹೊನ್ನು ಹೆಣ್ಣು ಮಣ್ಣುಗಳು ಪಾಪ ವಸ್ತುಗಳೆಲ್ಲ ಮಾನವ ತನ್ನ ಕೀಳಾಸೆಯನ್ನು ಪ್ರದರ್ಶಿಸಿ ತನ್ನನ್ನು ಇವುಗಳನ್ನು ಮಲೀನ ಮಾಡುತ್ತಾನೆ. ಆದರೆ ಮಾಯೆಯ ಶಕ್ತಿ ಉಪೇಕ್ಷಣೀಯವಾದುದಲ್ಲ. ಮನದ ಆಸೆಗೆ ಯಾವುದೇ ಮಿತಿಗಳಿಲ್ಲ ಮಿತಿಯಿರದ ಆಕಾಂಕ್ಷೆಯ ಸ್ಥಿತಿಯೆ ಮಾಯಯಾಗಿದೆ.

ಸಾಮಾನ್ಯನಿಗೆ ಮೇಲ್ನೋಟಕ್ಕೆ ಹೊನ್ನು, ಹೆಣ್ಣು, ಮಣ್ಣು ಮಾಯೆಯೆಂದು ಭಾಸವಾಗುತ್ತದೆ. ನಿಜವಾಗಿ ಯೋಚಿಸಿದರೆ ಜೀವನನ್ನು ಭವದ ಬಂಧನಕ್ಕೆ ಒಳಪಡಿಸುವುದು

ತನ್ನ ನಿಜಸ್ವರೂಪವನ್ನು ಮರೆಸುವುದು ಹೊನ್ನು ಅಲ್ಲ, ಹೆಣ್ಣು ಅಲ್ಲ, ಮಣ್ಣೂ ಅಲ್ಲ ಅದು ಮನಸ್ಸಿನೊಳಗಿರುವ ಆಯಾ ವಿಷಯಗಳ ಕುರಿತ ಹೊಂದಿರುವ ಆಸೆಯೆ ಮಾಯೆ ಎಂದು ಅಲ್ಲಮ ಹೇಳಿದ್ದಾನೆ. ಹೆಣ್ಣು, ಹೊನ್ನು, ಮಣ್ಣು ಇವು ಲೌಕಿಕದ ಮೂರು ಪ್ರಾತಿನಿಧಿಕ ರೂಪಗಳಾಗಿವೆ. ಇವುಗಳ ಸುತ್ತಲೂ ಸಂಸಾರಿಕ ವಿಷಯಗಳು ಬೆಸೆದುಕೊಂಡಿವೆ. ಲೌಕಿಕದ ಜೀವನದಲ್ಲಿ ಬದುಕುವ ಮನುಷ್ಯನು ಸಾಧಿಸಬೇಕಾದ ಗುರಿಗಳು ಹೊನ್ನ, ಹೆಣ್ಣು, ಮಣ್ಣು ಆಗಿವೆ. ಮನುಜ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವಲ್ಲಿ ಇವು ಮೂರಕ್ಕೆ ಪ್ರಾಧಾನ್ಯತೆ ಕೊಡುತ್ತಾನೆ. "ಹೆಣ್ಣಿಗಾಗಿ ಸತ್ತುದು ಕೋಟಿ, ಹೊನ್ನಿಗಾಗಿ ಸತ್ತದು ಕೋಟಿ, ಮಣ್ಣಿಗಾಗಿ ಸತ್ತದು ಕೋಟಿ ಗುಹೇಶ್ವರನಿಗಾಗಿ ಸತ್ತವರನ್ನು ಒಬ್ಬರನ್ನೂ ಕಾಣೆ" ಎಂಬ ಅಲ್ಲಮ ಪ್ರಭುವಿನ ಮಾತುಗಳಲ್ಲಿ ಪರಮಾತ್ಮನನ್ನು ಬದುಕಿನ ಸಾಕ್ಷಾತ್ಕಾರದ ಹಾದಿಯಲ್ಲಿ ಪರಮ ಗುರಿಯಾಗಿಸಿಕೊಳ್ಳುವ ಪ್ರಯತ್ನ ಇರುವ ಮನುಜರ ಸಂಖ್ಯೆ ತೀರಾ ಕಡಿಮೆ ಅಥವಾ ಇಲ್ಲವೇ ಇಲ್ಲವೆನ್ನಬಹುದು. ಹೊನ್ನು, ಹೆಣ್ಣು, ಮಣ್ಣಿಗಾಗಿ ಬದುಕಿದವರು, ಬದುಕ ಕಳೆದುಕೊಂಡವರು. ವಾಸ್ತವದಲ್ಲಿ ಇಲ್ಲವಾದವರು ಪುರಾಣದ ಮೂಲಕ ಮಾದರಿಯಾದವರು. ಹೀಗೆ ಸಂಖ್ಯೆಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಭೌತಿಕ ವಸ್ತುಗಳಾದ ಇವು ಮೂರು ಲೌಕಿಕ ಬದುಕಿನ ಹಾದಿಯಲ್ಲಿ ಸಾಧನೆಯ ಮೈಲಿಗಲ್ಲುಗಳಾಗಿವೆ. ಇವು ಮೂರು ಪಡೆದುಕೊಳ್ಳಬೇಕೆಂಬ ಉತ್ಕಟ ಭಾವನೆಯೇ ಮಾಯೆ ಎಂದಿದ್ದಾರೆ. ಅನಗತ್ಯವಾದ, ನಿರೀಕ್ಷೆಯಿಲ್ಲದ ಹೊನ್ನು, ಹೆಣ್ಣು, ಮಣ್ಣುಗಳು ಮಾಯೆ ಎಂಬ ಆಸೆಯಿಂದ ಹೊರಗು ಇವು ಮೂರು ಅಗತ್ಯಕ್ಕಿಂತ ಹೆಚ್ಚಿನ ಬೇಡಿಕೆಯಾದಾಗ ಆಸೆಯಾಗುತ್ತದೆ ಹಾಗೂ ಅದೇ ಮಾಯೆಯ ಕ್ರಿಯಾರೂಪವಾಗುತ್ತದೆ. ಆಸೆಯ ಇರುವಿಕೆಯನ್ನರಿಯದೆ ಬಳಲುವ ಜಗತ್ತಿಗೆ ಉತ್ತರ ವಿತ್ತಿರುವುದು. ತನಗೆ ಅರಗಿಸಿಕೊಳ್ಳಲಾಗದುದನ್ನು ತನ್ನ ಬಂಧನಕ್ಕೆ ಸಿಗದುದನ್ನು ಮಾಯೆ ಎಂಬ ನಾಮಕರಣ ಮಾಡಿ ಇಡೀ ಲೋಕ ವಸ್ತುಗಳನ್ನೆಲ್ಲ ದೂರುವವನು. ಲೋಕ ವಸ್ತುಗಳನ್ನು ತನ್ನ ಬದುಕಿಗೆ ಪೂರಕವಾಗಿ ಬಳಸಿಕೊಳ್ಳಲಾರದ ತನ್ನ ಸಾಮರ್ಥ್ಯದ ದೋಷವನ್ನು ಗುರುತಿಸಿಕೊಳ್ಳಲಾಗದ ಮಾನವ ತನ್ನನ್ನು ಬಿಟ್ಟು ಮಿಕ್ಕೆಲ್ಲವನ್ನೂ ದೂಷಿಸುವವನು'.[೪೯] ಎಂಬ ಅಭಿಪ್ರಾಯವಿದೆ. ಈ ಮಾತುಗಳನ್ನು ಗಮನಿಸಿದಾಗ ಮಾನವ ತನ್ನ ಅಸಮರ್ಥತೆಯನ್ನು ನೇರವಾಗಿ ಹೇಳದೆ ಬೇರೊಂದು ವಸ್ತುವಿನ ಮೇಲೆ ಆರೋಪಿಸುವ ರೀತಿಯನ್ನು ಅಲ್ಲಮ ಗುರುತಿಸಿ ಅಲ್ಲಗಳೆಯುತ್ತಾನೆ. ಮಾಯೆ ಎನ್ನುವುದು ನಾವು ಬಳಸುವ ವಸ್ತುಗಳಲಿಲ್ಲ, ಅದನ್ನು ನೋಡುವ ನಮ್ಮ ಮನಸ್ಸಿನಲ್ಲಿದೆ. ಮನಸ್ಸು ದುರ್ಬಲವಾದಾಗ ಅದು ವರ್ತಿಸುವ ರೀತಿ ಇಲ್ಲಿ ಭಿನ್ನವಾಗುತ್ತದೆ.

೫.೧೪ ಮೋಹ: ಮಾಯೆ

"ಎಣ್ಣೆ ಬೇರೆ ಬತ್ತಿ ಬೇರೆ ಎರಡೂ ಕೂಡಿ ಸೊಡರಾಯಿತ್ತು
ಪುಣ್ಯ ಬೇಱೆ, ಪಾಪ ಬೇಱೆ; ಎರಡೂ ಕೂಡಿ ಒಡಲಾಯಿತ್ತು
ಮಿಗಬಾರದು ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷ ವಿರಬಾರದು
ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಕೂಡದ ಮುನ್ನ
ಭಕ್ತಿಯ ಮಾಡಬಲ್ಲಾಡಾತನೆ ದೇವ, ಗುಹೇಶ್ವರಾ"[೫೦]

ಪುಣ್ಯವೇ ಪ್ರಾಣ–ಪಾಪವೇ ಒಡಲು, ಇಂತೆರಡು ಕೂಡಿ ಒಂದೊಡಲಾಯಿತ್ತು. ಈ ಒಡಲಾಸೆಯ ಕೆಡಿಸಬಾರದು. ಇಂತಪ್ಪ ಕಾಯವಳಿಯದ ಮುನ್ನ ಒಡಲಿಚ್ಛೆಯ ಕೆಡಿಸಿ ಲಿಂಗ ಭಕ್ತಿಯ ಮಾಡಬಲ್ಲತಾನೆ ಭಕ್ತನೆಂಬುದೀ ತಾತ್ಪರ್ಯ'[೫೧] ಎಂದಿದ್ದಾರೆ. ದೀಪವೊಂದು ಉರಿಯಬೇಕಾದರೆ ಎಣ್ಣೆ–ಬತ್ತಿ ಎರಡು ಮುಖ್ಯ. ಎರಡು ಬೇರೆ ಬೇರೆ ಆದರೂ ಅವರೆಡೂ ಒಟ್ಟಿಗೆ ಕೂಡಿದಾಗ ಮಾತ್ರ ದೀಪ ಬೆಳಗುತ್ತದೆ. ಅದೇ ರೀತಿ ಸತ್ಕರ್ಮ–ದುಷ್ಕರ್ಮಗಳೆಂಬ ಪುಣ್ಯ–ಪಾಪ ಬೇರೆಯಾದರೂ ಅವರೆಡು ಸೇರಿದಾಗ ಜೀವನು ದೇಹಿ ಯಾಗುತ್ತಾನೆ ಹಾಗೂ ಲೌಕಿಕದಲ್ಲಿ ಬದುಕುತ್ತಾನೆ. ಬದುಕಿನ ಪ್ರತಿಕ್ಷಣವು ಮೀರಬಾರದು, ಮೀರದೇ ಇರಬಾರದು. ಇವೆರಡರ ಮಿತಿಯಲ್ಲಿ ಒಡಲಿಚ್ಛೆಯ ಹಸಿವು–ತೃಷೆಗಳ ಪೂರೈಸಬೇಕು. ಜೀವನು ದೇಹದ ಆಸಕ್ತಿಗಳನ್ನು ಒಂದು ಮಿತಿಯಲ್ಲಿ ಪೂರೈಸುತ್ತಲೇ ಕಾಯದ ಗುಣಗಳನ್ನು ಕಳೆದುಕೊಳ್ಳಬೇಕು. ಪಂಚೇಂದ್ರಿಯಗಳ ಸೆಳೆತದಿಂದ ಮುಕ್ತನಾಗಬೇಕು. ಈ ದೇಹದಲ್ಲಿ ಪ್ರಾಣವಾಗಿ ನಿಂತ ಮಾಯಾ ಬಯಲನ್ನು ಸೇರುವ ಮುನ್ನ ಈ ದೇಹದ ಮೂಲಕ ನಿಜಭಕ್ತಿಯ ಮಾಡಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಜೀವನು ಭವಕ್ಕೆ ಬಂದು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಮಾನವ ಜನ್ಮ ದೊಡ್ಡದು ಎಂಬಂತೆ ಕಾಯವನ್ನು ಶಿವಯೋಗ ಸಾಧನೆಗೆ ಬಳಸಿಕೊಳ್ಳಬೇಕು. ಮಾಯೆ ಎಂಬ ಪ್ರಾಣಜ್ಯೋತಿ ಆವರಿಸಿ ಕೇವಲ ಮನುಜನನ್ನಾಗಿಸುವುದಕ್ಕಿಂತ ಮೊದಲು ಕಾಯದ ಇಚ್ಛೆಯರಿತು ಅದನ್ನು ಮೀರದೆ ಇದ್ದರೂ ಮೀರಿನಿಂತು ಭಕ್ತಿಯೋಗ ಸಾಧಿಸಬೇಕು.

ದೇಹ ಮತ್ತು ಅದರ ಕ್ರಿಯೆಗಳ ರಹಸ್ಯವನ್ನೇ ಅಲ್ಲಮಪ್ರಭು ಹೇಳಿದ್ದಾನೆ. ಕಾಯ ಇದ್ದರೂ ಕಾಯಗುಣ ಅಳಿಯಬೇಕು. ಅಲ್ಲಿರುವ ಪರಸ್ಪರ ವಿರೋಧ ಶಕ್ತಿಗಳಲ್ಲಿ ಒಂದು ಸಾಮರಸ್ಯವನ್ನು ಕಂಡುಕೊಂಡು ಅವನ್ನು ಉದಾತ್ತೀಕರಿಸಬೇಕು. ಇದನ್ನು Transformation ಎಂದು ಅರವಿಂದರು ಕರೆದರೆ ಅಂಗಗುಣಗಳೆಲ್ಲಾ ಲಿಂಗ ಗುಣಗಳಾಗಬೇಕು ಎನ್ನುತ್ತಾರೆ ಶರಣರು'.[೫೨] ಎಂಬ ಅಭಿಪ್ರಾಯ ಅಲ್ಲಮನ ಆಲೋಚನೆಗಳನ್ನು ಸ್ಪಷ್ಟಪಡಿಸುತ್ತದೆ. ಕೆಲವು ನೈತಿಕ ನಿಯಮಗಳನ್ನು ಅಥವಾ ಸಾಧನೆಯ ಕೆಲವು ಯಾಂತ್ರಿಕ ಕ್ರಿಯೆಯಗಳನ್ನು ಶಿವಯೋಗದ ತಳಹದಿಯಾಗಿ ಮಾಡುವಲ್ಲಿ ಇವೆಲ್ಲ ಬೇಕೆಂಬುದು ಒಪ್ಪಿಕೊಳ್ಳುತ್ತಾನೆ.

ಆದರೆ ಇವೆಲ್ಲದರ ತಳಹದಿಯಾದ ಮೂಲಭೂತವಾದ ಅಗತ್ಯವೆಂದರೆ ಆಂತರಿಕ ಬದಲಾವಣೆ. ಜೀವ-ಭಾವ ಅಳಿದು ದೇವಭಾವ ಅಳವಡಬೇಕು. ಆಂತರಿಕ ಜೀವನ ಒಂದು ಕ್ರಾಂತಿಕಾರಕವಾದ ಬದಲಾವಣೆಗೆ ಒಳಗಾಗಬೇಕು. ಆಗ ಇಡೀ ಜೀವನವನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ.

"ಆದಿತ್ರೈಯುಗದಲ್ಲಿ ದೇವದಾನವ ಮಾನವರು
ಮಾಯಾ ಮೋಹದಲ್ಲಿ ಹುಟ್ಟಿ
ತೊಳಲಿ ಬಳಲುತ್ತೈದಾರೆ ಆವ ವೇಷವಾದರೇನು
ತಾಮಸಧಾರಿಗಳು
ಕಾಮ ಕ್ರೋಧ ಲೋಭ ಬಿಡದ ನಾನಾ ವಿಧದ ಡಂಬಕರು
ಹೂಳದ ಹುಣ್ಣಿಂಗೆ ಆರಯ್ಯ ಮದ್ದನಿಕ್ಕುವರು?
ಏನು ಕಾರಣ ಗುಹೇಶ್ವರಾ ಸೋರೆಯ ಬಣ್ಣದ ಹಿರಿಯರು" [೫೨]

ಸೃಷ್ಟಿ ಹುಟ್ಟುವುದು ಮಾಯಾ ಮಿಥ್ಯದಿಂದ. ದೇವ,ದಾನವ, ಮಾನವರೆಲ್ಲರೂ ದೇಹವೆಂಬ ಹಗರಣವ ಧರಿಸಿಕೊಂಡು ತಾಮಸವೃತ್ತಿಯಲ್ಲಿದ್ದು, ಕಾಮ ಕ್ರೋಧಾದಿಗಳಲ್ಲಿ ಬದ್ಧರಾಗಿಪ್ಪವರೆಲ್ಲರು ಹೂಳದ ಹುಣ್ಣೆಂಬ ಮಾಯಾ ಮರುಳಾಗಿಪ್ಪರು. ಅದಕ್ಕೆ ಭವರೋಗಹರನೆಂಬ ವೈದ್ಯವ ಮಾಡಲರಿಯರೆಂಬುವರೆಲ್ಲ ಲಿಂಗಕ್ಕೆ ಸಲ್ಲದ ಅಪ್ರಯೋಜಕರು ಎಂಬ ತಾತ್ಪರ್ಯವಿದೆ.[೫೪] ದ್ವಾಪರ, ತ್ರೇತಾ, ಕಲಿಯುಗ ಎಂಬ ಮೂರು ಯುಗಗಳಲ್ಲಿ ದೇವ ದಾನವ ಮಾನವರು ಜನ್ಮ ತಾಳಿದರು. ಈ ಮೂವರು ಬೇರೆ ಬೇರೆ ಕಾರಣಗಳಿಂದಾಗಿ ದೇವ ದಾನವ, ಮಾನವರಾಗಿ ಹುಟ್ಟಿದ ಮೇಲೆ ತಮ್ಮ-ತಮ್ಮ ಕ್ರಿಯಾಸ್ವರೂಪವನ್ನು ಅಭಿವ್ಯಕ್ತಿಸುವಲ್ಲಿ ಮಾಯೆ ಎಂಬ ಪ್ರಬಲ ಶಕ್ತಿಯ ಕೈಯಲ್ಲಿ ಸಿಲುಕಿದರು. ದೇವರುಗಳು ದೇವರಾಗಿ ಹುಟ್ಟಲು ಮಾಯೆ ಎಂಬ ಮೋಹವೇ ಕಾರಣ. ಅದೇ ರೀತಿ ದಾನವ-ಮಾನವರು ಕೂಡಾ ಮೋಹಕ್ಕೊಳಗಾಗಿ ಕಾಮ ಕ್ರೋಧವೆಂಬ ಅರಿಷಡ್ವರ್ಗಗಳು ಸೆಳೆತಕ್ಕೆ ಸಿಕ್ಕವರು. ಮೋಹ ಎಂಬುದು ಮಾಯದ ಗಾಯವಿದ್ದಂತೆ. ಮಾಯೆ ಎಂಬ ಶಕ್ತಿ ಮೋಹ ಎಂಬ ಸಾಧನದ ಮೂಲಕ ದೇವ ದಾನವ ಮಾನವರನ್ನು ತನ್ನ ಹಿಡಿತದಲ್ಲಿರಿಸಿಕೊಂಡಿದೆ.

೫.೧೫ ಭ್ರಮೆ:ಮಾಯೆ

"ಇಲ್ಲದ ಶಂಕೆಯನುಂಟೆಂದು ಭಾವಿಸಿದಡೆ
ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿಪ್ಪುದು
ಇಲ್ಲದ ತನುವನುಂಟೆಂಬನ್ನಕ್ಕರ
ಅದೇ ಮಾಯೆಯಾಗಿ ಕಾಡುತ್ತಿಪ್ಪುದು

ನಿಃಕ್ರಿಯಾಲಿಂಗಕ್ಕೆ ಕ್ರಿಯಾಂತಲ್ಲದೆ ಆಗದೆಂಬವರ
ಸಂದು ಸಂಶಯದ ಮುಂದುಗೆಡಿಸುತ್ತಿಪ್ಪದು ಕೇಳಾ
ಮನವ ಮನೆಯ ಮಾಡಿಕೊಂಡಿಪ್ಪ
ಲಿಂಗದ ಅನುವನರಿಯಬಲ್ಲಡೆ
ಗುಹೇಶ್ವರನೆಂಬ ಲಿಂಗ ದೂರವಿಲ್ಲಾ ಕೇಳಾ ಮರುಳೆ" [೫೫]

ಜಗತ್ತು ಶಿವನ ಅದ್ಭುತ ಸೃಷ್ಟಿ. ಸೃಷ್ಟಿಯಲ್ಲಿ ಸ್ಥಾನ ಪಡೆದ ಜಡ–ಚೇತನಗಳು ವಿಭಿನ್ನವಾಗಿ ರೂಪಗೊಂಡಿವೆ. ಇವುಗಳ ಮಧ್ಯೆ ಚೈತನ್ಯಮಯ ಆತ್ಮನು ಮಾಯೆಯ ಪ್ರಭಾವದಿಂದ ಜೀವನಾಗಿ ದೇಹಿಯಾಗಿ ಅಸ್ತಿತ್ವ ಪಡೆಯುತ್ತಾನೆ. ತನ್ನ ಸುತ್ತಲೂ ಕಾಣುವ ಜಗತ್ತು ಸತ್ಯವಾದುದೆಂದು, ಶಾಶ್ವತವಾದುದೆಂದು ಭಾವಿಸಿ ಇವುಗಳ ಜೊತೆ ಬದುಕುವ ತಾನು ಕೂಡಾ ಶಾಶ್ವತವೆಂಬ ಭಾವ ಭ್ರಮೆಗೆ ಒಳಗಾಗುವನು. ಭ್ರಮಾಯುಕ್ತ ಜಗತ್ತು ಮತ್ತು ಶಾಶ್ವತವಲ್ಲದ ಬದುಕನ್ನು ನಂಬಿ ಭಾವಿಸಿ ಲೌಕಿಕವನ್ನು ಒಪ್ಪಿ ಸ್ವೀಕರಿಸುತ್ತಾನೆ. ಇಂತಹ ಭ್ರಮಾತ್ಮಕ ಜಗತ್ತಿನಲ್ಲಿ ತಾನು ಎಂಬ ದೇಹವು ಸತ್ಯವೆಂಬ ಭಾವದಲ್ಲಿ ಮುಳುಗಿ ಪಂಚೇಂದ್ರಿಯಗಳ ಮೂಲಕ 'ಬೇಕು' ಎಂಬೆಲ್ಲವನ್ನು ಪಡೆಯುವ ಪ್ರಯತ್ನದಲ್ಲಿ ತೊಡಗುತ್ತಾನೆ. ಅಲ್ಲದೆ ನಾನು, ತನ್ನದು, ತನಗೆ ಸೇರಬೇಕಾಗಿದ್ದು ಎಂಬಲ್ಲಿ 'ತಾನು' ಎಂಬ ಭಾವವು ಮಾಯೆಯ ಒಂದು ಅಭಿವ್ಯಕ್ತ ರೂಪಾಗಿದೆ. ಹೀಗೆ ಮಾಯೆಯ ಕಾರಣದಿಂದ ಉಂಟಾಗುವ ಸಂಶಯಭಾವ ಮನಸ್ಸನ್ನು ಕಲಕುತ್ತದೆ ಶರಣತ್ವದ ಹಾದಿಯಲ್ಲಿರುವವರು ಕೂಡಾ 'ಮಾಯೆ'ಯ ಸೆಳೆತಕ್ಕೆ ಸಿಕ್ಕು ದುರ್ಬಲರಾಗುತ್ತಾರೆ.

ಮನುಜನ ಮನದಲ್ಲಿ ನಿಶ್ಚಲನಾಗಿ ನೆಲೆ ನಿಂತಿರುವ ಪರಮಾತ್ಮನ ಕುರುಹನ್ನು ಅರಿಯುವಲ್ಲಿ ಮಾಯೆ ಸೋಲುವಂತೆ ಮಾಡುತ್ತದೆ. ಮಾಯೆಂಬ ಶಂಕೆಯುಂಟುಮಾಡುವ ಭಾವದಿಂದ ಬಿಡುಗಡೆಹೊಂದಿ ಅಂತರಂಗದಲ್ಲಿರುವ ಪರಮಾತ್ಮನನ್ನು ಅರಿತರೆ ಸಾಕು ಪರಮಾತ್ಮನಿಗೆ ಹತ್ತಿರನಾಗುತ್ತಾನೆ. ಪರಿಣಾಮವಾಗಿ ದಿವ್ಯ ಆನಂದವನ್ನು ಅನಂತವಾಗಿ ಪಡೆಯುವ ಹಾದಿಯಲ್ಲಿ ಸಕ್ರಿಯನಾಗುತ್ತಾನೆ.

"ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ
ಮತ್ತೆ ದೇವರ ಪೂಜಿಸುವರಾರು ಇಲ್ಲ
ಉತ್ತರಾಪಥದ ದರ್ಶನಾದಿಗಳಿಗೆ
ಸುತ್ತಿ ಮುತ್ತಿದ ಮಾಯೆ ಎತ್ತಲಿಕೆ ಹೋಯಿತ್ತು?
ಮರದೊಳಗಣ ಕಿಚ್ಚು ಮರನ ಸುಟ್ಟದ ಕಂಡೆ
ಗುಹೇಶ್ವರನೆಂಬ ಲಿಂಗವಲ್ಲಿಯೆ ನಿಂದಿತ್ತು." [೫೬]

'ಒಂದು ಜೀವಿಯ ಮಲದಿಂದಾದದು ಅರಗು. ಒಬ್ಬ ಜೀವಿಯ ಮಲತ್ರಯ

ಬದ್ಧದಿಂದಾಹುದು ಪಂಚಭೂತ ಪಿಂಡವಾದ ಕಾರಣ. ಅರಗಿನದೇಗುಲವೆಂದರೆ ಸ್ಥೂಲತನು ಅಂತಪ್ಪ ಸ್ಥೂಲತನುವಿನಲ್ಲಿ ಸುಜ್ಞಾನಲಿಂಗ ಪ್ರಕಾಶಿಸಲು ಆ ಸುಜ್ಞಾನಾಗ್ನಿಯಲ್ಲಿ ಸರ್ವಾಂಗವುದಗ್ಧವಾಗಿ ದೇವಭಕ್ತನೆಂಬ ಭಿನ್ನ ಭಾವವಳಿಯಿತ್ತು ಇಂತಪ್ಪ ಉತ್ತರಕಕ್ಷಮಪ್ಪ ಮೋಕ್ಷಮಾರ್ಗವ ಕಂಡವರೆಲ್ಲರೂ ಮಾಯಾತೀತಾರಾದರು. ಶರಣನ ನಿಲುವು, ಕಾಷ್ಠದೊಳಂತರ್ಗತವಾದ ಅಗ್ನಿ ಬಹಿರ್ಗತವಾಗಿ ಮರನಳಿದು ಅಗ್ನಿ ಉಳಿದ ಹಾಗೆ ಶರಣನಳಿದು ಲಿಂಗ ಉಳಿದಪ್ಪುದು.'[೫೭] ಎಂಬಲ್ಲಿ ಮರಕ್ಕೆ ಬೆಂಕಿ ತಗುಲಿದಾಗ ಮರ ಸುಟ್ಟುಹೋಗಿ ಬೆಂಕಿ ಮಾತ್ರ ಉಳಿಯುವಂತೆ ಜ್ಞಾನಾಗ್ನಿಯಿಂದ ಕಾಯ ಮತ್ತು ಅದರ ಮೋಹ ಸುಟ್ಟು ಹೋಗಿ ಶರಣಲ್ಲಿ ತಾನು ಶರಣ ಎಂಬ ಭಾವ ಇಲ್ಲವಾಗಿ ಲಿಂಗವು ತಾನೆ ಆಗಿ ಲಿಂಗವೊಂದೆ ಉಳಿಯುತ್ತದೆ.

ನಿಜ ಶರಣನಿಗೆ ಕಾಯದ ಕುರುಹು ಇರುವುದಿಲ್ಲ. ದೇಗುಲ ಸುತ್ತಿ ಮುಕ್ತಿ ಸಾಧಿತವಾಯಿತೆಂಬುದು ಅಸಾಧ್ಯ. ಭಕ್ತನಳಿದು ಲಿಂಗ ಕುರುಹವಳಿಯಬೇಕು ಸಾಮಾಜಿಕವಾಗಿ ಮನುಷ್ಯ ದೇವರ ದರ್ಶನದಿಂದ ಪುಣ್ಯ ಲಾಭವಿದೆ ಎಂಬ ನಂಬಿಕೆ ಉಳ್ಳವರಿಗೆ ಮೋಕ್ಷ ದೊರೆಕೊಳ್ಳದು. ಜ್ಞಾನವೆಂಬುದು ಶಿವಯೋಗ ಸಾಧನೆಯಿಂದ ಸಿದ್ಧಿಯಾಗುವಂಥದು. ಮಾಯೆ ಎಂಬುದು ಭ್ರಮೆ ಅಥವಾ ಕಲ್ಪಿತ ಭಾವವಾಗಿ ನಿಲ್ಲುತ್ತದೆ. 'ಅರಗಿನ ದೇಗುಲವೆಂದರೆ ಈ ಸ್ಥೂಲ ದೇಹ. ಇದರೊಳಗಿರುವ ಶಿವಸ್ವರೂಪವಾದ ಆತ್ಮವೇ ಉರಿಲಿಂಗ. ಇದರ ಸ್ವರೂಪವನ್ನು ಸಾಧಕ ಕಂಡುಕೊಂಡರೆ ಆಗ ಅರಗಿನಂತಿರುವ ಈ ದೇಹಕ್ಕೆ ಬೆಂಕಿ ತಾಗುತ್ತದೆ. ಆಗ ಅಲ್ಲಿ ದೇವಾಲಯವೂ ಇಲ್ಲ. ದೇವರೂ ಇಲ್ಲ ಪೂಜ್ಯರೂ ಇಲ್ಲ, ಪೂಜಕರೂ ಇಲ್ಲ. ಎರಡಳಿದು ಒಂದಾಗಿ ಪರಿಣಮಿಸುತ್ತದೆ. ಈ ಮಾಯಾತೀತವಾದ ಪಥವನ್ನು ಕಂಡಮೇಲೆ ಅದುವರೆಗೂ ಜೀವನವನ್ನು ಸುತ್ತಿದ್ದ ಮಾಯೆ ಎದ್ದು ಓಡಿಹೋಗುತ್ತದೆ. ಮರದಲ್ಲಿನ ಕಿಚ್ಚು ಮಥನದಿಂದ ಹೊಮ್ಮಿ ಮರವನ್ನೆ ಸುಟ್ಟಂತೆ. ಸಾಧಕನ ಸಾಧನೆಯಿಂದ ಹೊರ ಹೊಮ್ಮಿದ ಜ್ಯೋತಿರ್ಲಿಂಗ, ಶರಣನ ಅಂಗುಣಗಳನ್ನು ದಹಿಸಿ ಆತನನ್ನು ಜ್ಯೋತಿ ಸ್ವರೂಪನನ್ನಾಗಿ ಮಾಡುತ್ತದೆ. ನಿರ್ವಲಯನ್ನಾಗಿ ಮಾಡುತ್ತದೆ.[೫೮] ಅರಗಿನ ದೇಗುಲ ಅಶಾಶ್ವತ ಹಾಗೂ ಉರಿಯ ಲಿಂಗ ಶಾಶ್ವತ. ಇವರೆಡು ಒಂದಾದಾಗ ದೇವ-ಜೀವ ಎಂಬ ದ್ವೈತಭಾವ ಇರುವುದಿಲ್ಲ. ಪೂಜಿಸುವ ಆರಾಧಿಸುವ ಕ್ರಿಯಾ ವಿಧಾನಗಳು ಇರುವುದಿಲ್ಲ. ದೇವರನ್ನು ಕಾಣುವ ಆರಾಧಿಸುವ ಮೂಲಕ ಮೋಕ್ಷ ಸಾಧಿಸಬಲ್ಲೆವು ಎಂಬ ಭ್ರಮೆ ಅಥವಾ ಮಾಯೆ ಕೂಡಾ ಇಲ್ಲವಾಗುತ್ತದೆ. ಮರದೊಳಗೆ ಕಾಣದಂತಿರುವ ಕಿಚ್ಚಿನಂತೆ ಲಿಂಗವು ಮನದಲ್ಲಿ ಅರಿವಾಗದಂತೆ ನೆಲೆಯೂರುತ್ತದೆ. ಜೀವ ಅದನ್ನು ಕಾಣಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದಾಗ ಮಾತ್ರ ಅಂತರಂಗದಲ್ಲಿ ಲಿಂಗವಿದೆ ಎಂಬ ಅರಿವನ್ನು ಮೂಡಿಸುತ್ತದೆ. ಅರಿವು ಮೂಡದೇ

ಹೋಗುವ ಮನಸ್ಥಿತಿಯೆ ಮಾಯೆ ಆಗಿದೆ. ಅಂತರಂಗದಲ್ಲಿರುವ ಪರಮಾತ್ಮನನ್ನು ಅರಿಯದೆ ಇನ್ನೆಲ್ಲೋ ಇದೆಯೆಂದು ತಿಳಿದು ದೇವಸ್ಥಾನಗಳನ್ನು ಸುತ್ತುವಂತೆ ಮಾಡುವುದು ಮಾಯಾ ಭಾವವಾಗಿದೆ. ಭಕ್ತಿ ಎಂಬುದು ಭಾವದಲ್ಲಿರಬೇಕೆ ಹೊರತು ಕ್ರಿಯೆಯಲ್ಲಿ ಅಲ್ಲ ಎಂಬರ್ಥವಿದೆ.

೫.೧೬ ಹುಸಿತನ: ಮಾಯೆ

"ವಾಯದ ಪಿಂಡಿಗೆ ಮಾಯದ ದೇವರಿಗೆ
ವಾಯಕ್ಕೆ ಕಾಯವ ಬಳಲಿಸದೆ ಪೂಜಿಸಿರೋ?
ಕಟ್ಟು ಗೂಟಕ್ಕೆ ಬಂದ ದೇವರ
ಪೂಜಿಸಲು ಸೂಜಿಯ ಪೋಣಿಸಿ
ದಾರವ ಮರೆದಡೆ ಹೊಲಿಗೆ ಬಿಚ್ಚಿತ್ತು ಗುಹೇಶ್ವರಾ"[೫೯]

ತನ್ನ ನಿಜವ ತಾನಾರೆಂದರಿಯದೆ ಮಿಥ್ಯಭಾವದಿಂದ ಮಿಥ್ಯಲಿಂಗವ ಮಿಥ್ಯೆಯಿಂದ ಪೂಜಿಸುತ್ತಿರಲು ಆಯಾಸವೇ ಕೈಕಟ್ಟುವುದಲ್ಲದೆ ಅಲ್ಲಿ ನಿಜವು ಸಾಧ್ಯವಾಗದು. ಮತ್ತೆ ಇಂತೆಂದೊಡೆ ಅನುಭವವೆಂಬ ಪೂಜೆಯಲ್ಲಿ ಮನವೆಂಬ ಸೂತ್ರ ಪೋಣಿಸಲು ಆ ಮಿಥ್ಯಾಭಾವದ ಹೊಲಿಗೆ ಬಿಚ್ಚಿ ಶಿಥಿಲವಾಯಿತು ಎಂದರ್ಥ.[೬೦] ಸೂಜಿ–ದಾರದ ನಡುವಿನ ಸಂಬಂಧವನ್ನು ಲೌಕಿಕ ಆಧ್ಯಾತ್ಮಿಕ ನಡುವಿನ ಕೊಂಡಿಕಳಚುವಲ್ಲಿ ಜೀವ–ದೇಹಕ್ಕೆ ಹೋಲಿಸಿದ್ದಾರೆ.

'ಹುಸಿಯ ಪೀಠದಲ್ಲಿರಿಸಿ ಹುಸಿಯ ದೇವರ ಬರಿದೆ ಅರ್ಚಿಸುವ ಬಳಲಿಕೆ ಬೇಡ. ಪೂಜಿಸಿರಿ ನಿಜದೇವರ, ನಿಜಭಾವದಿ. ಶುದ್ಧ ಭಾವದಲಿ ಭಾವಲಿಂಗವ ಸ್ಥಿರಗೊಳಿಸಿ ಅದರ ಧ್ಯಾನದಲಿ ಮನವ ನಿಯೋಗಿಸಿರಿ ಪೂರ್ವದ ಅನ್ಯಭಾವಗಳನ್ನೆಲ್ಲ ಮರೆತುಬಿಡಿ. ಆಗ ಕಾಯ ಜೀವದ ಹೊಲಿಗೆ ಬಿಚ್ಚುತ್ತದೆ, ಭವ ಹಿಂಗುತ್ತದೆ, ಅಂಗ–ಲಿಂಗದ ಸಾಮರಸ್ಯ ಉಂಟಾಗುತ್ತದೆ. ಅಂತಹ ಸಮರತಿಯ ಅನುಭಾವಿಯೇ ಶರಣ [೬೧] ಎಂದಿದ್ದಾರೆ. ಇಲ್ಲಿ ಆಧ್ಯಾತಿಕತೆಯ ಹಿನ್ನಲೆಯಲ್ಲಿ ಲೌಕಿಕ ಎಂಬುದು ಹುಸಿ, ಪರಮಾತ್ಮ ಎಂಬುದು ಸತ್ಯ ಎಂಬ ಭಾವ ಕಾಣುತ್ತದೆ. ಆಧ್ಯಾತ್ಮಿಕ ಸಾಧನೆಯಲ್ಲಿ ಹೊರಟ ಮನುಜ ಮನಸ್ಥಿತಿ ಹೇಗಿರಬೇಕು ಎಂಬ ವಿವರಣೆಯೂ ಇದೆ. ಸೂಜಿ–ದಾರ–ಹೊಲಿಗೆ ಇವುಗಳ ಸಂಬಂಧಂತೆ ಭಕ್ತಿಯ ನೆನಹು, ಸಂಸಾರದ ನೆನಹು, ಲೌಕಿಕ ಬಂಧನ ಇವುಗಳನ್ನು ಪ್ರಸ್ತಾಪಿಸಿದ್ದಾರೆ. ಭಕ್ತನಾದಡೆ ನೆಟ್ಟನೆ ಭಕ್ತನಾಗಬೇಕು. ಶರಣನಾದರೆ ನೆಟ್ಟನೆ ಶರಣನಾಗಬೇಕು ಎಂಬ ವಚನದಂತೆ ನಿಜ ಭಕ್ತ ಬಹಿರಂಗದ ಭಕ್ತಿಗಿಂತ ಅಂತರಂಗದ ಭಕ್ತಿಯನ್ನು ತೋರಬೇಕು. ಹುಸಿ ಪೀಠದಲ್ಲಿ ಅಲಂಕರಿಸಲ್ಪಡುವ ಪರಮಾತ್ಮ ಹುಸಿಯಾಗಿರುತ್ತಾನೆ. ಮಾಯೆಯ ಅಭಿವ್ಯಕ್ತಿ ಆಗಿರುತ್ತಾನೆ. ಹುಸಿ ಪರಮಾತ್ಮನನ್ನು ಪೂಜಿಸಲು ಕಾಯವ ಬಳಲಿಸುವುದು ವ್ಯರ್ಥ. ಸಮಯವು ವ್ಯರ್ಥ. ನಿಜದಿ ಅಂತರಂಗದಲ್ಲಿ ಪರಮಾತ್ಮನನ್ನು ಧ್ಯಾನಿಸಿದರೆ

ಸಾಕು ಭಗವಂತ ಸಾಕ್ಷಾತ್ಕಾರಗೊಳ್ಳುವನು. ಸಂಸಾರ ಬಂಧನದಿಂದ ಮುಕ್ತಗೊಳಿಸುವನು. ಪರಮಾತ್ಮನು ಕೂಡಾ ನಿಜಭಕ್ತಿಯಿಲ್ಲದಿದ್ದರೆ ಮಾಯಾಸ್ವರೂಪಿಯಾಗಿ ಕಾಣುತ್ತಾನೆ. ಮಾಯೆ ಮನುಜನ ಲೋಕವ ಕಾಣುವ ದೃಷ್ಟಿಯಲ್ಲಿದೆ.

೫.೧೭ ಜ್ಞಾನ ಮಂಡಲ: ಮಾಯೆ

"ಐದಕಟ್ಟಿ ಐದನೆಗಪಿ ಮನಪವನ ಧ್ಯಾನಭಾವ ದೃಢದಿಂದ
ಧ್ಯಾನದಿನೋಡಿ, ಕಾಯದ ಗಾಳಿಯ ಸಂಚವ ಶೋಧಿಸಿ
ಒಳಗೆ ಜಾರಿದ ಅಮೃತವನು
ಮಾಯಾಮಂಡಲದಲೆತ್ತಿ, ನಾಭಿಮಂಡಲದಲ್ಲಿ ನುಂಗಿ
ಮಾಯಾಮಂಡಲ ತೋರಲರಿಯಬಲ್ಲಡೆ
ಗುಹೇಶ್ವರ ಲಿಂಗದಲ್ಲಿ ಆತ ಶಿವಯೋಗಿ!" [೭]

ಕಾಯವನ್ನು ಯೋಗದ ಮೂಲಕ ನಿಗ್ರಹಿಸಿಕೊಂಡು ಧ್ಯಾನದ ಮೂಲಕ ಏಕಾಗ್ರತೆ ಸಾಧಿಸುವ ಪರಿ ಇಲ್ಲಿದೆ. ಕಾಯವನ್ನು ಯೋಗದ ಮೂಲಕ ನಿಗ್ರಹಿಸಿಕೊಂಡು ಧ್ಯಾನದ ಮೂಲಕ ಏಕಾಗ್ರತೆ ಸಾಧಿಸುವ ಪರಿ ಇಲ್ಲಿದೆ. ಷಟ್ ಚಕ್ರಗಳ ಮೂಲಕ ಯೋಗಸಿದ್ದಿಯನ್ನು ಕೈಗೊಳ್ಳುವುದಾಗಿದೆ. ಯೋಗದಲ್ಲಿ ಉಸಿರಾಟ ಕ್ರಿಯೆ ತುಂಬಾ ಮುಖ್ಯವಾಗುತ್ತದೆ. ಧ್ಯಾನವೆಂಬುದು ಮೂಲತ: ಉಸಿರಾಟದ ಸಂಚಾರವನ್ನು ಕೇಂದ್ರಿಕರಿಸುತ್ತದೆ. ಇಲ್ಲಿ ಮಾಯಾಮಂಡಲ ಎಂಬುದು ಉರ್ಧ್ವಮುಖ ಯೋಗಸಾಧನೆಯಲ್ಲಿ ರೂಪ ಪಡೆಯುತ್ತದೆ.

೫.೧೮ ಕರುಣಂಗಳು: ಮಾಯೆ

"ಹೋಹ ಬಟ್ಟೆಯಲೊಂದು ಮಾಯೆಯಿದ್ದುದ ಕಂಡೆ
ಠಾಣಾಂತರ ಹೇಳಿತ್ತು ಠಾಣಾಂತರ ಹೇಳಿತ್ತು
ಅಲ್ಲಲ್ಲಿಗೆ, ಅಲ್ಲಲ್ಲಿಗೆ
ಗುಹೇಶ್ವರನ ಕರಣಂಗಳು ಕುತಾಪಿಗಳಲ್ಲಲ್ಲಿಗೆ" [೬೩]

ಹೋಹ ಬಟ್ಟಯೆಂಬುದು ಪರಶಿವತತ್ವವನೈದುವ ಮೋಕ್ಷಮಾರ್ಗವಾಗಿದ್ದು, ಆ ಮಾರ್ಗದೊಳು ಇದು ಮಹವೆಂಬ ಮರವೆಯನುಂಟುಮಾಡುತ್ತಿಹ ಮಿಥ್ಯಾಜ್ಞಾನ ಮಾಯಾ ಸ್ವರೂಪವಾಗಿ ಮುಂದುಗೊಂಡಿಪ್ಪ ಕಾರಣ ಸ್ಥೂಲ-ಸೂಕ್ಷ್ಮ ಕಾರಣವೆಂಬ ತನು ತ್ರಯಂಗಳೊಳು ಜ್ಞಾತೃ ಜ್ಞಾನ ಜ್ಞೇಯ ವೆಂಬುವು ಮೂರು ಕರಣಂಗಳಾದವು. ಅಂಗತ್ರಯಕ್ಕೆ ಲಿಂಗತ್ರಯವ ಸಂಬಂಧವ ಮೂಡಲು ಸರ್ವಾಂಗವು ಲಿಂಗವಾಗಿ ಸಕಲ ಕರಣಗಳು ಲಿಂಗಕರಣಂಗಳಾದವು.[೬೪] ಭವಕ್ಕೆ ಬಂದ ಜೀವ ಮಾಯೆಯ ಕಾರಣಕ್ಕಾಗಿ ದೇಹಿ ಯಾಗುವನು. ಹೀಗೆ ಹಲವು ದೇಹಗಳಲ್ಲಿ ಬರಲು ಕಾರಣ ಲಿಂಗವೇ ಆಗಿದೆ. ಜ್ಞಾತೃಭಾವ ಸ್ಥೂಲದಲ್ಲಿ ಜ್ಞಾನಭಾವ ಸೂಕ್ಷ್ಮದಲ್ಲಿ, ಜ್ಞೇಯಭಾವ ಕರಣದಲ್ಲಿ ಒಂದಾಗಿ ತೋರಿದಾಗ

ಅಂಗ–ಲಿಂಗವಾಗಿ ತೋರುತ್ತದೆ. ಅಂಗ–ಲಿಂಗವಾಗುವ ಸ್ಥಿತಿ ಉಂಟಾಗದಿರಲು ಮಾಯೆ ಕಾರಣವಾಗುತ್ತದೆ.

ಲೋಕದಲ್ಲಿ ಮಾನವನಾಗಿ ಹುಟ್ಟಿ ಸಂಸಾರ ಪಥದಲ್ಲಿ ಸಾಗುವುದು ಅನಿವಾರ್ಯ. ಈ ಹಾದಿಯಲ್ಲಿ ಮಾಯೆ ಎಂಬ ಶಕ್ತಿಯು ಇದೆ. ಆಧ್ಯಾತ್ಮಿಕ ಮುಕ್ತಿಯ ಕುರುಹು ಇದೆ. ಇವೆರಡನ್ನು ನೋಡಿ ಅರ್ಥೈಸಿಕೊಂಡು ಆರಿಸಿಕೊಂಡು ಆಚರಿಸಬೇಕಾದ ಅಗತ್ಯವಿದೆ. ಈ ಹಾದಿಯಲ್ಲಿ ಸಾಗುವ ಮನುಜ ಮಾಯೆ ಎಂಬ ಶಕ್ತಿಯ ಪ್ರಭಾವಕ್ಕೆ ಒಳಗಾದರೆ ಆಯಿತು. ಅದು ಮನುಷ್ಯನನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಳ್ಳುತ್ತದೆ. ವಾಸ್ತವದಲ್ಲಿ ಮಾನವನ ಕರಣಗಳು ಗುಹೇಶ್ವರನ ಅನುಗ್ರಹದಿಂದ ಅವನನ್ನು ಅರಿಯಲೆಂದೆ ಯುಕ್ತವಾದವುಗಳಾಗಿವೆ. ಆದರೆ ಮನುಜನು ಆಮಿಷಗಳನ್ನು ತೋರಿ ಮರುಳುಗೊಳಿಸುವ ಅಜ್ಞಾನದ ಪ್ರಭಾವಕ್ಕೆ ಒಳಗಾಗಿ ಪ್ರಾಪಂಚಿಕ ವಿಷಯಗಳತ್ತ ಸೆಳೆಯಲ್ಪಟ್ಟು ಶಿವತತ್ವದ ಆನಂದವನ್ನು ಮರೆಯುತ್ತಾನೆ. ಎಂದಿಗೂ ನಾಶವಾಗದ ಆತ್ಮಸೌಖ್ಯ ಮರೆದು ಅಶಾಶ್ವತ ಸುಖಕ್ಕಾಗಿ ಹಂಬಲಿಸಿ ಪಡಿಯುವಲ್ಲಿ ಉದ್ಯುಕ್ತವಾಗುವ ಕರಣಗಳು ಲೋಕ ಕಂಟಕ ಸ್ವರೂಪ ತಾಳುತ್ತವೆ.[೬೫] ಗುಹೇಶ್ವರನನ್ನು ಅರಿತ ಅಲ್ಲಮನಿಗೆ ಲೌಕಿಕ ಪಥದಲ್ಲಿ ಮಾಯೆ ಇರುವುದು ಕಂಡುಬರುತ್ತದೆ. ಈ ಮಾಯೆಯ ಹಿಡಿತಕ್ಕೆ ಒಳಗಾಗುವ ಸಾಮಾನ್ಯರನ್ನು ಕಂಡು ಹೇಳುತ್ತಾನೆ. ಕರಣೇಂದ್ರಿಯಗಳ ಸೂಕ್ತ ಬಳಕೆ ಮಾಡದಿರುವವರ ಬಗ್ಗೆ ಮಾತನಾಡಿದ್ದಾನೆ.

ಇಲ್ಲಿ ಮಾಯೆ ಅಜ್ಞಾನದ ಸ್ವರೂಪದ್ದಾಗಿದೆ. ಶಿವಯೋಗ ಸಾಧನೆ ಕೈಗೊಳ್ಳುವಲ್ಲಿ ಇರುವ ಪರೀಕ್ಷಾ ರೂಪದ ಅಡೆ–ತಡೆಯಾಗಿದೆ. ಮನುಷ್ಯ ಸಕಾರಾತ್ಮಕ ಅಂಶಗಳಿಗಿಂತ ನಕಾರಾತ್ಮಕ ಅಂಶಗಳತ್ತ ಬೇಗ ಆಕರ್ಷಿತನಾಗುತ್ತಾನೆ. ನಕಾರಾತ್ಮಕ ಅಂಶಗಳ ಅಭಿವ್ಯಕ್ತಿ ರೂಪವೇ ಮಾಯೆ ಆಗಿದೆ.

೫.೧೯ ಬಲೆ: ಮಾಯೆ

"ಮಾಯದ ಬಲೆಯಲ್ಲಿ ಸಿಲುಕಿದ ಮರುಳ
ನಾನೆಂದಱಿದ ಪರಿಯ ನೋಡಾ
ಲಿಂಗವೆಂದಱಿದ ಪರಿಯ ನೋಡಾ
ತನ್ನ ವಿನೋದಕ್ಕೆ ಬಂದು ನಿಶ್ಚಿತ ನಿರಾಳ
ಗುಹೇಶ್ವರನೆಂದಱಿದ ಪರಿಯ ನೋಡಾ"[೬೬]

ತಾನು ಶಿವನೆಂಬುದು ಮರೆದ ಮರವೆಯಿಂದ ಮಾಯಾದೇಹ ಪಾಶದಲ್ಲಿ ಸಿಕ್ಕಿ ಭ್ರಾಂತು ಸೂತಕವೆಡೆಗೊಂಡಿರ್ದಲ್ಲಿ ಶಿವಜ್ಞಾನೋದಯವಾಗಿ ಶರಣ ತನ್ನ ನಿಜವನರಿದು ಮಾಯಾದೇಹ ಭ್ರಾಂತಿಯನ್ನಳಿದುದು ಚೋದ್ಯವೆಂಬುದೀಗ ಮಾಯದ ಬಲೆಯಲ್ಲಿ

ಮರುಳ ನಾನೆಂದರಿದ ಪರಿಯನೋಡಾ ಎಂಬ ಶಬ್ದಕ್ಕರ್ಥ. ಅಂತು ಮಾಯಾ ದೇಹ ಭ್ರಾಂತಿಯಲ್ಲಿಳಿದು ಮಹಾಘನಲಿಂಗವು ತಾನೆಂದರಿದುದು ಚೋದ್ಯವೆಂಬುದೀಗ ತನ್ನ ವಿನೋದಕ್ಕೆ ಒಂದು ನಿಶ್ಚಿತ ನಿರಾಳ ಗುಹೇಶ್ವರನೆಂದರಿದ ಪರಿಯ ನೋಡಾ'[೬೭] ಎಂಬಲ್ಲಿ ಮಾಯೆ ಬಲೆಯೆಂಬ ಸಾಂಕೇತಿಕ ರೂಪದಲ್ಲಿ ಅಭಿವ್ಯಕ್ತಿಯಾಗಿದೆ. ಮಾಯೆ ಜೀವನದಲ್ಲಿ ಮರೆವು ಮೂಡಿಸಿ ಭ್ರಮೆಗೊಳಗಾಗುವಂತೆ ಮಾಡುತ್ತದೆ. ಸಾಮಾಜಿಕವಾಗಿ ಜೀವನು ಅನುಸರಿಸುವ ಬದುಕನ್ನು ನೋಡಿ ಲೌಕಿಕಕ್ಕೆ ಮರುಳಾದ ಸ್ಥಿತಿಯಿಂದ ಹೊರ ಬರಲಾರದಂತೆ ಮಾಡುವ ಆಕರ್ಷಣೆ ಮಾಯೆ ಆಗಿದೆ.

ಮಾಯೆ ಎಂಬುದು ಬಲೆಯಾಗಿದೆ. ಅದರಲ್ಲಿ ಸಿಲುಕಿದ ಮರುಳ ಮನುಜ ನಾಗಿದ್ದಾನೆ. ಇಲ್ಲಿ, ಮರುಳ ಎಂಬುದು ದಡ್ಡ ಅಥವಾ ತಿಳುವಳಿಕೆ ಇಲ್ಲದವ ಅಥವಾ ವಾಸ್ತವದ ಅರಿವನ್ನು ಪಡೆಯಲಾಗದವ ಎಂದಾಗುತ್ತದೆ. 'ಮಾಯೆ' ಎಂಬ ಅಜ್ಞಾನಕ್ಕೆ ಒಳಗಾಗಿ ಲೌಕಿಕದಲ್ಲಿ ಲೀನನಾಗುತ್ತಾನೆ. ಕಾಲಾಂತರದಲ್ಲಿ ಶರಣರ ಸಂಗದಿಂದ ತನ್ನ ನಿಜದ ಅರಿವು ಮೂಡಿದಾಗ ಲಿಂಗ ಸ್ವರೂಪವನ್ನು ಅರಿಯುತ್ತಾನೆ. ಆ ನಿಜ ಜ್ಞಾನದ ಅರಿವಿನಿಂದ ಜೀವನನ್ನು ಬಂಧಿಸುವ ಶಕ್ತಿ ಮಾಯೆ ಎಂಬ ಭಾವಕ್ಕಿಲ್ಲ ಎಂಬುದು ತಿಳಿದುಕೊಂಡಾಗ ನಿಜಜ್ಞಾನದ ಅರಿವು ಮೂಡುತ್ತದೆ. ಪರಮ ಆನಂದದ ಅನುಭವ ಉಂಟಾಗುತ್ತದೆ.

'ವಿಸ್ತಾರವಾದ ವಿಶ್ವ, ಅದರಲ್ಲಿ ಎಲ್ಲೆಡೆ ಮನಾಕರ್ಷಕ ವಿಷಯಗಳು ಸುಂದರವಾದ, ಮೋಹಕವಾದ ದೇಹ, ಇವೆಲ್ಲ ಮಾಯೆ ಹರಡಿದ ಬಲೆಗಳು. ಶಿವಾಂಶಿಕ ಜೀವ ಆಮಿಷಕ್ಕೊಳಗಾಗಿ ಈ ಬಲೆಯಲ್ಲಿ ಸಿಲುಕುತ್ತಾನೆ. ಅದಕ್ಕೆ ಮುಖ್ಯ ಕಾರಣ ಆತನ 'ಮರಳು'–ತನ್ನ ನಿಜ ನಿಲುವಿನ ಮರೆವು ಕಾಲಾಂತರದಲ್ಲಿ ಬಲ್ಲವರ ಸಂಗದಿಂದ ತಾನು ಬಂಧಿತ ಎನ್ನುವದನ್ನು ಅರಿತುಕೊಳ್ಳುತ್ತಾನೆ ಅದರಿಂದ ಪಾರಾಗುವ ಮಾರ್ಗವನ್ನು ಅರಸಿ ಕಾಣುತ್ತಾನೆ. ಕೊನೆಗೆ ತಾನು ಜೀವನಲ್ಲ ಮಾಯಿಕ ಪ್ರಪಂಚಿಯಲ್ಲ, ಸಾಕ್ಷಾತ್ ನಿರ್ಮಾಯನಾದ ಚೈತನ್ಯ, ಘನವಾದ ಮಹಾಲಿಂಗ ಎಂಬ ಪ್ರಜ್ಞೆ ಪಡೆದು, ಲಿಂಗ ಸುಖವನ್ನು ಅನುಭವಿಸುತ್ತಾನೆ.[೬೮]

ಇಲ್ಲಿ ಮಾಯೆ ಎಂಬುದು ಬೇರೆ ಏನೂ ಅಗಿಲ್ಲ. ಅದು ಪರಮತ್ಮನ ಲೀಲಾ ವಿನೋದವಾಗಿದೆ. ಆದ್ದರಿಂದಲೇ ಅದು ಪರಮಾತ್ಮನಷ್ಟೇ ಪ್ರಬಲವಾಗಿ ತೋರುತ್ತದೆ. ಆದರೆ ನಿಜದಲ್ಲಿ ಅದು ಭಕ್ತಿಯ ದೃಢ ಶಕ್ತಿಯ ಮುಂದೆ ನಿಲ್ಲಲಾರದು. ದೃಢಭಕ್ತಿ ಎಂಬುದರ ಅವ್ಯಕ್ತ ರೂಪ ದೃಢ ಮನಸ್ಸು. ಮನಸ್ಸನ್ನು ನಿಯಂತ್ರಿಸಿದಲ್ಲಿ ಇಂತಹ ಮಾಯೆ ಏನೂ ಮಾಡಲಾರದು.

"ಬ್ರಹ್ಮ ಪಾಶ ವಿಷ್ಣು ಮಾಯೆಯೆಂಬ ಬಲೆಯ ಬೀಸಿ
ಹೊನ್ನು ಹೆಣ್ಣು, ಮಣ್ಣು ತೋರಿ
ಮುಕ್ಕಣ್ಣನಾಡಿದ ಬೇಂಟೆಯ
ಆಸೆಯೆಂಬ ಕುಟುಕನಿಕ್ಕಿ ಹೇಸದೆ ಕೊಂದೆಯಲ್ಲಾ ಗುಹೇಶ್ವರ?"[೭೯]

ಬ್ರಹ್ಮತತ್ವವೆ ರಜೋಗುಣ. ಆ ರಜೋಗುಣವೇ ತನುವೆಂಬ ಪಾಶವಾಯಿತು. ಜೀವಂಗೆ ಅಂತಪ್ಪ ದೇಹದ ಇಂದ್ರೀಯ ವಿಷಯ ಸುಖ ಭೋಗ. ಹೊನ್ನು, ಹೆಣ್ಣು, ಮಣ್ಣು ಮೊದಲಾದ ವಿಷಯ ಪದಾರ್ಥಂಗಳ ತೋರಿ ಮಚ್ಚನಿಕ್ಕಿ ಮೋಹದ ಬಲೆಯಲ್ಲಿ ಕೆಡಹಿ, ಜೀವದ ಉತ್ಪತ್ತಿ ಸ್ಥಿತಿ ಸಂಹಾರಂಗಳ ಮಾಡಿ ವಿನೋದಿಸುತ್ತಿಪ್ಪ ಶಿವನೆ ಎಂಬುದಾಗಿದೆ.[೮೦] ಮಾಯೆ ಹೊನ್ನು ಹೆಣ್ಣು, ಮಣ್ಣು ಎಂಬ ವಸ್ತುರೂಪದಲ್ಲಿ ಅಭಿವ್ಯಕ್ತಿಯಾಗಿ ಜೀವನನ್ನು ಆಕರ್ಷಿಸುತ್ತದೆ. ಜೀವನನ್ನು ಆಕರ್ಷಿಸಲೆಂದೇ ಈ ಮೂರನ್ನು ಶಿವ ಹರಡುತ್ತಾನೆ. ಬ್ರಹ್ಮವೆಂಬುದು ಜಗತ್ತಾಗಿ ಪ್ರಕೃತಿ ಸಹಜ ಜೀವನಾಗಿ ರೂಪ ಪಡೆದಿದೆ. ಕಾಯದ ಮೂಲಕ ಜೀವದ ಬೇಟೆ ಆಡುತ್ತಾನೆ ಎಂಬರ್ಥ ಕಾಣುತ್ತದೆ.

ಕಾಯವನ್ನು ಸಾಧನವನ್ನಾಗಿಸಿಕೊಂಡು ಪರಮಾತ್ಮನು ತಾನೇ ಸೃಷ್ಟಿಸಿದ ಜೀವಾತ್ಮನನ್ನು ಹೇಗೆ ಬೇಟೆಯಾಡುವನೆಂಬುದನ್ನು ವಿವರಿಸಲಾಗಿದೆ. ಬೇಟೆಗಾರ ಮೊದಲು ಬಲೆಯನ್ನು ಬೀಸಿ ಪ್ರಾಣಿಗಳು ಬಯಸುವ ವಸ್ತುಗಳ ಆಮಿಷವನ್ನು ಒಡ್ಡುವನು. ಪ್ರಾಣಿಗಳು ಆ ವಸ್ತುಗಳ ಆಸೆಯಿಂದ ಬಲೆಯೊಳಕ್ಕೆ ತಿಳಿಯದೇ ಬೀಳುವವು. ಇಲ್ಲಿ ಪರಮಾತ್ಮ ಬೇಟೆಗಾರ. ಲೋಕದ ಜೀವಿಗಳನ್ನು ಬೇಟೆಯಾಡುತ್ತಿದ್ದಾನೆ. ಬ್ರಹ್ಮದ ಹಗ್ಗದಿಂದ ನೇಯ್ದ ವಿಷ್ಣು ಮಾಯೆಯ ಬಲೆಯನ್ನು ಬೀಸಿದ್ದಾನೆ. ಇಲ್ಲಿ ಬ್ರಹ್ಮಪಾಶ ಎಂಬುದು ಹುಟ್ಟು-ಸಾವುಗಳ ಚಕ್ರ. ವಿಷ್ಣು ಮಾಯೆ ಎಂಬುದು ಬದುಕಿನ ಹೋರಾಟ. ಪರಮಾತ್ಮ ಬೀಸಿದ ಬಲೆ ಎಂತಹು ದೆಂದರೆ ಹುಟ್ಟು-ಸಾವುಗಳ ನಡುವಿನ ಬದುಕಿನ ಹೋರಾಟದ ಬಲೆ. ಈ ಬಲೆಗೆ ಬಂದು ಬೀಳಲು ಇಟ್ಟ ಆಮಿಷವಾದರೂ ಯಾವುದು? ಹೊನ್ನು ಹೆಣ್ಣು ಮಣ್ಣುಗಳು. ತಾನು ಸೃಷ್ಟಿಸಿದ ಜೀವರಾಶಿಗಳಲ್ಲಿ ಆಸೆ ಎಂಬ ಪ್ರವೃತ್ತಿಯನ್ನು ಹುಟ್ಟಿನೊಂದಿಗೆ ಬೆಳೆಯುವ ಹಾಗೆ ಮಾಡಿದ್ದಾನೆ.[೮೧] ಇಲ್ಲಿ ಬ್ರಹ್ಮ ಜೀವರಾಶಿಯನ್ನು ಸೃಷ್ಟಿಸಿದರೆ ವಿಷ್ಣು ಎಂಬ ಶಕ್ತಿ ಆ ಜೀವಕ್ಕೆ ಜೀವನವನ್ನು ನೀಡುತ್ತಾನೆ. ಸೃಷ್ಟಿಯ ಮಧ್ಯೆ ಅಸ್ತಿತ್ವ ತಾಳಿದ ಜೀವ ಲೌಕಿಕದ ಸೆಳೆತಕ್ಕೆ ಸಿಲುಕುತ್ತಾನೆ. ಲೌಕಿಕದ ಮೂರು ಪ್ರಾತಿನಿಧಿಕರೂಪಗಳಾದ ಹೆಣ್ಣು-ಹೊನ್ನು-ಮಣ್ಣನ್ನು ಹಂಬಲಿಸುವಂತೆ ಮಾಡುತ್ತಾನೆ. 'ಬೇಕು'ಎಂಬ ಭಾವದ ಬೆನ್ನು ಹತ್ತಿ ಬದುಕಿನ ನಿಜ ಸ್ವರೂಪವನ್ನು ಮರೆಯುವಂತೆ ಮಾಡುವ ಭಾವವೇ 'ಮಾಯೆ'ಆಗಿದೆ. ಈ ಮಾಯೆ ವಿಷ್ಣುವಿನ ಆಂಶಿಕ ಶಕ್ತಿಯಾಗಿ ತೋರುವುದೇ ಅದರ ಪ್ರಾಬಲ್ಯವನ್ನು ಸೂಚಿಸುತ್ತದೆ. ಆಸೆಯೆಂಬ ಭಾವವನ್ನು ಮನುಜ ಮೀರಿ ನಿಂತಾಗ ತನ್ನನ್ನು ಪರಮಾತ್ಮನನ್ನು ಅರಿಯ ಬಲ್ಲನಾಗುತ್ತಾನೆ.

೫.೨೦ ಅಹಂಭಾವ: ಮಾಯೆ

"ಬ್ರಹ್ಮ ಘನವೆಂದರೆ ಬ್ರಹ್ಮನ ನುಂಗಿತ್ತು ಮಾಯೆ
ವಿಷ್ಣು ಘನವೆಂದರೆ ವಿಷ್ಣುವಿನ ನುಂಗಿತ್ತು ಮಾಯೆ
ರುದ್ರ ಘನವೆಂದರೆ ರುದ್ರನ ನುಂಗಿತ್ತು ಮಾಯೆ
ತಾ ಘನವೆಂದರೆ ತನ್ನ ನುಂಗಿತ್ತು ಮಾಯೆ
ಸರ್ವವೂ ನಿನ್ನ ಮಾಯೆ
ಒಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ" [೨೨]

ರಾಜಸ ಅಹಂಕಾರದಲ್ಲಿ ಬ್ರಹ್ಮ ಮಾಯಾಸಕ್ತನಾದ ಕಾರಣ ಬ್ರಹ್ಮನನ್ನು ಮಾಯೆ ನುಂಗಿತ್ತು. ಸಾತ್ವಿಕ ಅಹಂಕಾರದಲ್ಲಿ ವಿಷ್ಣು ಮಾಯಾಸಕ್ತ ನಾಗಿಪ್ಪ ಕಾರಣ ವಿಷ್ಣುವನು ಮಾಯೆ ನುಂಗಿತ್ತು. ತಾಮಸ ಅಹಂಕಾರದಲ್ಲಿ ರುದ್ರ ಮಾಯಾಸಕ್ತನಾಗಿಪ್ಪ ಕಾರಣ ರುದ್ರನನ್ನು ಮಾಯೆ ನುಂಗಿತ್ತು. ಇದೇ ಅರ್ಥವನ್ನು ಮತ್ತೊಂದೆಡೆ ಹೀಗೆ ಹೇಳಿದ್ದಾರೆ. ಬ್ರಹ್ಮ ತಾನೆಂಬ ಬ್ರಹ್ಮಜ್ಞಾನಿಗಳು ವೃಥಾಹಂಕಾರದಲ್ಲಿ ಮಾಯಾಸಕ್ತನಾದ ಕಾರಣ ತನ್ನನ್ನೇ ನುಂಗಿತ್ತು. ಇಂತು ಲೋಕವೆಲ್ಲವನು ಪರಶಿವನಾಧೀನದ ಮಾಯೆ ಅವಗ್ರಹಿಸಿ ಕೊಂಡಿಪ್ಪದು.[೨೩] ಎಂಬ ತಾತ್ಪರ್ಯವನ್ನು ಒಳಗೊಂಡಿದೆ. ದೇವಾನು ದೇವತೆಗಳನಿಸಿಕೊಂಡ. ಬ್ರಹ್ಮ, ವಿಷ್ಣು (ಮಹೇಶ್ವರ) ರುದ್ರರು ಜಗತ್‌ಸೃಷ್ಟಿ. ಸ್ಥಿತಿ, ಲಯ, ಕರ್ತರು, ಇವರಿಂದಲೇ ಜಗತ್ತು ವೈವಿಧ್ಯರೂಪ ಪಡೆದಿದೆ ಎಂಬುದು ಸಾಮಾನ್ಯ ನಂಬಿಕೆಯಾಗಿದೆ. 'ಆಧ್ಯಾತ್ಮಿಕ ನೆಲೆಯಲ್ಲಿ ಕ್ರಿಯಾಶಕ್ತಿ, ಜ್ಞಾನ ಶಕ್ತಿ, ಇಚ್ಛಾಶಕ್ತಿ ಇವು ಮೂರು ಭೇದ ಸ್ವರೂಪಿಣಿಯಾದ ಮಾಯೆಯ ಒಡಲಿನಿಂದ ಮೂಡಿ ಬಂದಿದೆ. ಕ್ರಿಯಾಶಕ್ತಿಯ ಅಭಿಮಾನಿ ಚೇತನ ಬ್ರಹ್ಮ, ಜ್ಞಾನಶಕ್ತಿಯ ಅಭಿಮಾನಿ ಚೇತನ ವಿಷ್ಣು, ಇಚ್ಛಾಶಕ್ತಿಯ ಅಭಿಮಾನಿ ಚೇತನ ರುದ್ರ,[೨೪] ಎಂಬ ವಿಶೇಷ ಶಕ್ತಿಗಳಿದ್ದು ಈ ಮೂವರು ತಾವು ಶ್ರೇಷ್ಠರೆಂದುಕೊಂಡಾಗ ಮಾಯೆಗೆ ಒಳಗಾಗುತ್ತಾರೆ. ಮನುಜನು ಕೂಡಾ ತಾನು ಶ್ರೇಷ್ಠನೆಂದುಕೊಂಡಾಗ ಮಾಯೆ ಆವರಿಸುತ್ತದೆ. ಈ ಎಲ್ಲ ಕ್ರಿಯೆಗೂ ಪರಮಾತ್ಮನೇ ಮೂಲಕಾರಣ. ಪ್ರತಿಯೊಬ್ಬರೂ ಪರಮಾತ್ಮನ ಅಧೀನರೆ ಆಗಿದ್ದಾರೆ.

ಇಲ್ಲಿ ಮಾಯೆ ಎಂಬುದು ಹುಸಿ ಅಭಿಮಾನ ಅಥವಾ ಅಹಂಮಿಕೆಯ ರೂಪದಲ್ಲಿದೆ. ಪರಮಾತ್ಮ ನಿಂದಲೇ ಮಾಯೆ ರೂಪಗೊಂಡಿದ್ದರೂ ದೇವ–ದಾನವ–ಮಾನವರೆಲ್ಲರಲ್ಲಿ ತಾನೇ ಶ್ರೇಷ್ಠವೆಂಬ ಭಾವ ಮೂಡುತ್ತದೆ ಎಂದಾದರೆ ಅಹಂಕಾರ ಮೂಡಿದಂತೆ ಅಥವಾ ಮಾಯೆ ಆವರಿಸಿದಂತೆ ಈ ಸೃಷ್ಟಿಯಲ್ಲಿ ಯಾವುದು ಶ್ರೇಷ್ಠವಲ್ಲ ಯಾವುದು ಕನಿಷ್ಠವಲ್ಲ. ಎಲ್ಲವೂ ವಿಶಿಷ್ಟವಾದುದು ಹಾಗೂ ಅನನ್ಯವಾದದು. ಮುನಿ–ಮನುಜರ ಮಧ್ಯೆ ಅಂತರ ಸೃಷ್ಟಿಸಲು ಮಾಯೆ ಎಂಬ 'ಅಹಂ' ಕಾರಣವಾಗುತ್ತದೆ. ಪ್ರತಿಯೊಬ್ಬನು ತಾನೇ

ಶ್ರೇಷ್ಠನಾಗಬೇಕೆಂಬ ಹಪಹಪಿಯಲ್ಲಿ ಬದುಕನ್ನು ರೂಪಿಸಿಕೊಳ್ಳ ಬಯಸುತ್ತಾನೆ. ಇದರಿಂದ ಮಾನವ ಸಂಬಂಧಗಳು ಕಡಿದುಕೊಳ್ಳುತ್ತವೆ ಎಂಬ ಅಂಶವನ್ನು ಗಮನಿಸಿದ ಅಲ್ಲಮಪ್ರಭು ಆಧ್ಯಾತ್ಮಿಕ ನೆಲೆಯ ದೇವರುಗಳನ್ನು ಸಾಮಾಜಿಕ ಸ್ತರಕ್ಕೆ ತಂದು ನಿಲ್ಲಿಸುತ್ತಾನೆ. ಶ್ರೇಷ್ಠತೆಯ ಹಪಹಪಿ ದೇವರನ್ನೂ ಹಾಗೂ ಯಾರನ್ನೂ ಬಿಟ್ಟಿಲ್ಲ. ಅದೇ ಮಾಯೆ ಆಗಿದೆ.

೫.೨೧ ಅಲೌಕಿಕ ಪದವಿ: ಮಾಯೆ

"ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ
ಹರಹರಾ ಮಾಯೆ ಇದ್ದೆಡೆಯ ನೋಡಾ !
ಶಿವಶಿವಾ ಮಾಯೆ ಇದ್ದೆಡೆಯ ನೋಡಾ
ಎರಡೆಂಬತ್ತು ಕೋಟಿ ಪ್ರಮಥ ಗಣಂಗಳು
ಅಂಗಾಲ ಕಣ್ಣವರು ಮೈಯೆಲ್ಲಾ ಕಣ್ಣವರು
ನಂದಿವಾಹನ ರುದ್ರರು ಇವರೆಲ್ಲರೂ
ಮಾಯೆಯ ಕುಲುಗಾಹೀನ ಸರಮಾಲೆ ಕಾಣಾ ಗುಹೇಶ್ವರಾ" [೭೫]

ಅನಂತ ಕೋಟಿ ರುದ್ರಾದಿಗಳೆಲ್ಲರೂ ತಾವು ನಿತ್ಯ ಪರಿಪೂರ್ಣ ಮಹಾಘನ ಪರಶಿವ ತತ್ವಸ್ವರೂಪರೆಂದರಿಯದೆ ಕೈಲಾಸವೆಂಬ ಪ್ರಾದೇಶಿಕ ಪುರದಲ್ಲಿ ಆಶ್ರಿತರಾಗಿರ್ದು ಅಲ್ಲಿಯ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯವೆಂಬ ಅಲ್ಪ ಪದಂಗಳಿಗಾಗಿ ಮೆಚ್ಚಿ ಮರುಳಾಗಿಪ್ಪರಾಗಿ ಇವರೆಲ್ಲರೂ ಮಾಯಾಸಕ್ತರೆಂಬುದೀ ವಚನದ ತಾತ್ಪರ್ಯವಾಗಿದೆ.[೭೬] ಮಾಯೆ ದಾಸಾನುದಾಸನಾಗುವ ಮಾನವನ ದುಸ್ಥಿತಿಯನ್ನು ಅಲ್ಲಮ ವರ್ಣಿಸುತ್ತಾನೆ. ಈ ವಚನದಲ್ಲಿ ಮಾಯೆ ಸರ್ವವ್ಯಾಪಕ ಶಕ್ತಿಯಾಗಿ ತೋರುತ್ತದೆ. ದೇವರೆಲ್ಲರನು ದೇವಿಯರಲ್ಲಿ ತಂದು ಕೂಡಿಸುತ್ತದೆ. ಶಿವನ ಅಭಿಮಾನಿ ಸೇವಕರು ಅನುಯಾಯಿಗಳು ಪ್ರಮಥರೆಲ್ಲರೂ ಮಾಯೆಯ ವಿಲಾಸಕ್ಕೆ ಒಳಗಾದವರಾಗಿದ್ದಾರೆ. ಮಾಯೆ ಶಿವನಷ್ಟೆ ಸರ್ವವ್ಯಾಪಿಯಾದುದು ಅದಿಲ್ಲದ ಸ್ಥಳವಿಲ್ಲ. ಅದು ಎಡೆಪಡೆಯದ ಮನಸ್ಸಿಲ್ಲ. ಎಲ್ಲವೂ ಅದರ ಅಧೀನವಾಗಿದೆ. ಇಂತಹ ಪ್ರಬಲ ಶಕ್ತಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗದಂತಾಗಿದೆ. ದೇವಾನುದೇವತೆಗಳಲ್ಲಿ ಪರಿಚಾರಕ ವರ್ಗದವರು ತಾವೂ ಶ್ರೇಷ್ಠ, ಉತ್ತಮರು, ಎಲ್ಲವೂ ತಮಗಧೀನವೆಂದು ಹಾಗೆ ಉಳಿದವರು ತಾವು ದೇವತೆಗಳ ಪ್ರೀತಿಪಾತ್ರರೆಂದು ಭಾವಿಸಿಕೊಂಡ ಮರುಕ್ಷಣ ಮಾಯೆ ಮೂಡುತ್ತದೆ.

ದೇವತೆಗಳನ್ನು ರುದ್ರಗಣಗಳನ್ನು ತಮ್ಮ ಕುರುಹು ಮರೆತು ದೇವಲೋಕದ ಹಲವು ಪದವಿಗಳಿಗೆ ಮರುಳಾಗುವಂತೆ ಮಾಡುವ ಸ್ಥಿತಿಯೆ ಮಾಯೆ. ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ ಎಂಬ ಪರಿಕಲ್ಪನೆಗಳು ಆಧ್ಯಾತ್ಮಿಕ ನೆಲೆಯಲ್ಲಿ ಉನ್ನತಿ ಸಾಧಿಸುವಲ್ಲಿ ಎಡೆ ಪಡೆಯುತ್ತವೆ. ಅಲೌಕಿಕತೆಯ ಸಿದ್ಧಿಯನ್ನು ಹೊಂದುವ ಪ್ರಯತ್ನವು ಕೂಡಾ ಮಾಯೆಯಾಗಿದೆ.

೫.೨೨ ಜ್ಞಾನ: ಮಾಯೆ

"ಕಾಯವೆಂಬ ಕಂಥೆಯ ತೊಟ್ಟವರು
ಬ್ರಹ್ಮನಾಗಲಿ, ವಿಷ್ಣುವಾಗಲಿ, ಈಶ್ವರನಾಗಲಿ
ಸದಾಶಿವನಾಗಲಿ ಪಂಚಮುಖ ದಶಭುಜ ತ್ರಿನೇತ್ರನಾಗಲಿ
ಅಂಗಾಲ ಕಣ್ಣು ಮೈಯೆಲ್ಲಾ ಕಣ್ಣುಳ್ಳ ನಂದಿವಾಹನ ರುದ್ರನಾಗಲಿ
ಗಂಗಾಧರನಾಗಲಿ ಗೌರಿಪತಿಯಾಗಲಿ
ಮಾಯೆ ಕಾಡದೆ ಬಿಡಳು ನೋಡಾ।
ಗುಹೇಶ್ವರನೋಡಿದ್ದ ಸಂಸಾರ ಸಾಗರವ ದಾಂಟಿ
ನಿತ್ಯ ನಿಜ ನಿವಾಸದ ಮುಂಬಾಗಿಲ ಕಂಡು ತಲೆಬಾಗಿ ಹೊಕ್ಕೆನಯ್ಯ"[೭೭]

ಕಾಯವೆಂಬುದು ಕೇವಲ ತೋರಿಕೆಯ ಹೊದಿಕೆ. ಈ ತೋರಿಕೆಯ ಹೊದಿಕೆ ತೊಟ್ಟು ದೇವರಾಗಲಿ, ಮಾನವರಾಗಲಿ ಆಯಾ ಪಾತ್ರ ನಿರ್ವಹಿಸುವಂತೆ ಮಾಡುವುದೇ ಮಾಯೆ. ಪ್ರಕೃತಿಯಲ್ಲಿ ಅಸ್ತಿತ್ವ ಪಡೆದ ಚೈತನ್ಯ (ಆತ್ಮ) ದೇಹಿಯಾದಾಗ ಈ ಲೋಕದಲ್ಲಿ ತನ್ನ ಪಾತ್ರ ನಿರ್ವಹಿಸುತ್ತದೆ. ಜಗತ್ ಸೃಷ್ಟಿಯಲ್ಲಿ ದೇವತೆಗಳು ಕೂಡಾ ಕ್ರಿಯಾಸ್ವರೂಪರಾಗಿ ವರ್ತಿಸುವಲ್ಲಿ ಮಾಯೆ ತಡೆಯಾಗಿ ನಿಲ್ಲುತ್ತದೆ. ದೇವತೆಗಳಲ್ಲಿಯೇ ಆಗಲಿ ಮಾನವರಲ್ಲಿಯೇ ಆಗಲಿ ಅವರಲ್ಲಿರುವ ಸಕಾರಾತ್ಮಕ ಶಕ್ತಿಯನ್ನು ಒರೆಗೆ ಹಚ್ಚುವ ವಿಶಿಷ್ಟ ಕೆಲಸವನ್ನು ಮಾಯೆ ಮಾಡುತ್ತದೆ. ಏಕೆಂದರೆ ಮಾಯೆ ಎಂಬುದು ಶಿವಾಂಶಿಕ ಶಕ್ತಿ. ಶಿವನಷ್ಟೆ ಪ್ರಬಲ ಸಾಮರ್ಥ್ಯ ಉಳ್ಳದ್ದು. ಬೆಂಕಿ ಚಿನ್ನವನ್ನು ಒರೆಗೆ ಹಚ್ಚಿ ಅದರಲ್ಲಿನ ಕಶ್ಮಲವನ್ನು ತೆಗೆದು ಮತ್ತಷ್ಟು ಹೊಳೆಯು ಹಾಗೆ ಮಾಡುವಂತೆ ಮಾಯೆಯು ಜೀವವನ್ನು ಲೌಕಿಕಕ್ಕೆ ಸೆಳೆತಂದು ಮತ್ತೆ ಮತ್ತೆ ಪರೀಕ್ಷೆಗೆ ಒಡ್ಡುತ್ತದೆ. ಆತನೊಳಗೆ ಶಿವಯೋಗ ಸಾಧನೆಯ ಪಥ ತೆರೆದುಕೊಂಡಿದ್ದು ಸ್ಪಷ್ಟವಾಗುತ್ತದೆ. ಹಾಗಾಗದೆ ಹೋದಲ್ಲಿ ಮಾಯೆಯೆಂಬ ಅಜ್ಞಾನದ ಹಿಡತಕ್ಕೆ ಸಿಕ್ಕು ಶಿವಯೋಗ ಸಾಧನೆ ಮರೆತು ಲೌಕಿಕದ ಒಡಲಲ್ಲಿ ಸುಖವಿದೆ ಎಂದು ಭಾವಿಸುತ್ತಾನೆ. ಇದೆಲ್ಲವನ್ನು ಅಲ್ಲಮ ಅರಿತು ಪರಮಾತ್ಮನು ಒಡ್ಡಿದ ಪರೀಕ್ಷೆಯನ್ನು ಎದುರಿಸಿ ಗೆದ್ದು ನಿತ್ಯ ನಿರಂತರ ಆನಂದವನ್ನು ಹೊಂದಿದೆ ಎಂದು ಪ್ರಭುದೇವರು ತಮ್ಮ ಅನುಭವದ ಮೂಲಕ ಕೊನೆಗೊಳಿಸಿದ್ದಾರೆ.

"ಒಡಲುಗೊಂಡ ಮಾನವರೆಲ್ಲರೂ ನೀವು ಕೇಳಿರೆ
ಬಿಡದೆ ಕಾಡುವುದು ವಿಧಿ ಮೂರು ಲೋಕವನೆಲ್ಲ
ಒಡಲೊಡವೆಯನೊಲ್ಲೆನೆಂಬುವರುಗಳಿಗೆ
ತೊಡರನಿಕ್ಕಿತ್ತು ಮಾಯೆ
ಆರು ದರ್ಶನಕ್ಕೆಲ್ಲ ಮಡದಿ ಮಕ್ಕಳನೊಲ್ಲೆನೆಂಬ ಹಿರಿಯರಿಗೆಲ್ಲಾ
ತೊಡರ ನಿಕ್ಕಿತ್ತು ಮಾಯೆ!
ಗುಹೇಶ್ವರಾ ನಿಮ್ಮಮಾಯೆ!"[೭೮]

ಈ ಹಿಂದಿನ ವಚನದಲ್ಲಿ ದೇವರುಗಳನ್ನು ಮಾಯೆ ಕಾಡುತ್ತದೆ ಎಂದು ಹೇಳಿದರೆ ಇಲ್ಲಿ ಮಾನವನನ್ನು ಮಾಯೆ ತೊಡರಾಗಿ ಕಾಡುವ ಬಗೆಯನ್ನು ಹೇಳುತ್ತಾರೆ. ಇಲ್ಲಿ ಮಾಯೆ ವಿಧಿಯ ರೂಪದಲ್ಲಿ ಮೂರು ಲೋಕಗಳನ್ನು ಆವರಿಸುತ್ತದೆ. ದೇವ–ದಾನವ–ಮನುಜ ಋಷಿ ಮುನಿಗಳಾದಿಯಾಗಿ ಯಾರನ್ನೂ ಬಿಡುವುದಿಲ್ಲ. ಈ ಕಾಯವನ್ನು ಒಲ್ಲೆನೆಂದು ತ್ಯಜಿಸಿಹೋದರೆ ಮಾಯೆ ಪಂಚೇಂದ್ರಿಯಗಳ ಮೂಲಕ ವಿಷಯ ವಾಸನೆಯತ್ತ ಸೆಳೆದು ಜೀವನು ಕಾಯವನ್ನು ಮೋಹಿಸುವಂತೆ ಮಾಡುತ್ತದೆ. ಷಟ್‌ದರ್ಶನಗಳ ಜ್ಞಾನವನ್ನು ಪಡೆದು ಜ್ಞಾನಿಯಾದನೆಂದು ಹೇಳಿಕೊಂಡು ಮನೆ–ಮಡದಿ–ಮಕ್ಕಳನ್ನು ತ್ಯಾಗ ಮಾಡಿದರೆ ಮಾಯೆ ಬಿಡುವುದಿಲ್ಲ. ಜ್ಞಾನದ ರೂಪದಲ್ಲಿ ಮಾಯೆ ಆವರಿಸುತ್ತದೆ.

"ಬ್ರಹ್ಮ ವಿಷ್ಣುಗಳ ಮಾಯೆ ತೊತ್ತಳದುಳಿವಂದು
ದೇವದಾನವರ ಮಾಯೆ ಆಗಿದಗಿದು ತಿಂಬಂದು
ರುದ್ರಗಣ ಪ್ರಮಥಗಣರೆಂಬ ಮಾಯೆ
ಮರುಳ್ಮಾಡಿ ಕಾಡುವುದು
ನೊಸಲಕಣ್ಣು ಪಂಚಮುಖ ದಶಭುಜದವರಿಗೆ
ಮಾಯೆ ಅರ್ಧಾಂಗಿಯಾದಂದು
ಅಷ್ಟಾಶೀತಿ ಸಹಸ್ರ ಋಷಿಗಳ ಮಾಯೆ ತಪೋಮಾಯದಲ್ಲಿ ಕೆಡಹುಮದು
ನಾನು ಮಾಯಾಕೋಳಾಹಳನಾಗಿರ್ದೆ ಕಾಣಾ ಗುಹೇಶ್ವರ"[೭೯]

ನೊಸಲಕಣ್ಣು ಪಂಚಮುಖ ದಶಭುಜ ಎಂಬಲ್ಲಿ ಅಂಗಾಂಗ ವೈವಿಧ್ಯತೆಯಿಂದ ಶ್ರೇಷ್ಠತೆ ಸೂಚಿ ಸುತ್ತಿದ್ದು, ಮಾಯೆ ಅಂಗ ಸ್ವರೂಪಿಯಾಗಿ ತೋರುವಾಗ ಅರ್ಧಾಂಗಿಯಾಗುತ್ತಾಳೆ. ದೇವತೆಗಳ ಅಂತರಂಗ ಬಹಿರಂಗಗಳೆರಡಲ್ಲೂ ಎಡೆಪಡೆಯುತ್ತಾಳೆ. 'ಅಲ್ಲಮ ಪ್ರಭುವಿನ ಜೀವನದಲ್ಲಿ ಮಾಯೆಗೆ ಒಳಗಾಗಬಹುದಾದ ಒಂದು ಪ್ರಸಂಗ ಬರುತ್ತದೆಂಬುದನ್ನು ಚಾಮರಸನು ಚಿತ್ರಿಸಿದ್ದಾನೆ. ಒಲಿದು ಬಂದ ಆ ಅಪೂರ್ವ ಸೌಂದರ್ಯ ರಾಶಿಯನ್ನು ಕಂಡರೂ ಅಲ್ಲಮ ಮಾಯಾವಶನಾಗುವುದಿಲ್ಲ. ಮಾಯಾ ಸೂತ್ರದ ಬೊಂಬೆಯ ನ್ನಾಡಿಸುವ ಸೂತ್ರಧಾರನಾಗಿ ಅದನ್ನು ಮೀರಿ ಮೇಲೇರುತ್ತಾನೆ. ಮಾಯಾ ಕೋಲಾಹಲನಾಗುತ್ತಾನೆ.'[೮೦] ಎಂಬ ಮಾತುಗಳು ಅಲ್ಲಮನ ವ್ಯಕ್ತಿತ್ವ ಶ್ರೇಷ್ಠತೆಯನ್ನು ಹೇಳುತ್ತವೆ. ಆದರೆ ಪರಮಚೈತನ್ಯ ಆತ್ಮನಾದ ಪರಮಾತ್ಮ ತನ್ಮೂಲಕ ಸೃಷ್ಟಿಸಿದ ಮಾಯೆಯನ್ನು ಸೃಷ್ಟಿ ನಿಯಂತ್ರಣಕ್ಕೆ ನಿಯಮಿಸಿದ್ದಾನೆ. ಜಗತ್ ಸೃಷ್ಟಿಕರ್ತರಾದ ಬ್ರಹ್ಮ, ವಿಷ್ಣು ಕೂಡಾ ಮಾಯೆಯ ಅಡಿಯಾಳಾಗಿ ವರ್ತಿಸುತ್ತಾರೆ. ದೇವ–ದಾನವರನ್ನು ಮಾಯೆ ಆಪೋಶಿಸುತ್ತದೆ. ಪ್ರಥಮರನ್ನು ಮರುಳರನ್ನಾಗಿ ಮಾಡುತ್ತದೆ. ದೇವಾಧಿದೇವತೆಗಳಿಗೆ ಸತಿಯಾಗಿ ಜೊತೆಯಾಗುತ್ತದೆ. ನೊಸಲಕಣ್ಣು, ಪಂಚಮುಖ, ದಶಭುಜ ಎಂಬಲ್ಲಿ ಅಂಗಾಂಗ ವೈವಿದ್ಯತೆಯನ್ನು ಸೂಚಿಸುತ್ತಿದ್ದು, ಮಾಯೆ

ಅಂಗ ಸ್ವರೂಪಿಯಾಗಿ ತೋರುವಾಗ ಅರ್ಧಾಂಗಿಯಾಗುತ್ತಾಳೆ. ದೇವತೆಗಳ ಅಂತರಂಗ ಬಹಿರಂಗ ಗಳೆರಡಲ್ಲೂ ಎಡೆ ಪಡೆಯುತ್ತಾಳೆ. ಋಷಿ–ಮುನಿಗಳನ್ನು ತಪಸ್ಸೆಂಬ ಮಾಯೆಗೆ ಒಳಗಾಗಿಸುತ್ತದೆ. ಇದೆಲ್ಲವನ್ನು ಅರಿತ ಅಲ್ಲಮ (ಮಾಯೆ) ಅದನ್ನು ಮೀರಬಲ್ಲವನಾಗಿದ್ದಾನೆ ಆಧ್ಯಾತ್ಮಿಕ ಸ್ತರದಲ್ಲಿ ಒಂದೊಂದು ರೂಪದಲ್ಲಿ ಒಂದೊಂದು ಭಿನ್ನ ರೀತಿಯಲ್ಲಿ ಮಾಯೆ ಯೆಂಬ ಶಕ್ತಿಯು ಜೀವನನ್ನು ಕಾಡಿದೆ. ಮಾಯೆ ದೇವ–ದಾನವ–ಮಾನವರನ್ನು ಅವರವರ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿ ಆವರಿಸುತ್ತದೆ. ದೇವರಲ್ಲಿನ ದೇವತ್ವವನ್ನು ದಾನವರ ದಾನವತ್ವದಲ್ಲಿ ಮಾನವರಲ್ಲಿ ಸಂಸಾರಿಗಳ ಸಂಸಾರ ಬದುಕನ್ನು, ಸನ್ಯಾಸಿಗಳ ಸನ್ಯಾಸತ್ವವನ್ನು ಒರೆಗೆ ಹಚ್ಚುತ್ತದೆ.

ಇಲ್ಲಿ ಮಾಯೆ ಜ್ಞಾನ ಮತ್ತು ಅಜ್ಞಾನ ಎಂಬ ಎರಡು ರೂಪದಲ್ಲಿ ಅಭಿವ್ಯಕ್ತವಾಗಿದೆ. ಋಷಿಗಳನ್ನು ತಪ್ಪಸ್ಸಿನ ರೂಪದಲ್ಲಿ ಜ್ಞಾನರೂಪದ ಮಾಯೆ ಆಗಿ ಕಾಡುತ್ತದೆ. ಅಜ್ಞಾನ ರೂಪದ ಮಾಯೆಗೆ ಅದ್ವೈತದ ವಿದ್ಯಾಮಾಯೆ ಪೂರಕವಾಗುತ್ತದೆ. ಅವಿದ್ಯಾಮಾಯೆ ಅಜ್ಞಾನ ರೂಪದ್ದಾದರೆ, ವಿದ್ಯೆಮಾಯೆ ಜ್ಞಾನರೂಪದ್ದಾಗಿದೆ. ಮನುಜನಲ್ಲಿರುವ ಜ್ಞಾನದ ಅತೃಪ್ತಿಯು ಮಾಯೆ ಆಗಿ ತೋರುತ್ತದೆ.

೫.೨೩ ಪಂಚೇಂದ್ರಿಯಗಳು: ಮಾಯೆ

“ಜೀವ ತಾಮಸದ ಮಾಯದ ಬಲೆಯ ಭ್ರಾಂತಿಗೆ
ಸೋಲುವ ಶರೀರ
ಸಂಸಾರ ಸಂಗವ ಭೇದಿಸಿ ನಡೆವಡೆ ದೂರ
ಚಿಂತೆಯ ಗೆಲಿದು ಸುಳಿದಡೆ
ಗುಹೇಶ್ವರನೆಂದರಿದ ಶರಣಸಾರಾಯನು”[೮೧]

‘ಜೀವ ಭ್ರಾಂತಿಯ ಗೆಲಿದು ಅನ್ಯ ಚಿಂತೆಯಿಲ್ಲದೆ ಸುಳಿದಾತನೆ ಶಿವಶರಣನೆಂದು ಕರೆಸಿಕೊಳ್ಳುತ್ತಾನೆ[೮೨] ಎಂಬ ಮಾತು ‘ಅನುಭಾವಿ ಸಾಧಕನಿಗೆ ಕಿವಿಮಾತಿನಂತಿದೆ. ಈ ಶರೀರ ಆತ್ಮನನ್ನು ತುನುರತಿಗೆ ಎಳೆಯುತ್ತದೆ. ಸಂಸಾರದ ಸುಖರತಿಯನ್ನು ಗೆಲ್ಲುತ್ತೇನೆ ಎಂದರೆ ಸಾಧ್ಯವಾಗದು. ತನುಸುಖದ ಆಸೆಯಿಂದಾಗಿ ದುಃಖ ಸುಖರತಿಗೆ ಕೊನೆ ಮೊದಲೆಂಬುದಿಲ್ಲ ಅದು ಮತ್ತೆ ಮತ್ತೆ ಹಸಿವಿನಂತೆ ಎದ್ದು ಬರುತ್ತದೆ. ತನುವಿನ ಸುಖವನ್ನು ಪೂರ್ಣ ಮಾಡಿಕೊಳ್ಳಲು ಹೋಗಿ ಮತ್ತೆ ದುಃಖ–ಭಾವ ಉಂಟಾಗಿ ಕ್ಷಣ ಭಂಗುರವಾದ ಈ ತನುಸುಖ ಪರಮಾರ್ಥ ಸುಖವನ್ನು ದೂರ ಮಾಡುತ್ತದೆ. ಪರಮಾರ್ಥ ಸುಖ ಅನಂತವಾದದು. ಸಾವಿಲ್ಲದುದು ಅದು ಮಾಯೆ. ನಿಜತತ್ವನ್ನರಿದ ಜ್ಞಾನಿ ಈ ಅನಂತ ಆನಂದಕ್ಕೆ ಮುಖ ಮಾಡುತ್ತಾನೆ ಕಾರಣ ಶರೀರ ಸಂಸಾರದಿಂದ ಎಚ್ಚೆತ್ತು ಯಾವಾಗಲೂ ಶಿವನ ಚಿಂತನೆಯಲ್ಲಿ ಶಿವನ ಬೆಳಕಿನಲ್ಲಿ ನಡೆಯುವವನು. ಪರಮಾತ್ಮನನ್ನು ಅರಿಯಲು

ಸಾಧ್ಯ. ಹಾಗೆ ಅರಿಯುವವನು ಶರಣ ಸಾರಾಯನಾಗಲು ಸಾಧ್ಯ[೮೩] ಈ ಮಾತುಗಳು ಜೀವನು ಆಧ್ಯಾತ್ಮಿಕ ಹಾದಿಯಲ್ಲಿ ಪರಮಾರ್ಥ ಸುಖವನ್ನು ಗಳಿಸುವ ಕುರಿತು ಹೇಳುತ್ತವೆ. ಜೀವನು ತಾಮಸವೆಂಬ ಅಜ್ಞಾನದ ಪ್ರಭಾವಕ್ಕೆ ಒಳಗಾಗುವವನು. ಅದರ ಮುಂದೆ ದೇಹವು ಶಾರೀರಿಕ ಆಸಕ್ತಿಗಳಲ್ಲಿ ತೊಡಗುವಂತಾಗುತ್ತದೆ. ಈ ಕ್ರಿಯೆಯನ್ನು ಅರಿತಾಗ ಲೌಕಿಕವನ್ನು ಗೆಲ್ಲಬಲ್ಲ ಸಾಮರ್ಥ್ಯ ಬರುತ್ತದೆ. ಆಗ ಭವಿ ಅನುಭವಿಯಾಗುವನು. ತನ್ನ ನಿಜಸ್ವರೂಪದ ಅರಿವು ಮೂಡುತ್ತದೆ. ಇಲ್ಲಿ ಮಾಯೆ ಎಂಬುದು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಕಾಗಿದೆ. ಮಾಯೆ ಅಜ್ಞಾನ ರೂಪದ ಶಕ್ತಿಯಾಗಿದೆ.

"ಕರಿಯ ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು
ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು
ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು
ಕುರುಂಗನು ಶಬ್ದೇಂದ್ರೀಯದಿಂದ ಬಂಧನವಡೆದಳಿಯಿತ್ತು
ಮೃತ್ಯುವು ರಸನೇಂದ್ರೀಯದಿಂದ ಬಂಧನವಡೆದಳಿಯಿತ್ತು
ಇಂತಿ ಒಂದೊಂದು ಇಂದ್ರಿಯೋದ್ರೇಕದಿಂದ
ಒಂದೊಂದು ಪ್ರಾಣಿಯು ಅಳವಾಯಿತು.
ಪಂಚೇಂದ್ರಿಯಂಗಳ ಒಂದು ಘಟದಲ್ಲಿ ತಾಳಿಹ ಮನುಷ್ಯ-
ಪ್ರಾಣಿಗಳಿಗೆ ಮರವೆ ಎಡೆಗೊಂದು ದೇಹ ಮೋಹ ಭ್ರಾಂತು ಮುಸುಕಿ
ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಾ ಗುಹೇಶ್ವರಾ"[೮೪]

ಈ ವಚನದಲ್ಲಿ ಇಂದ್ರಿಯಗಳ ಪರಿಣಾಮ ಜೀವಿಗಳಲ್ಲಿ ಯಾವ ರೀತಿಯಾಗಿದೆ ಎಂಬುದನ್ನು ವಿವರಿಸುತ್ತಾ, ಮನುಷ್ಯ ಪ್ರಾಣಿಯ ಸ್ಥಿತಿಯನ್ನು ಮನವರಿಕೆ ಮಾಡುತ್ತಲಿದೆ. ಇಂದ್ರೀಯಗಳು ಮನುಷ್ಯನ ಹತೋಟಿಯಲ್ಲಿರಬೇಕೆ ವಿನಃ ಅವುಗಳ ಹತೋಟಿಯಲ್ಲಿ ಮನುಷ್ಯನಲ್ಲ. ಮನುಷ್ಯ ವಿವೇಕವುಳ್ಳ ಪ್ರಾಣಿ. ಇಂದ್ರೀಯಗಳಾದರೋ ಈ ವಿವೇಕವನ್ನೇ ಮಸಳಿಸಿ ತನ್ನ ಜಯವನ್ನೇ ಬಾರಿಸುವ ಹೊಂಚನ್ನು ಹಾಕುವ ವಿಷಯರಕ್ಕಸಿ ವಿವೇಕವಿಲ್ಲದ ಹಲವು ಪ್ರಾಣಿಗಳು ತಮ್ಮ ಇಂದ್ರಿಯಗಳಿಗೆ ಪ್ರಾಣವನ್ನೇ ಕಳೆದು ಕೊಂಡಿರುವವು.[೮೫] ಕರಿ, ಪತಂಗ, ತುರಂಗ, ಮತ್ಸ್ಯದಂತೆ ಮಾನವನಲ್ಲ. ಅವುಗಳಿಗಿಂತ ಹೆಚ್ಚು ಬುದ್ಧಿಶಕ್ತಿಯುಳ್ಳವನು ಮತ್ತು ಆಲೋಚನಾ ಸಾಮರ್ಥ್ಯ ಹೊಂದಿದವನು, ಪಂಚೇಂದ್ರಿಯಗಳ ಸೆಳೆತಕ್ಕೆ ಸಿಕ್ಕು ತನ್ನ ಮೂಲ ಸ್ವರೂಪವನ್ನು ಮರೆಯುವಂತಾದಾಗ ದೇಹದ ಮೇಲೆ ವ್ಯಾಮೋಹ ಬೆಳೆಯುತ್ತದೆ ಎಂಬಲ್ಲಿ ಮಾನವ ಮಾಯೆಯ ಪ್ರಭಾವಕ್ಕೆ ಒಳಗಾದನೆಂದೆ ಅರ್ಥಬರುತ್ತದೆ. ಆದ್ದರಿಂದಲೇ ಮನುಜ ತನ್ನ ಹತೋಟಿಯಲ್ಲಿ ಇಂದ್ರೀಯಗಳನ್ನು ಉಪಯೋಗಿಸಬೇಕೆ ಹೊರತು ಅವುಗಳ ಕೈಗೊಂಬೆ ತಾನಾಗಬಾರದು ಎಂಬ ಮಾತು ಸ್ಪಷ್ಟ. ಮಾಯೆ ಎಂಬುದು ಪಂಚೇದ್ರಿಯಗಳ ಮೂಲಕ ತೋರುತ್ತದೆ.

೫.೨೪ ಶಿವಾಂಶಿಕಶಕ್ತಿ: ಮಾಯೆ

" ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು
ಆ ಸ್ವಯಂಭು ಲಿಂಗದಿಂದಾಯಿತ್ತು ಮೂರ್ತಿ
ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ
ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ
ಆ ಸಂಸಾರದಿಂದಾಯಿತ್ತು ಮರವೆ
ಆ ಮರವೇ ಎಂಬ ಮಹಾ ಮಾಯೆ ವಿಶ್ವವ ಮುಸಿಕಿದಲ್ಲಿ
ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲ ತಾಮಸಕ್ಕೊಳಗಾಗಿ
ಮೀನಕೇತನ ಬಲಗೆ ಸಿಲುಕಿ ಮಾಯೆಯ ಬಾಯ
ತುತ್ತಾದರಲ್ಲಾ ಗುಹೇಶ್ವರಾ" [೮೬]

ವಾರಿ ಬಲಿದು ವಾರಿ ಕಲ್ಲಾದಂತೆ ಸರ್ವತತ್ವಂಗಳೇನೂ ಇಲ್ಲದೆ ನಿಷ್ಕಲವಸ್ತುವೊಂದೆ ಇರ್ದು ತನ್ನ ಸ್ವಲೀಲೆಯಿಂದ ತಾನೆ ಅಖಂಡ ಗೋಳಕಾಕಾರಮಪ್ಪ ಮಹಾಲಿಂಗವಾಯಿತ್ತು ಆ ಮಹಾಲಿಂಗವು ಪಂಚ ಸದಾಖ್ಯಮುಖವನ್ನೈದಿ ಸದಾಶಿವನಾಯಿತ್ತು.[೮೭] ನೀರು ಘನಿಕರಿಸಿ ಹಿಮವಾದಂತೆ ಎಂಬ ಹೋಲಿಕೆಯನ್ನು ಕೊಟ್ಟು ಸ್ವಯಂಭುವಿನಿಂದ ಸದಾಶಿವ ರೂಪಗೊಂಡು ತನ್ನ ಲೀಲಾವಿಲಾಸವನ್ನು ತೋರಲು ಜೀವರನ್ನು ಸಂಸಾರವನ್ನು ಸೃಷ್ಟಿಸಿ ಜೀವನಲ್ಲಿ ಮರವು ಎಂಬ ಮಾಯೆಯಿಂದ ಆವರಿಸುವಂತೆ ಮೂಡಿ ಹಲವು ರೀತಿಯಲ್ಲಿ ವರ್ತಿಸುವಂತೆ ಮಾಡುತ್ತದೆ. ಏನೂ ಇಲ್ಲದ ಬ್ರಹ್ಮಾಂಡದ ಸ್ಥಿತಿಯಲ್ಲಿ ಎಲ್ಲವೂ ಸಾಕಾರಗೊಂಡು ದೇವ–ಜೀವ–ಭವವಾಗಿ ಅಸ್ತಿತ್ವಗೊಳ್ಳವಂತೆ ಮಾಡುವುದು ಮಾಯೆ. ಲೋಕದ ಜನರ ವರ್ತನೆಗಳನ್ನು ನೋಡಿ ಅಲ್ಲಮಪ್ರಭು ಈ ರೀತಿ ಪ್ರತಿಕ್ರಿಯಿಸಿದ್ದಾನೆ.

'ಈ ವಚನದಲ್ಲಿ ಪರಮಾತ್ಮನ ಸೃಷ್ಟಿ ಲೀಲೆಯನ್ನು ಹೇಳುತ್ತಲೇ ಸಂಸಾರದ ರಚನೆ ಹಾಗೂ ಅದರ ಪರಿಣಾಮಗಳನ್ನು ಮಾರ್ಮಿಕವಾಗಿ ನಿರೂಪಿಸಲಾಗಿದೆ. ಸ್ವಯಂಭೂ ಮೂರ್ತಿಯ ಲೀಲೆ ಅನಂತವಾದದು. ಈ ಲೀಲೆಯ ಮಾಯೆಯನ್ನು ಗೆಲ್ಲುವುದು ಕಷ್ಟ ಸಾಧ್ಯ. ಸೃಷ್ಟಿಕರ್ತ ತನ್ನ ವಿಶ್ವೋತ್ಪತ್ತಿಯೊಂದಿಗೆ ಮಾಯೆಯನ್ನು ಇರಿಸಿದ್ದಾನೆ. ಅದು ಓರಿಯರಿಗೆ ಒಡ್ಡಿದ ಪರೀಕ್ಷೆಯಿದು. ಇದನ್ನು ಗೆಲ್ಲುವ ಜ್ಞಾನಿ ಯಾರೆಂದು ನೋಡುತ್ತಿದ್ದಾನೆ ಪರಮಾತ್ಮಲಳ ಎಂಬ ಅಭಿಪ್ರಾಯವಿದೆ. ಪ್ರಕೃತಿ ಸಹಜವಾಗಿ ನಡೆಯುವ ಕ್ರಿಯೆಗಳನ್ನು ಹೇಳುತ್ತಲೇ ಮಾನವ ತನ್ನ ಅಸ್ತಿತ್ವ ಕಟ್ಟಿಕೊಳ್ಳುವ ಪ್ರಯತ್ನದ ಪರಿಣಾಮವನ್ನು ಹೇಳಿದ್ದಾರೆ. ನಿರ್ದಿಷ್ಟ ಅಸ್ತಿತ್ವವೇ ಇಲ್ಲದ ನೀರು ಮಂಜುಗಡ್ಡೆಯಾದಂತೆ, ನಿರಾಕಾರ ಸ್ವರೂಪಿ ಪರಮಾತ್ಮ ಲಿಂಗರೂಪಿ, ಮೂರ್ತಿರೂಪಿಯಾಗುತ್ತಾನೆ. ವಿಶ್ವ ಸೃಷ್ಟಿ ಮಾನವ ಸೃಷ್ಟಿ ಕೈಗೊಳ್ಳುತ್ತಾನೆ.

ಮಾನವ ಸೃಷ್ಟಿಗೊಂಡಾಗ ಸಂಸಾರ ಸೃಷ್ಟಿಗೊಳ್ಳುತ್ತದೆ. ಸಂಸಾರದ ಒತ್ತಡದಲ್ಲಿ ಸಿಲುಕಿ ತಾನು ತನ್ನದು ಎಂಬ ಮೋಹ ಭಾವ ಮೂಡಿ ತನ್ನ ವಾಸ್ತವದ ಅರಿವನ್ನು ಮರೆಸುತ್ತದೆ. ಈ ಮರವೆಯೆಂಬುದು ಬರಿಯ ಮಾಯೆಯಲ್ಲ ಮಹಾಮಾಯೆಯಾಗಿ ವ್ಯಾಪಕವಾಗಿ ಆವರಿಸುತ್ತದೆ. ಪರಿಣಾಮವಾಗಿ ಮನುಜ ಪಂಚೇಂದ್ರಿಯಗಳ ಅರಿಷಡ್ವರ್ಗಗಳ ಹಿಡಿತಕ್ಕೆ ಸಿಕ್ಕು ಅದೇ ಸುಖ ಎಂಬ ಭ್ರಮೆಗೆ ಒಳಗಾಗುತ್ತಾನೆ. ಈ ಪ್ರಕ್ರಿಯೆ ಮಾಯೆ ಎಂಬ ಪ್ರಬಲಶಕ್ತಿಯಿಂದ ಮಾತ್ರ ಸಾಧ್ಯ.

"ವಿರಹದಲುತ್ಪತ್ಯವಾದವರ ಮಾಯದ ಬೇಳುವೆ ಹತ್ತಿತ್ತಲ್ಲಾ!
ಸ್ವರೂಪ ನಿರೂಪವೆಂದರಿಯರು
ಹೆಸರಿಟ್ಟು ಕರೆವ ಕಷ್ಟ ನೋಡಾ ಗುಹೇಶ್ವರ"[೪೯]

ವಿರಹದ ವಿಕಾರದಲುದಯಿಸಿದ ಪ್ರಾಣಿಗಳು ಮಿಥ್ಯಾಪಿಂಡವನೆ ಕುರುಹಿಟ್ಟುಕೊಂಡು ಜಾತಿ ವರ್ಣಾಶ್ರಮ ನಾಮಗೋತ್ರಗಳೊಳಗೆ ಸಿಕ್ಕಿ ಮರುಳಾಗಿ ಕೆಡುತ್ತಿಪ್ಪರು.[೫೦] ಜೀವನು ವಿರಹ ಎಂಬ ವಿಕಾರಕ್ಕೆ ಒಳಗಾದಾಗ ಮಾಯೆ ಕಾಡಲು ಆರಂಭಿಸಿ ನಾನು-ನೀನು ಎಂಬ ವ್ಯತ್ಯಾಸ ಮೂಡಿ ತಮ್ಮ ಸುತ್ತ ಒಂದು ಚೌಕಟ್ಟನ್ನು ಹಾಕಿಕೊಂಡು ಸುಖವಾಗಿರುವ ಭ್ರಮೆಗೆ ಒಳಗಾಗುತ್ತಾನೆ.

ದೇವನಿಂದ ಅಗಲಿ ದೇಹಧಾರಿಗಳಾದ ಜೀವರನ್ನು ಮಾಯೆಯ ಮಬ್ಬು ಆವರಿಸಿದೆ. ಅವರ ನಿರಾಕಾರ ದೇವನೆ ತಮ್ಮ ನಿಜ ಸ್ವರೂಪ ಎಂಬ ಸತ್ಯವನ್ನು ಅರಿಯರು ಅದಾಗಿ ಆ ದೇವನು ಎಲ್ಲೋ ಮೇಲೆ ದೂರ ಇದ್ದಾನೆಂದು ಭಾವಿಸಿ ಭ್ರಮಿಸಿ ಅವನಿಗೆ ಹತ್ತು ಹಲವು ವಿದಧ ಹೆಸರುಗಳನ್ನಿಟ್ಟು ಕರೆವ ಕೋಟಲೆಗೆ ಒಳಗಾಗಿದ್ದಾರೆ.[೫೧] ಅವರ ಕಷ್ಟ ಕಂಡು ಅಲ್ಲಮನಿಗೆ ಅನುಕಂಪ ಮೂಡಿದೆ. ದೇವನಿಂದ ಅಗಲುವುದು ಎಂದರೆ ಶಿವಸ್ವರೂಪಿಯಾದ ಆತ್ಮ ದೇಹಿಯಾಗುವುದು. ಆ ದೇಹವೆ ತಾನು ಎಂದು ಭಾವಿಸುವುದು. ಆ ದೇಹದ ಅಗತ್ಯಗಳನ್ನು ಪೂರೈಸಲು ಮುಂದಾಗುತ್ತದೆ. ಲೌಕಿಕ ವಿಷಯಗಳ ಕುರಿತು ಮೋಹ ಬೆಳೆಸಿಕೊಳ್ಳುತ್ತಾನೆ. ಇದೆಲ್ಲವೂ ಮಾಯೆಯ ಕ್ರಿಯಾ ರೂಪಗಳು. ಒಂದಿಲ್ಲ ಒಂದು ರೀತಿಯಲ್ಲಿ ಜೀವ ದೇಹದ ಸುತ್ತ ಸುತ್ತುವಂತೆ ಮಾಡುತ್ತದೆ. ಜೀವನು ತನ್ನೊಳಗೆ ಇರುವ ದೇವನನ್ನು ಮರೆಸಿ ತನ್ನ ಬಾಹ್ಯದಲ್ಲಿ ದೇವರನ್ನು ರೂಪಿಸಿ, ಪೂಜಿಸಿ ಮತ್ತು ಪ್ರಾರ್ಥನೆ ಮಾಡುವಂತೆ ಮಾಡುತ್ತದೆ. ಇದೆಲ್ಲವೂ ಜೀವನು ತನ್ನ ನಿಜಸ್ವರೂಪದ ಕುರುಹನ್ನು ಮರೆತಾಗ ಉಂಟಾಗುವಂಥದ್ದು. ಅಂದರೆ ಮಾಯೆ ಎಂಬುದು ಅಜ್ಞಾನದ ಸ್ವರೂಪದಲ್ಲಿದೆ. ಅಂತರಂಗದಲ್ಲಿ ಸದಾ ನೆಲೆಸಿರುವ ಅನಂತ ಆನಂದದ ಸ್ವರೂಪಿಯಾದ ಪರಮಾತ್ಮನನ್ನು ಗುರುತಿಸದಂತೆ ಮಾಡುತ್ತದೆ.

೫.೨೫ ಭ್ರಾಂತಿ: ಮಾಯೆ

"ಆರಕ್ಕೆಯ ಸಿರಿಗೆ ಆರಕ್ಕೆ ಚಿಂತಿಸುವರು
ಆರಕ್ಕೆಯ ಬಡತನಕ್ಕೆ ಆರಕ್ಕೆ ಮಱುಗುವರು
ಇದಾರಕ್ಕೆ ಆರಕ್ಕೆ? ಇದೇನಕ್ಕೆ ಏನಕ್ಕೇ?
ಮಾಯದ ಬೇಳುವೆ ಹುರುಳಿಲ್ಲ
ಕೊಂದು ಕೂಗಿತ್ತು ನೋಡಾ ಗುಹೇಶ್ವರ" [೬೨]

ತಾನಲ್ಲದ ತನ್ನದಲ್ಲದ ಅನ್ಯೋನ್ಯವಾದ ದೇಹವಿಡಿದು ಬದುಕುವನೆಂದು ವೃಥಾ ಚಿಂತಾತುರರಾಗಿಪ್ಪ ಜೀವರು ಮಾಯಾ ಭ್ರಾಂತಿಯೊಳಗೆ ಸಿಕ್ಕಿ ಕೆಟ್ಟರು.[೬೩] ಶುದ್ಧ ಆಧ್ಯಾತ್ಮಿಕ ವಿವರಣೆ ಇದಾಗಿದೆ. ಜೀವನು ತನ್ನಲ್ಲದ ದೇಹವನ್ನು ತನ್ನದೇ ಎಂದೂ, ತಾನೇ ಎಂದು ಭ್ರಮಿಸಿಕೊಂಡು ದೇಹದ ಮೂಲಕ ಜೀವ ಮನುಜನಾಗಿ ದೇಹದ ಆಸಕ್ತಿಗಳನ್ನು ಪೂರೈಸಲು ಚಿಂತಿಸುತ್ತಾನೆ. ಜೀವ ಭ್ರಮೆಗೆ ಒಳಗಾಗಲು ಮಾಯೆ ಕಾರಣವಾಗಿ ತೋರುತ್ತದೆ.

'ಯಾರದೋ ಸಿರಿಗೆ ಯಾರೋ ಚಿಂತಿಸುತ್ತಾರೆ. ತನ್ನದೆಲ್ಲದ ಭೌತಿಕ ಸಿರಿ ಸಂಪತ್ತಿಗಾಗಿ ಮಾಯಾವಶನಾದ ಜೀವನು ಚಿಂತಿಸುತ್ತಾನೆ.[೬೪] ಸಾಮಾಜಿಕ ದೃಷ್ಟಿಯಿಂದ ಗಮನಿಸಿದ್ದು, ಲೋಕದಲ್ಲಿ ಜೀವನು ಒಂದಲ್ಲ ಒಂದು ರೀತಿಯ ಕೊರತೆ ಅನುಭವಿಸುತ್ತಲೇ ಇರುತ್ತಾನೆ. ಬೇರೆಯವರಲ್ಲಿ ಇರುವ ಕೊರತೆಯನ್ನು ಗಮನಿಸದೇ ಅವರಲ್ಲಿಯ ಸಮೃದ್ಧಿ ತನ್ನಲ್ಲಿಲ್ಲ ಎಂಬ ಚಿಂತೆಗೆ ಒಳಗಾಗುತ್ತಾನೆ. ಅದೇ ರೀತಿ ತನ್ನಲ್ಲಿಯ ಸಮೃದ್ಧಿಯಿಂದ ಸಂತೃಪ್ತಗೊಂಡು ಜೀವ ಬೇರೆಯವರಲಿಲ್ಲ ಎಂದು ಮರುಗುತ್ತಾನೆ. ಮನುಜನಲ್ಲಿರುವ ಅರಿಷಡ್ವರ್ಗಗಳು ಈ ರೀತಿಯಾಗಿ ಚಿಂತಿಸುವಂತೆ ಮರುಗುವಂತೆ ಮಾಡುತ್ತವೆ. ಮನುಜ ಹೀಗೆ ವರ್ತಿಸಲು ಕಾರಣ ಮಾಯೆ. ಸಿರಿವಂತಿಕೆ–ಬಡತನವಾಗಲಿ ಭ್ರಾಂತಿ– ಚಿಂತೆಗಳಾಗಲಿ ಇವೆಲ್ಲವೂ ಮಾಯೆಯ ಅಭಿವ್ಯಕ್ತಿಯ ಸಾಮಾಜಿಕ ರೂಪಗಳು. ಜೀವನು ಬಡತನವಿದ್ದಾಗ ಇದ್ದುದರಲ್ಲಿ ತೃಪ್ತಿ ಪಡಬೇಕು. ಸಿರಿತನವಿದ್ದಾಗ ಇಲ್ಲದವರಿಗೆ ಕೊಟ್ಟು ತೃಪ್ತಿ ಪಡಿಸಬೇಕು. ಶಿವಯೋಗ ಸಾಧಕನಾಗಬೇಕಾದರೆ ಮಾನಸಿಕ ದೃಢತ್ವ ಮುಖ್ಯ. ಜೀವ ತಾನು ಏನು ಎಂಬ ಅರಿವು ಮೂಡಿಸಿಕೊಂಡಲ್ಲಿ ಮಾಯೆ ಆವರಿಸಿದರೂ ಅದು ಮಂಜಿನಂತೆ ಕರಗಿ ಹೋಗುತ್ತದೆ. ಜೀವನಲ್ಲಿ ಶಿವಯೋಗ ಸಾಧನೆಯ ಬಲವಿಲ್ಲದಿದ್ದರೆ ಮಾಯೆ ಎಂಬ ಭ್ರಾಂತಿಗೆ ಒಳಗಾಗಿ ಲೌಕಿಕದಲ್ಲಿ ತೊಳಲುವಂತೆ ಮಾಡುತ್ತದೆ. ಅದರ ಬಲದ ಮುಂದೆ ಜೀವ ಅಶಕ್ತನಾಗುತ್ತಾನೆ. ಇಲ್ಲಿ ಮಾಯೆ ಅಸತ್ಯವಾದದು. ಆದರೆ ಮಾನವನ ದೌರ್ಬಲ್ಯದ ಕಾರಣಕ್ಕೆ ಅದು ಮನುಜನನ್ನು ಆವರಿಸುತ್ತದೆ.

೫.೨೬ ಪಾಶ: ಮಾಯೆ

"ಮುನಿಯದಿರಿ ಮುನಿಯದಿರಿ ನಿಮಗೊಂದು ಯುಕ್ತಿಯ ಹೇಳುವೆನು
ಅದೆಂತೆಂದಡೆ : ನೀವೆನ್ನ ವಂಶೀಭೂತಂಗಳಾದ ಕಾರಣ
ಸೂಸಲ ಕಂಪಿಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದಿರಲ್ಲಾ
ಮಾಯದ ಬಲೆಯಲ್ಲಿ! ಕೋಪವೆಂಬ ರಾದನೊಡ್ಡಿ
ತಾಪವೆಂಬ ಅಡಗಲ್ಲನಿರಿಸಿ
ಹುಸಿಯೆಂಬ ಮೀಟುಗವಣೆಯ ಜಂತ್ರಿಸಿ
ಹೊನ್ನು ಹೆಣ್ಣು ಮಣ್ಣೆಂಬ ಅಡಿಗಲ್ಲನ್ನೊಡ್ಡಿ
ಕೆಡಹಿದನಲ್ಲಾ ನಿಃಕರುಣಿ ಮುಕ್ಕಣ್ಣ ವ್ಯಾಧನ
ಜಂಗಮವಾದದಲ್ಲದೆ ಹಿಂಗದು ಕಾಣಾ ಗುಹೇಶ್ವರ"[೫೫]

ಇಲ್ಲಿ ಅಲ್ಲಮಪ್ರಭು ಜಂಗಮತ್ವವೆಂಬ ಚಲನಶೀಲತೆಯ ಪ್ರತಿಪಾದನೆ ಮಾಡಿದ್ದಾನೆ. ಮನುಜ ಕುಲದಲ್ಲಿ ಹುಟ್ಟಿದ ತಾನು ಮಾಯೆಯೆಂಬ ಪ್ರಬಲ ಶಕ್ತಿಯನ್ನು ಎದುರಿಸಬಲ್ಲವನಾಗಿದ್ದು, ತನ್ನಂತೆ ಲೌಕಿಕದಲ್ಲಿ ದೇಹಿಗಳು ಮಾಯೆಯನ್ನು ಎದುರಿಸಿ ಗೆಲ್ಲಬೇಕು ಎಂಬ ಆಶಯವಿದೆ. ಅಲ್ಲಮಪ್ರಭು ಸಲಹೆ ನೀಡುವ ಆಪ್ತ ವ್ಯಕ್ತಿಯಾಗಿದ್ದಾರೆ. ಪರಮಾತ್ಮನ ಆಂಶಿಕ ಶಕ್ತಿಯಾದ ಮಾಯೆ ತನ್ನ ಕ್ರಿಯಾ ಸ್ವರೂಪದ ಬಲೆಯನ್ನು ಒಡ್ಡಿ ಸಾಮಾನ್ಯ ಜೀವನು ಅದರೊಳಗೆ ಬೀಳುವಂತೆ ಮಾಡುತ್ತದೆ. ಪಂಚೇಂದ್ರಿಯಗಳ ಸೆಳೆತಕ್ಕೆ ಸಿಕ್ಕು ಅರಿಷಡ್ವರ್ಗಗಳ ಕೈಗೊಂಬೆಯಾಗಿ ವರ್ತಿಸುವಂತೆ ಮಾಡುತ್ತದೆ. ಪರಮಾತ್ಮನು ಮಾಯೆಯೆಂಬ ಶಕ್ತಿಯ ಮೂಲಕ ಜೀವನನ್ನು ಸಂಸಾರಿಕ ವಿಷಯಗಳಲ್ಲಿ ತೊಡಗುವಂತೆ ಮಾಡುತ್ತಾನೆ. ಶ್ರುತಿಗಳಲ್ಲಿ ಹೇಳಿರುವಂತೆ, ಸುಖಂ ಚ ಬಿಂದುಮಾತ್ರೇಣ ದುಃಖಂ ಪರ್ವತ ಏವಚ ಹರಿಣಿ ಪಾದಮಾತೆಣ ಬಂಧನಂ ತು ಜಗತ್ರಯಂ ॥ [೬]

ಸುಖ ಎಂಬುದು ಕ್ಷಣಿಕ ಹಾಗೂ ಬಿಂದುವಿನಷ್ಟೆ ಇದೆ ದುಃಖ ಮಾತ್ರ ಪರ್ವತಗಾತ್ರದಷ್ಟಿದೆ. ಭಗವಂತನ ಸ್ಮರಣೆ ಮಾತ್ರದಿಂದ ಇದೆಲ್ಲದರಿಂದ ಮುಕ್ತಿ ಪಡೆಯಲು ಸಾಧ್ಯ ಎಂಬ ಭ್ರಮಗೆ ಒಳಗಾಗಿ ಬಾಹ್ಯದಲ್ಲಿ ಪರಮಾತ್ಮನನ್ನು ಪೂಜಿಸುವುದನ್ನು ಬಿಡಬೇಕು. ವಾಸ್ತವದಲ್ಲಿ ಜೀವನು ಅರಿಷಡ್ವರ್ಗಗಳ ಹಿಡಿತಕ್ಕೆ ಸಿಗದೆ ಜಂಗಮವಾಗಬೇಕು. ಆಗ ಮಾತ್ರ ಅಂತರಂಗದಲ್ಲಿ ಪರಮಾತ್ಮನ ಸಾಕ್ಷಾತ್ಕಾರಗೊಳಿಸಲು ಸಾಧ್ಯ. ಇಲ್ಲಿ ಮಾಯೆ ಹಂತ ಹಂತವಾಗಿ ಜೀವನನ್ನು ಆಕರ್ಷಿಸುತ್ತದೆ. ಒಂದು ಸಾರಿ ಜೀವ ಮಾಯೆಯ ವಾಸನೆ ಹಿಡಿದು ಹೊರಟರೆ ಇನ್ನಿಲ್ಲದಂತೆ ಜೀವ ಬಂಧಿಸಲ್ಪಡುತ್ತಾನೆ. ಮಾಯೆ ಬಿಡಿಸಿಕೊಳ್ಳಲಾಗದ ಪಾಶವಾಗಿ ಬಲೆಯಾಗಿ ತೋರುತ್ತದೆ.

೫.೨೭ ಶುದ್ಧಸ್ವರೂಪಿ: ಮಾಯೆ

"ಹುಟ್ಟಿದ ಕೂಸಿಂಗೆ ಪಟ್ಟವ ಕಟ್ಟಿ
ವಿಭೂತಿಯ ಪೂಸಿ ಲಿಂಗವ ತೋರಿಸಿ
ಜೋ ಜೋ ಎಂದು ಜೋಗುಳ ಹಾಡಿದಳು ಮಾಯಾದೇವಿಯಕ್ಕ
ಜೋ ಎಂಬ ಸರಹರಿದು ತೊಟ್ಟಿಲು ಬಿದ್ದಿತ್ತು
ಕೂಸು ಸತ್ತಿತ್ತು ಗುಹೇಶ್ವರನುಳಿದನು"[೯೭]

ಸಕಲ ಕರ್ಮಂಗಳಳಿದುಳಿದ ಶಿಷ್ಯಂಗೆ ಜ್ಞಾನಶಕ್ತಿಯೆಂಬ ತಾಯಿ ಜ್ಞಾನ ಭಸ್ಮವನೇ ಪಟ್ಟವ ಕಟ್ಟಿ ತನ್ನ ಸ್ವಯಂ ಜ್ಯೋತಿಯನೇ ಲಿಂಗವ ಮಾಡಿ ತೋರಿಸಿ, ಶಿವೋಹಂ ಶಿವೋಹಂ ಎಂದು ಬೋಧಿಸುತ್ತಿದ್ದಳು. ಆ ಶಿವೋಹಂ ಎಂಬ ಭಿನ್ನ ಶಬ್ದವು ಅಳಿದು ತೊಟ್ಟಿಲೆಂಬ ತನುವು ತಿಳಿದು ಆ ಶರಣನು ಲಿಂಗಮಯವಾಗಿ ಪರಬ್ರಹ್ಮವೆ ಉಳಿಯಿತು.[೯೮] ಜೀವನಲ್ಲಿ ಜ್ಞಾನ ಮೂಡಿಸಿ ಸ್ವಯಂ ಅರಿವನ್ನು ಮೂಡಿಸಿ ಶರಣನಾಗಿ ಲಿಂಗೈಕ್ಯನಾಗಿ ಪರಬ್ರಹ್ಮದ ಸಾಕ್ಷಾತ್ಕಾರವಾಗುವಂತೆ ಮಾಡುವ ಜ್ಞಾನವೇ ಮಾಯೆ. ಮಾಯೆ ಕೇವಲ ಜೀವನನ್ನು ಭವಿಯಾಗಿಸುವುದಿಲ್ಲ ಇಲ್ಲವೆ ಅಜ್ಞಾನಿಯಾಗಿಸುವುದಿಲ್ಲ. ಇದಕ್ಕಿಂತ ಭಿನ್ನವಾಗಿ ಜೀವನನ್ನು ಜ್ಞಾನಿಯಾಗಿಸುತ್ತದೆ ಮತ್ತು ಶರಣನನ್ನಾಗಿಸುತ್ತದೆ.

'ಇದರಲ್ಲಿ ಹೇಳಿರುವ ತತ್ವ ಗಹನ. ಜ್ಞಾನಶಕ್ತಿಯೇ ತಾಯಿ ಎಲ್ಲ ಕರ್ಮಗಳನ್ನು ಅಳಿಸಿ ಶುದ್ಧನಾದ ಸಾಧಕನಿಗೆ ಸ್ವಯಂಜ್ಯೋತಿಯೇ ಲಿಂಗ ಜ್ಞಾನವೇ ಭಸ್ಮಧಾರಣ. ಶಿವೋಹಂ ಎಂಬ ಬೋಧೆಯೇ ಜೋಗುಳ. ಈ ಶಿವೋಹಂ ಶಬ್ದ ಅಳಿದು ತೊಟ್ಟಿಲೆಂಬ ದೇಹಭಾವ ಅಳಿದು ಶರಣು ಲಿಂಗೈಕ್ಯನಾದ ಮೇಲೆ ಪರಬ್ರಹ್ಮ ಮಾತ್ರ ಉಳಿಯುತ್ತದೆ'[೯೯] ಎಂಬ ವಿವರಣೆಯು ಆಧ್ಯಾತ್ಮಿಕ ನೆಲೆಯಲ್ಲಿ ಸೂಕ್ತವಾದುದಾಗಿದೆ. ಪರಮಾತ್ಮನಿಂದ ಆವಿರ್ಭಾವಗೊಂಡ ಜೀವವು ತನ್ನರಿವನ್ನು ತಾನು ತಿಳಿಯದ ಕೂಸು (ಸ್ಥಿತಿ) ಆಗಿದೆ. ಜ್ಞಾನ– ಅಜ್ಞಾನವನ್ನು ಅರಿತು ನೋಡುವ ಶಕ್ತಿ ಅದಕ್ಕಿಲ್ಲ. ಇಂತಹ ಜೀವಕ್ಕೆ ದೀಕ್ಷೆ ನೀಡಿ ವಿಭೂತಿ ಲೇಪಿಸುವ ಮೂಲಕ ಜಗತ್ತಿನ ನಶ್ವರತೆಯನ್ನು ಅರುಹಿ ಶಾಶ್ವತ ಸತ್ಯದ ಸ್ವರೂಪಿಯಾದ ಪರಮಾತ್ಮನನ್ನು ಲಿಂಗರೂಪದಲ್ಲಿ ತೋರಿ ಶಿವೋಹಂ ಎಂಬ ಜೋಗುಳ ಹಾಡಿದವಳು ಮಾಯೆ. ಈ ಅರಿವಿನಿಂದ ಜೀವನು ಶುದ್ಧಾತ್ಮನಾಗುತ್ತಾನೆ. ಅವನಲ್ಲಿಯ ಅಜ್ಞಾನ ಕಳೆದುಹೊಗಿ ಜ್ಞಾನದ ಬೆಳಕು ಮೂಡುತ್ತದೆ.

ಇಲ್ಲಿ ಮಾಯೆ ಅಜ್ಞಾನವಲ್ಲ; ಜ್ಞಾನದ ಸ್ವರೂಪದ್ದಾಗಿದೆ. ಶುದ್ಧ ಮಾಯೆಯಾಗಿ ತೋರುತ್ತದೆ. ಜೀವನ ಅಜ್ಞಾನವನ್ನು ಅಳಿಸಿ ಹಾಕಿ ಜ್ಞಾನ ಮೂಡಿಸುವ ವಿಮರ್ಶಾ ಶಕ್ತಿಯಾಗಿದೆ. ವಿಮರ್ಶಾಶಕ್ತಿ ಎಂಬುದು ಶಕ್ತಿ ವಿಶಿಷ್ಟಾದ್ವೈತದಲ್ಲಿ ರೂಪಗೊಂಡ ಪರಿಕಲ್ಪನೆ ಆಗಿದೆ. ಅಲ್ಲಮ ಶುದ್ಧ ಹಾಗೂ ಸಕಾರಾತ್ಮಕ ಸ್ವರೂಪದಲ್ಲಿ ಮಾಯೆಯನ್ನು ವಿವರಿಸುತ್ತಾನೆ.

೫.೨೮ ಶಾಶ್ವತ: ಮಾಯೆ

"ಕಾಯ ಸತ್ತು, ಮಾಯವೆ ಉಳಿಯಿತು
ಎರಡರ ಸುಖದುಃಖವನಱಿಯರು ನೋಡಾ!
ಅದೇನೆಂದರಿಯರು, ಅದೇಂತೆಂದರಿಯರು ನೋಡಾ
ಹಿರಿಯರೆಲ್ಲಾ ವೃಥಾ ಹೋದರು ನೋಡಾ!
ಕಣ್ಣ ಮುಂದಣ ಕಪ್ಪ ಕಳೆಯಲರಿಯರು ನೋಡಾ !
ಗುಹೇಶ್ವರನೆಂಬ ಶಬ್ದಕ್ಕೆ ನಾಚರು ನೋಡಾ"[೧೦೦]

ಕಾಯವೆಂಬ ಜೀವನ್ಮೃತವ ಧರಿಸಿರ್ಪವರಲ್ಲಿ ಮಾಯೆಯಳಿಯದೆ ಇಪ್ಪಳು ಇಂತಪ್ಪ ಕಾಯಕದ ಮಾಯದೊಳಗಿಪ್ಪ ಸುಖದುಃಖವನಾರೂ ಅರಿಯರು. ಇಂತಪ್ಪವರೆಲ್ಲ ತಮ್ಮ ತಮ್ಮ ಕಣ್ಣಮುಂದಣ ಅಜ್ಞಾನವೆಂಬ ಕತ್ತಲೆಯ ಕಳೆಯಲರಿಯದೆ ಕೆಟ್ಟರು.[೧೦೧] ಕಾಯ ಮಾಯಗಳೆರಡರಲ್ಲಿ ಕಾಯ ಕಳೆದು ಹೋಗುವಂತಹದ್ದು. ಮಾಯೆಯ ಸ್ವರೂಪ ಶಾಶ್ವತವಾದದು. ಜೀವನು ಕಾಯ-ಮಾಯದ ಸ್ಥಿತಿ-ಗತಿಗಳನ್ನು ಅರಿಯಲಾರದೆ ಆಯುಷ್ಯವನ್ನೆಲಾ ವ್ಯರ್ಥ ಕಳೆಯುತ್ತಾನೆ. ಮಾಯೆ ಕಾಯವನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳುವ ಬಗೆಯನ್ನು ಅರಿಯಲಾರನು. ಮನದ ಮೇಲೆ ಆವರಿಸಿರುವ ಅಜ್ಞಾನದ ಆವರಣ ಸರಿಸಲು ಪ್ರಯತ್ನಿಸುವುದಿಲ್ಲ. ಇದರಿಂದ ಜೀವ ತನ್ನಿರುವನ್ನು ಪರಮಾತ್ಮನ ಕುರುಹನ್ನು ಗುರುತಿಸಲಾಗದೇ ಸೋಲುತ್ತಾನೆ. ಪರಮಾತ್ಮನು ಬಾಹ್ಯದಲ್ಲಿ ಇರುವನೆಂದು ಭಾವಿಸಿ ಅವನಿಗೆ ರೂಪ-ಆಕಾರಗಳನ್ನು ಕೊಟ್ಟು ಕಥೆಯನ್ನು ಕಟ್ಟಿ ವರ್ಣಿಸುತ್ತಾನೆ. ನಿಜದ ಪರಮಾತ್ಮನೆಂಬ ಸ್ವರೂಪ ತಿಳಿಯಲಾರರು. ಭಕ್ತಿ, ಮೋಕ್ಷ, ಮುಕ್ತಿ ಇತ್ಯಾದಿ ವಿಚಾರಗಳ ಕುರಿತು ಬರಿಯ ಮಾತನಾಡುತ್ತಾ ಬದುಕನ್ನು ವ್ಯರ್ಥ ಕಳೆಯುವರು.

'ಶಬ್ದ ಜ್ಞಾನಿಗಳಾದ ಕೆಲವು ಜನ ಸಾಧನೆಯನ್ನೇನೋ ಮಾಡುತ್ತಾರೆ. ಆ ಸಾಧನೆಯಿಂದ ಅವರ ದೇಹ ನಶಿಸಿ ಹೋಗುವುದಾದರೂ ಬಂಧನಕ್ಕೆ ಕಾರಣವಾದ ಮಾಯೆ ಮಾತ್ರ ಹಾಗೆಯೇ ಉಳಿಯುತ್ತದೆ.'[೧೦೨] ಎಂಬ ಮಾತು ಮೇಲಿನ ವಿವರಣೆಗೆ ಪೂರಕವಾಗಿದೆ. ದೇಹವನ್ನು ಲೌಕಿಕದಲ್ಲಿ ಬಂಧಿಸುವಶಕ್ತಿ ಮಾಯೆ ಯಾಗಿದೆ. ಈ ಮಾಯೆ ಎಂಬುದು ಜಗತ್ತನ್ನು ವ್ಯಾಪಿಸಿರುವಂತಹದು. ಆದರೆ ಕಾಯ ಮಿತ ಅವಧಿಯನ್ನು ಹೊಂದಿರುತ್ತದೆ. ಶಿವಾಂಶಿಕ ಶಕ್ತಿ ಮಾಯೆ ಅಜ್ಞಾನ, ಅಹಂಕಾರಗಳ ಮೂಲಕ ತನ್ನ ಸ್ವರೂಪವನ್ನು ಈ ವಚನ ಸಂದರ್ಭದಲ್ಲಿ ಪ್ರಸ್ತಾಪಿಸುತ್ತದೆ.

೫.೨೯ ವಿಮರ್ಶಾಶಕ್ತಿ: ಮಾಯೆ:

"ಸೆರಗನು ಹಿಡಿದು ಸೀರೆಯ ಹರಿದ
ಹುಟ್ಟ ಮುರಿದ ಕಂದಲನೊಡೆದ

ಭಂಡನವ್ವಾ ಲಜ್ಜೆ ಭಂಡನವ್ವಾ
ಕಂಡಡೆ ನುಡಿಸದಿರೆಲೆ ಮಾಯಾದೇವಿ
ಆಯುಷ್ಯ ಹಿರಿದು ಭವಿಷ್ಯ ಕಿರಿದು
ಭವಗೆಟ್ಟು ಹೋದ ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ ತಂಗಿ"[೧೦೩]

ಶರಣ ಸತಿಯಲ್ಲಿ ಲಿಂಗಾನುಗ್ರಾಹವಾಗಿ ಪೂರ್ವಾಚಾರವ ಬಿಡಿಸಿ ಕರ್ಮಪಾಶವ ಹರಿಯುವದೀಗ. ಶರಣಂಗೆ ಜನ್ಮ ಕರ್ಮ ದೇಹ ಧರ್ಮ ನಷ್ಟವಾಯಿತ್ತು.[೧೦೪] ಶರಣನನ್ನು ಲಿಂಗದಲ್ಲಿ ನೆಲೆಸುವಂತೆ ಮಾಡಿ ತನ್ನ ಪೂರ್ವಾಶ್ರಮದಿಂದ ಮುಕ್ತನಾದಾಗ ಜನ್ಮ ಕರ್ಮದಿಂದ ಬಿಡಿಸಿಕೊಳ್ಳುತ್ತಾನೆ. ದೇಹದ ಮೋಹದಿಂದ ಮುಕ್ತನಾಗುತ್ತಾನೆ. ಲಿಂಗದರಿವು ಶರಣನನ್ನು ಜ್ಞಾನ ಮುಖಿಯಾಗಿಸಿ ನಾನು ಎಂಬ ಭಾವವಳಿದು ಶಿವನಂತೆ ನಿತ್ಯ ಮುಕ್ತ ನಾಗುತ್ತಾನೆ. ಇಂತಹ ಶರಣನನ್ನು ಮಾಯೆ ನುಡಿಸುವುದು ವ್ಯರ್ಥವಾಗುತ್ತದೆ. ಜೀವನನ್ನು ಶರಣನಾಗಿಸುವ ಮೂಲಕ ಪೂರ್ವದ ಸೆಳೆತದಿಂದ ಮುಕ್ತಗೊಳಿಸುತ್ತಾನೆ. ಲಿಂಗದ ಕುರುಹದೋರಿ ಜ್ಞಾನ ಶಕ್ತಿಯ ಬಲದಿಂದ ಸೋಹಂ ಭಾವವಾಗಿ ಮಾಯೆ ವರ್ತಿಸುವಂತೆ ಮಾಡುತ್ತದೆ. ಮಾಯೆ ಹಾಗೂ ಪರಮಾತ್ಮನ ನಡುವಿನ ಅನನ್ಯತೆಯನ್ನು ವ್ಯಕ್ತಿ ನೆಲೆಯಲ್ಲಿ ನೋಡಿದಾಗ ಜೀವನನ್ನು ಲೌಕಿಕದಿಂದ ಮುಕ್ತಗೊಳಿಸುವ ಪ್ರಯತ್ನದಲ್ಲಿ ಶಿವನಿಗೆ ಮಾಯೆ ಸಹಕಾರಿಯಾಗಿ ತೋರುತ್ತದೆ. ಇಲ್ಲಿ ಮಾಯೆ ಜ್ಞಾನಶಕ್ತಿಯಾಗಿ ತೋರುತ್ತದೆ. ಪರಮಾತ್ಮನ ಧಾಷ್ಟ್ಯ ವ್ಯಕ್ತಿತ್ವದ ಅನಾವರಣ ಇಲ್ಲಿದೆ. ಸೆರಗನು ಹಿಡಿದು ಸೀರೆಯ ಹರಿದ ಎಂಬ ಮಾತು ಜೀವನನ್ನು ಹಿಡಿದು ಲೌಕಿಕ ಮಾರ್ಗವನ್ನು ಮುರಿದ ಹಾಕಿದ. ಜೀವ ಮತ್ತೆ ಆ ಹಾದಿಯಲ್ಲಿ ನಡೆಯದಂತೆ ಮಾಡುವುದಾಗಿದೆ. ಹುಟ್ಟು ಮುರಿದ ಕಂದಲನೊಡೆದ ಎಂಬ ಮಾತು ಜೀವದ ಬಾಹ್ಯ ಸ್ವರೂಪವೆಂಬ ದೇಹವನ್ನು ಇಲ್ಲವಾಗಿಸಿದ. ಆ ದೇಹದಲ್ಲಿ ಚಿಗುರಿದ ಲೌಕಿಕದ ಚಿಗುರನ್ನು ಚಿವುಟಿ ಹಾಕಿದ. ತೀರಾ ನಿಷ್ಠುರವಾದಿಯಾದ ಪರಮಾತ್ಮನನ್ನು ಕಂಡರೆ ಮಾತನಾಡಿಸಬೇಡ ಎಂದು ಮಾಯಾದೇವಿಯನ್ನು ಎಚ್ಚರಿಸುತ್ತಾರೆ. ಭವವನ್ನು ಮೀರಿ ನಿಂತ ಶಕ್ತಿ ಪರಮಾತ್ಮ. ಅವನ ಆಂಶಿಕ ಅಭಿವ್ಯಕ್ತಿಯಾದ ಮಾಯೆ ಈ ಸಂದರ್ಭದಲ್ಲಿ ದುರ್ಬಲವಾಗಿ ಕಾಣುತ್ತದೆ. ಶಿವ ಮಾಯೆಯೆಂಬ ಭಾವವನ್ನಾಡಿಸುವ ಸೂತ್ರಧಾರನಾಗಿ ಕಾಣುತ್ತಾನೆ. ಕೆಲವೊಮ್ಮೆ ಶಿವನ ಮೇಲೆ ಪ್ರಭಾವಿಸಬಲ್ಲ ಮಾಯೆ ಇಲ್ಲಿ ಮಾತ್ರ ಅಧೀನವಾಗಿ ಕಾಣುತ್ತದೆ.

"ಭಾವಗೆಟ್ಟನು, ಭವಗೆಟ್ಟನು
ಒಡಹುಟ್ಟಿದರೈವರ ಕೈಬಿಟ್ಟನು
ಭಂಡನು ಲಜ್ಜೆ ಭಂಡನು ಕಂಡರೆ ನುಡಿಸದಿರಾ ಮಾಯಾದೇವಿ
ಅರುವೆಯನುಟ್ಟನು ನೆರೆಮರುಳಾದನು

ಹುಟ್ಟ ಮುರಿದನು ಮಡಕೆಯನೊಡೆದನು
ಆದಿ ಪುರಾತನು ಅಚಲ ಲಿಂಗೈಕ್ಯನು
ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ ಮಗಳೆ"೧೦೫

ಈ ಹಿಂದಿನ ವಚನದಂತೆಯೇ ಇಲ್ಲಿ ಪರಮಾತ್ಮನ ಸ್ವರೂಪದ ಕುರಿತು ಮಾತನಾಡುತ್ತಾರೆ. ಗುಹೇಶ್ವರನೆಂಬುದು ಜೀವದೊಳಗಿರುವ ಚೈತನ್ಯವಾಗಿದೆ. ನಿರ್ಭವನಾಗುವ ಹಾಗೂ ನಿರ್ಭಾವುಕನಾಗುವ ಸಾಮರ್ಥ್ಯ ಇರುವುದು ನಿರ್ಮಲ ಚೈತನ್ಯಕ್ಕೆ (ಆತ್ಮ) ಮಾತ್ರ. ಪರಮಾತ್ಮ ಜೀವಾತ್ಮ ಎರಡು ಅಭೇದ ಚೈತನ್ಯಗಳು. ಅವರೆಡರ ಸ್ವರೂಪ ಸಾಮಾನ್ಯವಾದದು. ನಿರ್ಭಯ, ನಿರ್ಗುಣ, ನಿರ್ಮಲ ಭಾವವುಳ್ಳ ಚೈತನ್ಯವನ್ನು ತಡೆಯುವ ಶಕ್ತಿ ಮಾಯೆ ಎಂಬ ಭಾವಕ್ಕಿಲ್ಲ ಜೀವನಲ್ಲಿಯ ದೇಹದ ಸ್ವರೂಪವನ್ನು ಇಲ್ಲವಾಗಿಸಿದನು. ಲೌಕಿಕದಲ್ಲಿ ಇದ್ದರೂ ಇಲ್ಲದಂತೆ ಅಂಟಿಯು ಅಂಟದಂತೆ ಇರಬಲ್ಲ ಶಕ್ತಿ ಜೀವಕ್ಕಿದೆ ಆದಿ ಸ್ವರೂಪವಾದ ಪರಮ ಚೈತನ್ಯಕ್ಕಿದೆ. ಇಷ್ಟು ಸಾಮರ್ಥ್ಯವಿದ್ದಾಗಲೂ ನಾನು ಎಂಬ ಅಹಂಕಾರ ಎಳ್ಳಷ್ಟೂ ಇಲ್ಲ. ಹೀಗಿದ್ದಾಗ ಇಂತಹ ಚೈತನ್ಯವನ್ನು ಆವರಿಸುವ ಧೈರ್ಯ ಮಾಯೆ ಎಂಬ ಭಾವಶಕ್ತಿಗೆ ಇಲ್ಲವಾಗುತ್ತದೆ.

ಭವತ್ವದಿಂದ ಮುಕ್ತನಾಗಬೇಕಾದರೆ ಜೀವ ನಿರ್ಭಾವಿಯಾಗಬೇಕು. ನಿರ್ಮಲವಾದ ಆತ್ಮ ಚೈತನ್ಯ ಯಾವ ಮಿತಿಗೂ ಒಳಪಡಲು ಸಾಧ್ಯವಾಗುವುದಿಲ್ಲ.

೫.೩೦ ಕುರುಹು: ಮಾಯೆ

ಒಂದೆರಡಾದುದನಾರೂ ಅರಿಯರು
ಆ ಒಂದು ಒಂದೇ ಯಾಯಿತ್ತು, ತ್ರಿತತ್ವವಾಯಿತ್ತು
ವೇದಾತೀತವಾಯಿತ್ತು
ಭರಿತವಾಯಿತ್ತು ಪ್ರಾದೇಶಿಕವಾಯಿತ್ತು ಭಕ್ತಿಗೆ ಸಾಧ್ಯವಾಯಿತ್ತು
ಅದಕ್ಕೆ ಆಧಾರ ದೇಹವಾಯಿತ್ತು
ಅದು ಅಷ್ಟ ವಿಗ್ರಹ ಸ್ವರೂಪವಾಗಿರುತ್ತಿಪ್ಪುದು
ಮತ್ತಿರುತಿರ್ದ ಒಂದು ಮಾಯಾ ಶಕ್ತಿಯಂ ಕೂಡಿ
ಗಣತ್ರಯಂಗಳು ಕೂಡಿ ನಾನಾತ್ಮನೆಸಿಕೊಂಡು
ವಿಷಯಾತ್ಮ ಇಂದ್ರಿಯಾತ್ಮ ಭೂತಾತ್ಮ ಜೀವಾತ್ಮ ಪರಮಾತ್ಮ ನೆನಿಸಿಕೊಂಡು
ಪ್ರಾಣಾದಿವಾಯಗಳಂ ಕೂಡಿಕೊಂಡು, ಜಡ ಪ್ರಕೃತಿಗಳು ಹೊತ್ತುಕೊಂಡು
ಸಂಕಲ್ಪ ವಿಕಲ್ಪವೆಂಬ ಉಭಯ ಕರ್ಮಂಗಳ ಕಲ್ಪಿಸಿ
ನಾನಾ ಯೋನಿ ಪ್ರಾಪ್ತನಾಗುತ್ತಿರ್ದು
ಲೋಕಾದಿ ಲೋಕಂಗಳೊಳು ತೊಳಲಿ ಬಳಲಿ

ತನ್ನ ಮೊದಲ ಕೂಡುವ ಪ್ರಕಾರಮಂ ಬಯಸಿ
"ನಾನಾ ಪಥದಿಂದ ಅರಸಿ ಹರಿವುತಿಪ್ಪರ ಅಖಿಲ ಜೀವಿಗಳೆಲ್ಲರೂ
ಇದ ಬೆರಸದೆ ಬೆರಸಿದ ಸಂಗನ ಬಸವಣ್ಣನ ನೆನದವರಿಗೆ
ಇದು ಸಾಧ್ಯವೆಂದರಿದೆನಾಗಿ
ನಾನು ಬಸವಣ್ಣನ ನೆನೆದು
ಶರಣನೆಂದು ಶುದ್ಧನಾದೆ ಕಾಣಾ ಗುಹೇಶ್ವರಾ"[೧೦೬]

ಅನಾದಿಯಲ್ಲಿ ಆತ್ಮರುಗಳೂ ಇಲ್ಲ ಮಾಯೆ ಮೊದಲಾದ ತತ್ವಂಗಳೆನೋ ಇಲ್ಲದುದು ಒಂದೇ ಪರಬ್ರಹ್ಮವಿದ್ದು, ತನ್ನ ಸ್ವಲೀಲೆಯಿಂದ ತಾನೇ ಲಿಂಗವಾಗಿ ತಾನೇ ಆತ್ಮನೆಂಬ ಅಂಗವಾಗಿ ಎರಡಾಯಿತು. ಆ ಒಂದೇ ಎರಡಾದ ಭೇದವ ವೇದಾಂತಿಗಳು, ಸಿದ್ಧಾಂತಿಗಳು ಮೊದಲಾದ ಇತರ ಮತವಾದಿಗಳು ಅರಿಯರು. ಆ ಒಂದೇ ಎರಡಾದ ಪರಿಯೆಂತೆಂದಡೆ ಆ ಒಂದೆಯಾಗಿರ್ದ ಪರಬ್ರಹ್ಮವು ತನ್ನ ನಿಜದಲ್ಲಿ ಅಗಲಿಕೆಯಿಲ್ಲದೆ ಎಂತಿರ್ದಂತೆ ಅಖಂಡ ಲಿಂಗಮೂರ್ತಿಯಾಯಿತ್ತು. ಲಿಂಗವು ತನ್ನ ಲೀಲೆಯಿಂದ ನಿಃಕಲನಾಗಿಪ್ಪ ಸಕಲನಿಃಕಲ ನಾಗಿಯೂ ಇಪ್ಪ, ಸಕಲನಾಗಿಯೂ ಇಪ್ಪನೆಂಬುದೀಗ ತ್ರಿತತ್ವವಾಯಿತೆಂಬ ಶಬ್ದಕ್ಕರ್ಥ. ಲಿಂಗದ ಘನವ ವೇದಾಗಮಂಗಳು ವಚಿಸಿ ಹೇಳಲರಿಯವು. ಆ ಲಿಂಗ ಪರಿಪೂರ್ಣ ವಾಗಿಪ್ಪುದು ತಾನೊಂದೆಯಾಗಿಪ್ಪುದು ಅಂತಾದ ಲಿಂಗದ ಚಿದಂಗವೇ ಅಷ್ಟ ತನುಗಳಾಗಿ ಲಿಂಗಕ್ಕೆ ಸ್ಥೂಲದೇಹವಾಯಿತ್ತು, ಅಂತು ಮಾಹಾಘನವಸ್ತು ಲೀಲೆಯಿಂದ ತಾನೇ ಲಿಂಗಮೂರ್ತಿಯಾಯಿತ್ತು.[೧೦೭] ಚೈತನ್ಯ ಸ್ವರೂಪಿಯಾದ ಜೀವಾತ್ಮ ಮಿಥ್ಯವಾದ ಮಾಯೆಯ ಸೆಳೆತಕ್ಕೆ ಒಳಗಾದಾಗ ಗುಣತ್ರಯಗಳಾದ ಸತ್ವ–ರಜ–ತಮದಿಂದ ಕೂಡಿದ ತನುವಾಗಿ ರೂಪಗೊಳ್ಳುತ್ತಾನೆ. ಜಡ ಜೀವಿಯಾಗಿ ಲೌಕಿಕ ಬದುಕನ್ನು ಸವೆಸುವಂತಾಗುತ್ತಾನೆ.

ಈ ವಚನದಲ್ಲಿ ದೇವ–ಜೀವ ಏಕವಾಗಿರುವಂಥವು ಅವರೆಡು ಬೇರೆಯಾದಾಗ ಜೀವದ ಸ್ವರೂಪ ವೈವಿಧ್ಯಮಯವಾಗುವ ಪರಿಯನ್ನು ಹೇಳುತ್ತಾ ತಾನು ಮಾತ್ರ ಲೌಕಿಕದ ಸೆಳೆತಕ್ಕೆ ಸಿಗದೆ ಮುಕ್ತನಾಗುವ ರೀತಿ ಇಲ್ಲಿದೆ. ಸೃಷ್ಟಿಯ ಮೂಲದಲ್ಲಿ ಪರಮಾತ್ಮನೆಂಬ ಏಕ ಸ್ವರೂಪವಿತ್ತು ಸರ್ವಕ್ಕೂ, ಸಕಲಕ್ಕೂ ಅತೀತವಾದ ಶಕ್ತಿಯಾಗಿತ್ತು. ಆ 'ಒಂದು' ದೇವ–ಜೀವ ಎಂಬ ಎರಡಾಗಿ ರೂಪಗೊಂಡಾಗ, ಲೋಕದಲ್ಲಿ ಜೀವಕ್ಕೆ ಅಭಿವ್ಯಕ್ತಿಯಾಗಿ ದೇಹವು ಸಾಕಾರಗೊಂಡು ಅದಕ್ಕೆ ಮಾಯಾ ಶಕ್ತಿ ಆವರಿಸಿ ಗುಣತ್ರಯಗಳು ತುಂಬಿಕೊಂಡು ಪಂಚೇಂದ್ರಿಯಗಳ ಮೂಲಕ ಅರಿಷಡ್ವರ್ಗಗಳು ಆವರಿಸಿ ಇನ್ನಿಲ್ಲದಂತೆ ಜೀವನನ್ನು ಪರಿವರ್ತಿಸಿಬಿಡುತ್ತದೆ. ಇನ್ನೆಂದು ಮರಳಿ ಜೀವ ತನ್ನ ಅರಿಯಲು ಸಾಧ್ಯವಾಗದೆ ಇರುವಂತಾಗುತ್ತದೆ. ಸಂಸಾರವೆಂಬ ಮಾಯಾ ಪ್ರಕ್ರಿಯೆಯನ್ನರಿತ ಅಲ್ಲಮ ಅವುಗಳ ಹಿಡಿತಕ್ಕೆ ಸಿಗದೆ ಪರಮಾತ್ಮನಲ್ಲಿ ಶರಣು ಹೋಗಿ ನಿರ್ಮಲನಾಗುತ್ತಾನೆ.

'ಮಾಯೆ' ಎಂಬ ಭಾವ ಜೀವನ ನಿಜ ಕುರುಹನ್ನು ಮರೆಯಿಸುತ್ತದೆ. ದೇವ-ತಾನು ಒಂದು ಅಥವಾ ಅಭಿನ್ನ ಎಂಬ ಭಾವವನ್ನು ಮನದಿಂದ ಮರೆಯಾಗಿಸುತ್ತದೆ. ಜೀವಾತ್ಮ ತಾನು ಪರಮಾತ್ಮನಿಂದ ಭಿನ್ನ ಎಂಬ ಹುಸಿ ಸತ್ಯವನ್ನು ನಂಬಿ ಬಾಹ್ಯದಲ್ಲಿ ಭಗವಂತನನ್ನು ಸ್ಮರಿಸುತ್ತಾನೆ. ಲೌಕಿಕ ಬದುಕು ಕಾರಣವಾಗಿ ಪರಮಾತ್ಮನಂತೆ ನಿರಾಕಾರವಾದ ಮಾಯೆ ಜೀವನ ಮೂಲಕ ಭವದಲ್ಲಿ ಸಾಕಾರ ರೂಪದಲ್ಲಿ ತನ್ನ ಕ್ರಿಯಾರೂಪದಲ್ಲಿ ವರ್ತಿಸುತ್ತದೆ. 'ಮಾಯೆ' ಎಂಬುದು ಜೀವಿಯ ಲೌಕಿಕ ವ್ಯಾಪಾರ ನೆಲೆಯಲ್ಲಿ ತೋರುತ್ತದೆ.

೫.೩೧ ಮನಸು: ಮಾಯೆ

"ಅಂಗವೆಂಬ ಸಂಸಾರದೊಳಗೆ ಸವೆದವರೆಲ್ಲರೂ ಶಿವನರಿವರೇ?
ಮನವೆಂಬ ಸಂಕಲ್ಪದ ಕುಣಿಕೆಗೆ ಒಳಗಾದವರೆಲ್ಲರೂ
ಮಾಯದ ಹೊಡೆಗಿಚ್ಚ ಗೆಲ್ಲಬಲ್ಲರೇ?
ಗುಹೇಶ್ವರ ಲಿಂಗದಲ್ಲಿ ಸರ್ವ ಸಂದೇಹವ ಕಳೆದಿಪ್ಪ
ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು"[೧೦೮]

ಅಂಗ ಸಂಸಾರವೆಂಬುದು ಕಾಮಾದಿ ಅರಿಷಡ್ವರ್ಗ. ಕರ್ಮೆಂದ್ರಿಯಗಳು ಪಂಚೇಂದ್ರಿಯಗಳು ಸಪ್ತಧಾತುಗಳೇ ಮೊದಲಾದವು ಅಜ್ಞಾನದ ಸಾರ ಸಂಪತ್ತು. ಇವುಗಳಿಗಾಗಿಯೇ ಇವುಗಳೊಳಗೆ ಜೀವನದ ಆಯುಷ್ಯವೆಲ್ಲ ಸವೆಸಿದವರಿಗೆ ಶಿವನ ಧ್ಯಾನ ಮಾಡಲು ಸಾಧ್ಯವೇ? ವೇಳೆಯೇ ಇಲ್ಲ. ಇದು ತಮ್ಮ ಜೀವನವನ್ನು ಅಂಗಸುಖಕ್ಕಾಗಿ ಮಾರಿಕೊಂಡವರ ದುರಂತ. ಹಾಗೆಯೇ ಮನಸ್ಸು ಎಂಬುದು ಬೆಳಕಿನ ಕಿರಣಗಳಿಗಿಂತಲೂ ವೇಗವಾಗಿ ಚಲಿಸುವ ವಿಷಯ ಸುಖಂಗಳ ತರಂಗ ಸಾಗರ. ಇಂತಹ ಮನಸ್ಸನ್ನು ಸಂಕಲ್ಪ ಮಾತ್ರದಿಂದಲೇ ಜಗದ ಮಾಯಾ ಕಿಚ್ಚನ್ನು ಗೆಲ್ಲುವುದು ದುರ್ಭರ. ಪಾರಮಾರ್ಥದ ಪಥವನ್ನು ಸಂದೇಹವಿಲ್ಲದೆ ಮುಟ್ಟುವಲ್ಲಿ ಮೊದಲು ವಿಕಾರಕ್ಕೆ ಎಡೆ ಮಾಡುವ ಅಂಗ ಸಂಸಾರ ಹಾಗೂ ಆಸೆಯ ಬಂಧನಗಳಲ್ಲಿ ಸಿಕ್ಕಿಸುವ ಮನವನ್ನು ಗೆಲ್ಲಬೇಕು. ತನು-ಮನಗಳ ಪ್ರಾಕೃತ ಭಾವವನ್ನು ಕಳೆದು ಅವುಗಳಿಗೆ ಶಿವ ಸಂಸ್ಕಾರವಿನ್ನಿತ್ತು ಸಂದೇಹವಿಲ್ಲದ ಚೆನ್ನಬಸವಣ್ಣನವರ ಸಿದ್ಧಿಯನ್ನು ಕಂಡು ಪ್ರಭುದೇವರು ಹರ್ಷ ಗೊಂಡಿದ್ದಾರೆ.[೧೦೯] ಕಾಯದ ಮೂಲಕ ಸಂಸಾರದಲ್ಲಿ ಸಿಲುಕಿದವರು ಪರಮಾತ್ಮನ ಸ್ವರೂಪವನ್ನು ಅರಿಯಲಾರರು. ಮನಸ್ಸಿನ ನೆಲೆಯಲ್ಲಿ ಎಡೆಪಡೆದ ವಿಷಯವಾಸನೆಗಳ ಸೆಳೆತಕ್ಕೆ ಸಿಲುಕಿದರೆಂದರೆ ಮಾಯೆಗೆ ಒಳಗಾದರೆಂದೆ ಅರ್ಥ. ಮಾಯೆಯ ಹೊಡೆಗಿಚ್ಚು ಎಂಬುದು ಅದರ ಪ್ರಾಬಲ್ಯವನ್ನು ಸೂಚಿಸುತ್ತವೆ. ಮೇಲೆ ಹೇಳಿದಂತೆ ಅಜ್ಞಾನದ ಸಾರ ಸಂಪತ್ತು ಮಾಯೆ ಎಂಬುದರ ಅಭಿವ್ಯಕ್ತಿ ರೂಪವಾಗಿದೆ. ಜೀವ ಅಶಕ್ತನಾಗಿ ತೋರಿದರೆ ಸಾಕು ಮಾಯೆ ಸುಲಭವಾಗಿ ಆವರಿಸಿ ಬಿಡುತ್ತದೆ. ಲೌಕಿಕದಲ್ಲಿದ್ದು ಮಾಯೆಯನ್ನು ಮೀರಿದ

ಸಾಧಕ ಚೆನ್ನಬಸವಣ್ಣ ಎಂಬ ಮಾದರಿಯನ್ನು ನಮ್ಮ ಮುಂದಿರಿಸಿದ್ದಾನೆ. ಅಂಗವೆಂಬುದು ಸಂಸಾರವಾಗಿ, ಅಂಗ ಸುಖಕ್ಕಾಗಿಯೇ ಸಂಸಾರವೆಂಬ ಸ್ಥಿತಿ ನಿರ್ಮಾಣ ವಾಗುತ್ತದೆ. ಅಂಗದ ಸುಖಕ್ಕೆ ಮನಸ್ಸು ಸ್ಪಂದಿಸುತ್ತದೆ. ಕಾಯ-ಮನಗಳೆರಡು ಒಂದಾಗಿ ಲೌಕಿಕವನ್ನು ಅನುಭವಿಸುತ್ತವೆ. ಆಧ್ಯಾತ್ಮಿಕ ಸಾಧನೆಗೆ ಸಮಯವಿಲ್ಲಾಗಿ ಪೂಜೆ-ಅರ್ಚನೆಯಲ್ಲಿ ಜೀವ ಕಾಲ ಕಳೆಯುತ್ತದೆ. ಜೀವ ಕ್ರಿಯಾವರ್ತನೆ ಸಾಮಾಜಿಕ ಸ್ತರದಲ್ಲಿ ರೂಪ ಪಡೆಯುತ್ತದೆ. ಅಂಗ-ಮನ-ಸಂಸಾರ ಎಲ್ಲವೂ ಮಾಯೆ ಆಗಿದೆ.

೫.೩.೨ ಅಗ್ನಿಸ್ವರೂಪಿ: ಮಾಯೆ

"ಕಾಡುಗಿಚ್ಚೆದ್ದರೆ ಅಡವಿಯೇ ಗುರಿ
ನೀರುಗಿಚ್ಚೆದ್ದರೆ ಸಮುದ್ರವೇ ಗುರಿ
ಒಡಲುಗಿಚ್ಚೆದ್ದರೆ ಆ ತನುವೇ ಗುರಿ
ಕಾಲಾಗ್ನಿ ಎದ್ದರೆ ಲೋಕಂಗಳೇ ಗುರಿ
ಶಿವಶರಣರ ಮನೆಯಲ್ಲಿ ಕೋಪಾಗ್ನಿಯೆದ್ದರೆ ನಿಂದಕರೆ ಗುರಿ
ಗುಹೇಶ್ವರ ನಿಮ್ಮ ಮಾಯದ ಹೊಡೆಗಿಚ್ಚಿಂಗೆ
ನಾನು ಗುರಿಯಲ್ಲ ಹೇಳಾ"[೧೧೦]

ಕಾಡು, ನೀರು ಒಡಲು, ಕಾಲಾಗ್ನಿ, ಕೋಪಾಗ್ನಿ, ಮಾಯೆ ಇವೆಲ್ಲವೂ ಮೂಲದ ಸ್ವರೂಪವನ್ನು ಬದಲಾಯಿಸುವ ಸಾಮರ್ಥ್ಯ ಉಳ್ಳವು. ಕಾಡಿನಲ್ಲಿ ಅಗ್ನಿ ಸಂಘರ್ಷವೆದ್ದರೆ ಅಡವಿ ಗುರಿಯಾಗುತ್ತದೆ. ನೀರಿನಲ್ಲಿ ಸಂಘರ್ಷವೆದ್ದರೆ ಸಮುದ್ರ ಗುರಿಯಾಗುತ್ತದೆ. ಒಡಲಿನಲ್ಲಿ ಸಂಘರ್ಷವೆದ್ದರೆ ದೇಹವೇ ಗುರಿಯಾಗುತ್ತದೆ. ಕಾಲದ ಸಂಘರ್ಷಕ್ಕೆ ಲೋಕ ಬಲಿಯಾಗುತ್ತದೆ. ಮಾಯೆಯ ಸಂಘರ್ಷಕ್ಕೆ ಸಾಮಾನ್ಯ ವ್ಯಕ್ತಿ ಅಥವಾ ದೇಹಿ ಬಲಿಯಾದಂತೆ ತಾನು ಬಲಿಯಾಗುವುದಿಲ್ಲ ಎಂದು ನೇರವಾಗಿ ಹೇಳುತ್ತಾನೆ.

ಮಾಯೆ ಎಂಬುದು ಶಿವನಿಂದ ಉದ್ಭವಗೊಂಡ ಶಕ್ತಿ. ಜಗತ್ತನ್ನು ಸೃಷ್ಟಿಸಿದ ಪರಮಾತ್ಮ ಈ ಲೋಕದ ನಿಯಂತ್ರಣಕ್ಕೆ ಮಾಯೆ ಎಂಬ ಶಕ್ತಿಯನ್ನು ಬಿಡುತ್ತಾನೆ. ಅದು ಲೋಕದ ಜೀವಿಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ಲೌಕಿಕ ಬಳ್ಳಿ ಹಬ್ಬುವಂತೆ ಮೂಡುವುದು ಪ್ರಕೃತಿ ಸಹಜ ಪ್ರಕ್ರಿಯೆ ಆಗಿದೆ. ಆದರೆ ಲೌಕಿಕದಲ್ಲಿ ಬದುಕುವ ಮನುಜ ಅತಿಯಾದ ಮೋಹವನ್ನು, ಭ್ರಮೆಯನ್ನು ಬೆಳೆಸಿಕೊಂಡಾಗ ಈ ಮಾಯೆ ತನ್ನ ವ್ಯಾಪಕ ಪ್ರಭಾವವನ್ನು ಬೀರಿದೆ ಎಂದರ್ಥ. ಇಂತಹ ಪ್ರಭಾವದಿಂದ ದೇಹಿ ಬಿಡಿಸಿಕೊಳ್ಳಬೇಕೆಂದರೆ ನಿಜಾತ್ಮದ ಕುರುಹನ್ನು ಅರಿಯಬೇಕು. ಶಿವನ ಮೂಲಕ ಉದಿಸಿದ ಪ್ರಬಲಶಕ್ತಿ ಮಾಯೆ ಅಗ್ನಿಯಂತೆ ಬಿಡದೆ ಆವರಿಸುತ್ತದೆ.

೫.೩೩ ಮಂಜು: ಮಾಯೆ

"ಅನಲನಾರಣ್ಯದೊಳಗೆದ್ದಲ್ಲಿ ಮರದೆಡೆಯಲಾರನೋ ಕಾಣೆ
ಸಂಗ್ರಾಮಧೀರರೆಲ್ಲರೂ ನೆಲೆಗೆಟ್ಟರಾಗಿ
ಮಾಯಾಮಂಜಿನ ಕೋಟೆಗೆ ರಂಜನೆಯ ಕೊತ್ತಳ
ಆಂಜನೆಯ ಕಟ್ಟಳೆ ಗುಹೇಶ್ವರನ ಶರಣ
ಐಕ್ಯಸ್ಥಲವ ಮೆಟ್ಟಲೊಡನೆ
ಸರ್ವವು ಸಾಧ್ಯವಾಯಿತ್ತು" [೧೧೧]

'ಭವವೆಂಬ ಅರಣ್ಯದೊಳಗೆ ತಾಪತ್ರಯಾಗ್ನಿ ಎದ್ದು ಸುಡುತ್ತಿರಲು ಮಾಯೆಯ ಮಂಜಿನ ರಂಜನೆಯ ಕಾಹು ಕಟ್ಟಿನೊಳಗಿದ್ದು ಅದ್ವೈತವ ಸ್ಥಾಪಿಸಿಹೆನೆಂಬ ಧೀರರೆಲ್ಲರು ಮುಂದುಗೆಡುತ್ತಿದ್ದರು. ಅಸಾಧ್ಯ ಸಾಧಕ ನಿಜ ಲಿಂಗೈಕ್ಯ ಶರಣನು ಸ್ವಭಾವಸ್ಥಲದಲ್ಲಿ ನಿಲಲೊಡನೆ ನಿರಾಳವು ಸಾಧ್ಯವಾಯಿತು.'[೧೧೨]

'ಭವವು ಭಯಂಕರವಾದ ಅರಣ್ಯ. ಅದು ತ್ರಿತಾಪಗಳಿಂದ ಹೊತ್ತಿ ಉರಿಯುತ್ತಲಿದೆ. ಬದುಕಿನಲ್ಲಿ ನಿಂತು ಈ ದುಃಖಗಳೆನ್ನೆದುರಿಸಿ ಅವುಗಳನ್ನು ಶಾಂತಗೊಳಿಸುವ ಧೀರರು ಅಪರೂಪ. ಬಹುತೇಕ ಎಲ್ಲರೂ ಭವದುಃಖಕ್ಕೆ ಒಳಗಾದವರು, ಇಲ್ಲವೇ ಪಲಾಯನ ಗೈದವರು.'[೧೧೩] ಮಾಯೆಯೆಂಬ ಶಕ್ತಿಯಿಂದ ಆವೃತವಾದ ದೇಹ ಎಂಬ ಕೋಟೆ ವಿವಿಧ ಆಕರ್ಷಣೆ ವಿಲಾಸಗಳಿಂದ ತುಂಬಿದೆ. ಅದಕ್ಕೆ ಅಷ್ಟಮದಗಳ ಕಾವಲು ಇದೆ. ಅದರಿಂದ ಬಿಡಿಸಿಕೊಂಡು ಹೊರ ಬರುವ ಶಕ್ತಿಯ ದೇಹಿಗಿಲ್ಲ. ದೃಢ ಮನಸ್ಸುಳ್ಳ ಜೀವನು (ಶರಣನು) ನಿರ್ಮಲ ಭಕ್ತಿಯಿಂದ ಮಂಜಿನ ಕೋಟೆಯನ್ನು ಕರಗಿಸಿ ಹೊರ ಬಂದು ಪರಮಾತ್ಮನಲ್ಲಿ ಐಕ್ಯನಾಗಬಲ್ಲ. ಆಗ ಅಸಾಧ್ಯವಾದ ಪರಮಾತ್ಮನ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ. ಲೌಕಿಕದ ಸೆಳೆತದಿಂದ ಬಿಡಿಸಿಕೊಳ್ಳುತ್ತಾನೆ.

ಇಲ್ಲಿ ಕಾಡಿಗೆ ಬೆಂಕಿ ಹತ್ತಿದಾಗ ಯಾವ ವೀರನು ಎದುರಿಸಿ ನಿಲ್ಲಲಾರ ಹಾಗೆ ಮಾಯೆ ಎಂಬ ಶಕ್ತಿಯ ಹಿಡಿತಕ್ಕೆ ಸಿಲುಕಿದ ಮನುಜನು ಅದರಿಂದ ಬಿಡಿಸಿಕೊಳ್ಳಲಾರ. ಸಂಗ್ರಾಮಧೀರ ಮತ್ತು ಶರಣಧೀರ ಇವರಿಬ್ಬರ ಹೋಲಿಕೆಗಳ ಮೂಲಕ ವಚನವನ್ನು ಪ್ರಸ್ತಾಪಿಸಿದ್ದಾರೆ. ಈ ಸೃಷ್ಟಿಯಲ್ಲಿ ಮಾಯೆ ಶಾಶ್ವತವಾದುದು. ನಿರ್ಮಲಭಕ್ತಿಯುಳ್ಳ ಶರಣನಲ್ಲಿ ಮಾತ್ರ ಮಾಯೆ ತಾತ್ಕಾಲಿಕವಾದುದಾಗಿರುತ್ತದೆ. ಸೂರ್ಯನ ಬಿಸಲಿಗೆ ಕರಗುವ ಮಂಜಿನಂತೆ ಕ್ಷಣಿಕವಾಗಿರುತ್ತದೆ. ಜೀವನ ದುರ್ಬಲನಾದರೆ ಮಾಯೆ ಪ್ರಬಲ, ಜೀವ ಪ್ರಬಲನಾದರೆ ಮಾಯೆ ದುರ್ಬಲವಾಗುತ್ತದೆ.

"ಮಾಮರದೊಳಗೊಂದು ಮಾಯದ ಮಂಜು ಕವಿದರೆ
ಹೂಮಿಡಿ, ಫಲಗಳು ಉದುರುವಿನ್ನೆಂತೋ!

ಮಂಜಿನ ರಸವನುಂಡು ಫಲನಿಮಿರ್ದು ಬೆಳದರೆ
ಆ ಫಲವ ನಾನು ಮುಟ್ಟೆನು ಕಾಣಾ ಗುಹೇಶ್ವರಾ"[೧೧೪]

'ಮಾಮರವೆಂದೊಡೆ ವಿವೇಕವೆಂಬ ವೃಕ್ಷ. ಆ ವಿವೇಕವೆಂಬ ವೃಕ್ಷದ ಮೇಲೆ ಅಜ್ಞಾನವೆಂಬ ಮಂಜು ಕವಿಯಲು ಆ ಜ್ಞಾನಾಜ್ಞಾನವಿಡಿದು ಅರಿದ ಅರಿವಿನಿಂದ ಚತುರ್ವಿಧ ಫಲಗಳು ಬೆಳೆದವು. ಇಂತಪ್ಪ ಫಲಪ್ರಾಪ್ತಿಯಿಂದ ಭವಂಗಳು ಬಂದು ಕಾಡುವವು ಎಂದರಿದು ನಿಜದಿಂದ ತನ್ನ ತಾನರಿಯಲು ಆ ಫಲಪದಂಗಳು ಕೆಡುವವು.'[೧೧೫] ಜ್ಞಾನ–ಅಜ್ಞಾನದ ಪರಿಣಾಮವನ್ನು ವಿವರಿಸುತ್ತದೆ. ಅಜ್ಞಾನದ ಕಾರಣಕ್ಕೆ ಜೀವ ವಿವೇಕರಹಿತವಾಗಿ ವರ್ತಿಸುವನು. ಅಜ್ಞಾನವೇ ಮಾಯೆ ಆಗಿದೆ. ಅಜ್ಞಾನವು ಮನುಜನ ಬುದ್ಧಿಯನ್ನು ಆವರಿಸುವ ರೀತಿಗೆ ಮಂಜು ಮಾವಿನ ಮರವನ್ನಾವರಿಸುವ ರೀತಿಗೆ ಹೋಲಿಸಿದ್ದಾರೆ. ಪ್ರಕೃತಿ ಸಹಜ ಪ್ರಕ್ರಿಯೆಯನ್ನು ಮಾಯೆಯ ಸ್ವರೂಪವನ್ನು ಅರ್ಥೈಸಲು ಬಳಸಿಕೊಂಡಿದ್ದಾರೆ.

'ವಿವೇಕವೆಂಬುದೇ ಮಾವಿನಮರ. ಅದರ ಮೇಲೆ ಅಜ್ಞಾನವೆಂಬ ಮಂಜು ಕವಿಯಲು ಮಾವಿನ ಹೂ ಉದುರಬೇಕಾಗಿತ್ತು. ಆದರೆ ಇಲ್ಲಿ ಅವು ಮಂಜಿನ ರಸವನ್ನೇ ಉಂಡು ಬೆಳೆಯುತ್ತವೆ. ಅಂದರೆ ಚತುರ್ವಿದ ಫಲಗಳು ಅಜ್ಞಾನದಿಂದ ಪುಷ್ಟಿಗೊಳ್ಳುತ್ತವೆ. ಇದರಿಂದ ಸಂಸಾರ ಬಂಧನ ಕಾಡುತ್ತದೆ ಎಂಬುದನ್ನು ತಿಳಿದು ಆ ಹಣ್ಣುಗಳನ್ನು ಮುಟ್ಟದಿದ್ದರೆ ಆ ಫಲ ನಾಶವಾಗಿ ಮಾಯೆ ಹರಿಯುತ್ತದೆ.[೧೧೬]

ಜೀವನನ್ನು ಮಾಯದ ಮಂಜು ಕವಿದರೆ ಸಾಕು. ಜೀವ ಹಂತ ಹಂತವಾಗಿ ವಿಷಯ ಸುಖಗಳ ಸೆಳೆತಕ್ಕೆ ಸಿಕ್ಕು ಅದರಲ್ಲಿ ತೊಳಲುವಂತೆ ಮಾಡುತ್ತದೆ. ಹೂ, ಮಿಡಿ, ಹಣ್ಣುಗಳು ಮಾಯಾ ಶಕ್ತಿಯ ಆಶ್ರಯದಲ್ಲಿ ಮತ್ತಷ್ಟು ರಸಭರಿತವಾಗುತ್ತದೆ.

ಪ್ರಕೃತಿ ಸಹಜ ಕ್ರಿಯೆಯಲ್ಲಿ ನಡೆವುದು ಇಲ್ಲಿ ವೈರುಧ್ಯಯಗೊಂಡಿದೆ. ಮಾಯೆ ಎಂಬುದು ಮಂಜಿನಂತೆ ಕ್ಷಣಿಕವಾದರೂ ಅದರ ಪರಿಣಾಮ ನಿರಂತರವಾದದು. ಜೀವನ ಮನಸ್ಸನ್ನು ಆಕ್ರಮಿಸುವ ಮಾಯೆ ಮೋಹದ ರೂಪದಲ್ಲಿ, ಸ್ವಾರ್ಥದ ರೂಪದಲ್ಲಿ, ಅಹಂಮಿಕೆಯ ರೂಪದಲ್ಲಿ ಮೂಡಿ ಸಂಸಾರ ಸುಖದಲ್ಲಿ ಮುಳುಗುವಂತೆ ಮಾಡುತ್ತದೆ. ಲೋಕದ ಮಧ್ಯದಲ್ಲಿ ಜಂಗಮಿಯಾದ ಅಲ್ಲಮ ಅಂತಹ ಫಲದಿಂದ ದೂರ ಉಳಿದು ಭಗವಂತನ ಸಾಕ್ಷಾತ್ಕಾರಗೊಳಿಸಿಕೊಳ್ಳುತ್ತಾನೆ.

"ಮಾಯಾ ಮಂಜಿನ ಸಂಗ್ರಹದ ಘಟಾನುಘಟಿತರೆಲ್ಲರೂ
ಕುಂಜರನ ಪಂಜರದಲ್ಲಿ ಸಂಜೀವಿತರಾಗಿಪ್ಪರು
ಎಂಜಲನುಂಡುಂಡು ಬಂದು ಅಂಜದೆ ನುಡಿವುತ್ತಿಪ್ಪರಾ
ರಂಜನೆಗೊಳಗಪ್ಪುದೇ?
ಅರಗದ ಸಂಚವನರಿಯರು ರಂಜಕನೂ ಅಲ್ಲ ಭುಂಜಕನೂ ಅಲ್ಲ
ಗುಹೇಶ್ವರ, ನಿಮ್ಮ ಶರಣ ಸಂಜೀವನರಹಿತನು"[೧೧೭]

ಮಾಯಾ ಮಿಥ್ಯವನೆ ಸಂಗ್ರಹಿಸಿಕೊಂಡಿಪ್ಪ ತನುವಿಡಿದಿಪ್ಪವರೆಲ್ಲರೂ ಅಹಂಕಾರದಲ್ಲಿ ಸಂಬಂಧಿಗಳಾಗಿಪ್ಪರು. ಇಂತಪ್ಪ ಅಜ್ಞಾನದೇಹಿಗಳು ಭವಭಯಗಳಲ್ಲಿ ಉಂಡುಂಡು ಮಿಕ್ಕ ಪ್ರಾರಬ್ಧ ಕರ್ಮದ ಎಂಜಲನೆ ಉಣ್ಣುತ್ತ ಮತ್ತೆ ಬ್ರಹ್ಮದ ಅಭ್ಯಾಸದ ಎಂಜಲ ಮಾತುಗಳ ಕಲಿತು ಬಂದು ಅನುಭಾವವ ನುಡಿವುತ್ತಿಪ್ಪರು. ಅಂತಪ್ಪ ವಾಗದ್ವೈತರಂಜನೆಗೆ ಬ್ರಹ್ಮವು ಸಿಕ್ಕಲರಿಯದೆ, ಆಗರವೆಂದೊಡೆ ಸುಖ. ಆ ಸುಖದ ಸಂಚವನಾರಿಗೂ ಅರಿಯಬಾರದು. ಇಂತಪ್ಪ ಡಾಂಭಿಕಗುಣವ ನಿವೃತ್ತಿ ಮಾಡಿ, ಭೋಕ್ತೃಕರ್ಮ ಹರಿತವಾಗಿಪ್ಪಾತನೆ ಅಚ್ಚ ಶರಣನು.[೧೧೮] ಈ ಮೇಲಿನ ವಿವರಣೆ ಆಧ್ಯಾತ್ಮಿಕ ವಿಶ್ಲೇಷಣೆಗೆ ಪೂರಕವಾಗಿದೆ. ದೇಹ ವೆಂಬುದು ಮಾಯೆ ಎಂಬ ಮಂಜಿನಿಂದ ಆವರಿಸಲ್ಪಟ್ಟಿದೆ. ಮಹಾವ್ಯಕ್ತಿಗಳೆಲ್ಲರು ಇಂತಹ ದೇಹವನ್ನು ಧರಿಸಿದವರು. ಅಹಂಕಾರವೆಂಬ ಭಾವ ಪಂಜರದಲ್ಲಿ ಅವರೆಲ್ಲ ಬಂಧಿತ ರಾಗಿದ್ದಾರೆ. ಶಾಶ್ವತವಾಗಿ, ಕರ್ಮ ಫಲಭೋಗಗಳನ್ನು ಮತ್ತೆ ಮತ್ತೆ ಸವಿದು ಹಿಂದೆ ಮುಂದೆ ನೋಡದೆ ಮಾಯಾರಹಿತ ಬ್ರಹ್ಮದ ಮಾತುಗಳನ್ನಾಡುತ್ತಾರೆ. ಬ್ರಹ್ಮವೇನು ರಂಜಕದ ಮಾತುಗಳಿಗೆ ಒಳಗಾಗುವಂಥದೇ? ಅದು ಸರ್ವಮೂಲ. ಸತ್ತು, ಚಿತ್ತು, ಆನಂದಗಳ ಸಾಗರ. ಆದರ ಸ್ವರೂಪವನ್ನು ಅವರು ಅರಿಯರು. ಶರಣನು ಮಾತ್ರ ಬರಿ ಮಾತಿನ ಸವಿಗಾರನೂ ಅಲ್ಲ. ಕರ್ಮಫಲಭೋಗಾಸಕ್ತನೂ ಅಲ್ಲ. ಅವನು ದೇಹ ಪ್ರಾಣಗಳ ಭಾವವಿರಹಿತ, ಸದಾ ಮುಕ್ತ.'[೧೧೯] ಈ ವಿವರಣೆ ಮೂಲಕ ನಿಜ ಶರಣನ ಸ್ವರೂಪ ಅರಿವಿಗೆ ಬರುತ್ತದೆ. ಕರ್ಮಮುಕ್ತ ನಾದವನಾಗಿ ಭಾವರಹಿತನಾಗಿ ವರ್ತಿಸುವನು. ನಿಜವಾದ ಸಾಧಕನಲ್ಲಿ ಇರುವ ಮಾಯೆ ಕ್ಷಣಿಕ. ಮಂಜಿನ ಆಯುಷ್ಯ ತೀರಾ ಕ್ಷಣಿಕ. ಇಂತಹ ಕ್ಷಣಿಕದ ಸಮೂಹದ ಅಭಿವ್ಯಕ್ತಿ ಈ ಕಾಯ. ಈ ಕಾಯದಲ್ಲಿ ಜೀವ ಉಳಿಯುವಂತೆ ಮಾಡುವ ಶಕ್ತಿ ಮಾಯೆಗಿದೆ. ಜೀವನಲ್ಲಿಯ ನೆಲೆಗೊಂಡ ಆತ್ಮ ಚೈತನ್ಯದ ಅರಿವು ಮೂಡಿದರೆ ಮಾಯೆಯ ಪ್ರಾಬಲ್ಯ ಕ್ಷಣ ಮಾತ್ರದಲ್ಲಿ ಮಂಜಿನಂತೆ ಕರಗಿ ಹೋಗುತ್ತದೆ ಎಂಬ ಸತ್ಯವನ್ನರಿಯದೆ ಜೀವ ಲೌಕಿಕವನ್ನು ಹೆಚ್ಚು ಇಷ್ಟಪಡುತ್ತಾನೆ. ಮಾಯೆ ಮಂಜಿನ ನೆಲೆಯಲ್ಲಿ ಅರ್ಥೈಸಲ್ಪಟ್ಟಿದೆ.

"ಮಾಯಾ ಮಂಜಿನ ಜಲ ಉಕ್ಕಿ ಸಂಸಾರಕ್ಕೆ ಬೀಜವಾಗಿ
ಘಟಾಘಟಿತರ ಲಯ ಜನನವ ತನ್ನೊಳಗೆ ಮೂಡಿಸಿ
ಕುಂಜರ ಬಂದು ಸಿಂಹಾಸನವ ಸೀಳಿದಂತೆ
ನಿನ್ನಂಗದಲ್ಲಿ ನಿನ್ನನೇ ಕೊಲುವುದಾಗಿ
ರಂಜನೆಗೆ ಸಿಲುಕುಗೊಳಿಸಿ ಮಂಜಿನ ರಂಜಕನ ಮೂಡದ ಮುನ್ನ
ನಿರಂಜನನಾಗು ಕಂದಾ ನೀನು!
ನೀನಂಜದೆ ನೆನೆ ಕಂಡಾ ಗುಹೇಶ್ವರನ"! [೧೨೦]

ಈ ಜಗತ್ ಸೃಷ್ಟಿಯಲ್ಲಿ ಶಿವನಿಂದ ಉತ್ಪತ್ತಿಗೊಂಡ ಮಾಯೆ ಸರ್ವವ್ಯಾಪಕವಾದದು. ಇದು ಜೀವನನ್ನು ಆವರಿಸಿ ಲೌಕಿಕ ವಿಷಯಗಳಲ್ಲಿ ವಿರಮಿಸುವಂತೆ ಮಾಡುತ್ತದೆ. ಮಾಯೆ ಎಂಬ ಶಕ್ತಿ ಸಂಸಾರದ ವ್ಯಾಪಕತೆಗೆ ಕಾರಣವಾಯಿತು. ಇದರ ಕೈಯಲ್ಲಿ ಶ್ರೇಷ್ಠರು, ವಿದ್ವಾಂಸರು ಎನಿಸಿಕೊಂಡವರ ಹುಟ್ಟು-ಸಾವುಗಳಿವೆ. ಲೌಕಿಕದಲ್ಲಿದ್ದುಕೊಂಡು ಜೀವನನ್ನು ಸಿಲುಕಿಸುವ ಮುನ್ನ ಪರಮಾತ್ಮನನ್ನು ಅರಿಯಬೇಕಾದ ಅಗತ್ಯವನ್ನು ಈ ವಚನದ ಮೂಲಕ ವಿವರಿಸಲಾಗಿದೆ. ಈ ವಚನದಲ್ಲಿ ಮಾಯೆಗೆ ಸಿಲುಕಿ ಸಂಸಾರದಲ್ಲಿ ಉಳಿಯದೆ ಪರಮಾತ್ಮನನ್ನು ಸ್ಮರಿಸಿ ಅದರಿಂದ ಮುಕ್ತನಾಗು ಎಂಬ ಆಧ್ಯಾತ್ಮಿಕ ಆಶಯವಿದೆ. ವಾಸ್ತವದಲ್ಲಿ ಮಾಯೆ ಸಬಲವೂ, ದುರ್ಬಲವೂ ಆಗಿದೆ. ಅದರಂತೆ ಮನುಜನ ಮನಸ್ಥಿತಿಯಲ್ಲಿ ಸಬಲತ್ವ ದುರ್ಬಲತ್ವವಿದೆ. ಮನುಷ್ಯನಲ್ಲಿ ದೌರ್ಬಲ್ಯವಿದ್ದಾಗ ಸಹಜವಾಗಿ ಮಾಯೆಯ ಕ್ರಿಯಾ ಸ್ವರೂಪ ಪ್ರಬಲವಾಗಿ ಕಾಣುತ್ತದೆ.

೫.೩೪ ವಿಷಯವಾಸನೆ : ಮಾಯೆ

"ಕೊಂಡ ಆಹಾರದ ರಸವ ಕಟ್ಟಿ ಯೋಗಿಗಳಾದವೆಂಬ
ಭಂಡರು ನೀವು ಕೇಳಿರೋ
ಜೋಡು ದೇಹದ ಮಲಿನವ ಕಟ್ಟಿ ಮಾಯೆಯ ಗೆದ್ದಹೆವೆಂಬುದು
ಬಿಂದುವಿನ ಸಂಚವನಿವರೆತ್ತ ಬಲ್ಲರು?
ಮನದ ಮಲಿನವೆ ಮಾಯೆ
ಮನದ ಸಂಚವೆ ಬಿಂದು
ಇಂತಪ್ಪ ಬಿಂದುವ ಕಟ್ಟಿ ಮಾಯೆಯ ಗೆಲಲರಿಯದವರು
ಅವರೆತ್ತಣ ಯೋಗಿಗಳು ಗುಹೇಶ್ವರಾ?"[೧೨೧]

ಮನೋವ್ಯಾಕುಲವೆಂಬ ಬಿಂದುವ ನಿಗ್ರಹಿಸಿ ಅವಿದ್ಯಾಮಲವೆಂಬ ಮಾಯೆಯ ಜಯಿಸಲರಿಯದ ಜಿತೇಂದ್ರಿಯ ಪುರುಷರೆಲ್ಲರೂ ಅತಿರತಿ ಇಂದ್ರೀಯವಂತರಾಗಿ ಮಾಯಾ ಪಾಶದಲ್ಲಿ ಬಿದ್ದರು.[೧೨೨] ಲೌಕಿಕ ಭವಿಗಳು ಬಾಹ್ಯದ ಭಕ್ತಿ ಆಡಂಬರ ತೋರುವ ಪರಿ ಇಲ್ಲಿದೆ. ವ್ರತ, ಉಪವಾಸ, ಮತ್ತು ತಪಸ್ಸಿನ ಮೂಲಕ ಯೋಗ ಸಾಧನೆ ಮಾಡಿದೆವೆಂದು ಹೇಳುವುದು ಹಾಗೂ ಗಂಡು-ಹೆಣ್ಣೆಂಬ ದೇಹಗಳನು ದಾಂಪತ್ಯದಲ್ಲಿ ಬೆಸೆದು ಮಾಯೆಯನ್ನು ಗೆಲಲು ಸಾಧ್ಯ ಎಂದು ಹೇಳುವುದು ಕೇವಲ ಮಾತಿನ ಆಡಂಬರವೆ ಹೊರತು ನಿಜದಲ್ಲಿ ಅದು ಅಸಾಧ್ಯವಾದುದಾಗಿದೆ.

ನಿಜಯೋಗಿಯಾಗಲು ಬಾಹ್ಯ ಆಚರಣೆ ಬೇಕಿಲ್ಲ. ಮಾನಸಿಕ ದೃಢತ್ವವಿದ್ದರೆ ಸಾಕು. ಬಾಹ್ಯದಲ್ಲಿ ಯೋಗಿಯಂತೆ ಆಚರಣೆ ಕೈಗೊಂಡು ಅಂತರಂಗದಲ್ಲಿ ವಿಷಯ ವಾಸನೆಗಳು ಸುಳಿದಾಡುತ್ತಿದ್ದರೆ ಬಾಹ್ಯದ ಯೋಗ ವ್ಯರ್ಥ. ಶಿವಯೋಗ ಸಾಧನೆಯಲ್ಲಿ

ತೊಡಗಬೇಕಾದ ಜೀವ ಅಂತರಂಗವನ್ನು ನಿರ್ಮಲಗೊಳಸಿ ಕೊಳ್ಳಬೇಕು. ಮನದಲ್ಲಿ ವಿಷಯಕಗಳು ಆವರಿಸಿದರೆ. ಅದೆ ಮಾಯೆ ಆವರಿಸುವಂತೆ, ಮನದ ಚಾಂಚಲ್ಯ ವನ್ನು ನಿಯಂತ್ರಿಸಬೇಕಾದರೆ ಅದು ವಿಷಯವಾಸನೆಗಳಿಂದ ಮುಕ್ತವಾಗಿರಬೇಕು. ಆಗ ಮಾತ್ರ ಯೋಗ ಸಾಧನೆ ಸಾಧ್ಯ. ಇಲ್ಲವಾದರೆ ಆತನು ಯೋಗಿಯೆಂದು ಹೇಳಿಕೊಂಡು ತಿರುಗುವ ಢಾಂಬಿಕನಾಗುತ್ತಾನೆ. ಇಲ್ಲಿ ಮಾಯೆ ಮನದಲ್ಲಿ ಮೂಡುವ ವಿಷಯ ವಾಸನೆಯಾಗಿದೆ.

೫.೩೫ ನಾನು: ಮಾಯೆ

"ಇನ್ನೇವೆ, ಇನ್ನೇವೆ?
ಇದು ಮುನ್ನ ಮಾಯದಲಾದ ಭೂತದಲಿಂಗ
ಅಗಲಲಾಗದ ಮುನ್ನ ಆರೋಗಣೆಯಾಯಿತ್ತು
ಕೈದೊಳೆಯದ ಮುನ್ನ!
ಮುಂಜಾವು ಹೊತ್ತು ನಾನಾಗದ ಮುನ್ನ ತಾನೆಯಾಯಿತ್ತು
ಗುಹೇಶ್ವರ ಲಿಂಗವೆನ್ನೊಳಗಡಗಿತ್ತು!" [೧೨೩]

ಲೌಕಿದ ಸೆಳೆತಕ್ಕೆ ಸಿಗದೆ ನಿತ್ಯ ಮುಕ್ತನಾದ ರೀತಿಯಲ್ಲಿ ವಿವರಿಸಲಾಗಿದೆ. ನಿಜ ಶರಣತ್ವವನ್ನು ಸಾಧಿಸುವ ಹಾದಿಯಲ್ಲಿ ಅಂತರಂಗದ ಲಿಂಗ ಬಾಹ್ಯದಲ್ಲಿ ರೂಪಗೊಂಡಿತ್ತು. ಆದರೆ ಅದು ಕ್ಷಣಿಕ. ನಾನು–ನೀನು ಎಂಬ ಭಾವ ಜೀವ–ದೇವನಲ್ಲಿ ಮೂಡುವ ಮೊದಲೇ ಐಕ್ಯವಾಗಿತ್ತು. ಅಜ್ಞಾನದ ತೆರೆಕವಿಯುವ ಮೊದಲೇ ಜ್ಞಾನದ ಬೆಳಗು ತನ್ನೊಳಗೆ ಮೂಡಿ ಲಿಂಗ ತಾನಾಗಿ ನೆಲೆಗೊಂಡಾಗ ನಾನು ಎಂಬ ಭಾವ ಉಳಿಯಲು ಸಾಧ್ಯವಿಲ್ಲ.

ಮಾಯಾ ಭಾವದ ಸೆಳೆತಕ್ಕೆ ಒಳಗಾಗದಂತೆ ಜ್ಞಾನದ ಅರಿವು ಮೂಡಿತ್ತು. ವರ್ತಮಾನದಲ್ಲಿ ಲಿಂಗ ರೂಪದ ಮಾಯಾಭಾವ ನಶಿಸಿಹೋಗಿತ್ತು ಎಂಬುದು ಇದರ ತಾತ್ಪರ್ಯವಾಗಿದೆ. ಇಲ್ಲಿ ಮಾಯಾ ಭಾವ ಜೀವನ ದೃಢ ಭಕ್ತಿಯ ಭಾವದ ಮುಂದೆ ದುರ್ಬಲವಾಗಿ ತೋರುತ್ತದೆ.

"ದೇಹಭಾವವಳಿದಲ್ಲದೆ ಜೀವಭಾವವಳಿಯದು
ಜೀವಭಾವವಳಿದಲ್ಲದೆ ಭಕ್ತಿ ಭಾವವಳವಡದು
ಭಕ್ತಿ ಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹ ನಷ್ಟವಾಗದು
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು
ಇದು ಕಾರಣ ಕಾಯದಿ ಜೀವದ ಹೋಲಿಗೆಯುಳಿವ ಭೇದವ
ತಿಳಿಯಬಲ್ಲರೆ ಗುಹೇಶ್ವರ ಲಿಂಗದರಿವು ಸಾಧ್ಯವಾಪ್ಪದು
ಕಾಣ ಸಿದ್ಧರಾಮಯ್ಯ" [೧೨೪]

ಎಲ್ಲ ಸಾಧಕರೂ ಮನನ ಮಾಡುವಂತಹ ಮಾತು ಇದಾಗಿದೆ. ಕಾಯದ ಜೀವದ ಹೋಲಿಗೆ ಅಳಿಯಬೇಕು ಎಂಬ ಭೇದವನು ತಿಳಿದವನಿಗೆ ಗುಹೇಶ್ವರಲಿಂಗದ ಅರಿವು ಸಾಧ್ಯವಾಗುತ್ತದೆಂದು, ಅದಕ್ಕೆ ಸಾಧಿಸಬೇಕಾದ ಹಂತಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಶಿವಯೋಗ ಸಾಧನೆಯಲ್ಲಿ ಕೈಗೊಳ್ಳಬೇಕಾದದು ಉರ್ಧ್ವಮುಖ ಚಲನೆಯನ್ನು. ಮಾಯೆಯನ್ನು ಹಿಂಗಿಸಲು ಒಂದೇ ಸಾರಿ ಸಾಧ್ಯವಿಲ್ಲ. ಹಂತಹಂತವಾಗಿ ಕಳೆದುಕೊಳ್ಳುತ್ತಲೇ ಪಡೆಯುವ ಕ್ರಿಯೆ ಸಾಗುತ್ತದೆ.ಜೀವಭಾವ ಅಳಿಯುವ ಮೊದಲು ದೇಹಭಾವವು ಕಳೆದುಹೋಗಬೇಕು. ಭಕ್ತಿ–ಭಾವ ಮೂಡಿದಾಗ ಜೀವಭಾವ ಅಳಿದು ಅರಿವು ಮೂಡುತ್ತದೆ. ದೇಹದ ಕುರುಹು ಕಳೆದು ಜೀವದ ನಿಜ ಸ್ವರೂಪ ಅರಿವಿಗೆ ಬಂದಾಗ ಮಾಯೆ ಅಳಿಯುತ್ತದೆ ಆಗ ಜೀವ ಶಿವಯೋಗ ಸಾಧನೆಗೆ ಕಾಯ ಕೇವಲ ಮಾಧ್ಯಮ ಎಂಬುದನ್ನು ತಿಳಿಯುತ್ತಾನೆ. ಜೀವ ನಿರ್ಮಲ ಶುದ್ಧಾತ್ಮ ಎಂದು ಪರಿಭಾವಿಸುತ್ತಾನೆ. ಈ ಹಂತಕ್ಕೆ ತಲುಪಿದಾಗ ಅಂತರಂಗ ಸತ್ಯ ಸ್ವರೂಪಿ ಪರಮಾತ್ಮನ ಕುರುಹು ಮೂಡುತ್ತದೆ ಮಾಯೆ ಎಂಬುದು ಎಷ್ಟೆ ಪ್ರಬಲಶಕ್ತಿಯಾದರೂ ಈ ಹಂತಗಳ ಮೂಲಕ ಅದನ್ನು ನಿವಾರಿಸಿಕೊಳ್ಳಬಹುದು.

ಇಲ್ಲಿ ಮಾಯೆ ಜೀವದ ನಿಜ ಕುರುಹನ್ನು ಮರೆಸುವ ಭ್ರಮೆಯಾಗಿದೆ. ಆಧ್ಯಾತ್ಮಿಕ ನೆಲೆಯಲ್ಲಿ ನಿಂತು ಮಾಯಾ ಭಾವ ಸ್ಪಷ್ಟಗೊಳಿಸಲು, ಜೀವದ ಸ್ವರೂಪ ತಿಳಿಯಲು ಪ್ರಯತ್ನಿಸಲಾಗಿದೆ. ಸಾಮಾಜಿಕವಾಗಿ ಮನುಜ–ಮನುಜರನ್ನರಿಯಲು ನಾನು ಎಂಬ ಭಾವ ಮಾಯೆ ತಡೆಯಾಗಿ ಪರಿಣಮಿಸುತ್ತದೆ.

"ಕಾಯ ಸತಿಯೆಂದು ಹೇಸಿ ಕಳೆದೆ
ವಾಯದ ಮನ ಮಾಯೆಯಂದು ಹೇಸಿ ಬಿಟ್ಟೆ
ವಾಯದ ಸತಿಯೆಂಬ ಸಂದೇಹವೆಮಗೇಕೆ?
ಸತಿಯರ ಗೋಷ್ಠಿ ವಿಷ ಕಾಣವ್ವಾ
ಗುಹೇಶ್ವರ ಲಿಂಗದಲ್ಲಿ ನಿನ್ನ ಪತಿಯಕುರುಹ ಹೇಳಾ ಎಲೆ ಅವ್ವಾ" [೧೨೫]

ಕಾಯವೇ ಸತಿಯಾಗಿರಲು ಅದರಿಂದ ದೂರವಾದ ಅಸಮರ್ಥ ಮನವೇ ಮಾಯೆಯೆಂದು ದೂರೀಕರಿಸಿದೆ. ಮೋಸದ ಸತಿಯೆಂಬ ಸಂದೇಹವೇಕೆ? ಪತಿಯ ಕುರುಹಿನ ಮೂಲಕ ನಿನ್ನನ್ನು ಸಮರ್ಥಿಸಿಕೋ ಎಂಬ ಅರ್ಥದಲ್ಲಿದೆ.

ಶೂನ್ಯಸಂಪಾದನೆಗಳಲ್ಲಿ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಮುಖಾಮುಖಿ ಯಾದಾಗ ಅಲ್ಲಮಪ್ರಭು ಈ ರೀತಿ ಹೇಳುವ ಮೂಲಕ ಅಕ್ಕನ ಅಸ್ತಿತ್ವವನ್ನು ಗಟ್ಟಿಗೊಳಿಸುವ ಪ್ರಯತ್ನ ಕೈಗೊಂಡಿದ್ದಾರೆ. ಮನವೆಂಬುದು ಭ್ರಮೆಯಾಗಿ ಅಸಮರ್ಥತೆಯ ಸಂಕೇತವಾಗಿದೆ. ಸಂಪ್ರದಾಯಕ್ಕೆ ಅತೀತವಾಗಿ ನಿಲ್ಲುವ ಅಲ್ಲಮಪ್ರಭುವಿನ ಆಲೋಚನೆಗಳು ಅಕ್ಕನನ್ನು

ಸಾಮಾಜಿಕ ವಲಯದಿಂದ ಮುಕ್ತಗೊಳಿಸಲೆತ್ನಿಸಿವೆ. ಅಕ್ಕ ಹೆಣ್ಣಾಗಿ ಸಮಾಜದಲ್ಲಿ ಕೌಶಿಕನ ಸತಿಯೆನಿಸಿಕೊಂಡವಳು. ಅವನನ್ನು ದೂರೀಕರಿಸಿ ಆಧ್ಯಾತ್ಮಿಕ ವಲಯಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡವಳು. ಅಕ್ಕನ ಎದುರಿಗೆ ಇರುವ ಸಾಮಾಜಿಕ ವಯಕ್ತಿಕ ಅಸ್ತಿತ್ವವನ್ನು ಸ್ಪಷ್ಟಪಡಿಸುವಲ್ಲಿ ಮಾಯೆ ಪ್ರಸ್ತಾಪಗೊಂಡಿದೆ. ಮಾಯೆ ಒಂದು ಭಾವವಷ್ಟೇ ಅಲ್ಲ ಹಲವು ಭಾವಗಳ ಹುಟ್ಟುವ ನೆಲೆಯಾದ ಮನವೂ ಆಗಿದೆ. ಮನದ ಚಂಚಲಸ್ವಭಾವವನ್ನು ಅರಿತು ಮನವನ್ನೇ ಮಾಯೆ ಎಂದಿದ್ದಾರೆ. ಏಕೆಂದರೆ ಮನಸೆಂಬುದು ಭಾವರೂಪಿಯಾದದ್ದೇ ಹೊರತು ವಸ್ತುರೂಪಿಯಲ್ಲ. ಭ್ರಮಾತ್ಮಕ ಅಲೆಗಳು ಏಳುವ ಮನವನ್ನು ಮಾಯೆ ಎಂದು ಹೇಳಿದ್ದಾರೆ.

೫.೩.೬ ರಕ್ಕಸಿ: ಮಾಯೆ

“ಕಾಯವೆಂಬ ಮಹಾಕದಳಿಯ ಗೆಲ್ಲ ಬಲ್ಲವನಾರನೂ ಕಾಣೆ
ಸಂಸಾರವೆಂಬ ಸಪ್ತ ಸಮುದ್ರ ಬಳಸಿ ಬಂದಿಪ್ಪುವು
ಭವವೆಂಬ ಮಹಾರಣ್ಯದೊಳು ಪಂಚೇಂದ್ರಿಯಗಳೆಂಬ
ವಿಷದ ಮಳೆ ಸುರಿವುತ್ತಿರ್ಪದು
....
....
ಕಾಮವೆಂಬ ಮೂರಂಬಿನ ಸೋನೆ ಸುರಿಯುತ್ತಿರ್ಪುದೆ
....
....
ಅಹಂಕಾರವೆಂಬ ಭಯ ದಿಟ್ಟಿಸಬಾರದು
ಮಾಯೆಯೆಂಬ ರಕ್ಕಸಿ ಹಸಿಯ ತಿನ್ನುತ್ತಿರ್ಪಳು
ವಿಷವೆಂಬ ಕೂಪ ಬಳಸಬಾರದು
ಮೋಹವೆಂಬ ಬಳ್ಳಿ ಕಾಲಕಿತ್ತಬಾರದು
ಲೋಭವೆಂಬ ಮಸೆದಡಾಯುಧವ ನೊಡೆಯಚ್ಚಬಾರದು
ಇಂತಪ್ಪ ಕದಳಿಯ ಹೋಗಲಿಯರದೆ
ದೇವದಾನವ ಮಾನವರೆಲ್ಲರೂ ಮತಿಗೆಟ್ಟು ಮರುಳಾಗಿ
ಹೆರೆದೆಗೆದೋಡಿದರು
ಅಂಗಾಲ ಕಣ್ಣವರು ಮೈಯಲ್ಲ ಕಣ್ಣವರು ತಲೆಬಾಲಗೆಟ್ಟರು
ನಾನೀ ಕದಳಿಯ ಹೊಕ್ಕು ಹೊಯ್ದಡಿ ಮುಳ್ಳು ಮಸೆ ಮುಟ್ಟದೆ
ಕದಳವರಿದು ಗೆಲಿದುತ್ತರಿಸಿ ಗುಹೇಶ್ವರನೆಂಬ ಲಿಂಗದ

ಸಮಾಧಿಯಲ್ಲಿ ನಿಂದು
ಪರವಶನಾಗಿ ನಿರಾಳಕ್ಕೆ ನಿರಾಳನಾಗಿದ್ದೆನಯ್ಯ"[೧೨೬]

ಕಾಯವನ್ನು ಕದಳಿ ಎಂದರೆ ಮಹಾರಾಣ್ಯಕ್ಕೆ ಹೋಲಿಸಲಾಗಿದೆ. ಈ ಕಾಯದ ಸಂದಣಿ ಯಾವುವು? ಎಂಬುದಕ್ಕೆ ಮುಂದಿನ ಸಾಲುಗಳಲ್ಲಿ ಒಂದೊಂದನ್ನೆ ಬಿಡಿಸಿ ಹೇಳಲಾಗಿದೆ. ಅರಿಷಡ್ವರ್ಗ, ಪಂಚೇಂದ್ರಿಯ, ಕರಣೇಂದ್ರಿಯ, ವಿಷಯ ಸುಖಗಳು. ತಾಪತ್ರಯಗಳೇ ಮೊದಲಾದವುಗಳಿಂದ ಕೂಡಿದ ಸಂದಣಿ ಕಾಯವೇ ಮಹಾಕದಳಿ ಇವು ಒಂದೊಂದು ರೂಪಾಗಿ ಅರ್ಭಟಿಸುತ್ತಿರುವವು. ಇಂತಹ ಕಾಯವೆಂಬ ಮಹಾ ಕದಳಿಯ ಹೋಗಲರಿಯದೆ ದೇವ–ದಾನವ–ಮಾನವರೆಲ್ಲರೂ ಹೆದರಿ ಹಿಮ್ಮೆಟ್ಟಿರುವರು. ಆದರೆ ಪ್ರಭುದೇವರು ಇದಾವುದಕ್ಕೂ ಹೆದರದೆ ಅವುಗಳ ದೋಷಕ್ಕೆ ಗುರಿಯಾಗದೆ ಎಲ್ಲವನ್ನು ಭೇದಿಸಿ, ಗೆದ್ದು ತಕ್ಕ ಉತ್ತರವನ್ನು ಕಂಡುಕೊಂಡು ಪರಮಾತ್ಮನ ಧ್ಯಾನದಲ್ಲಿ ನಿಜ ಸಮಾಧಿಯನ್ನು ಪಡೆದು ಪರಮಾಮೃತವೆಂಬ ನಿತ್ಯ ತೃಪ್ತಿಯನ್ನು ಪಡೆದವನು [೧೨೭] ಎಂಬ ಅಭಿಪ್ರಾಯವಿದೆ. ವಾಸ್ತವದಲ್ಲಿ ಕಾಯವನ್ನು ಗೆಲ್ಲುವುದು ಅಷ್ಟು ಸುಲಭದ ಕೆಲಸವಲ್ಲ. ಜೀವನನ್ನು ಕಾಯದಲ್ಲಿ ನೆಲೆಗೊಳಿಸಲು ಪಂಚೇಂದ್ರಿಯಗಳು ಅರಿಷಡ್ವರ್ಗಗಳು ಇನ್ನಿಲ್ಲದಂತೆ ಸೆಳಯುತ್ತವೆ. ಅವುಗಳ ಸೆಳೆತಕ್ಕೆ ಒಳಗಾದ ಜೀವ ಮಾಯ ಪ್ರಭಾವಕ್ಕೆ ಒಳಗಾದನೆಂಬುದು ನಿಶ್ಚಿತ. ಅದರಿಂದ ಬಿಡಿಸಿಕೊಳ್ಳಲಾರದಷ್ಟು ಪ್ರಭಾವಶಾಲಿಯಾಗಿ ತೋರುತ್ತದೆ.

ಈ ಕ್ರಿಯೆ ಕೇವಲ ಮನುಜನಿಗೆ ಮಾತ್ರ ಸೀಮಿತವಾಗಿಲ್ಲ. ದೇವಾನುದೇವತೆಗಳನ್ನು ಕೂಡಾ ಆವರಿಸಬಲ್ಲ ಶಕ್ತಿ ಮಾಯೆಗಿದೆ. ಮಾಯೆ ದೇವನಷ್ಟೆ ಬಲಿಶಾಲಿಯಾಗಿ ತೋರುತ್ತದೆ. ಆದರೆ ವಾಸ್ತವದಲ್ಲಿ ದೇವ–ಮಾನವರ ಮನೋಬಲಕ್ಕೆ ತಕ್ಕಂತೆ ಮಾಯೆ ತನ್ನ ಪ್ರಾಬಲ್ಯ–ದೌರ್ಬಲ್ಯವನ್ನು ತೋರುತ್ತದೆ. ಮಾಯಾ ಭಾವವನ್ನು ಗೆಲ್ಲಬಲ್ಲ ಮನೋಬಲ ಅಲ್ಲಮನಲ್ಲಿದೆ. ಆದ್ದರಿಂದಲೇ ದೇವನನ್ನು ಸಾಕ್ಷಾತ್ಕರಿಸಿಕೊಂಡು ನಿರಾಳವಾಗಿ ಇರಬಲ್ಲವನಾಗಿದ್ದಾನೆ.

'ಮಾಯೆ' ಎಂಬ ಪರಿಕಲ್ಪನೆಯ ಮೂಲಕ ಅಲ್ಲಮಪ್ರಭುವಿನ ವಚನಗಳನ್ನು ಗಮನಿಸಿದಾಗ, ಆಧ್ಯಾತ್ಮಿಕ ನೆಲೆಯಿಂದ ವಿಶ್ಲೇಷಿಸುವ ಪ್ರಯತ್ನದಲ್ಲಿ ಮಾಯೆ ಎಂಬ ಅಂಶಕ್ಕೆ ಪ್ರಾಧಾನ್ಯತೆ ಕೊಡಲಾಗಿದೆ. ಅಲ್ಲಮನ ವಚನಗಳಲ್ಲಿ ಒಟ್ಟಾಗಿ ಮಾಯೆಯ ಸ್ವರೂಪ ವಿಮರ್ಶಾ ಶಕ್ತಿಯಾಗಿ, ಶುದ್ಧ ಮಾಯೆಯಾಗಿ ಹಾಗೂ ಭ್ರಮೆ, ಭ್ರಾಂತಿ, ಅಜ್ಞಾನ, ಮರೆವು, ಕ್ಷಣಿಕವಾಗಿ (ಅಶುದ್ಧ ಮಾಯೆ) ತೋರುವುದಲ್ಲದೆ, ಶಿವಯೋಗ ಸಾಧನೆಯಲ್ಲಿ ತೊಡಗುವ ಸಾಧಕನನ್ನು ಪರೀಕ್ಷಿಸುವ ಮಾನದಂಡವಾಗಿ ಕಾಣುತ್ತದೆ.

ಭಾರತೀಯ ಪರಂಪರೆಯ ಧಾರ್ಮಿಕ ನೆಲೆಗಳಲ್ಲಿ ಮಾಯೆ ವಿಮರ್ಶಾಶಕ್ತಿಯಾಗಿ ಅಶುದ್ಧ ಮಾಯೆಯಾಗಿ ಕಾಣುತ್ತದೆ. ಅದು ಸ್ತ್ರೀ ರೂಪದಲ್ಲಿ ಅರ್ಥೈಸಲ್ಪಡುತ್ತದೆ. ಆದರೆ ಅಲ್ಲಮನ ವಚನಗಳಲ್ಲಿ ಮಾಯೆಯನ್ನು ಅವಲೋಕಿಸಿದಾಗ ಜೀವನು ಯೋಗಿಯೇ

ಆಗಿರಲಿ, ಭೋಗಿಯೇ ಆಗಿರಲಿ ಮಾಯಾಭಾವ ಅಂತರಂಗದಲ್ಲಿ ನೆಲೆಗೊಳ್ಳುತ್ತದೆ. ಮಾಯೆ ವ್ಯಕ್ತಿನಿಷ್ಠವೂ ಅಲ್ಲ; ವಸ್ತುನಿಷ್ಠವೂ ಅಲ್ಲ ಭಾವನಿಷ್ಠವಾದದ್ದು. ಮಾಯೆ ಎಂಬುದು ಭಾವನಾತ್ಮಕ ಸ್ಥಿತಿ. ಅದು ದುರ್ಬಲ ಮನಸ್ಥಿತಿ ಉಳ್ಳವರನ್ನು ಆವರಿಸುತ್ತದೆ.

ಮಾಯೆಯ ಕುರಿತು ಹೇಳುವಲ್ಲಿ ದೇವ-ದಾನವ-ಮಾನವರಾದಿಯಾಗಿ ಎಂಬುದರ ಜೊತೆಗೆ 'ಅಷ್ಟಾಶಿತಿ ಸಹಸ್ರ ಋಷಿಗಳನ್ನು ಮಾಯೆ ತಪೋಮಯದಲ್ಲಿ ಕೆಡಹುತ್ತದೆ' ಎಂಬಲ್ಲಿ ಮಾಯೆ ಕೇವಲ ಲೌಕಿಕ ವಿಷಯಗಳಿಗೆ ಸೀಮಿತವಾಗಿ ತೋರುವುದಿಲ್ಲ. ಆಧ್ಯಾತ್ಮಿಕ ವಿಷಯಗಳಿಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಋಷಿಗಳನ್ನು ತಪಸ್ಸೆಂಬ ಮೋಹದಲ್ಲಿ ಕೆಡಹುತ್ತದೆ. ಮತ್ತೊಂದಡೆ ಮನವೇ ಮಾಯೆಯಾಗಿ ತೋರುತ್ತದೆ. ಏಕೆಂದರೆ ಜೀವನಲ್ಲಿ ಹುಟ್ಟುವ ಭಾವಗಳಿಗೆ ಮನವೆ ಮನೆಯಾಗಿದೆ.

ಒಟ್ಟಾರೆಯಾಗಿ ಮಾಯೆ ಎಂಬುದು ಲೌಕಿಕ ಆಧ್ಯಾತ್ಮಿಕ ನೆಲೆಗಳೆರಡಲ್ಲಿ ಅವಿರ್ಭವಿಸುವಂಥದ್ದು. ಇದಕ್ಕೆ ಭವಿಯೂ ಹೊರತಲ್ಲ. ಯೋಗಿಯೂ ಹೊರತಲ್ಲ. ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ ಹರ ಹರಾ ಮಾಯೆ ಇದ್ದೆಡೆಯ ನೋಡಾ! ಎಂಬ ಮಾತಿನಲ್ಲಿ ಮಾಯೆ ಸರ್ವವ್ಯಾಪಕ ಶಕ್ತಿಯಾಗಿದೆ. ಹರನನ್ನು ಹೊರತಾಗಿಸಿ ದೇವಾನುದೇವತೆಗಳು, ದೇವರುಗಳ ಪರಿಚಾರಕ ವರ್ಗದವರು ಎಲ್ಲರನ್ನು ಮಾಯೆ ಆವರಿಸುವುದು. ಮಾಯೆ ಭೂಲೋಕ- ದೇವಲೋಕ ಎರಡನ್ನು ಒಳಗು ಮಾಡಿಕೊಂಡಿದೆ. ಶಿವಾಂಶಿಕವಾದ ಜೀವನು ಶಿವಯೋಗ ಸಾಧನೆಯನ್ನು ಕೈಗೊಳ್ಳುವಲ್ಲಿ ಲೌಕಿಕದಲ್ಲಿದ್ದು ಅದಕ್ಕಂಟದೆ ಇರಬೇಕೆಂಬುದು ಅಲ್ಲಮನ ಭಾವವಾಗಿದೆ. ಜೀವನು ಶಿವಯೋಗ ಪಥದಲ್ಲಿ ಸಾಗುವಲ್ಲಿ ಆತನಲ್ಲಿಯ ಮಾನಸಿಕ ದೌರ್ಬಲ್ಯ ಮಾಯಾ ಭಾವ ಎಡೆಗೊಳ್ಳಲು ಕಾರಣವಾಗುತ್ತದೆ. ಈ ಮೂಲಕ ಪರಮಾತ್ಮನು ನಿಜ ಶರಣನಾಗಬಲ್ಲವನ ಆಧ್ಯಾತ್ಮಿಕ ಸಾಮರ್ಥ್ಯವನ್ನು ಅಳೆಯುವಂತಹ ಸಾಧನವಾಗಿ ಮಾಯೆ ತೋರುತ್ತದೆ. ಮಾಯೆ ಮನುಜನು ಎದುರಿಸುವ ಸಂದರ್ಭ ಸನ್ನಿವೇಶ ಮತ್ತು ಆಸಕ್ತಿ, ಅಭಿರುಚಿಗನುಗುಣವಾಗಿ ರೂಪ ತಾಳುತ್ತದೆ. ಸಾಮಾಜಿಕ ಸ್ತರದಲ್ಲಿ ಮನುಜ-ಮನುಜನನ್ನು ದ್ವೇಷಿಸುವ, ವಂಚಿಸುವ ಹಾಗೂ ಮನುಜ-ಮನುಜನನ್ನು ಪ್ರೀತಿಸುವ, ಮೋಹಿಸುವ ಮಾನಸಿಕ ಸ್ಥಿತಿಯಿಂದ ಮುಕ್ತನಾಗಬೇಕೆಂಬುದೇ ಮಾಯಾ ಮುಕ್ತ ಸ್ಥಿತಿ. ಆಗ ಮನುಜ ದ್ವೀಪವಾಗಲಾರ ತನ್ನ ಸುತ್ತ ರೇಖೆಗಳನ್ನು ಎಳೆದುಕೊಳ್ಳಲಾರ ಎಂಬ ಅಂಶವನ್ನು ಅಲ್ಲಮ ಆಧ್ಯಾತ್ಮಿಕ ಮಾರ್ಗದಲ್ಲಿ ಸೂಚಿಸಿದ್ದಾನೆ.

ಕೊನೆ ಟಿಪ್ಪಣಿ:

೧. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೧೦
೨. ಇಮ್ಮಡಿ ಶಿವಬಸವಸ್ವಾಮಿಗಳು, ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೧೩
೩. ಎಚ್.ತಿಪ್ಪೆರುದ್ರಸ್ವಾಮಿ, ಅಲ್ಲಮಪ್ರಭುದೇವ, ಪು.೯೫
೪. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೧೭
೫. ಇಮ್ಮಡಿ ಶಿವಬಸವಸ್ವಾಮಿಗಳು(ಲೇ), ಅಲ್ಲಮಪ್ರಭುದೇವರ ಟೀಕಿನ ವಚನಗಳು ಪು.೨೮
೬. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೫೩
೭. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೧೮
೮. ಇಮ್ಮಡಿ ಶಿವಬಸವಸ್ವಾಮಿಗಳು(ಲೇ)–ಅಲ್ಲಮಪ್ರಭುದೇವರ ಟೀಕಿನ ವಚನಗಳು ಪು.೩೦
೯. ಕೊಪ್ಪ ಎಸ್. ಕೆ. (ಸಂ), ಅಲ್ಲಮ ಪ್ರಭು– ಚಿಂತನ, ಪು.೨೩೭
೧೦. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೭೪
೧೧. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೭೭
೧೨. ಭಕ್ತ, ಗುರು, ಪ್ರಸಾದ ಇವುಗಳನ್ನು ಅನುಸರಿಸುವಾಗ ಸೂಕ್ಷ್ಮ ಅಹಂ ಮೂಡುತ್ತದೆ. ಅಹಂಮಿಕೆ ಭಕ್ತನನ್ನು ಐದು ವಿಧದಲ್ಲಿ ಕಾಡುತ್ತದೆ. ಇವನ್ನು ಸೂಕ್ಷ್ಮ ಪಾತಕಗಳನ್ನಲಾಗಿದೆ.
೧೩. ಸಿದ್ದೇಶ್ವರ ಸ್ವಾಮಿಗಳು–ಅಲ್ಲಮ ಪ್ರಭುದೇವ ವಚನ –ನಿರ್ವಚನ– ಪು.೮೫೨
೧೪. ಹಿರೇಮಠ ಆರ್.ಸಿ (ಸಂ) –ಅಲ್ಲಮಪ್ರಭುದೇವರ ವಚನಗಳು– ಪು.ಸಂ. ೪೮೯
೧೫. ಇಮ್ಮಡಿ ಶಿವಬಸವಸ್ವಾಮಿಗಳು(ಲೇ), ಅಲ್ಲಮ ಪ್ರಭುದೇವರ ಟೀಕಿನ ವಚನಗಳು, ಪು.ಸಂ.೩೭೮
೧೬. ಹಿರೇಮಠ ಆರ್.ಸಿ (ಸಂ) –ಅಲ್ಲಮಪ್ರಭುದೇವರ ವಚನಗಳು– ಪು. ೨೧
೧೭. ಇಮ್ಮಡಿ ಶಿವಬಸವಸ್ವಾಮಿಗಳು(ಲೇ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೭೮
೧೮. ಕೊಪ್ಪ ಎಸ್. ಕೆ. (ಸಂ) , ಅಲ್ಲಮಪ್ರಭು–ಚಿಂತನ, ಪು.೨೮೫
೧೯. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೨೩೩
೨೦. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೯೨
೨೧. ಸಿದ್ದೇಶ್ವರ ಸ್ವಾಮಿಗಳು,ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೧೦೧೦

೨೨. ಕೊಪ್ಪ ಎಸ್. ಕೆ. (ಸಂ), ಅಲ್ಲಮ ಪ್ರಭು– ಚಿಂತನ, ಪು.೨೪೨

೨೩. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು, ಪು. ೪೭೧

೨೪. ಎಚ್.ತಿಪ್ಪೆರುದ್ರಸ್ವಾಮಿ, ಶೂನ್ಯ ಸಂಪಾದನೆ ವಿವರಣಾತ್ಮಕ ಪರಿಚಯ, ಪು.೫೯

೨೫. ಎಚ್.ತಿಪ್ಪೆರುದ್ರಸ್ವಾಮಿ, ಅಲ್ಲಮಪ್ರಭುದೇವ ವಿವರಣಾತ್ಮಕ ಪರಿಚಯ, ಪು.೨೦

೨೬. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೬೩

೨೭. ಹಿರೇಮಠ ಆರ್.ಸಿ (ಸಂ) ,ಅಲ್ಲಮ ಪ್ರಭುದೇವರ ವಚನಗಳು,ಪು.೧೯೬ (ವ.ಸಂ.೫೪೨)

೨೮. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೨೭

೨೯. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು–ಪು.೧೯೬, (ವ.ಸಂ.೩೨೯)

೩೦. ಇಮ್ಮಡಿ ಶಿವಬಸವಸ್ವಾಮಿಗಳು(ಸಂ),ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೧೮

೩೧. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೧೩೩

೩೨. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೧೮

೩೩. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೫೦೨

೩೪. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೧೪೧

೩೫. ಇಮ್ಮಡಿ ಶಿವಬಸವಸ್ವಾಮಿಗಳು(ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೩೨

೩೬. ಸಾಹಿತ್ಯ ಮತ್ತು ಯುಗ ಧರ್ಮ, ಅ.ನ.ಕೃ, ಪು.೮೪

೩೭. ಸಿದ್ದೇಶ್ವರ ಸ್ವಾಮಿಗಳು,ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೫೪೦

೩೮. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು,ಪು.೧೦೬

೩೯. ಇಮ್ಮಡಿ ಶಿವಬಸವಸ್ವಾಮಿಗಳು(ಸಂ),ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೧೭೦

೪೦. ಕೊಪ್ಪ ಎಸ್. ಕೆ. (ಸಂ) , ಅಲ್ಲಮ ಪ್ರಭು–ಚಿಂತನ, ಪು.೩೪೪

೪೧. ಹಿರೇಮಠ ಆರ್.ಸಿ (ಸಂ) , ಅಲ್ಲಮ ಪ್ರಭುದೇವರ ವಚನಗಳು, ಪು.೨೦೨

೪೨. ಬಸವರಾಜ ಸಬರದ, ಮಧ್ಯಕಾಲಿನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಪು.೧೮೭

೪೩. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೩೭

೪೪. ಸಿದ್ದೇಶ್ವರ ಸ್ವಾಮಿಗಳು,ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೮೯

೪೫. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು,ಪು.೨೬೦

೪೬. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೩೨

೪೭. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೫೪

೪೮. ಅ.ನ.ಕೃ (ಸಂ), ಸಾಹಿತ್ಯ ಮತ್ತು ಯುಗಧರ್ಮ,೮೩

೪೯. ವಿಜಯಾದೇವಿ, ಪ್ರಭುದೇವರ ಅನುಭಾವ, ಪು.೭೭

೫೦. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು, ಪು.೩೧

೫೧. ಇಮ್ಮಡಿ ಶಿವಬಸವಸ್ವಾಮಿಗಳು(ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೫೩

೫೨. ಎಚ್.ತಿಪ್ಪೆರುದ್ರಸ್ವಾಮಿ, ಅಲ್ಲಮಪ್ರಭುದೇವ, ಪು.೪೮

೫೩. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೧೮೬

೫೪. ಇಮ್ಮಡಿ ಶಿವಬಸವಸ್ವಾಮಿಗಳು(ಸಂ),ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೦೯

೫೫. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೧೮೬

೫೬. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೧೫೮

೫೭. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೬೦

೫೮. ಎಚ್.ತಿಪ್ಪೆರುದ್ರಸ್ವಾಮಿ,ಅಲ್ಲಮಪ್ರಭುದೇವ, ಪು.೧೦೩

೫೯. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೧೫೪

೬೦. ಇಮ್ಮಡಿ ಶಿವಬಸವಸ್ವಾಮಿಗಳು(ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೨೫

೬೧. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೬೦೭

೬೨. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೪೪೬

೬೩. ಅದೇ, ಪು.೯೭

೬೪. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೧೫೧

೬೫. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ-ನಿರ್ವಚನ, ಪು.೩೫೩

೬೬. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೦೯

೬೭. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೧೦

೬೮. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ-ನಿರ್ವಚನ, ಪು.೧೯

೬೯. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು,ಪು.೧೩

೭೦. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೦

೭೧. ವಿಜಯಾದೇವಿ, ಪ್ರಭುದೇವರ ಅನುಭಾವ, ಪು.೭೪

೭೨. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು,ಪು.೧೩

೭೩. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೦

೭೪. ಸಿದ್ದೇಶ್ವರ ಸ್ವಾಮಿಗಳು,ಅಲ್ಲಮಪ್ರಭುದೇವ ವಚನ-ನಿರ್ವಚನ, ಪು.೩೫

೭೫. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೧೪

೭೬. ಇಮ್ಮಡಿ ಶಿವಬಸವಸ್ವಾಮಿಗಳು (ಸಂ),ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೧

೭೭. ಹಿರೇಮಠ ಆರ್.ಸಿ (ಸಂ) ,ಅಲ್ಲಮಪ್ರಭುದೇವರ ವಚನಗಳು, ಪು.೨೫೭

೭೮. ಅದೇ, ಪು.೨೫೮

೭೯. ಅದೇ, ಪು.೨೫೮

೮೦. ಎಚ್.ತಿಪ್ಪೆರುದ್ರಸ್ವಾಮಿ, ಅಲ್ಲಮಪ್ರಭುದೇವ, ಪು.೫

೮೧. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೧೩೧

೮೨. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೧೪

೮೩. ಕೊಪ್ಪ ಎಸ್. ಕೆ. (ಸಂ), ಅಲ್ಲಮಪ್ರಭು-ಚಿಂತನ, ಪು.೧೩೯

೮೪. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು,ಪು.೧೩೧

೮೫. ವಿಜಯಾದೇವಿ, ಪ್ರಭುದೇವರ ಅನುಭಾವ, ಪು.೭೭

೮೬. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೫೫

೮೭. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೪೨೮

೮೮. ಕೊಪ್ಪ ಎಸ್.ಕೆ. (ಸಂ), ಅಲ್ಲಮಪ್ರಭು–ಚಿಂತನ, ಪು.೧೩೭

೮೯. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೧೨೩

೯೦. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೦೧

೯೧. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೪೫೧

೯೨. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೧

೯೩. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೪

೯೪. ಸಿದ್ದೇಶ್ವರ ಸ್ವಾಮಿಗಳು,ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೬೭

೯೫. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೪೮೬

೯೬. ಅದೇ, ಪು.೪೮೭

೯೭. ಅದೇ, ಪು.೧೪೬

೯೮. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೩೦

೯೯. ಎಸ್.ಎನ್.ಲಿಂಗಣಯ್ಯ, ಆತ್ಮಜ್ಞಾನಿ ಅಲ್ಲಮಪ್ರಭುದೇವರು, ಪು.೧೩೧

೧೦೦. ಹಿರೇಮಠ ಆರ್.ಸಿ (ಸಂ)–ಅಲ್ಲಮಪ್ರಭುದೇವರ ವಚನಗಳು–ಪು.೧೮೮

೧೦೧. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೩೦

೧೦೨. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೭೮೫

೧೦೩. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೪೮೫

೧೦೪. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) , ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೪೫೫

೧೦೫. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೪೬೧

೧೦೬. ಅದೇ, ಪು.೨೫೪

೧೦೭. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೪೨೭

೧೦೮. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೬೧

೧೦೯. ಕೊಪ್ಪ ಎಸ್. ಕೆ. (ಸಂ), ಅಲ್ಲಮಪ್ರಭು–ಚಿಂತನ ಪು.೧೩೩

೧೧೦. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು,ಪು.೩೮೯

೧೧೧. ಅದೇ, ಪು.೬೨

೧೧೨. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೯೯

೧೧೩. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೨೨೩

೧೧೪. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು–ಪು.೧೩೩

೧೧೫. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) ,ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೨೧೭

೧೧೬. ಎಚ್.ತಿಪ್ಪೆರುದ್ರಸ್ವಾಮಿ, ಅಲ್ಲಮಪ್ರಭುದೇವ, ಪು.೧೦೧

೧೧೭. ಹಿರೇಮಠ ಆರ್.ಸಿ (ಸಂ) , ಅಲ್ಲಮಪ್ರಭುದೇವರ ವಚನಗಳು, ಪು.೧೮೬

೧೧೮. ಇಮ್ಮಡಿ ಶಿವಬಸವಸ್ವಾಮಿಗಳು (ಸಂ), ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೩೦೯

೧೧೯. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮಪ್ರಭುದೇವ ವಚನ–ನಿರ್ವಚನ, ಪು.೭೭೪

೧೨೦. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೨೬೩

೧೨೧. ಅದೇ, ಪು.೪೬೨

೧೨೨. ಇಮ್ಮಡಿ ಶಿವಬಸವಸ್ವಾಮಿಗಳು (ಸಂ) , ಅಲ್ಲಮಪ್ರಭುದೇವರ ಟೀಕಿನ ವಚನಗಳು, ಪು.೪೭೩

೧೨೩. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು, ಪು.೪೨೨

೧೨೪. ಅದೇ, ಪು.೩೩೩

೧೨೫. ಅದೇ, ಪು.೨೬೧

೧೨೬. ಅದೇ, ಪು.೪೪೫

೧೨೭. ಕೊಪ್ಪ ಎಸ್. ಕೆ. (ಸಂ), ಅಲ್ಲಮಪ್ರಭು–ಚಿಂತನ, ಪು.೧೩೩

ಅಧ್ಯಾಯ : ೬

ಅಕ್ಕಮಹಾದೇವಿಯ ವಚನಗಳು: ಮಾಯೆ

ಅಧ್ಯಾಯ ೬

ಅಕ್ಕಮಹಾದೇವಿಯ ವಚನಗಳು: ಮಾಯೆ

ಹನ್ನೆರಡನೆಯ ಶತಮಾನದ ಶರಣರ ಸಮೂಹದಲ್ಲಿ ವಿಶಿಷ್ಟಳಾಗಿ ಕಾಣುವಂಥವಳು ಅಕ್ಕಮಹಾದೇವಿ. ಅಕ್ಕ ಕೇವಲ ಶರಣೆ ಎನ್ನುವದಕ್ಕಿಂತ ಹಲವು ಶಿವಶರಣೆಯರ ಮಧ್ಯೆ ವಿಭಿನ್ನ ವ್ಯಕ್ತಿತ್ವ ವುಳ್ಳವಳು. ಏಕೆಂದರೆ ಸಾಮಾಜಿಕ ಬದುಕಿನ ಒಪ್ಪಿತ ಮೌಲ್ಯಗಳನ್ನು ಅನುಸರಿಸದೇ ತನ್ನದೇ ಆದ ಅನುಭಾವಿಕ ಹಾದಿಯನ್ನು ರೂಪಿಸಿಕೊಂಡವಳು. ಸಮಾಜದ ಸಾಕ್ಷಿಯಾಗಿ ಸ್ವೀಕರಿಸಿದ ಗಂಡನನ್ನು ತ್ಯಜಿಸಿ, ಮನಸಾಕ್ಷಿಯಾಗಿ ಸ್ವೀಕರಿಸಿದ ಗಂಡನನ್ನು ನಂಬಿ, ಒಪ್ಪಿ, ಸ್ವೀಕರಿಸಿ, ದರ್ಶಿಸ ಹೊರಟವಳು. ಅವಳ ಪ್ರಯಾಣದ ಉದ್ದೇಶ ದೈವಿಕ ಪ್ರೇಮಿಯ ಹುಡುಕಾಟವಾದರೆ ಆ ಹಾದಿಯಲ್ಲಿ ಸಾಗುವಾಗ ಮೂಡುವ ಭಾವನೆಗಳು, ಪಡೆಯುವ ಅನುಭವಗಳು ವಚನಗಳ ರೂಪ ಪಡೆದಿವೆ.

ಅಕ್ಕ ಅನುಭಾವಿಯಾಗಿ ತನ್ನ ದೇಹದ ಮೇಲೆ ತನ್ನ ಇಂದ್ರಿಯಗಳ ಮೇಲೆ ಹೊಂದಿರುವ ನಿಯಂತ್ರಣ ಆಕೆಯನ್ನು ಅದರ ದಾಸಿಯನ್ನಾಗಿಸದೇ ಅದನ್ನು ಮೀರಿ ಮೇಲುಸ್ತರಕ್ಕೆ ಕೊಂಡೊಯ್ಯುತ್ತದೆ. ಅಕ್ಕ ತಾನು ಮಾನವಳಾಗಿದ್ದು, ತನ್ನ ಸ್ತರದಿಂದಲೇ ಪರಮಾತ್ಮನನ್ನು ಕಾಣುತ್ತಾಳೆ. ಅಷ್ಟಕ್ಕೆ ನಿಲ್ಲದೆ ಮುಂದುವರೆದ ಅಕ್ಕ, ಪರಮಾತ್ಮನನ್ನು ಆಧ್ಯಾತ್ಮಿಕ ನೆಲೆಯಲ್ಲಿ ನಿಂತು ಪರಿಭಾವಿಸುತ್ತಾಳೆ. ಪರಿಣಾಮವಾಗಿ ಲೌಕಿಕ ಪ್ರತಿಮೆಗಳು ಆಧ್ಯಾತ್ಮಿಕ ಪರಿವೇಷ ತೊಟ್ಟು ವಿಶೇಷವಾದ ಅನುಭವವನ್ನು ಕಟ್ಟಿಕೊಡುತ್ತವೆ.

"ಅಕ್ಕನದು ಮುಖ್ಯವಾಗಿ ಸರ್ವ ಸಮರ್ಪಣೆಯ ಭಕ್ತಿ ಮಾರ್ಗ ಆದ್ದರಿಂದಲೇ ಅಕ್ಕಮಹಾದೇವಿಯ ವಚನಗಳಲ್ಲಿ ಕಾವ್ಯದ ಸೊಗಸು ಹೆಚ್ಚು"[೧] ಅಕ್ಕನ ವಚನಗಳಲ್ಲಿ ಭಾವ ಪರವಶತೆಯಿಂದ ತೀವ್ರ ವಿರಕ್ತಿಯಿಂದ ಪರಮಾತ್ಮನೊಂದಿಗೆ ಒಂದಾಗುವ ಕಾತರವಿದೆ. ಈ ಕಾತರದಲ್ಲಿ ಹೊರಟವಳಿಗೆ ಪರಮಾತ್ಮ ದರ್ಶನವಾಗದೆ ಹೋದಾಗ ಮೂಡುವ ಕಳವಳ ಉಂಟಾದರೂ ನಿರಾಸೆಗೊಳ್ಳದೆ ಹಂಬಲಿಸುವ ರೀತಿ ಇಲ್ಲಿ ಕಾಣುತ್ತದೆ. ಸಾಮಾಜಿಕವಾಗಿ ಯಾವ ಸ್ತ್ರೀಯೂ ಕೈಗೊಳ್ಳದ ನಿರ್ಧಾರವನ್ನು ಕೈಗೊಂಡು ಸಾಹಸಪೂರ್ಣ ಹೋರಾಟ ವನ್ನು ಮಾಡುತ್ತಲೇ ಪರಮಾತ್ಮನನ್ನು ಪಡೆದೆ ಪಡೆಯತ್ತೇನೆ ಎಂಬ ದಿಟ್ಟ ನಂಬಿಕೆ ದೃಢವಿಶ್ವಾಸವನ್ನು ಅಕ್ಕನ ವಚನಗಳು ಅಭಿವ್ಯಕ್ತಿಸುತ್ತವೆ.

ಸ್ತ್ರೀ ಸಹಜವಾದ ಕೋಮಲ ಭಾವನೆಗಳಿಂದ ಕೂಡಿದ ವಚನಗಳು ಸರಳ ರಚನೆಯಿಂದ ಕೂಡಿದ್ದರೂ ಆಳವಾದ ಆಧ್ಯಾತ್ಮಿಕ ಅರಿವನ್ನು ವ್ಯಕ್ತಗೊಳಿಸುತ್ತವೆ. ಭಾವನೆಗಳಿಗೆ ತಕ್ಕ ಭಾಷೆಯ ಮೂಲಕ ಅಲಂಕಾರಿಕವಾಗಿ ರಚಿತವಾಗಿದ್ದು, ಅಪಾರವಾದ ಲೋಕಾನುಭವಗಳನ್ನು ವಚನದ ತಿರುಳಾಗಿಸಿಕೊಂಡಿವೆ. ಸಾಮಾಜಿಕ ಬದುಕಿನ ಕಟ್ಟು-ಕಟ್ಟಳೆಗಳು ಆಕೆಯ ಭಾವನೆಗಳ ಮೇಲೆ ಬೀರಿದ ಪ್ರಭಾವ ಒಂದೆಡೆಯಾದರೆ ಅದರಿಂದ

ಸಿಡಿದು ನಿಂತು ನಿರ್ಮಲವಾದ, ನಿಶ್ಚಲವಾದ ಪ್ರಕೃತಿಯೊಂದಿಗೆ ತನ್ನ ಭಾವನೆಗಳನ್ನು ನೋವನ್ನು ಹಂಚಿಕೊಳ್ಳುವ ರೀತಿ ಇನ್ನೊಂದೆಡೆ ಕಾಣುತ್ತದೆ.

ಅಕ್ಕ ಆಡುನುಡಿಯಲ್ಲಿನ ಸತ್ವವನ್ನು ಆಧ್ಯಾತ್ಮಿಕ ವಿಚಾರಗಳ ಅಭಿವ್ಯಕ್ತಿಯಲ್ಲಿ ಸೂಕ್ತವಾಗಿ ಬಳಸಿದ್ದು, ವಚನಗಳಲ್ಲಿ ಆಧ್ಯಾತ್ಮಿಕತೆ, ಸಾಮಾಜಿಕ ನೆಲೆಯಲ್ಲಿನ ವೈಚಾರಿಕತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕನ ವಚನಗಳಲ್ಲಿ 'ಮಾಯೆ' ನಿರ್ವಚಿತಗೊಂಡ ನೆಲೆಯಲ್ಲಿ ವಚನಗಳನ್ನು ಮುಖ್ಯವಾಗಿಸಿಕೊಂಡು ಸೂಕ್ಷ್ಮ ಅಧ್ಯಯನ ಕೈಗೊಳ್ಳಲಾಗಿದೆ.

ವಚನಕಾರರ ಅಭಿವ್ಯಕ್ತಿಯಲ್ಲಿ 'ಬೆಂದ ಸಂಸಾರದಿಂದ' ಮುಕ್ತರಾಗುವ ಹಂಬಲವಿದೆ. ಇದೇ ವಿಧಾನ ಅಕ್ಕನಲ್ಲಿಯೂ ಕಾಣುತ್ತದೆ. ಮಲತ್ರಯಗಳಾದ ಆಣವ ಮಾಯಾ ಕಾರ್ಮಿಕ ಇವುಗಳ ಪಾಶದಿಂದ ಬಿಡಿಸಿಕೊಳ್ಳುವಲ್ಲಿ ಭಕ್ತಿಮಾರ್ಗ ಮುಖ್ಯವಾಗಿ ಪರಮಾತ್ಮನೇ ಗುರಿಯಾಗಿ ಕಾಣುತ್ತದೆ.

೬.೧ ಮರುಹು: ಮಾಯೆ

"ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ,
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ,
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ,
ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ,
ಅರುಹಿಂಗೆ ಮರುಹಾಗಿ ಕಾಡಿತ್ತು ಮಾಯೆ,
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ,
ಚನ್ನಮಲ್ಲಿಕಾರ್ಜುನಾ,
ನೀನೊಡ್ಡಿದ ಮಾಯೆಯನಾರೂ ಗೆಲಬಾರದು"! [೨]

'ಕಾಯವನ್ನು ವಿವಿಧ ರೂಪಿನಲ್ಲಿ ಕಾಡುವ ವಿನಾಶರೂಪೀ ಆಕರ್ಷಣೆಯನ್ನು ಅಕ್ಕ ಈ ವಚನದ ಮೂಲಕ ವ್ಯಕ್ತಪಡಿಸಿದ್ದಾಳೆ. ಚೆನ್ನಮಲ್ಲಿಕಾರ್ಜುನನೊಡ್ಡಿದ ಮಾಯೆಯನ್ನು ಗೆಲಬಾರದು ಎನ್ನುವ ಅಚ್ಚರಿಯೊಳಗೆ ಮಾಯೆಯ ವಿರುದ್ಧ ಹೋರಾಟಕ್ಕಿಳಿಯುವ ಯುದ್ಧ ಕ್ರಮವನ್ನು ಅಕ್ಕ ಕಡೆಗಣಿಸಿದ್ದಾಳೆ. ಅದರಿಂದ ವಿರಕ್ತಿ ಹೊಂದುವ ಕ್ರಮದಲ್ಲಿ ಸ್ವಯಂ ಅಸ್ತಿತ್ವವಿದೆ ಎಂಬ ತತ್ವ ಆಕೆಯಲ್ಲಿ ವ್ಯಕ್ತವಾಗಿದೆ. ಗೆಲ್ಲುವ ಬದಲು ಅದರ ಸ್ಪರ್ಶಕ್ಕೆ ಸಿಕ್ಕದಂತೆ ಎಚ್ಚರವಾಗಿರುವ ಪ್ರಕ್ರಿಯೆಯೇ ಮಹತ್ವದ್ದು ಎಂಬ ತೀರ್ಮಾನ ಅಕ್ಕನದಾಗಿದೆ.[೩] ಇಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ನಿಂತು ಸ್ವಯಂ ಅಸ್ತಿತ್ವ ಸ್ಥಾಪಿಸುವ ವಿಧಾನವಿದೆ. ಇದಕ್ಕಿಂತ ಭಿನ್ನವಾಗಿ ಮನೋವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಮಾಯೆ ಎಂಬುದು ಮನುಜನ ಬಾಹ್ಯ-ಆಂತರಿಕ ಸ್ತರಗಳನ್ನು ಪ್ರವೇಶಿಸುವಂಥದ್ದು. ಕಾಯ, ಪ್ರಾಣ, ಮನ, ಅರಿವು ಇವು ದೇಹದ ಹೊರ-ಒಳಗನ್ನು ಪ್ರತಿನಿಧಿಸಿ ಅವನ್ನು ಮಾಯೆಯು ನೆಳಲು,

ಮನ, ನೆನಹು, ಮರುಹು ಆಗಿ ಆವರಿಸುತ್ತದೆ. ಲೋಕವನ್ನು ಮುತ್ತಿದ ಜಂಜಡಗಳನ್ನು ವೀಕ್ಷಿಸುತ್ತ ಸಾಗಿದ ಅಕ್ಕ, 'ಜೀವ'ನ ಸುತ್ತ ಹೆಣೆದುಕೊಂಡಿರುವ ಸಂಗತಿಗಳೆಲ್ಲವೂ ಮಾಯೆಯ ಹಲವು ರೂಪಗಳಾಗಿ ತೋರುತ್ತದೆ. ತಾನೂಕೂಡ ಮಾನವಲೋಕದ ಒಂದು ಭಾಗವಾಗಿ ಭಾವಿಸಿ ತನ್ನನ್ನು ಈ ಮಾಯೆ ಬಿಡದು ಎಂಬ ಸತ್ಯದ ಅರಿವನ್ನು ಹೊಂದಿ ಈ ರೀತಿ ಪ್ರತಿಕ್ರಿಯಿಸಿದ್ದಾಳೆ. ಮಾಯೆಯ ಸರ್ವಕ್ರಿಯಾರೂಪದ ಅಭಿವ್ಯಕ್ತಿಗೆ ಕಾಯವೇ ಮೂಲವೆಂಬ ಅಂಶವನ್ನು ಅಕ್ಕ ಗಮನಿಸಿದ್ದಾಳೆ. ಲೋಕದ ಜೀವರು ಬೇರೆ ಬೇರೆ ಸಂದರ್ಭದಲ್ಲಿ ಮಾಯೆಯ ಸೆಳೆತಕ್ಕೆ ಸಿಗುತ್ತಾರೆ. ಯಾರು ಇದರಿಂದ ಹೊರತಾಗಲೂ ಸಾಧ್ಯವಿಲ್ಲ. ಆದರೆ ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ ಸಾಮರ್ಥ್ಯ ಭಕ್ತಿಗಿದೆ. ಈ ಭಕ್ತಿ ಎಂಬ ಭಾವವು ಮಾನಸಿಕ ಸ್ತರದಲ್ಲಿ ಹುಟ್ಟುತ್ತದೆ. ಮಾಯೆಯೆಂಬ ಶಕ್ತಿಯನ್ನು ಎದುರಿಸಬೇಕಾದರೆ ಭಕ್ತಿ ಎಂಬ ಸಾಧನ ಸಶಕ್ತವಾಗಿರಬೇಕು, ಮನಸ್ಸು ಸದೃಢವಾಗಿರಬೇಕು.

ಮಾಯೆ ಮನುಜನನ್ನು ಹಲವು ನೆಲೆಗಳಲ್ಲಿ ಕಾಡುತ್ತದೆ. ಕಾಡುವಿಕೆ ಎಂಬ ಕ್ರಿಯೆ ವಿರೋಧಿನೆಲೆಯಲ್ಲಿ ಜರುಗುತ್ತದೆ. ಮನುಜನಿಗೆ ತನ್ನ ಅಂತರಂಗಕ್ಕೆ ಒಪ್ಪಿತವಾಗಿದ್ದಾಗ ಹಿತವೆನಿಸಿದರೆ, ಒಪ್ಪಿತವಾಗದಿದ್ದಾಗ ಕಾಡುವ ಭಾವ ಮೂಡುತ್ತದೆ. ಮಾಯೆ ಒಪ್ಪಿತವಿದ್ದಾಗ ಹಿತವಾದ ತಿರಸ್ಕೃತವಾದಾಗ ಅಹಿತವಾಗಿ ಕಾಣುವ ಮಾನಸಿಕ ಪ್ರತಿಕ್ರಿಯೆ ಆಗಿದೆ. ಇಂತಹ ಭಾವದ ಒತ್ತಡದಿಂದ ಮುಕ್ತವಾಗಬೇಕೆಂಬ ಬಯಕೆ ಇದ್ದರೂ ಅಸಾಧ್ಯವಾಗುವ ಸಂದರ್ಭವನ್ನು ಹೀಗೆ ಹೇಳಲಾಗಿದೆ.

೬.೨ ಯೋಗಿಣಿ: ಮಾಯೆ

"ಬಿಟ್ಟೆನೆಂದೆಡೆ ಬಿಡದೀ ಮಾಯೆ
ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ
ಸವಣಂಗೆ ಸವಣಿಯಾಯಿತ್ತು ಮಾಯೆ
ಯತಿಗೆ ಪರಾಕಿಯಾಯಿತ್ತು ಮಾಯೆ
ನಿನ್ನ ಮಾಯೆಗೆ ನಾನಂಜುವಳಲ್ಲ
ಚನ್ನಮಲ್ಲಿಕಾರ್ಜುನದೇವಾ ನಿಮ್ಮಾಣೆ!"[೪]

ಅಕ್ಕನ ದೃಷ್ಟಿಯಲ್ಲಿ ಮಾಯೆ ಪುರುಷ-ಸ್ತ್ರೀ ರೂಪಿಯಾಗಿದ್ದು, ದೈವಿಕ ಸಾಧನೆ ಕೈಗೊಳ್ಳುವವರಿಗೆ ಅದೇ ತಡೆಯಾಗಿದೆ. ಮಾರಯ್ಯ ದಂಪತಿಗಳು ಸಕಳೇಶ ಮಾದರಸ ದಂಪತಿಗಳು ಅಮೂಗಯ್ಯ ದಂಪತಿಗಳು, ಅಜಗಣ್ಣ, ಸತ್ಯಕ್ಕ, ಮುಕ್ತಾಯಕ್ಕ, ದೊಸೆ ಪಿಟ್ಟವ್ವೆ ಮುಂತಾದ ಸಾಧಕರೊಂದಿಗೆ ಕಾಡಾರಣ್ಯದಲ್ಲಿ ತಪಸ್ಸಿನಲ್ಲಿದ್ದಾಗ ಮಹಾರಾಜ ತಾನು ಶರಣಾಗಿದ್ದೇನೆ ನನ್ನನ್ನು ಸ್ವೀಕರಿಸು ಎಂದಾಗ ಬಿಟ್ಟೆನೆಂದರೂ ಬಿಡದೀ ಮಾಯೆ

ಎಂದು ಅಕ್ಕ ಕಳವಳಿಸಿದ್ದಾರೆ. ಒಲ್ಲೆ ಹೋಗು ಎಂದು ದೂರವಾದರೂ ಹೋಗದು ಮಾಯೆ ಎಂದು ಪರಶಿವನಲ್ಲಿ ತನ್ನ ನೋವನ್ನು ಹಂಚಿಕೊಳ್ಳುತ್ತಾಳೆ.[೫] ಅಕ್ಕನ ದೃಷ್ಟಿಯಲ್ಲಿ ಪುರಷ ಮಾಯೆ ದೈವಿಕ ಭಾವಕ್ಕೆ ತಡೆಯಾಗಿದೆ ಎಂಬ ಚಿತ್ರಣವನ್ನು ಕೊಟ್ಟಿದ್ದಾಳೆ.ಆದರೆ ಮಾಯೆ ಸ್ವರೂಪ ಸರ್ವವ್ಯಾಪಕವೆಂಬಂತಿದೆ.

ನಾವು ಬಿಟ್ಟರೂ ನಮ್ಮನ್ನು ಮಾಯೆ ಹಿಡಿದಿಡುತ್ತದೆ. ಅರಸ ಗದ್ದುಗೆ ಕಳೆದುಕೊಂಡರೂ ಸಿಂಹಾಸನದ ಸೆಳೆತ ಬಿಡದು. ಮನುಜನಲ್ಲಿ ಆಸೆ, ಆಕಾಂಕ್ಷೆ ಇರುವಲ್ಲೆಲ್ಲ ಮಾಯೆ ಆವರಿಸುತ್ತದೆ. ಈ ಜಗತ್ತೇ ಮಾಯೆ ಎಂದು ಸರ್ವಸಂಗ ಪರಿತ್ಯಾಗ ಮಾಡಿ ಹೊರಟವರಿಗೆ, ಯೋಗಿಣಿಯಾಗಿ ಜೊತೆಯಾಗುತ್ತದೆ. ಗಂಡಿಗೆ ಹೆಣ್ಣಾಗಿ ಹೆಣ್ಣಿಗೆ ಗಂಡು ಮಾಯೆಯಾಗಿ ಕಾಡುತ್ತದೆ.

ಸಾಮಾಜಿಕ ಬದುಕಿನಲ್ಲಿ ಎದುರಾಗುವ ಸಂದರ್ಭಗಳಲ್ಲಿ ಸ್ತ್ರೀ–ಪುರುಷ ಮಾದರಿಗಳನ್ನು ಮುಖಾಮುಖಿ ನಿಲ್ಲಿಸುವ ಪರಿಯನ್ನು ಮಾಯೆಗೆ ಅನ್ವಯಿಸಲಾಗಿದೆ. ಯೋಗಿಣಿ, ಸವಣಿ, ವಿರಕ್ತ ಬದುಕಿನ ಪಾತ್ರಗಳೇ ಆದರೂ ಯೋಗಿಗೆ, ಸವಣಂಗೆ ಕಾಡುತ್ತವೆ. ಇಂದ್ರೀಯ ನಿಗ್ರಹ ಮಾಡಿದ ಯತಿ ಎನಿಸಿಕೊಂಡವನಿಗೆ ಅಜಾಗರೂಕತೆ, ಮೈಮರೆವು ಎಂಬ ಪರಾಕಿ ಕಾಡುತ್ತದೆ. ಇಂತಹ ಮಾಯೆಗೆ ಅಕ್ಕ ತಾನು ಹೆದರುವವಳಲ್ಲ ಎಂಬ ಗಟ್ಟಿ ನಿರ್ಧಾರವನ್ನು ಹೊಂದಿದ್ದಾಳೆ.

ಅಕ್ಕ ಸಾಮಾಜಿಕ ಬದುಕಿನಿಂದ ಬಿಡಿಸಿಕೊಂಡು ಆಧ್ಯಾತ್ಮಿಕ ವಲಯವನ್ನು ಪ್ರವೇಶಿಸುವ ಸಂದರ್ಭದಲ್ಲಿ ಬಂದ ಅನುಭವಗಳೇ ಈ ವಚನದಲ್ಲಿವೆ. ಲೌಕಿಕದಿಂದ ಬಿಡಿಸಿಕೊಳ್ಳಲು ಜಪ–ತಪ–ಧ್ಯಾನ–ಯೋಗಿಯ ಸಾಧನಗಳೆಂಬ ನಿಲುವನ್ನು ಒಪ್ಪಿ ಅನುಸರಿಸಲು ಹೊರಟವಳು. ಬಾಲ್ಯದಿಂದಲೇ ಸಾಧನೆಗೈದು ಅದೇ ಹಾದಿಯಲ್ಲಿ ಸಶಕ್ತಳಾಗಿ ಚೆನ್ನನನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನದಲ್ಲಿ ನಿಷ್ಠೆ ಇದೆ. ತನ್ನಂತೆ ಆಧ್ಯಾತ್ಮಿಕ ಸಾಧನೆಗೈಯಲು ಹೊರಟ ಶರಣ ಸಮುದಾಯವನ್ನು ಮಾದರಿಯಾಗಿ ನೋಡಿದ ಅಕ್ಕ, ಅವರ ಹಾದಿಯಲ್ಲಿ ಮಾಯೆ ಯೋಗಿ, ಸವಣ, ಯತಿ ಇತ್ಯಾದಿ ರೂಪಗಳಲ್ಲಿ ಆವರಿಸುತ್ತದೆ. ಈ ಸಾಧಕರಲ್ಲಿ ಇರುವ ದೌರ್ಬಲ್ಯದ ರೂಪವೇ ಮಾಯೆ. ಏಕೆಂದರೆ ಯೋಗಿ, ಸವಣ ಯತಿಗಳು ಚಿತ್ರವೃತ್ತಿ ನಿರೋಧಿಗಳು ಹೇಗೋ ಹಾಗೆ ಯೋಗಿಣಿ, ಸವಣಿಗಳು ಕೂಡಾ. ಇವರುಗಳಲ್ಲಿ ಆಧ್ಯಾತ್ಮಿಕ ಸಾಧನೆ ಅತಿ ಉನ್ನತ ಹಂತದಲ್ಲಿರುವ ಈ ಸಂದರ್ಭದಲ್ಲಿ ಪುರುಷ ಸನ್ಯಾಸಿಗಳಿಗೆ ಸನ್ಯಾಸಿನಿಯರಿಂದ ಚಿತ್ತ ಕ್ಷೋಭೆ ಉಂಟಾಗುತ್ತದೆ ಎಂಬಲ್ಲಿ ಮಾಯೆ ವ್ಯಕ್ತಿ ದೌರ್ಬಲ್ಯದ ಸೂಚಕವಾಗಿ ತೋರುತ್ತದೆ.

೬.೩ ವಿಧಿ: ಮಾಯೆ

"ಅಲ್ಲೆಂದಡೆ ಉಂಟೆಂಬುದೀ ಮಾಯೆ
ಬಲ್ಲೆನೆಂದಡೆ ಬಿಡದೀ ಮಾಯೆ; ಎನಗಿದು ವಿಧಿಯೇ?
ಚೆನ್ನಮಲ್ಲಿಕಾರ್ಜುನಯ್ಯಾ,
ಒಪ್ಪಿ ಮರೆವೊಕ್ಕಡೆ ಮತ್ತುಂಟೆ? ಕಾಯಯ್ಯಾ ಶಿವಧೋ"! ೬

'ಈ ಮಾಯೆ ಇಲ್ಲ ಎಂದರೆ ಉಂಟು ಎಂದು ಹೇಳುತ್ತದೆ ಬೇಡ ಎಂದರೆ ಬಿಡುವುದಿಲ್ಲ ಎನ್ನುತ್ತದೆ. ಇದು ನನಗೆ ವಿಧಿಯೆ, ಚೆನ್ನಮಲ್ಲಿಕಾರ್ಜುನನೆ ನಾನು ನಿನ್ನನ್ನು ಒಪ್ಪಿಕೊಂಡಿದ್ದೇನೆ ನಿನ್ನ ಪ್ರೀತಿಯ ಸತಿ ನಾನು ಹೀಗಿದ್ದರೂ ಈ ಮಾಯೆ ನನ್ನನ್ನು ಕಾಡುತ್ತಿದೆ. ನೀನು ನನ್ನ ಪತಿ ರಕ್ಷಣೆ ಕೊಡು, ಗಂಡನಾದ ನಿನ್ನ ಕರ್ತವ್ಯ ಕಾಪಾಡು' ೭ ಎಂಬ ಅಭಿಪ್ರಾಯದಲ್ಲಿ ಪತಿ ಎಂಬ ಪರಶಿವ ಮಾಯೆಯಿಂದ ಸತಿಯಾದ ಅಕ್ಕನನ್ನು ರಕ್ಷಿಸಬೇಕು ಎಂಬಂತಿದೆ.

ಮಾಯೆ ಎಂಬುದು ಭಾವರೂಪಿಯಾಗಿದ್ದರೂ ಕ್ರಿಯಾರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಮಾನವನ ಮಾತು ವರ್ತನೆಗಳು ಮಾಯೆ ವ್ಯಕ್ತ ರೂಪವನ್ನು ತೋರಿಸುತ್ತದೆ. ಹಾಗಿದ್ದಾಗ ಮಾಯೆ ಇಲ್ಲ ಎಂದು ಕೊಳ್ಳುವವರಿಗೆ ಅದೇ ಮಾಯೆ ಎಂಬ ಭಾವವಿರುವುದಿಲ್ಲ. ಲೌಕಿಕದಲ್ಲಿ ತೊಳಲಾಡುವವರಿಗೆ ಮಾಯೆ ಯಾವುದು ಎಂಬ ಅರಿವು ಇರುವುದಿಲ್ಲ. ತಾನು ಕೂಡಾ ಇದೇ ಲೌಕಿಕದಲ್ಲಿ ಹುಟ್ಟಿದವಳು ಆ ಮಾಯೆ ತಾನು ಬೇಡವೆಂದರೂ ಆವರಿಸುವುದು ಖಂಡಿತ. ಇದಕ್ಕೆ ಪರ್ಯಾಯವಾಗಿ ಭಗವಂತನನ್ನು ಒಪ್ಪಿ ಸ್ವೀಕರಿಸಿದರೆ ಸಾಕು ಎಂಬ ಪರಿಹಾರವನ್ನು ಕಂಡುಕೊಳ್ಳುತ್ತಾಳೆ. ಲೋಕದ ಜನರಿಗೆ ಮಾಯೆ ಯಾವುದೇ ರೂಪದಲ್ಲಿ ಕಾಡುವುದಿಲ್ಲ ಬದಲಿಗೆ ಹಲವು ಅಪೇಕ್ಷೆ, ನಿರೀಕ್ಷೆಗಳ ರೂಪದಲ್ಲಿ ಮಾಯೆ ಇರುತ್ತದೆ. ಆದರೆ ಅಕ್ಕನ ದೃಷ್ಟಿಯಲ್ಲಿ ಮಾಯೆ ವಿಧಿಯಾಗಿ ನಿಲ್ಲುತ್ತದೆ. ವಿಧಿ ಎಂಬುದು ಪೂರ್ವನಿಶ್ಚಿತ ಹಾಗಾಗಿ ತಾನು ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ನಿಷ್ಕಲ್ಮಶ ಭಕ್ತಿಯಿಂದ ಕೈಗೊಂಡಿರುವೆ ಎಂಬ ನಂಬಿಕೆ ಅಕ್ಕನಿಗಿದೆ. ಇದೇ ನಂಬಿಕೆಯ ಬೆಂಬಲದಿಂದಲೇ ಅಕ್ಕ ಮುಂದಡಿಯಿಡುತ್ತಾ ಸಾಗುತ್ತಾಳೆ. ಭಗವಂತನನ್ನು ನಂಬಿ ಒಪ್ಪಿ ಸ್ವೀಕರಿಸಿದ್ದಾಗಿದೆ. ಆದರೆ ಆ ನಿರ್ಮಲ ಭಾವ ತನ್ನೊಳಗೆ ನಿಶ್ಚಲವಾಗಿ ನೆಲೆಗೊಳ್ಳುವಂತೆ ಕಾಯಬೇಕೆಂಬ ಸವಿನಯ ಪ್ರಾರ್ಥನೆ ಇದೆ. ಅಕ್ಕನಿಗೆ ತಾನು ಹುಟ್ಟುವುದಕ್ಕಿಂತ ಮುನ್ನವೇ ಮಾಯೆ ಆವರಿಸುವ ನಿಶ್ಚಿತತೆ ಇದ್ದು, ಅದರಿಂದ ಮುಕ್ತಗೊಳ್ಳಬೇಕೆಂಬ ಒತ್ತಡ ಇಲ್ಲಿ ಕಾಣುತ್ತದೆ. ಅಕ್ಕನ ಪಾಲಿಗೆ ಮಾಯೆ ಈಗಾಗಲೇ ಆವರಿಸಿರುವಂಥದ್ದು ಅದರಿಂದ ಬಿಡಿಸಿಕೊಳ್ಳುವ ನಿಷ್ಕಲ್ಮಶ ಪ್ರಯತ್ನ ಕಾಣುತ್ತದೆ.

ಅಕ್ಕ ಸಂಸಾರವೆಂಬ ಕೌಶಿಕನನ್ನು ತ್ಯಜಿಸಿದರೂ, ಅಕ್ಕ ಹೆಣ್ಣಾಗಿರುವುದರಿಂದ ಸಮಾಜ

ಅವಳನ್ನು ಸಂಸಾರದ ಚೌಕಟ್ಟಿನಲ್ಲಿಟ್ಟು ನೋಡುವ ಅಪೇಕ್ಷೆ ಮಾಡುತ್ತದೆ. ಅದಕ್ಕಾಗಿಯೇ ಅಕ್ಕ ಲೌಕಿಕದ ಸಂಸಾರವನ್ನು ತ್ಯಜಿಸಿ ಅಲೌಕಿಕ ಸಂಸಾರವನ್ನು ಸ್ವೀಕರಿಸುತ್ತಾಳೆ.

೬.೪ ಅಹಂ: ಮಾಯೆ

"ಎನ್ನ ಮಾಯದ ಮದವ ಮುರಿಯಯ್ಯ,
ಎನ್ನ ಕಾಯದ ಕತ್ತಲೆಯ ಕಳೆಯಯ್ಯ,
ಎನ್ನ ಜೀವದ ಜಂಜಡ ಮಾಣಿಸಯ್ಯ,
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ"! [೮]

ಮಹಾದೇವಿಯಕ್ಕನ ತೀವ್ರ ವೈರಾಗ್ಯ ಶೋಕಾರ್ತದ ವಚನ ಇದಾಗಿದೆ. ಅಕ್ಕನ ಅಪಾರ ಭಕ್ತಿಯ ಅನುಭಾವ, ಕಡು ನಿಷ್ಠೆಯನ್ನು ಬೆಂಬಲವಾಗಿಸಿಕೊಂಡು ಮಾಯೆ ಎಂಬ ಭಾವದಿಂದ ಮುಕ್ತಳಾಗಬಯಸಿದ್ದಾಳೆ. ಲೌಕಿಕದ ಮಾಯ, ಕಾಯ, ಜೀವ, ಇವು ಪರಿಭವಕ್ಕೆ ಮೂಲ ದುಃಖದ ಮೂಲವನ್ನು ಹುಡುಕಿ ದುಃಖ ನಾಶಕ್ಕೆ ಪ್ರಯತ್ನಿಸಿ ಭಗವಂತನಲ್ಲಿ ಮೊರೆ ಇಟ್ಟಿದ್ದಾಳೆ. ಮಾಯದ ಮದ ಎಂದರೆ ತುಂಬು ತಾರುಣ್ಯದ ಚೆಲುವು. ಅದರಿಂದ ಉಂಟಾಗುವ ಅಹಂ, ಆಕರ್ಷಣೆಗಳನ್ನು ನಿರಾಕರಿಸುತ್ತಾಳೆ. ಯಾವ ಚಲುವಿಗೆ ಪುರುಷರು ಮೋಹಿತರಾಗುತ್ತಾರೋ ಅಂತಹ ಯೌವ್ವನ ಇಲ್ಲವಾಗಲಿ ಎಂಬ ಬೇಡಿಕೆಯಿದೆ. 'ಕಾಯದ ಕತ್ತಲೆ' ಎಂದರೆ ದೇಹದ ಕಾರಣಕ್ಕಾಗಿ ಬರುವ ಅಜ್ಞಾನ, ಭಯ, ಕಳವಳ, ವಿಕಾರಗಳನ್ನು ಕಳೆಯೆಂಬ ಬೇಡಿಕೆ ಇದೆ. 'ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸುವುದು ನಿಮ್ಮ ಕರ್ತವ್ಯ ಎಂದು ತಾನು ನಂಬಿ ಶರಣು ಹೊಕ್ಕಿದ್ದೇನೆ ಎಂಬ ಭಾವ ವ್ಯಕ್ತವಾಗಿದೆ. ಮೊದಲು ಮನುಷ್ಯ ಎನ್ನುವ ಮಾಯೆಯ ಆವರಣ, ನಂತರ ಆಯುಷ್ಯದ ಆವರಣ, ಗಂಡು-ಹೆಣ್ಣು ಎನ್ನುವ ಆವರಣ, ಕಾಲ ದೇಶದ ಆವರಣ, ಇಂತಹ ನೂರು ಆವರಣಗಳು ದೇಹ ಕಾರಣವಾಗಿ ಬಂದಿವೆ. ಇವೆಲ್ಲವೂ ಮಾಯೆ ಇದರಿಂದ ಪಾರು ಮಾಡು ಎಂದು ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆಯಿಟ್ಟಿದ್ದಾರೆ.![೯] ಅಕ್ಕನ ಸಾಮಾಜಿಕ ಬದುಕಿನ ಹಿನ್ನಲೆಯನ್ನು ವಿವೇಚಿಸಿ ಲೌಕಿಕ ಬದುಕಿನ ಮುಕ್ತಿ ನಿರೀಕ್ಷಿಸುವ ಸೆಳೆತವಿದೆ.

ಈ ಸಂಸಾರದ ಸೆಳೆತದಿಂದ ಅಕ್ಕ ಬಿಡಿಸಿಕೊಳ್ಳಲಾಗುತ್ತಿಲ್ಲ ಕಾಯ ಮತ್ತು ಜೀವದ ನೆಲೆಯಲ್ಲಿ ಮೂಡುವ ಹಸಿವು, ತೃಷಿ, ನಿದ್ರೆ ಇತ್ಯಾದಿ ಕ್ರಿಯೆಗಳು ಅಕ್ಕನನ್ನು ಸೆಳೆಯುತ್ತವೆ. ಸಾಮಾಜಿಕ ಬದುಕಿನ ಭಾಗವಾಗಿರುವ ಅಕ್ಕ ಕೂಡಾ ಹೆಣ್ಣು. ಸಾಮಾಜಿಕ ಕಟ್ಟಳೆಗಳು ಅಕ್ಕನನ್ನು ನಿಯಂತ್ರಿಸುತ್ತವೆ. ಅದರಿಂದ ಬಿಡಿಸಿಕೊಳ್ಳಬೇಕೆಂಬ ತುಡಿತ ಈ ವಚನದಲ್ಲಿದೆ. ಜೀವದ ಸಹಚರಿ ಆಗಿರುವ ಕಾಯ ಪಂಚೇಂದ್ರಿಯಗಳ ಮೂಲಕ ವ್ಯವಹರಿಸುತ್ತದೆ.

ಪ್ರಾಪಂಚಿಕ ಬದುಕಿನ ಸಕಲ ವ್ಯವಹಾರಗಳಿಗೆ ಮೂಲ ಶಕ್ತಿ ಮಾಯೆ. ಮಾಯೆಯು ಮದ ಅಥವಾ ಅಹಂಕಾರದ ಪ್ರತೀಕವಾಗಿದ್ದು, ಅದನ್ನು ಕಡಿಮೆ ಮಾಡು ಎಂಬ ಪ್ರಾರ್ಥನೆ ಇದೆ. ಸರ್ವಶಕ್ತ ಪರಮಾತ್ಮನಾದ ಮಲ್ಲಿಕಾರ್ಜುನನನ್ನು ನಂಬಿ ಅವನನ್ನೆ ಗತಿ ಎಂದುಕೊಂಡು ಕಾಯದ ಬಾಹ್ಯ, ಆಂತರಿಕ ಸ್ಥಿತಿಯಲ್ಲಿ ಬದಲಾವಣೆಯನ್ನು ಅಕ್ಕ ನಿರೀಕ್ಷಿಸುತ್ತಾಳೆ.

ಆಧ್ಯಾತ್ಮಿಕ ಹಾದಿಯಲ್ಲಿನ ಪಯಣಗಳಾದ ಅಕ್ಕ ಮಾಯೆ ಒಳ್ಳೆಯದು ಆದರೆ ಅದರಲ್ಲಿ ಅಡಗಿರುವ ಮದ (ಅಹಂಕಾರ)ವನ್ನು ಕಳೆದಾಗ ಆ ಮಾಯೆ ಸಾತ್ವಿಕ ಮಾಯೆ ಆಗುತ್ತದೆ. ಮಾಯೆ ಮೂಲತಃ ಕೆಟ್ಟದ್ದಲ್ಲ ಎಂಬ ಧ್ವನಿ ಇದೆ. ಮಾಯೆಗೂ ಹಲವು ಪರಿವೇಷಗಳು ಕಾಣಲು ಅದರೊಳಗಿನ ಮದವೇ ಕಾರಣವಾಗಿದೆ. ಅಹಂಕಾರ ಅಳಿದಲ್ಲಿ ಮಾಯೆ ತನ್ನ ಮೂಲ ಸ್ವರೂಪವಾದ ಶಕ್ತಿಯಾಗಿ ಪ್ರಕಟಗೊಳ್ಳುತ್ತದೆ. ಸಾತ್ವಿಕ, ರಾಜಸ, ತಾಮಸ ಭಾವಗಳನ್ನೊಳಗೊಂಡು ಮಾಯೆ ತನ್ನ ಇರುವನ್ನು ತೋರುತ್ತದೆ. ಅದಕ್ಕಾಗಿಯೇ ಅಕ್ಕ ತನ್ನನ್ನು ಸುತ್ತಿದ ಪ್ರಾಪಂಚಿಕತೆಯನ್ನು ತೊರೆಯುವ ಶಕ್ತಿಯನ್ನು ನೀಡೆಂದು ಬೇಡುತ್ತಾಳೆ. ತನ್ನ ಸುತ್ತಲಿನ ಜನರೊಂದಿಗೆ ಸಶಕ್ತವಾಗಿ ಪ್ರತಿಕ್ರಿಯಿಸುವ ಆತ್ಮವಿಶ್ವಾಸ ತನ್ನೊಳಗೆ ತುಂಬಬೇಕೆಂಬ ನಿರೀಕ್ಷೆಯೂ ಇದೆ.

ಇದೇ ಮಾಯೆ ಸೃಷ್ಟಿಗೆ ಮೂಲವಾದ, ಕಾರಣ ಕರ್ತರಾದ ವ್ಯಕ್ತಿಗಳನ್ನು ಬಿಡಲಾರದು ಎಂಬುದನ್ನು ಈ ವಚನದಲ್ಲಿ ಹೇಳಿದ್ದಾರೆ. ಇಲ್ಲಿ ಮಾಯೆ ಅಹಂಕಾರ ಸ್ವರೂಪಿಯಾಗಿ ಜೀವನನ್ನು ಹಲವು ರೀತಿಯಲ್ಲಿ ಆವರಿಸುತ್ತದೆ.

೬.೫ ಸರ್ವವ್ಯಾಪಿ: ಮಾಯೆ

"ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ,
ಇಂದ್ರನ ನುಂಗಿತ್ತು ಮಾಯೆ, ಚಂದ್ರನ ನುಂಗಿತ್ತು ಮಾಯೆ
ಬಲ್ಲೆನೆಂಬ ಬಲುಗೈಯವ ನುಂಗಿತ್ತು ಮಾಯೆ
ಅರಿಯನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ
ಈರೇಳು ಭುವನವನಾರಡಿಗೊಂಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನ ಮಾಯವ ಮಾಣಿಸಾ, ಕರುಣಿ![೧೦]

ಇಡೀ ವಚನದಲ್ಲಿ ದೇವಾನುದೇವತೆಗಳನ್ನು ಪರೀಕ್ಷಿಸಿದ ಮಾಯೆ ತನ್ನನ್ನು ಬಿಡುವುದಿಲ್ಲ. ಈ ಮಾಯೆಯಿಂದ ತನ್ನನ್ನು ಪಾರುಗಾಣಿಸು ಎಂದು ಬೇಡುವ ರೀತಿ ಇಲ್ಲಿದೆ.

'ಲೋಕದಲ್ಲಿ ಮಾಯೆಯನ್ನು ಗೆದ್ದ ಧೀರರು ಯಾರೂ ಇಲ್ಲ. ಮಾಯೆ ಒಬ್ಬರನ್ನು

ಬಿಟ್ಟಿಲ್ಲ ಇದಕ್ಕೆ ಪುರಾಣದ ಅನೇಕ ಕಥೆಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಹರಿಯೆ ಸರ್ವೋತ್ತಮ ಎಂದು ಭಾವಿಸಿದರೆ ಆತ ಜನ್ಮ ಜನ್ಮದಲ್ಲಿ ಬಂದು ಪರಿಭವಪಟ್ಟನು. ಭೃಗು ಮಹಾಮುನಿಯ ಶಾಪಕ್ಕೆ ತುತ್ತಾದನು. ಭೃಗುವಿನಲ್ಲಿ ಶಾಪ ವಿಮೋಚನೆ ಮಾಡೆಂದು ಪರಿಪರಿಯಾಗಿ ಬೇಡಿದರೂ ಕ್ಷಮಿಸದೇ ಜಾಡಿಸಿ ಒದ್ದನು. ಇದನ್ನು ನೋಡಿದ ಲಕ್ಷ್ಮೀ ದೂರ ಹೊರಟು ಹೋದಳು. ಬ್ರಹ್ಮನಂತೂ ನಾಲ್ಕನೆಯ ತಲೆ ಕಳೆದುಕೊಂಡು ಮೂದಲೆಯಾದ, ಇಂದ್ರನು ತನ್ನ ಸಿಂಹಾಸನಕ್ಕಾಗಿ ಯಾವಾಗಲೂ ಕಳವಳಪಡುವುದು. ಅಹಲ್ಯೆ–ಇಂದ್ರರ ಕಥೆ ಜನಜನಿತ. ಮೈಯೆಲ್ಲಾ ಕಣ್ಣಾದ ಕಥೆ ಒಂದೆ ಎರಡೇ? ಚಂದ್ರ, ಗುರು, ಪತ್ನಿಗಮನ ಆತನ ಅವಾಂತರಗಳು ಬಹಳ ಇನ್ನು ಉಳಿದವರು ಮಾಯೆಗೆ ಯಾವ ಲೆಕ್ಕ? ನಾನು ಮಹಾಜ್ಞಾನಿ, ಶಕ್ತಿವಂತ, ಮಹಾತಪಸ್ವಿ, ದೇವರ್ಷಿ ಎನ್ನುವವರನ್ನು ಮಾಯೆ ಹಿಡಿಯಿತು. ಹದಿನಾಲ್ಕು ಲೋಕವನ್ನೆಲ್ಲ ನಾಲ್ಕು ಹೆಜ್ಜೆಯಲ್ಲಿ ಆವರಿಸಿತು. ಅಂದ ಮೇಲೆ ತಾನು ಎಷ್ಟರವಳು? ತಾನೂ ಕೂಡಾ ಮಾಯಾವಶಳಾಗುವುದರಲ್ಲಿ ಆಶ್ಚರ್ಯವಿಲ್ಲ. ಚನ್ನಮಲ್ಲಿಕಾರ್ಜುನನೆ ಈ ಮಾಯೆಯನ್ನು ಬಿಡಿಸು' [೧೧] ಎಂಬ ಮಾತಿಗೆ ಪೂರಕವಾಗಿ ಗಮನಿಸಿದಾಗ ಮಾಯೆ ಎಂಬುದು ಮಹಾಜಾಲವಾಗಿ ಈರೇಳು ಭುವನಗಳನ್ನು ವ್ಯಾಪಿಸಬಲ್ಲ ಶಕ್ತಿ. ಮಾಯೆಯ ಮುಂದೆ ಜ್ಞಾನಿಗಳು, ಅಜ್ಞಾನಿಗಳು ಎಲ್ಲರೂ ಒಂದೇ ಮನುಷ್ಯ ದೇವರುಗಳೆಂಬ ಭೇದವು ಇಲ್ಲ. ಪುರಾಣ ಪಾತ್ರಗಳಾದ ಹರಿ, ಬ್ರಹ್ಮ, ಇಂದ್ರ, ಚಂದ್ರ ಇವರೆಲ್ಲರೂ ಪ್ರಮುಖರು, ಮನುಜರಿಂದ ಶ್ರೇಷ್ಠರೆನಿಸಿಕೊಂಡವರು ಮಾಯೆಯ ಕೈವಶರಾಗುತ್ತಾರೆ. ದೇವತೆಗಳಿಗೆಲ್ಲ ತಾವು ಶ್ರೇಷ್ಠರೆಂಬ ಭಾವನೆಯೇ ಮಾಯೆಯಾಗಿ ಆವರಿಸುತ್ತದೆ. ನಾನೆಲ್ಲವನ್ನು ಬಲ್ಲವನು ಎಂಬ ಭಾವವೇ ಪಂಡಿತನ ಪಾಲಿಗೆ ಮಾಯೆ ಆದರೆ ಏನು ತಿಳಿಯದೆಂಬ ಅಜ್ಞಾನಿಗೆ ಕೂಡಾ. ಹೀಗೆ ಶ್ರೇಷ್ಠ–ಕನಿಷ್ಠ ಎಂಬ ಭಾವ ಸ್ಥಿತಿಯೇ ಮಾಯೆ ಎಂಬರ್ಥ ಪಡೆಯುತ್ತದೆ.

"ಹರಿಬ್ರಹ್ಮರ ಎಲುಹ ಮುರಿದು ಕೊಂದು ಕೂಗಿತಲ್ಲಾ
ಮಹಾಋಷಿಯರ ತಪವ ಕೆಡಿಸಿ ಕೊಂದು ಕೂಗಿತಲ್ಲಾ
ಚೆನ್ನಮಲ್ಲಿಕಾರ್ಜುನಂಗೆ ನಂಬಿ ಮೊರೆಹೊಕ್ಕಡೆ ಅಂಜಿ ನಿಂದುದಲ್ಲಾ"[೧೨]

ಜೀವನ ಅಭಿವ್ಯಕ್ತಿ ರೂಪವಾಗಿರುವ ಕಾಯದಲ್ಲಿ ಪಂಚೇಂದ್ರಿಯ, ಸಪ್ತಧಾತುಗಳು ಹಾಗೂ ಅಷ್ಟಮದಗಳಿದ್ದು, ಜೀವನನ್ನು ಇನ್ನಿಲ್ಲದಂತೆ ನಾಶಮಾಡುತ್ತವೆ. ಮನುಜನಷ್ಟೇ ಅಲ್ಲ ದೇವರುಗಳನ್ನು, ಶ್ರೇಷ್ಠ ಋಷಿಗಳೆನಿಸಿಕೊಂಡವರನ್ನು ಮಾಯೆ ಆವರಿಸದೇ ಬಿಟ್ಟಿಲ್ಲ. ಆದರೆ ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆ ಹೋದರೆ ಮಾಯೆ ದೂರವಾಗುವುದು ಎಂಬ ನಂಬಿಕೆ, ಧೈರ್ಯವಿದೆ.

ಅಕ್ಕನ ದೃಷ್ಟಿಯಲ್ಲಿ 'ಮಾಯೆ' ಎಂಬ ಭಾವಸ್ಥಿತಿ ಇಲ್ಲದ ಸ್ಥಳವೇ ಇಲ್ಲ ಎಂಬುದನ್ನು

'ಈರೇಳು ಭುವನ' ಎಂಬ ಮಾತು ಸ್ಪಷಪಡಿಸುತ್ತದೆ. ಬಲ್ಲೆನೆಂಬ ಬಲುಗೈಯರು ಮತ್ತು ಅರಿಯನೆಂಬ ಅಜ್ಞಾನಿಗಳು ಮಾಯೆಯ ಹಿಡಿತಕ್ಕೆ ಸಿಗದೆ ಇರಲು ಸಾಧ್ಯವಿಲ್ಲ. ಹರಿ ಬ್ರಹ್ಮ ಜಗನ್ನಿಯಾಮಕರು ಅವರಲ್ಲಿಯೂ ತಾವು ಸಬಲರೆಂಬ ಭಾವ ಮೂಡಿದರೆ ಮಾಯೆ ಆವರಿಸಿತೆಂದೆ ಅರ್ಥ. ಶ್ರೇಷ್ಠ ಎನಿಸಿಕೊಂಡ ಋಷಿಗಳ ತಪಸ್ಸು ಮಾಡುವ ಅಚಲತೆಯನ್ನು ಮಾಯೆ ಚಂಚಲಗೊಳಿಸುತ್ತದೆ. ಮಾಯೆಗೆ ಅಜ್ಞಾನಿ–ಸುಜ್ಞಾನಿಗಳು ಎಂಬ ಭೇದವಿಲ್ಲ. ಮನುಜ, ದೇವ–ದಾನವ ಯಾರಾದರೂ ಸರಿಯೇ ಅವರಲ್ಲಿ 'ನಾನು' ನನ್ನದು ಅಥವಾ ನಾನೇ ಶ್ರೇಷ್ಠ –ಕನಿಷ್ಠ ಎಂಬ ಭಾವ ಉದಿಸಿದರೆ ಮಾಯಾವಶನಾದಂತೆ 'ನಾನು' ಎಂಬ ಸ್ವಾರ್ಥ, 'ನಾನೇ' ಎಂಬ ಅಹಂ ಎಂಬ ಎರಡು ಸ್ಥಿತಿಗಳು ಮಾಯೆಯಾಗಿವೆ.

೬.೬ ಶಿವನ ಸೃಷ್ಟಿ: ಮಾಯೆ

"ನೋಡಿಹೆನೆಂದೆಡೆ ದೃಷ್ಟಿ ಮರೆಯಾಯಿತ್ತು
ಕೂಡಿಹೆನೆಂದೆಡೆ ಭಾವ ಮರೆಯಾಯಿತ್ತು
ಏನೆಂಬೆನೆಂತೆಂಬೆನಯ್ಯಾ?
ಅರಿದಿಹೆನೆಂದಡೆ ಮರಹು ಮರೆಯಾಯಿತ್ತು
ನಿನ್ನ ಮಾಯೆಯನತಿಗಳೆವಡೆ ಎನ್ನಳವೆ
ಕಾಯಯ್ಯ ಚನ್ನಮಲ್ಲಿಕಾರ್ಜುನಾ" [೧೩]

'ನೋಡುತ್ತೇನೆಂದರೆ ನೀನು ದೃಷ್ಟಿಗೆ ಕಾಣುತ್ತಿಲ್ಲ. ಕೂಡುತ್ತೇನೆಂದರೆ ಭಾವದಲ್ಲಿಯೂ ಸಾಧ್ಯವಾಗುತ್ತಿಲ್ಲ ಏನೆಂದು ಹೇಳಲಿ? ಎಂತು ವಿವರಿಸಲಿ? ತಿಳುವಳಿಕೆಯಿಂದಲಾದರೂ ನಿನ್ನನ್ನು ತಿಳಿಯುತ್ತೇನೆಂದರೆ ನನ್ನಲ್ಲಿ ಮರೆವು ಆವರಿಸಿದೆ. ನೀನು ಯಾವ ಮಾಯೆಯನ್ನು ಹರಡಿರುವೆ ಅದನ್ನು ತಿರಸ್ಕರಿಸುವೆ ಎಂದರೆ ಅದು ನನ್ನಿಂದ ಸಾಧ್ಯವೇ? ಕಾಪಾಡು ಚೆನ್ನಮಲ್ಲಿಕಾರ್ಜುನಾ[೧೪] ಎಂದಿದ್ದಾರೆ.

'ಇಷ್ಟಲಿಂಗವನ್ನು ಕರಸ್ಥಲದಲ್ಲಿಟ್ಟು ತದೇಕವಾಗಿ ನೋಡುತ್ತಾರೆ. ನೋಡಿ ನೋಡಿ ದೃಷ್ಟಿಗಳು ಸೋಲುತ್ತವೆ. ಮನಸ್ಸು ನೇಯುತ್ತದೆ. ಆ ಮನಸ್ಸಿನ ಬಲದಿಂದ ಭಾವದಲ್ಲಿ ಕೂಡುವೆ ಎಂದರೆ ನೀನು ಭಾವಕ್ಕೆ ದೂರನಾಗಿರುವೆ. ಅರಿವು ಮೆರೆವು ಮರೆಯಾಗಿ ಹೋದವು. ಶರೀರವೆ ಮಾಯೆಯ ಆಟದ ಬಯಲಾಗಿದೆ ಮಾಯೆಯನ್ನು ಮೀರುವುದೆಂತು?[೧೫] ಮೇಲಿನ ಎರಡು ಅಭಿಪ್ರಾಯಗಳು ಅಕ್ಕ ಲೋಕದ ಮಾಯೆಯನ್ನು ಹೇಳುತ್ತಾ ತನ್ನ ಆವರಿಸುವ ಮಾಯೆಯನ್ನು ಹೇಳಿಕೊಳ್ಳುವ ರೀತಿಯನ್ನು ಹೇಳಿದ್ದಾಳೆ.

ನಿನ್ನ ಮಾಯೆಗೆ ನಾನಂಜುವವಳಲ್ಲ ಎಂದ ಅಕ್ಕ ಇಲ್ಲಿ ನಿನ್ನ ಮಾಯೆಯನತಿಗಳೆವಡೆ ಎನ್ನಳವೆ ಎಂದು ಹೇಳುವ ಮೂಲಕ ತನ್ನ ಅಸಹಾಯಕತೆಯನ್ನು ಸೂಚಿಸುತ್ತಾರೆ.

ಭಗವಂತನನ್ನು ಅಂತರಂಗದಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಭಗವಂತನನ್ನು ನೋಡುವ ಕೊಡುವ ಕೆಲಸಕ್ಕೆ ಅಡ್ಡಿಯಾಗಿ ದೃಷ್ಟಿ, ಭಾವ ಮರೆಯಾಗುತ್ತದೆ.

ನೋಡುವ ನೋಟ ಸರ್ವಗ್ರಾಹಿಯಾದದು. ಮೂಡುವ ಭಾವ ಸರ್ವವ್ಯಾಪಿಯಾದುದು. ಮರೆವು ಸರ್ವಕಾಲಿಕವಾದದು. ಈ ಮೂರು ಒಂದಿಲ್ಲೊಂದು ರೀತಿಯಲ್ಲಿ ಮನುಜನನ್ನು ಆವರಿಸುತ್ತವೆ. ಆಧ್ಯಾತ್ಮಿಕ ಸಾಧನೆಗೆ ಬೇಕಾದ ಮನಸ್ಥಿತಿಯ ನಿರ್ಮಾಣಕ್ಕೆ ಅಡ್ಡಿ ಉಂಟು ಮಾಡುತ್ತವೆ. ನಿಜ ಭಕ್ತಿಯಲ್ಲಿ ಅಚಲ ಚಿತ್ತನಾಗಿರಬೇಕು. ಆಗ ಮಾತ್ರ ಮಾಯೆ ತನ್ನಿರವನ್ನು ಪ್ರಸ್ತಾಪಿಸಲು ಅಸಾಧ್ಯ. ಸಾಮಾನ್ಯ ಮನುಜನಿಗೆ ಅಚಲ ಚಿತ್ತ ಸಾಧಿಸುವುದು ಕಷ್ಟ. ಲೌಕಿಕದ ಭಾಗವಾಗಿ ಬದುಕುವ ಮನುಜ ಮಾಯಾ ಭಾವ ವ್ಯಕ್ತನಾಗಿರುವುದು ಸಹಜ. ಲೌಕಿಕ ಸಹಜತೆಯನ್ನು ಬದಿಗಿರಿಸಿ ಆಧ್ಯಾತ್ಮಿಕ ಸಾಧಿತನಾಗುವಲ್ಲಿ ಕೈಗೊಳ್ಳುವ ಕ್ರಿಯೆ ಕಠಿಣವಾದುದು. ಈ ಕಠಿಣ ಕ್ರಿಯೆ ಶರಣನನ್ನು ನಿಜ ಶರಣನನ್ನಾಗಿ ಪರಿವರ್ತಿಸುತ್ತದೆ ಎಂಬಲ್ಲಿ ಮಾಯೆ ಎಂಬುದು ಶಿವನಷ್ಟೆ ಪ್ರಬಲವಾದುದಾಗಿ ತೋರುತ್ತದೆ.

೬.೭ ಚಂಚಲತೆ: ಮಾಯೆ

"ಎನ್ನ ಕಾಯ ಮಣ್ಣು, ಜೀವ ಬಯಲು
ಆವುದ ಹಿಡಿವೆನಯ್ಯಾ ದೇವಾ!
ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯ?
ಎನ್ನ ಮಾಯೆಯನು ಮಾಣಿಸಯ್ಯ
ಚೆನ್ನಮಲ್ಲಿಕಾರ್ಜುನ"[೧೬]

'ಅಕ್ಕ ಇಷ್ಟಲಿಂಗ ಪೂಜೆಯಲ್ಲಿದ್ದಾಗ ಹಾಡಿಕೊಂಡ ವಚನವಾಗಿ ತೋರುತ್ತದೆ.' ಎನ್ನ ಕಾಯ ಮಣ್ಣು ಎಂಬಲ್ಲಿ ದೇಹವನ್ನು ದೃಢವಾಗಿ ಹಿಡಿಯಲೆ ಎಂದರೆ ನನ್ನ ದೇಹವಾದರೂ ಮಣ್ಣಲ್ಲಿ ಮಣ್ಣಾಗುತ್ತದೆ. ನನ್ನ ಕೈ ಬಿಡುತ್ತದೆ ಹೋಗಲಿ ನನ್ನ ಜೀವ. ಪ್ರಾಣವನ್ನು ಹಿಡಯುವೆ ಎಂದರೆ ಅದು ಬಯಲಾಗಿ ಹೋಗುತ್ತದೆ. ದೇಹ ಮನಸ್ಸುಗಳ ಹಿಡಿಯದೆ ನಿಮ್ಮನಾವ ರೀತಿಯಲ್ಲಿ ನೆನೆಯಲಿ ಈ ದೇಹಕ್ಕೆ ಮಾಯೆಯಾವರಣ ವ್ಯಾಪಿಸಿಕೊಂಡಿದೆ. ಇದನ್ನು ಬಿಡಿಸು ಮಾಯೆಯಿಂದ ಬಿಡುಗಡೆಗೊಳಿಸಿದರೆ ನೀನು ದೊರೆಯುವೆ ಎಂದು ನಾನು ನಂಬಿದ್ದೇನೆ'[೧೭] ಎಂಬ ವಿವರಣೆಯ ಹಿನ್ನೆಲೆಯಲ್ಲಿ ಭಿನ್ನವಾಗಿ ನೋಡಿದಾಗ ಅಕ್ಕನ ಬದುಕಿನಲ್ಲಿ ಉಂಟಾದ ಘರ್ಷಣೆಯನ್ನು ಈ ವಚನವು ಸೂಚಿಸುವಂತಿದೆ. ಒಂದು ಸ್ಥಿತಿಯಲ್ಲಿ ಅಕ್ಕ ಲೌಕಿಕ ಜೀವನದ ಅನಿವಾರ್ಯವಾದ ಒಂದು ಭಾಗವಾಗಿದ್ದಾಳೆ. ಇನ್ನೊಂದು ನೆಲೆಯಲ್ಲಿ ಇವಳ ಬಯಕೆ, ಆಕಾಂಕ್ಷೆಗಳು ಕ್ಷಣಿಕವಾದ, ಅರ್ಥಹೀನ ಸಂಸಾರಿಕ ಜೀವನವನ್ನು ನಿರಾಕರಿಸುವ ಆಶಯವನ್ನು ಹೊಂದಿವೆ.

ಬದುಕು ಹಾಗೂ ಆಶಯ ಇವೆರಡರ ನಡುವೆ ಉಂಟಾದ ಬಿರುಕು ಈ ವಚನದಲ್ಲಿ ಮುಖ್ಯವಾಗಿ ಸೂಚಿತವಾಗಿದೆ. ಅಕ್ಕಮಹಾದೇವಿಗೆ ಈ ಕಾಯ ಹಾಗೂ ಜೀವಗಳ ನಡುವೆ ಉಂಟಾದ ಕಂದರವು ಅವಳ ಅಸ್ತಿತ್ವದ ನೆಲೆಯಲ್ಲಿ ಉಂಟಾದ ದುರಂತವನ್ನೇ ಸೂಚಿಸುತ್ತದೆ. ಪ್ರಜ್ಞಾಪೂರ್ವಕ ನೆಲೆಯಲ್ಲಿ ಈ ಸಂದಿಗ್ಧ ಸ್ಥಿತಿಯ ಸಂದರ್ಭವನ್ನು ವಿವರಿಸುವ ಅಕ್ಕಮಹಾದೇವಿ ಅನುಭಾವಿಯ ಪ್ರಾರಂಭದ ದ್ವಂದ್ವವನ್ನು ಸೂಚಿಸುತ್ತಿದ್ದಾಳೆ.[೧೮] ಅಕ್ಕ ಅಲೌಕಿಕ ಪತಿಯನ್ನು ನಂಬಿ ಒಪ್ಪಿ ಅವನಲ್ಲಿ ಒಂದಾಗಲು ಹೊರಟವಳು. ಈ ಹಾದಿಯಲ್ಲಿ ಅವಳನ್ನು ಸಾಮಾಜಿಕ ನಿಯಮಗಳು ತಡೆಯುಂಟು ಮಾಡಿವೆ. ಎಲ್ಲರಂತೆ ಸಮಾಜ ಒಪ್ಪಿತ ಬದುಕನ್ನು ನಡೆಸದ ಅಕ್ಕನನ್ನು ಸಮಾಜ ಪ್ರಶ್ನಿಸುತ್ತದೆ. ಅಕ್ಕನ ಪಾಲಿಗೆ ಮಾಯೆ ಕಾಯದ ರೂಪದಲ್ಲಿ ಕಾಡಿದೆ. ಅಕ್ಕ ಅಲೌಕಿಕ ನೆಲೆಯಲ್ಲಿ ಉತ್ತರ ಹುಡುಕುವ ಪ್ರಯತ್ನ ಮಾಡುತ್ತಾಳೆ.

ಕಾಯ ಸ್ಥಿರವೆಂದು ನಂಬಿ ಆಧ್ಯಾತ್ಮಿಕ ಸಾಧನೆಗೆ ಬಳಸಬೇಕೆಂದರೆ ಅದು ಕಳೆದು ಹೋಗುವಂಥದ್ದು. ದೇಹ ಬಿಟ್ಟು ಜೀವವನ್ನು ನಂಬಿದರೆ ಅದು ಕೂಡಾ ನಿರಾಕಾರಿ ಯಾಗುವಂಥದ್ದು. ಭಕ್ತಿಯ ಪ್ರಾಥಮಿಕ ಹಾದಿಯಲ್ಲಿ ಸಾಗುವಾಗ ಕಾಯ-ಜೀವಗಳೆರಡು ಭಕ್ತ-ಭಗವಂತನ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಅಕ್ಕ ಭಕ್ತಿಯ ಮೊದಲ ಹಂತದಲ್ಲಿರುವಳಾದರೂ ಕಾಯ-ಜೀವದ ನಿಜಸ್ವರೂಪದ ಅರಿವಿದೆ. ಆದರೂ ಸಣ್ಣ ಭಯವಿದೆ. ಇಲ್ಲಿ ಭಕ್ತಿ ಸಾಧಿಸುವಲ್ಲಿ ಇರುವ ಭಯವು ಮನದ ಚಂಚಲತೆಯಿಂದ ಉಂಟಾಗುತ್ತದೆ. ಕಾಯ-ಜೀವದ ಸ್ವರೂಪವನ್ನು ಹೇಳುತ್ತ ಇವೆರಡಕ್ಕಿಂತ ಭಿನ್ನವಾದ ಭಗವಂತ ಸ್ವರೂಪವನ್ನು ಅರಿಯುವ ಪ್ರಯತ್ನವಿದೆ. ಕಾಯ ಅಶಾಶ್ವತವಾದದ್ದು ಎಂದೆನಿಸಿದರೂ ಕಾಯ ಕರ್ರನೆ ಕಂದಿದಡೇನಯ್ಯ ಕಾಯ ಮಿರ್ರನೆ ಮಿಂಚಿದಡೇನಯ್ಯ? ಅಂತರಂಗ ಶುದ್ಧವಾದ ಬಳಿಕ ಎಂಬ ಧೈರ್ಯವಿದೆ. ಕಾಯಕ್ಕಿಂತ ಅಂತರಂಗ ಶುದ್ಧಿಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಕಾಯವನ್ನು ಒಪ್ಪಗೊಳಿಸಿ ಸಂರಕ್ಷಿಸಬೇಕಾದ ಅಗತ್ಯವಿಲ್ಲ. ಅದು ಒಂದಿಲ್ಲೊಂದು ದಿನ ಕಳೆದು ಹೋಗುವಂಥದ್ದು ಜೀವ ಉಳಿದು ಹೋಗುವಂಥದ್ದು. ಜೀವ ಕಾಯದ ಮೂಲಕವೇ ತನ್ನ ಅಸ್ತಿತ್ವ ಪ್ರಸ್ತಾಪಿಸಲು ಸಾಧ್ಯ. ಜೀವ ಆಧ್ಯಾತ್ಮಿಕ ಸಾಧನೆ ಕೈಗೊಳ್ಳಲು ಕಾಯ ಸಾಧನವಷ್ಟೆ ಅದಕ್ಕಾಗಿಯೇ ಅಕ್ಕ ಕಾಯಕ್ಕೆ ಪ್ರಾಧಾನ್ಯತೆ ಕೊಡುವುದಿಲ್ಲ ಕಾಯ-ಜೀವದ ಮಧ್ಯೆ ಪರಮಾತ್ಮನ ಸ್ವರೂಪವನ್ನು ಧ್ಯಾನಿಸುವಲ್ಲಿ ಮನದಲ್ಲಿ ಮೂಡುವ ಚಂಚಲತೆ ಮಾಯೆಯಾಗಿದೆ. ಈ ಮಾಯೆ ಅಕ್ಕನನ್ನು ಕಾಯದ ಮೂಲಕ ಕಾಯದಲ್ಲಿರುವ ಪಂಚೇಂದ್ರಿಯಗಳ ಮೂಲಕ ಆವರಿಸಲು ಪ್ರಯತ್ನಿಸುತ್ತಿದೆ. ತಾನು ಮಾಯೆಯ ಹಿಡತಕ್ಕೆ ಸಿಗಬಾರದೆಂಬ ದೃಢನಿಶ್ಚಯವೂ, ಪರಮಾತ್ಮನನ್ನು ಸಾಕ್ಷತ್ಕರಿಸಿ ಕೊಳ್ಳಬೇಕೆಂಬ ದೃಢವಾದ ಹಂಬಲವೂ ಅಕ್ಕನಲ್ಲಿದೆ.

೬.೮ ಸಂಸಾರ: ಮಾಯೆ

"ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ।
ಹಿಂದಣ ಕೆರೆ ಮುಂದಣ ಬಲೆ
ಹದುಳವಿನ್ನೆಲಿಯದು ಹೇಳಾ।
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯ, ಕಾಯಯ್ಯ ಚೆನ್ನಮಲ್ಲಿಕಾರ್ಜುನಾ"[೧೯]

'ನಶ್ವರವಾದ ದೇಹ ಸುಖವನ್ನು ಶಾಶ್ವತವೆಂದು ಭಾವಿಸಿ, ಕತ್ತಲೆಯ ಕೂಸಾಗಿ ಹುಟ್ಟು-ಸಾವುಗಳ ಚಕ್ರದಲ್ಲಿ ಸುತ್ತುತ್ತಿದ್ದ ಅಂಗನಲ್ಲಿ ಸುಪ್ತವಾಗಿದ್ದ ಶಿವಪ್ರಜ್ಞೆ ಜಾಗೃತಗೊಳ್ಳುವುದು ದೈವಿಕೃಪೆಯಿಂದಲೇ ಎಂಬ ಸತ್ಯವನ್ನು ಅಕ್ಕ ಅರಿತಿದ್ದಾಳೆ. ತನ್ನ ಅಂತರ್ಗತವಾಗಿರುವ ಭಕ್ತಿರೂಪದ ಶಿವಶಕ್ತಿಯನ್ನು ಅರಿತು ಕೊಂಡಿದ್ದಾಳೆ. ಇದನ್ನರಿಯದೇ ಅಜ್ಞಾನವರ್ತಿಯಾಗಿ ನಿರರ್ಥಕ ಬದುಕನ್ನು ಬಾಳಿದುದುದಕ್ಕಾಗಿ ಪರಿತಪಿಸುತ್ತಾಳೆ. ಭ್ರಾಂತಿ ಮೂಲವಾದ ಸಕಲ ಬಂಧನಗಳಿಂದ ತನ್ನನ್ನು ಮುಕ್ತಳನ್ನಾಗಿಸಿ ನಿಜ ಭಕ್ತಿಯನ್ನು ದಯಪಾಲಿಸುವಂತೆ ಚೆನ್ನಮಲ್ಲಿಕಾರ್ಜುನನ್ನು ಆರ್ತಳಾಗಿ ಪ್ರಾರ್ಥಿಸುವ ಅಕ್ಕನ ಮಾತುಗಳಲ್ಲಿ ಆಕೆ ಸಾಧಕಳಾಗಿ ಅನುಭವಿಸಿದ ಆತಂಕ ಮತ್ತು ವೇದನೆಗಳು ಸಚಿತ್ರವಾಗಿವೆ.[೨೦] ಇಲ್ಲಿ ಅಕ್ಕನ ಅಧ್ಯಾತ್ಮಿಕ ನಿಲುವನ್ನು ಸ್ಪಷ್ಟಪಡಿಸಲಾಗಿದೆ. ಆಧ್ಯಾತ್ಮಿಕವಾಗಿ ಸಾಧನೆ ಮಾಡಲು ಹೊರಟ ಹಾದಿಯಲ್ಲಿ ಸಮಾಜವು ಒಂದು ತೊಡರಾದರೆ, ತನ್ನ ಸುತ್ತ ಹರಡಿರುವ ಲೌಕಿಕವು ಮತ್ತೊಂದು ತೊಡರಾಗಿದೆ. ಭಗವಂತನೇ ಸೃಷ್ಟಿಸಿದ 'ಮಾಯೆ' ಪ್ರಪಂಚವನ್ನೇ ವ್ಯಾಪಿಸಿದಂತೆ ತನ್ನನ್ನು ವ್ಯಾಪಿಸಿದೆ ತಾನು ಅದರಿಂದ ಹೊರತಾಗಿಲ್ಲ. ಮಾಯೆ ಎಂಬುದು ನಮಗೆ ಗೊತ್ತಿದ್ದು ಗೊತ್ತಿಲ್ಲದಂತೆ ಸ್ವೀಕೃತಗೊಳ್ಳುವ ಒಂದು ಮನಸ್ಥಿತಿಯಾಗಿ ತೋರುತ್ತದೆ. ಅದು ಅಡೆ-ತಡೆಯಾಗಿ ಕಂಡರೂ ಅದರಿಂದ ಬಿಡಿಸಿಕೊಳ್ಳಲಾಗದ ಸ್ಥಿತಿ ದೌರ್ಬಲ್ಯವಾಗಿ ತೋರುತ್ತದೆ. ಅಕ್ಕನಲ್ಲಿಯ ಮನೋಬಲದ ದೃಢತೆ ಇಲ್ಲಿ ವ್ಯಕ್ತವಾಗುತ್ತದೆ. ಅಕ್ಕನ ಪಾಲಿಗೆ 'ಕಲ್ಲ ಹೊತ್ತು ಕಡಲೊಳಗೆ ಮುಳಗಿದಡೆ ಎಡರಿಂಗೆ ಕಡೆಯುಂಟೆ ಅಯ್ಯಾ ?' ಎಂದರೆ ಲೌಕಿಕ ಎಂಬ ಸಾಗರದಲ್ಲಿ ಸಂಸಾರದಲ್ಲಿ ಕಲ್ಲನ್ನು ಹೊತ್ತು ಮುಳುಗಿದಂತೆ ಆಧ್ಯಾತ್ಮ ಲೋಕದ ಪ್ರವೇಶ ಮಾಡಲು ಪರಮಾತ್ಮ ಒಡ್ಡಿದ ಸತ್ವಪರೀಕ್ಷೆಯೇ ಮಾಯೆ ಆಗಿದೆ. ಅಕ್ಕನ ಕುರಿತು ಸಂಸಾರಿಕ ನೆಲೆಯಲ್ಲಿ ಪ್ರಸ್ತಾಪಿಸುವಾಗ ಅರಮನೆಯ ಭೋಗ, ವಿಲಾಸ, ಸಂಪತ್ತೆಲ್ಲವೂ ಒಂದಾದರೆ ಲೋಕದ ಜನರಿಗೆ ಬೇಕಾದ ವಿವಾಹ, ಕುಟುಂಬ, ಸಂಸಾರ ಎಲ್ಲವೂ ಮಾಯೆಯನ್ನು ತೋರಿದೆ. ಈ ಜಗಕ್ಕೆ ಬೇಕಾದುದೆಲ್ಲವೂ ಅಕ್ಕನಿಗೆ ಬೇಡವಾಗಿದೆ.

"ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು
ಕಾಣಲಾರೇನಯ್ಯ ನಿಮ್ಮವನು ಭೇದಿಸಲರಿಯೆ
ಮಾಯದ ಸಂಸಾರದಲ್ಲಿ ಸಿಲುಕಿದೆನು
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ"[೨೧]

ಇದು ಆತ್ಮಾವಲೋಕನದ ವಚನ. ಬಿಟ್ಟ ಬಾಣದಂತೆ ಗುರಿ ತಲುಪುವದೊಂದೆ ಅಕ್ಕ ಮಹಾದೇವಿಯ ಜೀವನದ ಗುರಿ. ಅದಕ್ಕಾಗಿ ಮತ್ತೆ ಮತ್ತೆ ಪರಮಾತ್ಮನ ಹಂಬಲದಲ್ಲಿ ಪ್ರಾರ್ಥಿಸುತ್ತಾಳೆ. ತಪಸ್ಸು ಮಾಡುತ್ತಾಳೆ. ತಾವು ಎಷ್ಟೆಲ್ಲ ಸಾಧನೆ ತಪಸ್ಸು ಮಾಡಿದರೂ ಸಾಲದು ಎನ್ನುವ ಅತೃಪ್ತಿಯಿಂದ ತಮ್ಮ ಮನದ ಅಂತರಂಗವನ್ನು ಆತ್ಮಾವಲೋಕನ ಮಾಡಿಕೊಳ್ಳುತ್ತಾಳೆ.[೨೨] ಅಕ್ಕನ ಆಧ್ಯಾತ್ಮ ಸಾಧನೆಯ ಕುರಿತು ಮಾತನಾಡಿದ್ದಾರೆ.

ಅಜ್ಞಾನ ರೂಪವಾದ ಮಾಯೆಯ ಪಾಶ ಶಕ್ತಿಯುತವಾಗಿದೆ. ಸಾಧಕನನ್ನು ಬಿಂಬಿಡದೆ ಕಾಡಿ ನೋಡುವ ಮಾಯೆಯ ಪ್ರಭಾವದಿಂದ ತತ್ತರಿಸಿರುವ ಅಕ್ಕ, ತನ್ನನ್ನು ಮಾಯಾ ಮುಕ್ತನ್ನಾಗಿಸುವಂತೆ ನಂಬಿದ ದೈವವನ್ನು ಮೊರೆಹೋಗುತ್ತಾಳೆ. ಅಕ್ಕ ತನ್ನ ಅಂತರಂಗವನ್ನು ಅವಲೋಕಿಸಿಕೊಂಡು ವಿಮರ್ಶಿಸುವ ರೀತಿ ಕಾಣುತ್ತದೆ. ಅನಂತವಾದ ಆತ್ಮದ ಸೆಳೆತವು ದೈಹಿಕದ ಭಾವ ಸೆಳೆತಕ್ಕಿಂತ ಮಿಗಿಲಾದದು. ಆತ್ಮದ ನಿರ್ಮಲತ್ವ ಗುಣದಿಂದಾಗಿ ಈ ದೇಹವನ್ನು ತ್ಯಜಿಸುವ ತುಡಿತ, ಇನ್ನೊಂದು ಜನ್ಮ ಬೇಡ ಎನ್ನುವ ಬೇಡಿಕೆಯೂ ಇದೆ. ಅಸ್ಥಿರವಾದ ಮಾಯೆಯನ್ನೊಳಗೊಂಡ ಬದುಕಿನ ನೋವನ್ನು ಬಿಟ್ಟು ಅಮರತೆಯನ್ನು ಪಡೆಯುವಲ್ಲಿ ಲೌಕಿಕ ಉಪಮೆಗಳಂತೆ ದೇಹ ಕೂಡಾ ವಾಹಕವಾಗಿ ಪರಿಣಮಿಸುತ್ತದೆ. ಅಕ್ಕ ಆಧ್ಯಾತ್ಮ ಸಾಧನೆಗೆ ಸಾಧನವಾಗಿ ಪರಿಗಣಿಸುತ್ತಾಳೆಯೇ ಹೊರತು ಬೇರೆಲ್ಲ ರೀತಿ ಯಲ್ಲಿಯೂ ಗೌಣಗೊಳಿಸುತ್ತಾಳೆ. ಆತ್ಮ-ದೇಹದ ನಡುವಿನ ಸಾಮ್ಯ-ವ್ಯತ್ಯಾಸಗಳ ಕುರಿತು ಮಾತನಾಡುತ್ತಲೇ ಮಾಯೆಯ ಕ್ರಿಯಾಸ್ವರೂಪವನ್ನು ಪ್ರಸ್ತಾಪಿಸಲಾಗಿದೆ. ಭಕ್ತಿಮಾರ್ಗದಲ್ಲಿ ಸಾಗುವಾಗ ದೇಹವೆಂಬ ಸಾಧನದ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದು ಅಗತ್ಯ ವಾಗುತ್ತದೆ. ಹಸಿವು, ನೀರಡಿಕೆಗಾಗಿ ಅನಿವಾರ್ಯವಾಗಿ ಒಪ್ಪಿಕೊಳ್ಳುವ ಸಂಸಾರ ಮುಂದೆ ಮಾಯೆಯಾಗಿ ಕಾಣುತ್ತದೆ. 'ಶ್ರೀಗುರು ಸಂಸಾರ ನಿಸ್ಸಾರವೆಂದು ತೋರಿದ ಎನಗೆ ಎಂದು ಅದಕ್ಕೆ ಪೂರಕವಾಗಿ ಮುಂದಣ ಪಥವನ್ನು ತೋರಿದರು ಎಂದು ಹೇಳುತ್ತಾಳೆ.

ಭಾಪು ಸಂಸಾರವೇ ಬೆನ್ನಿಂದ ಬೆನ್ನು ಹತ್ತಿ ಬಂದೆಯಾ ಎಂದು ತಾನು ಬಿಟ್ಟರೂ ಬಿಡದ ಸಂಸಾರದ ಬಗ್ಗೆ ಜಿಗುಪ್ಸೆ ಇದೆ. ಅಕ್ಕನ ಪಾಲಿಗೆ 'ಸಂಸಾರ ಹಗೆ' ಆಗಿದೆ. ಅದಕ್ಕಾಗಿ 'ಬೆಂದ ಸಂಸಾರ ಬೆಂಬಿಡದೆ ಕಾಡಿಹುದಯ್ಯ' ಎಂದು ನೋವಿನಿಂದ ಮಿಡಿಯುತ್ತಾಳೆ. ಇಂತಹ ಬೇಡವಾದ ಹಾಗೂ ಒತ್ತಡದ ಜೀವನ ಶೈಲಿ ಸಂಸಾರ ಎಂಬ ಮಾಯೆಯಾಗಿದೆ.

೬.೯ ಅತೃಪ್ತಿ: ಮಾಯೆ

"ಭವಭವದಲ್ಲಿ ತೊಳಲಿ ಬಳಲಿತ್ತೆನ್ನ ಮನ
ಆನೇವೆನಯ್ಯ?
ಹಸಿದುಂಡಡೆ ಉಂಡು ಹಸಿವಾಯಿತ್ತು
ಇಂದು ನೀನೊಲಿದೆಯಾಗಿ
ಎನಗೆ ಅಮೃತದ ಅಪ್ಯಾಯನವಾಯಿತ್ತು
ಇದು ಕಾರಣ ನೀ ನಿಕ್ಕಿದ ಮಾಯೆಯನಿನ್ನು ಮುಟ್ಟಿದೆನಾದಡೆ
ಆಣೆ ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ"[೨೩]

'ಯಾವ ಹಸಿವಿನಿಂದ ಜಗತ್ತು ಸೃಷ್ಟಿಯಾಯಿತೋ ಆ ಜಗತ್ತಿನ ಮೂಲವನ್ನು ದರ್ಶನ ಮಾಡಿಕೊಳ್ಳುವ ಹಸಿವು ನನ್ನಲ್ಲಿ ಅದಮ್ಯವಾಗಿದೆ. ಆ ಅಮೃತತ್ವದ ಹಸಿವಿನಿಂದ ಅನುಭಾವ ಜೀವನಕ್ಕೆ ಕಾಲಿರಿಸಿ ಅನಂತಕಾಲ ಹಂಬಲಿಸಿದವಳು. ಇಂದು ಶಿವನು ಅನುಗ್ರಹಿಸಿದ ಕಾರಣ ಅಮೃತತ್ವದ ಅಪ್ಯಾಯನವಾಯಿತು'[೨೪] ಎಂದು ಭಾವಿಸಿಕೊಂಡ ಅಕ್ಕ ಲೌಕಿಕದ ಸೆಳೆತಕ್ಕೆ ಕಾರಣವಾಗುವ ಭೌತಿಕ ಪರಿಕರಗಳನ್ನು ತ್ಯಜಿಸುತ್ತಾಳೆ. ಈ ಭೌತಿಕ ಪರಿಕರಗಳೇ ಮಾಯೆ ಆಗಿವೆ. ಹಲವು ಜನ್ಮಗಳಲ್ಲಿ ತೊಳಲಾಟಕ್ಕೆ ಒಳಗಾಗಿ ಕೊನೆಗೆ ಪರಮಾತ್ಮನನ್ನು ಒಲಿಸಿಕೊಳ್ಳಲು ಪ್ರಯತ್ನಿಸುವಾಗ ಆ ಪರಮಾತ್ಮನೊಲಿದು ಎನಗೆ ಅಮೃತದ ಅಪ್ಯಾಯನದಂತೆ ಭಾಸವಾಯಿತು. ಭಗವಂತನ ಸಾಕ್ಷಾತ್ಕಾರವಾದ ಮೇಲೆ ಮಾಯೆ ಒಪ್ಪಿ ಸ್ವೀಕರಿಸುವ ಸಂದರ್ಭವೇ ಬರುವುದಿಲ್ಲ ಎಂದಿದ್ದಾರೆ. 'ಹಸಿದುಂಡಡೆ ಉಂಡು ಹಸಿವಾಯಿತ್ತು' ಎಂಬಸಾಲು ದೇಹ-ಆತ್ಮದ ಸಾಮರ್ಥ್ಯದ ಕುರಿತು ಮಾತನಾಡಿದ್ದಾಳೆ. ಉದರದ ಹಸಿವನ್ನು ನೀಗಿಸಿಕೊಂಡ ಮೇಲೆ ಆತ್ಮದ ಹಸಿವು ಮೂಡುತ್ತದೆ. ಆತ್ಮವೇ ಹಸಿವು ಪರಮಾತ್ಮನ ಸಾಕ್ಷಾತ್ಕಾರದ ಮೂಲಕ ಸದಾನಂದದ ಅನುಭವ ಪಡೆಯುತ್ತದೆ.

'ಹುಟ್ಟದ ಯೋನಿಯಲ್ಲಿ ಹುಟ್ಟಿಸಿ, ಬಾರದ ಭವಂಗಳಲ್ಲಿ ಬರಿಸಿ ಉಣ್ಣದ ಊಟವನ್ನುಣಿಸಿ ವಿಧಿಗೊಳಗಾಗಿಸುವರ ಕೇಳಿರಣ್ಣಾ'[೨೫] ಎಂಬ ಮಾತು ವಿಧಿನಿಶ್ಚಿತ ಅದನ್ನು ಬದಲಿಸುವ ಪ್ರಯತ್ನದಲ್ಲಿ ಅಕ್ಕ ತೊಡಗಿದ್ದು ವಿಶೇಷ. ಹಸಿದುಣ್ಣುವ ಕ್ರಿಯೆ ಮನುಜನಲ್ಲಿ ಅತೃಪ್ತಿಯನ್ನು ಮೂಡಿಸುತ್ತದೆಯೆ ಹೊರತು ಸಂತೃಪ್ತಿಯನ್ನು ತುಂಬುವ ಬದಲಾಗಿ ಉಣ್ಣದಿರುವ ಊಟವನ್ನು ಉಣ್ಣುವಂತೆ ಮಾಡುತ್ತದೆ. ಉಂಡ ಮೇಲೆ ಹಸಿವಾಗುವಂತೆ ಮಾಡುತ್ತದೆ. ಮಾಯೆಯ ಈ ಕ್ರಿಯಾ ವ್ಯಾಪಾರ ಎಲ್ಲಡೆಯೂ ವ್ಯಾಪಿಸಿದೆ ಮತ್ತು ತನ್ನನ್ನು ಕೂಡಾ ಆದರೆ ತಾನು ಮಾತ್ರ ಅದನ್ನು ಅಂತರಂಗದೊಳಗೆ ಪ್ರವೇಶ ಮಾಡುವುದಿಲ್ಲ. ಅದಕ್ಕಾಗಿಯೇ ಲೌಕಿಕದ ಸೆಳೆತಕ್ಕೆ ಕಾರಣವಾಗುವ ಭೌತಿಕ ಪರಿಕರಗಳನ್ನು ತ್ಯಜಿಸುತ್ತಾಳೆ.

ಕಾಯದ ಹಸಿವು ತೀರಿ ಮನಸ್ಸಿನ ಹಸಿವು ತೀರಿತೆಂದರೆ ಆ ಮನದಲ್ಲಿ ಪರಮಾತ್ಮ ಶಾಶ್ವತವಾಗಿ ನೆಲೆಗೊಳ್ಳುವನು ಅಂತಹ ಸ್ಥಿತಿಯೇ ಮಾಯಾ ಮುಕ್ತ ಸ್ಥಿತಿಯಾಗಿದೆ.

೬.೧೦ ಮನಸು: ಮಾಯೆ

"ಕಾಯದ ಕಳವಳ ಕೆಡಸಿ ಮನದ ಮಾಯೆಯ ಮಾಣಿಸಿ
ಎನ್ನ ಹರಣವ ಮೇಲೆತ್ತಿ ಸಲಹಿದೇನಯ್ಯ
ಶಿವಶಿವ ಎನ್ನ ಭವ ಬಂಧನವ ಬಿಡಿಸಿ
ನಿಮ್ಮತ್ತ ತೋರಿದ ಘನವನುಪಮಿಸ ಬಾರದಯ್ಯಾ
ಇರುಳೋಸರಿಸಿದ ಚಕ್ಕವಕ್ಕಿಯಂತೆ
ನಾನಿಂದ ನಿಮ್ಮ ಶ್ರೀಪಾದವನಿಂಬುಗೊಂಡು
ಸುಖದೊಳೊಲಾಡುವೇನಯ್ಯ ಚನ್ನಮಲ್ಲಿಕಾರ್ಜುನಾ"[೨೬]

ಎನ್ನ ದೇಹದ ದುಃಖವನ್ನು ಕೊನೆಗಾಣಿಸಿದೆ ಎನ್ನ ಮನಸ್ಸಿನ ಅಜ್ಞಾನವನ್ನು ಹೋಗಲಾಡಿಸಿದೆ ನನ್ನ ಪ್ರಾಣವನ್ನು ಕಾಪಾಡಿದೆ. ನನ್ನನ್ನು ಸಲಹಿದೆ ಪರಮಾತ್ಮನೆ ನಾನು ಎಂತಹ ದುಃಖದಲ್ಲಿ ಬಿದ್ದುಬಿಡುತ್ತಿದ್ದೆ. ನನ್ನ ಹುಟ್ಟು ಸಾವುಗಳ ಚಕ್ರವನ್ನು ಒಡೆದು ಹಾಕಿದೆ. ನನ್ನನ್ನು ನಿಮ್ಮ ಪಾದ ದರ್ಶನದ ಕಡೆಗೆ ಬರುವಂತೆ ಮಾಡಿದೆ ಇದಕ್ಕೆ ನಾನು ಎಷ್ಟು ಭಕ್ತಿ ಮಾಡಿದರೂ ಕಡಿಮೆಯೆ. ರಾತ್ರಿ ವೇಳೆ ಚಕ್ರವಾಕ ಪಕ್ಷಿಗಳು ಕೂಡಿಯೇ ಇರುವಂತೆ ನಾನು ನಿಮ್ಮ ಭಕ್ತಿಯಲ್ಲಿ ಸ್ಥಿರವಾಗಿ ನೆಲೆಸಿರುವೆನು. ಇನ್ನು ಭಕ್ತಿ ಜ್ಞಾನಾನಂದ ದಲ್ಲಿಯೆ ಸ್ಥಿರವಾಗಿರುವೆನು. 'ಬಹುದೊಡ್ಡ ವಿಪತ್ತಿನಿಂದ ಪಾರಾದ ಮೇಲೆ ಬರೆದ ವಚನವಿದು. ಕಾಮುಕ ರಾಜ ಕಸಪಯ್ಯನವರ ಮನೆಯಲ್ಲಿ ಬಂಧಿಯಾಗಿ ಯಾವಾಗ ಏನೋ ಎನ್ನುವ ಆತಂಕಗಳಿದ್ದವು. ಈಗ ಪರಮಾತ್ಮನು ಅದಕ್ಕೆಲ್ಲ ವಿದಾಯ ಹೇಳಿಸಿದ್ದಾನೆ. ಶರಣರ ರಕ್ಷಣೆ ಸಿಕ್ಕಿದೆ ಇವರೊಂದಿಗೆ ಅನುಭಾವದಲ್ಲಿ ಆನಂದದ ದಿನ ಕಳೆಯುತ್ತಿದ್ದೇನೆ.'[೨೭] ಅಕ್ಕನ ಮನಸ್ಸಿನ ಸಂಘರ್ಷವನ್ನು, ತೊಳಲಾಟವನ್ನು ಒಬ್ಬ ಸಾಮಾನ್ಯ ಸ್ತ್ರೀ ಅನುಭವಿಸುವ ರೀತಿಯಲ್ಲಿ ಚಿತ್ರಿಸಿದ್ದಾಳೆ.

ಅಕ್ಕ ಲೋಕದ ಕಣ್ಣಿಗೆ ಸಾಮಾನ್ಯ ಸ್ತ್ರೀ, ಆದರೆ ಅವಳು ಎಲ್ಲರಂತಲ್ಲ ಅಂದುಕೊಂಡಿದ್ದನ್ನು ಸಾಧಿಸಬೇಕೆಂಬ ಛಲ ಹೊತ್ತವಳು. ಆ ಕಾರಣಕ್ಕೆ ಅಕ್ಕನಿಗೆ ಕಾಯ–ಮಾಯದ ಸಂಬಂಧವನ್ನು ಚಿತ್ರಿಸಿ ಅದರಿಂದ ಬಿಡಿಸಿಕೊಳ್ಳುವ ತುಡಿತವಿದ್ದು, ಲೋಕದ ಜೀವಿಯಾದ ತನ್ನನ್ನು ಚನ್ನಮಲ್ಲಿಕಾರ್ಜುನಾ ರಕ್ಷಿಸಿದನೆಂಬ ಭಾವವಿದೆ. ಆದರೆ ಅಕ್ಕ ಸಾಮಾನ್ಯಳಾಗಿದ್ದು ಅಸಾಮಾನ್ಯವಾದ ಸ್ಥಿತಿಯನ್ನು ಪಡೆದಿದ್ದಾಳೆ. ಕಾಯದ ಕಳವಳವ ಕೆಡಿಸಿ, ಮನದ ಮಾಯೆಯ ಮಾಣಿಸಿ ಎಂಬಲ್ಲಿ ಕಾಯದಲ್ಲಿ ಮೂಡುವ ಕಳವಳಕ್ಕೆ ಮನ ಕಾರಣವಾಗುತ್ತದೆ. ಅಂತಹ ಕಳವಳದ ಮನ ತಲೆಕೆಳಗಾದುದವ್ವಾ ಎಂಬಂತೆ

ಮಾಯೆ ಎಂಬ ಭಾವದ ಕಾರಣ ಮನ ಸ್ಥಿಮಿತ ತಪ್ಪುತ್ತದೆ. ಕಾಯ ಕಳವಳಕ್ಕೊಳಗಾಗುತ್ತದೆ ಮನಸ್ಸು ಹಲವು ಬೇಕುಗಳಿಗಾಗಿ ಹಂಬಲಿಸಿದಾಗ ಅದಾವುದು ದೊರೆಯದೆ ಇದ್ದಾಗ ಕಳವಳ ಉಂಟಾಗುತ್ತದೆ. ಮನಸ್ಸು ಚಂಚಲಗೊಳ್ಳುತ್ತದೆ. ಮನದ ಚಂಚಲತೆಗೆ ಕಳವಳಕ್ಕೆ ತಾನು ಹೊರತಾಗಿಲ್ಲ. ಇದೆಲ್ಲದರಿಂದ ಅಕ್ಕನನ್ನು ಮುಕ್ತಗೊಳಿಸಿದವನು ಚೆನ್ನಮಲ್ಲಿಕಾರ್ಜುನ ಅಕ್ಕನಲ್ಲಿ ಇಂಬುಗೊಂಡಿರುವ ಆಧ್ಯಾತ್ಮಿಕ ಚೇತನವೆಂಬ ಮಹಾ ಘನವನ್ನು ಹೇಳಿಕೊಳ್ಳಲು ಸಾಧ್ಯವಿಲ್ಲ ಅದು ಭಾವ ನಿಷ್ಠವಾದುದ್ದೇ ಹೊರತು ರೂಪನಿಷ್ಠವಲ್ಲ. ಮಾಯೆ ಮನದಲ್ಲಿ ಮೂಡಿ ಕಾಯದಲ್ಲಿ ವ್ಯಕ್ತಗೊಳ್ಳುತ್ತದೆ. ಮಾಯೆಗಿಂತ ಪರಮಾತ್ಮನ ಸ್ಮರಣೆ ಚಿಂತನೆ ಅಧಿಕವಾದಾಗ ಮಾತ್ರ ಮಾಯೆಯಿಂದ ಬಿಡಿಸಿಕೊಳ್ಳಲು ಸಾಧ್ಯ. ಅಕ್ಕ ತಾನು ಇಂತಹ ಮಾಯೆಯಿಂದ ಮುಕ್ತಳಾದೆ ಎಂಬ ಭಾವ ಕೆಳಗಿನ ವಚನದಲ್ಲಿದೆ.

೬.೧೧ ಹೊನ್ನು-ಮಣ್ಣು: ಮಾಯೆ

"ಹೊಟ್ಟು ಹೊರೆಯ ಕಟ್ಟಳೆಯ ಕಳೆದೆನಯ್ಯಾ
ಹೊನ್ನು ಮಣ್ಣಿನ ಮಾಯೆಯ ಮಾಣಿಸಿದೆನವ್ವಾ
ಎನ್ನ ತನುವಿನ ಲಜ್ಜೆಯನುಳುಹಿ, ಎನ್ನ ಮನದ
ಕತ್ತಲೆಯ ಕಳೆದ
ಚನ್ನಮಲ್ಲಿಕಾರ್ಜುಯ್ಯನೊಳಗಾದವಳ
ಏನೆಂದು ನುಡಿಸುವಿರವ್ವಾ!"[೨೮]

ಸಮಾಜ ತನ್ನನ್ನು ಮಾತನಾಡಿಸುವ ವಿಮರ್ಶಿಸುವ ಕಾರ್ಯಕ್ಕೆ ತೊಡಗಿದಾಗ, ಸಮಾಜವನ್ನುದ್ದೇಶಿಸಿ ಈ ವಚನ ಹೇಳಿದಂತಿದೆ. ಪ್ರಪಂಚದಲ್ಲಿ ಜನ್ಮ ಪಡೆದ ಜೀವ ಈ ಲೋಕದ ಕಟ್ಟು-ಕಟ್ಟಳೆಗಳಿಗೆ ತಕ್ಕಂತೆ ಬದುಕಬೇಕಾಗುತ್ತದೆ. ಅಕ್ಕನು ಕೂಡಾ ಇಂತಹುದೇ ಒಂದು ಜೀವ ಅಕ್ಕನಿಗೆ ಸಮಾಜದ ಮಧ್ಯೆ ನಿಂತು ತನ್ನ ಸುತ್ತ ನೆರೆದಿರುವ ಎಲ್ಲಕ್ಕೂ ಪ್ರತಿ ಸ್ಪಂದಿಸುತ್ತಾ, ತನ್ನದೇಯಾದ ಭಿನ್ನ ಜೀವನಶೈಲಿ ರೂಪಿಸಿಕೊಳ್ಳಬೇಕೆಂಬ ಒತ್ತಡವಿದೆ. ಹುಟ್ಟಿದ ಹೊರೆಯನ್ನು ಕಳೆದುಕೊಳ್ಳಬೇಕೆಂಬ ತವಕದಲ್ಲಿ ತಾನು ಹೆಣ್ಣಾಗಿದ್ದು ಹೊನ್ನು-ಮಣ್ಣಿನ ಸೆಳೆತದಿಂದ ಮುಕ್ತಳಾದೆ ಎಂಬ ಮಾತು ಪುರುಷನ ದೃಷ್ಟಿಯಲ್ಲಿ ಹೆಣ್ಣು ಹೊನ್ನು ಮಣ್ಣು ಮಾಯೆಯಾಗುತ್ತವೆ ಎಂಬಲ್ಲಿ ಹೆಣ್ಣು, ಹೊನ್ನು ಮಣ್ಣು ಮೂರನ್ನೂ ಕಣ್ಣಲಿ ನೋಡಿ ಕಿವಿಯಲ್ಲಿ ಕೇಳಿ ಕೈಯ್ಯಲ್ಲಿ ಮುಟ್ಟಿ ಮಾಡುವ ಭಕ್ತಿ ಸಣ್ಣವರ ಸಮಾರಾಧನೆ ಯಾದಂತೆ[೨೯] ವ್ಯರ್ಥ ಭಕ್ತಿಯ ಸ್ವರೂಪವನ್ನು ಅಕ್ಕ ಹೇಳುತ್ತಾಳೆ. ಪುರುಷ ವಚನಕಾರರು ಹೊನ್ನು ಹೆಣ್ಣು, ಮಣ್ಣು, ಮಾಯೆ ಎಂದರೆ ಅಕ್ಕ ತನ್ನ ದೃಷ್ಟಿಯಲ್ಲಿ ಹೊನ್ನು ಮಣ್ಣು ಕಾಡುವ ಮಾಯೆ ಎಂದು ಹೇಳಿರುವುದು ವಿಶೇಷವಾಗಿದೆ. ಸಾಮಾಜಿಕ ನೆಲೆಯಲ್ಲಿ ನಿಂತು ವ್ಯಾಖ್ಯಾನಿಸಿದ್ದಾಳೆಂದು ತೋರುತ್ತದೆ. ತಾನು ಲೌಕಿಕದ ಸೆಳೆತದಿಂದ ಮುಕ್ತಳಾಗಿರುವೆ

ಭಗವಂತನ ಪ್ರಿಯ ಪಾತ್ರಳಾದವಳು ಎಂಬ ಕುರುಹಿನ ಮೂಲಕ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುವ ಪ್ರಯತ್ನವಾಗಿದೆ. ಇಲ್ಲಿ ಮಾಯೆ ಎಂಬುದನ್ನು ಹೊನ್ನು ಮತ್ತು ಮಣ್ಣು ಎಂಬ ರೂಪದಲ್ಲಿ ಅಕ್ಕ ನೋಡಿದ್ದಾಳೆ. ತಾನು ಮಾಯೆಯನ್ನು ಮೀರಿ ನಿಂತು ಲೋಕದ ಮಾಯೆಯನ್ನು ಸ್ತ್ರೀ-ಪುರುಷ ಎಂಬ ಲಿಂಗ ರೂಪಗಳ ಮೂಲಕ ನೋಡಿದ್ದಾಳೆ.

೬.೧೨ ಅಭಿಮಾನ: ಮಾಯೆ

"ಪುರುಷನ ಮುಂದೆ ಮಾಯೆ ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು
ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರುವುದು
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ" [೩೦]

ಮೊಲೆ, ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಬಂದರೆ ಗಂಡೆಂಬರು ಎಂಬ ಭೇದ ಮೀರಿ ಒಳಗಿನ ಆತ್ಮ ಹೆಣ್ಣು ಅಲ್ಲ-ಗಂಡು ಅಲ್ಲ ಎಂಬ ಶರಣರ ನಿಲವು ಅಕ್ಕನಲ್ಲಿ ಕಾಣುತ್ತದೆ. 'ಆತ್ಮ ತತ್ವವನ್ನು ಒಪ್ಪಿದ ಶರಣ ಧರ್ಮದಲ್ಲಿ ಹೆಣ್ಣು-ಗಂಡೆಂಬ ಲಿಂಗ ಭೇದವಾಗಲೀ, ಮಾಯೆ-ಮರಹಿನ ಮಾತಾಗಲೀ, ಸಲ್ಲದೆನ್ನುವ ಸಮನ್ವಯ ಸೂತ್ರವನ್ನು ಸಾರಿದ್ದಾಳೆ.[೩೧] ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆ-ಮರುಹು-ಅಭಿಮಾನಗಳಾವೂ ಇಲ್ಲ ಎಂಬ ಭಾವವಿದೆ. ಅನುಭಾವಿಕ ನೆಲೆಯಲ್ಲಿ ಗಂಡು-ಹೆಣ್ಣು ಇಬ್ಬರೂ ಸಮಾನರು. ಸಮಾಜದಲ್ಲಿನ ಅಂಗ ವ್ಯತ್ಯಾಸಗಳು ಆಧ್ಯಾತ್ಮಿಕ ವಲಯವನ್ನು ಪ್ರವೇಶಿಸಬಾರದೆಂಬ ಅಭಿಪ್ರಾಯ ಅಕ್ಕನದು.

ಪುರುಷನಿಗೆ ಹೆಣ್ಣು ಮಾಯೆಯಾಗಿ ತೋರುವುದಾದರೆ ಹೆಣ್ಣಿಗೆ ಪುರುಷನ ಕೂಡಾ ಮಾಯೆ ಆಗಿ ತೋರಲೇಬೇಕು ಎಂಬ ಖಂಡಿತವಾದಿ ನಿಲುವಿನಲ್ಲಿ ಮಾಯೆ ಎಡೆ ಪಡೆದಿದೆ ಎಂಬಲ್ಲಿ ಹೆಣ್ಣು-ಗಂಡೆಂಬ ಬಾಹ್ಯ ರೂಪಕ್ಕೆ ಲೋಕ ಪ್ರಾತಿನಿಧ್ಯ ಕೊಟ್ಟಿದ್ದನ್ನು ಗಮನಿಸಿ ಹೇಳಿದ್ದಾಳೆ.

'ಉಡುತಡಿಯಲ್ಲಿ ಹುಟ್ಟಿದ ಅಕ್ಕಮಹಾದೇವಿಯ ಮುಂದೆ ಮಾಯೆ ಕೌಶಿಕನೆಂಬ ಪುರುಷನ ರೂಪದಲ್ಲಿ ಅಭಿಮಾನವಾಗಿ ಕಾಡಿತು. ಸನಿಹದ ಬಳ್ಳಿಗಾವೆಯಲ್ಲಿ ಹುಟ್ಟಿದ ಅಲ್ಲಮಪ್ರಭುವಿನ ಮುಂದೆ ಮಾಯೆ ಕಾಮಲತೆ, ಮಾಯದೇವಿ ಎಂಬ ಸ್ತ್ರೀ ಅಭಿಮಾನವಾಗಿ ಕಾಡಿತು. ಇಬ್ಬರೂ ಈ ಮಾಯೆಗೆ ವಶರಾಗದೆ ಮಾಯಾಕೋಲಾಹಲರಾದರು'[೩೨] ಎಂಬ ಅಭಿಪ್ರಾಯವು ಅಲ್ಲಮ ಮತ್ತು ಅಕ್ಕನನ್ನು ಲೌಕಿಕ ನೆಲೆಯಲ್ಲಿ ಗ್ರಹಿಸಿದೆ. ಅಲ್ಲಮ ಮತ್ತು ಅಕ್ಕನನ್ನು ಸ್ತ್ರೀ ಎಂಬ ಕಾಮಲತೆ ಮತ್ತು ಪುರುಷನೆಂಬ ಕೌಶಿಕ ಮಾಯೆಯಾಗಿ

ಕಾಡಿದರು. ವ್ಯಕ್ತಿನಿಷ್ಠ-ವಸ್ತುನಿಷ್ಠ ಅಭಿಪ್ರಾಯಗಳಾಗಿ ತೋರುತ್ತವೆ. ಇಲ್ಲಿ ಅಕ್ಕ ಹೇಳಿರುವ ಗಂಡು ಹೆಣ್ಣೆಂಬ ಲಿಂಗ ಭಾವಗಳು ಭಕ್ತಿಯಲ್ಲಿ ವ್ಯಕ್ತಿ-ನಿಷ್ಠವಾಗಬಾರದೆಂಬ ರೀತಿಯಲ್ಲಿದೆ. ಗಂಡು ಹೆಣ್ಣಿಗೆ ಮಾಯೆ ಕಾಡುವಂಥದ್ದು. ಕೇವಲ ಗಂಡಿಗೆ ಹೆಣ್ಣಾಗಿ ಕಾಡುವಂಥದಲ್ಲ. ಜೀವ ಈ ಲೋಕದಲ್ಲಿ ಜನಿಸಿದ ನಂತರ ಲೌಕಿಕದ ಪ್ರಕ್ರಿಯೆಗೆ ಒಳಗಾಗುವರು. ಗಂಡು-ಹೆಣ್ಣಿನ ಸಂಬಂಧವನ್ನು ಅಕ್ಕ ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪ್ರಥಮ ಮತ್ತು ಮಹಿಳೆ ದ್ವಿತೀಯ ದರ್ಜೆಯವಳಾಗಿದ್ದಾಳೆ. ಪುರುಷನಿಗೆ ಹೆಣ್ಣಿನ ಮುಂದೆ 'ನಾನು' ಎಂಬ ಅಭಿಮಾನ ಕಾರಣವಾಗಿ ವರ್ತಿಸುತ್ತಾನೆ. ಇಂತಹ ಮನೋಧರ್ಮಕ್ಕೆ ಮಹಿಳೆಯು ಹೊರತಲ್ಲ. ಅವನ ಮುಂದೆ 'ನಾನು' ಎಂಬ ಭಾವದಲ್ಲಿ ವರ್ತಿಸುತ್ತಾಳೆ. ಇಲ್ಲಿ ಅಕ್ಕ ತಾನು ಮಹಿಳೆಯ ಸ್ಥಾನದಲ್ಲಿ ನಿಂತು ಪುರುಷ ಮನೋಧರ್ಮವನ್ನು ವಿಶ್ಲೇಷಿಸಿದ್ದಾಳೆ. ಗಂಡು ಹೆಣ್ಣಿನ ಆಚೆ ನಿಂತು ಲೋಕಕ್ಕೂ ವಿಸ್ತರಿಸುವಲ್ಲಿ 'ಲೋಕವೆಂಬ ಮಾಯೆಗೆ' ಅಂದರೆ ಈ ಲೌಕಿಕದ ಮನೋಧರ್ಮದ ಎದುರಿಗೆ ಶರಣ ಚಾರಿತ್ರ್ಯ ಹುರುಳಾಗಿ ತೋರುತ್ತದೆ. ನಿಜ ಶರಣನಾದವನು ಅಭಿಮಾನಕ್ಕೆ ಒಳಗಾಗಲಾರ ಮತ್ತು ಲೋಕದ ಕುರಿತು ಯೋಚಿಸಲಾರ. ಆಗ ಶರಣನ ಅಂತರಂಗದಲ್ಲಿ ಚನ್ನಮಲ್ಲಿಕಾರ್ಜುನ ನೆಲೆಗೊಳ್ಳುವನು. ಮಾಯೆ ಎಂಬುದು ಅದು ಸಂಸಾರಿಯಾದವನಲ್ಲಿ ಲೌಕಿಕ ಜೀವಿಯಾದವನಲ್ಲಿ ಆವರಿಸುವ ಒಂದು ಭಾವನೆ. ಮಾಯೆ ಅಭಿಮಾನದ ರೂಪದಲ್ಲಿ ವ್ಯಕ್ತವಾಗಿದೆ.

೬.೧೩. ಕೌಟುಂಬಿಕ ಸಂಬಂಧ: ಮಾಯೆ

ಸಾಮಾಜಿಕ ಸ್ತರದಲ್ಲಿ ಕುಟುಂಬಕ್ಕೆ ವಿಶೇಷ ಸ್ಥಾನವಿದೆ. ಹೆಣ್ಣು ಕುಟುಂಬ ವ್ಯವಸ್ಥೆಯ ಬಹು ಮುಖ್ಯ ಭಾಗವಾಗಿರುತ್ತಾಳೆ. ಅಕ್ಕನನ್ನು ಕುಟುಂಬದ ಭಾಗವಾಗಿ ಪರಿಭಾವಿಸುವ ಸಂದರ್ಭವನ್ನು ಹೀಗೆ ಹೇಳಿದ್ದಾಳೆ. ಕೌಟುಂಬಿಕ ನೆಲೆಯಲ್ಲಿ ಮಾಯೆ ನಿರೂಪಣೆಯಾಗಿದೆ.

"ಅತ್ತೆ ಮಾಯೆ, ಮಾವ ಸಂಸಾರಿ
ಮೂವರು ಮೈದುನರ ಹುಲಿಯಂಥವರು
ನಾಲ್ವರು ನಗೆವೆಣ್ಣು ಕೇಳು ಕೆಳದಿ
ಐವರು ಭಾವದಿರನೋಯ್ವ ದೈವವಿಲ್ಲ
ಆರು ಪ್ರಜೆಯತ್ತಿಗೆಯರ ಮೀರಲಾರೆನು
ತಾಯೆ ಹೇಳುವಡೆ ಏಳು ಪ್ರಜೆ ತೊತ್ತಿರಲು ಕಾಹು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವನಾಡುವೆನು ಹರನ ಕೂಡೆ
ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ

ಕರಚೆಲುವ ಶ್ರೀಶೈಲ ಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆ" [೩೩]

ಅಕ್ಕನ ಆಧ್ಯಾತ್ಮಿಕ ವಲಯದಲ್ಲಿ ಸ್ಥಾನ ಪಡೆದ ಪಾತ್ರಗಳ ವಿವರಣೆ ಈ ವಚನದಲ್ಲಿದೆ. ಅತ್ತೆ ಮಾಯೆ ಮಾವ ಸಂಸಾರಿ ಮೂವರು ಎಂಬುದು ತ್ರಿಕರಣಗಳು ಹುಲಿಯಂತೆ ಮೇಲೆರಗಿ ಆಕ್ರಮಣ ಮಾಡುತ್ತವೆ. ನಾಲ್ವರು ಉಪಾಯಗಳು (ಸಾಮ, ದಾನ, ಭೇದ, ದಂಡ) ಭೇದಿಸುತ್ತವೆ. ಐವರು ಭಾವಂದಿರು ಎಂಬುದು ಪಂಚೇಂದ್ರಿಯಗಳಾಗಿದ್ದು ಅವು ಅಕ್ಕನಿಗಿಂತ ಮೇಲ್ ಸ್ತರದಲ್ಲಿದ್ದು ಅವುಗಳು ಹೇಳಿದಂತೆ ಕೇಳಬೇಕು ಎಂಬಂತಾಗಿದೆ. ಆರು ಜನ ಪ್ರಜೆಯತ್ತಿಗೆಯರು ಎಂಬುದು ಅರಿಷಡ್ವರ್ಗಗಳು. ಅವರ ಮಾತು ಮೀರುವಂತಿಲ್ಲ. ಏಳು ಜನರ ಕಾವಲು ಎಂಬುದು ಸಪ್ತದಾತುಗಳು ರಕ್ಷಣೆಯಲ್ಲಿ ಕಾಯವಿದೆ ಅವುಗಳನ್ನು ಬಿಟ್ಟು ಕಾಯವಿಲ್ಲ. ಜೀವಕ್ಕೆ ಕಾಯವೇ ಆಧಾರವಾಗಿದೆ. ಕಾಯದಲ್ಲಿನ ಜೀವ ಸಪ್ತ ಧಾತುಗಳಿಂದ ರಕ್ಷಿಸಲ್ಪಡುತ್ತದೆ. ಇವೆರಡನ್ನು ಮೀರಿ ಕರ್ಮವೆಂಬ ಪತಿಯ ಬಾಯಿ ಮುಚ್ಚಿಸಿ ಶಿವನೊಡನೆ ಸರಸವಾಡಿ ಮನಸ್ಸೆಂಬ ಸಖಿಯ ಸಹಚಾರದಲ್ಲಿ ಅನುಭಾವ ತನ್ನೊಳಗೆ ಇಂಬುಗೊಂಡು ಅನುಭಾವದ ನೆಲೆಯಲ್ಲಿ ಚೆನ್ನಮಲ್ಲಿಕಾರ್ಜುನನ್ನು ಪತಿಯಾಗಿ ಸ್ವೀಕರಿಸುವೆನೆಂಬ ಭಾವವಿದೆ.

ಕಾಯಾತ್ಮಕ ಸಂಬಂಧದಲ್ಲಿ ಜೀವದ ಸುತ್ತ ಸುತ್ತಿಕೊಂಡಿರುವ ಪಂಚೇಂದ್ರಿಯಾದಿ ಬಳಗ ಸಮೂಹವನ್ನು ಅನ್ಯೋಕ್ತಿ ಭಾವದ ಸಂಸಾರದ ಚಿತ್ರಣದಲ್ಲಿ ಕಟ್ಟಿಕೊಡುತ್ತಾ ತನ್ನೊಳಗಿನ ಒಳತೋಟಿಯ ಅನುಭಾವವನ್ನು ಅಕ್ಕ ಸೊಗಸಾಗಿ ವಿವರಿಸಿದ್ದಾಳೆ. ಆಕೆ ಪ್ರಸ್ತಾಪಿಸಿದ ಸಂಬಂಧಗಳು ಅನುಬಂಧಗಳಾದ ನರಕದುರಿಯ ಸಂಬಂಧಗಳು: ಅಪನಂಬಿಕೆ ಹಿಂಸೆ, ದ್ವೇಷಗಳ ದಳ್ಳುರಿಯಲ್ಲಿ ಈ ಸಂಬಂಧಗಳು ನಲುಗಿ ಹೋಗಿವೆ.[೩೪] ಎಂದು ಆಧ್ಯಾತ್ಮ ಸಂಬಂಧವಾದ ಜೀವವನ್ನು ಸಂಸಾರದ ಸಂಬಂಧವಾದ ಕಾಯವನ್ನು ಮುಖಾಮುಖಿಗೊಳಿಸುತ್ತಾ ಮಾಯೆಯ ಸ್ವರೂಪವನ್ನು ಪ್ರಸ್ತಾಪಿಸುತಾಳೆ.

ಅಕ್ಕನ ಈ ವಚನದಲ್ಲಿ ೨ ವ್ಯವಸ್ಥೆಗಳು ಅಕ್ಕನನ್ನು ನಿಯಂತ್ರಿಸುತ್ತವೆ ಒಂದು ಕಾಯದ ಮೂಲಕ ಮತ್ತೊಂದು ಸಮಾಜದ ಮೂಲಕ, ಅಕ್ಕನ ಪಾಲಿಗೆ ಕಾಯ ಮತ್ತು ಕಾಯದ ಅಸ್ತಿತ್ವದ ಮೂಲಕ ಪ್ರತಿನಿಧಿಸುವ ಸಮಾಜ ಮಾಯೆಯ ವಿಭಿನ್ನ ಅಭಿವ್ಯಕ್ತಿಗಳಾಗಿವೆ. ಕಾಯಕದಲ್ಲಿರುವ ಮನಸ್ಸಿನಷ್ಟು ಆಪ್ತವಾದದು ಸ್ವೀಕಾರಾರ್ಹವಾದದು ಈ ಲೋಕದಲ್ಲಿ ಯಾವುದೂ ಇಲ್ಲ. ಅದಕ್ಕಾಗಿ ಅಕ್ಕ ಮನವೆಂಬ ಸಖಿಯ ಪ್ರಸಾದದಿಂದ ಅನುಭಾವ ಕಲಿತೆನು ಎಂದಿದ್ದಾಳೆ.

'ಜೀವನು ಭವದಲ್ಲಿ ಜನ್ಮತಾಳಿ ದೇಹಿಯಾದರೆ ಕೌಟುಂಬಿಕ ಸಂಬಂಧಗಳು ಹುಟ್ಟಿನಿಂದಲೇ ಬೆಸೆದು ಕೊಂಡು ಬಂದು ಅವನನ್ನು ನಿಯಂತ್ರಿಸುತ್ತವೆ. ಕೌಟುಂಬಿಕ

ವಲಯದಿಂದ ಸಾಮಾಜಿಕ ವಲಯವನ್ನು ಪ್ರವೇಶಿಸಿದಾಗ ಹಲವು ಸಂಬಂಧಗಳೊಂದಿಗೆ ಪ್ರತಿಕ್ರಿಯಿಸಬೇಕಾಗುತ್ತದೆ. ಹಿರಿಯರು-ಕಿರಿಯರು ಎಂಬ ಗೌರವ, ಪ್ರೀತಿಯಿಂದ ಜೀವ ವರ್ತಿಸಬೇಕಾಗುತ್ತದೆ. ವಾಸ್ತವದಲ್ಲಿ ಭೌತಿಕತೆ ಹಾಗೂ ಸಾಮಾಜಿಕತೆಗಳೆರಡು ಒಂದನ್ನೊಂದು ಅವಲಂಬಿಸಿಕೊಂಡು ಜೀವನನ್ನು ರೂಪಿಸುವ ಕಾರ್ಯ ಕೈಗೊಳ್ಳುತ್ತವೆ. ಈ ಕಾರ್ಯ ನೆರವೇರಲು ಪ್ರಮುಖ ಕಾರಣವೆಂದರೆ ಶಿವ ಮತ್ತು ಶಿವಾಂಶಿಕ ಶಕ್ತಿ. ಇವರಿಬ್ಬರೂ ಜೀವ ದೇಹಿಯಾಗಿ ಭವಿಯಾಗಲು ಕಾರಣರಾಗುತ್ತಾರೆ. ಜೀವ ಭವಿತನಮುಕ್ತನಾಗಬೇಕೆಂದರೆ ಶಿವನನ್ನು ನಿರ್ಮಲ ಚಿತ್ತದಿಂದ ಧ್ಯಾನಿಸಬೇಕು. ಆಗ ಮಾಯೆಯೆಂಬ ಶಿವಾಂಶಿಕ ಶಕ್ತಿಯ ಪ್ರಭಾವದಿಂದ ಮುಕ್ತನಾಗುತ್ತಾನೆ.

ವಚನದ ಕೊನೆಗೆ 'ಸಜ್ಜನದ ಗಂಡನ ಮಾಡಿಕೊಂಡೆ' ಎಂಬಲ್ಲಿ ಸಜ್ಜನ, ಎಂಬುದು ಸನ್ನಡತೆ ಉಳ್ಳ ಅಥವಾ ನಕಾರಾತ್ಮಕತೆಯಿಂದ ಕೂಡಿದ ಭಾವವಾಗಿದೆ. ಈ ಭಾವವನ್ನು ಜೀವನ ಪೂರ್ತಿ ಪತಿಯಾಗಿಸಿ ಜೊತೆ ಮಾಡಿಕೊಂಡೆ ಸಜ್ಜನತ್ವದ ನಿರ್ದೇಶನದಲ್ಲಿ ಸಾಗುವಾಗ ಮಾಯೆ ಪ್ರಭಾವ ಕಡಿಮೆಯಾಗುತ್ತದೆ ಎಂಬುದನ್ನು ಅಕ್ಕ ಹೇಳುತ್ತಾಳೆ ಇಲ್ಲಿ ಅಕ್ಕ ಹೆಣ್ಣಿನ ಬಂಧವನ್ನೇ ಕುರಿತು ಹೇಳುತ್ತಾಳೆ. ಅಷ್ಟೇ ಅಲ್ಲ ಆ ಬಂಧನದಿಂದ ಪಡೆಯಬಹುದಾದ ಮುಕ್ತಿಯ ದಾರಿಯನ್ನು ಕಂಡುಕೊಳ್ಳುತ್ತಾಳೆ. 'ಕರ್ಮದ ಗಂಡ' ಬೇಡ ಎನ್ನುತ್ತಾಳೆ.೩೫ ಎಂಬಲ್ಲಿ ಲೌಕಿಕದ ಬಗ್ಗೆ ಅಕ್ಕನ ನಿಲವು ಸ್ಪಷ್ಟವಾಗುತ್ತದೆ.

೬.೧೪ ಭ್ರಮೆ: ಮಾಯೆ

"ಎನಗೇಕಯ್ಯಾ? ನಾ ಪ್ರಪಂಚಿನ ಪುತ್ಥಳಿ
ಮಾಯಿಕದ ಮಲಭಾಂಡ ಆತುರದ ಭವನಿಳಯ
ಜಲಕುಂಭದ ಒಡೆಯಲ್ಲಿ ಒಸರುವ ನೆಲವೆನಗೇಕಯ್ಯಾ
ಬೆರಳು ತಾಳ ಹಣ್ಣ ಹಿಸುಕಿದಡೆ ಮೇಲಲುಂಟೆ?
ಬಿತ್ತೆಲ್ಲಾ ಜೀವ ಅದರೊಪ್ಪದ ತೆರ ಎನಗೆ
ಎನ್ನ ತಪ್ಪನೊಪ್ಪುಗೊಳ್ಳಿ
ಚೆನ್ನಮಲ್ಲಿಕಾರ್ಜುನ ದೇವರು ದೇವ ನೀವೆ ಅಣ್ಣಗಳಿರಾ" [೩೬]

ಈ ದೇಹವು 'ತ್ರಿವಿಧಮಲಗಳ ಪಾತ್ರೆ', 'ಹುಟ್ಟು ಸಾವಿನ ಜಾತ್ರೆ, 'ದೇಹವೊಂದು ಸೋರುವಪಾತ್ರೆ' ಕಾಯದಲ್ಲಿ ಅಡಗಿರುವ ನೇತ್ಯಾತ್ಮಕ ನೆಲೆಗಳನ್ನು ಗುರುತಿಸುತ್ತಾರೆ. ಲೌಕಿಕ ಜೀವಿಗೆ ಕಾಯ ಸುಂದರ ಹಾಗೂ ಸುಖದಾಯಿಯಾದದ್ದು. ಆದರೆ ಅಕ್ಕ ಕಾಯವನ್ನು ಕಶ್ಮಲದ ಆಗರವಾಗಿ ಪರಿಭಾವಿಸಿದ್ದಾರೆ. ಸಾಮಾನ್ಯ ಜೀವಿ ಹುಳುವಿನಂತೆ ಆ ಕಶ್ಮಲದಲ್ಲಿ ಇರಲಿಚ್ಛಿಸುತ್ತಾನೆ. ತನಗೆ ಮಾತ್ರ ಅದರ ನೆಲೆ ಬೇಡ ಎಂಬ ತಿರಸ್ಕಾರವಿದ್ದಾಗ ತಾನೂ ಈ ಲೌಕಿಕದಲ್ಲಿ ಹುಟ್ಟಿದವರೆಂಬ ನೆನಪಾಗಿ ಬೆರಳಿನಿಂದ ತಾಳೆ ಹಣ್ಣು ಹಿಸುಕಿದ

ಮಾತ್ರಕ್ಕೆ ಮೆಲಿದಂತಾಯಿತೆ ಎಂದು ಲೋಕವನ್ನು ಪ್ರಶ್ನಿಸುತ್ತಾಳಲ್ಲದೆ ತಾನು ಲೌಕಿಕದ ನೆರಳಿನಲ್ಲಿದ್ದ ಮಾತ್ರಕ್ಕೆ ಭವಿಯಾಗಲಾರೆ [೩೭] ಎಂಬ ಸ್ಪಷ್ಟತೆ ಕೊಡುತ್ತಾಳೆ.

ದೃಢವಲ್ಲದ ಈ ಒಡಲನ್ನು ನಂಬಿ ಕೇಡದ ಭಾವ ಇದ್ದರೂ ತಾನು ಈ ಸಾಮಾಜಿಕ ಬದುಕಿನ ಭಾಗ ಎಂಬ ಎಚ್ಚರಿಕೆ ಇದೆ. ಅಕ್ಕ ತಾನು ಈ ಲೋಕದವಳೇ ಆದರೂ (ಅದರ) ಲೋಕದ ವ್ಯಾಪಾರದಿಂದ ಮುಕ್ತಳಾಗಬೇಕೆಂಬ ಭಾವದಲ್ಲಿ 'ಎನಗೇಕಯ್ಯಾ' ಎಂದಿದ್ದಾಳೆ. ಮಾಯಿಕ ಎಂದರೆ ಭ್ರಮೆ ಹುಟ್ಟುವಂಥದ್ದು. ಜೀವಿಗೆ ಪ್ರಾಪಂಚಿಕ ಬದುಕು ಭ್ರಮೆ ಹುಟ್ಟಿಸುತ್ತದೆ. ಅಸತ್ಯವಾದದನ್ನು ಸತ್ಯವೆಂದು ನಂಬುವಂತೆ ಮಾಯೆ ಜೀವನನ್ನು ಪ್ರೇರೇಪಿಸುತ್ತದೆ. ಅಕ್ಕನು ಲೋಕ ಜೀವಿಯೇ ಆದ ಕಾರಣ ತನ್ನನ್ನು ಈ ಭವದಿಂದ ಕಾಪಾಡಿ ತನ್ನಂತರಂಗದಲ್ಲಿ ಪರಮಾತ್ಮ ನೆಲೆಗೊಳ್ಳಲಿ ಎಂದು ಆಶಿಸುವ ಪರಿ ಇಲ್ಲಿದೆ.

'ಅನುಭವ ಮಂಟಪದಲ್ಲಿ ಅಕ್ಕನನ್ನು ಪ್ರಭುದೇವರು ಕೊಂಡಾಡಿದಾಗ ಪ್ರತಿಕ್ರಿಯೆ ನೀಡಿದ ವಚನ ಇದಾಗಿದೆ.'[೩೮] ನನಗೇಕೆ ಹೊಗಳಿಕೆ ನಾನು ಮಣ್ಣಿನ ಬೊಂಬೆ ಹುಟ್ಟು ಸಾವಿನಲ್ಲಿ ಕರಗಿ ಹೋಗುವಂಥವಳು ಎಂಬ ಮಾತು ಜೀವದ ಅಶಾಶ್ವತತೆಯನ್ನು ತೋರಿಸುತ್ತದೆ. ಅಕ್ಕ ಈ ವಚನದಲ್ಲಿ ಸಮಾಜದ ಭಾಗವಾಗಿ ನಿಂತು ತಾನು ಕೂಡಾ ಸಾಮಾನ್ಯಳು ಅಕ್ಕನಿಗೆ ದೇಹ ಮತ್ತು ದೇಹದಲ್ಲಿರುವ ನಾನು ಎಂಬ ಭಾವ ಭ್ರಮೆಯಾಗಿ ತೋರಿದೆ. ಈ ಭ್ರಮೆಯ ಮಾಯೆ ಆಗಿದೆ.

ಲೌಕಿಕದ ನಿವೃತ್ತಿ ಹೊಂದಿ ಆಧ್ಯಾತ್ಮಿಕ ಪ್ರವೃತ್ತಿ ಸಾಧಕಳಾಗಿ ಹೊರಟ ಅಕ್ಕ ಭಗವಂತನ ಲೀಲಾ ವಿನೋದಕ್ಕೆ ಲೋಕ ಒಳಗಾದ ಸಂದರ್ಭವನ್ನು ಈ ಕೆಳಗಿನ ವಚನದಲ್ಲಿ ಹೇಳಿದ್ದಾಳೆ.

೬.೧೫ ಶಿವಾಂಶಿಕ ಶಕ್ತಿ: ಮಾಯೆ

"ತನ್ನ ವಿನೋದಕ್ಕೆ ತಾನೇ ತಾನೆ ಸೃಜಿಸಿದ ಸಕಲ ಜಗತ್ತು
ತನ್ನ ವಿನೋದಕ್ಕೆ ತಾನೇ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚನು
ತನ್ನ ವಿನೋದಕ್ಕೆ ತಾನೇ ತಾನೆ ತಿರುಗಿಸಿದನನಂತ ಭವ ದುಃಖಗಳಲ್ಲಿ
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದ ಮತ್ತೆ
ತಾನೆ ಪರಿವನದರ ಮಾಯಾ ಪಾಶವನು" [೩೯]

'ಪರಮಾತ್ಮ ತನ್ನ ಲೀಲಾ ವಿನೋದಕ್ಕಾಗಿ ಅನಂತ ಹುಟ್ಟು-ಸಾವುಗಳಲ್ಲಿ ಬರುವಂತೆ ಮೂಡಿದ ಹುಟ್ಟು-ಸಾವು ಇವುಗಳ ನಡುವೆ ಅನಂತ ಮಾಯಾಜಾಲಾ ಹರಡಿದೆ. ಸೃಷ್ಟಿ ಅನಂತವಾಗಿ ಪ್ರಕಟವಾಗುತ್ತಲೇ ಇದೆ. ಒಂದು ಅನಂತವಾಗುವ ವಿನೋದವೂ ವಿಸ್ಮಯವೂ ಭಯಾವಹವೂ ಆಗಿದೆ. ಇದು ಎಂದು ಮುಗಿಯುತ್ತದೆ ಎಂಬ ಭಾವ ಮೂಡಿದರೂ

ಇದರಿಂದ ಬಿಡಿಸಿಕೊಳ್ಳಲಾಗದು. ಪರಶಿವ ತನ್ನ ಜಗತ್ತಿನ ಆಟ ಸಾಕು ಎನ್ನಿಸಿದಾಗ ಇದರ ಮಾಯಾ ಸೂತ್ರವನ್ನು ತಾನೆ ಹರಿದು ಹಾಕುತ್ತಾನೆ. ಯಾವಾಗ ಮಾಯಾ ಪಾಶ ಹರಿಯುತ್ತದೆಯೋ ಆಗ ಜಗತ್ತು ಸ್ವಯಂಭು ಸ್ಥಿತಿಗೆ ಬರುತ್ತದೆ [೪೦] ಎಂಬ ಅರ್ಥ ಈ ವಚನದಲ್ಲಿದ್ದು, 'ಅಮೂರ್ತವಾದದನ್ನು ಮಾತಿನಲ್ಲಿ ಮೂರ್ತಗೊಳಿಸುವಲ್ಲಿ ಮಹಾದೇವಿಯಕ್ಕ ನಿಸ್ಸೀಮಳು. ಸರ್ವವ್ಯಾಪಿ ಯಾದ ಪರಶಿವನು ಸರ್ವಜ್ಞ ಹಾಗೂ ನಾದ-ಬಿಂದು-ಕಳಾತೀತನಾದವನು'[೪೧] ಪರಮಾತ್ಮನ ದೃಷ್ಟಿಯಲ್ಲಿ ಲೋಕವೇ ಆಟದ ರಂಗ, ಜೀವನೇ ಕಾಯಿಯಾಗಿದ್ದಾನೆ. ಪರಮಾತ್ಮ ಮನರಂಜನೆಗಾಗಿ ಆಡುವ ಆಟದಲ್ಲಿ ಜೀವನನ್ನು ದಾಳದ ಕಾಯಿಯಂತೆ ಬಳಸಿಕೊಳ್ಳುತ್ತಾನೆ. ಜೀವನನ್ನು ದೇಹಿಯಾಗಿಸಿ ಕಷ್ಟ-ಸುಖಗಳನ್ನು ಕೊಟ್ಟು ನೋಡುತ್ತಾನೆ. ಮತ್ತೆ ತನಗೆ ಈ ಆಟ ಸಾಕಾದಾಗ ಜೀವಕ್ಕೆ ಕವಿದ ಮಾಯಾ ಪೊರೆಯನ್ನು ಸರಿಸುತ್ತಾನೆ. ಈ ಲೋಕ ವ್ಯಾಪಾರವೆಲ್ಲ ಪರಮಾತ್ಮನ ಇಚ್ಛಿತವಾದದ್ದು. ಅಕ್ಕ ಕೂಡಾ ಲೋಕ ವ್ಯಾಪಾರದ ಒಂದು ಭಾಗವಾಗಿದ್ದಾಳೆ. ಲೋಕದ ಮಾಯೆ ಹಲವು ಪರಿಯಲ್ಲಿ ಅಕ್ಕನನ್ನು ಪೀಡಿಸಿದೆ. ಆಧ್ಯಾತ್ಮಿಕ ಸಾಧನೆಯಲ್ಲಿ ಹಲವು ರೀತಿಯ ಅಡೆ-ತಡೆ ಮೂಡಿದ್ದು, ಅದೆಲ್ಲದರಿಂದ ಮುಕ್ತಳಾಗಲು ಪ್ರಯತ್ನಿಸಿದಾಗಲೆಲ್ಲ 'ಬಿಟ್ಟೆನೆಂದರೂ ಬಿಡದಿ ಮಾಯೆ' ಎಂಬಂತೆ ಆವರಿಸಿದೆ. ಅದಕ್ಕಾಗಿಯೇ ಅಕ್ಕ ಪರಶಿವನಿಂದ ಆರಂಭಗೊಂಡು ಪರಶಿವನಲ್ಲಿ ಐಕ್ಯವಾಗುವ ಮಾಯೆಯನ್ನು ಭವ ದುಃಖವನ್ನೊಳಗೊಂಡ ಪ್ರಪಂಚವೆಂದು ಕರೆದಿದ್ದಾಳೆ. ಮಾಯೆಯಿಂದ ಮುಕ್ತವಾದ ಜಗತ್ತು ಇರಲು ಸಾಧ್ಯವಿಲ್ಲ. ಭಕ್ತಿಯಿಂದ ಜೀವ ಮಾಯೆಯಿಂದ ಮುಕ್ತನಾಗಲು ಸಾಧ್ಯ.

ಅಕ್ಕ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ ಸಂದರ್ಭದಲ್ಲಿ ಪರಮಾತ್ಮನ ಕ್ರಿಯಾ ಸ್ವರೂಪವನ್ನು ವಚನದಲ್ಲಿ ಹೇಳುತ್ತಾಳೆ ಅವನಾಡಿಸಿದಂತೆ ಆಡುವ ತಾನು ಸೂತ್ರದ ಗೊಂಬೆಯಂತೆ, ಮಾಯೆ ಎಂಬ ಒರೆಗಲ್ಲಿಗೆ ಹಚ್ಚಿ ನೋಡಿ ಪರಿಶುದ್ಧಗೊಂಡಾಗ ತನ್ನನ್ನು ಸ್ವೀಕರಿಸುತ್ತಾನೆ ಎಂಬ ಭಾವವಿದೆ. ಮಾಯೆ ಅಕ್ಕನ ಪಾಲಿಗೆ ಶಿವಾಂಶಿಕ ಶಕ್ತಿಯಾಗಿ ಶಿವನೊಡ್ಡಿದ ಪರೀಕ್ಷೆಯಾಗಿ ತೋರುತ್ತದೆ. ಮನಸ್ಸನ್ನು ಸದೃಢಗೊಳಿಸುವ ಸಾಧನವಾಗಿದೆ. ಮುಂದಿನ ವಚನದಲ್ಲಿ ಅಕ್ಕ ಮಾಯೆಯನ್ನು ಸದೃಢ ಮನಸ್ಸಿನಿಂದ ಎದುರಿಸಿದ ಸಂದರ್ಭವಾಗಿ ಅಭಿವ್ಯಕ್ತಿಯಾಗಿದೆ.

೬.೧೬ ಬ್ರಹ್ಮತ್ವ :ಮಾಯೆ

"ಅಘಟಿತಘಟಿತನ ಒಲವಿನ ಶಿಶು!
ಕಟ್ಟಿದೆನು ಜಗಕ್ಕೆ ಬಿರಿದನು
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಗೆ
ಇಕ್ಕಿದೆನು ಕಾಲಲಿ ತೊಡರನು

ಗುರುಕೃಪೆಯೆಂಬ ತಿಗುರನಿಕ್ಕಿ ಮಹಾಶರಣೆಂಬ ತಿಲಕವನ್ನಿಕ್ಕಿ
ನಿನ್ನ ಕೊಲುವೆ ಗೆಲುವೆ ಶಿವಶರಣೆಂಬ ಅಲಗ ಕೊಂಡು
ಬಿಡು ಬಿಡು ಕರ್ಮವೆ ನಿನ್ನ ಕೊಲ್ಲದೆ ಮಾಣೆನು
ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ
ಕೆಡದ ಶಿವಶರಣನೆಂಬ ಅಲಗನೆ ಕೊಂಡು ನಿನ್ನ ಕೊಲುವೆ
ಗೆಲುವೆ ನಾನು
ಬ್ರಹ್ಮಪಾಶವೆಂಬ ಕಳನೇರಿ ಸವರಿ
ವಿಷ್ಣು ಮಾಯೆಯೆಂಬ ಎಡಗೋಲನೆ ನೂಕಿ
ಎನ್ನೊಡೆಯ ಚನ್ನಮಲ್ಲಿಕಾರ್ಜುನಯ್ಯ
ತಲೆದೂಗಲಿ ಕಾದುವೆನು ನಾನು"[೪೨]

ಅಘಟಿತ ಘಟಿತನೆಂದರೆ ಅಸಾಧ್ಯವಾದದನ್ನು ನಡೆಸುವವನು ಎಂದರ್ಥ. ಅಸಾಧ್ಯವಾದದನ್ನು ಸಾಧಿಸಬಲ್ಲ ಪರಮಾತ್ಮನ ಮಮತೆಯ ಮಗು ಅಕ್ಕ 'ಕಾಮಾದಿ ಅರಿಷಡ್ವರ್ಗದ ಕಾಲುಗಳಿಗೆ ತೊಡರುಗುಣಿಕೆ ಹಾಕಿ ಕೆಳಕ್ಕೆ ಕೆಡವಿದ್ದೇನೆ. ಗುರುವಿನ ಆಶೀರ್ವಾದವೆಂಬ ಗಂಧಾಕ್ಷತೆ ಧರಿಸಿದ್ದೇನೆ. ಮಹಾಶಿವಶರಣ ಎನ್ನುವ ಭಸ್ಮ ಧಾರಣೆ ಮಾಡಿದ್ದೇನೆ. ಶಿವಶರಣು ಎಂಬ ಖಡ್ಗವನ್ನು ಹಿಡಿದಿದ್ದೇನೆ ಬಿಡು ಬಿಡು ಕರ್ಮವೇ ನಿನ್ನನ್ನು ಕೊಂದುಹಾಕಿ ಬಿಡುತ್ತೇನೆ. ಎಲ್ಲವೂ ನಿನ್ನಂದಲೇ ಆಗುತ್ತಿರುವುದು ನಿನ್ನನ್ನು ಬಿಡೆನು. ನನ್ನಿಂದ ಕೆಳಕ್ಕೆ ಬೀಳಿಸಿಕೊಳ್ಳುವ ಮುಂಚೆ ನನ್ನ ಕೆಲವು ಮಾತುಗಳನ್ನು ಕೇಳು. ಬ್ರಹ್ಮಪಾಶ ಎನ್ನುವ ಯೋಧನನ್ನು ಕತ್ತರಿಸಿ ಹಾಕುತ್ತೇನೆ. ವಿಷ್ಣು ಮಾಯೆಯೆನ್ನುವ ಎದುರು ಬಾಣವನ್ನು ಅತ್ತ ಕತ್ತರಿಸಿ ಬಿಸಾಡುತ್ತೇನೆ. ನನ್ನ ಒಡೆಯ ಪತಿ ಚನ್ನಮಲ್ಲಿಕಾರ್ಜುನ ದೇವರು ಹೌದೆನ್ನುವಂತೆ ಹೋರಾಡುತ್ತೇನೆ[೪೩] ಎಂಬಲ್ಲಿ ಯುದ್ಧರಂಗದಲ್ಲಿ ಹೋರಾಡುವ ವೀರ ವೀರಾಗಿಣಿಯಾಗಿ ತೋರುತ್ತಾಳೆ. ಅಕ್ಕ ಪಾಲಿಗೆ ಸಾಮಾಜಿಕ ಬದುಕು ಯುದ್ಧರಂಗವಾಗಿದೆ.

ಅಕ್ಕ ತನ್ನ ಜೀವನದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಪರಂಪರೆಗಳೊಂದಿಗೆ ಮುಖಾಮುಖಿ ಯಾಗುವ ಸಂದರ್ಭಗಳೇ ಹೆಚ್ಚು. ಆಧ್ಯಾತ್ಮಿಕ ಹಾದಿಯಲ್ಲಿ ನಿಚ್ಚಳವಾಗಿ ಸಾಗಬೇಕೆಂದುಕೊಂಡಾಗ ಸಾಮಾಜಿಕ ಸಂದರ್ಭಗಳು ಅಡ್ಡಿಯನ್ನುಂಟು ಮಾಡಿವೆ. ಅಕ್ಕನ ಭಕ್ತಿಗೆ ಅಂತರಂಗದಲ್ಲಿ ಪರಮಾತ್ಮನ ಸಾಕ್ಷಾತ್ಕಾರಗೊಳಿಸುವ ಉದ್ದೇಶವಿದೆ. ಆ ಭಕ್ತಿಯ ಸತ್ವಪರೀಕ್ಷೆ ಮಾಡುವ ಅರಿಷಡ್ವರ್ಗಗಳಿಂದ ಮುಕ್ತಳಾಗಲು ಗುರುವಿನ ಕರುಣೆಯಿಂದ ಸಾಧಿಸಲು ಯತ್ನಿಸುತ್ತಾಳೆ. ಸಮಾಜದ ಕಟ್ಟು-ಕಟ್ಟಳೆಗಳನ್ನು ಮೀರಿ ಲೌಕಿಕ ನಿವೃತ್ತಿಹೊಂದುವ ಆಧ್ಯಾತ್ಮಿಕ, ಯೋಗಿಕ ಸಾಧನೆ ಸಿದ್ಧಿಸಿಕೊಳ್ಳುವಲ್ಲಿ ಕಾಡುವ ಸಂದರ್ಭಗಳನ್ನು ಎದುರಿಸಿ

ಪರಿಹರಿಸಿಕೊಳ್ಳುವ ಧೈರ್ಯ ಅಕ್ಕನಿಗೆ ಬಂದಿದೆ. ಅದಕ್ಕೆ ಕಾರಣ ತಾನು ಪರಮಾತ್ಮನ ಪ್ರಿಯ ವ್ಯಕ್ತಿ ಎಂಬುದು. ಬ್ರಹ್ಮ-ವಿಷ್ಣು ಎಂಬ ಪ್ರಬಲ ಶಕ್ತಿ ಸ್ವರೂಪಗಳನ್ನು ದೂರವಿರಸಬಲ್ಲ ಸಾಮರ್ಥ್ಯ ಪರಶಿವನಲ್ಲಿ ಹೊಂದಿರುವ ಭಕ್ತಿಗಿದೆ. ಇಲ್ಲಿ ಮಾಯೆ ದೇವ ರೂಪದಲ್ಲಿ ಬಂದು ಅಕ್ಕನನ್ನು ಕಾಡಿದೆ.

೬.೧೭ ಅಹಂಕಾರ: ಮಾಯೆ

"ಅಯ್ಯಾ ಸರ್ವಮೂಲಹಂಕಾರ ವಿಡಿದು
ಕುಲಭ್ರಮೆ, ಛಲಭ್ರಮೆ, ಜಾತಿ ಭ್ರಮೆ
ನಾಮ ವರ್ಣ ಆಶ್ರಮ ಮತ ಶಾಸ್ತ್ರ ಭ್ರಮೆ
ತರ್ಕಭ್ರಮೆ, ರಾಜ್ಯ ಭ್ರಮೆ
ಧನ ಧಾನ್ಯ ಪುತ್ರ ಮಿತ್ರ ಭ್ರಮೆ, ಐಶ್ವರ್ಯ ತ್ಯಾಗ
ಭೋಗ ಯೋಗ ಭ್ರಮೆ
ಕಾಯಕಾರಣ ವಿಷಯಭ್ರಮೆ, ವಾಯುಮನ
ಭಾವ ಜೀವ ಮೋಹ ಭ್ರಮೆ
ನಾಹಂ, ಕೋಹಂ ಸೋಹಂ ಮಾಯಭ್ರಮೆ ಮೊದಲಾದ
ಬತ್ತೀಸ ಪಾಶ ಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಶಕ್ತಿ, ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ
ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನ ನಾಚಿ
ನಿಮ್ಮಡಿಗಭಿಮುಖವಾಯಿತ್ತಯ್ಯ ಚೆನ್ನಮಲ್ಲಿಕಾರ್ಜುನ"[೪೪]

'ವೇಷಧಾರಿಗಳನ್ನು ಆಷಾಡಭೂತಿಗಳನ್ನು ಸಜ್ಜನಿಕೆಯ ಮುಖವಾಡ ಧರಿಸಿದ ದುರ್ಜನರನ್ನು ಅಕ್ಕನೊಬ್ಬಳೆ ಖಂಡಿಸಿಲ್ಲ ಬೇರೆ ಶರಣರೂ ಖಂಡಿಸಿದ್ದಾರೆ. ಆದರೆ ಆ ಖಂಡನೆಯಲ್ಲಿ ಭೇದವಿದೆ. ನೋವನ್ನುಂಟು ಮಾಡಿಯೂ ಉದ್ದೇಶ ಸಾಧಿಸಿದ ಖಂಡನೆ ಕೆಲವರದ್ದಾದರೆ, ನೋವನ್ನುಂಟು ಮಾಡದೆಯೇ ಉದ್ದೇಶಿತ ಪರಿಣಾಮ ಪ್ರಭಾವ ಬೀರುವ ಖಂಡನೆಯ ಕೆಲವರದು. ಅಕ್ಕನ ಖಂಡನೆ ಎರಡನೇ ಬಗೆಯದು 'ಎನ್ನ ಮನ ನಾಚಿ ನಿಮ್ಮಡಿಗಭಿಮುಖವಾಯಿತಯ್ಯ' ಎಂಬ ಸೂಕ್ಷ್ಮ ಸುಸಂಸ್ಕೃತ ಖಂಡನೆಯನ್ನು ಹೋಲಿಸಿದಾಗ ಈ ಭೇದ ಸ್ಪಷ್ಟವಾಗುತ್ತದೆ.'[೪೫]

ಈ ಜಗತ್ತು ೩೨ ಪಾಶಗಳಿಂದ ಆವೃತ್ತವಾದುದು. ಪ್ರತಿಯೊಬ್ಬ ಜೀವನನ್ನು ಒಂದಲ್ಲ ಒಂದು ಪಾಶ ಆವರಿಸದೆ ಬಿಡದು. ಭವಿಯನ್ನಷ್ಟೆ ಅಲ್ಲ ಶಿವಭಕ್ತನನ್ನು ಈ ಪಾಶ ಆವರಿಸುತ್ತದೆ. ಶಿವಭಕ್ತನಿಗೆ ತಾನು ಶಿವನ ಭಕ್ತ ಎಂಬ ಪಾಶ, ಶಿವ ಪ್ರಸಾದಿಗೆ ತಾನು ಶಿವನ ಪ್ರಸಾದ ಎಂಬ ಪಾಶ ಹೀಗೆ ಜ್ಞಾನಿಗಳು ಜ್ಞಾನದ ರೂಪದಲ್ಲಿ ಅಜ್ಞಾನಿಗಳನ್ನು

ಅಜ್ಞಾನದ ರೂಪದಲ್ಲಿ ಮಾಯೆ ಎಂಬ ಪಾಶ ಆವರಿಸುತ್ತದೆ. ಮಾಯೆ ಎಂಬುದು ಯಾರನ್ನು ಬಿಡದು. 'ಮನುಷ್ಯನಲ್ಲಿ ಸುಖ, ಹಣ, ಅಧಿಕಾರ ಯೌವ್ವನ ಇದ್ದಾಗ ಅಹಂಕಾರ ಬರುತ್ತದೆ. ಈ ಕಾಲಕ್ಕೆ ೩೨ ರೀತಿಯ ಅಹಂಕಾರಗಳು ಮನುಷ್ಯನಲ್ಲಿ ಬರುತ್ತವೆ. ಇವೆಲ್ಲ ಭ್ರಮೆಯಲ್ಲದೆ ಸತ್ಯವಲ್ಲ. ಇದು ಮನುಷ್ಯನನ್ನು ನಾಶಮಾಡುತ್ತದೆ. ಇಂಥ ಭ್ರಮಾತ್ಮಕ ಅಹಂಕಾರಗಳಿಂದ ದೂರವಿರಬೇಕು. ಹೀಗೆ ಅಹಂಕಾರ ತುಂಬಿಕೊಂಡು ಲಾಂಛನ ಕೊಟ್ಟವರನ್ನು ಷಟ್‌ಸ್ಥಲದ ಹೆಸರಿನಲ್ಲಿ ಗೌರವಿಸುವುದಾದರೂ ಹೇಗೆ? ಶರಣರು ಎಂದು ಗುರುತಿಸುವುದಾದರೂ ಹೇಗೆ? ಆದ್ದರಿಂದ ಇವರಿಂದ ದೂರವಿರುತ್ತೇನೆ ಎಂದು ಅಕ್ಕ ಹೇಳಿದ್ದಾರೆ'[೪೬] (ಅದೇ ಪು.೧೮೧ ಅಕ್ಕಮಹಾದೇವಿ ವಚನ ವ್ಯಾಖ್ಯಾನ) ಎಂಬ ಅಭಿಪ್ರಾಯ ಸೂಕ್ತವಾಗಿದೆ ಅಕ್ಕನ ದೃಷ್ಟಿಯಲ್ಲಿ ಮಾಯೆ ಎಂಬುದು ಅಹಂಕಾರವಾಗಿದೆ ಅಹಂಕಾರಕ್ಕೆ ಕಾರಣವಾಗುವ ಸಂದರ್ಭಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಭ್ರಮೆಗೆ ಒಳಗಾದ ವೇಷಧಾರಿಗಳಿಂದ ದೂರವಿರಲು ಇಚ್ಛಿಸುತ್ತಾಳೆ. ಅವರ ಜೊತೆ ಮಾತನಾಡುವುದಕ್ಕಿಂತ ಮೌನವಾಗಿರುವುದು ಲೇಸು. ಅಕ್ಕ ಲೋಕದಲ್ಲಿ ಹರಡಿರುವ ಅಹಂಕಾರ ನೆಲೆಗಳನ್ನು ಪ್ರಸ್ತಾಪಿಸಿದ್ದಾಳೆ ಈ ನೆಲೆಗಳೆಯೆ ಮಾಯೆ ಆಗಿವೆ.

೬.೧೮ ಇಂದ್ರಜಾಲ ಮಾಯೆ:

"ಬಸವನ ಭಕ್ತಿ ಕೊಟ್ಟಣದ ಮನೆ
ಸಿರಿಯಾಳನ ಭಕ್ತಿ ಕಸಬುಗೇರಿ
ಸಿಂದು ಬಲ್ಲಾಳನ ಭಕ್ತಿ ಪರದಾರದ್ರೋಹ
ಉಳಿದಾದ (ಆಟ) ಮಟ ಉದಾಸೀನ ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು
ಮಣ್ಣಿನ ಮನೆಯ ಕಟ್ಟಿ
ಮಾಯಾ ಮೋಹಿನಿ ಎಂಬ ಮಹೇಂದ್ರ ಜಾಲದೊಳಗಾಗಿ
ಮಾಡುವ ಊಟ!
ಭಕ್ತನಲ್ಲಿ ಉಂಡು ಉದ್ದಂಡ ವೃತ್ತಿಯಲ್ಲಿ ನಡೆವವರು ಶಿವನಲ್ಲ
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು
ಶ್ರೀಗಿರಿ ಚನ್ನಮಲ್ಲಿಕಾರ್ಜುನಾ
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತಾಗಿ ನಿರ್ವಯಲಾದೆ ಕಾಣಾ"[೪೭]

'ಬಸವಣ್ಣನ ಭಕ್ತಿ ಏನಾಗಿದೆ ಎಂದರೆ ದವಸ-ಧಾನ್ಯ ಕುಟ್ಟುವ ಒಂದು ಗಿರಿಣಿಮನೆಯಾಗಿದೆ. ಅಲ್ಲಿ ಭಕ್ತಿ ಜ್ಞಾನಕ್ಕಿಂತ ಹೆಚ್ಚಾಗಿ ಉಣ್ಣುವ, ಅಟ್ಟುವ, ನೀರು ತರುವ, ಎಲೆ ತರುವ, ಪಾತ್ರೆ ತೊಳೆಯುವ ಸ್ವಚ್ಛ ಮಾಡುವ ಕಾರ್ಯವೆ ಹೆಚ್ಚಾಗಿದೆ.

ಸಿರಿಯಾಳನ ಭಕ್ತಿ ಕಟುಕರ ಮನೆಯಾಗಿದೆ ಮಗನನ್ನು ಕಡಿದು ಉಣಬಡಿಸುವುದು. ಸಿಂಧು ಬಲ್ಲಾಳನು ಮಹಾರಾಜನಂತೆ ಅವನ ಭಕ್ತಿ ಸತಿಯರಿಗೆ ದ್ರೋಹ ಮಾಡುವುದು. ಪತ್ನಿಯನ್ನು ಕೂಡುವುದು ಎಂದರೇನು ? ಇನ್ನು ದಾಸೋಹ ಮಾಡುವವರಲ್ಲಿ ಎರಡು ವಿಧ ಕೆಲವರು ಉದಾಸೀನದಿಂದ ಮಾಡಬೇಕಲ್ಲಾ ಎಂದು ದಾಸೋಹ ಮಾಡುತ್ತಾರೆ ಮತ್ತೆ ಕೆಲವರಿಗೆ ದೀನ ಭಾವದ ದೆವ್ವ ಮೆಟ್ಟಿಕೊಂಡಿದೆ. ಇದೆಲ್ಲ ಭಕ್ತಿಯಿಂದ ಹೊರಗು. ಜಂಗಮ ಎನಿಸಿಕೊಂಡವನು ಇಂದ್ರಜಾಲ ಮಾಡುವವರ ಹಾಗೆ ಮಾಡುವುದಲ್ಲ. ಭಕ್ತರ ಮನೆಗೆ ಬಂದರೆ ನಯವಿನಯ ಗಂಭೀರಬೇಕು. ಭಕ್ತರನ್ನು ಕಸದಂತೆ ನಡೆಸಿಕೊಳ್ಳುವುದಾಗಲಿ, ಭಕ್ತರು ಮಾತೆ ಆಡದಂತೆ ಭಯಂಕರವಾಗಿ ವರ್ತಿಸುವುದಾಗಲಿ ಕೂಡದು. ಹಾಗೇನಾದರೂ ವರ್ತಿಸಿದರೆ ಅವರು ಗುರುಗಳಲ್ಲ. ಜಂಗಮರಲ್ಲ. ಅಂತಹವರಿಗೆ ಭಕ್ತಿ ಮಾಡುವವರು ಭಕ್ತರಲ್ಲ. ಇವರು ಮರ್ತ್ಯಲೋಕಕ್ಕೆ ಸಲ್ಲುವುದಿಲ್ಲ. ಚನ್ನಮಲ್ಲಿಕಾರ್ಜುನದೇವ ಇನ್ನು ನಾನು ಬಯಲಾಗುತ್ತಾನೆಳಲ ಮಹಾ ಮನೆಯಲ್ಲಿನ ಭಕ್ತರ, ಗುರುಗಳ ವಿಚಿತ್ರ ಪ್ರಪಂಚವು ಸಾಕಾಗಿದೆ. ಶರಣರ ಮಹಾಮನೆಯ ಬಗೆಗೆ ಹೊಂದಿದ್ದ ಭಾವನೆ ಬೇಸರ ತಂದಿದೆ. ಅಕ್ಕ ತಾನು ಕಲ್ಪಿಸಿಕೊಂಡ ಮಹಾಮನೆಯ ಸ್ವರೂಪಕ್ಕೂ ಪ್ರಸ್ತುತಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸುವಂತಿದೆ. ಅಕ್ಕನ ಈ ವಚನದಲ್ಲಿ ಮಾಯಾ ಮೋಹಿನಿ ಎಂಬ ಜಾಲದಲ್ಲಿ ಸಿಲುಕಿದವರೆಲ್ಲರೂ ಒಂದೊಂದು ರೀತಿಯ ವರ್ತನೆಯನ್ನು ಹೊಂದಿದ್ದಾರೆ. ಇದರಿಂದ ತನಗೂ ಬಿಡುಗಡೆ ಇಲ್ಲ. ಆದರೂ ಅಕ್ಕನಿಗೆ ತಾನೂ ಮಾಯೆಯಿಂದ ಮುಕ್ತಳಾಗಬೇಕೆಂಬ ಒತ್ತಡವಿದೆ. ಲೋಕದಲ್ಲಿನ ಗುರುವಿಗಿಂತ ತನ್ನ ಗುರು ಬೇರೆ ಆಗಿದ್ದು, ಆ ಗುರುವಿನ ಮೂಲಕ ಲಿಂಗದಲ್ಲಿ ಐಕ್ಯಳಾದೆ ಭಕ್ತಿಯೆಂಬ ಭಾವದಿಂದ ಮುಕ್ತಳಾದಾಗ ನಾನು ಎಂಬ ಭಾವ ಕಳಚಿ ಹೋಗುತ್ತದೆ. ಆನು-ನೀನುಗಳೆರಡು ಏಕವಾಗಿ ತಾನಿಲ್ಲವಾಗಿ ಲಿಂಗವಿಲ್ಲದ ಸ್ಥಿತಿ ತಲುಪಿದೆ ಎಂಬ ಭಾವವಿದೆ. ಮಾಯೆ ಎಂಬುದು ಮತ್ತೊಂದು ನೆಲೆಯಲ್ಲಿ ಇಂದ್ರಜಾಲವಾಗಿದೆ ಮತ್ತು ಅದೃಶ್ಯ ಶಕ್ತಿಯಾಗಿದೆ. ಮಾಯೆ ಎಂಬ ಒತ್ತಡದಿಂದ/ ಪ್ರಭಾವದಿಂದ ಮುಕ್ತವಾದಾಗಿನ ಸ್ಥಿತಿಯನ್ನು ಈ ವಚನ ಪ್ರಸ್ತಾಪಿಸುತ್ತದೆ.

"ಭಾವ ಬೇಸರವಾಯಿತ್ತು ಮನ ಮೃತ್ಯುವನಪ್ಪಿತ್ತು
ಆನೇವೇನಯ್ಯ..................
ಅಳಿತನದ ಮನ ತಲೆಕೆಳಗಾಯಿತ್ತು; ಆನೇವೇನಯ್ಯ
ಬಿಚ್ಚಿ ಬೇರಾಗದ ಭಾಗವಾಗೆ
ಬೆರೆದೊಪ್ಪಚ್ಚಿ ನಿನ್ನ ನಿತ್ಯ ಸುಖದೊಳಗೆಂದಿಪ್ಪೆನಯ್ಯಾ
ಚನ್ನಮಲ್ಲಿಕಾರ್ಜುನಾ"[೪೯]

ಎಂಬಂತೆ ಮಾಯೆ ಆವರಿಸಿದಾಗ ಮರೆಯಾದ ಭಾವ ಇಲ್ಲವಾದಾಗ ಕಳೆದು

ಹೋಗಿದೆ. ಭಾವ ಮರೆಯಾಗಲು ದೃಷ್ಟಿ ಕಾರಣ. ದೃಷ್ಟಿಗೆ ಮನ ಕಾರಣ ಅದಕ್ಕೆ ಮನದಲ್ಲಿ ನೆಲೆಗೊಂಡ ಮಾಯೆ ಕಾರಣವಾಗಿದೆ.

೬.೧೯ ಲೌಕಿಕದ ಸ್ಥಿತಿ: ಮಾಯೆ

"ಕರಸ್ಥಲಕ್ಕೆ ಲಿಂಗ ಸ್ವಾಯತವಾದ ಬಳಿಕ
ಕಾಯಕ ನಿವೃತ್ತಿಯಾಗಬೇಕು.
ಅಂಗದಲಳವಟ್ಟ ಲಿಂಗ, ಲಿಂಗೈಕ್ಯಂಗೆ
ಅಂಗ ಸಂಗ ಮತ್ತೆಲ್ಲಿಯದೋ?
ಮಹಾಘನವರಿತ ಮಹಾಂತಂಗೆ
ಮಾಯವೆಲ್ಲಿಯದೊ ಚೆನ್ನಮಲ್ಲಿಕಾರ್ಜುನ"[೫೦]

ಕಾಯಕ ಮಾಡುವ ಕೈಗಳಲ್ಲಿ ಲಿಂಗ ನೆಲೆಗೊಂಡಾಗ ಕಾಯಕ ಮಾಡುವುದನ್ನು ಕೈಗಳು ಬಿಡಬೇಕು. ಅಂಗದಲ್ಲಿ ಲಿಂಗ ನೆಲೆಗೊಂಡಾಗ ಅಂಗ ಲೌಕಿಕವನ್ನು ತ್ಯಜಿಸಬೇಕು. ಅಂಗೈಯಲ್ಲಿರುವ ಲಿಂಗವು ಅಂಗದಲ್ಲಿ ಐಕ್ಯವಾದಾಗ, ಲಿಂಗಾಂಗ ಸಾಮರಸ್ಯ ಮೂಡುತ್ತದೆ. ಮಹಾಘನವೆಂಬ ಪರವಸ್ತು ಜೀವಿಯ ಅರಿವಿಗೆ ಬರುತ್ತದೆ. ಆಗ ಮಾಯಾಭಾವ ಜೀವಿಯನ್ನು ಆವರಿಸಲಾರದು ಎಂಬರ್ಥವನ್ನು ಒಳಗೊಂಡಿದೆ. ಮಾಯೆ ಜೀವವನ್ನು ವಿಧವಿಧವಾಗಿ ಆವರಿಸುವ ಬಗೆಯನ್ನು ಹೇಳುತ್ತಾ ಬಂದು ಕರಸ್ಥಲಕ್ಕೂ ಲಿಂಗಕ್ಕೂ ಇರುವ ಅನನ್ಯವಾದ ಸಂಬಂಧವನ್ನು ಹೇಳುತ್ತಾಳೆ. ನಿಜ ಶರಣನಿಗೆ ಮಾಯೆ ಕಾಡದು.

'ಕರಸ್ಥಲಕ್ಕೆ ಲಿಂಗ ಸ್ವಾಯತವಾಗುವುದು ಎಂದರೆ ಪರಮಾತ್ಮನೇ ಸರ್ವಸ್ವವಾಗಿ ಬದುಕುವುದು ಆಧ್ಯಾತ್ಮ ಜೀವನ ನಡೆಸುವ ಎಂದರ್ಥ. ಯಾರು ಪರಮಾತ್ಮನೇ ಪ್ರಾಣ, ಸರ್ವಸ್ವ ಎಂದು ಬಾಳು ನಡೆಸಲು ಸಿದ್ಧರಿದ್ದಾರೆ ಅವರಿಗೆ ಮತ್ತೆ ಲೌಕಿಕ ಭೋಗೋಪಯೋಗ ಕೂಡದು ಎಂಬ ಅಭಿಪ್ರಾಯವಿದೆ. ಪರಮಾತ್ಮ ಏನು ಎಂದು ತಿಳಿದ ಮಹಾತ್ಮರಿಗೆ ಮತ್ತೆ ಯಾವ ಮಾಯೆಗಳೂ ಹಿಡಿಯುವುದಿಲ್ಲ. ಅವರು ಮಾಯಾ ದೂರರು ಮಾಯೆ ಏನು? ಎಂದು ತಿಳಿದಿರುವದರಿಂದ ಅವರು ಮಾಯಾ ಬಂಧನಕ್ಕೆ ಸಿಕ್ಕಲಾರರು'[೫೧] ಎಂಬ ಮಾತು ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿರುವವರಿಗೆ ಕಿವಿಮಾತೆಂಬಂತೆ ವಿವರಿಸಲಾಗಿದೆ. ಇದಲ್ಲದೆ ಕಾಯಕಕ್ಕೆ ಪ್ರಾಮುಖ್ಯತೆ ಕೊಟ್ಟಾಗ ಕಾಯಕವೇ ಮಾಯೆ ಆಗಿ ನಿಲ್ಲುತ್ತದೆ. ಕಾಯಕವೆಂಬುದು ಜೀವನ ನಿರ್ವಹಣೆಗೆ ಸಾಧನವಾಗಬೇಕೆ ಹೊರತು ಅದೇ ಜೀವನವಾಗಬಾರದು. ಕಾಯಕ ಜೀವಿಯಾದಲ್ಲಿ ನಿಜ ಶರಣನಾಗಲು ಸಾಧ್ಯವಾಗದೆ ಇರಬಹುದು ಆ ಕಾರಣಕ್ಕೆ ಅಕ್ಕ ಕಾಯಕವನ್ನು ಭಕ್ತಿ (ಲಿಂಗದ)ಯ ನಂತರದ ಸ್ಥಾನದಲ್ಲಿರಿಸಿ ನೋಡಿದಂತಿದೆ. 'ಸಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ ಪ್ರಜ್ವಲಿಸಿ ತೊಳತೊಳಗಿ ಬೆಳಗುತಿಹ ಕಾಂತಿಯಲ್ಲಿ ಒಜ್ಜರಿಸಿ ತನುಮನ ದೃಷ್ಟಿ ನೆಟ್ಟು ಲಿಂಗದಲ್ಲಿ ಒಜ್ಜಲಿಸುವ'

ರೀತಿ ಅಕ್ಕನದಾಗಿದೆ. ಪರಮಾತ್ಮ ಸಜ್ಜನನಾಗಿದ್ದರಿಂದ ತಾನು ಹೆಣ್ಣಾಗಿ ಅಕ್ಕ ಪ್ರತಿಕ್ರಿಯಿಸುತ್ತಾಳೆ. ಇಲ್ಲಿ ಕರಸ್ಥಲಕ್ಕೆ ಲಿಂಗ ಸ್ವಾಯತವಾದಾಗ ಅಕ್ಕ ಆ ಲಿಂಗದಲ್ಲಿ ಐಕ್ಯವಾಗಬೇಕೆ ಹೊರತು ಕಾಯಕವೆಂದು ಲಿಂಗವನ್ನು ತ್ಯಜಿಸಬಾರದು ಎಂದು ಹೇಳುತ್ತಲೇ ಇಂತಹ ಅಪೂರ್ವ ಸತ್ಯವನ್ನರಿವರಿಗೆ ಮಾಯೆ ತಾಕದು, ಆವರಿಸದು ಎಂದಿದ್ದಾಳೆ.

ಇಡೀ ಶರಣ ಪರಂಪರೆಯಲ್ಲಿ ಭಿನ್ನ ಧಾರೆಯಾಗಿ ನಿಲ್ಲುವಂತಹ ವ್ಯಕ್ತಿತ್ವ ಅಕ್ಕನದಾಗಿದೆ. ಸಾಮಾಜಿಕ ಅಸ್ತಿತ್ವದ ಮೂಲಕ ಗುರುತಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕತೆ ಮೂಲಕ ಸಾಮಾಜಿಕ ಸ್ಥಾನಮಾನ ಗುರುತಿಸುವಂತಹ ವಿಶೇಷ ಪಾತ್ರವನ್ನು ಅಕ್ಕ ನಿರ್ವಹಿಸಿದ್ದಾಳೆ. ಸಾಮಾಜಿಕವಾಗಿ ಹೆಣ್ಣೊಬ್ಬಳನ್ನು ಪುರುಷನ ಸತಿಯಾಗಿ ಗುರುತಿಸುವ ವಿಧಾನವಿದ್ದು, ಅದನ್ನು ತಿರಸ್ಕರಿಸಿ ಹೊರಟ ಅಕ್ಕನಿಗೆ ಹಲವು ಸಾಮಾಜಿಕ ಪ್ರಶ್ನೆಗಳು ಎದುರಾದವು. ಆ ಸಾಮಾಜಿಕ ಪ್ರಶ್ನೆಗಳಿಗೆ ಆಧ್ಯಾತ್ಮಿಕ ನೆಲೆಯ ಉತ್ತರಗಳನ್ನು ಕೊಡುವ ಸಾಹಸ ಮಾಡಿದಳು. ಅಕ್ಕನ ಒಟ್ಟು ವಚನಗಳಲ್ಲಿ 'ಮಾಯೆ' ಎಂಬ ಭಾವದ ಕುರಿತು ಮಾತನಾಡಿದ ವಚನಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಅಕ್ಕನ ವಚನಗಳನ್ನು 'ಮಾಯೆ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಗಮನಿಸಿದಾಗ ಅಕ್ಕ ಸಾಮಾಜಿಕವಾಗಿ ನಿಂತು ಹೆಣ್ಣು ಎಂಬುದನ್ನು ಬಿಟ್ಟು ಹೊನ್ನು-ಮಣ್ಣು ಮಾಯೆ ಎಂದು ಕರೆದಿದ್ದಾರೆ. ಈ ಮಾಯೆ ಜ್ಞಾನಿಗಳನ್ನು ಜ್ಞಾನದ ನೆಲೆಯಲ್ಲಿ ಅಜ್ಞಾನಿಗಳನ್ನು ಅಜ್ಞಾನದ ನೆಲೆಯಲ್ಲಿ ಕಾಡುವಂತಹದ್ದು. ಕೆಲವೊಮ್ಮೆ ಸಂಸಾರವಾಗಿ, ಭ್ರಮೆಯಾಗಿ, ಕಾಯವಾಗಿ ಭವವಾಗಿ ಸೆಳೆದದ್ದು ಉಂಟು. ಅಕ್ಕ 'ಮಾಯೆ'ಯನ್ನು ಅರ್ಥೈಸುವಾಗ ಆಧ್ಯಾತ್ಮಿಕತೆಯ ಜೊತೆ ಸಾಮಾಜಿಕ ಸಂದರ್ಭವನ್ನು ಮುಖ್ಯವಾಗಿಸಿಕೊಂಡು ಹೇಳುತ್ತಾಳೆ. ಪರಮಾತ್ಮನ ಇರುವನ್ನು ಅರಿಯದ ಯಾರೇ ಆಗಲಿ ಅವರು ಮಾಯೆ ಎಂಬ ಭಾವಕ್ಕೆ ಒಳಗಾಗುತ್ತಾರೆ.

ಕೊನೆ ಟಿಪ್ಪಣೆಗಳು:

೧. ಡಾ.ಎಂ.ಚಿದಾನಂದಮೂರ್ತಿ (ಸಂ), ವೀರಶೈವ ಸಂಪುಟ, ಪು.೯

೨. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು, ಪು.೫

೩. ರಹಮತ್ ತರೀಕೆರೆ(ಸಂ), ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪು.ಸಂ.೬೬

೪. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು,ಪು.೫

೫. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೧

೬. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೬

೭. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೨೯

೮. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೬

೯. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೨

೧೦. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೫

೧೧. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೦

೧೨. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೮

೧೩. ಅದೇ, ಪು.೬

೧೪. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೩

೧೫. ಅದೇ, ಪು.೧೪

೧೬. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೭

೧೭. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೪

೧೮. ಬಸವರಾಜ ಕಲ್ಗುಡಿ, ಮಧ್ಯಕಾಲಿನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಪು.೧೫೨

೧೯. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೭

೨೦. ರಹಮತ್ ತರೀಕೆರೆ(ಸಂ), ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ

ಮುಖಾಮುಖಿ, ಪು.೧೦೧

೨೧. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.ಸಂ.೯

೨೨. ರಹಮತ್ ತರೀಕೆರೆ(ಸಂ), ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪು.೧೦೬

೨೩. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೩೮

೨೪. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೦೧

೨೫. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೧೩

೨೬. ಅದೇ, ಪು.೧೨೬

೨೭. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೨೬೪

೨೮. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು, ಪು.೧೨೧

೨೯. ಅದೇ, ಪು.೬೫

೩೦. ಅದೇ, ಪು.೧೨೭

೩೧. ಶಾಂತಾ ಇಮ್ರಾಪೂರ (ಲೇ), ಅಕ್ಕ ಮಹಾದೇವಿ–ಪು. ೨೭೮

೩೨. ಎಂ.ಎಸ್.ಶೇಖರ (ಸಂ), ಕನ್ನಡ ಸಾಹಿತ್ಯದಲ್ಲಿ ಮಾನವಪರ ಧೋರಣೆಗಳು, ಪು.೭೫

೩೩. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೧೧೯

೩೪. ರಹಮತ್ ತರೀಕೆರೆ(ಸಂ), ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪು.೪೪

೩೫. ಅದೇ, ಪು.೨೩

೩೬. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೧೨

೩೭. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೩೧

೩೮. ಅದೇ–ಪು.೩೧

೩೯. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೧೨

೪೦. ವಿಜಯಕುಮಾರ ಮಹಾನುಭಾವಿಗಳು(ಲೇ)–ಅಕ್ಕಮಹಾದೇವಿಯವರ ವಚನವ್ಯಾಖ್ಯಾನ–ಪು.೩೨

೪೧. ಶಾಂತಾ ಇಮ್ರಾಪೂರ (ಲೇ), ಅಕ್ಕಮಹಾದೇವಿ, ಪು.೨೬೮

೪೨. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೬೧

೪೩. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೭೭

೪೪. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೬೩

೪೫. ಸಿದ್ಧಯ್ಯ ಪುರಾಣಿಕ (ಲೇ), ಮಹಾದೇವಿ, ಪು.೭೦

೪೬. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೧೮೧

೪೭. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೧೦೬

೪೮. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೨೧೪

೪೯. ಹಿರೇಮಠ.ಆರ್.ಸಿ.(ಸಂ), ಮಹಾದೇವಿಯಕ್ಕನ ವಚನಗಳು, ಪು.೨೮

೫೦. ಅದೇ, ಪು.೧೨೩

೫೧. ವಿಜಯಕುಮಾರ ಮಹಾನುಭಾವಿಗಳು(ಲೇ), ಅಕ್ಕಮಹಾದೇವಿಯವರ ವಚನವ್ಯಾಖ್ಯಾನ, ಪು.೨೫೮

ಅಧ್ಯಾಯ : ೭

ಅಲ್ಲಮ ಮತ್ತು ಅಕ್ಕನ ವಚನಗಳು: ಮಾಯೆ

ಅಧ್ಯಾಯ-೭

ಅಲ್ಲಮ ಮತ್ತು ಅಕ್ಕನ ವಚನಗಳು: ಮಾಯೆ

ಹನ್ನೆರಡನೆಯ ಶತಮಾನದ ಶಿವಶರಣರು ಸಾಮಾಜಿಕ ಸಮನ್ವಯತೆಯ ದೃಷ್ಟಿಯಿಂದ ಕಾಯಕ ಮತ್ತು ದಾಸೋಹ ಎಂಬ ಎರಡು ತತ್ವಗಳನ್ನು ಅನುಸರಣೆಗೆ ತಂದರು. ದೈಹಿಕ ಮತ್ತು ಮಾನಸಿಕ ಪರಿಶುದ್ಧತೆಯನ್ನು ಸಾಧಿಸಬೇಕೆಂದರೆ ಆಧ್ಯಾತ್ಮಿಕ ಸಾಧನೆಯಿಂದ ಸಾಧ್ಯವೆಂಬುದನ್ನು ಅರಿತರು. ದೇಹ-ಮನಸ್ಸುಗಳ ಕ್ರಿಯಾ ಸ್ವರೂಪದ ಸುತ್ತ ತಮ್ಮ ಆಲೋಚನೆಯನ್ನು ತರ್ಕಬದ್ಧವಾಗಿ ವಿವೇಚಿಸುವ ಮೂಲಕ ಅರಿಷಡ್ವರ್ಗಗಳು ಪಂಚೇಂದ್ರಿಯಗಳು, ತನುತ್ರಯಗಳು, ಮಲತ್ರಯಗಳು ಆಧ್ಯಾತ್ಮಿಕ ಜಿಜ್ಞಾಸೆಗೆ ತೊಡಗುವ ಜೀವಾತ್ಮನನ್ನು ಹಲವು ಬಗೆಯಲ್ಲಿ ಕಾಡುವ ಪರಿಯನ್ನು ವಚನಗಳ ಮೂಲಕ ಎಳೆ ಎಳೆಯಾಗಿ ಬಿಚ್ಚಿಟ್ಟರು. ಕಾಮ, ಕ್ರೋಧ, ಮೋಹ, ಮದ, ಮತ್ಸರಗಳು ಶಾರೀರಿಕ ಅಭಿಪ್ಸೆಯನ್ನಿಟ್ಟುಕೊಂಡವರನ್ನು ನಿರಂತರ ಕಾಡುತ್ತಲೇ ಇರುವಂಥವುಗಳು. ಇವುಗಳ ಮೇಲೆ ನಿಯಂತ್ರಣ ಸಾಧಿಸುವ ಮನೋಬಲವನ್ನು ಸಾಧಿಸಿಕೊಳ್ಳಬೇಕಾದ ಅಗತ್ಯವನ್ನು ಶರಣರ ವಚನಗಳು ಪ್ರಸ್ತಾಪಿಸುತ್ತವೆ.

ಅನೇಕ ಶಿವಶರಣರು ಕಾಯ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಲು ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವಲ್ಲಿ ತಡೆಯಾಗಿರುವ ಸ್ಥಿತಿ 'ಮಾಯೆ' ಆಗಿದ್ದು, ಮಾಯೆ ಕುರಿತು ಶರಣರು ಲೌಕಿಕ ನೆಲೆಯಲ್ಲಿ ನಿಂತು ಅರ್ಥೈಯಿಸಿದರು. ಜೇಡರ ದಾಸಿಮಯ್ಯ, ಬಸವಣ್ಣ, ಸಿದ್ಧರಾಮ, ಚೆನ್ನಬಸವಣ್ಣ, ಮುಕ್ತಾಯಕ್ಕ ಮುಂತಾದವರು 'ಮಾಯೆ' ಕುರಿತು ಹೇಳುವಾಗ ಲೌಕಿಕದ ಭಕ್ತ, ಪೂಜೆ, ಆಚರಣೆ, ಸಂಪ್ರದಾಯ ಇತ್ಯಾದಿ ಅಂಶಗಳನ್ನು ಸಾಮಾಜಿಕ ಸ್ತರ ವಿನ್ಯಾಸಗಳಿಗನುಗುಣವಾಗಿ ಗಮನಿಸಿಕೊಂಡು ಕಾಯಕ ದಾಸೋಹವೆಂಬ ತಾತ್ವಿಕತೆಯ ತಳಹದಿಯ ಮೇಲೆ ಶಿವಭಕ್ತಿ ಕೈಗೊಳ್ಳುವ ರೀತಿಯನ್ನು ವಿಶ್ಲೇಷಿಸುವಾಗ ಮಾಯೆ ಸೂಕ್ಷ್ಮ ಚರ್ಚೆಗೊಳಗಾಗಿದೆ. ಹೀಗೆ ವೈಯಕ್ತಿಕ ಸಾಧನೆಯ ಜೊತೆ ಜೊತೆಗೆ ಸಾಮಾಜಿಕ ಸಮೃದ್ಧಿಯನ್ನು ರೂಪಿಸಬೇಕೆಂಬ ಮನೋಧೋರಣೆಯ ಶಿವಶರಣರ ಮಧ್ಯದಲ್ಲಿ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಅನನ್ಯ ಶಿವಭಕ್ತಿ ಸಾಧಕರಾಗಿ ತೋರುತ್ತಾರೆ. ಶಿವನೆಂಬ ಗಮ್ಯವನ್ನು ತಲುಪುವಲ್ಲಿ ಏಕನಿಷ್ಠೆಯಿಂದ ಸಾಗಿ ಸದಾನಂದ ಸ್ವರೂಪಿ ಪರಮಾತ್ಮನನ್ನು ಅಂತರಂಗದಲ್ಲಿ ಸಾಕ್ಷಾತ್ಕರಿಸಿಕೊಂಡವರು. ಆಧ್ಯಾತ್ಮಿಕ ಸಾಧನೆಯ ಪ್ರಕ್ರಿಯೆಯಲ್ಲಿ ತೋರಿಯೂ ತೋರದಂತಿರುವ ಭಾವಸ್ಥಿತಿ ಆಗಿರುವ ಮಾಯೆಯನ್ನು ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ವಚನಗಳಲ್ಲಿ ನಿರ್ವಚಿಸಿದ್ದಾರೆ.

ಅಕ್ಕಮಹಾದೇವಿ ಕಾಯದ ಮೂಲಕ ಅನುಭಾವಿಕ ನೆಲೆಯನ್ನು ಸಾಧಿಸುವ ನಿಟ್ಟಿನಲ್ಲಿ ಕಾಯದ ಪ್ರಕೃತಿ ಸಹಜ ಸೆಳೆತಗಳಿಂದ ಮುಕ್ತಳಾಗಬೇಕೆಂಬ ಹಂಬಲದ

ಜೊತೆಗೆ ಸಾಮಾಜಿಕ ಅಸ್ತಿತ್ವದಿಂದ ಬಿಡಿಸಿಕೊಂಡು ತನ್ನತನವನ್ನು ರೂಪಿಸಿಕೊಳ್ಳಬೇಕೆಂಬ ದೃಢ ನಿಶ್ಚಯವುಳ್ಳವಳಾಗಿದ್ದಳು. ಸಮಾಜದ ನೀತಿ- ನಿಯಮಗಳ ಚೌಕಟ್ಟಿನಲ್ಲಿ ಬೆಳೆಯುತ್ತಲೇ ಸಮಾಜದ ಸಂಬಂಧಗಳ ಸ್ವರೂಪವನ್ನು ತಾತ್ವಿಕ ವಿಶ್ಲೇಷಣೆಗೆ ಒಡ್ಡಿದವಳು. ಹೆಣ್ಣಿಗಾಗಿ ಬಿಡಿಸಿಕೊಳ್ಳಲಾರದ ಬಂಧನಗಳಿಂದ ಬಿಡಿಸಿಕೊಳ್ಳಲು ಅಕ್ಕ ಪರಮೇಶ್ವರನನ್ನು ಪತಿಯಾಗಿಸಿಕೊಂಡಳು. ಪರಮೇಶ್ವರ ಸ್ವರೂಪಿ ಮಲ್ಲಿಕಾರ್ಜುನನನ್ನು ಬಾಹ್ಯದಲ್ಲಿ ಅರಸುತ್ತಾ ಅಂತರಂಗದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ದೃಢ ನಿಶ್ಚಯದಿಂದಲೇ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದಳು. ಈ ಪ್ರಕ್ರಿಯೆಯಲ್ಲಿ ಅವಳನ್ನು ಕಾಡುವ, ಬೇಡುವ, ಪ್ರಶ್ನಿಸುವ ಪ್ರತಿ ಸಂದರ್ಭವು ಮಾಯೆಯಾಗಿ ಕಾಡಿದೆ. ತನ್ನನ್ನು ಕಾಡುವ ಮಾಯೆಯನ್ನು ವಚನಗಳಲ್ಲಿ ನಿರೂಪಿಸಿದ್ದಾಳೆ.

ಹನ್ನೆರಡನೆಯ ಶತಮಾನದಲ್ಲಿ ಆಧ್ಯಾತ್ಮಿಕ ವಲಯದಲ್ಲಿ ದೃಢವಾಗಿ ಸಾಧನೆಗೈದವನು ಅಲ್ಲಮಪ್ರಭು. ಅಲ್ಲಮಪ್ರಭುವನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದಾಗ ಸಾಮಾಜಿಕ ಸಂದರ್ಭಗಳು ಅಕ್ಕನಂತೆ ಹಿಡಿದು ನಿಲ್ಲಿಸಲಿಲ್ಲ ತಡೆದು ಪ್ರಶ್ನಿಸಲಿಲ್ಲ. ಅವನು ಸ್ವೀಕರಿಸಿದ ಸನ್ಯಾಸತ್ವವನ್ನು ಒಪ್ಪಿದ ಸಮಾಜ ಅವನ ಸಾಧನೆಗೆ ಅಡ್ಡಿಯಾಗಲಿಲ್ಲ ಎನ್ನುವುದರ ಜೊತೆಗೆ ಅಲ್ಲಮ ಎಂದಿಗೂ ತನ್ನ ಸುತ್ತ ನೆರೆದ ಸಮಾಜದ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ ಎಂಬುದು ಕೂಡಾ ಇಲ್ಲಿ ಮುಖ್ಯವಾಗುತ್ತದೆ. ಅಲ್ಲಮ ತನ್ನ ಸುತ್ತ ನೆರೆದ ವರ್ತಮಾನವನ್ನು ಅವಲೋಕಿಸುತ್ತಲೇ ಕಳೆದ ಭೂತವನ್ನು ಅರ್ಥೈಸಿಕೊಳ್ಳುತ್ತಲೇ ತನ್ನ ಮುಂದಿರುವ ಭವಿಷ್ಯವನ್ನು ವ್ಯಾಖ್ಯಾನಿಸ ಬಲ್ಲ ಸಾಮರ್ಥ್ಯವನ್ನು ಗಳಿಸಿಕೊಂಡನು. ಅಲ್ಲಮ ವ್ಯಾಪಕವಾಗಿ ಹರಡಿಕೊಂಡಿರುವ ಪ್ರಕೃತಿಯನ್ನು ಸೂಕ್ಷ್ಮ ಅವಲೋಕನಕ್ಕೊಳಪಡಿಸುತ್ತಲೇ ಪ್ರಕೃತಿಯ ವೈವಿಧ್ಯ ಸ್ವರೂಪವನ್ನು ಅದರೊಂದಿಗೆ ಮನುಜ ಕಟ್ಟಿಕೊಂಡ ಸಂಬಂಧದ ನೆಲೆಗಳನ್ನು ವಿಶ್ಲೇಷಿಸುವಾಗ 'ಮಾಯೆ' ಎಂಬ ಪರಿಕಲ್ಪನೆ ರೂಪಗೊಂಡ ಬಗೆ ಹಾಗೂ ಮನುಜನ ಲೌಕಿಕ ಬದುಕಿನಲ್ಲಿ 'ಮಾಯೆ'ಯ ಕ್ರಿಯಾ ಸ್ವರೂಪವನ್ನು ವಚನಗಳ ಮೂಲಕ ವಿವರಿಸಿದ್ದಾನೆ.

೭.೧ ದೇವ-ಮಾನವ : ಮಾಯೆ

ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ 'ಮಾಯೆ' ದೇವ-ದಾನವ ಮತ್ತು ಮಾನವರನ್ನು ಬಗೆ ಬಗೆಯಾಗಿ ಕಾಡುವ ಪರಿಯನ್ನು ಈ ಕೆಳಗಿನ ವಚನಗಳಲ್ಲಿ ವಿವರಿಸಿದ್ದಾರೆ.

"ಬ್ರಹ್ಮ ಘನವೆಂದೆಡೆ ಬ್ರಹ್ಮನ ನುಂಗಿತ್ತು ಮಾಯೆ
ವಿಷ್ಣು ಘನವೆಂದೆಡೆ ವಿಷ್ಣುವಿನ ನುಂಗಿತ್ತು ಮಾಯೆ
ರುದ್ರ ಘನವೆಂದೆಡೆ ರುದ್ರನ ನುಂಗಿತ್ತು ಮಾಯೆ
ತಾ ಘನವೆಂದೆಡೆ ತನ್ನನ್ನು ನುಂಗಿತ್ತು ಮಾಯೆ

ಸರ್ವವೂ ನಿನ್ನ ಮಾಯೆ

ಒಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ"

ರಾಜಸ ಅಂಹಕಾರದಲ್ಲಿ ಬ್ರಹ್ಮ ಮಾಯಾಸಕ್ತನಾದಾಗ, ಸಾತ್ವಿಕ ಅಂಹಕಾರದಲ್ಲಿ ವಿಷ್ಣು ಮಾಯಾ ಸಕ್ತನಾದಾಗ ತಾಮಸ ಅಹಂಕಾರದಲ್ಲಿ ರುದ್ರ ಮಾಯಾಸಕ್ತನಾದಾಗ ಈ ಮೂವರು 'ಮಾಯೆ'ಗೆ ಒಳಗಾಗುವ ಪರಿಯನ್ನು ಅಲ್ಲಮ ವ್ಯಾಖ್ಯಾನಿಸುತ್ತಾನೆ. ಆಧ್ಯಾತ್ಮಿಕ ನೆಲೆಯಲ್ಲಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ ಇವು ಮೂರು ಭೇದ ಸ್ವರೂಪಿಯಾದ ಮಾಯೆಯ ಒಡಲಿನಿಂದ ಮೂಡಿ ಬಂದಿದೆ. ಕ್ರಿಯಾಶಕ್ತಿಯ ಅಭಿಮಾನಿ ಚೇತನಬ್ರಹ್ಮ, ಜ್ಞಾನಾಶಕ್ತಿಯ ಅಭಿಮಾನಿ ಚೇತನ ವಿಷ್ಣು, ಇಚ್ಛಾಶಕ್ತಿಯ ಅಭಿಮಾನಿ ಚೇತನ ರುದ್ರ. ಈ ಮೂವರು ತಾವು ಶ್ರೇಷ್ಠರೆಂದು ಪರಿಭಾವಿಸಿದಾಗ ಮಾಯೆಗೆ ಒಳಗಾಗುತ್ತಾರೆ. ಮನುಜನು ತಾವು ಶ್ರೇಷ್ಠನೆಂದುಕೊಂಡಾಗ ಮಾಯೆ ಆವರಿಸುತ್ತದೆ. ಈ ಕ್ರಿಯೆಗೆ ಒಳಗಾಗುವ ಪ್ರತಿಯೊಬ್ಬರು ಶಿವನ ಅಧೀನರೇ ಆಗಿರುತ್ತಾರೆ.

ಸೃಷ್ಟಿ–ಸ್ಥಿತಿ–ಲಯ ತತ್ವಗಳನ್ನು ಪ್ರತಿಪಾದಿಸುತ್ತ ಹೊರಟಿರುವ ಅಲ್ಲಮ ತ್ರಿಲೋಕ ಎನ್ನುವ ದೇವ ಲೋಕ, ಮರ್ತ್ಯಲೋಕ, ಪಾತಾಳಲೋಕಗಳಲ್ಲಿ ಆಶ್ರಯ ಪಡೆದಿರುವ ಸ್ಥಿರ–ಚರ ದೇಹಗಳು ಒಮ್ಮೆಯಾದರೂ 'ಅಹಂ'ಗೆ ಒಳಗಾದರೆ ಸಾಕು ಮಾಯೆ ಬೆಂಬಿಡದೇ ಕಾಡುತ್ತಾಳೆ. ಬ್ರಹ್ಮ ತನ್ನಿಂದಲೇ ಜೀವ ಸೃಷ್ಠಿ ಸಾಧ್ಯ ತಾನಿಲ್ಲದೆ ಜೀವ–ಜಲ–ಚರಪ್ರಾಣಿ–ಪಕ್ಷಿ–ಮನುಷ್ಯ ಹುಟ್ಟಲು ಸಾಧ್ಯವಿಲ್ಲ ಎಂಬ ಅಹಂ ಬಂದರೆ 'ಮಾಯೆ' ಆವರಿಸಿದಂತೆ ಅರ್ಥ. ಬ್ರಹ್ಮನಿಂದ ಸೃಷ್ಟಿಯಾದ ಸಕಲವನ್ನು ಸುಸ್ಥಿರವಾಗಿರಿಸಬಲ್ಲ ಹಾಗೂ ಸಮತೋಲನ ದಲ್ಲಿ ಕಾಪಾಡಬೇಕಾದವನು ವಿಷ್ಣು. ವಿಷ್ಣು ಕಾಪಾಡುವ ಕರ್ತವ್ಯವನ್ನು ಕೇವಲ ಕರ್ತವ್ಯವೆಂದು ಭಾವಿಸದೇ ತಾನೇ ಇದೆಲ್ಲಕ್ಕೂ ಕಾರಣ ಹಾಗೂ ಜಗತ್ತು ಸುಖವಾಗಿರಬೇಕಾದರೆ ತನ್ನ ಅಗತ್ಯತೆ ತುಂಬ ಅವಶ್ಯಕ ಎಂದುಕೊಂಡರೆ ಮಾಯಾವಶನಾದಂತೆ. ಬ್ರಹ್ಮನಿಂದ ಸೃಷ್ಟಿಗೊಂಡ ಜಗತ್ತು ವಿಷ್ಣುವಿನಿಂದ ಸಮತೋಲನ ಸಾಧಿಸುತ್ತದೆ. ಈ ಜಗತ್ತಿನಲ್ಲಿ ಸಕಲವು ಒಂದು ಹಂತದವರೆಗೆ ಕ್ರಿಯಾಶೀಲವಾಗಿದ್ದು ಮತ್ತೊಂದು ಹಂತದಲ್ಲಿ ಇಲ್ಲವಾಗುವ ಮೂಲಕ ಸಮತೋಲನ ಸಾಧಿಸುವಲ್ಲಿ ರುದ್ರನ ಪಾತ್ರ ಮುಖ್ಯವಾದುದು. ರುದ್ರದೇವನಿಗೆ ತನ್ನಿಂದಲೇ ಈ ಜಗತ್ತು ಸಮತೋಲನ ಸಾಧಿಸಿದೆ ಎಂಬ ಅಹಂ ಬಂದರೆ ಮಾಯಾವಶನಾದಂತೆ.

ದೇವಾನುದೇವತೆಗಳು ತಮ್ಮನ್ನು ತಾವು ಶ್ರೇಷ್ಠರೆಂದು ಭಾವಿಸುವ ಸ್ಥಿತಿಯೆ 'ಮಾಯೆ' ಎಂದ ಮೇಲೆ ಸಾಮಾನ್ಯ ಮನುಷ್ಯ ತಾನೇ ಈ ಜಗತ್ತಿನಲ್ಲಿ ಜ್ಞಾನಿ, ಪಂಡಿತ ಎಂಬ ಅಹಂಕಾರದಲ್ಲಿ ವರ್ತಿಸಿದರೆ ಮಾಯೆ ಮನುಜನನ್ನು ಆವರಿಸುತ್ತದೆ.

ಅಲ್ಲಮನ ದೃಷ್ಟಿಯಲ್ಲಿ ದೇವರೆ ಆಗಲಿ ಮಾನವರೇ ಆಗಲಿ ಯಾರಲ್ಲಿ ಅಹಂಕಾರ ಮೂಡುವುದೋ ಅದೇ 'ಮಾಯೆ' ಎಂದು ಹೇಳಿದ್ದಾನೆ. ಅಕ್ಕಮಹಾದೇವಿ ಕೂಡಾ

ದೇವ ಮಾನವರನ್ನು ಮಾಯೆ ಆವರಿಸುವ ರೀತಿಯನ್ನು ಹೀಗೆ ಹೇಳುತ್ತಾಳೆ.

"ಹರಿಯ ನುಂಗಿತ್ತು ಮಾಯೆ ಅಜನ ನುಂಗಿತ್ತು ಮಾಯೆ
ಇಂದ್ರನ ನುಂಗಿತ್ತು ಮಾಯೆ ಚಂದ್ರನ ನುಂಗಿತ್ತು ಮಾಯೆ
ಬಲ್ಲೆನೆಂಬ ಬಲುಗೈಯರ ನುಂಗಿತ್ತು ಮಾಯೆ
ಅರಿಯನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ
ಈರೇಳು ಭುವನನನಾರಡಿಗೊಂಡಿತ್ತು ಮಾಯೆ
ಚನ್ನಮಲ್ಲಿಕಾರ್ಜುನಯ್ಯ
ಎನ್ನ ಮಾಯವ ಮಾಣಿಸಾ ಕರುಣಿ"

ಹರಿ–ಬ್ರಹ್ಮ, ಇಂದ್ರ–ಚಂದ್ರರನ್ನು ಅವರವರ ಕರ್ತವ್ಯಕ್ಕೆ ಅವರು ಬದ್ಧರಾಗಿ ತಾವೇ ಶ್ರೇಷ್ಠ ಎಂಬ ಭಾವ ಮೂಡಿಸಿಕೊಂಡರೆ ಮಾಯೆ ಅವರನ್ನು ಬಿಡದು. ದೇವರಂತೆ ಮಾನವರ ಸ್ಥಿತಿ ನೋಡಿದಾಗ ಬಲ್ಲೆ ನೆಂಬ ಅಹಂಕಾರವುಳ್ಳ ಜ್ಞಾನಿಯೇ ಆಗಲಿ ತಿಳಿಯಲಾರದೆಂಬ ಅಜ್ಞಾನಿಯೇ ಆಗಲಿ ಇಬ್ಬರನ್ನು ಅವರವರ ಜ್ಞಾನ–ಅಜ್ಞಾನದ ಸ್ವರೂಪದಲ್ಲಿ ಮಾಯೆ ಆವರಿಸುತ್ತದೆ. ಹಂತ ಹಂತವಾಗಿ ಸಕಲ ಲೋಕವನ್ನೆ ಆವರಿಸುತ್ತದೆ. ಇನ್ನೂ ತಾನು ಕೂಡಾ ಸಾಮಾನ್ಯ ಮನುಷ್ಯಳು ತನ್ನೊಳಗೆ ತಿಳಿದೆನೆಂಬ ಜ್ಞಾನದ ಅಹಂಕಾರವಾಗಲಿ, ತಿಳಿಯದೆಂಬ ಅಜ್ಞಾನದ ಸ್ವರೂಪವಾಗಲಿ ನೆಲೆಸದಂತೆ ನೋಡಿಕೊ ಎಂದು ವಿನಂತಿಸುತ್ತಾಳೆ. ಅಕ್ಕ ಶಿವನನ್ನು ಬಿಟ್ಟು ಬ್ರಹ್ಮ–ವಿಷ್ಣುವಿನ ಕುರಿತು ಹೇಳುತ್ತಾಳೆ. ಆದರೆ ಅಲ್ಲಮ ಬ್ರಹ್ಮ–ವಿಷ್ಣು–ರುದ್ರ ಎಂದು ಎಲ್ಲರನ್ನು ಸೇರಿಸಿಕೊಳ್ಳುತ್ತಾನೆ.

ಅಲ್ಲಮ ಮಾಯೆ ಎಂಬುದು ಲೋಕವನ್ನು ಆವರಿಸುವ ಪರಿಯನ್ನು ವಿವರಿಸುವಲ್ಲಿ ದೇವರು–ಮನುಜನ ಸಂದರ್ಭಗಳನ್ನು ಹೇಳುತ್ತಾ ಅವರಲ್ಲಿನ ಶ್ರೇಷ್ಠತ್ವವೆಂಬ ಅಹಂ ಮಾಯೆ ಆಗಿದೆ ಎಂದು ಹೇಳುತ್ತಾನೆ. ಮಾಯೆ ಸರ್ವವ್ಯಾಪಿಯಾದದ್ದು ಅದರ ನೆರಳಲ್ಲಿ ತಾನು ಇದ್ದರೂ ಅದರಿಂದ ಬಿಡಿಸಿಕೊಳ್ಳಬಲ್ಲ ಸಾಮರ್ಥ್ಯ ತನಗಿದೆ ಎಂಬ ಧೈರ್ಯದಿಂದಲೇ ಅಲ್ಲಮ 'ಮಾಯೆ' ಕುರಿತು ಹೇಳುತ್ತಾನೆ. ಅಕ್ಕನು ಕೂಡಾ ದೇವರಲ್ಲಿ ತಾನೇ ಶ್ರೇಷ್ಠ ಎಂಬ ಭಾವ ಮಾಯೆಗೆ ಕಾರಣವಾಗುತ್ತದೆ. ಮನುಜನ ಸಂದರ್ಭಕ್ಕೆ ಜ್ಞಾನಿ ಎನಿಸಿಕೊಂಡವನು ತನ್ನ ಜ್ಞಾನದ ಬಗ್ಗೆ ಅಹಂಮಿಕೆ ಮೂಡಿಸಿಕೊಂಡರೆ ಅದು ಮಾಯೆ ಆವರಿಸಿದಂತೆ ಎಂದು ಹೇಳಿ ಮುಂದುವರೆದು ಅಜ್ಞಾನಿಗಳು ಎನಿಸಿಕೊಂಡವನು ತಾನು ಅಜ್ಞಾನಿ ಎಂಬ ಕೀಳರಿಮೆ ಮೂಡಿದರೆ ಆ ಕೀಳರಿಮೆ ಮಾಯೆ ಆಗುತ್ತದೆ. ಆದರೆ ತನ್ನೊಳಗೆ ಇಂತಹ ಅಹಂಮಿಕೆಯಾಗಲಿ ಅಥವಾ ಕೀಳರಿಮೆಯಾಗಲಿ ಬಾರದಿರಲಿ ಎಂಬ ಆಶಯವಿದೆ. ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದಾಗ ಇವೆರಡು ಸ್ಥಿತಿಗಳಿಂದ ಮುಕ್ತನಾಗಬೇಕು ಎಂಬ ಅಂಶ ಇಲ್ಲಿ ಮುಖ್ಯವಾಗಿದೆ.

'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ' ಈ ಲೋಕದಲ್ಲಿ ಮಾಯೆಯನ್ನು ಗೆದ್ದ ಧೀರರು ವಿರಳಾತಿ ವಿರಳರು. ಪುರಾಣದ ಕಥೆಗಳನ್ನು ಅವಲೋಕನ ಮಾಡಿದಾಗ ಹರಿ-ಭೃಗು ಮಹಾಮುನಿಯ ಶಾಪಕ್ಕೆ ತುತ್ತಾಗುವುದು, ಲಕ್ಷ್ಮೀಯಿಂದ ದೂರವಾಗುವುದು, ಬ್ರಹ್ಮ ನಾಲ್ಕನೆಯ ತಲೆ ಕಳೆದುಕೊಂಡು ಮೂದಲೆಯಾದದು ಇಂದ್ರ ತನ್ನ ಸಿಂಹಾಸನಕ್ಕಾಗಿ ಕಳವಳಿಸುವುದು ಇವೆಲ್ಲ ಪುರಾಣದ ಕಥೆಗಳಾಗಿದ್ದರೂ ಸಹ ಒಂದಿಲ್ಲೊಂದು ಕ್ರಮದಲ್ಲಿ 'ಮಾಯೆ'ಯ ಶಕ್ತಿಗೆ ಒಳಗಾದವರು ಮಹಾ ಜ್ಞಾನಿಗಳು, ಸಂತರು, ದಾರ್ಶನಿಕರು, ಅನುಭಾವಿಗಳು, ತಪಸ್ವಿಗಳು ಮಹಾತಪಸ್ವಿಗಳು, ದೇವರ್ಷಿ-ಮಹರ್ಷಿಗಳು ಮಾಯೆ ಮಹಾಜಾಲದಲ್ಲಿ ಇಂದ್ರ, ಚಂದ್ರರು ಈರೇಳು ಭುವನಗಳಲ್ಲಿ ಬಂಧನದಲ್ಲಿ ಸಿಲುಕಿದವರು. ಹರಿ-ಬ್ರಹ್ಮ ಜಗನ್ನಿಯಾಮಕರು ತಾವು ಶ್ರೇಷ್ಠರು ಎಂದು ಪರಿಭಾವಿಸಿಕೊಂಡರೆ, ಆ ಭಾವ ಮೂಡಿದರೆ ಮಾಯೆ ಆವರಿಸದಂತೆ. ಮಾಯೆಗೆ ಅಜ್ಞಾನಿ ಸುಜ್ಞಾನಿಗಳೆಂಬ ಭೇದಭಾವವಿಲ್ಲ. ಮನುಜ, ದೇವ-ದಾನವ ಯಾರಾದರೂ ಸರಿಯೇ ಅವರಲ್ಲಿ 'ನಾನು' ನನ್ನದು ಎಂಬ ಭಾವ ಉದಯಿಸಿದರೆ ಮಾಯಾ ವಶನಾದಂತೆ ಬಲ್ಲೆನೆಂಬ ಬಲುಗೈಯರು ಮತ್ತು ಅರಿಯನೆಂಬ ಅಜ್ಞಾನಿಗಳು ಮಾಯೆಯ ಹಿಡಿತಕ್ಕೆ ಸಿಗದೆ ಇರಲು ಸಾಧ್ಯವಿಲ್ಲ.

ಅಲ್ಲಮ ಪ್ರಭುದೇವ ಮಾಯೆಯ ಇನ್ನೊಂದು ರೂಪವನ್ನು ಮನಸ್ಸಿನ ಭಾವ ಸ್ಥಿತಿಗನುಗುಣವಾಗಿ ವ್ಯಕ್ತಪಡಿಸುತ್ತಾನೆ.

೭.೨ ಹೊನ್ನು, ಹೆಣ್ಣು, ಮಣ್ಣು: ಮಾಯೆ

"ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ"

'ಆಸೆಯೇ' ಮಾಯೆ ಎಂದು ಅರ್ಥೈಸುವ ಅಲ್ಲಮ 'ಮನದ ಇಂಗಿತ' ಎಂಬ ಸ್ಥಿತಿ 'ಮೋಹಕ್ಕೆ' ಒಳಗಾಗಿದೆಯೆಂದು ಅರ್ಥ. ಅರಿಷಡ್‌ವರ್ಗಗಳಲ್ಲಿ ಒಂದಾಗಿರುವ 'ಮೋಹ' ದೇವ-ದಾನವರಿಗೂ ಹೊರತಾಗಿಲ್ಲ. ಹೊನ್ನು, ಹೆಣ್ಣು-ಮಣ್ಣು ಸೃಷ್ಠಿಯ ಅದ್ಭುತವಾದ ಅಚೇತನಗಳು. ಈ ಪರಿಭಾಷೆಗಳನ್ನು ಸಂಕುಚಿತಾರ್ಥದಲ್ಲಿ ಗ್ರಹಿಸದೆ ವಿಶಾಲಾರ್ಥದಲ್ಲಿ ಗ್ರಹಿಸುವಾಗ ಸೃಷ್ಟಿ-ಸ್ಥಿತಿ-ಲಯವನ್ನು ಆವರಿಸಿ ಕೊಂಡಂತಾಗುತ್ತದೆ. ಹೊನ್ನು-ಹೆಣ್ಣು- ಮಣ್ಣೆಂಬ ತ್ರಿವಿಧವನ್ನು ತನ್ನ ಸೊಮ್ಮೆಂದು ಅಭಿಲಾಷೆಗೈಯದೆ ಗುರು-ಲಿಂಗ-ಜಂಗಮಕ್ಕೆ ಅರ್ಪಿಸಿ ನಿರಾಶಾಭರಿತನಾಗಿದ್ದರೆ ಮಾಯೆಯಿಂದ ನಿರ್ಮಾಯನಾದಾಗ 'ಆಸೆ' ಅಳಿದು ಹೋಗಿ ನಿರ್ಮುಕ್ತನಾಗುತ್ತಾನೆ. 'ಮಾಯೆ' ಮನದ ಅಭಿಲಾಷೆಯಾಗಿದ್ದು, ಜೀವ ನಿಸ್ವಾರ್ಥಿಯಾಗಬೇಕು. ಆಶಾವಾದವು ನಿಷ್ಕಾಮ ಕರ್ಮಕ್ಕೆ ಎಡೆಮಾಡಿ ಕೊಡುತ್ತದೆ.

ಹೊನ್ನು, ಹೆಣ್ಣು, ಮಣ್ಣುಗಳು ಪಾಪ ವಸ್ತುಗಳಲ್ಲ ಅವುಗಳಿಗೆ ಪಾವಿತ್ರ್ಯತೆಯಿದೆ. ಮಾನವನ ತನ್ನ ಅತಿಯಾದ ಕೀಳಾಸೆಯನ್ನು ಪ್ರದರ್ಶಿಸಿ ತನ್ನ ಮೂಲಕ ಅವುಗಳನ್ನು ಮಲೀನ ಮಾಡುತ್ತಾನೆ. ಆದರೆ ಮಾಯೆಯ ಶಕ್ತಿ ಉಪೇಕ್ಷಣಿಯವಾದುದಲ್ಲ.

ಆದರೆ ಲೌಕಿಕ ಜೀವನದಲ್ಲಿ ಬದುಕು ಸಾಗಿಸುವ ಮಾನವ ತಾನು ಸಾಧಿಸಬೇಕಾದ ಗುರಿಗಳು ಹೊನ್ನು, ಹೆಣ್ಣು, ಮಣ್ಣು ಎಂದು ಪರಿಭಾವಿಸಿಕೊಂಡಿದ್ದಾನೆ. ತನ್ನ ಅಗತ್ಯಗಳ ಪೂರೈಕೆಗಾಗಿ ಪ್ರಾಧಾನ್ಯತೆ ಕೊಟ್ಟಿದ್ದಾನೆ.

"ಹೆಣ್ಣಿಗಾಗಿ ಸತ್ತುದು ಕೋಟಿ, ಹೊನ್ನಿಗಾಗಿ ಸತ್ತುದು ಕೋಟಿ,
ಮಣ್ಣಿಗಾಗಿ ಸತ್ತುದು ಕೋಟಿ, ಗುಹೇಶ್ವರನಿಗಾಗಿ ಸತ್ತವರನ್ನಾರನೂ ಕಾಣೆ"

ಅಲ್ಲಮ ಹೇಳುವ ಈ ಸಾಲುಗಳಲ್ಲಿ ಪರಮಾತ್ಮನನ್ನು ಬದುಕಿನ ಸಾಕ್ಷಾತ್ಕಾರದ ಪರಿಧಿಯಲ್ಲಿ ಅಡಗಿಸಿಡುವ ಪ್ರಯತ್ನ ಮಾಡುತ್ತಾನೆ. ಹೊನ್ನು, ಹೆಣ್ಣು, ಮಣ್ಣಿಗಾಗಿ ಬದುಕಿದವರು, ಬದುಕು ಕಳೆದುಕೊಂಡವರು ವಾಸ್ತವದಲ್ಲಿ ಇಲ್ಲವಾದರೂ, ಪುರಾಣದ ಮೂಲಕ ಮಾದರಿಯಾದವರು ಹಲವರಿದ್ದಾರೆ. ಭೌತಿಕ ವಸ್ತುಗಳಾದ ಈ ಮೂರು ಲೌಕಿಕ ಬದುಕಿನ ಹಾದಿಯಲ್ಲಿ ಸಾಧನೆಯ ಮೈಲಿಗಲ್ಲುಗಳಾಗಿವೆ. ನಿರೀಕ್ಷೆ ಹಾಗೂ ಉತ್ಕಟಭಾವವಿದ್ದರೆ ಅದೇ ಮಾಯೆ, ನಿರೀಕ್ಷೆಯಿಲ್ಲದಿದ್ದರೆ ಮಾಯಾಮುಕ್ತನಾಗುತ್ತಾನೆ.

ಅಕ್ಕನು ಲೋಕದ ಕಟ್ಟಳೆಯನ್ನು ನಿರಾಕರಿಸುತ್ತಲೇ 'ಮಾಯೆ'ಯ ಬಂಧನ ಮುಕ್ತವಾಗುವ ಪರಿಯನ್ನು ನಿರ್ವಚಿಸುವ ಸಂದರ್ಭ ಹೀಗಿದೆ.

"ಹೊಟ್ಟು ಹೊರೆಯ ಕಟ್ಟಳೆಯ ಕಳೆದೆನಯ್ಯಾ
ಹೊನ್ನು ಮಣ್ಣಿನ ಮಾಯೆಯ ಮಾಣಿಸಿದೆನವ್ವಾ
ಎನ್ನ ತನುವಿನ ಲಜ್ಜೆಯನುಳುಹಿ ಎನ್ನಮನದ
ಕತ್ತಲೆಯ ಕಳೆದ
ಚನ್ನಮಲ್ಲಿಕಾರ್ಜುನಯ್ಯನೊಳಗಾದವಳ
ಏನೆಂದು ನುಡಿಸುವಿರವ್ವಾ"

ದೇಹ-ಆತ್ಮ ಎಂಬ ಸಂಬಂಧದಲ್ಲಿ ಜೀವನ ಸುತ್ತ ಹರಡಿರುವ ಲೌಕಿಕದ ಸೆಳೆತಗಳಿಂದ ಮುಕ್ತಳಾಗಬಯಸುತ್ತಾಳೆ. ದೇಹ ಮತ್ತು ಆತ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಸಾಮರಸ್ಯದಲ್ಲಿ ಬೆರೆತಿರುವಾಗ ತಾನೊಂದು ಹೆಣ್ಣಾಗಿ ತನ್ನ ಸುತ್ತಿರುವ ಹೊನ್ನು-ಮಣ್ಣನ್ನು ದೂರಿಕರಿಸುತ್ತಾಳೆ. ಕಾಯದ ಮೇಲಿನ ಮೋಹವನ್ನು ಇಲ್ಲವಾಗಿಸಿಕೊಳ್ಳುತ್ತಾಳೆ. ಅಜ್ಞಾನದ ಕತ್ತಲಿನಿಂದ ಜ್ಞಾನವೆಂಬ ಬೆಳಗಿನಲ್ಲಿ ನಿಂತವಳಿಗೆ ಮಾಯೆ ಯಾವ ಸ್ಥಿತಿಯಲ್ಲಿಯೂ ಆವರಿಸಲಾರದು ಎಂಬ ನಂಬಿಕೆ ಅಕ್ಕನಲ್ಲಿ ದೃಢವಾಗಿದೆ.

೭.೩ ಪ್ರಬಲ–ಶುದ್ಧಶಕ್ತಿ: ಮಾಯೆ

ದೇವತೆಗಳಿಂದ ಸೃಷ್ಟಿಯಾದ ಮಾಯೆ ದೇವತೆಗಳನ್ನು ಕಾಡುವ ರೀತಿಯನ್ನು ಅಲ್ಲಮ ಮತ್ತು ಅಕ್ಕ ವಿಭಿನ್ನವಾಗಿ ನಿರೂಪಿಸುತ್ತಾರೆ.

"ಬ್ರಹ್ಮ ವಿಷ್ಣುಗಳ ಮಾಯೆ ತೊತ್ತಳದುಳಿವಂದು
ದೇವದಾನವರ ಮಾಯೆ ಅಗಿದಗಿದು ತಿಂಬಂದು
ರುದ್ರಗುಣ ಪ್ರಮಥಗಣರ ಮಾಯೆ
ಮರುಳ್ಮಾಡಿ ಕಾಡುವಂದು
ನೊಸಲಕಣ್ಣು ಪಂಚಮುಖ ದಶಭುಜದವರಿಗೆ
ಮಾಯೆ ಅರ್ಧಾಂಗಿಯಾದಾದು
ಅಷ್ಟಾಶೀತಿ ಸಹಸ್ರ ಋಷಿಗಳ ಮಾಯೆ ತಪೋಮಾಯದಲ್ಲಿ ಕೆಡಹುವಂದು
ನಾನು ಮಾಯಾಕೋಲಾಹಳನಾಗಿರ್ದೆ ಕಾಣಾ ಗುಹೇಶ್ವರಾ"

ಬ್ರಹ್ಮ–ವಿಷ್ಣು–ಮಹೇಶ್ವರ ಈ ಜಗತ್ತ ಸೃಷ್ಟಿಯಲ್ಲಿ ವಿಶೇಷ ಪಾತ್ರ ವಹಿಸುವಂಥವರಾಗಿದ್ದರೂ ಅವರಿಂದಲೇ ಉದಿಸಿದ ಶಕ್ತಿಯಾದ ಮಾಯೆ ಅವರನ್ನು ಪರಿಪರಿಯಾಗಿ ಕಾಡುತ್ತದೆ. ಅರ್ಧಾಂಗಿ ಎಂಬುದು ಅವರಷ್ಟೆ ಸಮಾನ ಸ್ಥಾನ–ಮಾನವನ್ನು ಹೊಂದುವ ಅರ್ಥದಲ್ಲಿ ಅಲ್ಲಮ ಮಾಯೆಯ ಪ್ರಾಬಲ್ಯವನ್ನು ಪ್ರಸ್ತಾಪಿಸುತ್ತಾನೆ. 'ಮಾಯೆ' ಎಂಬ ಸೆಳೆತದಿಂದ ಮುಕ್ತರಾಗಬೇಕೆಂದು ಋಷಿಗಳು ತಪಸ್ಸು ಮಾಡುತ್ತಾರೆ ಎಂಬಲ್ಲಿ ತಪಸ್ಸು ಎಂಬ ಮಾಯಾ ಸ್ವರೂಪಿಯಾಗಿ ಋಷಿ–ಮುನಿಗಳನ್ನು ಆವರಿಸುತ್ತದೆ. ಸ್ವರ್ಗ–ಮರ್ತ್ಯವೆಂಬ ವ್ಯತ್ಯಾಸವಿಲ್ಲದೆ ಸರ್ವವನ್ನು ಆವರಿಸುವಂಥ ಪ್ರಬಲ ಶಕ್ತಿಯಾಗಿ 'ಮಾಯೆ' ಇದ್ದು, ತಾನು ಮಾತ್ರ ಅದರಿಂದ ಹೊರಗಿರುವೆ ಎಂದು ಹೇಳುತ್ತಾನೆ. ಲೋಕದ 'ಮಾಯೆ'ಯನ್ನು ಅರಿತ ಅಲ್ಲಮನಿಗೆ ಅದನ್ನು ಮೀರುವುದು ಅಸಾಧ್ಯವಾಗಿ ತೋರುವುದಿಲ್ಲ. ಆದರೆ ಅಕ್ಕನಿಗೆ ಪ್ರಾಥಮಿಕ ಸ್ವರೂಪದಲ್ಲಿ ಕಾಡುತ್ತದೆ. ಅದನ್ನು ಮೀರಲು ಮಲ್ಲಿಕಾರ್ಜುನನೆಂಬ ಶಕ್ತಿಯ ಬೆಂಬಲವನ್ನು ಪಡೆದುಕೊಳ್ಳುತ್ತಾಳೆ.

"ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತಲ್ಲಾ
ಹರಿಬ್ರಹ್ಮರ ಬಲುಹ ಮುರಿದು ಕೊಂದು ಕೂಗಿತ್ತಲ್ಲಾ
ಮಹಾಋಷಿಯರ ತಪವ ಕೆಡಿಸಿ ಕೊಂದು ಕೂಗಿತ್ತಲ್ಲಾ
ಚನ್ನಮಲ್ಲಿಕಾರ್ಜುನಂಗೆ ಶರಣೆಂದು ನಂಬಿ ಮೊರೆ ಹೊಕ್ಕಡೆ
ಅಂಜಿ ನಿಂದುದಲ್ಲಾ"

ಪಂಚೇಂದ್ರಿಯಗಳು, ಸಪ್ತಧಾತುಗಳು ಹಾಗೂ ಅಷ್ಟಮದಗಳು ಎಂಬ ರೂಪದಲ್ಲಿ ಮಾಯೆ ಹರಿಬ್ರಹ್ಮರ ಶ್ರೇಷ್ಠ ಸಾಮರ್ಥ್ಯವನ್ನು ಇಲ್ಲವಾಗಿಸುತ್ತದೆ. ಋಷಿಗಳ ತಪೋ

ಭಂಗ ಮಾಡುತ್ತದೆ ಎಂಬ ದೇವರೇ ಆಗಲಿ ಋಷಿ ಮುನಿಗಳೇ ಆಗಲಿ ಶ್ರೇಷ್ಠತ್ವದ ಅಹಂಕಾರ ಮೂಡಿದಾಗ ಅದನ್ನು ಇಲ್ಲವಾಗಿಸುವ ಹುನ್ನಾರ 'ಮಾಯೆ'ಯದಾಗಿದೆ. ತನ್ನನ್ನು ಆವರಿಸ ಬಂದ ಮಾಯೆಗೆ ಚೆನ್ನಮಲ್ಲಿಕಾರ್ಜುನನೆಂಬ ಅಸ್ತ್ರವನ್ನು ತೋರಿಸಿ ಇಲ್ಲವಾಗಿಸುತ್ತಾಳೆ.

ಅಲ್ಲಮ ಮಾಯೆ ಕುರಿತು ಹೇಳುವಾಗ ಲೋಕದ ಕ್ರಿಯಾ ವ್ಯಾಪಾರದಲ್ಲಿನ ಮಾಯೆಯನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು ತನ್ನನ್ನು ಆವರಿಸದಂತೆ ಜಾಗ್ರತನಾಗುತ್ತಾನೆ. ಅದೇ ರೀತಿ ಅಕ್ಕನು ಕೂಡಾ 'ಮಾಯೆ' ಕುರಿತು ಅರಿತವಳು ಅಲ್ಲದೆ ಲೋಕವನ್ನು ಆವರಿಸಿದ ಮಾಯೆ ತನ್ನನ್ನು ಬಿಡದು ಎಂಬ ಸತ್ಯವನ್ನು ಅರಿತು ತನ್ನನ್ನು ಅದರೊಳಗು ಮೂಡಬೇಡ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತಾಳೆ. ಅಕ್ಕ ತಾನೂ ಲೋಕದ ಭಾಗವಾಗಿ ಮಾಯೆಗೆ ಪ್ರತಿಕ್ರಿಯಿಸುತ್ತಾಳೆ.

ಅಲ್ಲಮ ಮತ್ತು ಅಕ್ಕನ ದೃಷ್ಟಿಯಲ್ಲಿ ಮಾಯೆ ಎಂಬುದು ಜ್ಞಾನರೂಪಿ ಆಗಿದೆ ಎಂಬ ಅಂಶವನ್ನು ಸಾಮಾನ್ಯೀಕರಿಸಿದರೂ ಅದನ್ನು ನಿರೂಪಿಸುವ ವಿಧಾನ ಮಾತ್ರ ಭಿನ್ನವಾಗಿದೆ. 'ಮಾಯೆ' ದೇವರಲ್ಲಿನ ದೇವತ್ವವನ್ನು ದಾನವರಲ್ಲಿ ದಾನತ್ವವನ್ನು ಸಂಸಾರಿಗಳ ಸಂಸಾರತ್ವವನ್ನು, ಸನ್ಯಾಸಿಗಳ ಸನ್ಯಾಸತ್ವವನ್ನು ಒರೆಗೆ ಹಚ್ಚುತ್ತದೆ.

೭.೪ ಸಂಸಾರ ಮಾಯೆ:

ದೇವತೆಗಳನ್ನು ಕಾಡುವ ಮಾಯೆ ಸಂಸಾರದಲ್ಲಿ ಅಭಿವ್ಯಕ್ತಗೊಳ್ಳುವ ಬಗೆಯನ್ನು ಹೀಗೆ ಹೇಳಿದ್ದಾರೆ.

"ಅಕ್ಕನ ದೃಷ್ಟಿಯಲ್ಲಿ ಸಂಸಾರವು ಹೀಗೆ ಚಿತ್ರಿತವಾಗಿದೆ.
ಆವಾಗಳೂ ಎನ್ನಮನ ಉದರಕ್ಕೆ ಹರಿವುದು
ಕಾಣಲಾರೆನಯ್ಯ ನಿಮ್ಮುವನು ಭೇದಿಸಲರಿಯೆ
ಮಾಯದ ಸಂಸಾರದ ಸಿಲುಕಿದೆನು
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ
ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ"

ಅಕ್ಕ ನಿಷ್ಠೆಯಿಂದ ಆಧ್ಯಾತ್ಮ ಸಾಧನೆಯಲ್ಲಿ ತೊಡಗುವಾಗ ಈ ಲೋಕ ಸಂಸಾರ ಸ್ವರೂಪಿಯಾಗಿ ಅವಳನ್ನು ಕಾಡುತ್ತದೆ. ಆಧ್ಯಾತ್ಮ ಸಾಧನೆಗೆ ಸಾಧನವಾಗಿರುವ ಕಾಯ ಹಸಿವಿನ ರೂಪದಲ್ಲಿ ಚಂಚಲಗೊಳಿಸುತ್ತದೆ. ಕಾಯದ ಚಂಚಲತೆಗೆ ಒಳಗಾದರೂ ಅದು ಕ್ಷಣಿಕ. ಅದರಿಂದ ಹೊರಬರಲು ಸಾಧ್ಯ ಆದರೆ ಲೋಕವೆಂಬ ಸಂಸಾರ ಹೆಣ್ಣೆಂಬ ಕಾರಣಕ್ಕೆ ಪರಿಪರಿಯಾಗಿ ಪ್ರಶ್ನಿಸಿ ಪರೀಕ್ಷಿಸುತ್ತದೆ. ತಾನು ದೃಢಳಾಗಿದ್ದು ಹಾಗೂ ನಿಷ್ಠೆಯಿಂದ ಭಕ್ತಿ ಕೈಗೊಳ್ಳುತ್ತಿದ್ದು ಪರಮಾತ್ಮನೆ ಲೋಕದಿಂದ ತನ್ನನ್ನು ಬಿಡಿಸಬೇಕೆಂಬ ನಿರೀಕ್ಷೆ ಇದೆ.

ಮಾಯೆ ಎಂಬುದು ಸಂಸಾರದ ರೂಪದಲ್ಲಿ ಅಕ್ಕನನ್ನು ಪರೀಕ್ಷಿಸುತ್ತದೆ. ಇಂತಹ ಮಾಯೆಯನ್ನು ಎದುರಿಸಬಲ್ಲೆನೆಂಬ ನಂಬಿಕೆ ಇದ್ದರೂ ಪರಮಾತ್ಮನ ಶ್ರೀರಕ್ಷೆ ತನ್ನ ಮೇಲಿರಲಿ ಎಂಬ ಭಾವವು ಇದೆ. ಅಲ್ಲಮ ಸಂಸಾರ ಎಂಬ ಮಾಯೆ ಕುರಿತು ಹೇಳವಾಗ

"ಜೀವ ತಾಮಸದ ಬಲೆಯ ಭ್ರಾಂತಿಗೆ ಸೋಲುವ ಶರೀರ
ಸಂಸಾರ ಸಂಗವ ಭೇದಿಸಿ ನಡೆವಡೆ ದೂರ
ಚಿಂತೆಯ ಗೆಲಿದು ಸುಳಿದೆಡೆ
ಗುಹೇಶ್ವರನೆಂದರಿದ ಶರಣ ಸಾರಾಯನು"

ಸಂಸಾರ ಎಂಬುದು ಅಲ್ಲಮನ ದೃಷ್ಟಿಯಲ್ಲಿ ಲೋಕದ ಸಂಸಾರವಾಗಿದೆ. ಸಾಧಕನಾಗ ಹೊರಟ ಜೀವನು ಚಂಚಲತೆಯಿಂದ ಸಂಸಾರ ಸುಖದತ್ತ ಸೆಳೆಯಲ್ಪಡುತ್ತಾನೆ. ತನು ಸುಖವೆಂಬುದು ಭ್ರಾಂತಿಯಾಗಿ ಜೀವನನ್ನು ಮತ್ತೆ ಮತ್ತೆ ಕಾಡುತ್ತದೆ. ತನು ಸುಖಕ್ಕಾಗಿ ಸಂಸಾರವನ್ನು ಒಪ್ಪಿ ನಡೆಯದೆ ಭೇದಿಸಿ ಹೊರಟಾಗ ಆಧ್ಯಾತ್ಮವನ್ನು ಸಾಧಿಸಬಹುದಾಗಿದೆ. ಸಂಸಾರ ಸಂಗವನ್ನು ತೊರೆದು, ಮನದ ಚಿಂತೆಯಿಂದ ಮುಕ್ತನಾದಾಗ ಮಾತ್ರ ಶರಣ ನಾಗುತ್ತಾನೆ. ಗುಹೇಶ್ವರನೆಂಬ ಅರಿವು ಮೂಡಲು ಸಾಧ್ಯವಾಗುತ್ತದೆ. ಅಲ್ಲಮ ಲೋಕದಿಂದ ಸಿಡಿದು ನಿಂತು ಸಂಸಾರದ ಸ್ವರೂಪವನ್ನು ಅವಲೋಕಿಸುವ ಮೂಲಕ ಹೇಳುತ್ತಾನೆ. ಲೋಕದ ಭಾಗವಾದ ಜೀವರನ್ನು ಮಾಯೆ ಎಂಬ ಸಂಸಾರದಲ್ಲಿ ಹಿಡಿದಿಡುತ್ತದೆ ಎಂದು ಹೇಳುತ್ತಾನೆ.

"ಅಲ್ಲಮ ಸಂಸಾರದಲ್ಲಿ ಮಾಯೆಯನ್ನು ನೋಡುವ ರೀತಿ ಇಲ್ಲಿ ಅಭಿವ್ಯಕ್ತವಾಗಿದೆ.
ಭವಗೆಟ್ಟೆನು ಭಾವಗೆಟ್ಟನು
ಒಡಹುಟ್ಟಿದವರೈವರ ಕೈಬಿಟ್ಟೆನು
ಭಂಡನು ಅಚ್ಚ ಭಂಡನು ಕಂಡರೆ ನುಡಿಸದಿರಾ ಮಾಯಾದೇವಿ"

ಗುಹೇಶ್ವರನೆಂಬುದು ಜೀವನದೊಳಗಿರುವ ಚೈತನ್ಯವಾಗಿದೆ. ನಿರ್ಭಾವನಾಗುವ ಸಾಮರ್ಥ್ಯ ಇರುವುದು ನಿರ್ಮಲ ಚೈತನ್ಯಕ್ಕೆ ಮಾತ್ರ ಪರಮಾತ್ಮ ಸ್ವರೂಪಿ ಚೈತನ್ಯವನ್ನು ತನ್ನಲ್ಲಿ ನೆಲೆಗೊಳಿಸಿಕೊಂಡಿರುವ ಜೀವಾತ್ಮ ಭವಗೆಡುವ ಭಾವ ಕೆಡುವ ಕ್ರಿಯೆಗೆ ಒಳಗಾಗುತ್ತದೆ. ಭವಗೆಡುವ ಭಾವಗೆಡುವ ಜೀವಾತ್ಮ ಸ್ವತಃ ತಾನೆ ಆಗಿದ್ದು ಮಾಯೆಗೆ ತನ್ನನ್ನು ನುಡಿಸ ಬೇಡವೆಂದು ಎಚ್ಚರಿಸುತ್ತಾನೆ. ತಾನು ಜೀವಾತ್ಮನಾಗಿ ಹುಟ್ಟಿ ಭವದ ಸ್ವರೂಪವನ್ನು ಅರಿತು ಮಾಯಾ ಭಾವದಿಂದ ಮುಕ್ತನಾದೆ. ಒಡಹುಟ್ಟಿದರೈವರನು ಕೈಬಿಟ್ಟೆನು ಎಂಬಲ್ಲಿ ಸಂಸಾರ ಸಂಬಂಧವಾದ ಸೋದರತ್ವವನ್ನು ಕಳಚಿ ನಿಂತೆ ಎಂದು ಹೇಳುವಾಗ ಒಡಹುಟ್ಟಿದರೈವರೆಂದರೆ ಪಂಚೇಂದ್ರಿಯಗಳೇ ಆಗಿವೆ. ಪಂಚೇಂದ್ರಿಯದ ಸೆಳೆತದಿಂದ ಮುಕ್ತನಾದೆ ಎಂದು ಹೇಳುವಾಗ

ಸಂಸಾರದ ಸಂಬಂಧವನ್ನು ಪ್ರತಿಮೆಯಾಗಿಸಿಕೊಳ್ಳುತ್ತಾನೆ. ಅಲ್ಲಮನನ್ನು ಸಂಸಾರ ತಂದೆ-ತಾಯಿ, ಒಡಹುಟ್ಟಿದ ಸಹೋದರ ಸಂಬಂಧಗಳ ಮೂಲಕ ಆವರಿಸಿದರೆ, ಅಕ್ಕನಿಗೆ ಸಂಸಾರ ತವರು ಮನೆಯಿಂದ ಗಂಡನಮನೆಯ ಸಂಬಂಧಗಳವರೆಗೂ ವಿಸ್ತರಿಸಿಕೊಳ್ಳುತ್ತದೆ.

"ಅತ್ತೆ ಮಾಯೆ ಮಾವ ಸಂಸಾರಿ
ಮೂವರು ಮೈದನರು ಹುಲಿಯಂಥವರು"

ಲೌಕಿಕದ ಜೀವನನ್ನು ಆವರಿಸುವ ಪಂಚೇಂದ್ರಿಯಗಳು, ತ್ರಿಕರಣ, ಅರಿಷಡ್ವರ್ಗ ಚತುರೋಪಾಯ, ಸಪ್ತಧಾತುಗಳು ಇತ್ಯಾದಿ ಕುರಿತು ಹೇಳುತ್ತಾಳೆ. ಅನುಭಾವವನ್ನು ಅರಿಯುವವರೆಗೆ ಸಂಸಾರವೆಂಬ ಮಾಯೆಯ ಲೋಕದಲ್ಲಿ ಅತ್ತೆ, ಮಾವ, ಮೈದುನ, ನಾದಿನಿ, ಭಾವ, ಪತಿ ಎಂಬ ಸಂಬಂಧಗಳ ಮೂಲಕ ನಿಯಂತ್ರಿಸುತ್ತಿದೆ. ಲೌಕಿಕದ ಸಂಬಂಧಗಳಿಂದ ಮುಕ್ತಳಾದೆ ಎಂಬುದನ್ನು ಸಂಸಾರಿಕ ನೆಲೆಯಲ್ಲಿಯೇ ನಿಂತು 'ಹಾದರವನಾಡುವೆನು ಹರನಕೂಡೆ' ಎನ್ನುತ್ತಾಳೆ. ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ಅಕ್ಕನನ್ನು ಕಾಡುವ ಸಂಸಾರವನ್ನು ಅನುಭಾವಿಕ ನೆಲೆಗೆ ಪರಿವರ್ತಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುತ್ತಾ ಹರನ ಜೊತೆ ಸರಸವನಾಡುವ ಅಲೌಕಿಕ ಅಭಿಪ್ಸೆ ಮೂಡಿದೆ. ಲೌಕಿಕದ ಪತಿಯನ್ನು ಸ್ವೀಕರಿಸದೆ ಅನುಭಾವಿಕ ಪತಿಯಾದ ಚನ್ನಮಲ್ಲಿಕಾರ್ಜುನನ್ನು ಸ್ವೀಕರಿಸುವ ಮೂಲಕ ಆಧ್ಯಾತ್ಮದ ಔನತ್ಯ ಸಾಧಿಸಬಲ್ಲವಳಾಗಿ ತೋರುತ್ತಾಳೆ. ಸಂಸಾರ ಎಂಬುದು ಲೌಕಿಕದಲ್ಲಿ 'ನೈತಿಕತೆ'ಯ ಚೌಕಟ್ಟು, ಸಂಸಾರ ಎಂಬ ನೈತಿಕ ನಿಯಮವನ್ನು ಮೀರಿ ಅಲೌಕಿಕ ಸ್ತರದಲ್ಲಿ ನಿಲ್ಲುವ ಬಯಕೆಯನ್ನು ಈಡೇರಿಸಿಕೊಳ್ಳುತ್ತಾಳೆ.

೭.೫ ಮೀರಿದ ಪರಿಯಾಗಿ ಮಾಯೆ

ಮಾಯೆಯ ವೈವಿಧ್ಯ ಸ್ವರೂಪವನ್ನು ಅರಿತ ಅಕ್ಕ ಮತ್ತು ಅಲ್ಲಮ ಅದನ್ನು ಮೀರಿದ ಪರಿ ಈ ಕೆಳಗಿನ ವಚನಗಳಲ್ಲಿ ಪ್ರಸ್ತಾಪಿತವಾಗಿದೆ.

"ಕರ್ಮದ ಗಡಣ ಹಿಂಗಿದವಿಂದು
ಪಾಪದ ಬಲೆ ಬಳಸಿ ಹೋದವು
ಒಲ್ಲೆನೊಲ್ಲೆನೀ ಸಂಸಾರದಲ್ಲಿ ನೊಂದು ಬೆಂದೆನಾಗಿ
ಮಾಯೆಯ ತಲೆಯ ಮೆಟ್ಟಿ ಹೋದೆನು
ಇನ್ನು ಮರಳಿ ಬಾರೆನು ಗುಹೇಶ್ವರ ನಿಮ್ಮಾಣೆ"

ಲೋಕವೆಂಬ ಸಂಸಾರದಲ್ಲಿ ಹುಟ್ಟಿ ಅದರ ಸಾಧಕ-ಬಾಧಕಗಳಿಗೆ ಅನುಗುಣವಾಗಿ ಎಲ್ಲವನ್ನು ಅನುಭವಿಸಿ ಮರ್ತ್ಯವನ್ನು ತೊರೆದು ಹೋಗುತ್ತಾನೆ. ಮತ್ತೆ ಮರಳಿ ಬಾರದ ದೃಢ ನಿರ್ಧಾರವಿದೆ ಅಲ್ಲಮ ಜೀವಾತ್ಮ ಭವಕ್ಕೆ ಬಂದ ಮೇಲೆ ಸುಖ-ದುಃಖಗಳಿಗೆ ಪ್ರತಿಕ್ರಿಯಿಸುವ ರೀತಿಯನ್ನು ಅವಲೋಕಿಸುತ್ತಾನೆ. ಇಂತಹ ಮನುಜರ ಮಧ್ಯೆ

ತನ್ನನ್ನಿರಿಸಿಕೊಂಡು ಲೌಕಿಕವನ್ನು ಪರಿವೀಕ್ಷಿಸುತಾ ಮುಂದೆಸಾಗಿ ಲೌಕಿಕದ ಕೊಂಡಿಯಿಂದ ಕಳಚಿಕೊಳ್ಳುವಂಥ ಸ್ಥಿತಿಯಲ್ಲಿ ಅಲ್ಲಮ ಮೇಲಿನ ಮಾತುಗಳನ್ನಾಡುತ್ತಾನೆ. ಭವದಲ್ಲಿ ಹುಟ್ಟಿದ್ದಕ್ಕೆ ಅಂಟಿರುವ ಕರ್ಮವು ಕರಗಿ ಹೋಯಿತು, ಪಾಪವೆಂಬ ಬಲೆಯಿಂದ ಮುಕ್ತವಾಗುವಂತಾಯಿತು ಹಾಗೂ ಸಂಸಾರದ ಸೆಳೆತವೂ ಶಿವಜ್ಞಾನದ ಬಲದಲ್ಲಿ ಕಳಚಿಹೋಯಿತು ಎಂಬ ಸಮಾಧಾನವಿದೆ. ತನ್ನಲ್ಲಿ ಉದಿಸಿದ ಜ್ಞಾನದ ಬಲದಿಂದ ಮಾಯೆಯನ್ನು ಸಮರ್ಥವಾಗಿ ಎದುರಿಸಬಲ್ಲೆ ಎಂಬ ನಂಬಿಕೆಯಿಂದಲೇ ಮಾಯೆಯ ತಲೆಯ ಮೆಟ್ಟಿ ಹೋದೆನು ಇನ್ನು ಮರಳಿ ಬಾರೆನು ಎನ್ನುತ್ತಾನೆ. ಅಲ್ಲಮನಂತೆ ಅಕ್ಕನು ಕೂಡಾ ಸಂಸಾರದ ಸೆಳೆತದಲ್ಲಿ ಸಿಕ್ಕು ಬಿಡಿಸಿಕೊಳ್ಳುವ ಪರಿ ಚಿತ್ರಿತವಾಗಿವೆ.

"ಭವಭವದಲ್ಲಿ ತೋಳಲ್ಲಿ ಬಳಲಿತ್ತೆನ್ನ ಮನ
ಆನೇವೆನಯ್ಯ ಹಸಿದುಂಡಡೆ ಉಂಡು ಹಸಿವಾಯಿತ್ತು
ಇಂದು ನೀನೊಲಿದೆಯಾಗಿ ಎನಗೆ ಅಮೃತದ ಅಪ್ಯಾಯನವಾಯಿತ್ತು
ಇದು ಕಾರಣ ನೀನಿಕ್ಕಿದ ಮಾಯೆಯನಿನ್ನು
ಮುಟ್ಟಿದೆನಾದಡೆ ಆಣೆ ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ"

ಹಲವು ಜನ್ಮಗಳಲ್ಲಿ ಹಲವು ರೀತಿಯಲ್ಲಿ ಸಿಲುಕಿ ಒದ್ದಾಡುತ್ತಾ ಹುಟ್ಟಿದ ಯೋನಿಯಲ್ಲಿ ಹುಟ್ಟಿಸಿ ಬಾರದ ಭವದಲ್ಲಿ ಬರಿಸಿ ಉಣ್ಣದ ಊಟದನುಣಿಸಿ ವಿಧಿಗೊಳಗಾಗಿಸುವ ಪರಿಯ ಕೇಳಿರಣ್ಣಾ ಎಂಬ ಮಾತು ಜೀವನಿಗೆ ಭವ-ಮಾಯೆ ನಿಶ್ಚಿತ ಆದರೆ ತನ್ನ ಪಾಲಿಗೆ ಇರುವ ಭವದ ಸ್ವರೂಪವನ್ನು ಬದಲಾಯಿಸಲು ಹೊರಟಿದ್ದಾಳೆ. ಹಸಿದುಣ್ಣುವ ಕ್ರಿಯೆ ಮನುಜನ ಅತೃಪ್ತಿಯ ಸಂಕೇತವಾಗಿದೆ. ಭವದ ಸೆಳೆತ ಎಂಬುದು ಉಂಡಿದ್ದರೂ ಉಣದಂತೆ, ಉಂಡಮೇಲೂ ಹಸಿವಾಗುವಂತೆ ತೋರುತ್ತದೆಯೇ ಹೊರತು ಸಂತೃಪ್ತಿಯನ್ನು ಮೂಡಿಸಲಾರದು ಎಂಬ ಅಂಶ ಅಕ್ಕನ ಅಜ್ಞಾನವನ್ನು ಕರಗಿಸಿದೆ. ಅಜ್ಞಾನ ಕರಗಿ ಜ್ಞಾನದ ಬೆಳಗು ಮೂಡುವುದೆಂದರೆ ಚೆನ್ನನ ಸಾಕ್ಷಾತ್ಕಾರವಾದ ಪರಿಣಾಮವಾಗಿ ಮತ್ತೆ ಮಾಯೆಯ ಸೆಳೆತಕ್ಕೆ ಒಳಗಾಗುವ ಸಂದರ್ಭವೇ ಬಾರದು. ಪರಮಾತ್ಮನಿಕ್ಕಿದ ಮಾಯೆಯನ್ನು ಪರಮಾತ್ಮನ ಬಲದಿಂದಲೇ ಮೆಟ್ಟಿ ನಿಲ್ಲುತ್ತಾಳೆ. ಮತ್ತೆ ಅದರತ್ತ ಮುಖ ಮಾಡೆನೆಂಬ ದೃಢ ನಿಶ್ಚಯವಿದೆ. ಇಬ್ಬರೂ ಮಾಯೆ ಎಂಬ ಲೌಕಿಕದ ಸೆಳೆತಕ್ಕೆ ಸಿಕ್ಕು ಅದರಿಂದ ಹೊರಬರುವಲ್ಲಿ ಯಶಸ್ವಿಯಾದ ಧೋರಣೆ ಅಭಿವ್ಯಕ್ತವಾಗಿದೆ.

ಮಾಯೆ ಎಂಬ ಅಜ್ಞಾನ ಇಲ್ಲವಾಗಬೇಕಾದರೆ ಜ್ಞಾನದ ಬೆಳಗು ಮೂಡಲು ಕಾರ್ಯ ಹಾಗೂ ಮನದ ಸ್ವರೂಪ ಹೇಗಿರಬೇಕೆಂಬುದನ್ನು ಹೇಳುತ್ತಾಳೆ.

"ಕಾಯದ ಕಳವಳ ಕೆಡಿಸಿ ಮನದ ಮಾಯೆಯ ಮಾಣಿಸಿ
ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯ"

ಕಾಯ-ಮನಸುಗಳೆರಡು ಭಕ್ತಿ ಸಾಧನೆಯಲ್ಲಿ ಪರಿಶುದ್ಧವಾಗಿರಬೇಕು. ಕಾಯ-ಮನದ ಪರಿಶುದ್ಧತೆಯನ್ನು ನೀಡುವವನು ಪರಮಾತ್ಮನೇ ಆಗಿದ್ದಾನೆ. ಮನಸ್ಸು ಕಣ್ಣಿಗೆ ಕಾಣದಾಗಿದ್ದರೂ ಕಾಯದ ಮೂಲಕ ತನ್ನ ಸ್ವರೂಪವನ್ನು ಪ್ರಸ್ತಾಪಿಸುತ್ತದೆ. ಮನದ ಚಂಚಲತೆಗೆ ಕಾಯ ವರ್ತನೆಯನ್ನು ತೋರುತ್ತದೆ. ಜೀವದ ವರ್ತನೆ ಮಾಯೆ ಆಗಿ ತೋರುತ್ತದೆ. ಲೋಕದ ಜೀವರಂತೆ ತಾನು ಸಂಸಾರ ಸೆಳೆತಕ್ಕೆ ಸಿಲುಕಿದ್ದೆ ಆದರೆ ಪರಮಾತ್ಮನು ಕರುಣೆ ತೋರಿ ತನ್ನನ್ನು ಸಂಸಾರದಿಂದ ಮುಕ್ತಗೊಳಿಸಿದ. ಲೌಕಿದ ಸುಖವೆಂಬ ಭ್ರಮೆಯಿಂದ ಮುಕ್ತಳಾಗಿ ಆಧ್ಯಾತ್ಮಿಕ ಸುಖದಲ್ಲಿ ಸಂತೃಪ್ತಳಾಗಿರಲು ಬಯಸುತ್ತಾಳೆ. ಪರಮಾತ್ಮ ಸ್ವರೂಪ ಚೆನ್ನಮಲ್ಲಿಕಾರ್ಜುನಾ ತನ್ನನ್ನು ಭವದಿಂದ ಕಾಪಡಿದನೆಂಬ ಸಮಾಧಾನವನ್ನು ವ್ಯಕ್ತಪಡಿಸುತ್ತಾಳೆ.

ಇಹಲೋಕದ ಸಾಮಾನ್ಯ ಜೀವಳಾದ ತನ್ನನ್ನು ಪರಮಾತ್ಮ ರಕ್ಷಿಸಿದ ಎಂಬ ಉಪಕೃತ ಭಾವವೂ ಇದೆ. ಪರಮಾತ್ಮನು ಒಡ್ಡುವ ಪರೀಕ್ಷೆಯಾಗಿ ಮಾಯೆ ತೋರುತ್ತದೆ.

೭.೬. ಒರೆಗಲ್ಲು: ಮಾಯೆ

"ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ
ಹಿಂದಣ ಕೆರೆ ಮುಂದಣ ಬಲೆ
ಹದುಳವಿನ್ನೆಲ್ಲಿಯದೊ ಹೇಳಾ।
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನಾ"

ಭ್ರಾಂತಿ ಮೂಲವಾದ ಸಕಲ ಬಂಧನಗಳಿಂದ ತನ್ನನ್ನು ಮುಕ್ತಳನ್ನಾಗಿಸಿ ನಿಜ ಭಕ್ತಿಯನ್ನು ದಯಪಾಲಿಸುವಂತೆ ಚನ್ನಮಲ್ಲಿಕಾರ್ಜುನನ್ನು ಆರ್ತಳಾಗಿ ಪ್ರಾರ್ಥಿಸುವ ಅಕ್ಕನ ಮಾತುಗಳಲ್ಲಿ ಸಾಧಕಳಾಗಿ ಅನುಭವಿಸಿದ ಆತಂಕ ಮತ್ತು ವೇದನೆಗಳು ಸಚಿತ್ರವಾಗಿವೆ. ಅಕ್ಕನನ್ನು ಹಿಂದಣ ಹಳ್ಳ ಮುಂದಣ ಬಲೆಯಾಗಿ ಮಾಯೆ ಆವರಿಸಿದೆ ಮುಂದೆ ಹಿಂದೆ ಸಾವಿರುವಂತೆ, ಮಾಯೆ ತನ್ನ ಹಿಂದೆ-ಮುಂದೆ ಸಾವಿನಂತೆ ಬಿಡದಂತೆ ಆವರಿಸಿದೆ ಭಗವಂತನೆ ಹರಡಿದ ಮಾಯೆ ಭಗವಂತನಲ್ಲಿ ಐಕ್ಯಗಳಾಗಲು ಹೊರಟ ಅಕ್ಕನಿಗೆ ತೊಡರಾಗಿ ಕಾಡಿದೆ. ಮಾಯೆಯ ಸೆಳೆತದಿಂದ ತನ್ನನ್ನು ರಕ್ಷಿಸು ಎಂಬ ಬೇಡಿಕೆಯನ್ನಿಡುತ್ತಾಳೆ.

"ಒಡಲುಗೊಂಡ ಮಾನವರೆಲ್ಲರೂ ನೀವು ಕೇಳಿರೆ
ಬಿಡದೆ ಕಾಡುವುದು ವಿಧಿ ಮೂರು ಲೋಕವನ್ನೆಲ್ಲ
ಒಡಲೊಡವೆಯನೊಲ್ಲೆನೆಂಬುವರುಗಳಿಗೆ
ತೊಡರನಿಕ್ಕಿತ್ತು ಮಾಯೆ

ಆರು ದರ್ಶನಕ್ಕೆಲ್ಲ ಮಡದಿ ಮಕ್ಕಳನೊಲ್ಲೆನೆಂಬ ಹಿರಿಯರಿಗೆಲ್ಲಾ
ತೊಡರನಿಕ್ಕಿತ್ತು ಮಾಯೆ।
ಗುಹೇಶ್ವರಾ ನಿಮ್ಮ ಮಾಯೆ"

ದೇವರನ್ನು ಕಾಡುವ ಮಾಯೆ ಮನುಜನನ್ನು ಕಾಡುವ ಬಗೆಯನ್ನು ಸಾಮಾನ್ಯ ಸೂತ್ರದಲ್ಲಿ ಹೇಳುತ್ತಾನೆ. ಮಾಯೆ ವಿಧಿಯ ರೂಪದಲ್ಲಿ ಮನುಜನನ್ನು ಆವರಿಸುತ್ತದೆ. ಭಕ್ತಿ ಸಾಧನೆಯಲ್ಲಿ ಕಾಯವನ್ನು ತ್ಯಜಿಸ ಹೊರಟವರಿಗೆ ಕಾಯವೇ ತೊಡರಾಗಿ ಕಾಡಿತ್ತು. ಪಂಚೇಂದ್ರಿಯಗಳ ಮೂಲಕ ಕಾಯವನ್ನು ಮೋಹಿಸುವಂತೆ ಮಾಡುತ್ತದೆ. ಷಟ್‌ದರ್ಶನಗಳ ಜ್ಞಾನವನ್ನು ಪಡೆದು ಜ್ಞಾನಿಯಾದನೆಂದು, ಜ್ಞಾನವೇ ಸಾಧನೆ ಎಂದುಕೊಂಡು ಸಂಸಾರವನ್ನು ತ್ಯಾಗ ಮಾಡಿ ಹೊರಟವರನ್ನು ಅವರು ಪಡೆದ ಜ್ಞಾನವೇ ಮಾಯೆ ಆಗಿ ಕಾಡುತ್ತದೆ.

ಅಲ್ಲಮಪ್ರಭು ಸಂಸಾರವನ್ನು ಕುರಿತು ಸಂಸಾರದಲ್ಲಿರುವವರ ಕುರಿತು ಹೇಳುವಾಗ ಮಾಯೆ ಎಂಬುದು ಮನುಜನನ್ನು ಆವರಿಸುವ ರೀತಿಯನ್ನು ಹೇಳುವಾಗ ತಾನು ಅದರಿಂದ ಹೊರ ನಿಂತು ಅವಲೋಕಿಸಿ ವಿಶ್ಲೇಷಿಸುತ್ತಾನೆ. ಆದರೆ ಅಕ್ಕ ಲೋಕವ ಕಾಡುವ ಮಾಯೆ ತನ್ನನ್ನು ಬಿಡದು ಎಂಬಂತೆ ಹೇಳುತ್ತಾಳೆ. ಮಾಯೆ ಮನುಜನನ್ನು ಆವರಿಸುವ ಬಗೆಯಿಂದ ಬಿಡಿಸಿಕೊಳ್ಳಲಾಗದು ಎಂಬ ವಾಸ್ತವವನ್ನು ಅಕ್ಕ ಅರುಹಿದರೆ, ಅಲ್ಲಮ ಮಾಯೆ ಮನುಜನನ್ನು ಕಾಡದೆ ಬಿಡದು ಅದರಲ್ಲಿ ಸಿಲುಕುವ ಮುನ್ನವೇ ಎಚ್ಚರಗೊಳ್ಳಬೇಕೆಂಬ ಆಶಯ ವ್ಯಕ್ತಪಡಿಸುತ್ತಾನೆ.

ಅಲ್ಲಮ ಮತ್ತು ಅಕ್ಕನ ವಚನಗಳನ್ನು ತೌಲನಿಕವಾಗಿ ಹೋಲಿಸಿ ನೋಡಿದಾಗ ಅಕ್ಕನು ಸಂಸಾರದ ಚೌಕಟ್ಟಿನೊಳಗಿದ್ದು ಮಾಯೆಯನ್ನ ಅರ್ಥೈಸಿದರೆ ಅಲ್ಲಮ ಸಂಸಾರದ ಚೌಕಟ್ಟಿನ ಹೊರಗಿದ್ದು ಮಾಯೆಯನ್ನು ಅರ್ಥೈಸುತ್ತಾನೆ. ಅಕ್ಕ ಮಾಯೆಯ ಕುರಿತು ಹೇಳುವಾಗ ಮಾಯದ ಸಂಸಾರದಲ್ಲಿ ಸಿಲುಕಿದೆನು ಎಂದರೆ, ಅದೇ ಸಂಸಾರದ ಕುರಿತು ಹೇಳುವಾಗ ಅಲ್ಲಮ ಆರು ದರ್ಶನಕೆಲ್ಲಾ ಮಡದಿ ಮಕ್ಕಳನೊಲ್ಲೆನೆಂಬ ಹಿರಿಯರಿಗೆಲ್ಲಾ ತೊಡರಾಗಿದೆ ಮಾಯೆ ಎನ್ನುತ್ತಾನೆ. ಇಬ್ಬರಿಗೂ ಸಂಸಾರ ಎಂಬುದು ಮಾಯೆ ಆಗಿ ತೋರುತ್ತದೆ. ಅಕ್ಕ ಅದರಲ್ಲಿ ಸಿಲುಕಿ ಅದರಿಂದ ಬಿಡಿಸಿಕೊಳ್ಳುವಸ್ಥಿತಿಯಲ್ಲಿ ಹೇಳಿದರೆ, ಅಲ್ಲಮ ಸಂಸಾರವೆಂಬುವುದರಿಂದ ಬಿಡಿಸಿಕೊಳ್ಳಲು ಹೊರಟವರಿಗೆ ಮಾಯೆ ತೊಡರಾಗಿ ನಿಂತು ಸಂಸಾರದಲ್ಲಿ ಉಳಿಯುವಂತೆ ಮಾಡುತ್ತದೆ ಎಂದು ಹೇಳುತ್ತಾನೆ. ಅಲ್ಲಮ ಪರಮಾತ್ಮನನ್ನು ಬದುಕಿನ ಸಾಕ್ಷಾತ್ಕಾರದ ಪರಿಧಿಯಲ್ಲಿ ಅಡಗಿಸಿಡುವ ಪ್ರಯತ್ನ ಮಾಡುತ್ತಾನೆ. ಹೊನ್ನು, ಹೆಣ್ಣು, ಮಣ್ಣಿಗಾಗಿ ಬದುಕಿದವರು, ಬದುಕು ಕಳೆದುಕೊಂಡವರು ವಾಸ್ತವದಲ್ಲಿ ಇಲ್ಲವಾದರೂ, ಪುರಾಣದ ಮೂಲಕ ಮಾದರಿಯಾದವರು ಹಲವರಿದ್ದಾರೆ. ಭೌತಿಕ ವಸ್ತುಗಳಾದ ಈ ಮೂರು ಲೌಕಿಕ ಬದುಕಿನ ಹಾದಿಯಲ್ಲಿ ಸಾಧನೆಯ ಮೈಲುಗಲ್ಲುಗಳಾಗಿವೆ.

ನಿರೀಕ್ಷೆ ಹಾಗೂ ಉತ್ಕಟ ಭಾವವಿದ್ದರೆ ಮಾಯೆ ನಿರೀಕ್ಷೆಯಿಲ್ಲದಿದ್ದರೆ ಮಾಯಾಮುಕ್ತನಾಗುತ್ತಾನೆ. ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ದೇವ-ಜೀವ, ಲೋಕ-ಸಂಸಾರ, ಲೌಕಿಕ-ಅಲೌಕಿಕತೆಯ ನೆಲೆಗಳಲ್ಲಿ 'ಮಾಯೆ' ಎಂಬ ಸ್ಥಿತಿ ಆವರಿಸುತ್ತದೆ ಎಂಬುದನ್ನು ಹೇಳುವಲ್ಲಿ ಭಿನ್ನ ನಿರೂಪಣೆ ಕಾಣುತ್ತದೆ. ಅಕ್ಕ ತಾನು ಲೋಕದಲ್ಲೊಬ್ಬಳಾಗಿ ಅನುಭವಿಸುವ, ಅನುಸರಿಸುವ ಮೂಲಕ ಮಾಯೆಯನ್ನು ಅರ್ಥೈಯಿಸಿದರೆ, ಅಲ್ಲಮ ತಾನು ಲೋಕದಲ್ಲೊಬ್ಬನಾಗಿ ಎಲ್ಲವನ್ನೂ ಪರೀಕ್ಷಣಾತ್ಮಕವಾಗಿ ವೀಕ್ಷಿಸುತ್ತಾ ಹೊರ ನಡೆದು, ಮಾಯೆಯನ್ನು ಅರ್ಥೈಸುತ್ತಾನೆ.

ಕೊನೆಟಿಪ್ಪಣಿ:

೧. ಹಿರೇಮಠ ಆರ್.ಸಿ (ಸಂ), ಅಲ್ಲಮಪ್ರಭುದೇವರ ವಚನಗಳು,ಪು.೧೩

೨. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು,ಪು.೫

೩. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು,ಪು.೩೨

೪. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು,ಪು.೧೨೧

೫. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು–ಪು.೧೩

೬. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.ಸಂ.೮

೭. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.೯

೮. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು–ಪು.೧೩೧

೯. ಹಿರೇಮಠ ಆರ್.ಸಿ (ಸಂ),ಅಲ್ಲಮಪ್ರಭುದೇವರ ವಚನಗಳು–ಪು.೪೧

೧೦. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.೧೧೯

೧೧. ಹಿರೇಮಠ ಆರ್.ಸಿ(ಸಂ),ಅಲ್ಲಮಪ್ರಭುದೇವರ ವಚನಗಳು–ಪು.೨೬೦

೧೨. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.೩೮

೧೩. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.೧೨೬

೧೪. ಹಿರೇಮಠ.ಆರ್.ಸಿ.(ಸಂ),ಮಹಾದೇವಿಯಕ್ಕನ ವಚನಗಳು–ಪು.೭

೧೫. ಹಿರೇಮಠ.ಆರ್.ಸಿ.(ಸಂ),ಅಲ್ಲಮಪ್ರಭುದೇವರ ವಚನಗಳು–ಪು.೨೫೮

ಫಲಿತಗಳು

ಫಲಿತಗಳು

ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿಯ ವಚನಗಳ ಕುರಿತು ಸಾಮಾಜಿಕ, ಧಾರ್ಮಿಕ ಹಾಗೂ ವೈಚಾರಿಕ ನೆಲೆಯಲ್ಲಿ ಚರ್ಚೆಗಳು ನಡೆಯುತ್ತಾ ಬಂದಿವೆ. ಸಾಮಾಜಿಕ ನೆಲೆಯಲ್ಲಿ ಇವರಿಬ್ಬರ ವಚನಗಳನ್ನು ಗಮನಿಸುವಾಗ ಸಂಪ್ರದಾಯ, ಆಚರಣೆ, ರೀತಿ-ನೀತಿ, ನಿಯಮಗಳನ್ನು ಅರ್ಥೈಸುವ ವಿಧಾನವಿದೆ. ಧಾರ್ಮಿಕ ನೆಲೆಯಲ್ಲಿ ನಿಂತು ಮೋಕ್ಷ ಸಾಧನೆಗೆ ಪೂಜೆ, ಆಚರಣೆ, ವ್ರತ ಇತ್ಯಾದಿಗಳಿಗಿಂತ ನಿಷ್ಕಲ್ಮಶ ಭಕ್ತಿ ಬೇಕು ಎಂದು ವಿವರಣೆ ಮಾಡಿದರೆ, ವೈಚಾರಿಕ ನೆಲೆಗೆ ವಚನಗಳು ಧಾರ್ಮಿಕ ಆಧ್ಯಾತ್ಮವನ್ನು ಮೀರಿ ಆರ್ಥಿಕ ಸಂಘರ್ಷ, ಸ್ತ್ರೀವಾದಿ ಧೋರಣೆ ಶೈಕ್ಷಣಿಕ ದೃಷ್ಟಿಯಿಂದ ಒರೆಗೆ ಹಚ್ಚಿ ನೋಡುವ ಪರಿಯಲ್ಲಿ ಅಧ್ಯಯನಗಳು ವೈವಿಧ್ಯ ದೃಷ್ಟಿಕೋನದಲ್ಲಿ ನಡೆದು ಬಂದಿದೆ ಕಂಡುಬರುತ್ತದೆ. 'ಮಾಯೆ' ಯನ್ನು ಕೇಂದ್ರಿಕರಿಸಿ ಸಾಮಾಜಿಕ ಬದುಕನ್ನು, ಧರ್ಮ-ಸಿದ್ಧಾಂತಗಳನ್ನು ಅರ್ಥೈಸಿದ ಅಧ್ಯಯನಗಳು ತೀರಾ ವಿರಳವಾಗಿ ತೋರುತ್ತವೆ. ಈ ಹಿನ್ನಲೆಯಲ್ಲಿ ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ 'ಮಾಯೆ' ಎಂಬ ಅಂಶವನ್ನು ಮುನ್ನೆಲೆಗೆ ಇಟ್ಟುಕೊಂಡು ಸಂಶೋಧನೆ ಕೈಕೊಳ್ಳಲಾಗಿದೆ.

ಭಾರತೀಯ ಧಾರ್ಮಿಕ ಹಾಗೂ ಸಾಹಿತ್ಯ ಪರಂಪರೆಗೆ ಕನ್ನಡನಾಡು ನೀಡಿದ ಶ್ರೇಷ್ಠ ಕೊಡುಗೆ ವಚನಸಾಹಿತ್ಯವಾಗಿದೆ. ಶರಣರು ತಮ್ಮ ವರ್ತಮಾನದ ಸಾಮಾಜಿಕ ಅನುಭವವನ್ನು ಮತ್ತು ಆಧ್ಯಾತ್ಮಿಕ ಅನುಭಾವವನ್ನು ವಚನದ ಮೂಲಕ ಅಭಿವ್ಯಕ್ತಿಸಿದರು. ಜಾತಿ, ಕುಲ, ಧರ್ಮ ಹಾಗೂ ಆರ್ಥಿಕ ಏರು ಪೇರನ್ನು ಮೀರಿದ ಶರಣರು ಸರ್ವಸಮತೆಯ ತಳಹದಿಯ ಮೇಲೆ ಆಧ್ಯಾತ್ಮಿಕ ಸಾಧನೆಗೈದರು. ಬಸವಣ್ಣನ ನೇತೃತ್ವದಲ್ಲಿ ಆರಂಭಗೊಂಡ ಆಧ್ಯಾತ್ಮಿಕ ಕ್ರಾಂತಿ ಚೆನ್ನಬಸವಣ್ಣ, ಮುಕ್ತಾಯಕ್ಕ, ಹರಳಯ್ಯ ಅಪ್ಪಣ್ಣನಾದಿಯಾಗಿ ಅನೇಕರನ್ನು ಒಳಗೊಂಡು ವಿಸ್ತಾರ ರೂಪ ಪಡೆಯಿತು. ಇಂತಹ ಶರಣ ಸಮುದಾಯದಲ್ಲಿ ತನ್ನದೇ ಆದ ಆಧ್ಯಾತ್ಮ ಸಾಧನೆಯ ಹಾದಿ ಸೃಷ್ಟಿಸಿಕೊಂಡವರೆಂದರೆ ಅಲ್ಲಮಪ್ರಭು ಮತ್ತು ಅಕ್ಕಮಮಹಾದೇವಿ ಇವರಿಬ್ಬರು ದೇವರು-ಪೂಜೆ, ಆಚರಣೆ, ಭಕ್ತಿ, ಮುಕ್ತಿ ಇತ್ಯಾದಿ ವಿಷಯಗಳ ಕುರಿತು ವಿಭಿನ್ನ ದೃಷ್ಟಿಕೋನ ಹೊಂದಿದ್ದು, ಪರಮಾತ್ಮ ಎಂಬ ಗಮ್ಯ ಮಾತ್ರ ಒಂದೇ ಆಗಿದೆ. ವಚನಕಾರರಿಗೆ ಹಿನ್ನೆಲೆಯಾಗಿ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ 'ಮಾಯೆ' ಎಂಬುದು ತೀಕ್ಷ್ಣ ಚರ್ಚೆಗೆ ಗ್ರಾಸವಾಗಿದೆ. ಕಾಲದಿಂದ ಕಾಲಕ್ಕೆ ಪ್ರಮುಖ ಧಾರೆಗೆ ಬಂದ ಧರ್ಮಗಳು ಮತ್ತು ಅದರ ಚಿಂತಕರು ಮೋಕ್ಷವನ್ನು ಮುಖ್ಯ ಗುರಿಯಾಗಿಸಿಕೊಂಡು, ಆ ಹಾದಿಯಲ್ಲಿ ಭಕ್ತಿ ಸಾಧನೆ ಕೈಗೊಳ್ಳಲು ಹೊರಟಾಗ ಮೂಡಿ ಬಂದ ಚಿಂತನೆಗಳಲ್ಲಿ 'ಮಾಯೆ' ಎಂಬ ಅಂಶದ ಕುರಿತು ವಿಶೇಷ ಚರ್ಚೆ ನಡೆದಿದೆ. ದಾರ್ಶನಿಕ ಪರಂಪರೆಯ ವೇದದ ಭಾಗವಾದ ಉಪನಿಷತ್‌ಗಳಲ್ಲಿ, ಆಗಮಗಳಲ್ಲಿ

ಮಾಯೆ ಎಂಬುದು ಪ್ರಕೃತಿಯಾಗಿ ನಿರೂಪಿತಗೊಂಡಿದೆ.

ಹಿಂದೂ ಮತದ ಪ್ರಮುಖ ಶಾಖೆಗಳಾಗಿರುವ ಶೈವ, ಕಾಶ್ಮೀರ, ಶೈವ, ಶಾಕ್ತ, ಪಾಶುಪತಗಳಲ್ಲಿ ಮಾಯೆ ನಿರೂಪಿತಗೊಂಡ ಬಗೆಯನ್ನು ವಿವರಿಸಲಾಗಿದೆ. ಶೈವದಲ್ಲಿ ಪತಿ ಪಶು, ಪಾಶ ಎಂಬ ಮೂರು ತತ್ವಗಳನ್ನು ನಿರೂಪಿಸಿದ್ದು ಪತಿಯಾದ ಪರಮಾತ್ಮನಿಂದ ಉದಿಸಿದ ಜೀವನು ಮಲಗಳ ಸಂಬಂಧದಿಂದ ಸಂಕುಚಿತಗೊಳ್ಳುತ್ತದೆ. ಜೀವ ಪಶುವಾಗುವಲ್ಲಿ ತ್ರಿವಿಧ ಮಲಗಳು ಪಾಶವಾಗಿ ಕಾಡುತ್ತವೆ. ಮಾಯಾ ಮಲವೆಂಬುದು ಸಂಕುಚಿತಗೊಳಿಸಿದ ಶಿವನ ಜ್ಞಾನಶಕ್ತಿಯೇ ಆಗಿದೆ. ಮಾಯೆ ಎಂಬುದು ಶಿವಸ್ವರೂಪಿ ಜೀವಾತ್ಮನನ್ನು ಸಾಮಾನ್ಯ ಮಾನವನಾಗಿ ವರ್ತಿಸುವಂತೆ ಮಾಡುತ್ತದೆ ಎಂದು ಹೇಳಲಾಗಿದೆ. ಇದೇ ಮಾಯೆ ಕಾಶ್ಮೀರ ಶೈವದಲ್ಲಿ ಮೂವತ್ತಾರು ತತ್ವಗಳಲ್ಲಿ ಒಂದಾಗಿ ಸಕಲ ವ್ಯಾಪಾರಕ್ಕೆ ಕಾರಣವಾಗುತ್ತದೆ. ಸಾಂಖ್ಯದ ಇಪ್ಪತ್ತೈದು ತತ್ವಗಳ ಜೊತೆ ವಿದ್ಯಾ, ಕಲಾ, ನಿಯತಿ, ಕಾಲ, ರಾಗ, ಎಂಬ ಪಂಚ ಕಂಚುಕಗಳ ಜೊತೆ ಮಾಯೆಯೂ ಸೇರಿ ಮೂವತ್ತೊಂದು ತತ್ವಗಳನ್ನು ಪ್ರಸ್ತಾಪಿಸುತ್ತದೆ. ಮಾಯೆಯು ಚಿತ್, ಆನಂದ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು ಆವರಿಸಿ ಜೀವಾತ್ಮನನ್ನು ಪುರುಷನಾಗಿ ಪರಿವರ್ತನೆ ಮಾಡುತ್ತದೆ.

ಶಿವನ ಅಂತರ್ಗತವಾಗಿರುವ ಶಕ್ತಿ ಸ್ವರೂಪವನ್ನು ಆರಾಧಿಸುವ ಶಾಕ್ತ ಪರಂಪರೆಯಲ್ಲಿ ಮಾಯೆ ಚರ್ಚೆಯಾಗಿದೆ, ಶಕ್ತಿಯಿಂದ ಜಗತ್ತಿನ ಮೂವತ್ತಾರು ತತ್ವಗಳು ಉತ್ಪತ್ತಿಯಾಗಿವೆ. ಪರಶಿವನ ಶಕ್ತಿಯಿಂದ ಉದಿಸಿದ ಜಗತ್ತು ಜೀವರು ಸತ್ಯವಾದದು. ಮೂವತ್ತಾರು ತತ್ವಗಳಲ್ಲಿ ಮಾಯೆ ಕೂಡಾ ಒಂದಾಗಿದೆ. ಶಿವನು ತನ್ನ ಮಾಯಾಶಕ್ತಿಯ ಪ್ರಭಾವದಿಂದ ತಾವು ಅಪೂರ್ಣ ಎಂಬ ಸಂಕುಚಿತತೆಗೆ ಒಳಗಾಗುವ ಜೀವನಾಗುತ್ತಾನೆ. ಕಾಶ್ಮೀರ ಶೈವದಲ್ಲಿ ಶಿವನನ್ನು ಮುಖ್ಯವಾಗಿಸಿ ಮಾಯೆ ವ್ಯಾಪಾರ ಚಿತ್ರಿಸಿದರೆ, ಇಲ್ಲಿ ಶಿವನಿಂದ ಉದಿಸಿದ ಶಕ್ತಿ ಶಿವನಷ್ಟೆ ಪ್ರಧಾನವಾಗಿ ಮಾಯೆಯಾಗಿ ತೋರುತ್ತದೆ ಎನ್ನಲಾಗಿದೆ. ಶೈವ ಪ್ರಭೇದವಾಗಿರುವ ಪಾಶುಪತದಲ್ಲಿ ಮೋಕ್ಷ ಸಾಧನೆಗೆ ತೊಡಗುವ ಜೀವನದಲ್ಲಿ ಒಂಭತ್ತು ಅಂಶಗಳಿರಬೇಕು. ಆ ಒಂಭತ್ತು ಅಂಶಗಳಲ್ಲಿ ಮಲವು ಒಂದು. ಮಲ ಎಂಬುದು ಮಿಥ್ಯಾ ಜ್ಞಾನ, ಅಧರ್ಮ, ಆಸಕ್ತಿಹೇತು, ಚ್ಯುತಿ, ಪಶುತ್ವಮೂಲ ಎಂಬ ರೂಪಗಳಲ್ಲಿ ಆವರಿಸುತ್ತದೆ. ಮಾಯೆಯ ಅಭಿವ್ಯಕ್ತಿ ಕ್ರಿಯಾರೂಪ ಮಲವಾಗಿದೆ ಎಂಬರ್ಥದಲ್ಲಿ ವಿವರಿಸಲಾಗಿದೆ.

ವೇದಗಳಿಗೆ ಸಮಾನವಾದ ಷಟ್‌ದರ್ಶನಗಳನ್ನು ಗಮನಿಸುವಲ್ಲಿ ನ್ಯಾಯ-ವೈಶೇಶಿಕ ದರ್ಶನಗಳನ್ನು ಜೊತೆಯಾಗಿ ಅವಲೋಕಿಸಿದಾಗ ಮೂಲದ ಅಂಶಗಳು ಸಾಮ್ಯವಾಗಿ ತೋರುತ್ತವೆ. ನ್ಯಾಯದರ್ಶನದಲ್ಲಿ ತರ್ಕಬದ್ಧವಾಗಿ ಜೀವ-ಜಗತ್ತು, ಆತ್ಮ ಇತ್ಯಾದಿ ವಿಚಾರಗಳು ಚರ್ಚೆಯಾಗುತ್ತ ಜೀವನದ ಪರಮಗುರಿ ಮೋಕ್ಷ ವಾಗಿದ್ದು, ಮೋಕ್ಷವನ್ನು ಸಾಧಿಸಲು ಜೀವ ಹದಿನಾರು ಅಂಶಗಳನ್ನು ಅರಿಯಬೇಕು. ಹದಿನಾರು ಅಂಶಗಳಲ್ಲಿ ಪ್ರಮೇಯ

ಎಂಬುದು ಆತ್ಮಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಜೀವನು ತನ್ನ ಪೂರ್ವ ಕರ್ಮಕ್ಕೆ ಅನುಸಾರವಾಗಿ ಸಂಸಾರ ಬಂಧನಕ್ಕೆ ಸಿಲುಕುತ್ತಾನೆ. ಇದರಿಂದ ನಿವೃತ್ತನಾಗಲು ಮೇಲಿನ ಅಂಶಗಳ ಜ್ಞಾನ ಪಡೆಯುವುದು ಅಗತ್ಯ. ಮೋಕ್ಷ ಸಾಧನೆಗೆ ತೊಡಗುವಲ್ಲಿ ಇಂದ್ರೀಯ, ಇಂದ್ರೀಯ ವಿಷಯಗಳು, ಪ್ರವೃತ್ತಿ ಇತ್ಯಾದಿ ಮಾಯೆಗೆ ಹೋಲಿಕೆಯಾಗುತ್ತವೆ. ನ್ಯಾಯದಂತೆ ವೈಶೇಷಿಕವು ವಸ್ತುಗಳ ವಿಚಾರದ ಜ್ಞಾನಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಇಲ್ಲಿ ಅಣುಗಳು ಆತ್ಮ ಮತ್ತು ಆಕಾರ ಎಂಬ ವಿಷಯಗಳ ಆಧಾರಗಳ ಕುರಿತು ಚರ್ಚಿಸಲಾಗಿದೆ. ಈ ದರ್ಶನದಲ್ಲಿ ಜೀವನು ತನ್ನ ಕರ್ಮಕ್ಕನುಸಾರವಾಗಿ ಜನ್ಮ ಪಡೆಯುತ್ತ ಜೀವನಿಗೆ ಅಂಟಿರುವ ಕರ್ಮವನ್ನು ಕಳೆದುಕೊಳ್ಳುವುದು ಮುಖ್ಯವಾಗಿದೆ. ಇಲ್ಲಿ ಕರ್ಮವೇ ಮಾಯೆಯಾಗಿದ್ದು, ಕರ್ಮಮುಕ್ತನಾಗುವುದೆಂದರೆ ಮಾಯಾಮುಕ್ತನಾಗುವುದಾಗಿದೆ. ಇದರ ಮುಂದುವರಿಕೆಯಾಗಿರುವ ಯೋಗ, ವೇದಾಂತ ದರ್ಶನಗಳು, ಜೀವನು ಕರ್ಮವನ್ನು ಕಳೆದುಕೊಳ್ಳುವುದು ಹಾಗೂ ಆಧ್ಯಾತ್ಮ ಸಾಧನೆಯ ಮೂಲಕ ಮೋಕ್ಷವನ್ನು ಸಿದ್ಧಿಸಿಕೊಳ್ಳುವುದಾಗಿದೆ. ಸಾಂಖ್ಯದರ್ಶನದಲ್ಲಿ ಮೂಲ ಕಲ್ಪನೆ ಪ್ರಕೃತಿಯಾಗಿದೆ. ಭೌತಿಕ ಜಗತ್ತಿನ ನಿರ್ಮಾಣದಲ್ಲಿ ಪ್ರಕೃತಿ ಪಾತ್ರ ಮುಖ್ಯವಾಗಿದೆ. ಪ್ರಕೃತಿಯಲ್ಲಿ ಸತ್ವ, ರಜ, ತಮ ಎಂಬ ಮೂರು ಗುಣಗಳಿಂದ ಕೂಡಿದ್ದು ಜಗತ್ತು ವೈವಿಧ್ಯಮಯವಾಗಿ ಕಾಣುತ್ತದೆ. ಆದ್ದರಿಂದ ಪ್ರಕೃತಿ ಮಾಯಾ ಸ್ವರೂಪದ್ದಾಗಿದೆ ಎನ್ನುತ್ತಾರೆ.

ಅವೈದಿಕವೆಂದು ಗುರುತಿಸಲ್ಪಟ್ಟಿರುವ ಜೈನಧರ್ಮದಲ್ಲಿ ಕರ್ಮಸಿದ್ಧಾಂತ ಮುಖ್ಯವಾಗಿದ್ದು, ಪುದ್ಗಲ ವೆಂಬುದು ಶೈವ, ಪಾಶುಪತದ, ಶಾಕ್ತ ಇತ್ಯಾದಿ ಮತಗಳಲ್ಲಿನ ಪ್ರಕೃತಿ, ಪ್ರಧಾನ, ಪರಾಶಕ್ತಿ ಎಂಬುದಕ್ಕೆ ಸಂವಾದಿಯಾಗಿ ತೋರುತ್ತದೆ. ಕಾರ್ಮಿಕ ಮಲದ ಕಾರಣಕ್ಕೆ ಜೀವನು ಸಂಸಾರದಲ್ಲಿ ತೊಳಲಿ ಬಳಲುತ್ತಾನೆ. ವೃತ-ನಿಯಮಗಳನ್ನು ಪಾಲಿಸುವುದರಿಂದ ಕರ್ಮ-ಕ್ಷಯಗೊಳಿಸಿಕೊಳ್ಳಬೇಕು. ಜೈನದಲ್ಲಿ ಜೀವನು ನಿಶ್ಶಲ್ಯಗಳಾದ ಮಾಯಾ, ಮಿಥ್ಯಾ, ನಿಧಾನ ಇವುಗಳಿಂದ ಮುಕ್ತನಾಗಬೇಕು. ಮಾಯಾ ಎಂಬುದು ಕಪಟ, ಕ್ರೋಧ ಎಂಬರ್ಥ ದಲ್ಲಿದ್ದರೂ, ಮನುಜ ಅದನ್ನು ಕಳೆದುಕೊಳ್ಳಬೇಕಾದ ಅನಿವಾರ್ಯವನ್ನು ಪ್ರಸ್ತಾಪಿಸುತ್ತದೆ. ಜೈನಧರ್ಮದ ಜೊತೆ ಜೊತೆಯಾಗಿ ಬೆಳೆದು ಬಂದಿರುವ ಬೌದ್ಧ ಧರ್ಮವು, ನೈತಿಕ ಪರಿಶುದ್ಧತೆಗೆ ಪ್ರಾಧಾನ್ಯತೆ ನೀಡುತ್ತದೆ. ಬೌದ್ಧರ ದೃಷ್ಟಿಯಲ್ಲಿ ಸತ್ಯವು ಸಂವೃತ್ತಿ ಮತ್ತು ಪರಮಾರ್ಥ ಎಂಬ ಎರಡು ಅರ್ಥಗಳಲ್ಲಿದೆ. ಸಂವೃತ್ತಿ ಎಂದರೆ ಅವಿದ್ಯೆಯಾಗಿದೆ. ಸಂವೃತ್ತಿ ಎಂಬುದು ಸತ್ಯವಾದದನ್ನು ಮರೆಮಾಡಿ ಆವರಣವನ್ನುಂಟು ಮಾಡುತ್ತದೆ. ಜೀವ ಭವಚಕ್ರದಿಂದ ಮುಕ್ತನಾಗಬೇಕಾದರೆ ಮಾಯಾಸ್ವರೂಪದ ಅವಿದ್ಯೆ ನಾಶವಾಗಬೇಕು ಎಂಬ ಅಂಶ ಪ್ರಧಾನವಾಗಿದೆ.

ಆಧ್ಯಾತ್ಮಿಕ ಚಿಂತನೆಯಲ್ಲಿ ಪ್ರಾಮುಖ್ಯತೆ ಪಡೆದಿರುವ ಅದ್ವೈತದಲ್ಲಿ ಬ್ರಹ್ಮವೇ ಸತ್ಯ

ಉಳಿದುದೆಲ್ಲವೂ ಮಿಥ್ಯ. ಬ್ರಹ್ಮದ ತೋರಿಕೆಯ ಭಾವವೇ ಜಗತ್ತಾಗಿದೆ. ಬ್ರಹ್ಮನಲ್ಲಿ ಅಂತರ್ಗತ ಶಕ್ತಿಯೇ ಮಾಯೆ. ಮಾಯೆಯ ಕಾರಣಕ್ಕೆ ಬ್ರಹ್ಮ-ಜೀವ ಎರಡೂ ಭಿನ್ನವಾಗಿ ತೋರುತ್ತದೆ. ಸೂರ್ಯನೆಂಬ ಆತ್ಮವನ್ನು ಅಜ್ಞಾನವೆಂಬ ಮೋಡಗಳು ಆವರಿಸುತ್ತವೆ. ಜ್ಞಾನವೆಂಬ ಗಾಳಿ ಬೀಸಿದಾಗ ಮಾತ್ರ ಅಜ್ಞಾನವನ್ನು ತೇಲಿಸಿಕೊಂಡು ಮುಂದೊಯ್ಯುತ್ತವೆ. ಜೀವನು ಮಾಯೆಯ ಕಾರಣಕ್ಕೆ ಜ್ಞಾನಶಕ್ತಿಯಿಂದ ದೂರವಾಗುತ್ತಾನೆ. ಮಾಯೆಯನ್ನು ಆವರಣ ಮತ್ತು ವಿಕ್ಷೇಪ ಎಂಬ ಎರಡು ವಿಧದಲ್ಲಿ ವಿವರಿಸಿದ್ದಾರೆ. ಆವರಣ ಜೀವನಿಗೆ ತೆರೆಯಾಗಿ ನಿಂತು ಸತ್ಯವನ್ನು ಮರೆಮಾಡಿದರೆ, ವಿಕ್ಷೇಪ ಆ ತೆರೆಯಮೇಲೆ ಆಕಾಶದಿ ಜಗತ್ತನ್ನು ಸೃಷ್ಟಿಸುತ್ತಾ ಬ್ರಹ್ಮಸ್ವರೂಪಿ ಜೀವನದಲ್ಲಿ ಬ್ರಹ್ಮತ್ವವನ್ನು ಕಳೆದು ಹಾಕಿ ಸಂಸಾರದಲ್ಲಿ ಉಳಿಸುತ್ತದೆ ಇದನ್ನು ವಿದ್ಯಾಮಾಯೆ ಹಾಗೂ ಅವಿದ್ಯಾಮಾಯೆ ಎಂದು ಹೆಸರಿಸಲಾಗಿದೆ. ವಿದ್ಯಾಮಾಯೆ ಜೀವನ ಈಶ್ವರ ಚಿಂತನೆಗೆ ನೆರವಾಗುತ್ತದೆ. ಅವಿದ್ಯಾಮಾಯೆ ಈಶ್ವರ ಚಿಂತನೆಗೆ ತೊಡರಾಗಿದೆ.

ದ್ವೈತದಲ್ಲಿ ಬ್ರಹ್ಮ ಮತ್ತು ಜೀವ ಎರಡು ಭಿನ್ನವಾದುದು ಬ್ರಹ್ಮ ಸತ್ಯವೂ, ಸಗುಣ ಪೂರ್ಣವಾಗಿದ್ದು ವಿಷ್ಣು ಸಮಾನನಾಗಿದ್ದಾನೆ. ಬ್ರಹ್ಮನಲ್ಲಿ ಅಂತರ್ಗತ ಶಕ್ತಿಯಾದ ಪ್ರಕೃತಿ ಲಕ್ಷ್ಮೀಯಾಗಿ, ಅಕ್ಷರಾಆಗಿ, ಮಾಯೆ ಯಾಗಿ ತೋರುತ್ತಾಳೆ. ಲಕ್ಷ್ಮೀದೇವಿ ಪ್ರಕೃತಿಯಾಗಿ ಕ್ರಿಯಾಪೂರ್ಣ ಹಾಗೂ ಸತ್ವಪೂರ್ಣವಾಗಿದ್ದಾಳೆ ಜಗತ್ ಸೃಷ್ಠಿಯ ಕಾರ್ಯದಲ್ಲಿ ಪ್ರಕೃತಿ ಸ್ವರೂಪಿ ಶಕ್ತಿಯ ಪಾತ್ರ ಸ್ಪಷ್ಟವಾಗಿದೆ.

ಸಾಂಖ್ಯದಲ್ಲಿನ ಪ್ರಕೃತಿ ಮಾಯೆಯೆಂಬಂತೆ ದ್ವೈತದಲ್ಲಿ ಪ್ರಕೃತಿ ಮಾಯೆಯಾಗಿ ತೋರುತ್ತದೆ. ವಿಶೇಷಣೆಗಳಿಂದ ಕೂಡಿದ ಅದ್ವೈತದ ಅಭಿವ್ಯಕ್ತಿ ಆಗಿರುವ ವಿಶಿಷ್ಟಾದ್ವೈತದಲ್ಲಿ ಮಾಯೆ ಚರ್ಚೆಯಾಗಿದೆ. ಚಿತ್ ಅಚಿತ್‌ಗಳೆರಡು ಬ್ರಹ್ಮನನ್ನು ಅವಲಂಬಿಸಿವೆ. ಚಿತ್ ಆತ್ಮವಾದರೆ, ಅಚಿತ್ ಪ್ರಕೃತಿಯಾಗಿದೆ. ಅದ್ವೈತದಲ್ಲಿ ಜಗತ್ತು ಮಿಥ್ಯ ಆದರೆ ವಿಷ್ಟಾದ್ವೈತದಲ್ಲಿ ಜಗತ್ತು ಸತ್ಯ ಹಾಗೂ ಸತ್ವಪೂರ್ಣವಾದುದು. ಪ್ರಕೃತಿ ಅಚಿತ್ ಆಗಿ ಪ್ರಕಟ ವಾಗುತ್ತದೆ. ಸ್ಥೂಲಸ್ವರೂಪದಲ್ಲಿ ಪ್ರಕೃತಿಯಾಗಿ ಗೋಚರವಾದರೆ ಸೂಕ್ಷ್ಮ ರೂಪದಲ್ಲಿ ಮಾಯೆಯಾಗಿ ಗೋಚರ ವಾಗುತ್ತದೆ. ಪ್ರಕೃತಿ ಮತ್ತು ಆತ್ಮ ಎರಡು ಒಂದೇ ಎಂಬ ಭ್ರಮೆ ಆಗಿದೆ. ಈ ಭ್ರಮೆಯಿಂದ ಮುಕ್ತನಾಗುವುದು ಮಾಯೆಯಿಂದ ಮುಕ್ತನಾಗುವುದನ್ನು ಸೂಚಿಸುತ್ತದೆ. ದ್ವೈತ ವಿಶಿಷ್ಟದ್ವೈತ ಆಲೋಚನೆಗಳು ಸಾಮ್ಯವಾಗಿವೆ. ದ್ವೈತದಲ್ಲಿ 'ಅಕ್ಷರಾ' ಎಂಬುದು ವಿಶಿಷ್ಟಾದ್ವೈತದಲ್ಲಿ 'ಪ್ರಕೃತಿ' ಎಂಬುದು ಮಾಯೆ ಆಗಿದೆ. ಅದ್ವೈತದ ಬ್ರಹ್ಮ ಮಿಥ್ಯವೂ, ಇಲ್ಲಿ ಬ್ರಹ್ಮವೂ ಸತ್ಯವಾಗಿದೆ. ಬ್ರಹ್ಮದಿಂದುದಿಸಿದ ಶಕ್ತಿಯು ಜಗತ್‌ಸೃಷ್ಟಿಗೆ ಹಾಗೂ ಅದರ ವೈವಿಧ್ಯತೆಗೆ ಕಾರಣಕರ್ತವಾಗಿದ್ದು, ಅದೇ ಮಾಯೆ ಸೂಕ್ಷ್ಮರೂಪದಲ್ಲಿ ಗೋಚರವಾಗಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಚಿಂತನೆಯ ವಿಭಿನ್ನ ಅಭಿವ್ಯಕ್ತಿಯಾಗಿ ಶಕ್ತಿವಿಶಿಷ್ಟಾದ್ವೈತ ಕಾಣಿಸಿಕೊಂಡಿದೆ. ಶಕ್ತಿವಿಶಿಷ್ಟಾದ್ವೈತದ ಶಿವಶಕ್ತಿ ಎರಡು ಮುಖ್ಯ ಹಾಗೂ ವಿಶಿಷ್ಟವಾಗಿದೆ.

ಶಿವನಿಂದ ಉದಿಸಿದ ಶಕ್ತಿ ಜಗತ್ಸೃಷ್ಟಿಗೆ ಪ್ರೇರಣೆಯಾಗುತ್ತದೆ. ಶಿವನಿಂದ ಉದಿಸಿದ 'ಜೀವ' ಮತ್ತು 'ಜಗತ್ತು' ಸೃಷ್ಟಿಗೊಂಡು ಶಿವನಿಂದ ಭಿನ್ನವಾಗಿ ನಿಲ್ಲುತ್ತದೆ. ಪರಿಣಾಮವಾಗಿ ಜೀವ ಸ್ಥೂಲರೂಪದ ಶಕ್ತಿಯಾಗಿ ಕಾಣುತ್ತಾನೆ. ಇದರಿಂದ ಆಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳ ಪ್ರಭಾವಕ್ಕೊಳಗಾಗಿ ಅಶುದ್ಧ ಜೀವಿಯಾಗಿ ಪರಿವರ್ತನೆಗೊಳ್ಳುತ್ತಾನೆ ಶಿವನಿಂದ ಮೂಡಿದ ಶಕ್ತಿಯು ಜಗತ್ವ್ಯಾಪಾರ, ವೈವಿಧ್ಯತೆಗೆ ಕಾರಣವಾಗುತ್ತದೆ. ಚಂದ್ರನಲ್ಲಿರುವ ಬೆಳದಿಂಗಳಿನಂತೆ ಇವೆರಡು ಬೆರೆತುಕೊಂಡು ಜಗತ್ತನ್ನು ಆವರಿಸಿವೆ ಎಂಬಂತೆ ಮಾಯೆ ಶಕ್ತಿಯಲ್ಲಿ ಅಡಕವಾಗಿದೆ. ದ್ವೈತ, ಅದ್ವೈತದಲ್ಲಿನ ಬ್ರಹ್ಮ, ವಿಷ್ಣು ಎಂಬ ರೂಪಗಳು ಶಕ್ತಿವಿಶಿಷ್ಟಾದ್ವೈತದಲ್ಲಿ ಶಿವ ಸ್ವರೂಪ ಪಡೆದು ಶಿವನಿಂದ ಉದಿಸಿದ ಶಕ್ತಿ ಮಾಯೆಯಾಗಿ ಜೀವ ಜಗತ್ತನ್ನು ನಿರ್ಮಿಸಿ ವಿಸ್ತಾರರೂಪ ನೀಡುತ್ತದೆ. ಹೀಗೆ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಮಾಯೆ ಎಂಬುದು ಭಗವಂತನ ಶಕ್ತಿ ಎಂಬರ್ಥ ಪಡೆದಿದ್ದು, ಮಾಯೆಯ ನಿರ್ದಿಷ್ಟ ತಾತ್ವಿಕ ನಿಲುವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಸಾಮ್ಯ-ವಿಭಿನ್ನತೆಯನ್ನು, ವೈರುಧ್ಯ ಚಿಂತನೆಗಳ ಅಭಿವ್ಯಕ್ತಿಯ ಮೂಲಕ ಮಾಯೆಯ ಸ್ವರೂಪವನ್ನು ಸ್ಪಷ್ಟಗೊಳಿಸಿಕೊಳ್ಳುವ ಪ್ರಯತ್ನ ಕೈಗೊಳ್ಳಲಾಗಿದೆ.

ವಚನಕಾರರಲ್ಲಿ ಮಾಯೆಯ ಸ್ವರೂಪವನ್ನು ಗಮನಿಸುವಲ್ಲಿ, ೧೨ನೆಯ ಶತಮಾನದ ಶಿವಶರಣರು ನಡೆದಂತೆ-ನುಡಿಯುವ ನುಡಿದಂತೆ ನಡೆಯುವ ದೀಕ್ಷೆ ಪಡೆದವರಲ್ಲದೇ ಆ ಮೂಲಕ ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ರೀತಿ ವಿಶೇಷವಾದುದಾಗಿದೆ. ಪ್ರತಿಯೊಬ್ಬ ಶರಣನು ತಾನು ಮಾಡುವ ಕಾಯಕಕ್ಕೆ ಪ್ರಾಮುಖ್ಯತೆ ನೀಡಿ, ಭಕ್ತಿಗೆ ಎರಡನೆಯ ಆದ್ಯತೆಯನ್ನು ನೀಡಿದವರು. ಬಸವಣ್ಣ, ಚನ್ನಬಸವಣ್ಣ, ಮಾದರಚನ್ನಯ್ಯ, ಚಂದಿಮರಸ, ಶಂಕರದಾಸಿಮಯ್ಯ, ನೂಲಿ ಚೆಂದಯ್ಯ, ಅಂಬಿಗರ ಚೌಡಯ್ಯ ಮುಂತಾದ ವಚನಕಾರರು 'ಮಾಯೆ' ಯನ್ನು ಪರಿಭಾವಿಸುವ ರೀತಿ ಭಿನ್ನವಾಗಿಯೇ ಕಂಡುಬರುತ್ತದೆ.

ಕಾಯಕದ ಕಳವದಿಂದ ಮುಕ್ತಿ ಹೊಂದುವ ಸ್ಥಿತಿಯ ಕುರಿತು ಬಸವಣ್ಣ ಈ ರೀತಿಯಾಗಿ ವ್ಯಾಖ್ಯಾನಿಸುತ್ತಾನೆ. ಕಾಯ ಕಣ್ಣಿಗೆ ತೋರುತ್ತದೆ. ಕರಣ, ಇಂದ್ರೀಯ, ವಿಷಯ, ಮೋಹ ಇವು ಕಣ್ಣಿಗೆ ಕಾಣದ ಕಾಯದ ಮೂಲಕ ಅಭಿವ್ಯಕ್ತವಾಗುವ ಭಾವ ಸ್ಥಿತಿಗಳು. ಈ ಸ್ಥಿತಿಗಳು ಮಾಯೆಯ ಒಂದೊಂದು ಅಭಿವ್ಯಕ್ತ ರೂಪಗಳು ಲೋಕ ಈ ರೂಪಗಳ ಸೆಳೆತಕ್ಕೆ ಒಳಗಾಗಿದೆ. ಲೋಕದೊಳಗೆ ಒಂದಾಗದೆ ನಿಮ್ಮಡಿ ಯಲ್ಲಿ ಒಂದಾಗುವೆ ಎಂಬ ಆಲೋಚನೆ ದೈವದಿಂದ ಮಾಯೆಯಿಂದ ನಿರ್ಮುಕ್ತಿ ಹೊಂದುವು ದಾಗಿದೆ. ಇನ್ನೊಂದೆಡೆ ಲೋಕದೊಳಗೆ ತಾಯಿ, ಮಗಳು, ಸ್ತ್ರೀ ಈ ಪಾತ್ರಗಳ ಮೂಲಕ 'ಮಾಯೆ' ಸಂಸಾರದಲ್ಲಿ ಕೆಡಹುತ್ತಾಳೆ ಈ ಕ್ರಿಯೆಗಳಿಂದ ಹೊರ ಬರುವುದೇ ಮಾಯಾಮುಕ್ತ ಸ್ಥಿತಿ ಎನ್ನುತ್ತಾನೆ.

ಚನ್ನಬಸವಣ್ಣ 'ಮಾಯೆ'ಯ ಕುರಿತು ನಿರೂಪಿಸುತ್ತಾ ಭವಿ ಶರಣನಾಗುವಾಗ ಭಕ್ತಿ ಪ್ರಕ್ರಿಯೆಯಲ್ಲಿ ಹೊನ್ನು, ಹೆಣ್ಣು, ಮಣ್ಣು ಮೂರನ್ನು ತ್ಯಜಿಸಬೇಕು. ಒಂದನ್ನು ಬಿಟ್ಟು ಉಳಿದೆರಡನ್ನು ಬಿಡದೇ ಆಧ್ಯಾತ್ಮಿಕ ಸಾಧನೆಗೆ ಮಾಡಿದರೆ ಅದು ಅಪೂರ್ಣ. ತ್ರಿವಿಧ ಮಲ ಕಳೆದಲ್ಲದೆ ನಿಜ ಕುರುಹು ಅರಿವಿಗೆ ಬಾರದು ಎನ್ನುತ್ತಲೇ ಭಾವಮುಕ್ತ, ಭವಮುಕ್ತದಿಂದ ಬಿಡುಗಡೆ ಹೊಂದುವುದಾಗಿದೆ.

ವಚನಕಾರ ಆದಯ್ಯನು 'ಮಾಯೆ' ದೇವ–ದಾನವ–ಮಾನವರೆಲ್ಲರನ್ನು ಆವರಿಸುತ್ತದೆ. ತನು–ಮನ, ನೆನಹು–ಅರಿವು–ಕುರುಹುಗಳನ್ನು ಪ್ರಜ್ಞೆಗೆ ತಂದುಕೊಂಡು ಶಿವಪಥವರಿತು ಶಿವಯೋಗ ಸಾಧನೆ ಕೈಗೊಂಡಾಗ ಮಾಯಾ ಮುಕ್ತನಾಗಲು ಸಾಧ್ಯವೆನ್ನುತ್ತಾನೆ. ಅಂಬಿಗರ ಚೌಡಯ್ಯನು ಕಾಯದಿಂದ ಭಕ್ತಿ ಮಾಡುವ ಅಗತ್ಯವಿಲ್ಲ, ಆದರೆ ಕಾಯವನ್ನು 'ಪರಮಾತ್ಮ' ಚಿಂತನೆಯಲ್ಲಿ ತೊಡಗುವಂತೆ ಮಾಡಬೇಕು ಎನ್ನುತ್ತಾನೆ.

ಅರಿವಿನಮಾರಿತಂದೆ ನಿಜಭಕ್ತಿ ಅಂತರ್ಯದಲ್ಲಿ ನಡೆಯಬೇಕಾದದ್ದೇ ಹೊರತು ಬಹಿರಂಗದಲ್ಲಿ ಅಲ್ಲ, ನಾ–ನೀ ಎಂಬ ಸಂದೇಹವಳಿವದು ಒಂದರೊಳಗೊಂದು ಐಕ್ಯವಾಗಬೇಕು ಎಂಬ ನಿಲುವಿಗೆ ಬರುತ್ತಾನೆ. ಮೋಳಿಗೆಮಾರಯ್ಯ–ಕಾಯವನ್ನು 'ತೊಗಲಿನ ಚೀಲ'ವೆಂದು ಕರೆದು ಕಾಯದಲ್ಲಿ ಶಿವನಿದ್ದಾನೆ. ದೇಹವೆ ದೇಗುಲ ಎಂಬುದನ್ನು ವಚನಕಾರ ಒಪ್ಪದೆ ಕಾಯ ಹಲವು ಕಲ್ಮಶಗಳ ಆಗರವಾಗಿದೆ. ನಿರ್ಮಲವಲ್ಲದ ದೇಹದಲ್ಲಿ ಶಿವನೆಲೆಸಲು ಸಾಧ್ಯವಿಲ್ಲ ದೇಹದಲ್ಲಿ ದೇವನಿರುವನು ಎಂಬ ಮಾತು ಕೇವಲ ಭಕ್ತನದು. ಪರಮಾತ್ಮನನ್ನು ಅರಿತಾಗ 'ಅರಿವು' ಮೂಡುತ್ತದೆ. ಮರೆತಾಗ 'ಮಾಯೆ' ಆವರಿಸುತ್ತದೆ.

ಢಕ್ಕೆಯ ಬೊಮ್ಮಣ್ಣನು 'ಮಾಯೆ' ನೀರಿನಲ್ಲಿರುವ ಕಾಣದ ಹಲವು ಬಣ್ಣಗಳಂತೆ, ಗಾಳಿಯಲ್ಲಿ ಬೆರೆತಿರುವ ಜೀವ ಭಾವದಂತೆ, ಬೆಂಕಿಯ ಸರ್ವವ್ಯಾಪಕ ಗುಣದಂತೆ ಮಾಯೆಯಿದೆ. ಜಗತ್ ಸೃಷ್ಟಿಯಲ್ಲಿ ಯಾವುದನ್ನು ಆಸಕ್ತಿಯಿಂದ ನೋಡುತ್ತೇವೆಯೋ ಅದೆಲ್ಲವೂ ಮಾಯೆಯೇ ಆಗಿದೆ. ಭಗವತ್ ಸ್ವರೂಪಿ ಲಿಂಗದಲ್ಲಿ ಮಾತ್ರ ಮಾಯೆ ಇಲ್ಲವಾಗುತ್ತದೆ. ದಾಸೋಹದ ಸಂಗಣ್ಣನು ಜೀವನನ್ನು ಅಜ್ಞಾನದ ಮಡಿಲಲ್ಲಿ ಪೋಷಿಸುವುದಕ್ಕಿಂತ ಜ್ಞಾನದ ನೆರಳಲ್ಲಿ ಪೋಷಿಸಿದರೆ ಮಾಯೆ ಎಂಬ ಲೋಹದಿಂದ ಮುಕ್ತನಾಗಬಹುದು ಎಂದಿದ್ದಾನೆ. ಜೇಡರ ದಾಸಿಮಯ್ಯ, ದೇವ–ಜೀವರ ನಡುವೆ ಮಾಯಾ ಆವರಣವಿದ್ದು, ಜೀವ ದೇವನನ್ನು ಅರಿಯಲು ಸಾಧ್ಯವಾಗುವುದಿಲ್ಲ. 'ಅರಿವು' ಜೀವ ತಾನು ಪರಮಾತ್ಮಲನ ಅಂಶ ಎಂಬುದರ ತಿಳುವಳಿಕೆ ಯಾಗಿದೆ. ಅರಿವಿನ ಮರೆವು ಉಂಟಾಗುವ ಸ್ಥಿತಿಯು ಮಾಯೆಯಾಗಿದೆ. ತಾಯಿ–ಶಿಶು, ದೇವ–ಜೀವ ಇವರಲ್ಲಿನ ಸಾಮ್ಯತೆ–ಭಿನ್ನತೆಯ ಮೂಲಕ ಮಾಯೆಯನ್ನು ಆಧ್ಯಾತ್ಮಿಕ ನೆಲೆಯೊಂದಿಗೆ ಅರ್ಥೈಯಿಸಿದ್ದಾರೆ.

ಲೌಕಿಕದಲ್ಲಿ ಭವಿಯಾಗಿ ಹುಟ್ಟಿ ಶರಣನಾಗಿ ಪರಿವರ್ತಿತನಾಗುವ ಹಂತದಲ್ಲಿ

ಲೌಕಿಕ ಮೀರುವಾಗ 'ಮಾಯೆ' ಸಂಸಾರ, ಜಗ, ಕರ್ಮ, ಕಾಯ, ಮರೆವು, ಹಿರಿತನ, ಪಾಶ, ಅರಿವು, ಭಾವ, ನಾನು–ನೀನು, ತ್ರಿವಿಧ ಮಲರೂಪ, ಅಹಂಕಾರ ಮುಂತಾದ ನೆಲೆಗಳಲ್ಲಿ ತೋರಿ ಬರುತ್ತದೆ.

ಅಲ್ಲಮ ವಚನ ಸಾಹಿತ್ಯ ಪರಂಪರೆಯಲ್ಲಿ ವಿಭಿನ್ನ ಆಲೋಚನೆಗಳ ಮೂಲಕ ಲೋಕದ ಗ್ರಹಿತಗಳನ್ನು, ಜಗತ್ತು–ಧರ್ಮ–ದೇವರು–ಮೋಕ್ಷ ಇತ್ಯಾದಿ ಆಧ್ಯಾತ್ಮಿಕ ಪರಿಕಲ್ಪನೆಗಳ ಜೊತೆಗೆ ಹೊಸ ವ್ಯಾಖ್ಯಾನ ನೀಡಿ, ಸೃಷ್ಟಿಯ ಅದ್ಭುತ ರಹಸ್ಯವನ್ನು ಮನುಜ ಹಾಗೂ ಮನುಜನೊಳಗಿನ ಮಾನಸಿಕ, ಬೌದ್ಧಿಕ, ಭಾವನಾತ್ಮಕ ವಿಷಯಗಳನ್ನು ಅರ್ಥೈಸುತ್ತಾ ಅನುಭಾವಿಗಳ ಅನುಭಾವಿಯಾಗಿ ಶರಣ ಪರಂಪರೆಗೆ ಶಿವಯೋಗ ಸಾಧನೆಯ ಸತ್ವವನ್ನು ಅರುಹಿದವನು. ವ್ಯಕ್ತಿ ನೆಲೆಯಿಂದ ಸಾರ್ವತ್ರಿಕ ನೆಲೆಯವರೆಗೆ ಆತ್ಮತತ್ವಾನುಭವನ್ನು ನಿರೂಪಿಸಿದ ಪರಮಯೋಗ ಸಾಧಕ. ಅಲ್ಲಮ 'ಮಾಯೆ' ಕುರಿತು ನಿರೂಪಣೆ ಮಾಡುತ್ತಾ ಮಲತ್ರಯಗಳಲ್ಲಿ ಒಂದಾದ ಮಾಯೆ ಅದರ ಭಾಗವಾದ ತನುತ್ರಯಗಳಲ್ಲಿ ಸ್ಥೂಲ, ಸೂಕ್ಷ್ಮ,ಕಾರಣವಾಗಿ 'ಕಾಯ' ತನ್ನಿಚ್ಛೆಯಂತೆ ವರ್ತಿಸುತ್ತದೆ. ಶುದ್ಧ ಜೀವ–ಅಶುದ್ಧಗೊಳಿಸುವ ಲೌಕಿಕದ ತೊಳಲಾಟ ಕಾರಣವಾಗಿರುವ ಕಾರಣ ಮಲತ್ರಯಗಳೇ ಶುದ್ಧವಲ್ಲದ್ದೆಂದು ಗುರುತಿಸಿದ್ದಾನೆ.

ಆಧ್ಯಾತ್ಮಿಕ ಸಾಧನೆ ಲೌಕಿಕ ಬದುಕಿನಲ್ಲಿ ಜೀವನನ್ನು ಭವಿಯಾಗಿಸುವ ಮಾಯೆ ಶಿವನಿಂದ ಅಸ್ತಿತ್ವಗೊಂಡು ಶಿವನನ್ನು ಮೀರಿ ಬೆಳೆದರೂ ದೃಢಭಕ್ತಿಯ ಮುಂದೆ ನಿಲ್ಲಲಾರದು. ಮಾಯೆ ದೇವನ ಎದುರಿಗೆ ಅಶಕ್ತ, ಜೀವನ ಎದುರಿಗೆ ಸಶಕ್ತ. ಸಾಮಾಜಿಕ ಬದುಕಿನ ಸಂದರ್ಭಗಳಿಗೆ ಮನುಜ ಮುಖಾಮುಖಿ ಯಾದಾಗ ಪ್ರತಿಕ್ರಿಯಿಸಬೇಕಾಗುತ್ತದೆ. ಲೌಕಿಕ–ಅಲೌಕಿಕ ನೆಲೆಯಲ್ಲಿ ಈ ಪತ್ರಿಕ್ರಿಯೆಗಳು ಭಿನ್ನವಾಗುತ್ತವೆ. ಅಲೌಕಿಕ ಸ್ತರದಲ್ಲಿ ವ್ಯಕ್ತಿ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸಿಕೊಳ್ಳಬೇಕಾದಾಗ ಉಂಟಾಗುವ ಮಾನಸಿಕ ಸ್ಥಿತಿಯಲ್ಲಿನ ದ್ವಂದ್ವವೇ ಮಾಯೆ. ಮಾಯೆ ಜೀವಸೂತ್ರವಾಗಿ ಮನುಷ್ಯನನ್ನು ಗೊಂಬೆಯಂತೆ ತನ್ನಿಷ್ಟದಂತೆ ಆಡಿಸುತ್ತದೆ. ಮಾಯೆಯ ಪ್ರಭಾವದಿಂದ ಅಜ್ಞಾನವನ್ನು ಜ್ಞಾನವಾಗಿ ಭಾವಿಸುತ್ತದೆ. ಮಾನವ ಬದುಕಿನ ಸನ್ನಿವೇಶಗಳಿಗೆ ಸೂಕ್ತ ಪರಿಹಾರ ಕಾಣದೆ ತೊಳಲಾಡುವಂತೆ ಮಾಡುತ್ತದೆ. ಬೆಳಕೆಂಬ ಜ್ಞಾನವನ್ನು ಅರಿಯದೆ ಕತ್ತಲೆಯೆಂಬ ಅಜ್ಞಾನದಲ್ಲಿ ಸುಖದಿಂದ ಬದುಕುವಂತೆ ಪ್ರೇರೇಪಿಸುತ್ತದೆ. ಜಗತ್ತು ಶಾಶ್ವತವಾದುದಲ್ಲ ಒಂದಿಲ್ಲೊಂದು ದಿನ ಲಯವಾಗುವಂತಹದು ಎಂಬ ಅರಿವುಳ್ಳ ಅಲ್ಲಮ ಮಾಯೆಯನ್ನು ಸಮರ್ಥವಾಗಿ ಎದುರಿಸುತ್ತಾನೆ. ಮಾಯೆಯ ಸೃಷ್ಟಿ ಯಾಗಿರುವ ಮರವೆಗೆ ಬಲಿಯಾದ ಮನುಷ್ಯ ಮನಸ್ಸಿಗೆ ದುಗುಡವನ್ನು ಬಿಟ್ಟರೆ ಇನ್ನೇನು ಆಹಾರವಾಗಬಲ್ಲದು. ಮಾಯೆಯ ಸೆಳೆತಕ್ಕೆ ಸಿಕ್ಕ ಮನುಷ್ಯ ತನ್ನ ಅಸ್ತಿತ್ವ ಕಳೆದುಕೊಳ್ಳುವನು.

ಸಾಮಾಜಿಕ ಸ್ತರದಿಂದ ಬಿಡಿಸಿಕೊಂಡ ಅಲ್ಲಮ ಯೋಗಿಕ ನೆಲೆಯಲ್ಲಿ ಅರಿವು-ಕುರುಹನ್ನು ವಿವರಿಸಿ ಮಾಯೆ ಬಣ್ಣನೆಯ ಮಾತಾಗಿ, ಡಾಂಭಿಕತೆಯಾಗಿ ತೋರುತ್ತದೆ. ಆತ್ಮ-ಜೀವದ ಸ್ವರೂಪ ಅರಿತಿರುತ್ತಾನೆ. ಈ ಅರಿವನ್ನು ಅರಿತು ವರ್ತಿಸಿದಾಗ ಅಲ್ಲಿ ಅಹಂಮಿಕೆ ಕಾಣಿಸದು. ಮಾತೆಲ್ಲ ತತ್ವ-ಚಿಂತನೆಗಳಾಗಿ ತೋರುತ್ತವೆ. ಆದರೆ ಅರಿವಿನ ಮರೆಯಲ್ಲಿ ಅಹಂಮಿಕೆಯ ಭಾವ ಮೂಡಿದಾಗ ಮಾತು ತತ್ವವಾಗದೇ ಮಾಯೆಯ ರೂಪ ಪಡೆಯುತ್ತದೆ. ಮಾಯೆ ಎಂಬುದು ನಿತ್ಯ ಸತ್ಯ ಅಭಿವ್ಯಕ್ತಿಯಾಗದೇ ಬರಿಯ ಬಣ್ಣನೆಯ ಮಾತಾಗಿ ಕಾಣುತ್ತದೆ.

ಮಾಯೆ ಎಂಬುದು ಕಾಯದ ಅಂತರ-ಬಹಿರ್ ರೂಪದಲ್ಲಿ ವ್ಯವಹರಿಸುವಂಥದ್ದು, ಅದೃಶ್ಯ ಸ್ವರೂಪದ ಮಾಯೆ 'ಜೀವನ' ಕಾಯದ ಕ್ರಿಯೆಗಳ ಮೂಲಕ ಸದೃಶ್ಯವಾಗುತ್ತದೆ. ಆದ್ದರಿಂದ ಕಾಯದ ಬಾಹ್ಯ ಆಚರಣೆ-ವರ್ತನೆಗಳ ಮೇಲೆ ನಿಯಂತ್ರಣ ಸಾಧಿಸಿದರೆ ಸಾಲದು ಅಂತರಂಗದಲ್ಲಿ ಕಾಣದಂತಿರುವ ವಿಷಯ ವಾಸನೆ ಯನ್ನು ತೊರೆಯಬೇಕು ಆಗ ಮಾಯೆ ಇಲ್ಲವಾಗುತ್ತದೆ.

ಅಜ್ಞಾನ, ಅಹಂಕಾರಗಳೆರಡು ಮಾಯೆಯ ಕ್ರಿಯಾಭಿವ್ಯಕ್ತಿಯ ನೆಲೆಗಳಾಗಿದ್ದು, ಜ್ಞಾನದ ಬಲದಿಂದ ಜೀವ ಮಲ ಭಾವದಿಂದ ಮುಕ್ತನಾಗುತ್ತಾನೆ, ನಿಜಯೋಗಿಯಾಗಿ ನಿಲ್ಲುತ್ತಾನೆ.

ಜೀವನಲ್ಲಿ ಜೀವಭಾವ ಕಳೆದು ಆತ್ಮಭಾವ ಮೂಡಬೇಕಾದರೆ ತನು-ಮನಗಳೆರಡು ಶುದ್ಧವಾಗಿರ ಬೇಕು. ಮಾಯೆಯ ವಿವಿಧ ರೂಪಗಳಾದ ಆಸೆ, ಕನಸು, ವ್ಯಾಮೋಹ, ಭ್ರಮೆ ಇತ್ಯಾದಿಗಳಿಂದ ಮುಕ್ತ ನಾಗಬೇಕು. ಅಂತರಂಗವನ್ನು ಹೊತ್ತ ಕಾಯವು ಬಹಿರಂಗದ ಮಾಯೆಯ ಕ್ರಿಯಾರೂಪಗಳಾದ ಕೋಪ, ಮತ್ಸರ, ಕಾಮ, ಕ್ರೋಧ, ಮದ ಇತ್ಯಾದಿಗಳಿಂದ ಮುಕ್ತವಾಗಬೇಕು. ಅಂತರಂಗ-ಬಹಿರಂಗಗಳೆರಡು ಶುದ್ಧ, ನಿಶ್ಚಲ-ನಿರ್ಮಲ ವಾಗಿರಬೇಕು. ಶಿವಯೋಗ ಸಾಧನೆಯ ಮೂಲಕ ಈ ಹಂತಗಳನ್ನು ಪರಿಪೂರ್ಣವಾಗಿ ನಿವಾರಿಸಿಕೊಳ್ಳಲು ಸಾಧ್ಯ.

ಅಕ್ಕಮಹಾದೇವಿ ಶರಣ ಸಮುದಾಯದಲ್ಲಿ ಅನುಭಾವಿ ಶರಣೆಯಾಗಿ ತೋರುತ್ತಾಳೆ. ಆಧ್ಯಾತ್ಮದ ನೆಲೆಯಲ್ಲಿ ಚೆನ್ನಮಲ್ಲಿಕಾರ್ಜುನನ್ನು ಪತಿಯಾಗಿಸಿಕೊಂಡು ಸಾಮಾಜಿಕ ಸಂದರ್ಭಗಳಿಗೆ ಮುಖಾಮುಖಿ ಯಾಗುತ್ತಾ ಪಡೆದ ಅನುಭವಗಳನ್ನು ವಚನದ ವಸ್ತುವಾಗಿಸಿದ್ದಾಳೆ. ಸಾಮಾಜಿಕ ಚೌಕಟ್ಟಿನಲ್ಲಿ ನಿಂತು ಹಲವು ಸಂದರ್ಭವನ್ನು ಅವಲೋಕಿಸಿ, ಅನುಭವಿಸಿದ ಅಕ್ಕಮಹಾದೇವಿ ಅನುಭಾವಿಕ ನೆಲೆಯಲ್ಲಿ ವಚನಗಳನ್ನು ನಿರೂಪಿಸಿದ್ದಾಳೆ. ಅಕ್ಕನ ವಚನಗಳಲ್ಲಿ ಮಾಯೆ ಎಂಬ ಅಂಶ ನಿರ್ವಚಿತಗೊಂಡ ನೆಲೆಗಳನ್ನು ಗಮನಿಸಲಾಗಿದೆ. ಅಕ್ಕ ಮಾಯೆಯನ್ನು ನಿರೂಪಿಸುವಾಗ ತಾನು ಅದರೊಳಗೊಂದಾಗಿ ಪ್ರತಿಕ್ರಿಯಿಸುವ

ಸಂದರ್ಭಗಳ ಕಾಣುತ್ತದೆ.

ಅಕ್ಕಮಹಾದೇವಿ 'ಮಾಯೆ'ಯನ್ನು ನಿರ್ವಚಿಸುವಲ್ಲಿ ಕಾಯದ ಮೂಲಕ ಮಾಯೆ ಆವರಿಸುವ ರೀತಿಯನ್ನು ಹೇಳುತ್ತಾಳೆ. ಕಾಯದಲ್ಲಿ ನೆರಳಿನ ರೂಪದಲ್ಲಿ, ಮನದಲ್ಲಿ ನೆನಹಿನ ರೂಪದಲ್ಲಿ ಮಾಯೆ ಆವರಿಸುತ್ತದೆ. ಮನುಜನ ಬಹಿರಂಗ-ಅಂತರಂಗ ಎಂಬ ಎರಡು ಸ್ತರಗಳನ್ನು ಮಾಯೆ ಬಿಡದು. ಮಾಯೆ ಎಂಬುದು ಆವರಿಸಲು ಕಾಯವೇ ಮುಖ್ಯ ಮಾಧ್ಯಮವಾಗಿದೆ. ಕಾಯದ ಮೂಲಕ ಮನಸ್ಸನ್ನು ಪ್ರವೇಶಿಸುತ್ತದೆ. ಕಾರಣ ಕಾಯವೇ ಮಾಯೆಯಾಗಿದೆ ಎಂದು ಗುರುತಿಸಿದ್ದಾಳೆ.

ಆಧ್ಯಾತ್ಮ ಸಾಧನೆಯಲ್ಲಿ ತೊಡಗುವ ಶರಣ ಈ ಮಾಯೆಯನ್ನು ತ್ಯಜಿಸಿದರೂ ಅದು ಬಿಡದು. ಯೋಗಿಯಾಗಲು ಹೊರಟವನಿಗೆ ಯೋಗಿಣಿಯ ನೆಲೆಯಲ್ಲಿ ಸವಣನಿಗೆ ಸವಣಿಯ ನೆಲೆಯಲ್ಲಿ, ಯತಿಗೆ ಪರಾಕಿಯಾಗಿ ಮಾಯೆ ಕಾಡುತ್ತದೆ ಸರ್ವವನ್ನು ತ್ಯಜಿಸಿ ಹೊರಟ ಸನ್ಯಾಸಿಯನ್ನು ಸನ್ಯಾಸತ್ವದ ರೂಪದಲ್ಲಿ ಕಾಡುತ್ತದೆಎಂದು ಹೇಳುತ್ತಾ, ಅಕ್ಕ ತಾನು ಈ ಮಾಯೆಗೆ ಹೆದರುವುದಿಲ್ಲ ಎಂದು ಹೇಳುತ್ತಾಳೆ.

ಆಧ್ಯಾತ್ಮ ಸಾಧನೆಯಲ್ಲಿ ಆತ್ಮಕ್ಕೆ ಪ್ರಾಧಾನ್ಯತೆಯಿದ್ದು, ಹೆಣ್ಣು-ಗಂಡು ಎಂಬ ಭೇದವನ್ನು ಮೀರಿ ಮಾಯೆ ನಿರ್ವಚಿತಗೊಂಡಿದೆ. ಒಳಗೆ ಸುಳಿವ ಆತ್ಮ ನಿರಾಕಾರ ಸ್ವರೂಪದ್ದು ಬಾಹ್ಯದಲ್ಲಿ ತೋರುವ ಗಂಡು-ಹೆಣ್ಣು ಎಂಬುದು ಕೇವಲ ವ್ಯಕ್ತಿರೂಪದ ಭಿನ್ನತೆಗಳಾಗಿವೆ. ಪುರುಷನ ಮುಂದೆ ಹೆಣ್ಣಾಗಿ, ಸ್ತ್ರೀಯ ಮುಂದೆ ಪುರುಷನಾಗಿದ್ದು, ಅಭಿಮಾನದ ನೆಲೆಯಲ್ಲಿ ಮಾಯೆ ಕಾಡುತ್ತದೆ.

ಶರಣನು ಪರಮಾತ್ಮನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವಲ್ಲಿ ಮಾಡುವ ಭಕ್ತಿಯನ್ನು ಕುರಿತು ಹೇಳುವಾಗ ಮಾಯೆ ಇಲ್ಲವಾಗುತ್ತದೆ. ಕಾಯಕ ಮಾಡುವ ಕೈಗಳಲ್ಲಿ ಲಿಂಗ ನೆಲೆಗೊಂಡಾಗ ಅಂಗವು ಲೌಕಿಕವನ್ನು ತ್ಯಜಿಸುತ್ತದೆ. ಅಂಗೈಯಲ್ಲಿನ ಲಿಂಗ ಅಂಗದಲ್ಲಿ ಐಕ್ಯವಾಗಿ ಲಿಂಗಾಂಗ ಸಾಮರಸ್ಯ ಮೂಡುತ್ತದೆ. ಈ ಸಾಮರಸ್ಯದ ಹಂತದಲ್ಲಿ ಮಾಯೆ ಇಲ್ಲವಾಗುತ್ತದೆ.ಮಾಯೆ ಆಧ್ಯಾತ್ಮಿಕ ನೆಲೆಯಲ್ಲಿ ನಿರೂಪಿತಗೊಂಡಿದೆ.

ಅಕ್ಕ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿ ಚೆನ್ನಮಲ್ಲಿಕಾರ್ಜುನ ಮಾರ್ಗದರ್ಶನದಲ್ಲಿ ಸಾಗುತ್ತಾಳೆ. ಆಗ ಕಾಯದಲ್ಲಿ ಉಂಟಾಗುವ ಅತೃಪ್ತಿಯನ್ನು ಮನದಲ್ಲಿ ಮೂಡಿದ ಮಾಯೆಯನ್ನು ಮೀರಲು ಸಾಧ್ಯ. ಲೋಕದ ಜೀವನಾಗಿ ಹುಟ್ಟಿ ಭವದಲ್ಲಿ ತೊಳಲುವಾಗ ಕಾಡುವ ಮಾಯೆ ಮನದ ನೆಲೆಯಲ್ಲಿ ಮೂಡಿ ಭಕ್ತಿಯ ಬಲದಿಂದ ಕರಗಿದೆ. ಅಕ್ಕನು ಸಮಾಜದ ಭಾಗವಾಗಿ ಮಾಯೆಯನ್ನು ಲೌಕಿಕದ ನೆಲೆಯಲ್ಲಿ ಮನವಾಗಿ, ಮರಹಾಗಿ, ವಿಧಿಯಾಗಿ, ಅಹಂಕಾರ ಇತ್ಯಾದಿಯಾಗಿ ಕಾಡುತ್ತದೆ ಎಂದು ಅರ್ಥೈಸಿದ್ದಾಳೆ.

ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಒಂದೇ ಸಾಮಾಜಿಕ ಸಂದರ್ಭದಲ್ಲಿ

ಬದುಕಿದವರು. ಇವರಿಬ್ಬರ ಸುತ್ತ ನೆರೆದ ಸಮಾಜವನ್ನು ಅಲ್ಲಮ ಯೋಗಿಕ–ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಅಕ್ಕ ವಯಕ್ತಿಕ□ಆಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತಾಳೆ. ಲೋಕದ ಜನರನ್ನು ಆವರಿಸುವ 'ಸಂಸಾರ' ಎಂಬ ಪರಿಕಲ್ಪನೆಯನ್ನು ಅಲ್ಲಮನು ಅವಲೋಕನಾತ್ಮಕವಾಗಿ ನಿರೂಪಿಸುತ್ತಾನೆ. ಗುಹೇಶ್ವರನನ್ನು ಅರಿತ ಶರಣನು ಸಂಸಾರದಿಂದ ಮುಕ್ತನಾಗಿ, ಚಿಂತೆಯನ್ನು ತೊಡೆದುಕೊಂಡು ತಾಮಸತ್ವ ಕಳೆದುಕೊಂಡು ಸಾತ್ವಿಕ ಜೀವನಾಗುತ್ತಾನೆ ಎಂಬ ವಿವರಣೆಯ ಮೂಲಕ ಲೋಕದಲ್ಲಿ ಹುಟ್ಟಿದ ಜೀವನು ತಾಮಸ ಭಾವದ ಕಾರಣಕ್ಕೆ ಸಂಸಾರ ಎಂಬ ನೆಲೆಯಲ್ಲಿ ಮಾಯೆಗೆ ಒಳಗಾಗುತ್ತಾನೆ.

ಅದೇ ಸಂಸಾರದ ಕುರಿತು ಹೇಳುವಾಗ ಅಕ್ಕ ತನ್ನನ್ನು ಅನ್ವಯಿಸಿಕೊಂಡು ಹೇಳುತ್ತಾಳೆ. ತಾನು ಲೋಕದ ಸಂಸಾರದ ನೆಲೆಯಲ್ಲಿ ಸಿಲುಕಿ ಪ್ರಕೃತಿ ಸಹಜ ಹಸಿವು–ತೃಷೆಗೆ ಸ್ಪಂದಿಸುವಂತಾಗಿದೆ ಎಂದು ವ್ಯಥೆ ಪಡುತ್ತಾಳೆ. ಈ ಸಂಸಾರದಿಂದ ಮುಕ್ತಳಾಗಿ ಪರಮಾತ್ಮನನ್ನು ನೆನೆಯುವಂತೆ ಮಾಡಬೇಕೆಂದು ಚೆನ್ನಮಲ್ಲಿ ಕಾರ್ಜುನನಲ್ಲಿ ಪ್ರಾರ್ಥಿಸುತ್ತಾಳೆ. ಅಲ್ಲಮನ ದೃಷ್ಟಿಯಲ್ಲಿ ಸಂಸಾರ ಎಂಬ ಮಾಯೆ ಲೋಕಕ್ಕೆ ಅನ್ವಯವಾದರೆ ಅಕ್ಕನ ದೃಷ್ಟಿಯಲ್ಲಿ ಸಂಸಾರ ಲೋಕಕ್ಕೆ ಹಾಗೂ ಲೋಕದೊಳಗಿರುವ ತನಗೂ ಅನ್ವಯಿಸಿಕೊಳ್ಳುತ್ತಾಳೆ.

ಭವದಲ್ಲಿರುವ ಮಾಯೆ ಅಲ್ಲಮ ಮತ್ತು ಅಕ್ಕನಿಗೆ ಕಾಡಿದ್ದು ಅದರಿಂದ ಮುಕ್ತನಾಗುವ ಹಂತದಲ್ಲಿ ಭಿನ್ನವಾಗಿ ಪ್ರತಿಕ್ರಿಯಿಸಿದ್ದಾರೆ. ಅಲ್ಲಮ ತನ್ನ ಪೂರ್ವಾಜಿತ ಕರ್ಮ ಕರಗಿ, ಪಾಪವೆಲ್ಲ ಅಳಿದು ನಾಶವಾಗಿ ಸಂಸಾರದಲ್ಲಿ ನೊಂದು ಅದರಿಂದ ಮುಕ್ತನಾದೆ. ಮಾಯೆಯ ಸೆಳೆತ ಶಿವಜ್ಞಾನದ ಬಲದಲ್ಲಿ ಕಳಚಿ ಹೋಯಿತು. ಮತ್ತೆ ಈ ಮಾಯೆ ಎಂಬ ಶಕ್ತಿಯತ್ತ ಮುಖ ಮಾಡೆನು ಎಂಬ ನಿರ್ಧಾರ ತಾಳುತ್ತಾನೆ. ಅಕ್ಕನು ಭವದಲ್ಲಿ ಹುಟ್ಟಿ ಸಂಸಾರದ ಸೆಳೆತಕ್ಕೆ ಸಿಲುಕಿ ಆಧ್ಯಾತ್ಮ ಹಸಿವು ನೀಗದಂತಾಗಿತ್ತು. ಆದರೆ ಚೆನ್ನನೊಲಿದ ಕಾರಣ ಭವ ಮುಕ್ತಳಾದ ಸಮಾಧಾನದಲ್ಲಿ ಮಾಯೆಯನ್ನು ಮೀರಿದೆ ಎನ್ನುತ್ತಾಳೆ. ಅಕ್ಕನ ದೃಷ್ಟಿಯಲ್ಲಿ ಮಾಯೆ ಪರಮಾತ್ಮನ ಸೃಷ್ಟಿ ಯಾಗಿದ್ದು, ಪರಮಾತ್ಮನ ಬಲದಿಂದಲೇ ಮಾಯೆ ಎಂಬ ಸೆಳೆತದಿಂದ ಮುಕ್ತಳಾಗುವ ಪರಿಯಿದೆ.

ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆ: ನಿರ್ವಚನದ ನೆಲೆಗಳು ಎಂಬ ಮಹಾ ಪ್ರಬಂಧದಲ್ಲಿ ಮಾಯೆ ಪರಂಪರೆಯಲ್ಲಿ ಪಡೆದ ಸ್ಥಾನವನ್ನು ಹಾಗೂ ಮಾಯೆಯ ಪ್ರಭಾವವನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಧಾರ್ಮಿಕ ಚಿಂತನೆ, ಜಿಜ್ಞಾಸೆ ನಡೆಯುವ ಸಂದರ್ಭದಲ್ಲಿ 'ಮಾಯೆ' ಚರ್ಚೆಗೊಳಗಾಗಿದೆ. ಜೀವನು ಸಾವಿನ ನಂತರದಲ್ಲಿ ಪಡೆದುಕೊಳ್ಳುವ ಮೋಕ್ಷಕ್ಕಾಗಿ ತನ್ನ ವರ್ತಮಾನದಲ್ಲಿ ಹಲವು ಧಾರ್ಮಿಕ ಕ್ರಿಯಾಚರಣೆಯನ್ನು ಕೈಗೊಳ್ಳುತ್ತಾನೆ. ಸಾತ್ವಿಕ ಬದುಕನ್ನು ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಜೀವನ ಅಥವಾ ಮನುಜನ ಬದುಕನ್ನು ಮಾರ್ಗದರ್ಶಿಸುವ ಶಕ್ತಿಯಾಗಿ 'ಮಾಯೆ' ತೋರುತ್ತದೆ. ಆಧ್ಯಾತ್ಮಿಕ

ಪರಿಕಲ್ಪನೆಯಾದ ಮಾಯೆ ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ-ವ್ಯಕ್ತಿಗೆ ವೈವಿಧ್ಯತೆಗೊಂಡು ನಿರ್ವಚಿಸಲ್ಪಟ್ಟಿದೆ. 'ಮಾಯೆ'ಯ ಕುರಿತಾದ ವೈವಿಧ್ಯ ಚಿಂತನೆಗಳನ್ನು ಅಧ್ಯಯನ ಕೈಗೊಳ್ಳುವುಲಾಗಿದ್ದು, ಫಲಿತಗಳನ್ನು ಈ ಕೆಳಗಿನಂತೆ ಕ್ರೋಢಿಕರಿಸಲಾಗಿದೆ.

೧. ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಉಪನಿಷತ್ ಪ್ರಧಾನವಾಗಿದ್ದು, ಉಪನಿಷತ್‌ಗಳಲ್ಲಿ ಪರಮಾತ್ಮ ಸಕಲಕ್ಕೂ ಸೃಷ್ಟಿಕರ್ತ ಹಾಗೂ ಅವನೇ ಅಮೃತಸ್ವರೂಪಿ. ಪರಮಾತ್ಮನು ಪ್ರಧಾನ ಮತ್ತು ಜೀವರನ್ನೂ ಆಳುತ್ತಿದ್ದಾನೆ ಪ್ರಧಾನವೇ ಪ್ರಕೃತಿ, ಪಂಚಭೂತಗಳಿಂದಾದ ಪ್ರತಿ ವಸ್ತುವೂ ಇದರ ತೆಕ್ಕೆಗೆ ಬರುತ್ತದೆ. ಪ್ರಕೃತಿಯ ಅಭಿವ್ಯಕ್ತಿರೂಪ ಮಾಯೆಯಾಗಿದ್ದು ಪ್ರಪಂಚವನ್ನು ವ್ಯಾಪಿಸಿದೆ.

೨. ಕಾಶ್ಮೀರ ಶೈವ ಹಾಗೂ ಶಾಕ್ತದಲ್ಲಿ ಜಗತ್ತಿನ ಸೃಷ್ಟಿಯಲ್ಲಿ ಮೂವತ್ತಾರು ತತ್ವಗಳು ಮುಖ್ಯವೆನ್ನುತ್ತಾರೆ. ಮೂವ್ವತ್ತಾರು ತತ್ವಗಳನ್ನು ಪರಿಶುದ್ಧ ಹಾಗೂ ಅಪರಿಶುದ್ಧ ಎಂದು ವಿಭಜಿಸಲಾಗಿದೆ. ಶಿವಶಕ್ತಿಯಿಂದ ಉದಿಸಿದ ಮಾಯೆ ಲೋಕದ ಸಮಸ್ತ ವ್ಯಾಪಾರದಲ್ಲಿ ಕ್ರಿಯಾಶೀಲವಾಗಿ ಭಾಗಿಯಾಗಿದೆ. ಮಾಯೆ ಅಪರಿಶುದ್ಧ ತತ್ವದ ಎಲ್ಲ ಸ್ತರಗಳಲ್ಲಿ ತನ್ನ ಅಸ್ತಿತ್ವವನ್ನು ಪ್ರಸ್ತಾಪಿಸುತ್ತದೆ.

೩. ಶೈವಮತ ಹಾಗೂ ಶಕ್ತಿವಿಶಿಷ್ಟಾದ್ವೈತದಲ್ಲಿ ತ್ರಿವಿಧ ಮಲಗಳ ಜೀವನನ್ನು ಆವರಿಸುವ ವಿಧಾನವನ್ನು ಹೇಳಲಾಗಿದೆ. ತ್ರಿವಿಧಮಲಗಳಾದ ಆಣವ, ಮಾಯಾ, ಕಾರ್ಮಿಕ ಜೀವನನ್ನು ಆವರಿಸುತ್ತವೆ. ಮಾಯಾ-ಮಲ ಜೀವ ಲೌಕಿಕದಲ್ಲಿ ವರ್ತಿಸುವಂತೆ ಮಾಡುತ್ತದೆ.

೪. ವಚನಕಾರರು ಆಣವ, ಮಾಯಾ, ಕಾರ್ಮಿಕ ಎಂಬ ಮೂರು ಮಲಗಳ ಜೊತೆಗೆ ಶೋಧಮಲ, ಬಿಂದುಮಲ ಎಂದು ಪಂಚಮಲಗಳನ್ನು ಪ್ರಸ್ತಾಪಿಸುತ್ತಾರೆ.

೫. ವಚನಕಾರರು ಪ್ರಪಂಚ ಪರಮಾತ್ಮನ ಸೃಷ್ಟಿ ಎಂದು ಒಪ್ಪಿದರೂ, ಜೀವನನ್ನು ಮಾಯೆಯಾಗಿ ಭಾದಿಸು ವಲ್ಲಿ ಪ್ರಪಂಚವು ಒಂದು ರೂಪವಾಗಿದೆ. ಇದನ್ನೇ ವಚನಕಾರರು 'ಮಾಯಾ ಪ್ರಪಂಚ'ವೆಂದಿದ್ದಾರೆ.

೬. ವಚನಕಾರರು ತನ್ನ ಸುತ್ತ ಹರಡಿಸುವ ಜಗತ್ತು ಮಾಯೆ ಎಂಬ ಶಿವಾಂಶಿಕ ಶಕ್ತಿಯಿಂದ ಸೃಷ್ಟಿಯಾದದು ತಾನು ಕೂಡಾ ಈ ಜಗತ್ತಿನಲ್ಲಿ ಜೀವಿಸುವ ಜೀವನಾದ್ದರಿಂದ ಮಾಯೆ ಎಂಬುದು ತನ್ನನ್ನೂ ಆವರಿಸುವುದು ಖಚಿತ. ಮಾಯೆಯಿಂದ ಬಿಡಿಸಿಕೊಳ್ಳಬೇಕೆಂಬ ತೀವ್ರ ಹಂಬಲಕ್ಕೆ ಪರ್ಯಾಯವಾಗಿ ಶಿವನಲ್ಲಿ ಐಕ್ಯವಾಗುವ ಹಾಗೂ ತನ್ನಲ್ಲಿ ಶಿವನನ್ನು ಐಕ್ಯಗೊಳಿಸಿಕೊಳ್ಳುವ ಇಚ್ಛಿಸಿದನು. ಈವರೆಗೆ ಆಧ್ಯಾತ್ಮ ಚಿಂತನೆಗಳು ಶಿವಸ್ವರೂಪಿ ಭಗವಂತನಲ್ಲಿ ಐಕ್ಯವಾಗುವ ಗುರಿಯನ್ನು ಮಾತ್ರ ಹೊಂದಿದ್ದು, ವಚನಕಾರರು ಶಿವನನ್ನು ತನ್ನಲ್ಲಿ ಐಕ್ಯಗೊಳಿಸಿಕೊಳ್ಳುವ ಹೊಸ ಪರಿಕಲ್ಪನೆಯನ್ನು ಕಟ್ಟಿಕೊಟ್ಟರು.

೭. ವಚನಕಾರರು ಲೌಕಿಕವನ್ನು ಅನುಸರಿಸುತ್ತಲೇ ಆಧ್ಯಾತ್ಮಿಕ ಸಾಧನೆ ಮಾಡುವ

ಮೂಲಕ ಮುಕ್ತಿ ಹೊಂದಿದ್ದು, ಸಂಸಾರದಲ್ಲಿ ತಾನೊಂದಾಗಿ ಮಾಯೆಯನ್ನು ನೋಡಿದರೆ, ಅಲ್ಲಮ ಲೋಕದಲ್ಲಿ ಹರಡಿರುವ ಮಾಯೆಯನ್ನು ಅದರಿಂದ ದೂರ ನಿಂತು ಅವಲೋಕಿಸುತ್ತಾ ಅರ್ಥೈಸುತ್ತಾನೆ.

೮. ಅಲ್ಲಮ ಮಾಯೆಯನ್ನು ಶಿವನಿಂದ ಉದಿಸಿದ ಹಾಗೂ ಶಿವನಷ್ಟೇ ಸರ್ವಶಕ್ತ ಎಂದು ಪರಿ ಭಾವಿಸುತ್ತಾನೆ. ಯೋಗಿ-ಭೋಗಿಗಳಿಬ್ಬರನ್ನು ಸಮಾನವಾಗಿ ಮಾಯೆ ಸಮಾನವಾಗಿ ಪರೀಕ್ಷೆಗೊಡ್ಡುತ್ತದೆ. ಕೇವಲ ಭವಿಗೆ ಮಾತ್ರವಲ್ಲದೆ ಯೋಗಿಯನ್ನು ಕಾಡುವ ಶಕ್ತಿ ಮಾಯೆಗೆ ಇದೆ. ಅಷ್ಟಾಶಿತಿ ಸಹಸ್ರ ಋಷಿಗಳನ್ನು ತಪೋ ಮಾಯೆಯಲ್ಲಿ ಕೆಡಹುತ್ತದೆ ಎಂಬುದು ಸರ್ವವನ್ನು ತ್ಯಜಿಸಿ ಸನ್ಯಾಸಿಯಾಗಲು ಹೊರಟವನಿಗೆ ತಪಸ್ಸು ಮಾಯೆಯಾಗಿ ಕಾಡುತ್ತದೆ. ಇಲ್ಲಿ ಮಾಯೆ ವ್ಯಕ್ತಿನಿಷ್ಠತೆಯನ್ನು ಮೀರಿ ಭಾವನಿಷ್ಠವಾಗಿ ತೋರುತ್ತದೆ.

೯. ಅಲ್ಲಮ ಅದ್ವೈತದ ವಿದ್ಯಾಮಾಯೆಯನ್ನು ಮಾಯಾದೇವಿಯಕ್ಕ ಎಂದು ಕರೆಯುವ ಮೂಲಕ ಶುದ್ಧಮಾಯೆಯಾಗಿ ಅರ್ಥೈಸಿದ್ದಾನೆ. ಇಲ್ಲಿ ಮಾಯೆ ದೇವಿಯಾಗಿ, ಅಕ್ಕಳಾಗಿ ಸ್ತ್ರೀರೂಪದಲ್ಲಿ ಅರ್ಥೈಸಲ್ಪಟ್ಟರೂ ಸಕಾರಾತ್ಮಕ ನೆಲೆಯ ಮಾಯೆಯಾಗಿ ಮಾರ್ಗದರ್ಶಿಸುತ್ತದೆ. ಮಾಯಾದೇವಿಯಕ್ಕ ಜೀವನನ್ನು ಹಂತಹಂತವಾಗಿ ಶುದ್ಧ ಜೀವನನ್ನಾಗಿಸುತ್ತದೆ ಹಾಗೂ ಭವತ್ವದಿಂದ ಬಿಡುಗಡೆಗೊಳಿ ಸುತ್ತದೆ.

೧೦. ಅಕ್ಕ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುವಾಗ ಆತ್ಮ ಮುಖ್ಯವೇ ಹೊರತು ಸ್ತ್ರೀ-ಪುರುಷ ಎಂಬ ರೂಪಗಳಲ್ಲ ಎಂಬುದನ್ನು ಪುರುಷ ಸ್ತ್ರೀಯರ ಮುಂದೆ ಪರಸ್ಪರ ಅಭಿಮಾನದ ನೆಲೆಯಲ್ಲಿ ಮಾಯೆ ಆವರಿಸುತ್ತದೆ. ಭಕ್ತಿಯಲ್ಲಿ ವ್ಯಕ್ತಿ ಮುಖ್ಯವಲ್ಲ ಭಕ್ತಿಮಾಡುವ ಭಾವ ಮುಖ್ಯವಾಗುತ್ತದೆ ಎಂದು ಸ್ಪಷ್ಟಪಡಿಸುತ್ತಾಳೆ. ಇದನ್ನು ಅಲ್ಲಮ ಹೆಣ್ಣು, ಮಣ್ಣು, ಹೊನ್ನು ಮಾಯೆಯಲ್ಲ ಮನದಲ್ಲಿ ಮೂಡುವ ಆಸೆ ರೂಪದಲ್ಲಿ ಮಾಯೆ ಇದೆ. ವಾಸ್ತವದಲ್ಲಿ ಹೆಣ್ಣು-ಗಂಡು, ಹೊನ್ನು-ಮಣ್ಣು ಪವಿತ್ರವಾದವುಗಳು ಮನುಜ ಅವುಗಳನ್ನು ಹೀನಾಯವಾಗಿ ಭಾವಿಸಿ ಮನಲೀನವೆಂದು ತಿಳಿದು ಅಪವಿತ್ರ ನೆಲೆಯಲ್ಲಿ ಗ್ರಹಿಸುತ್ತಾನೆ. ಎಂಬಲ್ಲಿ ಮಾಯೆ ಎಂಬುದು ಕೇವಲ ವ್ಯಕ್ತಿಯ ಮಾನಸಿಕ-ಭಾವನಾತ್ಮಕ ಸ್ಥಿತಿಯಾಗಿದೆ ಹೊರತು ವ್ಯಕ್ತಿ ನಿಷ್ಠ ಹಾಗೂ ವಸ್ತುನಿಷ್ಠತೆಯನ್ನು ಮೀರಿದುದಾಗಿದೆ.

೧೧. ಅಲ್ಲಮ ಮತ್ತು ಅಕ್ಕನ ಅಭಿಪ್ರಾಯದಲ್ಲಿ ಮಾಯೆ ಎಂಬುದು ಮನುಜನ ಮಾನಸಿಕ ದೌರ್ಬಲ್ಯ ವಾಗಿದೆ. ಆಧ್ಯಾತ್ಮಿಕ ಸಾಧನೆ ಕೈಗೊಳ್ಳುವ ವ್ಯಕ್ತಿ ಲೌಕಿಕವನ್ನು ತ್ಯಜಿಸಬೇಕಿಲ್ಲ. ಲೌಕಿಕದಲ್ಲಿದ್ದುಕೊಂಡು ಅದರ ಆಕರ್ಷಣೆಯಿಂದ ಬಿಡಿಸಿಕೊಳ್ಳುವಂತಹ ಸದೃಢ ಮನಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳುವ ಅಗತ್ಯವನ್ನು ಸೂಚಿಸುತ್ತದೆ. ಹಾಗೆ ಬಿಡಿಸಿಕೊಳ್ಳಲಾಗದ ದುರ್ಬಲತೆಯೇ ಮಾಯೆಯಾಗಿದೆ ಎಂದಿದ್ದಾರೆ.

೧೨. ಭವಿಯಾದವನು ನಿಜ ಶರಣನಾಗಲು ಹಲವು ಹಂತದ ಸಾಧನೆಗಳನ್ನು

ಕೈಗೊಳ್ಳುವಲ್ಲಿ ಗುರುವಿನ ಮಾರ್ಗದರ್ಶನದೊಂದಿಗೆ ಸಾಗುತ್ತಾ. ಅಂತರಂಗ-ಬಹಿರಂಗವನ್ನು ಶೋಧಿಸಿ ಶುದ್ಧಗೊಳಿಸಬೇಕು. ಹೀಗೆ ಸಾಧನೆ ಹಾದಿಯಲ್ಲಿ ಸಾಗುತ್ತಿರುವ ಶರಣನಲ್ಲಿಯ ಶರಣತ್ವದ ನಿರ್ಮಲತೆಯನ್ನು ಪರೀಕ್ಷಿಸುವ ಸಾಧನವೇ ಮಾಯೆ ಆಗಿದೆ. ಶರಣನಲ್ಲಿಯ ಭಕ್ತಿಯನ್ನು ಒರೆಗೆ ಹಚ್ಚುವ ಮೂಲಕ ಶುದ್ಧಗೊಳಿಸುತ್ತದೆ. ಮಾಯೆಯೆಂಬ ಶೋಧನೆಗೆ ಒಳಗಾದ ವ್ಯಕ್ತಿ ನಿರ್ಮಲ, ನಿಶ್ಚಲ, ನಿಶ್ಚಿಂತ ಮನಸ್ಸುಳ್ಳ ಸಾಧಕನಾಗಲು ಸಾಧ್ಯವೆಂದು ವಚನಗಳಲ್ಲಿ ನಿರೂಪಿಸಿದ್ದಾರೆ.

೧೩. ಅಲ್ಲಮ ಮತ್ತು ಅಕ್ಕ ಮಾಯೆಯನ್ನು ನಿರ್ವಚಿಸುವಾಗ ಅಲ್ಲಮ ತಾನು ಲೌಕಿಕದ ಸೆಳೆತಕ್ಕೆ ಸಿಕ್ಕರೂ ಅದರಿಂದ ಮುಕ್ತನಾದೆ ಮತ್ತೆ ಅದರತ್ತ ಮುಖ ಮಾಡಲು ಅಸಾಧ್ಯವಾದ ಸ್ಥಿತಿ ತಲುಪಿದ್ದೇನೆ ಎಂಬ ದೃಢ ವಿಶ್ವಾಸದಲ್ಲಿ 'ಮಾಯೆಯ ತಲೆಯ ಮೆಟ್ಟಿ ಹೋದೆನು' ಎನ್ನುತ್ತಾನೆ. ಅಕ್ಕ ತನ್ನನ್ನು ಲೌಕಿಕ ಸೆಳೆಯಲೆತ್ನಿಸುತ್ತಿದೆ, ಆದರೆ ಚೆನ್ನಮಲ್ಲಿಕಾರ್ಜುನನ ಬೆಂಬಲದಲ್ಲಿ ತಾನು ಮಾಯಾ ಮುಕ್ತಳಾದೆ 'ನೀನಿಕ್ಕಿದ ಮಾಯೆಯನು ಮೆಟ್ಟಿದೆನಾದಡೆ ನಿಮ್ಮಾಣೆ'ಎಂದು ದೃಢವಾಗಿ ಹೇಳುತ್ತಾಳೆ.

ಪ್ರಸ್ತುತ ಅಲ್ಲಮ ಮತ್ತು ಅಕ್ಕನ ವಚನಗಳಲ್ಲಿ ಮಾಯೆ ಎಂಬ ಅಂಶವನ್ನು ಅಧ್ಯಯನ ಮಾಡಿದ ವಿಧಾನದಲ್ಲಿಯೇ ಇತರ ವಚನಕಾರರಲ್ಲಿಯೂ ಸೂಕ್ಷ್ಮ ಸ್ತರದಲ್ಲಿ ಅನ್ವಯಿಸಿ ನೋಡಬಹುದಾಗಿದೆ. ಧಾರ್ಮಿಕ ಪರಂಪರೆಯ ಭಿನ್ನ ಮುಖಗಳಾದ ಕೀರ್ತನ ಸಾಹಿತ್ಯ ತತ್ವಪದ ಸಾಹಿತ್ಯದಲ್ಲಿಯೂ ಮಾಯೆಯನ್ನು ಅನ್ವಯಿಸಿ ಅಧ್ಯಯನ ಮಾಡಬಹುದಾಗಿದೆ. ಅಲ್ಲದೇ ಅಧುನಿಕ ಕನ್ನಡ ಸಾಹಿತ್ಯ ಸಂದರ್ಭಕ್ಕೂ ಹೋಲಿಸಿ ನೋಡುವಲ್ಲಿ ಪರಂಪರೆ ಮತ್ತು ಆಧುನಿಕತೆಯ ನಡುವಿನ ವೈವಿಧ್ಯತೆಯನ್ನು ಅರ್ಥೈಸಲು ಸಾಧ್ಯತೆಗಳನ್ನು ತೆರೆದಿಡುತ್ತದೆ.

ಆಕರ ಗ್ರಂಥಗಳು

ಆಕರ ಗ್ರಂಥಗಳು

೧. ಅನಂತಮೂರ್ತಿ ಯು.ಆರ್. (ಪ್ರ.ಸಂ),೨೦೦೩, ವೀರಶೈವ ಧರ್ಮದರ್ಶನ, ಸಂಪುಟ-೨ ಮೈಸೂರು, ಜಗದ್ಗುರು ಶ್ರಿ ಶಿವರಾತ್ರೀಶ್ವರ ಗ್ರಂಥಮಾಲೆ,

೨. ಅನ್ನದಾನೀಶ್ವರ ಮಹಾಸ್ವಾಮಿಗಳು (ಸಂ) ೧೯೯೧, ಅಲ್ಲಮಪ್ರಭುದೇವರ ನೂರೆಂಟು ವಚನಗಳು, ಮುಂಡರಗಿ,ಶ್ರೀ ಅನ್ನದಾನೀಶ್ವರ ಮಠ

೩. ಅನ್ನದಾನೀಶ್ವರ ಮಹಾಸ್ವಾಮಿಗಳು, ೧೯೯೫, ವೀರಶೈವ ಧರ್ಮ ಒಂದು ಅಧ್ಯಯನ, ಹುಬ್ಬಳ್ಳಿ, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರಮಠ

೪. ಅಮರೇಶ ನುಗಡೋಣಿ (ಸಂ), ೨೦೦೨, ಶೂನ್ಯ ಸಂಪಾದನೆಗಳು: ಸಾಂಸ್ಕೃತಿಕ ಮುಖಾಮುಖಿ ಹಂಪಿ, ಕನ್ನಡ ವಿಶ್ವವಿದ್ಯಾಲಯ.

೫. ಅಮರೇಶ ನುಗಡೋಣಿ (ಸಂ), ೨೦೧೦, ಅಲ್ಲಮಪ್ರಭು ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಹಂಪಿ, ಕನ್ನಡ ವಿಶ್ವವಿದ್ಯಾಲಯ,

೬. ಇಮ್ಮಡಿ ಶಿವಬಸವ ಸ್ವಾಮಿಗಳು (ಸಂ), ೨೦೧೪, ಅಲ್ಲಮಪ್ರಭುದೇವರ ಟೀಕಿನ ವಚನಗಳು, ಮೈಸೂರು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ

೭. ಕಮಲಮ್ಮ.ವಿ, ೧೯೯೪, ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು

೮. ಕಲಬುರ್ಗಿ ಎಂ.ಎಂ, ೧೯೯೩, ಸಂಕೀರ್ಣವಚನ ಸಂಪುಟ-೧, ಬೆಂಗಳೂರು, ಕನ್ನಡ ಸಾಂಸ್ಕೃತಿಕ ನಿರ್ದೇಶನಾಲಯ

೯. ಕಲಬುರ್ಗಿ ಎಂ.ಎಂ, ೨೦೦೧, ಸಂಕೀರ್ಣವಚನ ಸಂಪುಟ-೧, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ

೧೦. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು (ಸಂ), ೨೦೧೨, ವೀರಶೈವ ಲಿಂಗಾಯತ, ಬಾಳೆಹೊನ್ನೂರು, ಶ್ರೀಮದ್ವೀರೇಶೈವ ಸದ್ಬೋಧನಾ ಸಂಸ್ಥೆ,

೧೧. ಕೊಪ್ಪ ಎಸ್.ಕೆ. (ಸಂ) ೨೦೦೪, ಅಲ್ಲಮಪ್ರಭು ಚಿಂತನ, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ

೧೨. ಗೀತಾಚಾರ್ಯ.ನಾ, ೨೦೦೯, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ, ಬೆಂಗಳೂರು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸಿ.ಸಂಶೋಧನಾ ಕೇಂದ್ರ

೧೩. ಗುಂಜಾಳ ಎಸ್.ಆರ್.೨೦೦೭, ಫ.ಗು ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೧, ವಿಜಾಪುರ, ಫ.ಗು ಹಳಕಟ್ಟಿ ಸಂಶೋಧನಾ ಕೇಂದ್ರ

೧೪. ಗುಂಜೆಟ್ಟಿ ಬಿ.ವಿ.,೨೦೦೧, ವಚನ ಸಾಹಿತ್ಯ ದರ್ಶನ, ಲಕ್ಷ್ಮೇಶ್ವರ, ಸೋಮೇಶ್ವರ ಪ್ರಕಾಶನ,

೧೫. ಗುಡಿ ಆರ್.ಜಿ, ೧೯೯೪, ದಾಸ ಸಾಹಿತ್ಯ: ಒಂದು ಸೈದ್ಧಾಂತಿಕ ಅಧ್ಯಯನ, ಅಥಣಿ ಶ್ರೀನಿಧಿ ಪ್ರಕಾಶನ,

೧೬. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ೨೦೦೦, ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ ಸಂಪುಟ-೧, ಬೆಂಗಳೂರು, ಶ್ರೀ ಜಗದ್ಗುರು ಪಂಚಾಚಾರ್ಯ ಮಾನವಧರ್ಮ ಸಂಸ್ಥೆ

೧೭. ಚಂದ್ರಶೇಖರ ಪಿ.ಆರ್.೨೦೦೪, ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಬೆಂಗಳೂರು ಸಿ.ವ್ಹಿ.ಜಿ. ಪಬ್ಲಿಕೇಶನ್

೧೮. ಚಿದಾನಂದಮೂರ್ತಿ ಎಂ,೧೯೬೨, ಶೂನ್ಯಸಂಪಾದನೆಯನ್ನು ಕುರಿತು, ಮೈಸೂರು, ಮೋಹನ ಪ್ರಕಾಶನ

೧೯. ಚಿದಾನಂದಮೂರ್ತಿ ಎಂ,೧೯೮೬, ಲಿಂಗಾಯತ ಅಧ್ಯಯನಗಳು, ಮೈಸೂರು, ವಾಗ್ದೇವಿ ಪ್ರಕಾಶನ

೨೦. ಚಿದಾನಂದಮೂರ್ತಿ, ಎಂ. ೨೦೦೨, ವೀರಶೈವ ಧರ್ಮ: ಭಾರತೀಯ ಸಾಂಸ್ಕೃತಿ, ಬೆಂಗಳೂರು, ಮಿಂಚು ಪ್ರಕಾಶನ,

೨೧. ಚಿದಾನಂದಮೂರ್ತಿ, ಎಂ. ೨೦೦೩, ಬಸವಣ್ಣನವರು, ಬೆಂಗಳೂರು, ಸಪ್ನ ಬುಕ್‌ಹೌಸ್

೨೨. ಚಿದಾನಂದಮೂರ್ತಿ ಎಂ, ೨೦೦೯, ವಚನ ಸಾಹಿತ್ಯ, ಬೆಂಗಳೂರು, ಸಪ್ನ ಬುಕ್‌ಹೌಸ್

೨೩. ಜ.ಚ.ನಿ, ೧೯೪೯, ಸಮ್ಯಜ್ಞಾನಿ ಚನವನಬಸವಣ್ಣ ಬಾಗಲಕೋಟ ಶಿವಶಂಕರಪ್ಪ ಶಿವಲಿಂಗಪ್ಪ ನಾಲತವಾಡ (ಚಿತ್ತರಗಿ)

೨೪. ಜ.ಚ.ನಿ. ೧೯೭೮, ಸಂಪಾದನೆಯ ಸೊಂಪು, ಬಾಗಲಕೋಟೆ, ಶಿವಾನುಭವ ಸಂಘ,

೨೫. ಜ.ಚ.ನಿ. (ಸಂ) ವಿಭೂತಿ, ಚಿಕ್ಕಮಗಳೂರು, ಶಿವಾದ್ವೈತ, ತತ್ವ ಪ್ರಚಾರಕ ಸಮಿತಿ,

೨೬. ಜ.ಚ.ನಿ.೨೦೦೦, ವೀರಶೈವ ಧರ್ಮ- ತತ್ವ-ಸಿದ್ಧಾಂಥ, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ

೨೭. ಜಯದೇವಪ್ಪ ಜೈನಕೇರಿ, ೨೦೦೩, ಸಾಹಿತ್ಯ ಸೌರಭ, ಶಿವಮೊಗ್ಗ, ಶಾಂತಲಾ ಪ್ರಕಾಶನ

೨೮. ತಿಪ್ಪೇರುದ್ರಸ್ವಾಮಿ ಎಚ್ ೧೯೯೭, ವಚನಗಳಲ್ಲಿ ವೀರಶೈವಧರ್ಮ, ಮೈಸೂರು, ಡಿ.ವಿ.ಕೆ.ಮೂರ್ತಿ

೨೯. ತಿಪ್ಪೇರುದ್ರಸ್ವಾಮಿ.ಎಚ್., ೧೯೭೩, ಶೂನ್ಯ ಸಂಪಾದನೆ ವಿವರಣಾತ್ಮಕ ಪರಿಚಯ

ಮೈಸೂರು ಡಿ.ವಿ.ಕೆ. ಮೂರ್ತಿ

೩೦. ತಿಪ್ಪೇರುದ್ರಸ್ವಾಮಿ.ಎಚ್., ೧೯೮೬, ಕದಳಿಕರ್ಪೂರ,ಕ ಮೈಸೂರು, ಡಿ.ವಿ.ಕೆ.ಮೂರ್ತಿ

೩೧. ತಿಪ್ಪೇರುದ್ರಸ್ವಾಮಿ.ಎಚ್., ೨೦೦೩, ಅಲ್ಲಮಪ್ರಭುದೇವ, ಧಾರವಾಡ, ಬಸವೇಶ್ವರ ಪೀಠ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೩೨. ದಕ್ಷಿಣಾಮೂರ್ತಿ ಶಾಸ್ತ್ರಿಗಳು ಟಿ.ಎ, ೧೯೨೮, ಸನಾತನ ವೀರಶೈವ ಬ್ರಾಹ್ಮಣ ಧರ್ಮ, ಬೆಂಗಳೂರು, ದಕ್ಷಿಣಾಮೂರ್ತಿಶಾಸ್ತ್ರಿಗಳು

೩೩. ದೇವಿರಪ್ಪ ಎಚ್, ೧೯೮೬, ಜೇಡರ ದಾಸಿಮಯ್ಯನ ವಚನಗಳು, ಧಾರವಾಡ, ಸಮಾಜ ಪುಸ್ತಕಾಲಯ

೩೪. ದೇವಿರಪ್ಪ ಎಚ್., ೧೯೮೪, ಸಂಶೋಧನಾ ಸಂಪುಟ ಬೆಂಗಳೂರು, ಶಿವಕುಮಾರ ಪ್ರಕಾಶನ

೩೫. ನಂದೀಮಠ ಎಸ್.ಸಿ(ಮೂಲ),ಪ್ರಮೀಳಾ ಹಿರೇಮಠ(ಅನು) . ೧೯೯೬, ವೀರಶೈವ ಧರ್ಮ ಕೈಪಿಡಿ, ಧಾರವಾಡ, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ,

೩೬. ನರಸಿಂಹಾಚಾರ್, ಡಿ.ಎಲ್. ೧೯೯೮, ವಡ್ಡಾರಾಧನೆ, ಬೆಂಗಳೂರು, ಕನ್ನಡ ಮತ್ತು ಸಾಂಸ್ಕೃತಿಕ ನಿರ್ದೇಶನಾಲಯ

೩೭ ನಾಗಭೂಷಣಸ್ವಾಮಿ ಓ.ಎಲ್., ೨೦೧೨, ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಧಾರವಾಡ, ಮನೋಹರ ಗ್ರಂಥಮಾಲೆ.

೩೮. ನಾಗರಾಜ ಡಿ.ಆರ್, ೨೦೧೦ ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಹೆಗ್ಗೋಡು, ಅಕ್ಷರ ಪ್ರಕಾಶನ

೩೯. ನಾಗರಾಜ ಡಿ.ಆರ್, ೧೯೯೩, ನಾಗಾರ್ಜುನ, ಹೆಗ್ಗೋಡು, ಅಕ್ಷರ ಪ್ರಕಾಶನ

೪೦. ನಾರಾಯಣ ಪಿ.ವ್ಹಿ, ೧೯೯೪, ವಚನ ಪರಿಸರ, ಬೆಂಗಳೂರು, ಲಿಂಗಾಳಿ ಪ್ರಕಾಶನ ಜಯನಗರ

೪೧. ನಿಸಾರ್ ಅಹ್ಮದ್ ಕೆ.ಎಸ್. (ಸಂ) ೧೯೮೩, ದಶವಾರ್ಷಿಕ ವಿಮರ್ಶೆಗಳು, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ

೪೨. ಪರಮೇಶ್ವರಭಟ್ಎಸ್.ವ್ಹಿ., ೧೯೬೮, ಅಕ್ಕಮಹಾದೇವಿ, ಮೈಸೂರು, ಮೈಸೂರು ವಿಶ್ವವಿದ್ಯಾಲಯ.

೪೩. ಪ್ರಭಾಕರ ಜೋಶಿ, ಎಂ., ಎಂ.ಎ.ಹೆಗಡೆ, ಸಿದ್ಧಾಪೂರ, ೧೯೯೭, ಭಾರತೀಯ ತತ್ವಶಾಸ್ತ್ರ ಪರಿಚಯ, ಮಂಗಳೂರು , ದಿಗಂತ ಸಾಹಿತ್ಯ ಪ್ರಕಾಶನ

೪೪. ಪ್ರಭಾಕರಶಾಸ್ತ್ರಿ ಎಚ್. ೨೦೦೮, ಭಾರತೀಯ ತತ್ವಶಾಸ್ತ್ರ ಪ್ರವೇಶಿಕೆ, ಹೆಗ್ಗೋಡು. ಅಕ್ಷರ ಪ್ರಕಾಶನ

೪೫. ಪ್ರಭುಶಂಕರ ೨೦೦೩,ವಿಶ್ವಧರ್ಮ ದರ್ಶನ,ಮೈಸೂರು,ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
೪೬. ಪಾಟೀಲ ಕ.ಚ, ೨೦೦೬, ಸಾಹಿತ್ಯ ಸಿರಿ, ಹಿರೇಕೆರೂರ, ತರಳಬಾಳು ಹುಣ್ಣಿಮೆ ಮಹೋತ್ಸವ ಸ್ವಾಗತ ಸಮಿತಿ
೪೭. ಪಾಟೀಲ ಕೆ.ಎಸ್. (ಸಂ) ೧೯೭೭ ಮಾಯಾವಿಡಂಬನೆ, ಧಾರವಾಡ, ಕರ್ನಾಟಕ ಸಂಘ
೪೮. ಬಲದೇವ ಉಪಾಧ್ಯಾಯ, ೧೯೬೨, ಶ್ರೀಶಂಕರಾಚಾರ್ಯರು, ಮೈಸೂರು, ಕಾವ್ಯಾಲಯ ಪ್ರಕಾಶನ.
೪೯. ಬಸವರಾಜ ಕಲ್ಗುಡಿ, ೧೯೯೭, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು
೫೦. ಬಸವರಾಜ ಎಲ್. (ಸಂ), ೧೯೬೯, ಶಿವಗಣ ಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯ ಸಂಪಾದನೆ, ಚಿತ್ರದುರ್ಗ, ಶ್ರೀ ಬ್ರಹನ್ಮಠ ಸಂಸ್ಥಾನ
೫೧. ಬಸವರಾಜ ಎಲ್. (ಸಂ), ೧೯೭೭, ಅಕ್ಕನ ವಚನಗಳು, ಮೈಸೂರು, ಗೀತಾಬುಕ್‌ಹೌಸ್
೫೨. ಬಸವರಾಜ ಎಲ್.(ಸಂ) ೧೯೮೬ ಅಲ್ಲಮನ ವಚನ ಚಂದ್ರಿಕೆ, ಹುಬ್ಬಳ್ಳಿ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವಿರಮಠ
೫೩. ಬಸವರಾಜ ಎಲ್.(ಸಂ) , ೨೦೦೧, ಅಲ್ಲಮನ ವಚನ ಚಂದ್ರಿಕೆ, ಬಳ್ಳಾರಿ, ಲೋಹಿಯಾ ಪ್ರಕಾಶನ
೫೪. ಬಸವರಾಜ ಎಲ್. (ಸಂ), ೨೦೧೧, ಅಲ್ಲಮನ ವಚನಗಳು, ಮೈಸೂರು, ಗೀತಾಬುಕ್‌ಹೌಸ್
೫೫. ಬಸವರಾಜ ಪುರಾಣಿಕ, ೧೯೯೯, ಅನುಪಮಚರಿತ ಅಲ್ಲಮಪ್ರಭುದೇವ, ಬಾಗಲಕೋಟ, ಅನಿಮಿಷ ಪ್ರಕಾಶನ
೫೬. ಬಸವರಾಜ ಸಬರದ (ಪ್ರ.ಸಂ) ೨೦೦೫, ವಿಮರ್ಶಾ ಲೇಖನಗಳು, ಗುಲಬರ್ಗಾ, ಗುಲ್ಬರ್ಗಾ ವಿಶ್ವವಿದ್ಯಾಲಯ.
೫೭. ಬಸವನಾಳ ಶಿವಲಿಂಗಪ್ಪನವರು, ೧೯೯೦, ಬಸವಣ್ಣನವರ ಷಟಸ್ಥಲದ ವಚನಗಳೂ, ಧಾರವಾಡ ಸಾಹಿತ್ಯ ಸಮಿತಿ, ಇಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ.
೫೮. ಬಸವನಾಳ ಶಿ.ಶಿ. ೧೯೯೩, ವೀರಶೈವದ ಹುಟ್ಟು ಬೆಳವಣಿಗೆ, ಧಾರವಾಡ ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ
೫೯. ಭಾಗ್ಯಶ್ರೀ ಪಿ., ೨೦೧೫, ಅಲ್ಲಮಪ್ರಭು, ಬೆಂಗಳೂರು, ವಸಂತ ಪ್ರಕಾಶನ,

೬೦. ಭೂಸನೂರಮಠ, ಸಂ.ಶಿ ೧೯೬೫, ವಚನ ಸಾಹಿತ್ಯ ಸಂಗ್ರಹ, ಮೈಸೂರು, ಮೈಸೂರು ಸರಕಾರ

೬೧. ಭೂಸನೂರಮಠ ಸಂ.ಶಿ ೧೯೯೯, ಗೂಳೂರು ಸಿದ್ಧವೀರಣ್ಣೊಡೆಯ ಸಂಗಹಿಸಿದ ಪ್ರಭುದೇವರ ಶೂನ್ಯಸಂಪಾದನೆ, ಗುಲಬರ್ಗಾ, ಮಠಾಧಿಪತಿಗಳು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನಮಠ ಹಾಗೂ ಕಲ್ಲುಮಠ ಮುಂಡರಗಿ

೬೨. ಭೂಸನೂರಮಠ, ಸಂ.ಶಿ.೨೦೦೭, ಶೂನ್ಯ ಸಂಪಾದನೆಯ ಪರಾಮರ್ಶೆ, ಬೆಂಗಳೂರು, ಅಭಿನವ ಪ್ರಕಾಶನ

೬೩. ಭಾಷಾಂತರ ಯೋಜನಾ ಸಮಿತಿ, ೧೯೭೦, ಕರ್ನಾಟಕದ ಪರಂಪರೆ ಸಂಪುಟ–೧, ಬೆಂಗಳೂರು ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರಕಾರ.

೬೪. ಭಾಷಾಂತರ ಯೋಜನಾ ಸಮಿತಿ, ೧೯೭೦, ಕರ್ನಾಟಕದ ಪರಂಪರೆ ಸಂಪುಟ–೨, ಬೆಂಗಳೂರು ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರಕಾರ.

೬೫. ಮರುಳಯ್ಯ ಸಾ.ಶಿ.೨೦೦೧, ವಚನ ಚಿಂತನ, ಬೆಂಗಳೂರು, ಪ್ರಭುದೀಪ ಪ್ರಕಾಶನ

೬೬. ಮರುಳಸಿದ್ಧಪ್ಪ ಕೆ. ೨೦೧೨, ವಚನ ಕಮ್ಮಟ, ಬೆಂಗಳೂರು, ಸಪ್ನ ಬುಕ್‌ಹೌಸ್,

೬೭. ಮಲ್ಲಾಪುರ ಬಿ.ವ್ಹಿ.(ಸಂ) ೨೦೦೧, ಅಲ್ಲಮಪ್ರಭುದೇವರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ

೬೮. ಮಲ್ಲಪ್ಪ ಟಿ.ಎನ್,ಶೈವದ ಉಗಮ ಮತ್ತು ಪ್ರಗತಿ, ಬೆಂಗಳೂರು, ರಾವಬಹದ್ದೂರ್ ಧರ್ಮ ಪ್ರವರ್ತಕ ಗುಬ್ಬಿ ತೋಟಪ್ಪನವರ ಧರ್ಮ ಸಂಸ್ಥೆ

೬೯. ಮಾರೀಹಾಳ ವ್ಹಿ.ಜಿ.೨೦೦೮ ವಚನಗಳಲ್ಲಿ ದಾರ್ಶನಿಕ ದೃಷ್ಟಿ, ಮೈಸೂರು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.

೭೦. ಮಹಾದೇವಪ್ಪ ಎನ್.ಜಿ. ೨೦೦೪, ವಚನಗಳಲ್ಲಿ ತತ್ವ ಮೀಮಾಂಸೆ, ಬೆಳಗಾಂವಿ, ಲಿಂಗಾಯತ ಅಧ್ಯಯನ ಕೇಂದ್ರ ಶ್ರೀ ನಾಗನೂರು ರುದ್ರಾಕ್ಷಿಮಠ.

೭೧. ರಂಗಸ್ವಾಮಿ ಎಂ. (ಸಂ), ೨೦೧೨, ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಲ್ಲಮಪ್ರಭು, ಮೈಸೂರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.

೭೨. ರಮಾಕುಮಾರಿ ಬಾ.ಹ, ೧೯೯೪, ಅಕ್ಕಮಹಾದೇವಿ, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ.

೭೩. ರಹಮತ್ ತರೀಕೆರೆ, ೨೦೦೫, ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

೭೪. ಬಲದೇವರ ಉಪಾಧ್ಯಾಯ (ಮೂಲ), ರಾಮಚಂದ್ರಶಾಸ್ತ್ರಿ ಎಸ್ (ಅನು),

೧೯೯೪, ಶ್ರೀ ಶಂಕರಾಚಾರ್ಯರು, ಮೈಸೂರು, ಕಾವ್ಯಾಲಯ ಪ್ರಕಾಶನ.
೭೫. ರಾಮಲಿಂಗಪ್ಪ ಟಿ. ಬೆಗೂರು ೨೦೧೦, ಅಲ್ಲಮಪ್ರಭು ಕುರಿತ ಅನುಸಂಧಾನಗಳು (ಆಧುನಿಕ ಪೂರ್ವ), ಹಂಪಿ, ಕನ್ನಡ ವಿಶ್ವವಿದ್ಯಾಲಯ.
೭೬. ಲಲಿತಾಂಬ ವೃಷಭೇಂದ್ರಸ್ವಾಮಿ, ೨೦೦೩,ವಚನಾಂಜಲಿ, ಧಾರವಾಡ, ಶಿವಪ್ರಸಾದ ಪ್ರಕಾಶನ
೭೭. ಲಠ್ಠೆ ಎಂ.ಎಸ್, ೧೯೭೫ ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ
೭೮. ಲಠ್ಠೆ ಎಂ.ಎಸ್, ಎಸ್.ಜಿ.ಹುಬ್ಬಳ್ಳಿ, ೧೯೭೩, ಶರಣವಿಚಾರ ವಾಹಿನಿ, ಧಾರವಾಡ, ಕ್ವಾಲಿಟಿ ಪಬ್ಲಿಷರ್ಸ ಮಾರ್ಕೆಟ್
೭೯. ಲಕ್ಷ್ಮೀಪತಿ ಕೋಲಾರ, ೨೦೦೮, ಅಲ್ಲಮನ ಬಯಲಾಟ, ಬೆಂಗಳೂರು, ರಂಗ ನಿರಂತರ ಹುಳಿಮಾವು.
೮೦. ಬಿ.ಎಂ.ಶ್ರೀ.(ಸಂ), ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ೧೯೭೪, ಹಿಂದೂ ದರ್ಶನ ಸಾರ, ಮೈಸೂರು, ಮೈಸೂರು ವಿಶ್ವವಿದ್ಯಾಲಯ,
೮೧. ಲಿಂಗಣ್ಣಯ್ಯ ಓ.ಎನ್. ೧೯೪೫, ಆತ್ಮಜ್ಞಾನಿ ಅಲ್ಲಮಪ್ರಭು, ಬೆಂಗಳೂರು, ಎಸ್.ಎಸ್. ಎನ್. ಬುಕ್ ಡಿಪೋ.
೮೨. ಲಿಂಗಣ್ಣಯ್ಯ ಓ.ಎನ್. ೧೯೪೭, ವೈರಾಗ್ಯನಿಧಿ ಅಕ್ಕಮಹಾದೇವಿ, ಬೆಂಗಳೂರು, ಎಸ್.ಎಸ್. ಎನ್. ಬುಕ್ ಡಿಪೋ
೮೩. ವಿಜಯಕುಮಾರ ಕಟಗಿಹಳ್ಳಿಮಠ, ೨೦೦೮, ಆದಿ ಅನಾದಿಯಿಲ್ಲದಂದು, ಚಿತ್ರದುರ್ಗ, ಅಕ್ಷಯ ಪ್ರಕಾಶನ.
೮೪. ವಿಜಯಕುಮಾರ ಮಹಾನುಭಾವಿಗಳು, ೨೦೦೪, ಅಕ್ಕಮಹಾದೇವಿಯವರ ವಚನ ವಾಖ್ಯಾನ, ಬೆಂಗಳೂರು, ಪ್ರಭು ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ.
೮೫. ವಿಜಯಕುಮಾರ ಮಹಾನುಭಾವಿಗಳು, ೨೦೦೪, ಪ್ರಭುದೇವರ ವಚನ ವಾಖ್ಯಾನ, ಬೆಂಗಳೂರು, ಪ್ರಭು ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ.
೮೬. ವಿಜಯಕುಮಾರ ಹ.ನಂ. ೧೯೮೨, ಅಲ್ಲಮನ ವಚನಗಳ ಪ್ರಕೋಶ, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.
೮೭. ವಿಜಯಾದೇವಿ, ೧೯೯೩, ಪ್ರಭುದೇವರ ಅನುಭಾವ, ಸಿದ್ಧಾಪುರ, ಪ್ರಭುದೇವ ಗ್ರಂಥಮಾಲೆ, ಪ್ರಭುದೇವ ಧರ್ಮಪೀಠ.
೮೮. ವಿದ್ಯಾಶಂಕರ ಎಸ್. (ಸಂ) ೧೯೯೩, ಸಂಕೀರ್ಣ ವಚನ ಸಂಪುಟ–೨ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೮೯. ವಿದ್ಯಾಶಂಕರ ಎಸ್. (ಸಂ), ೧೯೯೩, ಸಿದ್ಧರಾಮೇಶ್ವರ ವಚನ ಸಂಪುಟ, ಬೆಂಗಳೂರು, ಕನ್ನಡ ಮತ್ತು ಸಾಂಸ್ಕೃತಿ ನಿರ್ದೇಶನಾಲಯ.
೯೦. ವಿನೋದಾಬಾಯಿ ಎಸ್, ೧೯೬೯, ಅಂಡಾಳ್– ಮಹಾದೇವಿ– ಮೀರಾ ಜೀವನ ಕೃತಿಗಳ ತುಲನಾತ್ಮಕ ಸಮೀಕ್ಷೆ, ಮೈಸೂರು ಉಷಾ ಪ್ರೆಸ್
೯೧. ವೀಣಾಚಾರ್ಯ ಬಿ.೧೯೯೨, ಅಕ್ಕಮಹಾದೇವಿ ವಚನಗಳಲ್ಲಿ ಸ್ತ್ರೀ ಸಂವೇದನೆ , ಮಂಗಳೂರು, ಮಂಗಳೂರು ವಿಶ್ವವಿದ್ಯಾಲಯ
೯೨. ವೀಣಾ ಬನ್ನಂಜೆ, ೨೦೦೭, ಅಕ್ಕಮಹಾದೇವಿಯ ದ್ವೈತ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.
೯೩. ವೀರಣ್ಣ ರಾಜೂರ (ಸಂ), ೧೯೯೩, ಶಿವಶರಣೆಯರ ವಚನ ಸಂಪುಟ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
೯೪. ವೀರಣ್ಣ ರಾಜೂರ (ಸಂ), ೨೦೦೩, ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು, ಧಾರವಾಡ, ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ
೯೫. ವೀರಭದ್ರಯ್ಯನವರ ಜಿ.ವಿ.೨೦೧೧, ವಚನ ವೈಭವ, ಹುಬ್ಬಳ್ಳಿ ಆದರ್ಶ ಪ್ರಕಾಶನ
೯೬. ವೃಷಭೇಂದ್ರಸ್ವಾಮಿ ಎಸ್.ಎಂ., ೧೯೭೮, ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ, ಧಾರವಾಡ, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ಮಂಡಳಿ, ಕರ್ನಾಟಕ ವಿಶ್ವವಿಯಾಲಯ
೯೭. ವೃಷಭೇಂದ್ರಸ್ವಾಮಿ, ೧೯೮೫, ಮಾತೆಂಬುದು ಜ್ಯೋತಿರ್ಲಿಂಗ, ಧಾರವಾಡ, ಸಮಾಜ ಪುಸ್ತಕಾಲಯ
೯೮. ಶಂಕರನಾರಾಯಣರಾವ್ ಎನ್.ಪಿ. (ಅನು),ಡಿ.ಎಸ್.ಶರ್ಮಾ, ೧೯೮೬, ಹಿಂದೂಧರ್ಮಸಾರ, ಬೆಂಗಳೂರು, ಭಾರತೀಯ ವಿದ್ಯಾಭವನ.
೯೯. ಶಂಕರನಾರಾಯಣ ಭಟ್ ಎದುರ್ಕುಳ ಕೆ, ೧೯೯೫, ಹಿಂದೂ ಧರ್ಮದ ಪರಿಚಯ, ಕೊಡಗು, ಶ್ರೀ ರಾಮಕೃಷ್ಣ ಪ್ರಕಾಶನ.
೧೦೦. ಶಂಭುಲಿಂಗ ಶಿವಾಚಾರ್ಯರು, ೧೯೩೮, ಆಗಮ ಪರಿಜ್ಞಾನ, ವಿಜಾಪುರ, ಶ್ರೀಶಂಭುಲಿಂಗ ಶಿವಾಚಾರ್ಯರು ಬಹ್ಮನ್ಮಠ.
೧೦೧. ಶಾಂತಾ ಇಮ್ರಾಪುರ, ೨೦೦೧, ಅಕ್ಕಮಹಾದೇವಿ, ಹುಬ್ಬಳ್ಳಿ , ಶ್ರಿ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವಿರಮಠ
೧೦೨. ಶಾಮರಾಯ ತ.ಸು, ೨೦೧೧, ಹರಿಹರನ ಉಡುತಡಿಯ ಅಕ್ಕಮಹಾದೇವಿಯ ರಗಳೆ, ಮೈಸೂರು, ಪ್ರತಿಭಾ ಪ್ರಕಾಶನ
೧೦೩. ಶಿವಕುಮಾರ ಸ್ವಾಮಿ (ಸಂ) ೧೯೯೯, ಪಾರಮೇಶ್ವರಾಗಮ, ಬೆಂಗಳೂರು,

ವೀರಶೈವ ಅನುಸಂಧಾನ ಸಂಸ್ಥೆ
೧೦೪. ಶಿವಕುಮಾರ ಸ್ವಾಮಿ ಎಂ.(ಸಂ), ೨೦೦೧, ಸೂಕ್ಷ್ಮಾಗಮ, ಬೆಂಗಳೂರು, ವೀರಶೈವ ಅನುಸಂಧಾನ ಸಂಸ್ಥೆ
೧೦೫. ಶಿವಕುಮಾರಸ್ವಾಮಿ ಎಂ. ೨೦೦೧, ಸಿದ್ಧಾಂತ ಶಿಖಾಮಣಿ ವಿಚಾರದೀಪ್ತಿ, ಬೆಂಗಳೂರು, ವೀರಶೈವ ಅನುಸಂಧಾನ ಸಂಸ್ಥಾನ
೧೦೬. ಶಿವಕುಮಾರ ಸ್ವಾಮಿ ಎಂ. (ಸಂ), ೨೦೦೨, ಚಂದ್ರಜ್ಞಾನಾಗಮ, ಬೆಂಗಳೂರು ವೀರಶೈವ ಅನುಸಂಧಾನ ಸಂಸ್ಥೆ
೧೦೭. ಶಿವಕುಮಾರ ಸ್ವಾಮಿ ಎಂ.(ಸಂ) ೨೦೦೨, ವೇದಾಗಮಗಳು ಮತ್ತು ಶಿವಶರಣರು, ಸಂಪುಟ–೧ ಬೆಂಗಳೂರು, ವೀರಶೈವ ಅನುಸಂಧಾನ ಸಂಸ್ಥಾನ.
೧೦೮. ಶಿವಕುಮಾರ ಸ್ವಾಮಿ ಎಂ. (ಸಂ) ೨೦೦೩, ವೇದಾಗಮಗಳು ಮತ್ತು ಶಿವಶರಣರು, ಸಂಪುಟ–೨ ಬೆಂಗಳೂರು, ವೀರಶೈವ ಅನುಸಂಧಾನ ಸಂಸ್ಥಾನ.
೧೦೯. ಶಿವಕುಮಾರ ಸ್ವಾಮಿ ಎಂ., ೨೦೦೪, ವೀರಶೈವ ಭವ್ಯ ಪರಂಪರೆ, ಬಾಳೆಹೊನ್ನೂರು ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಪೀಠ
೧೧೦. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, ೨೦೦೪, ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ, ಬೆಳಗಾವಿ, ಲಿಂಗಾಯತ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ
೧೧೧. ಶಿವಮೂರ್ತಿಶಾಸ್ತ್ರಿಗಳು ಬಿ, ೧೯೭೦, ವೀರಶೈವ ಧರ್ಮ ಮತ್ತು ಸಂಸ್ಕೃತಿ, ಬೆಂಗಳೂರು , ಆಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ ಬಿ.ಶಿವಮೂರ್ತಿಶಾಸ್ತ್ರಿಗಳು, ಶರಣ ಸಾಹಿತ್ಯ ಕಾರ್ಯಾಲಯ
೧೧೨. ಶ್ರೀಂಕಠಯ್ಯ ಬಿ.ಎಂ. (ಸಂ), ೧೯೮೪, ಕನ್ನಡ ನಾಡಿನ ಚರಿತ್ರೆ ಭಾಗ–೨, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು
೧೧೩. ಶ್ರೀನಿವಾಸಮೂರ್ತಿ ಎಂ.ಆರ್, ೧೯೫೬, ವಚನ ಧರ್ಮಸಾರ, ಮೈಸೂರು, ಮೈಸೂರು ವಿಶ್ವವಿದ್ಯಾಲಯ
೧೧೪. ಶೆಟ್ಟರ ವೀ.ಸಂ. ೧೯೯೦, ಅಲ್ಲಮಪ್ರಭು, ಬಾಗಲಕೋಟ, ಅನಿಮಿಷ ಪ್ರಕಾಶನ
೧೧೫. ಶೇಖರ ಎಂ.ಎಸ್. ೨೦೦೬, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾನವಪರ ಧೋರಣೆಗಳು, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ
೧೧೬. ಶೈಲಜಾ ಉಡಚಣ, ೨೦೦೩ ವಚನಗಳಲ್ಲಿ ಮಾಯೆ ಸಂಸಾರ, ಮೈಸೂರು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ

೧೧೭. ಸಂಗಮನಾಥ ಜಿ.ಹಂಡಿ, ಪೌಲಿನಾ ನಂದಗಾಂವ, ೧೯೭೫, ಕನ್ನಡ ಸಾಹಿತ್ಯ ಚರಿತ್ರೆ ಬೆಂಗಳೂರು, ಶರತ ಪ್ರಕಾಶನ

೧೧೮. ಸವದತ್ತಿಮಠ ಸಂಗಮೇಶ, ೨೦೧೬, ವಿಷಯ ವಚನ ಸಂಪುಟಗಳು (ಸಂಪುಟ–೯), ಬೀದರ, ಶ್ರೀಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ.

೧೧೯. ಸ್ವಾಮಿ ಸೋಮನಾಥಾನಂದ, ೨೦೧೧, ಉಪನಿಷತ್ ಭಾವಧಾರೆ, ಮೈಸೂರು, ಶ್ರೀರಾಮಕೃಷ್ಣಾಶ್ರಮ

೧೨೦. ಸ್ವಾಮಿ ಆದಿದೇವಾನಂದ, ೨೦೧೦, ಶ್ವೇತಾಶ್ವತರೋಪನಿಷತ್, ಮೈಸೂರು, ಶ್ರೀರಾಮಕೃಷ್ಣಾಶ್ರಮ

೧೨೧. ಸ್ವಾಮಿ ಆದಿದೇವಾನಂದ, ೨೦೧೦, ಶ್ರೀಮದ್ ಭಗವದ್ಗೀತಾ, ಮೈಸೂರು ಶ್ರೀರಾಮಕೃಷ್ಣಾಶ್ರಮ

೧೨೨. ಸ್ವಾಮಿ ಲಿಂಗಾನಂದರು, ೧೯೬೨, ಅಕ್ಕನ ಪ್ರವಚನ, ದಾವಣಗೆರೆ, ಸುಯಿಧಾನ ಗಂಥಮಾಲೆ

೧೨೩. ಸಿದ್ಧಯ್ಯ ಪುರಾಣಿಕ, ೨೦೦೩, ಮಹಾದೇವಿ, ಧಾರವಾಡ, ಬಸವೇಶ್ವರ ಪೀಠ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೨೪. ಸಿದ್ಧಪ್ಪಾರಾಧ್ಯ ಡಿ.ಜಿ. ೧೯೬೨, ಅಲ್ಲಮಪ್ರಭು, ಮೈಸೂರು, ಮೈಸೂರು ವಿಶ್ವವಿದ್ಯಾಲಯ

೧೨೫. ಸಿದ್ಧಲಿಂಗಪ್ಪ ಎಸ್.ಆರ್. (ಸಂ) ೨೦೧೧, ಸಿದ್ಧಾಂತ ಶಿಖಾಮಣಿ: ಪಾರಾಯಣಗ್ರಂಥ: ವಾರಣಾಸಿ, ಶೈವಭಾರತೀಶೋಧ ಪ್ರತಿಷ್ಠಾನ

೧೨೬. ಸಿದ್ಧೇಶ್ವರ ಶ್ರೀಗಳು, ೨೦೦೧, ಅಲ್ಲಮಪ್ರಭುದೇವರ ವಚನ–ನಿರ್ವಚನ, ಮೈಸೂರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ

೧೨೭. ಸುಬ್ಬಣ್ಣ ಎಂ.ಎಸ್, ವ್ಯಯ ಸಂವತ್ಸರದ ಶ್ರಾವಣ ಕೃಷ್ಣ ೧೦, ವಿವೇಕ ಚೂಡಾಮಣಿ, ಬೆಂಗಳೂರು, ಎಸ್.ಎಸ್.ಎನ್. ಬುಕ್ ಡಿಪೋ

೧೨೮. ಹಳಕಟ್ಟಿ ಫ.ಗು. ೧೯೫೦, ಮಹಾದೇವಿಯಕ್ಕನ ವಚನಗಳು, ವಿಜಾಪುರ, ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ ಮತ್ತು ಪಬ್ಲಿಷರ್ಸ್

೧೨೯. ಹಳಕಟ್ಟಿ ಫ.ಗು.(ಸಂ), ೧೯೫೪, ಶೂನ್ಯ ಸಂಪಾದನೆ, ವಿಜಾಪುರ, ಹಿತಚಿಂತಕ ಪ್ರಿಂಟಿಂಗ್ ಪ್ರೆಸ್

೧೩೦. ಹಳಕಟ್ಟಿ ಫ.ಗು, ೧೯೮೨, ವಚನಶಾಸ್ತ್ರ ಸಾರ, ಗದಗ, ವೀರಶೈವ ಅಧ್ಯಯನ ಸಂಸ್ಥೆ

೧೩೧. ಹಳಕಟ್ಟಿ ಫ.ಗು ೨೦೦೩, ಶಿವಾನುಭವ ಶಬ್ದಕೋಶ, ಧಾರವಾಡ ಬಸವೇಶ್ವರ ಪೀಠ, ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ,

೧೩೨. ಹಿರೇಮಠ ಬಿ.ಆರ್. (ಸಂ), ೧೯೯೩, ಸಂಕೀರ್ಣವಚನ ಸಂಪುಟ–೩, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೧೩೩. ಹಿರೇಮಠ ಬಿ.ಆರ್. (ಸಂ), ೧೯೯೩, ಸಂಕೀರ್ಣವಚನ ಸಂಪುಟ–೪, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೧೩೪. ಹಿರೇಮಠ ಬಿ.ಆರ್. (ಸಂ), ೧೯೯೩, ಸಂಕೀರ್ಣವಚನ ಸಂಪುಟ–೪, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೧೩೫. ಹಿರೇಮಠ ಬಿ.ಕೆ. (ಪ್ರ.ಸಂ) ,೨೦೦೬, ನಿರುಪಾಧಿ, ಬಾಗಲಕೋಟ, ಮರೆಗುದ್ದಿ ಪೂಜ್ಯ ಶ್ರೀನಿರುಪಾಧೀಶ ಮಹಾಸ್ವಾಮಿಗಳು, ಅಭಿನಂದನ ಸಮಿತಿ, ಮುಧೋಳ

೧೩೬. ಹಿರೇಮಠ ಆರ್.ಸಿ. (ಸಂ) ೧೯೬೮, ಶಿವಶರಣೆಯರ ವಚನಗಳು ಭಾಗ–೪, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ,

೧೩೭. ಹಿರೇಮಠ ಆರ್.ಸಿ. (ಸಂ) ೧೯೬೮, ಶಿವಶರಣೆಯರ ವಚನಗಳು, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ,

೧೩೮. ಹಿರೇಮಠ ಆರ್.ಸಿ. (ಸಂ), ೧೯೭೧,ಶಿವಶರಣೆಯರ ವಚನಗಳು, ಭಾಗ–೨, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೩೯. ಹಿರೇಮಠ ಆರ್.ಸಿ.(ಸಂ), ೧೯೭೧, ವಿಶೇಷಾನುಭವ ಷಟಸ್ಥಲ, ಧಾರವಾಡ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೪೦. ಹಿರೇಮಠ ಆರ್.ಸಿ. (ಸಂ) ೧೯೭೩, ಮಹಾದೇವಿಯಕ್ಕನ ವಚನಗಳು, ಕನ್ನಡ ಅಧ್ಯಯ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೪೧. ಹಿರೇಮಠ ಆರ್. (ಸಂ) ೧೯೭೬ ,ವ್ಯೋಮ ಮೂರುತಿ ಅಲ್ಲಮ ಪ್ರಭುದೇವರ ವಚನಗಳು, ಧಾರವಾಡ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೪೨. ಹಿರೇಮಠ ಆರ್.ಸಿ. (ಸಂ)೧೯೭೬, ಚನ್ನಬಸವಣ್ಣನ ವಚನಗಳು, ಧಾರವಾಡ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೪೩. ಹಿರೇಮಠ ಆರ್.ಸಿ. (ಸಂ)೧೯೭೯, ಸಕಲ ಪುರಾತನರ ವಚನಗಳು, ಧಾರವಾಡ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ

೧೪೪. ಹಿರೇಮಠ ಆರ್.ಸಿ. (ಸಂ), ೧೯೯೭, ಮಹಾಯಾತ್ರೆ, ಹಂಪಿ, ಕನ್ನಡ ವಿಶ್ವವಿದ್ಯಾಲಯ

೧೪೫. ಹಿರೇಮಠ ಎಸ್.ಎಸ್. ೨೦೦೩, ಪಾಶುಪತದರ್ಶನ, ಹರಪನಹಳ್ಳಿ, ಸಮತಾ

ಪ್ರಕಾಶನ
೧೪೬. ಹಿರೇಮಠ ಎಸ್.ಎಸ್. ೨೦೦೩, ಸಾಂಖ್ಯದರ್ಶನ, ಹರಪನಹಳ್ಳಿ, ಸಮತಾ ಪ್ರಕಾಶನ
೧೪೭. ಹಿರೇಮಠ ಎಸ್.ಎಸ್. ೨೦೦೪, ಕಾಳಾಮುಖ ದರ್ಶನ, ಹರಪನಹಳ್ಳಿ, ಸಮತಾ ಪ್ರಕಾಶನ

ಪತ್ರಿಕೆಗಳು:

೧. ಶಿವಾನುಭವ–೧೯೫೦, ಸಂ.೧೧
೨. ಶಿವಾನುಭವ–೧೯೫೧, ಸಂ.೨೫
೩. ಶಿವಾನುಭವ–೧೯೪೭, ಸಂ.೦೪
೪. ಬಸವಪಥ –೧೯೮೬, ಸಂ.೧೨
೫. ಬಸವಪಥ –೧೯೯೬, ಸಂ.೦೪
೬. ಬಸವಪಥ –೧೯೮೧, ಸಂ.೦೬
೭. ಬಸವಪಥ –೧೯೯೫ ಸಂ.೦೭
೮. Basava Journal -1981—Vol-6
೯. Basava Journal -1996—Vol-21